"ಕರಾವಳಿ ಲೇಖಕಿಯರ ಕಥೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರೀ ಸಂಸ್ಕೃತಿಯ ವಿಭಿನ್ನ ಆಯಾಮಗಳು"

ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ
ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಸುಲತಾ ವಿದ್ಯಾಧರ್

ಕನ್ನಡ ಉಪನ್ಯಾಸಕಿ

ಆಳ್ವಾಸ್ ಕಾಲೇಜು, ಮೂಡುಬಿದಿರೆ, ದ.ಕ. ೫೭೪೨೨೭

ಮಾರ್ಗದರ್ಶಕರು

ಡಾ. ಶ್ರೀಧರ್ ಎಚ್.ಜಿ.

ಪ್ರಾಧ್ಯಾಪಕರು, ಕನ್ನಡ ವಿಭಾಗ

ವಿವೇಕಾನಂದ ಮಹಾವಿದ್ಯಾಲಯ ಪುತ್ತೂರು, ದ.ಕ. ೫೭೪೨೦೧

ಮೂಲಕ

ಡಾ. ಹಾ.ಮಾ.ನಾ. ಸಂಶೋಧನ ಕೇಂದ್ರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು

ಉಜಿರೆ, ದ.ಕ.

ಮಾನ್ಯತೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

ನವೆಂಬರ್ ೨೦೧೧

"ಕರಾವಳಿ ಲೇಖಕಿಯರ ಕಥೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರೀ ಸಂಸ್ಕೃತಿಯ ವಿಭಿನ್ನ ಆಯಾಮಗಳು"

ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ
ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಸುಲತಾ ವಿದ್ಯಾಧರ್
ಕನ್ನಡ ಉಪನ್ಯಾಸಕಿ
ಆಳ್ವಾಸ್ ಕಾಲೇಜು, ಮೂಡುಬಿದಿರೆ, ದ.ಕ. ೫೭೪೨೨೭

ಮಾರ್ಗದರ್ಶಕರು

ಡಾ. ಶ್ರೀಧರ ಎಚ್.ಜಿ.
ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿವೇಕಾನಂದ ಮಹಾವಿದ್ಯಾಲಯ, ಪುತ್ತೂರು –ದ.ಕ. ೫೭೪೨೦೩

ಮೂಲಕ

ಡಾ. ಹಾ.ಮಾ.ನಾ. ಸಂಶೋಧನ ಕೇಂದ್ರ
ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ, ದ.ಕ.

ಮಾನ್ಯತೆ

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

ನವೆಂಬರ್ ೨೦೧೧

ಪ್ರಮಾಣ ಪತ್ರ

"ಕರಾವಳಿ ಲೇಖಕಿಯರ ಕಥೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರೀ ಸಂಸ್ಕೃತಿಯ ವಿಭಿನ್ನ ಆಯಾಮಗಳು" ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಲಾಗಿದೆ. **ಡಾ. ಶ್ರೀಧರ ಎಚ್.ಜಿ.**, ಕನ್ನಡ ಪ್ರಾಧ್ಯಾಪಕರು, ವಿವೇಕಾನಂದ ಮಹಾವಿದ್ಯಾಲಯ, ಪುತ್ತೂರು–೫೭೪೨೦೩, ದ.ಕ ಇವರು ಈ ಪ್ರಬಂಧ ರಚನೆಗೆ ಮಾರ್ಗದರ್ಶನ ಮಾಡಿದ್ದಾರೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಯಾವುದೇ ಪದವಿಗಾಗಲೀ, ಇಲ್ಲವೇ ಬೇರೆ ಯಾವುದೇ ಪ್ರಕಟಣೆಗಾಗಲೀ ಬಳಸಿಕೊಂಡಿರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸುಲತಾ ವಿದ್ಯಾಧರ್
ಕನ್ನಡ ಉಪನ್ಯಾಸಕಿ
ಆಳ್ವಾಸ್ ಕಾಲೇಜು
ಮೂಡುಬಿದಿರೆ
ದ. ಕ. ೫೭೪೨೨೭.

ಸ್ಥಳ : ಮೂಡುಬಿದಿರೆ
ದಿನಾಂಕ: ೦೭.೧೧.೨೦೧೧

ದೃಢೀಕರಣ ಪತ್ರ

ಸುಲತಾ ವಿದ್ಯಾಧರ್ ಇವರು "ಕರಾವಳಿ ಲೇಖಕಿಯರ ಕಥೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರೀ ಸಂಸ್ಕೃತಿಯ ವಿಭಿನ್ನ ಆಯಾಮಗಳು" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಮಂಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮಹಾ ಪ್ರಬಂಧವನ್ನು ಇಲ್ಲವೇ ಇದರ ಯಾವುದೇ ಭಾಗವನ್ನು ಈ ಮೊದಲು ಅಭ್ಯರ್ಥಿಯು ಯಾವುದೇ ಪದವಿಗಾಗಲೀ ಇಲ್ಲವೇ ಬೇರೆ ಯಾವುದೇ ಪ್ರಕಟಣೆಗಾಗಲೀ ಬಳಸಿಕೊಂಡಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಡಾ. ಶ್ರೀಧರ ಎಚ್.ಜಿ.
ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿವೇಕಾನಂದ ಮಹಾವಿದ್ಯಾಲಯ
ಪುತ್ತೂರು – ದ. ಕ. ೫೭೪೨೦೩

ಸ್ಥಳ : ಪುತ್ತೂರು
ದಿನಾಂಕ : ೦೭.೧೧.೨೦೧೧

ಪರಿವಿಡಿ

ಪುಟ ಸಂಖ್ಯೆ

ಅಧ್ಯಾಯ -೧: ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಾಧನ ಮತ್ತು ವಿಧಾನ ೧

೧.೧. ಪ್ರಸ್ತಾವನ ೧

೧.೨. ಸಮಸ್ಯೀಕರಣ ೯

೧.೩. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೯

೧.೪. ಅಧ್ಯಯನದ ವಿಧಾನ ೧೫

೧.೫ .ಕರಾವಳಿ ಕಥೆಗಳ ಕುರಿತು ಈವರೆಗಿನ ಅಧ್ಯಯನದ ಸಮೀಕ್ಷೆ ೧೬

೧.೬. ಅಧ್ಯಾಯಗಳ ವಿಂಗಡಣೆ ೧೮

ಅಧ್ಯಾಯ –೨ : ಸ್ತ್ರೀವಾದಿ ಚಳುವಳಿ ಮತ್ತು ಸಾಹಿತ್ಯ ವಿಮರ್ಶೆ ೨೭

೨.೧. ಸ್ತ್ರೀವಾದದ ಹುಟ್ಟು ಮತ್ತು ಬೆಳವಣಿಗೆ ೨೮

೨.೨. ಫ್ರೆಂಚ್ ಮಹಾಕ್ರಾಂತಿ ಮತ್ತು ಸ್ತ್ರೀವಾದಿ ಚಿಂತನೆ ೩೦

೨.೩. ಸ್ತ್ರೀವಾದ – ಅರ್ಥ ಮತ್ತು ಪರಿಕಲ್ಪನೆ ೩೩

೨.೪. ಸ್ತ್ರೀವಾದಿ ಚಳುವಳಿಯ ಸ್ವರೂಪ ೩೬

೨.೫. ಭಾರತದಲ್ಲಿ ಮಹಿಳಾ ಚಳುವಳಿ: ಒಂದು ಐತಿಹಾಸಿಕ ಸಮೀಕ್ಷೆ ೪೫

೨.೬. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆ ೫೨

೨.೭. ಸ್ತ್ರೀವಾದಿಸಾಹಿತ್ಯವಿಮರ್ಶೆ ೫೩

೨.೮. ಸ್ತ್ರೀವಾದಿ ನಿರಚನ ಸಿದ್ಧಾಂತ (ಡಿಕಂಸ್ಟ್ರಕ್ಷನ್‌ಥಿಯರಿ) ೫೫

ಅಧ್ಯಾಯ – ೩: ಕನ್ನಡದಲ್ಲಿ ಕಥಾ ಸಾಹಿತ್ಯ ೬೦

೩.೧. 'ಕಥೆ'–ಒಂದು ವಿವೇಚನೆ ೬೦

೩.೨. ಕನ್ನಡ ಕಥಾಸಾಹಿತ್ಯ ಬೆಳೆದು ಬಂದ ಬಗೆ ೬೨

೩.೩. ಮಹಿಳಾ ಕಥಾ ಸಾಹಿತ್ಯ ಬೆಳೆದು ಬಂದ ಬಗೆ ೭೫

ಅಧ್ಯಾಯ -೪: ಕರಾವಳಿ ಮಹಿಳಾ ಸಾಹಿತ್ಯ ೮೫

೪.೧. ತುಳು ಲೇಖಕಿಯರು ೯೩

೪.೨. ಸ್ತ್ರೀ ಸಂಸ್ಕೃತಿ ಒಂದು ವಿವೇಚನೆ ೯೫

ಅಧ್ಯಾಯ -೫ : ಸ್ತ್ರೀತ್ವದ ನೆಲೆ ೯೯

೫.೧ ವೈಯಕ್ತಿಕ ನೆಲೆ ೧೦೦

೫.೨. ಕೌಟುಂಬಿಕ ನೆಲೆ ೧೧೩

೫.೩. ಧಾರ್ಮಿಕ ನೆಲೆ ೧೨೭

ಅಧ್ಯಾಯ -೬ : ಸ್ತ್ರೀವಾದಿತ್ವದ ನೆಲೆ ೧೩೦

೬.೧. ವೈಯಕ್ತಿಕ ನೆಲೆ ೧೩೧

೬.೨. ಕೌಟುಂಬಿಕ ನೆಲೆ ೧೪೫

೬.೩. ಧಾರ್ಮಿಕ ನೆಲೆ ೧೫೭

೬.೪. ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ ೧೫೯

ಅಧ್ಯಾಯ -೭: ಸ್ತ್ರೀಯಾತ್ಮಕತೆಯ ನೆಲೆ ೧೬೩

೭.೧. ವೈಯಕ್ತಿಕ ನೆಲೆ ೧೬೪

೭.೨. ಕೌಟುಂಬಿಕ ನೆಲೆ ೧೮೦

೭.೩. ಧಾರ್ಮಿಕ ನೆಲೆ ೧೯೦

೭.೪. ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ ೧೯೧

ಅಧ್ಯಾಯ -೮ : ಕರಾವಳಿ ಕಥೆಗಳಲ್ಲಿ ಮಹಿಳಾ ಸಂವೇದನೆಯ ಸಂಕೀರ್ಣತೆಗಳು ೧೯೪

೮.೧. ಲೈಂಗಿಕ ಶೋಷಣೆ ೧೯೬

೮.೨. ಅಸಹಾಯಕತೆ ೧೯೯

೮.೩ ಒಂಟಿತನ ೨೧೧

೮.೪. ತಾಯ್ತನ ೨೧೬

೮.೫. ದಾಂಪತ್ಯ ವಿರಸ ೨೧೯

೮.೬. ಸಮಾನ ಮನೋಧರ್ಮ ೨೨೯

೮.೭. ಬಂಜೆತನ ೨೨೪

೮.೮. ಹೊಂದಾಣಿಕೆ ೨೨೭

೮.೯. ಲೈಂಗಿಕತೆ ಮತ್ತು ನೈತಿಕತೆ ೨೨೮

೮.೧೦ ವೈವಾಹಿಕ ಬಿಕ್ಕಟ್ಟು ೨೩೨

೮.೧೧. ಲಿಂಗ ತಾರತಮ್ಯ ೨೩೩

೮.೧೨. ಸ್ತ್ರೀ- ಶಿಕ್ಷಣ ೨೩೬

೮.೧೩. ಸ್ತ್ರೀ -ಸ್ವಾತಂತ್ರ್ಯ ೨೩೮

೮.೧೪. ಜಾತಿಯ ಪರಿಕಲ್ಪನೆ ೨೪೨

ಅಧ್ಯಾಯ ೯: ಸಮಾರೋಪ ೧೪೫

೯.೧. ಫಲಿತಗಳು ೧೫೪

೯.೨. ಮುಂದಿನ ಅಧ್ಯಯನದ ಸಾಧ್ಯತೆಗಳು ೧೫೯

ಅನುಬಂಧ :

೧. ಲೇಖಕಿಯರ ಸಂದರ್ಶನಕ್ಕಾಗಿ ರಚಿಸಲಾದ ಪ್ರಶ್ನಾವಳಿ ೧೬೨

೨. ಲೇಖಕಿಯರ ಸಮಗ್ರ ಮಾಹಿತಿ ೧೬೩

೨.೧. ಗಂಗಾ ಪಾದೇಕಲ್ ೧೬೩

೨.೨. ಪ್ರೇಮಾ ಭಟ್ ೧೬೫

೨.೩. ಮಿತ್ರಾ ವೆಂಕಟ್ರಾಜ್ ೧೬೯

೨.೪. ವೈದೇಹಿ ೧೭೧

೨.೫. ಸಾರಾ ಅಬೂಬಕ್ಕರ್ ೧೭೬

೩. ಪ್ರಧಾನ ಆಕರಗಳು ೧೪೩

೪. ಆನುಷಂಗಿಕ ಆಕರಗಳು ೧೮೨

ಅಧ್ಯಾಯ -೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಾಧನ ಮತ್ತು ವಿಧಾನ

೧.೧. ಪ್ರಸ್ತಾವನೆ

೧.೨. ಸಮಸ್ಯೀಕರಣ

೧.೩. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಕರಾವಳಿ ಕಥೆಗಳ ಕುರಿತು ಈವರೆಗಿನ ಅಧ್ಯಯನದ ಸಮೀಕ್ಷೆ

೧.೬. ಅಧ್ಯಾಯಗಳ ವಿಂಗಡಣೆ

ಅಧ್ಯಾಯ -೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಾಧನ ಮತ್ತು ವಿಧಾನ

೧.೧. ಪ್ರಸ್ತಾವನೆ

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ನಿರಂತರವಾಗಿ ಎರಡನೇ ದರ್ಜೆಯ ಪ್ರಜೆಯಾಗಿ ಉಳಿದುಕೊಂಡು ಬಂದಿದ್ದಾಳೆ. ಹೆಂಡತಿ ಹಾಗೂ ತಾಯಿಯೆಂಬ ಎರಡು ಪಾತ್ರಗಳಲ್ಲಿ ಸಮಾಜ ಹೆಣ್ಣನ್ನು ನೋಡಿದೆ. ಜೈವಿಕ ರಚನೆಯ ಕಾರಣಗಳನ್ನು ಬಳಸಿಕೊಂಡು ಗಂಡು ಶ್ರೇಷ್ಠ, ಹೆಣ್ಣು ನಿಕೃಷ್ಟ ಎಂಬ ತಾರತಮ್ಯವನ್ನು ಸೃಷ್ಟಿಸಲಾಗಿದೆ. ಆಕೆಯ ಬುದ್ಧಿ ಮನಸ್ಸುಗಳಿಗೆ ಕಡಿವಾಣ ಹಾಕುವ ದಮನ ಕಾರ್ಯ ಆರಂಭದಿಂದಲೂ ನಡೆದುಕೊಂಡು ಬಂದಿದ್ದು, ಪ್ರಧಾನ ಧಾರೆಯಿಂದ ಆಕೆ ಹೊರಗುಳಿಯುವಂತಾಯಿತು. ಸಮಾಜದ ನಿರ್ಬಂಧಗಳನ್ನು ಮೀರಿ ಬದುಕುವ ಹೆಣ್ಣು ಶಿಕ್ಷೆಗೆ ಒಳಗಾಗಿ ಒದ್ದಾಡಬೇಕಾಗುತ್ತಿತ್ತು.

ಲಿಂಗಾಧಾರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿರುವ ಮೌಲ್ಯಗಳು ಹಾಗೂ ಆಚರಣೆಗಳು 'ಸಂಸ್ಕೃತಿ' ಎನಿಸಿಕೊಳ್ಳುತ್ತವೆ. ಇದು ಹೆಣ್ಣಿನ ಬದುಕಿನ ಮೇಲೆ ಬಹಳವಾದ ಪರಿಣಾಮ ಬೀರಿದೆ. ಕಾಲದಿಂದ ಕಾಲಕ್ಕೆ ಸಾಮಾಜಿಕ ರಚನೆಯಲ್ಲಿ ಬದಲಾವಣೆಗಳು ಉಂಟಾದರೂ ಕೆಲವು ಸಾಂಪ್ರದಾಯಿಕ ಮೌಲ್ಯಗಳು ಬದಲಾಗದೆ ಹಾಗೆಯೇ ಮುಂದುವರಿದಿವೆ. ಪುರುಷನ ಆಜ್ಞಾವರ್ತಿಯಾಗಿ ನಡೆದುಬಂದ ಹೆಣ್ಣಿನ ಸೃಜನಶೀಲತೆಯ ಸಾಮರ್ಥ್ಯ ಬತ್ತಿ ಹೋಗಿ ಆಟಕ್ಕುಂಟು, ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಆಕೆಯ ಸಾಮರ್ಥ್ಯಕ್ಕೆ ಬೆಲೆ ಕೊಡದೆ ಪೂರ್ವಾಗ್ರಹಪೀಡಿತ ದೃಷ್ಟಿಕೋನದಿಂದಲೇ ಅವಳ ವ್ಯಕ್ತಿತ್ವವನ್ನು ಅಳೆಯುವುದು ಹಿಂದಿನಿಂದಲೂ ನಡೆದುಬಂದಿದೆ. ನೃತ್ಯ, ಸಂಗೀತ, ಅಭಿನಯಗಳಂತಹ ಕೆಲವು ಸೀಮಿತ ಕಲೆಗಳಿಗಷ್ಟೇ ಆಕೆಯನ್ನು ಸೀಮಿತಗೊಳಿಸಿ ಉಳಿದ ಕಲಾಪ್ರಕಾರಗಳಿಂದ ಹೆಣ್ಣನ್ನು ವ್ಯವಸ್ಥಿತವಾಗಿ ಹೊರಗಿಟ್ಟಿರುವುದು ಗಮನಾರ್ಹ ಸಂಗತಿ. "ಒಂದು ಕಾಲದಲ್ಲಿ ಸಂಗೀತ, ನೃತ್ಯಗಳು ವೇಶ್ಯೆಯರ ಕುಲಕಸುಬಿಗಷ್ಟೇ ಸೀಮಿತವಾಗಿದ್ದಾಗ, ಆ ಕಲಾ ಪ್ರಕಾರಗಳು ಸಾಮಾನ್ಯ ಸಾಮಾಜಿಕ ವಲಯದ ಹೆಣ್ಣುಗಳಿಗೆ ದಕ್ಕ ತೊಡಗಿದಾಗ ಕಲೆಗೂ, ನೈತಿಕತೆಗೂ ಇನ್ನಿಲ್ಲದ ಸಂಬಂಧಗಳು ಕಲ್ಪಿತವಾದವು".[೧] ಎಲ್ಲಿಯವರೆಗೆ ಒಂದು ಸಾಮಾಜಿಕ ವ್ಯವಸ್ಥೆ ಮತ್ತು ಆ ವ್ಯವಸ್ಥೆ ಹುಟ್ಟು ಹಾಕಿರುವ ಸಂಸ್ಕೃತಿಯಲ್ಲಿ ಮೂಲಭೂತ ಬದಲಾವಣೆಗಳು ಉಂಟಾಗುವುದಿಲ್ಲವೋ ಅಲ್ಲಿಯವರೆಗೆ ಹೆಣ್ಣಿನ ಪರಿಸ್ಥಿತಿಯು ಬದಲಾಗುವುದಿಲ್ಲ. "ಸತಿಯಾದ ಸ್ತ್ರೀಯ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿ ಅವಳನ್ನು ವೈಭವೀಕರಿಸುವ ಹಿಂದೂ ಧರ್ಮವೇ ಆಗಲಿ, ಮಹಿಳೆ ಆಸ್ತಿಯಲ್ಲಿ ಹಕ್ಕನ್ನು ಕೇಳಿದಾಗ, ಆಕೆಯನ್ನು ಧರ್ಮಬಾಹಿರವಾದ ಕೃತ್ಯದಲ್ಲಿ ತೊಡಗಿದ್ದಾಳೆಂದು ದೋಷಾರೋಪಣೆ ಮಾಡುವ ಇಸ್ಲಾಂ

ಧರ್ಮವೇ ಆಗಲಿ, ದೇವರನ್ನು ಸರ್ವಶಕ್ತನಾದ, ಜೀವದಾನಿಯಾದ ಪುರುಷಶಕ್ತಿಯೆಂದು ಘೋಷಿಸಿರುವ ಕ್ರೈಸ್ತ ಧರ್ಮವೇ ಆಗಲಿ, ಸ್ತ್ರೀಯನ್ನು ಸ್ವತಂತ್ರ ವ್ಯಕ್ತಿತ್ವದಿಂದ ಓರ್ವ ವ್ಯಕ್ತಿಯಂತೆ ಪರಿಗಣಿಸದೇ ಇರುವುದನ್ನು ನಾವು ಕಾಣಬಹುದು[3] ಎಂಬ ಮಾತು ಸ್ತ್ರೀಯ ಬದುಕಿನ ವಾಸ್ತವವನ್ನು ತೆರೆದಿಡುತ್ತದೆ.

ಪುರುಷ ಪ್ರಧಾನವಾದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹೆಣ್ಣು ನಡೆದು ಬಂದ ದಾರಿಯ ಹೆಜ್ಜೆ ಗುರುತುಗಳಿಗೆ ಶತಮಾನಗಳ ಇತಿಹಾಸವಿದೆ. ಮೌಖಿಕ ಮತ್ತು ಶಿಷ್ಟ ಪರಂಪರೆಗಳೆರಡರಲ್ಲಿಯೂ ಹೆಣ್ಣು ಗಂಡಿನ ಧ್ವನಿಯಾಗಿ ಕಾಣಿಸಿಕೊಂಡು ಬಂದವಳು. ತನ್ನ ಅಸ್ತಿತ್ವದ ಹುಡುಕಾಟಕ್ಕೆ ತೊಡಗಿದಾಗ ಗಂಡುಬೀರಿಯೆಂದೋ, ಗಯ್ಯಾಳಿಯೆಂದೋ ಕರೆಸಿಕೊಂಡಿರುವುದು ಸಾಮಾನ್ಯ ಸಂಗತಿ. ತನ್ನ ಬದುಕಿನ ನೋವು - ಸಂಕಟ, ದುಃಖ – ದುಮ್ಮಾನಗಳನ್ನು ಅಕ್ಷರ ರೂಪದಲ್ಲಿ ವ್ಯಕ್ತಪಡಿಸುವ ಸಂದರ್ಭಗಳು ದೊರೆತಾಗೆಲ್ಲ ಅಭಿವ್ಯಕ್ತಿಸಿ ಹಗುರಾಗಿದ್ದಾಳೆ. ಜನಪದದಲ್ಲಿ ಇಂಥ ಅಭಿವ್ಯಕ್ತಿ ಸ್ವಾತಂತ್ರ್ಯದ ಸ್ತ್ರೀ ಪರಂಪರೆಯೇ ನಮ್ಮ ಮುಂದಿದೆ.

ಈ ನಿಟ್ಟಿನಲ್ಲಿ ಕರಾವಳಿ ಹೆಣ್ಣು ಮಕ್ಕಳ ಬರವಣಿಗೆಗಳಲ್ಲಿ ಕಂಡುಬರುವ ಒಟ್ಟು ಬದುಕನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಪ್ರಬಂಧ ಪ್ರಯತ್ನಿಸುತ್ತದೆ. ಸಮಾಜದ ಚಿಕ್ಕ ಘಟಕವಾದ ಕುಟುಂಬದೊಳಗೆ ಇದ್ದೂ ಇಲ್ಲದಂತೆ ಬದುಕುವ ಹೆಣ್ಣಿನ ಬದುಕಿನ ವಿವರಗಳನ್ನು ಶೋಧಿಸುತ್ತಾ, ಹೆಣ್ಣು -- ಗಂಡಿನ ಆರೋಗ್ಯಪೂರ್ಣ ಸಂಬಂಧದ ಮೂಲಕವೇ ಕುಟುಂಬ ವ್ಯವಸ್ಥೆಯ ಅಸ್ತಿತ್ವವನ್ನು ಗುರುತಿಸಲು ಸಾಧ್ಯ ಎನ್ನುವುದು ಈ ಪ್ರಬಂಧದ ಆಶಯ.

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಒಂದೇ ಜಿಲ್ಲೆಯಾಗಿದ್ದ ಕರಾವಳಿ ಅನಂತರ ಭೌಗೋಳಿಕವಾಗಿ ಹಾಗೂ ಆಡಳಿತಾತ್ಮಕ ನೆಲೆಯಿಂದ ಕಾಸರಗೋಡು, ದ.ಕ. ಹಾಗೂ ಉಡುಪಿ ಜಿಲ್ಲೆಗಳಾದುವು. ಕನ್ನಡನಾಡಿನ ಭಾಗವಾದ ದಕ್ಷಿಣಕನ್ನಡ ಜಿಲ್ಲೆ ಬ್ರಿಟೀಷರ ಆಳ್ವಿಕೆಯಲ್ಲಿ ಕ್ರಿ.ಶ. ೧೮೬೨ರಲ್ಲಿ ಪ್ರತ್ಯೇಕಗೊಂಡಿತು. ಉತ್ತರದಲ್ಲಿ ಕುಂದಾಪುರ, ಮತ್ತು ದಕ್ಷಿಣದಲ್ಲಿ ಕಾಸರಗೋಡನ್ನು ಗಡಿಯಾಗಿ ಹೊಂದಿದ್ದ ಈ ದಕ್ಷಿಣಕನ್ನಡದಿಂದ, ಕಾಸರಗೋಡು ತಾಲೂಕು ಕೇರಳ ರಾಜ್ಯಕ್ಕೆ ಸೇರಿಹೋಯಿತು. ಈ ದೇಶದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ ಮತ್ತೆ ದ.ಕ. ಹಾಗೂ ಉಡುಪಿ ಜಿಲ್ಲೆಗಳೆಂದು ಇಬ್ಭಾಗವಾಯಿತು. ಈ ಪ್ರತ್ಯೇಕತೆ ಆಡಳಿತಾತ್ಮಕ ನೆಲೆಯಿಂದ ಆಗಿದೆಯೇ ಹೊರತು ಸಾಂಸ್ಕೃತಿಕವಾಗಿ ಹಾಗೂ ಭಾವನಾತ್ಮಕವಾಗಿ ಇಂದಿಗೂ ಇವು ಒಂದಾಗಿಯೇ ಇವೆ. ಕರಾವಳಿ ತೀರದ ಈ ಮೂರು ಜಿಲ್ಲೆಗಳು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಎಂದೇ ಗುರುತಿಸಲ್ಪಟ್ಟಿವೆ. ಕರಾವಳಿಯ ಈ ಭಾಗಗಳು ಭೌಗೋಳಿಕ ವಿಭಿನ್ನತೆಯೊಂದಿಗೆ ಅವುಗಳದ್ದೇ ಆದ ವೈಶಿಷ್ಟ್ಯ ಹಾಗೂ ಅನನ್ಯತೆಯಿಂದ

ಕೂಡಿವೆ. ಈ ವೈಶಿಷ್ಟ್ಯ, ಅನನ್ಯತೆಯ ಅಂಶಗಳು ಇಲ್ಲಿನ ಜನರ ಜೀವನ ಕ್ರಮದಲ್ಲೇ ವ್ಯಕ್ತವಾಗುತ್ತವೆ. ಹೀಗಾಗಿ ಈ ನೆಲದ ಸಾಹಿತ್ಯವೂ ವಿಶಿಷ್ಟವಾಗಿದೆ.

ಕರಾವಳಿ ಅನೇಕ ಭಾಷೆಗಳ ಆಡುಂಬೊಲ, ಸಂಸ್ಕೃತಿಗಳ ನೆಲವೀಡು. ಪೂರ್ವದಿಕ್ಕಿಗೆ ರಮ್ಯಾದ್ಭುತ ಪಶ್ಚಿಮ ಘಟ್ಟ, ಪಶ್ಚಿಮಕ್ಕೆ ಭೋರ್ಗರೆಯುವ ಕಡಲು, ಇವೆರಡರ ನಡುವೆ ವಿಸ್ತಾರವಾಗಿ ಹರಡಿಕೊಂಡಿರುವ ಕಂಗು – ತೆಂಗು, ಭತ್ತದ ಗದ್ದೆಗಳ ಸಾಲು. ಸದಾ ಹಚ್ಚ ಹಸಿರಾಗಿ ಕಂಗೊಳಿಸುವ ಈ ಪ್ರದೇಶ ಇಲ್ಲಿನ ಜನರ ಮನಸ್ಸು ಹಸಿರಾಗಲು ಕಾರಣವಾಗಿದೆ. ಈ ಕರಾವಳಿಗೆ ಬರಬೇಕಾದರೆ ಯಾವುದಾದರೊಂದು ಘಾಟಿಯ ಮೂಲಕವೇ ಇಳಿದು ಬರಬೇಕು. ಹಾಗಾಗಿ ಇತರ ಭಾಗಗಳಿಗಿರುವ ವರ್ಣರಂಜಿತ ಇತಿಹಾಸ ಕರಾವಳಿಗಿಲ್ಲ. ಕುಮಾರಧಾರಾ, ನೇತ್ರಾವತಿ, ಶಾಂಭವಿ, ಪಯಸ್ವಿನಿ, ಚಂದ್ರಗಿರಿ – ಈ ಐದು ನದಿಗಳು ಕರಾವಳಿಯ ಜೀವನಾಡಿಗಳು. ನದಿಗಳ ಸಂಗಮ ಸ್ಥಳವಾದ್ದರಿಂದ 'ಕೂಡಲು' ಎಂದಾಗಿ ನಂತರ ತುಳುವರಿಂದ 'ಕುಡ್ಲ'ವಾಯಿತು; ಮಂಗಳಾದೇವಿ ದೇವಸ್ಥಾನದಿಂದಾಗಿ ಮಂಗಳೂರಾಯಿತು ಎಂಬ ಮಾತುಗಳು ರೂಢಿಯಲ್ಲಿವೆ.

ಕರಾವಳಿ ಜಿಲ್ಲೆ ಉಳಿದೆಲ್ಲ ಜಿಲ್ಲೆಗಳಿಗಿಂತ ಭಿನ್ನವಾದುದು, ವಿಶಿಷ್ಟವಾದುದು. ಗಾತ್ರದ ದೃಷ್ಟಿಯಿಂದ ರಾಜ್ಯದಲ್ಲಿ ದೊಡ್ಡ ಜಿಲ್ಲೆಗಳ ಸಾಲಿಗೆ ಸೇರುವ ದಕ್ಷಿಣ ಕನ್ನಡ ಬೆಳವಣಿಗೆಯಲ್ಲೂ ಆ ಸ್ಥಾನವನ್ನು ಉಳಿಸಿಕೊಂಡಿದೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಂದಿರುವ ಈ ಜಿಲ್ಲೆ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಕೊಡುವ ಜಿಲ್ಲೆಯಾಗಿದೆ. ಅಬಕಾರಿ ಆದಾಯದಲ್ಲೂ ಬೆಂಗಳೂರನ್ನು ಬಿಟ್ಟರೆ ನಂತರದ ಸ್ಥಾನ ಈ ಜಿಲ್ಲೆಗೇ ಸೇರುತ್ತದೆ.

ಅನೇಕ ರಾಜಮನೆತನಗಳು ಈ ತುಳುನಾಡಿನಲ್ಲಿ ಆಳ್ವಿಕೆ ಮಾಡಿವೆ. ಅವರುಗಳೆಂದರೆ ಅಳುಪರು, ಬಂಗರು, ಅಜಿಲರು, ಸಾವಂತರು, ಹಾಗೂ ಭೈರರಸರು. ಆದರೆ ಯಾರೊಬ್ಬರೂ ಘಟ್ಟ ಹತ್ತಿ ಹೋಗಿ ರಾಜ್ಯ ವಿಸ್ತಾರ ಮಾಡಲಿಲ್ಲ. "ಕೆಲವು ಜಗದ್ಗುರುಗಳ ಜಗತ್ತು ಕೂಡ ಅರವತ್ತು ಕಿಲೋಮೀಟರ್ ಉದ್ದ ಮತ್ತು ಐವತ್ತು ಕಿಲೋ ಮೀಟರ್ ಅಗಲಕ್ಕೆ ಸೀಮಿತವಾಗಿತ್ತು"[೨] ಎಂದು ಡಾ. ಪುರುಷೋತ್ತಮ ಬಿಳಿಮಲೆಯವರು ಅಭಿಪ್ರಾಯ ಪಡುತ್ತಾರೆ. ಕಾರ್ಕಳದ ಭೈರರಸರು ಹಾಗೂ ವೇಣೂರಿನ ಅಜಿಲರು ಕೆತ್ತಿಸಿದ ಏಕಶಿಲಾ ಬಾಹುಬಲಿ ವಿಗ್ರಹಗಳು ಕರಾವಳಿಯ ಇತಿಹಾಸವನ್ನು ಸಾರುವ ಮೈಲಿಗಲ್ಲುಗಳಾಗಿವೆ. ಆಧುನಿಕತೆಗೆ ಬಹಳ ಬೇಗನೆ ತೆರೆದುಕೊಂಡ ಕರಾವಳಿಯಲ್ಲಿ ಬಾಸೆಲ್ ಮಿಶನ್ನಿನ ಪಾದ್ರಿಗಳು ಮುದ್ರಣ ಯಂತ್ರ, ಹೆಂಚಿನ ಕಾರ್ಖಾನೆಗಳನ್ನು ಪ್ರಾರಂಭಿಸುವುದರೊಂದಿಗೆ ಇಲ್ಲಿನ ಜನ 'ಉದ್ಯಮಶೀಲತೆ' ಹಾಗೂ 'ವ್ಯವಹಾರ ನೈಪುಣ್ಯತೆ'ಯನ್ನು ಮೈಗೂಡಿಸಿಕೊಳ್ಳುವಂತಾಯಿತು. ೨೦ನೇ ಶತಮಾನದ ಆರಂಭಕ್ಕೆ ಆಧುನಿಕ ಬದುಕಿಗೆ ಮೈಚಾಚಿತು.

ಕರಾವಳಿಯಲ್ಲಿ ಜನ್ಮಪಡೆದ ಅನೇಕ ಕವಿ, ಸಾಹಿತಿಗಳು ತಮ್ಮ ಸಾಹಿತ್ಯ ರಚನೆಯ ಮೂಲಕ ಈ ನೆಲದ ಪ್ರಾಕೃತಿಕ ಸೌಂದರ್ಯ, ಹಾಗೂ ಸಾಂಸ್ಕೃತಿಕ ಸಂಪನ್ನತೆಯನ್ನು ಉಣಬಡಿಸಿದ್ದಾರೆ. ಒಂದರ್ಥದಲ್ಲಿ ಕರಾವಳಿಯ ಸಾಹಿತಿಗಳೇ ಇಲ್ಲಿನ ನಿಜವಾದ ಸಮಾಜ ಶಾಸ್ತ್ರಜ್ಞರು. 'ಹೊಸಗನ್ನಡದ ಮುಂಗೋಳಿ' ಎಂದು ಬಿರುದಾಂಕಿತನಾದ ಮುದ್ದಣ ಕರಾವಳಿಗೆ ಸೇರಿದವನು. ವಿಧವಾ ಹೆಣ್ಣುಮಗಳೊಬ್ಬಳ ಕಡೆಗೆ ಗಮನಹರಿಸಿದ ಕನ್ನಡದ ಮೊದಲ ಸಾಮಾಜಿಕ ಕಾದಂಬರಿಯನ್ನು ನೀಡಿದ ಗುಲ್ವಾಡಿ ವೆಂಕಟರಾಯರು ಈ ಮಣ್ಣಿನವರು. ಕನ್ನಡದ ಮೊದಲ ಸಣ್ಣಕತೆ ರಚಿಸಿದ ಪಂಜೆಯವರು, ಪ್ರಾಸರಹಿತ ಕವಿತೆಗೆ ಮುಂದಡಿಯಿಟ್ಟ ಮಂಜೇಶ್ವರ ಗೋವಿಂದ ಪೈಗಳು, ಮೊದಲ ನವ್ಯ ಕವಿತೆ ನೀಡಿದ ಪೇಜಾವರ ಸದಾಶಿವರಾಯರು, ಒಂದು ಜನಾಂಗದ ಕಣ್ಣು ತೆರೆಸಿದ ಗೋಪಾಲಕೃಷ್ಣ ಅಡಿಗರು, ಸಾರಾ ಅಬೂಬಕ್ಕರ್‌ರವರು ಕರಾವಳಿಯವರು. ಇವರಲ್ಲದೆ ಮುಳಿಯ ತಿಮ್ಮಪ್ಪಯ್ಯ, ಕಡೆಂಗೋಡ್ಲು ಶಂಕರಭಟ್ಟ, ಸೇಡಿಯಾಪು ಕೃಷ್ಣಭಟ್ಟ, ನಿರಂಜನ, ಶಿವರಾಮ ಕಾರಂತ, ವೈದೇಹಿ, ಇನ್ನೂ ಅನೇಕ ಮಂದಿ ಕವಿ - ಸಾಹಿತಿಗಳನ್ನು ಕರಾವಳಿ ಜಿಲ್ಲೆಗಳು ನಾಡಿಗೆ ನೀಡಿವೆ.

ಇಲ್ಲಿ ನಾಲ್ಕಕ್ಷರ ಕಲಿತು ಸಣ್ಣ ವಯಸ್ಸಿನಲ್ಲಿಯೇ ಹೊಟ್ಟೆಪಾಡಿಗಾಗಿ ಮುಂಬಯಿಗೋ, ದುಬೈಗೋ ಹೋಗಿ, ದುಡಿಯುತ್ತಾ ಮುಂಬಯಿಯಲ್ಲಿ ಸ್ವತಃ ರಾತ್ರಿ ಶಾಲೆಗಳನ್ನು ತೆರೆದು ವಿದ್ಯೆ ಕಲಿತು ಎತ್ತರಕ್ಕೆ ಏರಿದವರು ಅದೆಷ್ಟೋ ಮಂದಿ. ಇವರು ನಿಜವಾಗಿ ಕರಾವಳಿಯ ಪ್ರವರ್ಧಮಾನಕ್ಕೆ ಕಾರಣೀಕರ್ತರಾದರು ಮಾತ್ರವಲ್ಲ, ಇತರ ಮಕ್ಕಳಿಗೂ ಮಾದರಿಯಾಗಿ ನಿಂತರು. ವರ್ಷಕ್ಕೊಮ್ಮೆಯೋ, ಎರಡು ವರ್ಷಕ್ಕೊಮ್ಮೆಯೋ ಊರಿಗೆ ಹಿಂದಿರುಗುತ್ತಿದ್ದ ಆ ಮಕ್ಕಳನ್ನು ಭರವಸೆಯ ಕಣ್ಣುಗಳಿಂದ ಇದಿರು ನೋಡುತ್ತಿದ್ದ ಅಪ್ಪ – ಅಮ್ಮ, ಅಜ್ಜ – ಅಜ್ಜಿಯರ ಮೌನರೋದನ ಇತರರಿಗೆ ಅರ್ಥವಾಗುವಂತಹದಲ್ಲ. ಇಲ್ಲಿನ ಅನೇಕ ಕಾದಂಬರಿಗಳು ಕಥೆಗಳು ಈ ಸ್ಥಿತ್ಯಂತರಗಳನ್ನು ಮನಮುಟ್ಟುವಂತೆ ಚಿತ್ರಿಸಿವೆ.

ಕರಾವಳಿ ಬಹುರೂಪತೆಯ ಮೂಲಕ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುತ್ತದೆ. ಹಾಗಾಗಿ ಇಲ್ಲಿನ ಬಹುರೂಪತೆಯನ್ನು ನಾಶಮಾಡುವುದೆಂದರೆ ಅದು ಸಂಸ್ಕೃತಿಯನ್ನು ನಾಶ ಮಾಡಿದಂತೆ ಆಗುತ್ತದೆ. ಬಹುಸಂಸ್ಕೃತಿಯ ನೆಲೆಗಳು ಈ ಜಿಲ್ಲೆಯಲ್ಲಿ ವಿಸ್ತಾರವಾಗಿ ಹಾಗೂ ಆಳವಾಗಿ ನೆಲೆಯೂರಲು ಇಲ್ಲಿನ ಕ್ರಿಯಾಶೀಲ ಮನಸ್ಸುಗಳೇ ಕಾರಣ.

ಚಾರಿತ್ರಿಕವಾಗಿ ಕರಾವಳಿ ಧರ್ಮ ಸಮನ್ವತೆಯ, ಸಂಸ್ಕೃತಿಯ ನೆಲೆವೀಡು. ಇಲ್ಲಿನ ಅನೇಕ ದರ್ಗಾಗಳು, ಭೂತಾಲಯ, ದೇವಾಲಯಗಳು ಇದನ್ನು ಸ್ಪಷ್ಟಪಡಿಸುತ್ತವೆ. ಮುಲ್ಕಿ ಸಮೀಪದ ಬಪ್ಪನಾಡು ಒಂದು ಇತಿಹಾಸ

ಪ್ರಸಿದ್ಧ ಸ್ಥಳ. ಬಪ್ಪಬ್ಯಾರಿ ಎಂಬ ಮುಸ್ಲಿಂ ವ್ಯಾಪಾರಿ ಇಲ್ಲಿನ ದೇವಾಲಯ ಸ್ಥಾಪನೆಗೆ ಕಾರಣನಾದವನು. ವರ್ಷಂಪ್ರತಿ ಜಾತ್ರೆಯಂದು ಪೂಜೆ ಆರಂಭಗೊಳ್ಳುವುದು ಬಪ್ಪ ಬ್ಯಾರಿಯ ಮನೆತನದವರ ಅನುಮತಿಯ ಮೇರೆಗೆ ಎಂಬುದು ಗಮನಿಸಬೇಕಾದ ಅಂಶ. ಭೂತಾರಾಧನೆ ಕರಾವಳಿಯ ವಿಶಿಷ್ಟ ಆರಾಧನಾ ಪದ್ಧತಿಯಾಗಿದೆ. ಆಲಿ ಚಾಮುಂಡಿ ಹಾಗೂ ಬೊಬ್ಬರ್ಯ ಭೂತ ಸಮನ್ವಯ ಸಂಸ್ಕೃತಿಯ ಪ್ರತೀಕಗಳು. ಬಾವ ಬ್ಯಾರಿ ಎಂಬ ಮುಸ್ಲಿಂ ವ್ಯಕ್ತಿ ಕಾಲಾಂತರದಲ್ಲಿ ಬೊಬ್ಬರ್ಯ ಎಂಬ ಭೂತವಾಗಿ ಸರ್ವ ಧರ್ಮದವರ ಆರಾಧನೆಗೆ ಒಳಗಾಗುತ್ತಾನೆ. ಈ ದೈವ ಕರಾವಳಿಯ ಜನರನ್ನು ಸಮುದ್ರದ ಅನಾಹುತಗಳಿಂದ ರಕ್ಷಿಸುತ್ತದೆ ಎಂಬ ನಂಬಿಕೆಯಿದೆ. ಆಲಿ ಚಾಮುಂಡಿ ನಿಜ ಬದುಕಿನಲ್ಲಿ ಮುಸ್ಲಿಂ ಮಂತ್ರವಾದಿಯಾಗಿದ್ದನಂತೆ. ಕರಾವಳಿಯಲ್ಲಿ ಮೀನಿನ ಕ್ಷಾಮ ಉಂಟಾದಾಗ ಮೀನುಗಾರರು 'ಸೀರನಿಪೂಜೆ' ಎಂಬ ಒಂದು ವಿಧದ ಪೂಜೆಯನ್ನು ಮುಸ್ಲಿಂ ಮೌಲ್ವಿಯೊಬ್ಬರಿಂದ ಮಾಡಿಸುತ್ತಾರೆ. ಕರಾವಳಿಯ ಇನ್ನೊಂದು ಪ್ರಸಿದ್ಧ ದೇವಾಲಯವಾಗಿರುವ ಧರ್ಮಸ್ಥಳ ಹಿಂದೂ – ಜೈನ ಧರ್ಮದ ಸಮನ್ವಯತೆಗೆ ಹೆಸರಾಗಿದೆ. ಅಣ್ಣಪ್ಪ - ಪಂಜುರ್ಲಿ ಇಲ್ಲಿನ ರಕ್ಷಕ ದೈವ. ಒಂದು ರೀತಿಯಲ್ಲಿ ಪ್ರಾಣಿಗಳನ್ನು ಕೂಡಾ ದೈವವಾಗಿ ಕಂಡ ಪ್ರದೇಶ ಈ ಕರಾವಳಿ. ಯಕ್ಷಗಾನ, ಭೂತದ ಕೋಲ, ಬೈದರ್ಕಳ ಗರಡಿ, ಕೆಡ್ಡಸ ಮುಂತಾದವು ಈ ಮಣ್ಣಿನ ಸಂಸ್ಕೃತಿಯನ್ನು ಸಾರುವ ಅನನ್ಯತೆಯ ಅಂಶಗಳಾಗಿವೆ.

ಮನುಷ್ಯನ ಬದುಕಿನ ವೈವಿಧ್ಯತೆಗೆ ಹಾಗೂ ವೈರುಧ್ಯಕ್ಕೆ ಮೂಲಕಾರಣ ಧರ್ಮಶ್ರದ್ಧೆ. ಹಾಗಾಗಿ ಸಂಸ್ಕೃತಿಯನ್ನು ನೋಡುವ, ವ್ಯಾಖ್ಯಾನಿಸುವ ರೀತಿ ಧಾರ್ಮಿಕ ಪರಿಭಾಷೆಯಿಂದ ಕೂಡಿರುತ್ತದೆ. ಧಾರ್ಮಿಕ ನೆಲೆಯಿಂದಲೇ ನೈತಿಕ ಮೌಲ್ಯಗಳೂ, ಆದರ್ಶಗಳು ಜನ್ಮ ತಳೆಯುತ್ತವೆ. ಧರ್ಮ ಮತ್ತು ದೇವರುಗಳಿಲ್ಲದ ಸಂಸ್ಕೃತಿಯನ್ನು ಕಲ್ಪಿಸಿಕೊಳ್ಳುವುದು ಕಷ್ಟಸಾಧ್ಯ. ದೀಪಾವಳಿ, ನಾಗರಪಂಚಮಿ, ಸಾಂತ್ ಮಾರಿಗಳು ಧರ್ಮಾತೀತವಾದ ಆಚರಣೆಗಳು. ಎಲ್ಲಾ ಧರ್ಮದವರು ಸೇರಿಕೊಂಡು ಇದನ್ನು ಆಚರಿಸುವ ಕ್ರಮ ಕರಾವಳಿಯಲ್ಲಿದೆ.

ಧರ್ಮ ಏಕಕಾಲದಲ್ಲಿ ಒಂದುಗೂಡಿಸುವುದಕ್ಕೂ, ಒಡೆಯುವುದಕ್ಕೂ ಕಾರಣವಾಗುತ್ತದೆ. ಅಂದರೆ ಒಂದು ನಿರ್ದಿಷ್ಟ ಸಮಯದಲ್ಲಿ ಒಂದುಗೂಡಿಸುವಿಕೆ ಮತ್ತು ಒಡೆಯುವಿಕೆಯನ್ನು ಮಾಡುತ್ತಿರುತ್ತದೆ. ಇದನ್ನು ತಿಳಿದ ಇಲ್ಲಿನ ವ್ಯಾಪಾರೀ ಮನಸ್ಸು ವ್ಯಾಪಾರದ ಉದ್ದೇಶಕ್ಕೆ ಧರ್ಮವನ್ನು ಬಳಸಿಕೊಂಡಿದೆ. ಸಾಂಪ್ರದಾಯಿಕವಾದ ಪ್ರತಿಯೊಂದು ವೃತ್ತಿ – ವ್ಯಾಪಾರದಲ್ಲಿಯೂ ಜಾತಿ – ಧರ್ಮಗಳು ಸೇರಿಕೊಂಡಿವೆ. ಸಮುದ್ರದಿಂದ ಮೀನು ಹಿಡಿದು ತರುವವರು ಮೊಗವೀರ ಪುರುಷರು. ಅದರ ಸಗಟು ಖರೀದಿ ಮಾಡುವವರು ಬ್ಯಾರಿಗಳು. ಬ್ಯಾರಿಗಳಿಂದ ಅದನ್ನು ಖರೀದಿಸಿ ಮನೆ

– ಮನೆಗೆ ಕೊಂಡೊಯ್ದು ಮಾರುವವರು ಮೊಗವೀರ ಹೆಂಗಸರು. ಈ ವ್ಯವಸ್ಥೆ ಇಂದು ಸ್ವಲ್ಪ ಮಟ್ಟಿಗೆ ಬದಲಾಗಿರಬಹುದು.

'ಮಲ್ಲಿಗೆ ಕೃಷಿ' ಕರಾವಳಿಯ ವೈಶಿಷ್ಟ್ಯತೆಗಳಲ್ಲಿ ಒಂದು. "ಹೆಚ್ಚಾಗಿ ಇದನ್ನು ಬೆಳೆಯುವವರು ಕ್ರಿಶ್ಚಿಯನ್ನರು. ಮಾರುವವರು ಬ್ಯಾರಿಗಳು, ಮುಡಿಯುವವರು ಹಿಂದೂಗಳು. ಬೀಡಿ ಕಟ್ಟುವವರು ಹಿಂದೂಗಳು, ಬೀಡಿ ಕಟ್ಟಿಸುವ ಗುತ್ತಿಗೆದಾರರು ಬ್ಯಾರಿಗಳು. ಹಣ್ಣು – ತರಕಾರಿಗಳನ್ನು ಬೆಳೆಯುವವರು ಹಿಂದೂಗಳು ಹಾಗೂ ಕ್ರಿಶ್ಚಿಯನ್ನರು. ಅದರ ವ್ಯಾಪಾರ ನಡೆಸುವವರು ಬ್ಯಾರಿಗಳು. ಅದರ ಬಳಕೆದಾರರು ಹಿಂದೂಗಳು"[7] ಎಂದು ದಿನೇಶ್ ಅಮೀನಮಟ್ಟು ಉಲ್ಲೇಖಿಸುತ್ತಾರೆ. ಈ ರೀತಿಯ ಸೌಹಾರ್ದ ಬದುಕು ಕರಾವಳಿಯ ವಿಶೇಷತೆ ಎನ್ನಬಹುದು.

ಕ್ರೈಸ್ತ ಸಂಸ್ಥೆಗಳ ಶೈಕ್ಷಣಿಕ ಕೊಡುಗೆಯಿಂದಾಗಿ ಸಮಾಜದ ಎಲ್ಲಾ ಸ್ತರಗಳಲ್ಲೂ ಶಿಕ್ಷಣದ ಮಟ್ಟ ಏರುವುದಕ್ಕೆ ಸಾಧ್ಯವಾಗಿದೆ. ಬ್ಯಾಂಕ್, ಮೀನುಗಾರಿಕೆ, ವಾಣಿಜ್ಯ ಬೆಳೆ, ಹೆಂಚಿನ ಕಾರ್ಖಾನೆ ಮುಂತಾದವು ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ಕಾಣುವಂತೆ, ವೈದ್ಯಕೀಯ ಹಾಗೂ ಇತರ ಉನ್ನತ ಶಿಕ್ಷಣಗಳಲ್ಲಿ ಪ್ರಗತಿಯಾಗುತ್ತಿದೆ. ಕರಾವಳಿಯನ್ನು ಕಟ್ಟಿ ಬೆಳೆಸಿದವರು ಹಿಂದೂ – ಕ್ರೈಸ್ತ ಹಾಗೂ ಮುಸಲ್ಮಾನರು. ಮುಸಲ್ಮಾನರು ಹುಟ್ಟು ವ್ಯಾಪಾರಿಗಳಾಗಿರುವುದರಿಂದ ಬೇರೆ ಕಡೆಗಳಲ್ಲಿ ಗಮನಿಸುವ ಹಾಗೆ, ಕರಾವಳಿಯಲ್ಲಿ 'ಬಡಮುಸ್ಲಿಮರ' ಸಂಖ್ಯೆ ಕಡಿಮೆ. ಕ್ರೈಸ್ತರು ಹಾಗೂ ಮುಸ್ಲಿಮರು ಕೊಲ್ಲಿ ದೇಶಗಳಿಗೆ ಹೋಗಿ ಹಣ ಸಂಪಾದಿಸುವುದರ ಮೂಲಕ ಕರಾವಳಿಯ ಆರ್ಥಿಕ ಕ್ಷೇತ್ರವನ್ನು ಗಟ್ಟಿಗೊಳಿಸಿದರೆ, ಹಿಂದೂಗಳಲ್ಲಿನ ಬ್ರಾಹ್ಮಣ, ಬಂಟ, ಬಿಲ್ಲವರು ಹೊರ ರಾಜ್ಯಗಳಿಗೆ ಹೋಗಿ ಹೋಟೆಲ್ ಉದ್ಯಮದ ಮೂಲಕ ಹಣ ಸಂಪಾದಿಸಿ ಕರಾವಳಿಯ ಬದುಕನ್ನು ಕಟ್ಟಿದ್ದಾರೆ.

ದೇವರಾಜ ಅರಸುರವರ ಭೂ ಸುಧಾರಣೆಗಳಿಂದಾಗಿ ಮಧ್ಯಮವರ್ಗ ಹಾಗೂ ಗೇಣಿದಾರ ಸಮುದಾಯಗಳು ಸಬಲೀಕರಣಗೊಂಡಿವೆ. ಭೂ ಸುಧಾರಾಣೆಗಳಿಂದಾಗಿ ಕೃಷಿ ಕಾರ್ಮಿಕರು ಯಾವುದೇ ಲಾಭ ಪಡೆಯದೇ ಇದ್ದರೂ ಹೆಚ್ಚಿನ ಕೂಲಿ ಸಿಗುವಂತಾಗಿದೆ. ಹಾಗಾಗಿ ರಾಜ್ಯದ ಇತರ ಜಿಲ್ಲೆಗಳ ಜನ ಹೆಚ್ಚು ಹೆಚ್ಚಾಗಿ ಕರಾವಳಿಗೆ ವಲಸೆ ಬರುವಂತಾಗಿದೆ.

ಕರಾವಳಿ ಭಾಷೆಗಳ ಆಡುಂಬೊಲ. ತುಳು, ಕನ್ನಡ, ಕೊಂಕಣಿ, ಕುಂದಕನ್ನಡ, ಹವ್ಯಕ, ಉರ್ದು, ಮಲಯಾಳಂ, ಮರಾಠಿ, ಅರೆಕನ್ನಡ. ಹೀಗೆ ಬೇರೆ ಬೇರೆ ಭಾಷೆಗಳು ಕರಾವಳಿಯಲ್ಲಿವೆ. ಭಾಷೆಗಳ ಕೊಡು – ಕೊಳ್ಳುವಿಕೆ ಇಲ್ಲಿನ ವೈಶಿಷ್ಟ್ಯ. ಕನ್ನಡದ ಉಪಭಾಷೆಗಳಲ್ಲಿ ಅನೇಕ ಪ್ರಾಚೀನ ರೂಪಗಳ ಬಳಕೆಯೂ ಇದೆ. ಉದಾಹರಣೆಗೆ ಕನ್ನಡದ ಆದಿಕವಿ ಪಂಪ 'ಕೂಸು' ಎಂಬ ಪದವನ್ನು 'ಹೆಣ್ಣುಮಗು' ಎಂಬ ಅರ್ಥದಲ್ಲಿ

ಪ್ರಯೋಗಿಸಿದ್ದಾನೆ. ಇಂದಿಗೂ ಹವ್ಯಕ ಭಾಷೆಯಲ್ಲಿ ಈ ಪದ ಅದೇ ಅರ್ಥದಲ್ಲಿ ಬಳಕೆಯಾಗುತ್ತಿದೆ. ಇಂತಹ ಅನೇಕ ಪದಗಳು ಬೇರೆ ಬೇರೆ ಭಾಷೆಗಳಲ್ಲಿ ಹಾಸು ಹೊಕ್ಕಾಗಿವೆ. ಕರಾವಳಿಯ ಮೇರುಕವಿ ರತ್ನಾಕರವರ್ಣಿಯ 'ಭರತೇಶ ವೈಭವ'ದ ಪೀಠಿಕಾ ಭಾಗದಲ್ಲಿ ಹೇಳಿರುವ

"ಅಯ್ಯಯ್ಯಾ ಚೆನ್ನಾದುದನೆ ಕನ್ನಡಿಗ
ರಯ್ಯಾಮಂಚಿದಿಯನೆ ತೆಲುಗಾ
ಅಯ್ಯಯ್ಯಾ ಎಂಚ ಪೊರ್ಲಾಂಡೆಂದು ತುಳುವರು
ಮೈಯುಬ್ಬಿ ಕೇಳಬೇಕಣ್ಣಾ!

ಎಂಬ ಪದ್ಯಭಾಗ ಕರಾವಳಿಯ ಭಾಷಾ ಬಾಂಧವ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಕರಾವಳಿ ಅತಿಮಾನುಷ ಶಕ್ತಿಗಳಿಗೆ, ವೀರಪುರುಷರಿಗೆ, ವೀರಮಹಿಳೆಯರಿಗೆ ಜನ್ಮಕೊಟ್ಟ ಪ್ರದೇಶ. ತುಳುನಾಡಿನ ಅವಳಿ ವೀರರಾದ ಕೋಟಿ – ಚೆನ್ನಯ್ಯ, ವೀರಪುರುಷ ಅಗೋಳಿ ಮಂಜಣ್ಣ, ಮನುಷ್ಯರಾಗಿ ಹುಟ್ಟಿ ದೈವಗಳಾದ ಕಲ್ಲುರ್ಟಿ – ಕಲ್ಕುಡ, ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಿದ ಸಿರಿಪಾಡ್ದನದ 'ಸಿರಿ' ಹಾಗೂ ಉಳ್ಳಾಲದ ರಾಣಿ 'ಅಬ್ಬಕ್ಕ' ಇವರೆಲ್ಲರೂ ಈ ಕರಾವಳಿಯವರು ಎನ್ನುವುದು ಹೆಮ್ಮೆಯ ವಿಚಾರ.

ಯಾವುದೇ ಒಂದು ಪ್ರದೇಶದ ಜನಜೀವನದ ಒಳಪದರಗಳನ್ನು, ಅವರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಅಲ್ಲಿನ ಸ್ತ್ರೀಯರ ಬದುಕನ್ನು ಅರ್ಥಮಾಡಿಕೊಳ್ಳಬೇಕು. ಯಾಕೆಂದರೆ ಸ್ತ್ರೀ ಸಂಸ್ಕೃತಿಯ ಪ್ರಧಾನ ಅಂಗ. ಸಮಾಜ ವ್ಯವಸ್ಥೆಯಲ್ಲಿ ಹೆಣ್ಣು ಎರಡನೆಯ ದರ್ಜೆಯವಳಾಗಿ ಪರಿಗಣಿತವಾಗಿದ್ದರೂ ಮಾತೃಮೂಲ ಸಂಸ್ಕೃತಿ ನಮ್ಮದು. ತಾತ್ವಿಕವಾಗಿ ಹೆಣ್ಣು ಗಂಡು ಸಮಾನವಾದರೂ ಐತಿಹಾಸಿಕವಾಗಿ ತಾರತಮ್ಯ ಹಾಗೆಯೇ ಮುಂದುವರಿದಿದೆ.

ಕರಾವಳಿಯ ಸಾಂಸ್ಕೃತಿಕ ಅನನ್ಯತೆಯ ಹಿಂದೆ ಅಡಗಿರುವ ಸ್ತ್ರೀ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳದೆ ಕರಾವಳಿಯ ಒಟ್ಟು ಬದುಕನ್ನು ತಿಳಿಯುವುದು ಕಷ್ಟ. ಇದನ್ನು ತಿಳಿಯುವ ಪ್ರಯತ್ನದಲ್ಲಿ ಕರಾವಳಿಯ ಒಟ್ಟು ಬದುಕನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಇದಕ್ಕೆ ಕರಾವಳಿಯ ಹೆಣ್ಣು ಮಕ್ಕಳ ಸಾಹಿತ್ಯ ಕೃತಿಗಳಿಂದ ಉತ್ತರ ದೊರೆಯುತ್ತದೆ. ಕರಾವಳಿ ಲೇಖಕಿಯರ ಕೃತಿಗಳ ಕುರಿತಾದ ಚರ್ಚೆ, ವಿಮರ್ಶೆಗಳು ಸಾಹಿತ್ಯ ವಲಯದಲ್ಲಿ ಬಂದಿದ್ದರೂ, ಸ್ತ್ರೀವಾದಿ ಸೂಕ್ಷ್ಮ ದೃಷ್ಟಿಕೋನದಿಂದ ನೋಡುವ ಪಯತ್ನಗಳು ಕಡಿಮೆಯೆಂದೇ ಹೇಳಬಹುದು.

ಇಲ್ಲಿ ಕರಾವಳಿ ಲೇಖಕಿಯರ ಸಾಹಿತ್ಯ ಕೃತಿಗಳು ಎಂದಾಗ ಅವು ನಿರ್ದಿಷ್ಟವಾಗಿ ಯಾವುದೋ ಒಂದು ಪ್ರಕಾರಕ್ಕೆ ಸೇರಿದವುಗಳಲ್ಲ. ಕಥೆ, ಕಾದಂಬರಿ, ಕವನ......... ಹೀಗೆ ಪಟ್ಟಿಮಾಡುತ್ತಾ ಹೋಗಬಹುದು. ಆದರೆ ಇಲ್ಲಿ ಈ ಅಧ್ಯಯನಕ್ಕೆ ಕಥಾ ಸಾಹಿತ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದಕ್ಕೆ ಕಾರಣ, ಕಥೆಗಳಲ್ಲಿ ಕಂಡುಬರುವ ಸಂಸ್ಕೃತಿಯ ಸೂಕ್ಷ್ಮ ಅಭಿವ್ಯಕ್ತಿ ಎನ್ನಬಹುದು.

ಕರಾವಳಿಯ ಕಥಾ ಸಾಹಿತ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ. ಪಂಜೆಯವರಿಂದ ಆರಂಭವಾಗುವ ಸಣ್ಣ ಕಥಾ ಲೋಕ ಮುಂದಕ್ಕೆ ಅವ್ಯಾಹತವಾಗಿ ಬೆಳೆದುಕೊಂಡು ಬಂದಿದೆ. ಸಾಹಿತ್ಯಕ್ಕೆ ಕರಾವಳಿ ಮಹಿಳಾ ಸಾಹಿತ್ಯದ ಕೊಡುಗೆಯೂ ದೊಡ್ಡದು ಎಂದು ಹೇಳಬಹುದು. ಕಾಲಮಿತಿಯ ದೃಷ್ಟಿಯಿಂದ ಸ್ವಾತಂತ್ರ್ಯೋತ್ತರ ಕಾಲಘಟ್ಟದ ಪ್ರಮುಖ ಲೇಖಕಿಯರ ಪ್ರಾತಿನಿಧಿಕ ಕಥೆಗಳಿಗಷ್ಟೇ ಇಲ್ಲಿನ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಪ್ರಮುಖ ಕಥೆಗಾರ್ತಿಯರ ಜೊತೆ ಜೊತೆಗೆ ಇತರ ಕಥೆಗಾರ್ತಿಯರ ಕಥೆಗಳ ಬಗೆಗೂ ದೃಷ್ಟಿ ಹರಿಸಲಾಗಿದೆ. ಇದರಲ್ಲಿ ಕರಾವಳಿಯಲ್ಲಿ ಹುಟ್ಟಿ ಇಲ್ಲಿಯೇ ಸಾಹಿತ್ಯಕೃಷಿ ಮಾಡುತ್ತಿರುವ ಕಥೆಗಾರ್ತಿಯರೂ ಇದ್ದಾರೆ. ಇಲ್ಲಿ ಹುಟ್ಟಿ ಬೇರೆ ಕಡೆಗೆ ವಲಸೆ ಹೋಗಿರುವ ಕಥೆಗಾರ್ತಿಯರೂ ಸೇರಿದ್ದಾರೆ ಹಾಗೂ ಬೇರೆಡೆಯಿಂದ ಇಲ್ಲಿಗೆ ಬಂದು ನೆಲೆಸಿದ ಕಥೆಗಾರ್ತಿಯರನ್ನೂ ಸೇರಿಸಲಾಗಿದೆ. ಒಟ್ಟಿನಲ್ಲಿ ಕರಾವಳಿಯ ಒಟ್ಟು ಬದುಕನ್ನು ಕಟ್ಟಿಕೊಡುವಲ್ಲಿ ಈ ಎಲ್ಲಾ ಕಥೆಗಾರ್ತಿಯರ ಕಥೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಬಹುದು.

ಕರಾವಳಿ ಲೇಖಕಿಯರು ಯಾವುದೇ 'ವಾದ'ಕ್ಕೆ ಬದ್ಧರಾಗಿ ಬರೆದವರಲ್ಲ. ಅವರ ಬದ್ಧತೆಯ ಮಾನದಂಡ ಬದುಕು ಹಾಗೂ ಅದರೊಂದಿಗಿನ ಅನುಭವ. ಡಾ. ಶಿವರಾಮ ಕಾರಂತರು "ಸಾಹಿತ್ಯಕ್ಕೆ ಅನುಭವವೇ ಜನ್ಮಭೂಮಿ. ಅದನ್ನು ಬಿಟ್ಟು ಬೇರೆ ಬೆಳೆಯಲಾರದು. ಬೆಳೆದರೆ ಕೃತಕವಾಗುತ್ತದೆ; ಅಸತ್ಯವಾಗುತ್ತದೆ. ಸಾಹಿತ್ಯ ಮತ್ತು ಬದುಕು ಹತ್ತಿರ, ಅವು ಅವಳಿ ಜವಳಿ"[೫] ಎಂದಿದ್ದಾರೆ. ಯಾವುದೇ ತತ್ವ ಸಿದ್ಧಾಂತದ ಪ್ರತಿಪಾದನೆಗಾಗಿ ಕರಾವಳಿ ಲೇಖಕಿಯರು ಬರೆಯದಿದ್ದರೂ, ಅವರ ಕಥೆಗಳನ್ನು ಸ್ತ್ರೀವಾದದ ನೆಲೆಯಿಂದ ಅರ್ಥಮಾಡಿಕೊಂಡು ಚಿಂತನೆಗೆ ಒಳಪಡಿಸಲು ಅವಕಾಶವಿದೆ. ಸ್ತ್ರೀಯೂ ಮಾನವ ಜೀವಿಯೇ ಆಗಿರುವುದರಿಂದ 'ಸ್ತ್ರೀವಾದ'ವೆಂದರೆ ಪಾಶ್ಚಾತ್ಯವೆಂಬ ಪೂರ್ವಾಗ್ರಹಕ್ಕೆ ಒಳಗಾಗದೆ, ಮಾನವತಾವಾದವನ್ನು ಪ್ರತಿಪಾದಿಸುವುದೇ ಆಗಿದೆ. ಸ್ತ್ರೀವಾದದ ಆಶಯಗಳು ಮಾನವತಾವಾದದೊಂದಿಗೆ ಸಮನ್ವಯಗೊಂಡಿರುವುದರಿಂದ 'ಸ್ತ್ರೀವಾದ' ಎಂಬ ಪ್ರತ್ಯೇಕ ಪರಿಕಲ್ಪನೆ ಅಗತ್ಯವಿದೆಯೇ ಎಂಬ ಪ್ರಶ್ನೆ ಹುಟ್ಟಿಕೊಳ್ಳಬಹುದು. ಆದರೆ ಮಾನವತಾವಾದದ ನೆಲೆಯಲ್ಲಿ ಸ್ತ್ರೀ ಅಭಿವ್ಯಕ್ತಿ

ನಿರ್ದಿಷ್ಟವೆನಿಸದೆ ಸಾರ್ವತ್ರೀಕರಣಕ್ಕೆ (ರಜಟಜಡಿಚಿಟುದಚಿಣುಂಟ) ಒಳಗಾಗುವುದರಿಂದ ಸ್ತ್ರೀವಾದಿ ದೃಷ್ಟಿಕೋನ ಪ್ರತ್ಯೇಕವಾದ ಅಸ್ತಿತ್ವವನ್ನು ಬಯಸುತ್ತದೆ.

೧.೨. ಸಮಸ್ಯೀಕರಣ

ಪ್ರಶ್ನೆಗಳು ಹುಟ್ಟಿಕೊಳ್ಳದ, ಸಮಸ್ಯೆಗಳೊಂದಿಗೆ ಸಂಘರ್ಷಕ್ಕಿಳಿಯದೆ ನಡೆಸುವ ಯಾವುದೇ ರೀತಿಯ ಅಧ್ಯಯನವು ಅರ್ಥಹೀನವಾಗುತ್ತದೆ. ಕರಾವಳಿ ಲೇಖಕಿಯರ ಕಥೆಗಳಲ್ಲಿ ಸ್ತ್ರೀ ಸಂಸ್ಕೃತಿಯ ಆಯಾಮಗಳನ್ನು ಹುಡುಕುವ ಪ್ರಯತ್ನದಲ್ಲಿ ಕೆಲವು ಪ್ರಮುಖ ಪ್ರಶ್ನೆಗಳು ಎದುರಾಗುತ್ತವೆ. ಇವುಗಳಿಗೆ ಸಮುದಾಯದ ನೆಲೆಯಲ್ಲಿ ಉತ್ತರವನ್ನು ಹುಡುಕಬೇಕಾದ ಅಗತ್ಯವಿದೆ. ಇಲ್ಲಿ ಎದುರಾಗುವ ಮುಖ್ಯ ಪ್ರಶ್ನೆಗಳೆಂದರೆ,

೧. ಕರಾವಳಿ ಮಹಿಳೆಯ ಬದುಕಿನ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಕಾರಣವಾದ ಅಂಶಗಳು ಯಾವುವು?

೨. ಕರಾವಳಿ ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ತಲ್ಲಣಗಳು ಯಾವುವು?

೩. 'ಪರಂಪರೆ' ಮತ್ತು 'ಆಧುನಿಕತೆ'ಯೊಂದಿಗಿನ ಸಂಘರ್ಷದಲ್ಲಿ ಕರಾವಳಿ ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳು ಯಾವುವು?

೪. ಕರಾವಳಿ ಕತೆಗಳ ಮಹಿಳಾ ಸಂವೇದನೆಯ ಸಂಕೀರ್ಣತೆಗಳನ್ನು ಅರ್ಥ ಮಾಡಿಕೊಳ್ಳುವ ಬಗೆ ಹೇಗೆ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ನಡೆಸಲಾಗಿದೆ.

೧.೩. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸುಮಾರು ಒಂದು ಶತಮಾನದಷ್ಟು ಇತಿಹಾಸವಿರುವ ಕರಾವಳಿಯ ಮಹಿಳಾ ಸಾಹಿತ್ಯ ಬೇರೆ ಬೇರೆ ಪ್ರಕಾರಗಳಲ್ಲಿ ಬೆಳೆದು ಬಂದಿದೆ. ಕಥೆ, ಕಾದಂಬರಿ, ನಾಟಕ, ಕಾವ್ಯ, ವಿಮರ್ಶೆ, ಪ್ರಬಂಧ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಇವರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ದೊಡ್ಡದು ಎನ್ನಬಹುದು. ಆರಂಭದ ಲೇಖಕಿಯರ ಬರಹಗಳಲ್ಲಿ ಸಾಂಪ್ರದಾಯಿಕ ಮೌಲ್ಯಗಳ ಪ್ರತಿಪಾದನೆ ಕಂಡು ಬಂದರೂ ಪ್ರಗತಿಪರವಾಗಿ ಚಿಂತಿಸಿ, ಸಮಾಜಮುಖಿ ನಿಲುವುಗಳನ್ನು ಅಭಿವ್ಯಕ್ತಿಸಿದ್ದನ್ನು ಗಮನಿಸಬಹುದು. ಆದರೆ ಉಳಿದೆಲ್ಲ ಪ್ರಕಾರಗಳಿಗಿಂತ ಕಥಾ ಸಾಹಿತ್ಯವೇ ಕರಾವಳಿ ಲೇಖಕಿಯರ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿ ಬಂದದ್ದನ್ನು ನೋಡಬಹುದು. ಸ್ವಾತಂತ್ರ್ಯೋತ್ತರ ಕಾಲಘಟ್ಟದ ಲೇಖಕಿಯರ ಕಥೆಗಳು ಕಟ್ಟಿಕೊಟ್ಟ ಸಾಂಸ್ಕೃತಿಕ ಬದುಕನ್ನು ದಾಖಲಿಸುವುದೇ ಈ ಪ್ರಬಂಧದ ಆಶಯ.

ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ - ಬಂಡಾಯ ಚಳುವಳಿಗಳ ಸಂದರ್ಭದಲ್ಲಿ ರಚಿತವಾದ ಕಥಾಸಾಹಿತ್ಯದ ಕುರಿತಂತೆ ಅಲ್ಲಲ್ಲಿ ಕೆಲವೊಂದು ಅಧ್ಯಯನಗಳು ನಡೆದಿವೆಯಾದರೂ ಅವು ಸಮಗ್ರ ಅಧ್ಯಯನಗಳಲ್ಲ. ಕರಾವಳಿಯ ಲೇಖಕಿಯರ ಕಥೆಗಳನ್ನು ಕ್ರೋಢೀಕರಿಸುವ ಪ್ರಯತ್ನವನ್ನು ಅನೇಕರು ಮಾಡಿದ್ದಾರೆ. ಆದರೆ ಕಥೆಗಾರ್ತಿಯರ ಬದುಕು - ಬರಹಗಳ ಕುರಿತಾದ ಅಧ್ಯಯನ ನಡೆದರೂ ಕಥೆಗಳ ಒಳಹೊಕ್ಕು ನೋಡುವ ಪ್ರಯತ್ನ ಕಡಿಮೆಯೆಂದೇ ಹೇಳಬಹುದು. ಲೇಖನ ರೂಪದಲ್ಲಿ ಬೇರೆ ಬೇರೆ ಪತ್ರಿಕೆಗಳಲ್ಲಿ, ಸಂಚಿಕೆಗಳಲ್ಲಿ, ಕರಾವಳಿ ಲೇಖಕಿಯರ ಕಥೆಗಳು, ಬದುಕು, ಸಾಧನೆಗಳ ಕುರಿತಾದ ವಿಚಾರಗಳು ಪ್ರಕಟವಾಗಿವೆಯಾದರೂ ಕಥಾಸಾಹಿತ್ಯದ ಬಗೆಗೆ ತಲಸ್ಪರ್ಶಿ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ಕರಾವಳಿ ಲೇಖಕಿಯರ ಕೆಲವು ಕಥೆಗಳು ಬೇರೆ ಭಾಷೆಗಳಿಗೆ ಅನುವಾದಗೊಂಡ ಉದಾಹರಣೆಗಳು ಇವೆಯಾದರೂ ಇಲ್ಲಿನ ಲೇಖಕಿಯರ ಕಥೆಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳನ್ನು ಕುರಿತು ಒಂದು ಸಮಗ್ರವಾದ ಅಧ್ಯಯನ ನಡೆಯದಿರುವುದು ಒಂದು ಕೊರತೆಯೆಂದೇ ಹೇಳಬಹುದು. ಕರಾವಳಿಯ ಬಹುಮುಖೀ ಸಂಸ್ಕೃತಿಯನ್ನು ಗ್ರಹಿಸುವ ಮೂಲಕ ಈ ನೆಲದ ನೆಲೆ - ಬೆಲೆಯನ್ನು ಅರಿಯುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಈ ಪ್ರಬಂಧ ಪ್ರಯತ್ನಿಸಿದೆ.

ಈ ಮೇಲಿನ ಸಮಸ್ಯೀಕರಣವನ್ನು ಇಟ್ಟುಕೊಂಡು ಈ ಪ್ರಬಂಧದ ಉದ್ದೇಶವನ್ನು ಕೆಳಗಿನಂತೆ ಗುರುತಿಸಿಕೊಂಡಿದೆ.

೧. ಕರಾವಳಿ ಮಹಿಳೆಯ ಸಾಂಸ್ಕೃತಿಕ ಬದುಕನ್ನು ಅಧ್ಯಯನ ಮಾಡುವುದು.
೨. ಕರಾವಳಿ ಸಂಸ್ಕೃತಿಗೂ ಇತರ ಪ್ರಾದೇಶಿಕ ಸಂಸ್ಕೃತಿಗೂ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸುವುದು.
೩. ಪ್ರಾದೇಶಿಕ ಸಂಸ್ಕೃತಿಯ ಅನನ್ಯತೆಯನ್ನು ತಿಳಿದುಕೊಳ್ಳುವುದು.
೪. ಪರಂಪರೆ ಮತ್ತು ಆಧುನಿಕತೆ ಎಂಬ ದ್ವಂದ್ವದ ನೆಲೆಯಲ್ಲಿ ಕರಾವಳಿ ಹೆಣ್ಣಿನ ಬದುಕನ್ನು ಅರ್ಥಮಾಡಿಕೊಳ್ಳುವುದು.

೧.೪. ಅಧ್ಯಯನದ ವ್ಯಾಪ್ತಿ

ಕರಾವಳಿಯ ಮೊದಲ ಮಹಿಳಾ ಬರಹಗಾರರಲ್ಲಿ ಹೆಚ್ಚಿನವರು ಮೇಲ್ವರ್ಗದವರು ಮತ್ತು ಮೇಲ್ಜಾತಿಯವರು ಎನ್ನುವುದು ಸತ್ಯ. ಕರಾವಳಿಯಲ್ಲಿ ಮೊದಲು / ಸುಶಿಕ್ಷಿತರಾದುದು ಶೂದ್ರ ಸಮುದಾಯದವರಾದರೂ, ಬರವಣಿಗೆಯಲ್ಲಿ ತೊಡಗಿಸಿಕೊಂಡವರು ಮೇಲ್ಜಾತಿಯವರಾಗಿದ್ದರು. ಬಾಸೆಲ್

ಮಿಷನರಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿಯೇ ಪ್ರತ್ಯೇಕವಾಗಿ ಗರ್ಲ್ಸ್ ಹೈಸ್ಕೂಲ್‌ನ್ನು ಸ್ಥಾಪಿಸಿತು. ಸ್ವಾತಂತ್ರ್ಯ ಪೂರ್ವದ ಮಹಿಳಾ ಶಿಕ್ಷಣ ಕೇವಲ ಬೆರಳೆಣಿಕೆಯ ಮಂದಿಗೆ ಮಾತ್ರ ಸಾಧ್ಯವಾಯಿತು. ಹೀಗೆ ಸುಶಿಕ್ಷಿತರಾದವರೆಲ್ಲ ಬರಹಗಾರರಾಗಿರಲಿಲ್ಲ. ವೈಯಕ್ತಿಕ ಬದುಕಿನ ಶೀಘ್ರ ವಿವಾಹ, ಶೀಘ್ರ ವೈಧವ್ಯಗಳಿಂದ ಅನುಭವಿಸುತ್ತಿದ್ದ ಖಾಲಿತನವನ್ನು ತುಂಬಿಕೊಳ್ಳಲೆಂದೇ ಬರವಣಿಗೆಯ ಕೈ ಹಚ್ಚಿದರು.

೧೮೭೦ ರಿಂದ ೧೯೫೨ ರವರೆಗೆ ಜೀವಿಸಿದ್ದರೆನ್ನಲಾದ ಮುಳಿಯ ಮೂಕಾಂಬಿಕ ಅಮ್ಮ ಕರಾವಳಿಯ ಮೊದಲ ಬರಹಗಾರ್ತಿಯಾಗಿ ಗಮನ ಸೆಳೆಯುತ್ತಾರೆ. ೧೮೯೯ರಿಂದ ೧೯೭೦ರವರೆಗೆ ಜೀವಿಸಿದ್ದರೆನ್ನಲಾದ ನೆಲ್ಲಿಕಾರು ಜೈನ ಮಹಿಳೆ ರಾಧಾಮತಿ ಹಾಗೂ ೧೯೧೩ರಿಂದ ೧೯೯೫ರ ವರೆಗೆ ಬಾಳಿದ ಸರಸ್ವತಿಬಾಯಿ ರಾಜೇವಾಡೆ 'ಗಿರಿಬಾಲೆ' ಎಂಬ ಕಾವ್ಯನಾಮದಿಂದ ವಿಪುಲವಾದ ಸಾಹಿತ್ಯ ಕೃಷಿ ಮಾಡಿದರು. 'ಕಥಾವಳಿ'ಯಲ್ಲಿ 'ಅಕ್ಕನ ಓಲೆ' ಅಂಕಣದಲ್ಲಿ ಸತತ ಏಳು ವರ್ಷಗಳ ಕಾಲ ಬರೆದರೂ, ಬರವಣಿಗೆಯಲ್ಲಿ ವೈವಿಧ್ಯತೆಯನ್ನು ಹೊಂದಿದ ರಾಜೇವಾಡೆಯವರು ೨೮ನೇ ವಯಸ್ಸಿಗೆ ವಿಧವೆಯಾಗಿ ಬದುಕಿನ ಕಷ್ಟ- ಕೋಟಲೆಗಳನ್ನು ಸೋತು ಹೋಗದೆ ಬದುಕಿನ ಬರವಣಿಗೆಯ ಯಶಸ್ಸು ಗಳಿಸಿಕೊಂಡರು. ೧೯೨೮ರಲ್ಲಿ ಇಂಗ್ಲೀಷ್ – ಕನ್ನಡಗಳಲ್ಲಿ ಬರೆದ ಆನಾದಿ ಸದಾಶಿವರಾವ್ ಹಾಗೂ ಉಡುಪಿಯ ಯಶೋದಮ್ಮ ಮುಂತಾದ ಹೆಚ್ಚಿನ ಎಲ್ಲಾ ಲೇಖಕಿಯರೂ ಅರಿವಿನಂಚಿನಲ್ಲಿ ನಿಂತು ಮಹಿಳಾ ಪ್ರಜ್ಞೆಯನ್ನು ಜಾಗೃತಗೊಳಿಸಿದವರು.

ಮೊದಲ ತಲೆಮಾರಿನ ಬರಹಗಾರ್ತಿಯರಿಗೆಲ್ಲ ಅವಕಾಶಗಳು ತಾವಾಗಿ ಒದಗಿ ಬರಲಿಲ್ಲ. ಅದಕ್ಕಾಗಿ ಹೋರಾಟವೂ ಆ ಕಾಲದಲ್ಲಿ ಸಾಧ್ಯವಿರಲಿಲ್ಲ. ವಿಧವೆಯಾಗಿದ್ದ ಮುಳಿಯ ಮೂಕಾಂಬಿಕ ಅಮ್ಮ ಮೂಕಜ್ಜಿಯಾಗಿದ್ದು, ವಾಕಜ್ಜಿಯಾದುದು ತನ್ನ ತೊಂಭತ್ತನೆಯ ವಯಸ್ಸಿಗೆ. ಆರಂಭದ ಬರಹಗಾರ್ತಿಯರೆಲ್ಲ ಹೆಚ್ಚಾಗಿ ಭಕ್ತಿ ಸಾಹಿತ್ಯದ ಬಗೆಗೆ ಬರೆದರು, ಯೋಚಿಸಿದರು. ವಿಧವೆಯರಾಗಿದ್ದ ಅವರಿಗೆ ತಮ್ಮ ನೋವನ್ನು ಮರೆಯಲು ಭಗವಂತನ ನಾಮಸ್ಮರಣೆಯೊಂದರಿಂದಲೇ ಸಾಧ್ಯವಾಗಿತ್ತು.

ಎರಡನೆಯ ತಲೆಮಾರಿನ ಕಾಲಕ್ಕೆ ಹುಟ್ಟಿಕೊಂಡ ಸ್ವಾತಂತ್ರ್ಯ ಚಳುವಳಿ, ಅದರ ಭಾಗವಾಗಿದ್ದ ಸಮಾಜ ಸುಧಾರಣಾ ಚಳುವಳಿಗಳು ತುಂಬಾ ಸಕ್ರಿಯವಾಗಿದ್ದ ಕಾಲ. ಸ್ತ್ರೀಯರನ್ನು ಉದ್ಧರಿಸಬೇಕೆಂಬ ಪರಿಕಲ್ಪನೆಯನ್ನು ಹೊಂದಿದ್ದ ಅಂದಿನ ಸಮಾಜ ಸ್ತ್ರೀಯರು ಹೆಚ್ಚು ಸುರಕ್ಷಿತರಾಗುವಂತೆ ಪ್ರೇರೇಪಿಸಿತು. ತಾವು ಪಡೆದ ಶಿಕ್ಷಣ ಮತ್ತು ಮನೆಯ ಸಾಹಿತ್ಯಕ ನೆಲೆಯಿಂದ ಸ್ಫೂರ್ತಿಗೊಂಡು ಬರೆಯಲಾರಂಭಿಸಿದರು. ಈ ಕಾಲದ ಅಕ್ಷರಬಲ್ಲ ಸ್ತ್ರೀಯರು ನಿರ್ದಿಷ್ಟ ಚೌಕಟ್ಟಿನೊಳಗೆ ಬರೆಯಲು ಮತ್ತು ಬರೆಯದಿರಲು ಕಾರಣಗಳನ್ನು ಅನ್ವೇಷಿಸಿದಾಗ ಅವರ ಬರವಣಿಗೆ ಮತ್ತು ಅದಕ್ಕೆ ಹಿನ್ನೆಲೆಯಾದ ಬದುಕು ಬಹಳ ಮುಖ್ಯವೆನಿಸುತ್ತದೆ. ತಮಗೆ ದಕ್ಕಿದ ಮನೆಯ ಸೀಮಿತ ಚೌಕಟ್ಟಿನಲ್ಲಿ

ತಮ್ಮ ಮನೆವಾರ್ತೆಯ ಎಲ್ಲಾ ಹೊರೆಗಳೊಂದಿಗೆ ಸಮಯವನ್ನು ಹೊಂದಾಣಿಕೆ ಮಾಡಿಕೊಂಡು ಬರೆಯಲು ಆರಂಭಿಸಿದರು. ಮನೆವಾರ್ತೆಯ ಎಲ್ಲಾ ಹೊರೆಗಳನ್ನು ನಿಭಾಯಿಸಿ ಬರವಣಿಗೆ ಆರಂಭಿಸಿದ ಇವರು ತಾವು ಏನೋ ಮಹತ್ತಾದ ಸಾಧನೆಯನ್ನು ಮಾಡುತ್ತಿದ್ದೇವೆ ಎಂಬ ಯೋಚನೆಯಲ್ಲಿದ್ದೇ ಬದುಕಿನ ಒತ್ತಡಗಳ ನಿವಾರಣೆಗಾಗಿ ಬರೆದರು.

ರಾಷ್ಟ್ರೀಯ ಚಳುವಳಿ ಹುಟ್ಟು ಹಾಕಿದ ಗಾಂಧೀಜಿಯವರ 'ಸ್ತ್ರೀ' ಕುರಿತಾದ ಚಿಂತನೆಗಳು 'ಆತ್ಮ'ದ ಪರಿಶುದ್ಧತೆಯಲ್ಲಿ ಹಾಗೂ ಅಹಿಂಸೆ ಮತ್ತು ಸತ್ಯದ ವಿಚಾರಗಳಿಂದ ಆದರ್ಶಗೊಳಿಸಿ ಮಂಡಿಸುವ ವಿಚಾರಗಳು ನಡೆದವು. ಪರಿಣಾಮವಾಗಿ ಸ್ತ್ರೀಯರ ಚಿಂತನೆಗಳು ನೈತಿಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯದ ಸಂಕೇತವಾಗಿ ಪುರುಷ ಪ್ರಧಾನ ಜಗತ್ತಿನೆದುರು ಮಂಡಿತವಾಗುತ್ತದೆ. ಆ ಕಾಲಘಟ್ಟದ ಹೆಚ್ಚಿನ ಬರಹಗಾರ್ತಿಯರಲ್ಲಿ ಮಹಿಳಾ ಸಾಹಿತ್ಯ ಎನ್ನುವಾಗ ಅದು ತಮ್ಮನ್ನು ತಾವು ಮೈಮರೆತು ಹಾಡಲು ಸಾಧ್ಯವಾಗುವ ಭಕ್ತಿ ಸಾಹಿತ್ಯ ಮಾತ್ರ. ಆ ಕಾಲಕ್ಕೆ ನೈತಿಕತೆಯೇ ಆದರ್ಶ ಮಾದರಿ. ಅದಕ್ಕೆ ಪೂರಕವಾಗಿ ಭಕ್ತಿಯ ತನ್ಮಯತೆಯೂ ಮುಖ್ಯ.

ಹೆಣ್ಣಿನ ತ್ಯಾಗ, ಸಹನೆ, ತಾಯ್ತನ, ಅಹಿಂಸೆಗಳೊಂದಿಗೆ ಮೃದು ಮಧುರ ಭಾವಗಳು ಸ್ತ್ರೀಯರನ್ನು ಕಾಡಿದವು. ಈ ಕಾಲದ ಲೇಖಕಿಯರ ಬರೆಯುವ ಮತ್ತು ಬರೆಯದೆ ಬಿಟ್ಟಿರುವ ದ್ವಂದ್ವಗಳ ಸೂಕ್ಷ್ಮಗಳ ಮಧ್ಯೆ ಅವರ ಬರಹದ ಸಫಲತೆ ಮತ್ತು ಸೋಲುಗಳನ್ನು ಮನಗಾಣಬೇಕು. ಬರೆದದ್ದನ್ನು ಬಚ್ಚಿಟ್ಟು, ಹುದುಗಿಟ್ಟು, ತಮ್ಮನ್ನು ತಾವು ಮುಚ್ಚಿಟ್ಟು ಬರೆದಾಗಲೂ ತಮ್ಮತನವನ್ನು ಬಿಚ್ಚಿಡುವ ಪ್ರಯತ್ನ ಮಾಡಲಿಲ್ಲ. ಹಾಗಾಗಿಯೇ ಪ್ರಧಾನ ವಾಹಿನಿಯ ಸಾಹಿತ್ಯ ಚರಿತ್ರೆಗಳಲ್ಲಿ ಮೊದಲ ಎರಡು ವರ್ಗದ ಬರಹಗಾರ್ತಿಯರು ಚರಿತ್ರೆಯಲ್ಲಿ ಎಲ್ಲೂ ದಾಖಲಾಗದೆ ಮರೆಯಾಗಿ ಹೋಗುತ್ತಾರೆ.

ಮೂರನೆಯ ಹಂತದ ಬರಹಗಾರ್ತಿಯರಲ್ಲಿ ೧೯೭೦ರಿಂದ ೧೯೮೦ ರಿಂದೀಚೆಗೆ ಬರೆಯುವ ಪ್ರಯತ್ನ ಮಾಡಿದ ಬರಹಗಾರ್ತಿಯರಲ್ಲಿ ಕನ್ನಡದ ಮಹತ್ವದ ಲೇಖಕಿಯರಾಗಿ ಕರಾವಳಿಯ ಬರಹಗಾರ್ತಿಯರೂ ಇದ್ದಾರೆ. ತಮ್ಮನ್ನು ತಾವು ಅರಿಯುವ ಪ್ರಯತ್ನದಲ್ಲಿ ಮೊದಲ ಹೆಜ್ಜೆಯಾಗಿಯೇ ತಮ್ಮ ಭಾವಗಳಿಗೆ ಬರಹದ ರೂಪ ನೀಡಿದ್ದು, ಪ್ರಧಾನವಾಹಿನಿಯ ಧಾರೆಗಳಿಗೆ ಉತ್ತರದಾಯಿತ್ವವಾಗಿ ಈ ಲೇಖಕಿಯರು ಗುರುತಿಸಿಕೊಂಡಿದ್ದಾರೆ. ಚರಿತ್ರೆಕಾರರು ಮತ್ತು ವಿಮರ್ಶಕರು ಗಮನಿಸಲೇಬೇಕಾದ ಧಾರೆಯೊಂದು ನಮ್ಮ ಸನಿಹದಲ್ಲಿದೆ, ಮತ್ತದರ ಬೇರುಗಳು ಬಹಳ ಆಳದಲ್ಲಿವೆ ಎಂಬ ಸತ್ಯ ಬದಲಾಯಿತು. ಇಷ್ಟು ದಿನಗಳ ಕಾಲ ಬಹಳ ದೀರ್ಘವಾಗಿ ಹುದುಗಿಟ್ಟ, ಅಮುಕಿಟ್ಟ 'ಮಹಿಳಾ ಜಗತ್ತು' ತನ್ನ ಬರಹಗಳ ಸ್ವರೂಪದಲ್ಲಿ 'ಅಸ್ಮಿತೆ'ಯ ಚೌಕಟ್ಟಿನಲ್ಲಿ ಗುರುತಿಸಿಕೊಂಡಿತು. ಪ್ರಧಾನ

ವಾಹಿನಿಯ ಬರಹಗಳ ಮುಂದೆ ತಾವು ಸ್ಪರ್ಧೆಗೆ ನಿಂತಿಲ್ಲ ಎಂಬ ತರ್ಕದೊಂದಿಗೆ ಹೇಳಬೇಕಾದ ವಿಚಾರಗಳನ್ನು 'ಮಹಿಳಾ ಸಂವೇದನೆ'ಯೊಂದಿಗೆ ನಿರೂಪಿಸಲಾಯಿತು.

ಅನಾವರಣಗೊಳ್ಳದೆ ಇದ್ದ ಜಗತ್ತೊಂದು ಇದ್ದಕ್ಕಿದ್ದಂತೆ ತೆರೆದುಕೊಂಡಾಗ ಅಲ್ಲಿ ಬಳಸಿದ ವಸ್ತು, ಭಾಷೆ ಮತ್ತು ಶೈಲಿಗಳಲ್ಲಿ ಸ್ತ್ರೀಸಹಜವಾದ ಸಂವೇದನೆಗಳು ವ್ಯಕ್ತವಾದವು. ಸ್ತ್ರೀ ಶಿಕ್ಷಣ, ಸ್ತ್ರೀ ಕಲ್ಯಾಣಗಳಷ್ಟೇ ಹೆಣ್ಣೊಬ್ಬಳನ್ನು 'ವ್ಯಕ್ತಿ'ಯನ್ನಾಗಿ ಗೌರವಿಸಬೇಕೆನ್ನುವ ಮನೋಧರ್ಮ ಮುಖ್ಯವಾಯಿತು. ಆಕೆಯ ವೈಯಕ್ತಿಕತೆ ಮತ್ತು ಸಾರ್ವಜನಿಕತೆ ಇವೆರಡರ ಮಧ್ಯೆ ಒಂದು ಸೂಕ್ಷ್ಮ ಅಂತರವನ್ನು ಇರಿಸಿಕೊಂಡೇ ಅವರು ಬರೆದರು. ಮಹಿಳೆಯರ ಶ್ರೇಯಸ್ಸಿನ ಬಗೆಗೆ, ಸ್ತ್ರೀ ಸ್ವಾಯತ್ತತೆಯ ಬಗೆಗೆ ಬರೆದ ಬರಹಗಳಲ್ಲಿ ಕೇವಲ ಅದ್ಭುತ ರಮ್ಯ, ಭಾವುಕ ಜಗತ್ತಿನ ಕಾವ್ಯಗಳಾಗದೇ ವಸ್ತು ನಿಷ್ಠ ನಿರೂಪಣೆಯ ಗದ್ಯ ಬರಹಗಳಾದವು. ಆತ್ಮಕಥೆ ಹಾಗೂ ಗದ್ಯ ಸ್ವರೂಪದ ಬರಹ ನಿರೂಪಣೆಗೊಂಡು ಹೆಚ್ಚು ಮನ್ನಣೆಯನ್ನು ಪಡೆದವು. ಹಳತು - ಹೊಸತರ ಸಮ್ಮಿಲನದೊಂದಿಗೆ ಸಾಹಿತ್ಯ ಪ್ರಕಾರಗಳ ಆಯ್ಕೆಯೂ ಮುಖ್ಯವಾಯಿತು. ಆರಂಭದಲ್ಲಿ ಬರೆದವರಲ್ಲಿ ಕಾವ್ಯಗಳನ್ನು ಮುಖ್ಯ ಗುರಿಯಾಗಿಸಿಕೊಂಡರು. ಬರೆದದ್ದೆಲ್ಲವೂ ಜೊಳ್ಳಾಗದೆ, ಕಾಳಾಗುವ ಗಟ್ಟಿ ದನಿಯ ಬರಹಗಳು ರಚನೆಗೊಂಡವು. ಅದರಲ್ಲೂ 'ಕಥಾ ಸಾಹಿತ್ಯ' ದಂತಹ ಕ್ಷೇತ್ರವನ್ನು ಈ ಕಾಲಘಟ್ಟದಲ್ಲಿ ಬಹಳ ಮಂದಿ ಕತೆಗಾರ್ತಿಯರು ಆರಿಸಿಕೊಂಡರು. ಅಷ್ಟು ಮಾತ್ರವಲ್ಲ, ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಓದಲೇಬೇಕಾದ ಬರಹಗಳು ಈ ಸಂದರ್ಭಗಳಲ್ಲಿ ನಿರ್ಮಾಣಗೊಂಡು 'ಪರಂಪರೆಯ ನಿರ್ಮಾಪಕರು' ಎಂದೆನಿಕೊಂಡರು. ಸ್ತ್ರೀಯ ಭಾವಜಗತ್ತು ತನ್ನದೇ ಆದ ವಿಶಿಷ್ಟ ಸಂವೇದನೆಯೊಂದಿಗೆ 'ಸ್ತ್ರೀಯಾತ್ಮಕತೆ' ಎನ್ನುವುದು ಮೂರ್ತ ಸ್ವರೂಪ ಪಡೆದು, ಸ್ಪಷ್ಟ ರೂಪ ನೀಡಲು ಸಾಧ್ಯವಾಯಿತು. ತನ್ನನ್ನು ತಾನು ಅರಿಯುವ ತನ್ನೊಳಗನ್ನು ಪ್ರಸ್ತುತಪಡಿಸುವ, ತನ್ನ ದೇಹ ಮತ್ತು ಮನಸ್ಸು ವ್ಯಕ್ತಿತ್ವಕ್ಕೆ ಮಿತಿಯಾಗದೆ ಹೋದ ಎಚ್ಚರವನ್ನು ಜಾಗೃತಗೊಳಿಸಿದರು. ಹಾಗಾಗಿ ಇದುವರೆಗೆ ಬಯಲಾಗದೆ ಹೋದ ಜಗತ್ತು ಅನಾವರಣಗೊಳ್ಳುವುದಕ್ಕೆ ಸಾಧ್ಯವಾಗುತ್ತಲೂ ಭಾವ ಪ್ರಪಂಚದ ಮಿಡಿತವೊಂದು ಪ್ರಕಾಶಿಸಲು ಸಾಧ್ಯವಾಯಿತು.

ಈ ಹಿನ್ನೆಲೆಯಿಂದ ಬರೆಯುವ ಲೇಖಕಿಯರು ಪ್ರಾದೇಶಿಕತೆಯ ಕಾರಣಗಳಿಗಾಗಿ ವೈಶಿಷ್ಟ್ಯವನ್ನು ಹೊಂದಿದ್ದರು ಎನ್ನುವುದಕ್ಕಿಂತ ಕನ್ನಡತನದ ದೇಸೀಯತೆಯನ್ನು ತಮ್ಮ ಬರಹಗಳಲ್ಲಿ ಪ್ರಚುರಪಡಿಸಿದರು. ಕನ್ನಡದ 'ಕನ್ನಡಂಗಳು' ಪ್ರಕಟಗೊಳ್ಳುವುದರೊಂದಿಗೆ ಸ್ತ್ರೀ ಸಂವೇದನೆಯ ಸ್ವರೂಪಗಳ ಮಗ್ಗುಲುಗಳು ಎಳೆಎಳೆಯಾಗಿ ವಿಭಿನ್ನವಾಗುತ್ತ ಹೋದವು. ಮಾತ್ರವಲ್ಲ ಬಹಳ ಗಂಭೀರವಾದ ತಾತ್ವಿಕ ಮತ್ತು ವೈಚಾರಿಕ ನೆಲೆಗಟ್ಟಿನ ಚರ್ಚೆಗಳು ಇಲ್ಲಿ ಗೋಚರಿಸಿದವು. ಸಾರಾರವರು ಕರಾವಳಿಯ ಮುಸ್ಲಿಂ ಸಂವೇದನೆಯ ವಿಭಿನ್ನತೆಯನ್ನು ನಿರೂಪಿಸಿದರೆ, ಒಳಕಿಂಡಿಗಳಿಂದಲೇ ಹೊರಜಗತ್ತನ್ನು ನೋಡಿದ ವೈದೇಹಿಯಂತಹ ಹಿರಿಯ ಲೇಖಕಿಯರೂ

ಪ್ರಾದೇಶಿಕತೆಯೊಂದಿಗೆ ಸ್ತ್ರೀಯರ ಭಾವದ ಅಖಂಡತೆಯನ್ನು ನಿರೂಪಿಸಲು ಸಾಧ್ಯವಾಯಿತು. ಪುರುಷಾಧಿಪತ್ಯದ ಜಗತ್ತಿನೊಳಗೆ ಹೆಣ್ಣೊಬ್ಬಳ ಪ್ರತಿನಿಧೀಕರಣದ ಅನಿವಾರ್ಯತೆ ಮತ್ತು ಅವಶ್ಯಕತೆ ಬಹಳ ಮುಖ್ಯವೆನಿಸಿತು. ಅದು ಕೇವಲ ಹೊರನೋಟದ ಅಸಮಾನತೆಯಾಗಿರಲಿಲ್ಲ. ಹೆಣ್ಣೆಂಬ ಪ್ರಜ್ಞೆಯ ಆಳದಲ್ಲಿ ಹುಟ್ಟುವ ಈ ಲಿಂಗಪ್ರಜ್ಞೆ ದೂಷಣೆಯಾಗಿರದೆ ತನ್ನೊಳಗಿನ ಅರಿವೇ ಆಗಿತ್ತು. ಈ ಪ್ರಬಂಧದ ವ್ಯಾಪ್ತಿಯು ಈ ಕೆಳಗಿನ ಅಂಶಗಳನ್ನು ಕೇಂದ್ರಿಕರಿಸುತ್ತದೆ.

❖ ಧಾರ್ಮಿಕ ಪ್ರಜ್ಞೆಯ ಜಾಗೃತಿ ಮತ್ತು ವಿಶ್ಲೇಷಣೆ ಎಲ್ಲ ಧರ್ಮಗಳಿಗೂ ಅನ್ವಯಿಸಿ ವಿಧಿಸುವ ವಿಧಿನಿಷೇಧಗಳು, ಕಟ್ಟುಪಾಡುಗಳು, ಆಚರಣೆಗಳು ಇವೆಲ್ಲವುಗಳ ವಿಶ್ಲೇಷಣೆಗೆ ಮಹಿಳಾ ದೃಷ್ಟಿಕೋನದಿಂದ ಒಳಪಡಿಸಿ ಅರ್ಥೈಸಿದ್ದು.

❖ ಬಾಲ್ಯ, ಕೌಮರ್ಯ, ಯೌವ್ವನ, ಮುಪ್ಪು – ಇವು ದೇಹಸ್ಥಿತಿಗಳಾದರೆ, ಬಾಲ್ಯವಿವಾಹ, ವಿಧವಾ ವಿವಾಹ, ತಾಯ್ತನ, ಗೃಹಿಣಿ, ಬಂಜೆತನ, ವೃದ್ಧಾಪ್ಯದ ಒಂಟಿತನಗಳಲ್ಲೆಲ್ಲ ಹೆಣ್ಣಿಗೆ ತನ್ನ ದೇಹವೇ ಶತ್ರುವಾಗಿ ಕಾಡದೆ ಅದರ ಬೇಕು - ಬೇಡಗಳು ಮುಖ್ಯ ಎಂಬ ಪ್ರಜ್ಞೆ ಜಾಗೃತವಾದುದು, ಎಲ್ಲ ಸ್ಥಿತಿಗಳ ಉದಾತ್ತ ವೈಭವೀಕರಣಕ್ಕಿಂತ ಅದನ್ನು ಅರ್ಥೈಸುವ, ವಿಶ್ಲೇಷಿಸುವ ನೆಲೆ ಮುಖ್ಯವೆನಿಸಿತು.

❖ ಮನೆ - ಸಂಸಾರ – ಅಡುಗೆ ಮನೆಗಳ ಗೃಹಿಣೀ ಧರ್ಮದ ಆಚೆಗೂ ವ್ಯಾವಹಾರಿಕ ಜಗತ್ತಿನ ಅರಿವು, ವಿಶ್ಲೇಷಣೆಗಳು ಮುಖ್ಯವಾಗಿ ಹುಟ್ಟಿಕೊಂಡು, ಪ್ರಶ್ನಿಸುವ ಮನೋಧರ್ಮ ಮುಖ್ಯವಾಯಿತು. ಹೇಳಿದ್ದೆಲ್ಲವನ್ನು ಒಪ್ಪಿಕೊಳ್ಳುವ, ಪ್ರತಿಭಟನೆಯ ದನಿಯೇ ಇಲ್ಲದಿದ್ದ ಹೆಣ್ಣಿಗೆ ತನ್ನತನದ ಅರಿವು ಹುಟ್ಟಿದ್ದೇ ಇಂತಹ ಬರಹಗಳಿಂದ. ಪ್ರಜ್ಞಾ ಜಾಗೃತಿಯ ಅರಿವು ಮತ್ತು ಎಚ್ಚರಗಳು ಸಮಷ್ಠಿಗೆ ಜಾರಿ ಹೋಗದ ಹಾಗೆ ಹುಟ್ಟಿಕೊಂಡ ಹಿರಿಮೆ ಈ ಸಾಹಿತ್ಯದ್ದು.

❖ ಪ್ರಧಾನವಾಹಿನಿಯ ಒಳಗೆ ತಮ್ಮ ಅಸ್ತಿತ್ವದ ಹುಡುಕಾಟವನ್ನು ಅನ್ವೇಷಿಸಿದ್ದು ಮತ್ತು ಆ ಮೂಲಕ ಅದನ್ನು ರೂಢಿಸಿಕೊಂಡದ್ದು, ಆದರ್ಶಗಳ ಅಂತರಾಳದಲ್ಲಿ ಆಶಯಗಳು ಬದಲಾಗುತ್ತ ಹೋದದ್ದು.

❖ ಯುಗಧರ್ಮವೊಂದನ್ನು ಸೃಷ್ಟಿಸಲು ಸಾಧ್ಯವಾದದ್ದು ಮಹಿಳಾಪರವಾದ ನಿಲುವುಗಳನ್ನು ಸಮಾನತೆಯ, ಸಾಮಾಜಿಕ ನ್ಯಾಯವನ್ನು ಬದ್ಧತೆಯಾಗಿ ಪಡೆಯಲು, ಅದರೊಂದಿಗೆ ಹೆಣ್ತನದ ಪರಿಕಲ್ಪನೆಗೆ ಅರ್ಥ ವಿಸ್ತಾರವನ್ನು ಪಡೆದುಕೊಂಡದ್ದು.

❖ ಹೆಣ್ಣಿನ ಬದುಕಿನ ಗತಿ – ಚಲನೆ, ಹಾವ - ಭಾವಗಳು, ನಡೆ - ನುಡಿಗಳು ಗಂಡಿನ ದೃಷ್ಟಿಕೋನದ ಸಂಕುಚಿತತೆಯನ್ನು ಹಿಗ್ಗಿಸಿ ವಿಸ್ತರಿಸಿದ್ದು, ಸಾಮಾಜಿಕ ಅಸಮಾನತೆಯ ಹಾಸುಗಲ್ಲನ್ನು ಇಲ್ಲವಾಗಿಸುವ ಯತ್ನದಲ್ಲಿ ಗಂಡುಹೆಣ್ಣಿನ ಮನುಷ್ಯ ಬಂಧದ ಅನುಬಂಧಕ್ಕೆ ಸೇತುವೆಯಾದದ್ದು.

❖ ಜೀವಪರವಾದ ದನಿಯಾಗಿ ಮಾರ್ದನಿಸಿದ್ದೇ ವಿನಾಃ ಜೀವವಿರೋಧಿಯಾಗದೇ ಇದ್ದುದರಿಂದಲೇ ಸದಾಶಯವನ್ನು ಹೊಂದಿ ಮಾನವೀಯತೆಯೇ ಮುಖ್ಯವಾಹಿನಿಯಾಗಿ ನಿರೂಪಣೆಗೊಂಡಿರುವುದು.

ಈ ಮೇಲಿನ ಎಲ್ಲಾ ವಿಚಾರಗಳ ಕುರಿತಾಗಿ ಚರ್ಚಿಸುವುದೇ ಈ ಪ್ರಬಂಧದ ಆಶಯವಾಗಿದೆ.

೧.೫. ಅಧ್ಯಯನದ ವಿಧಾನ

೧೯೫೦ ರಿಂದ ೨೦೧೦ ರವರೆಗಿನ ಅವಧಿಯಲ್ಲಿ ಬರೆಯಲ್ಪಟ್ಟ ಐದು ಮಂದಿ ಲೇಖಕಿಯರ ಪ್ರಾತಿನಿಧಿಕ ಕಥೆಗಳನ್ನು ಅಧ್ಯಯನಕ್ಕೆ ಅಳವಡಿಸಲಾಗಿದೆ. ಆ ಲೇಖಕಿಯರೆಂದರೆ, ಗಂಗಾ ಪಾದೇಕಲ್, ಪ್ರೇಮಾಭಟ್, ಮಿತ್ರಾ ವಂಕಟ್ರಾಜ್, ವೈದೇಹಿ ಹಾಗೂ ಸಾರಾ ಅಬೂಬಕ್ಕರ್. ಸುಮಾರು ಆರುನೂರಕ್ಕೂ ಹೆಚ್ಚು ಕಥೆಗಳು ಈ ಅವಧಿಯಲ್ಲಿ ಪ್ರಕಟವಾಗಿದ್ದರೂ ಎಲ್ಲಾ ಕಥೆಗಳನ್ನು ಆಯ್ಕೆಮಾಡಿಕೊಂಡಿಲ್ಲ. ಈ ಅಧ್ಯಯನಕ್ಕೆ ಒಳಪಡುವ ಪ್ರಮುಖ ಐದು ಮಂದಿ ಲೇಖಕಿಯರು ಕರಾವಳಿಯ ಬೇರೆ ಬೇರೆ ಭೌಗೋಳಿಕ ವಲಯವನ್ನು ಪ್ರತಿನಿಧಿಸುವವರು. ಗಂಗಾ ಪಾದೇಕಲ್‌ರವರು ಪುತ್ತೂರಿನಲ್ಲಿ ಹುಟ್ಟಿ ಮಂಗಳೂರಿನಲ್ಲಿ ನೆಲೆಸಿದ್ದಾರೆ. ಪ್ರೇಮಾಭಟ್ ಉಡುಪಿಯಲ್ಲಿ ಜನಿಸಿ ಬೆಂಗಳೂರಲ್ಲಿ ನೆಲೆಸಿದ್ದಾರೆ. ಮಿತ್ರಾ ವೆಂಕಟ್ರಾಜ್ ಕುಂದಾಪುರದಲ್ಲಿ ಹುಟ್ಟಿ ಮುಂಬಯಿಯಲ್ಲಿ ನೆಲೆಸಿದ್ದಾರೆ. ವೈದೇಹಿಯವರು ಹುಟ್ಟಿದ್ದು ಕುಂದಾಪುರದಲ್ಲಿ, ನೆಲೆಯಾಗಿದ್ದು ಮಣಿಪಾಲದಲ್ಲಿ. ಸಾರಾ ಅಬೂಬಕ್ಕರ್ ಕಾಸರಗೋಡಿನವರಾಗಿದ್ದು ಪ್ರಸ್ತುತ ಮಂಗಳೂರಿನಲ್ಲಿ ನೆಲೆಸಿದ್ದಾರೆ.

ಯಾವುದೇ ಒಂದು ಸಾಹಿತ್ಯ ಕೃತಿಯ ಹಿಂದೆ ಲೇಖಕನೊಬ್ಬನು ಹುಟ್ಟಿ ಬೆಳೆದ ಪರಿಸರದ ಪ್ರಭಾವ ಇದ್ದೇ ಇರುತ್ತದೆ. ಕರಾವಳಿಯ ಲೇಖಕಿಯರ ಬರಹಗಳೂ ಇದಕ್ಕಿಂತ ಭಿನ್ನವಾಗಿಲ್ಲ. ಹಾಗಾಗಿ ಆಯಾಯ ಸಂದರ್ಭದ ಸಾಮಾಜಿಕ, ಸಾಂಸ್ಕೃತಿಕ ಪಲ್ಲಟ, ಬದಲಾವಣೆಗಳಿಗೆ ಒಳಗಾಗುತ್ತಾ ಸಮಾಜಮುಖಿ ನೆಲೆಯಲ್ಲಿ ಲೇಖಕಿಯರು ತಮ್ಮ ಕಥೆಗಳಲ್ಲಿ ಈ ಎಲ್ಲಾ ವಿಚಾರಗಳನ್ನು ಹೇಗೆ ಕಟ್ಟಿಕೊಂಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದೇ ಈ ಅಧ್ಯಯನದ ಉದ್ದೇಶ.

ಸಂಶೋಧನಾ ಅಧ್ಯಯನದ ಉದ್ದೇಶಗಳಿಗೆ ಪೂರಕವಾಗಿ ಅಧ್ಯಯನ ವಿಧಾನವನ್ನು ಕಂಡುಕೊಳ್ಳಲಾಗಿದೆ.

೧. ಆಯ್ದ ಲೇಖಕಿಯರ ಕಥೆಗಳ ವಸ್ತುನಿಷ್ಠ ಅಧ್ಯಯನ.

೨. ಅಧ್ಯಯನಕ್ಕೆ ಆಯ್ದುಕೊಂಡಿರುವ ಕಥೆಗಾರ್ತಿಯರ ಅಥವಾ ಕಥೆಗಳ ಕುರಿತಾಗಿ ಈಗಾಗಲೇ ಬಂದಿರುವ ವಿಮರ್ಶೆಗಳ ಅಧ್ಯಯನ.

೩. ಸಂದರ್ಶನದ ಮೂಲಕ ಲೇಖಕಿಯರಿಂದ ಮಾಹಿತಿ ಸಂಗ್ರಹ.

೪. ಆನುಷಂಗಿಕವಾಗಿ ಬೇರೆ ಬೇರೆ ಲೇಖಕರ ಹಾಗೂ ಲೇಖಕಿಯರ ಲೇಖನಗಳ ಅಧ್ಯಯನ.

ಕರಾವಳಿಯ ಲೇಖಕಿಯರನ್ನೇ ಕೇಂದ್ರವಾಗಿಟ್ಟುಕೊಂಡು ಇದುವರೆಗೂ ಬಂದ ಸಂಶೋಧನಾ ಪ್ರಬಂಧಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

೧.೫. ಕರಾವಳಿ ಕಥೆಗಳ ಕುರಿತು ಈ ವರೆಗಿನ ಅಧ್ಯಯನದ ಸಮೀಕ್ಷೆ

ಕರಾವಳಿ ಕಥಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳು, ಲೇಖನ ರೂಪದ ಬರಹಗಳು ಬಂದಿವೆ. ದ. ಕ. ಜಿಲ್ಲೆಯ ಸಣ್ಣಕಥೆಗಳನ್ನು ಕೇಂದ್ರೀಕರಿಸಿಕೊಂಡು ಡಾ. ಸಬೀಹಾ ಭೂಮಿಗೌಡರು 'ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣಕಥೆಗಳ ಹುಟ್ಟು ಮತ್ತು ಬೆಳವಣಿಗೆ' (ಮಂಗಳೂರು ವಿಶ್ವವಿದ್ಯಾನಿಲಯ, ೧೯೯೨) ಎಂಬ ಸಂಶೋಧನಾ ಪ್ರಬಂಧವನ್ನು ರಚಿಸಿದ್ದಾರೆ. ಎಂ. ಮನೋರಮಾ ಭಟ್‌ರವರು 'ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು' ಎಂಬ ಪುಸ್ತಕ ಸಂಪಾದಿಸಿದ್ದಾರೆ (೧೯೯೭).

೧೯೯೯ರಲ್ಲಿ ಪ್ರಕಟವಾದ ಲೇಖ - ಲೋಕ ೨ ರಲ್ಲಿ (ಕರ್ನಾಟಕ ಲೇಖಕಿಯರ ಸಂಘ, (ರಿ) ಬೆಂಗಳೂರು) ಕರಾವಳಿಯ ಕಥೆಗಾರ್ತಿಯರಾದ ಪ್ರೇಮಾಭಟ್ ಹಾಗೂ ವೈದೇಹಿಯವರ ಜೀವನ - ಸಾಧನೆಗಳ ಕುರಿತಾದ ಮಾಹಿತಿಗಳಿವೆ. ೧೯೯೯ರಲ್ಲಿ ಡಾ. ಗಾಯತ್ರೀ ನಾವಡರವರ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀ ವಾದಿ ನೆಲೆಗಳು' ಎಂಬ ಸಂಶೋಧನಾ ಕೃತಿ ಪ್ರಕಟವಾಗಿದೆ. 'ಪ್ರೇಮಾಭಟ್ ಸಾಹಿತ್ಯದ ನೆಲೆಗಳು' ಎಂಬ ಪುಸ್ತಕವನ್ನು ಡಾ. ಶಶಿಕಲಾ ಡಿ. ಎಸ್. ಪ್ರಕಟಿಸಿರುತ್ತಾರೆ (೨೦೦೨). ಬಿ. ಜನಾರ್ಧನ ಭಟ್‌ರವರು 'ದಕ್ಷಿಣ ಕನ್ನಡದ ಶತಮಾನದ ಕಥೆಗಳು' ಎಂಬ ಪುಸ್ತಕವನ್ನು ೨೦೦೩ರಲ್ಲಿ ಸಂಪಾದಿಸಿದ್ದಾರೆ. ಗಂಗಾ ಪಾದೇಕಲ್‌ರವರ ಕಥೆಗಳ ಕುರಿತಾದ ಅಧ್ಯಯನಕ್ಕೆ ಶೀಲಾ ಅವರು ಎಂ. ಫಿಲ್. ಪದವಿಯನ್ನು ಪಡೆದಿರುತ್ತಾರೆ. ೨೦೦೩ರಲ್ಲಿ ಕಣ್ಣೂರು ವಿ.ವಿ. ಯಿಂದ ಈ ಪದವಿ ಅವರಿಗೆ ದೊರಕಿದೆ.

೨೦೦೩ ರಲ್ಲಿ ಪ್ರಕಟವಾದ 'ಲೇಕ - ಲೋಕ' ೪ರಲ್ಲಿ (ಕರ್ನಾಟಕ ಲೇಖಕಿಯರ ಸಂಘ, (ರಿ) ಬೆಂಗಳೂರು) ಕರಾವಳಿಯ ಕಥೆಗಾರ್ತಿ ಗಂಗಾ ಪಾದೇಕಲ್‌ರವರ ಜೀವನ - ಸಾಧನೆಗಳ ಕುರಿತಾದ ಮಾಹಿತಿಗಳಿವೆ. 'ವೈದೇಹಿಯವರ ಸಾಹಿತ್ಯ – ಒಂದು ಅಧ್ಯಯನ' ಎಂಬ ವಿಷಯದಲ್ಲಿ ಡಾ. ಸುರೇಖಾ ಕೆ. ಪ್ರೌಢ ಪ್ರಬಂಧವನ್ನು ರಚಿಸಿರುತ್ತಾರೆ (ಮೈಸೂರು ವಿಶ್ವ ವಿದ್ಯಾನಿಲಯ, ೨೦೦೩). ಡಾ. ನಿಕೇತನರವರ 'ಸ್ತ್ರೀ ದೃಷ್ಟಿ' (೨೦೦೫) ಕೃತಿಯಲ್ಲಿ ಕರಾವಳಿ ಸಾಹಿತ್ಯದ ಉಲ್ಲೇಖವಿದೆ. ಡಾ. ಎಚ್. ಎಸ್. ಶ್ರೀಮತಿಯವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' (೨೦೦೬) ಯಲ್ಲಿ ಕರಾವಳಿಯ ಲೇಖಕಿಯರ ಬರಹಗಳ ಕುರಿತಾದ ವಿಶ್ಲೇಷಣೆಗಳು ಸಿಗುತ್ತವೆ.

೨೦೦೬ರಲ್ಲಿ ಡಾ. ಕೆ. ಚಿನ್ನಪ್ಪ ಗೌಡ ಹಾಗೂ ಡಾ. ಸಬೀಹಾರವರ ಸಂಪಾದಕತ್ವದಲ್ಲಿ 'ಕರಾವಳಿಯ ಕತೆಗಳು' ಎಂಬ ಪುಸ್ತಕ ಪ್ರಕಟವಾಗಿದ್ದು (ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿ. ವಿ. ಪ್ರಕಟಣೆ) ೧೯೩೦ ರಿಂದ ೧೯೪೮ರ ಅವಧಿಯ ಪತ್ರಿಕೆಗಳಿಂದ ಆಯ್ದ ಕಥೆಗಳು ಇದರಲ್ಲಿವೆ. ೨೦೦೮ರಲ್ಲಿ ಬಿ. ಜನಾರ್ಧನ ಭಟ್ ಸಂಪಾದಿಸಿರುವ 'ಉಡುಪಿ ಜಿಲ್ಲೆಯ ಶತಮಾನದ ಕಥೆಗಳು' ಎಂಬ ಪುಸ್ತಕದಲ್ಲಿ ಉಡುಪಿ ಜಿಲ್ಲೆಗೆ ಸೇರಿದ ಲೇಖಕಿಯರ ಕಥೆಗಳಿವೆ.

೨೦೦೮ರಲ್ಲಿ ಉಡುಪಿಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕರಾವಳಿ ಲೇಖಕಿಯರ ಬಗೆಗಿನ ಕೃತಿಗಳು ಬಿಡುಗಡೆಗೊಂಡಿವೆ. ಸುಶೀಲಾ ಆರ್. ರಾವ್‌ರವರ 'ಆನಂದಿ ಸದಾಶಿವ ರಾವ್ ಬದುಕು - ಬರಹ' ಎಂಬ ಕೃತಿ, ಶ್ರೀಮತಿ ಸಾವಿತ್ರಿ ಮನೋಹರ್‌ರವರ 'ಇಂದಿರಾ ಹಾಲಂಬಿ ಬದುಕು - ಬರಹ' ಎಂಬ ಕೃತಿ, ಶಾಲಿನಿ ಬಿ. ಪಂಡಿತ್‌ರವರ 'ಸುಮತಿ ಪಾಂಗಾಳ ಬದುಕು - ಬರಹ' ಎಂಬ ಕೃತಿ, ಅ. ನಾ. ಪೂರ್ಣಿಮಾರವರ 'ಮನೋರಮಾ ಎಂ. ಭಟ್ ಬದುಕು - ಬರಹ' ಎಂಬ ಕೃತಿ , ಬಿ. ಎಂ. ರೋಹಿಣಿಯವರ 'ಲಲಿತಾ ಆರ್. ರೈ ಬದುಕು - ಬರಹ' ಎಂಬ ಕೃತಿ, ನಾಗವೇಣಿ ಮಂಚಿಯವರ 'ಬೆಳ್ಳೆ ಸೀತಾರತ್ನ ಬದುಕು - ಬರಹ' ಎಂಬ ಕೃತಿ, ಗಂಗಾ ಪಾದೇಕಲ್‌ರವರ 'ಮುಳಿಯ ಮೂಕಾಂಬಿಕೆ ಬದುಕು - ಬರಹ' ಎಂಬ ಕೃತಿ - ಹೀಗೆ ಕೃತಿಗಳು ಪ್ರಕಟವಾಗಿದ್ದು ಇವುಗಳಲ್ಲಿ ಆಯಾ ಲೇಖಕಿಯ ಬದುಕು - ಬರಹಕ್ಕೆ ಸಂಬಂಧಿಸಿದ ಮಾಹಿತಿಗಳಿವೆ.

ಶೇಖರ ಅಜೆಕಾರ್‌ರವರು ಕರಾವಳಿಯ ತುಳು ಲೇಖಕಿ ಜಯಂತಿ ಎಸ್. ಬಂಗೇರರವರ ಕುರಿತ 'ಸಾಹಿತ್ಯ ಸಿರಿ' (೨೦೦೮) ಎಂಬ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಉಷಾ ಕಟ್ಟೇಮನೆ ಹಾಗೂ ಡಾ. ಪುರುಷೋತ್ತಮ ಬಿಳಿಮಲೆಯವರ ಸಂಪಾದಕತ್ವದಲ್ಲಿ 'ಕಡಲತಡಿಯ ತಲ್ಲಣಗಳು' (೨೦೦೯) ಎಂಬ ಕೃತಿ ಬಂದಿದೆ. ಇದರಲ್ಲಿ ಕರಾವಳಿ ಲೇಖಕ, ಲೇಖಕಿಯರ ಉಲ್ಲೇಖಗಳಿವೆ. ೨೦೦೯ರಲ್ಲಿ ಸಾರಾ ಅಬೂಬಕ್ಕರ್‌ರವರ ಅಭಿನಂದನಾ ಗ್ರಂಥ 'ಚಂದ್ರಗಿರಿ' ,

ಡಾ. ಸಬೀಹಾರವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ಈ ಅಭಿನಂದನಾ ಗ್ರಂಥದಲ್ಲಿ ಸಾರಾರವರ ಸಮಗ್ರ ಸಾಹಿತ್ಯದ ಅವಲೋಕನವಿದೆ.

ಟಿ. ಪಿ. ಅಶೋಕ್‌ರವರು 'ವೈದೇಹಿ ವಾಚಿಕೆ' (೨೦೦೯) ಎಂಬ ಕೃತಿಯನ್ನು ಪ್ರಕಟಿಸಿದ್ದು, ಇದರಲ್ಲಿ ವೈದೇಹಿಯವರ ಸಾಹಿತ್ಯ ಹಾಗೂ ಸಂದರ್ಶನದ ಆಯ್ದ ಭಾಗಗಳಿವೆ. ಡಾ. ಶೈಲಾ ಯು. ರವರು 'ಮಹಿಳೆ ನೆಲೆ - ಬೆಲೆ' (೨೦೧೦) ಎಂಬ ಪುಸ್ತಕದಲ್ಲಿ ಸಾರಾ ಅಬೂಬಕ್ಕರ್ , ಎ. ಪಿ. ಮಾಲತಿ ಹಾಗೂ ಡಾ. ಸಬೀಹಾ ಭೂಮಿಗೌಡರ ಬದುಕು ಮತ್ತು ಸಾಹಿತ್ಯ ಸಾಧನೆಗಳ ಕುರಿತಾಗಿ ವಿವರಿಸಿದ್ದಾರೆ.

೧.೬. ಅಧ್ಯಾಯಗಳ ವಿಂಗಡಣೆ

ಐದು ಅಧ್ಯಾಯಗಳಲ್ಲಿ ಅನಾವರಣಗೊಳ್ಳುವ ಈ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧದ ರೂಪುರೇಷೆಗಳು ಹೀಗಿವೆ. ಅಡಿಟಿಪ್ಪಣಿಯನ್ನು ಪ್ರತಿ ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಅಧ್ಯಾಯ ೧ : ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಕರಾವಳಿ ಲೇಖಕಿಯರ ಕಥೆಗಳ ಕುರಿತಾದ ವಿಸ್ತೃತ ಚರ್ಚೆ, ವಿಮರ್ಶೆಗಳು ಸಾಹಿತ್ಯವಲಯದಲ್ಲಿ ದೊರೆಯುತ್ತಿದ್ದರೂ, ಸ್ತ್ರೀವಾದಿ ಸೂಕ್ಷ್ಮ ದೃಷ್ಟಿಕೋನದಿಂದ ನೋಡುವ ಪ್ರಯತ್ನ ಕಡಿಮೆಯೆಂದೇ ಹೇಳಬಹುದು. ಈ ಅಧ್ಯಯನದ ಮೊದಲ ಅಧ್ಯಾಯದಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳ ಚರ್ಚೆ, ಅಧ್ಯಯನದ ಉದ್ದೇಶ, ಅದರ ಕ್ಷೇತ್ರ ವ್ಯಾಪ್ತಿ, ಅಧ್ಯಯನಕ್ಕಾಗಿ ಬಳಸಿಕೊಂಡ ಸಾಹಿತ್ಯಕ ಸಾಮಗ್ರಿ - ಸಾಧನಗಳನ್ನೂ, ವಿಧಾನಗಳನ್ನೂ ಚರ್ಚಿಸಲಾಗಿದೆ.

ಅಧ್ಯಾಯ ೨: ಸ್ತ್ರೀವಾದಿ ಚಳುವಳಿ

ಈ ಅಧ್ಯಯನದಲ್ಲಿ ಜಾಗತಿಕ ಮಟ್ಟದಲ್ಲಿ ನಡೆದ ಸ್ತ್ರೀವಾದಿ ಚಳುವಳಿಯ ಸ್ವರೂಪ ಮತ್ತು ಬೆಳವಣಿಗೆಯನ್ನು ಚರ್ಚಿಸಲಾಗಿದೆ. ಸ್ತ್ರೀವಾದಿ ಸಾಹಿತ್ಯ ಚಳುವಳಿಯ ಮೂಲಾ ಆಶಯಗಳನ್ನೂ, ಇತ್ತೀಚಿನ ಸ್ತ್ರೀವಾದವು ಸಾಹಿತ್ಯ ವಿಮರ್ಶೆಯಲ್ಲಿ ಬಳಸುವ ಡೆರಿಡಾಳ ನಿರಚನವಾದಿ (ಆಜಿಛಿಣಡಿಣಛಿಣಐಡಿ) ಸಿದ್ಧಾಂತವನ್ನು ಕುರಿತು ಸ್ಥೂಲವಾಗಿ ವಿವೇಚಿಸಲಾಗಿದೆ. ಹತ್ತು ಉಪಶೀರ್ಷಿಕೆಗಳಲ್ಲಿ ಇದನ್ನು ವಿಭಜಿಸಿಕೊಳ್ಳಲಾಗಿದೆ. ಅವುಗಳೆಂದರೆ,

೨.೧. ಸ್ತ್ರೀವಾದದ ಹುಟ್ಟು ಮತ್ತು ಬೆಳವಣಿಗೆ

೨.೨. ಫ್ರೆಂಚ್ ಮಹಾಕ್ರಾಂತಿ ಮತ್ತು ಸ್ತ್ರೀವಾದಿ ಚಿಂತನೆ

೨.೩. ಸ್ತ್ರೀವಾದ –ಅರ್ಥ ಮತ್ತು ಪರಿಕಲ್ಪನೆ

೨.೪. ಸ್ತ್ರೀವಾದಿ ಚಳವಳಿಯ ಸ್ವರೂಪ

೨.೫. ಭಾರತದಲ್ಲಿ ಮಹಿಳಾ ಚಳುವಳಿ : ಒಂದು ಐತಿಹಾಸಿಕ ಸಮೀಕ್ಷೆ

೨.೬. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆ

೨.೭. ಸ್ತ್ರೀವಾದಿ ವಿಮರ್ಶೆ

೨.೮.ಸ್ತ್ರೀವಾದಿ ನಿರಚನ ಸಿದ್ಧಾಂತ (ಡಿಕಂಸ್ಟ್ರಕ್ಷನ್ ಥಿಯರಿ)

ಅಧ್ಯಾಯ ೩. ಕನ್ನಡದಲ್ಲಿ ಕಥಾ ಸಾಹಿತ್ಯ

ಕನ್ನಡ ಸಾಹಿತ್ಯದಲ್ಲಿ ಕಥಾ ಪ್ರಕಾರ ಹುಟ್ಟಿಕೊಳ್ಳುವುದಕ್ಕೆ ಕಾರಣವಾದ ಸಾಂಸ್ಕೃತಿಕ ಮುಖಾಮುಖಿಯಲ್ಲಿ ಸ್ತ್ರೀ ಸುಧಾರಣಾಪರ ದೃಷ್ಟಿಕೋನದ ಆಶಯಗಳು ಪ್ರಧಾನವಾಗಿದ್ದವು ಎನ್ನುವುದನ್ನು ವಿವೇಚಿಸುವುದು, ಈ ಅಧ್ಯಾಯದ ಉದ್ದೇಶವಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಈ ಅಧ್ಯಾಯವನ್ನು ಕೆಳಗಿನಂತೆ ವಿಭಾಗಿಸಿಕೊಳ್ಳಲಾಗಿದೆ.

೩.೧ ಕಥೆ - ಒಂದು ವಿವೇಚನೆ

೩.೨. ಕನ್ನಡದಲ್ಲಿ ಕಥಾ ಸಾಹಿತ್ಯದ ಬೆಳೆದು ಬಂದ ಬಗೆ

೩.೩. ಮಹಿಳಾ ಕಥಾ ಸಾಹಿತ್ಯ ಬೆಳೆದು ಬಂದ ಬಗೆ

ಅಧ್ಯಾಯ ೪. ಕರಾವಳಿಯ ಮಹಿಳಾ ಸಾಹಿತ್ಯ

ಭೌಗೋಳಿಕವಾಗಿ ಕರಾವಳಿಯ ವ್ಯಾಪ್ತಿ ವಿಸ್ತಾರವಾದದ್ದು. ಇಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕೇರಳಕ್ಕೆ ಸೇರಿಹೋಗಿರುವ ಗಡಿನಾಡಾದ ಕಾಸರಗೋಡನ್ನು ಗಮನದಲ್ಲಿ ಇಟ್ಟುಕೊಂಡು ಕರಾವಳಿ ಲೇಖಕಿಯರನ್ನು ಅಧ್ಯಯನ ಮಾಡಲಾಗಿದೆ. ಸಂಶೋಧನಾ ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡ ಲೇಖಕಿಯರ ಬಗೆಗೆ ನೇರ ಸಂದರ್ಶನದ ಮೂಲಕ ಹಾಗೂ ಬೇರೆ ಬೇರೆ ಕೃತಿಗಳಲ್ಲಿ ದೊರೆತ ಮಾಹಿತಿಗಳಿಂದ ವಿಷಯ ಸಂಗ್ರಹ ಮಾಡಿಕೊಂಡು ಅವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕ ಅಂಶಗಳಾವುದು ಎಂಬುದನ್ನು ವಿವರಿಸಲಾಗಿದೆ. ಈ ಅಧ್ಯಾಯವನ್ನು ಈ ಕೆಳಗಿನಂತೆ ವಿಭಾಗಿಸಿಕೊಳ್ಳಲಾಗಿದೆ.

೪.೧ ತುಳು ಲೇಖಕಿಯರು

೪.೨. ಸ್ತ್ರೀ ಸಂಸ್ಕೃತಿ- ಅರ್ಥ ಮತ್ತು ಪರಿಕಲ್ಪನೆ

ಅಧ್ಯಾಯ ೫. ಸ್ತ್ರೀತ್ವದ ನೆಲೆ

ಗಂಡು-ಹೆಣ್ಣಿನ ನಡುವಿನ ಜೈವಿಕ ವ್ಯತ್ಯಾಸವೇ ಸಮಾಜದ ಆಲೋಚನೆಯ ದಾರಿಯನ್ನು ನಿರ್ಧರಿಸಿದ್ದು. ಪರಂಪರಾಗತವಾಗಿ ಹೆಣ್ಣು ಗಂಡಿನ ಅಧೀನಳಾಗಿ ಗುರುತಿಸಿಕೊಂಡು ಬಂದಿದ್ದು ಅವನ ರೀತಿ, ನೀತಿಗಳಿಗೆ ಆಚಾರ, ಆಲೋಚನೆಗಳಿಗೆ ಬದ್ಧಳಾಗಿ ಬದುಕಬೇಕಾದ ಸ್ಥಿತಿ ನಿರ್ಮಾಣವಾಯಿತು. ಬುದ್ಧಿ - ಭಾವಗಳು ಕೇವಲ ಗಂಡಿಗೆ ಮಾತ್ರ ಸಂಬಂಧಿಸಿದ್ದಾಗಿ ಹೆಣ್ಣು ಕೇವಲ ಭೋಗ ವಸ್ತುವಾಗಿಯಷ್ಟೇ ಉಳಿದುಬಿಟ್ಟಳು. ಪುರಾಣ ಕಾವ್ಯಗಳಲ್ಲಿ ಇದ್ದ ಹೆಣ್ಣಿನ ಸ್ವಾತಂತ್ರ್ಯ ಶಾಸ್ತ್ರಕಾರರ ಕಾಲಕ್ಕೆ ನಿರ್ಬಂಧಿಸಲ್ಪಟ್ಟಿತು. ಹೆಣ್ಣು 'ಅಬಲೆ' ಎನ್ನುವ ಹಣೆಪಟ್ಟಿಯನ್ನು ಹಾಕಿ ಇತರರ ಆಶ್ರಯದಲ್ಲಿ ರಕ್ಷಿಸಲ್ಪಡುವವಳಾದಳು.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಬೆಳೆದು ಬಂದ ಹೆಣ್ಣು ಮಕ್ಕಳು ಆ ವ್ಯವಸ್ಥೆಯನ್ನು ಒಪ್ಪಿಕೊಂಡರೇ ವಿನಾಃ ಅದರ ವಿರುದ್ಧ ಚಿಂತಿಸುವುದಕ್ಕೆ ಸಾಧ್ಯವಾಗಲಿಲ್ಲ. ಹಾಗಾಗಿ ಅವರ ಬದುಕು ಆ ವ್ಯವಸ್ಥೆಗೆ ಹೊಂದಿಕೊಂಡು ಹೋಯಿತೇ ವಿನಾಃ ಅದರಾಚೆಗೆ ಇಣುಕುವುದಕ್ಕೆ ಮನಸ್ಸು ಮಾಡಲಿಲ್ಲ. ಸಮಾಜದ ವ್ಯವಸ್ಥೆಯೇ ಹೀಗೆ ಎಂದು ತಿಳಿದ ಅವರು ಅಲ್ಲಿನ ಲೋಪ – ದೋಷಗಳನ್ನು ಅಸಮಾನತೆಯನ್ನು ಸಹಜವೆಂಬಂತೆ ಸ್ವೀಕರಿಸಿ ಬದುಕು ನಡೆಸಿದರು.

ಅಕ್ಷರ ಜಗತ್ತಿಗೆ ತಮ್ಮನ್ನು ತೆರೆದುಕೊಂಡ ನಂತರ ತಮ್ಮ ಸಾಹಿತ್ಯಾಭಿವ್ಯಕ್ತಿಯಲ್ಲಿಯೂ ಮೇಲಿನ ಆಲೋಚನೆಗಳನ್ನೇ ಪಡಿಮೂಡಿಸಿದರು. ಮನು ಹೇಳಿರುವ

ಕಾರ್ಯೇಷು ದಾಸಿ
ಕರಣೇಷು ಮಂತ್ರಿ
ಭೋಜ್ಯೇಷು ಮಾತಾ
ಶಯನೇಷು ರಂಭಾ ......

ಇತ್ಯಾದಿ ಹೇಳಿಕೆಗಳಿಗೆ ಪೂರಕವಾಗಿ ಸಾಹಿತ್ಯವನ್ನು ಕಟ್ಟಿಕೊಟ್ಟರು. ಹಾಗಾಗಿ ಹೆಣ್ಣಿನ ವೈಯುಕ್ತಿಕ, ಕೌಟುಂಬಿಕ, ಧಾರ್ಮಿಕ ನೆಲೆಯಲ್ಲಿ ಬರುವ ಎಲ್ಲಾ ರೀತಿಯ ಸಮಸ್ಯೆಗಳ ವೈಭವೀಕರಣ ಆರಂಭದ ಮಹಿಳಾ ಸಾಹಿತ್ಯದಲ್ಲಿ ನಡೆಯಿತೇ ವಿನಾಃ ಆ ಸಮಸ್ಯೆಗಳ ಪರಿಹಾರ ಅವರಿಗೆ ಮುಖ್ಯವೆನಿಸಲಿಲ್ಲ.

ಕರಾವಳಿಯ ಲೇಖಕಿಯರೂ ಇದರಿಂದ ಹೊರತಾಗಲಿಲ್ಲ. ಹಾಗಾಗಿ ಸ್ವಾತಂತ್ರೋತ್ತರ ಕಾಲ ಘಟ್ಟದ ನಮ್ಮ ಲೇಖಕಿಯರಲ್ಲಿ ಈ ನೆಲೆಯನ್ನು ಪ್ರತಿನಿಧಿಸುವ ಎಷ್ಟೋ ಮಂದಿ ಸಿಗುತ್ತಾರೆ. ಸಾಹಿತ್ಯದ ಯಾವ ಪ್ರಕಾರದಲ್ಲೇ ಅವರು ಕೃಷಿ ಮಾಡಿರಲಿ, ಅವರ ನಿಲುವುಗಳು ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪುವಂತದ್ದೇ ಆಗಿವೆ.

ಅಧ್ಯಾಯ ೬. ಸ್ತ್ರೀವಾದಿತ್ವದ ನೆಲೆ

ಗೃಹಿಣಿತ್ವ, ಕುಟುಂಬ ಇಷ್ಟಕ್ಕೆ ಸೀಮಿತವಾಗಿದ್ದ ಹೆಣ್ಣು ಸೃಜನಶೀಲ ಬರವಣಿಗೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಾಗಲೂ ಆಕೆಯದ್ದು 'ಅಡುಗೆ ಮನೆ ಸಾಹಿತ್ಯ' ಎಂಬ ತಿರಸ್ಕಾರಕ್ಕೆ ಗುರಿಯಾದದ್ದೂ ಇದೆ. ಯಾವಾಗ ಹೆಣ್ಣು ಮನೆಯ ಹೊಸ್ತಿಲಿಂದಾಚೆ ನೋಡುವುದಕ್ಕೆ ಆರಂಭಿಸಿದಳೋ ಆಗ ಅವಳಿಗೆ ಸಮಾಜದ ಸ್ಥಿತಿ ಅರ್ಥವಾಗುತ್ತಾ ಬಂತು. ತಾನು ಬಂಧಿಸಲ್ಪಟ್ಟ ಶೃಂಖಲೆಯಿಂದ ಹೊರಬರಬೇಕಾದ ಅನಿವಾರ್ಯತೆಯನ್ನೂ ಕಂಡುಕೊಂಡಳು. ಆದರೆ ಅದು ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ.

ಸಾಮಾಜಿಕ ವ್ಯವಸ್ಥೆಯೊಂದಿಗಿನ ಮುಖಾಮುಖಿಯಲ್ಲಿ ತನ್ನನ್ನು ಅರ್ಥೈಸಿಕೊಳ್ಳುವ, ತಿದ್ದಿಕೊಳ್ಳುವ ಕಡೆಗೆ ಅವಳ ಆಲೋಚನೆ ಹರಿಯಿತು. ಸಮಾಜದಲ್ಲಿ ನೆರೆಯೂರಿದ್ದ ಲಿಂಗತಾರತಮ್ಯದ ವಿವಿಧ ಮುಖಗಳ ಕಡೆಗೆ ಗಮನಹರಿಸಿದ ಆಕೆ ಇದನ್ನು ಗುರುತಿಸುವ ಪ್ರಶ್ನಿಸುವ, ಹಾಗೂ ವಿರೋಧಿಸುವ ನೆಲೆಯಲ್ಲಿ ಸಾಹಿತ್ಯ ರಚನೆಗೆ ತೊಡಗಿದಳು. ಈ ಪ್ರತಿಭಟನೆ ಕೇವಲ ಅಕ್ಷರ ರೂಪದಲ್ಲಿ ಉಳಿಯಿತೇ ವಿನಾಃ ತನ್ನ ವೈಯುಕ್ತಿಕ ಬದುಕಿನಲ್ಲಿ ಸಾಧ್ಯವಾಗಲಿಲ್ಲ. ಆದರೆ ಎಷ್ಟೋ ವರ್ಷಗಳಿಂದ ಅನುಭವಿಸಿಕೊಂಡು ಬಂದ ಬದುಕಿನ ದಾರುಣತೆಯ ಕಡೆಗೆ ತಿರುಗಿ ನೋಡುವ ಪ್ರಜ್ಞೆ ಆಕೆಯಲ್ಲಿ ಹುಟ್ಟಿಕೊಂಡದ್ದು ಮಹಿಳಾ ಪ್ರಗತಿಯ ಸೂಚನೆಯನ್ನು ನೀಡುತ್ತದೆ. ತನ್ನ ಬದುಕು ಕೇವಲ ಕುಟುಂಬಕ್ಕಷ್ಟೇ ಸೀಮಿತವಾದದ್ದಲ್ಲ. ಅದಕ್ಕಿಂತಲೂ ಆಚೆ ಇದೆ ಎನ್ನುವುದನ್ನು ಮಹಿಳೆ ಅರಿತುಕೊಂಡಳು.

ಹಾಗಾಗಿ ಸುಮಾರು ೬೦ – ೭೦ರ ದಶಕದ ಮಹಿಳಾ ಸಾಹಿತ್ಯ ಕೃತಿಗಳನ್ನು ಗಮನಿಸಿದರೆ ಈ ಮೇಲಿನ ಆಲೋಚನೆಗಳಿಗೆ ಪೂರಕವಾಗಿ ಸಾಹಿತ್ಯ ರಚನೆಯಾದದ್ದನ್ನು ಗಮನಿಸಬಹುದು. ಇದರಿಂದ ಸಮಾಜ ಪರಿವರ್ತನೆ ಸಾಧ್ಯವಾಗದೇ ಹೋದರೂ ಹೀಗೊಂದು ನಿಟ್ಟಿನಲ್ಲಿ ಮಹಿಳೆ ಯೋಚಿಸುತ್ತಾಳೆನ್ನುವುದು ಅವಳ ಬದುಕಿಗೊಂದು ಅರ್ಥವಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಕರಾವಳಿ ಲೇಖಕಿಯರ ಕತೆಗಳನ್ನು ಈ ನೆಲೆಯಲ್ಲಿ ಕಾಣುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಎಲ್ಲೋ ಒಂದು ಕಡೆ ವ್ಯವಸ್ಥೆಯನ್ನು ವಿರೋಧಿಸುತ್ತಲೇ ಮತ್ತೆ ಅನಿವಾರ್ಯವಾಗಿ ಅದನ್ನು ಒಪ್ಪಿಕೊಳ್ಳಬೇಕಾದ ಸ್ಥಿತಿಯೂ ನಿರ್ಮಾಣವಾದದ್ದನ್ನು ಗಮನಿಸಬಹುದು.

ಈ ಅಧ್ಯಾಯ ಒಟ್ಟು ಸಂಶೋಧನಾ ಪ್ರಬಂಧದ ಸಾರ ಸಂಗ್ರಹಗಳನ್ನೊಳಗೊಂಡಿದೆ. ಈ ಸಾರವನ್ನು ಹೀಗೆ ಸಂಕ್ಷೇಪಿಸಬಹುದು.

ಇಲ್ಲಿಯ ಸ್ತ್ರೀ ಸಂಸ್ಕೃತಿಯ ನಿರ್ವಚನವು ಒಂದು ಸಾಮಾಜಿಕ ವ್ಯವಸ್ಥೆಯೊಳಗೆ ಬಂಧಿಸಲ್ಪಟ್ಟ ಗಂಡು - ಹೆಣ್ಣಿನ ಸಂಬಂಧದ ಸ್ವರೂಪವನ್ನು ಆಧರಿಸಿದೆ. ಕರಾವಳಿ ಲೇಖಕಿಯರು ತಮ್ಮ ಕಥೆಗಳ ಮೂಲಕ ಒಟ್ಟು ಸಾಮಾಜಿಕ ವ್ಯವಸ್ಥೆಯ ಕ್ರೌರ್ಯವನ್ನು ತಿರಸ್ಕರಿಸುತ್ತಿದ್ದಾರೆಯೇ ವಿನಃ ಸಮಾಜವನ್ನಲ್ಲ. ಸ್ತ್ರೀವಾದವೆನ್ನುವುದು ವಿಶಾಲಾರ್ಥದಲ್ಲಿ 'ಮಾನವತಾವಾದ'ವೇ ಆಗಿದೆ.

ಕೊನೆಯಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಐದು ಮಂದಿ ಕಥೆಗಾರ್ತಿಯರ ಪರಿಚಯ ಮಾಹಿತಿ ಸಂಗ್ರಹಕ್ಕೆ ಅಳವಡಿಸಿಕೊಂಡ ಪ್ರಶ್ನಾವಳಿ, ಹಾಗೂ ವಿವರವಾದ ಮಾಹಿತಿ ಹಾಗೂ ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ನೀಡಿದೆ.

ಅಧ್ಯಾಯ. ೭. ಸ್ತ್ರೀಯಾತ್ಮಕತೆಯ ನೆಲೆ

೧೯೭೦ರ ಹೊತ್ತಿಗೆ ಭಾರತಕ್ಕೆ ಕಾಲಿರಿಸಿದ ಸ್ತ್ರೀವಾದವು ಇಲ್ಲಿ ಹೆಣ್ಣುಮಕ್ಕಳ ಆಲೋಚನಾ ರೀತಿಯನ್ನು ಹಾಗೂ ಬದುಕಿನ ಕ್ರಮವನ್ನೇ ಬದಲಾಯಿಸಿತು. ಇದು ೨೦ನೇ ಶತಮಾನದ ಬಹು ಮಹತ್ವದ ಬೆಳವಣಿಗೆ. ಹೆಣ್ಣು ತನ್ನನ್ನು ತಾನು ಅರ್ಥಮಾಡಿಕೊಂಡು ತನ್ನ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವ ಕಡೆಗೆ ಈ ವಾದ ಪ್ರೇರಣೆ ನೀಡಿತು ಎನ್ನಬಹುದು. ಮಹಿಳಾ ಸಾಹಿತ್ಯದ ಸ್ವರೂಪವೂ ಗಮನಾರ್ಹ ಬದಲಾವಣೆಯನ್ನು ಕಂಡಿತು. ಬೇರೆ ಬೇರೆ ಸಾಹಿತ್ಯ ಪಂಥಗಳ ಪ್ರಭಾವ ಈ ಕಾಲದ ಲೇಖಕಿಯರ ಮೇಲಿದ್ದರೂ ಅವರ ಸಾಹಿತ್ಯದ ವಸ್ತುವಿನ ಮೇಲೆ ಸ್ತ್ರೀವಾದದ ಪ್ರಭಾವವೇ ಕಾಣಿಸಿಕೊಂಡಿತು.

ಪಾಶ್ಚಾತ್ಯ ದೇಶಗಳಲ್ಲಿ ಲಿಂಗ, ಜಾತಿ, ಲಿಂಗ ತಾರತಮ್ಯ ಹಾಗೂ ಬಂಡವಾಳಶಾಹಿ ಸಮಾಜದ ವಿರುದ್ಧ ಒಂದು ರಾಜಕೀಯ ಅನಿವಾರ್ಯವಾಗಿ ಹುಟ್ಟಿಕೊಂಡ ಸ್ತ್ರೀವಾದವು ಒಂದು ಚಳುವಳಿಯಾಗಿ ರೂಪುಗೊಂಡಿತು, ಮಾತ್ರವಲ್ಲ ಜಗತ್ತಿನ ಎಲ್ಲಾ ದೇಶಗಳ ಹೆಣ್ಣುಮಕ್ಕಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಾನ – ಮಾನಗಳಲ್ಲಿ

ಬದಲಾವಣೆಯನ್ನು ತಂದಿತು. ಮಹಿಳಾ ಸಾಹಿತ್ಯದ ಸ್ವರೂಪ, ಗೊತ್ತು – ಗುರಿಗಳು ಸ್ತ್ರೀವಾದ ದೃಷ್ಟಿಕೋನದ ಹಿನ್ನೆಲೆಯಲ್ಲಿ ರೂಪುಗೊಳ್ಳತೊಡಗಿತು. ನಿಜವಾಗಿ ಹೇಳಬೇಕೆಂದರೆ ಮಹಿಳಾ ಸಾಹಿತ್ಯದ ಕುರಿತಾದ ಗಂಭೀರವಾದ ಚರ್ಚೆ ಆರಂಭವಾದದ್ದೇ ೧೯೭೫ರ ನಂತರ.

ಈ ಕಾಲಘಟ್ಟದಲ್ಲಿ ಬರೆದ ಅನೇಕ ಲೇಖಕಿಯರು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಬದುಕಿನ ಹುಡುಕಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಮ್ಮ ಅಸ್ಮಿತೆಯ ನೆಲೆಗಳನ್ನು ಕಂಡುಕೊಂಡರು. ಕರಾವಳಿಯ ಲೇಖಕಿಯರ ಕಥೆಗಳನ್ನು ಗಮನಿಸಿದಾಗಲೂ ಈ ನೆಲೆ ಸ್ಪಷ್ಟವಾಗುತ್ತದೆ. ಈ ಕಾಲಘಟ್ಟದ ಮಹಿಳಾ ಸಾಹಿತ್ಯವನ್ನು ಮುಖ್ಯವಾದ ಮೂರು ನೆಲೆಗಳಲ್ಲಿ ಕಾಣಬಹುದು. ಅವುಗಳೆಂದರೆ,

೧. ಮಹಿಳೆಯರನ್ನು ಕೇಂದ್ರವಾಗುಳ್ಳ ಸಾಹಿತ್ಯ

೨. ಮಹಿಳೆಯರಿಂದ ರಚಿತವಾದ ಸಾಹಿತ್ಯ

೩. ಮಹಿಳಾವಾದಿಯಾದ ಸಾಹಿತ್ಯ

ಕನ್ನಡ ಸಾಹಿತ್ಯ ಆರಂಭದ ಪುಟಗಳಿಂದಲೂ ಸಾಹಿತ್ಯದಲ್ಲಿ ಮಹಿಳೆ ಕೇಂದ್ರವಾಗಿ ಕಾಣಿಸಿಕೊಂಡಿದ್ದಾಳೆ. ಇದು ಪುರುಷ ನಿರ್ಮಿತವಾಗಿದ್ದರೂ ಮಹಿಳೆಯನ್ನು ಮುಖ್ಯ ಪಾತ್ರಗಳಲ್ಲಿ ವಿಶ್ಲೇಷಿಸಿದೆ. ಮಹಿಳೆಯರನ್ನೇ ಕೇಂದ್ರವಾಗಿರಿಸಿ ಬರೆದ ಮಹಿಳಾ ಬರಹಗಾರರೂ ಇದ್ದಾರೆ. ಕಥಾ ಸಾಹಿತ್ಯದ ದೃಷ್ಟಿಯಿಂದ ಗಮನಿಸಿದರೆ, ಮಹಿಳೆಯರಿಂದ ರಚಿತವಾದ ಸಾಹಿತ್ಯ ಕಾಣಿಸಿಕೊಳ್ಳುವುದೇ ಹತ್ತೊಂಬತ್ತನೆ ಶತಮಾನದ ಕೊನೆ ಹಾಗೂ ಇಪ್ಪತ್ತನೆ ಶತಮಾನದ ಆದಿಯಲ್ಲಿ . ಇವರೆಲ್ಲ ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡು ಬರೆದರೆಂದು ಸಾರಾ ಸಗಟಾಗಿ ಹೇಳುವಂತಿಲ್ಲ. ಬರೆಯುವ ಅವಕಾಶವನ್ನೇ ಮೊತ್ತ ಮೊದಲ ಬಾರಿಗೆ ಪಡೆದು ಹೊರ ಪ್ರಪಂಚಕ್ಕೆ ತೆರೆದುಕೊಂಡ ಮಹಿಳಾ ಸಾಹಿತ್ಯದ ಆರಂಭದ ದಿನಗಳಲ್ಲಿ ಭಕ್ತಿಯ ಪರಾಕಾಷ್ಠೆಯನ್ನಷ್ಟೇ ಕಾಣಲು ಸಾಧ್ಯವಾಗಿತ್ತೇ ಹೊರತು ಸಾಮಾಜಿಕ ಕಳಕಳಿಯನ್ನಲ್ಲ. ಚಾರಿತ್ರಿಕವಾಗಿ ಇಂತಹ ಬದಲಾವಣೆಗಳು ಬಹಳ ಮುಖ್ಯವಾದುವುಗಳು. ಆಧುನಿಕತೆಯ ಕೊಡುಗೆಯಾಗಿ ಪಡೆದ ಶಿಕ್ಷಣದಿಂದ ಹುಟ್ಟಿಕೊಂಡ ಪ್ರಜ್ಞೆ, ಅದರ ಆಳದಲ್ಲಿ ಹುಟ್ಟಿದ ಅರಿವು, ಹೆಣ್ಣುಮಕ್ಕಳು ತಮ್ಮನ್ನು ತಾವು ಅರ್ಥೈಸಿಕೊಳ್ಳಲು ಮಾಡಿದ ಪ್ರಯತ್ನಗಳಾದವು. ೧೯೭೫ ರಿಂದ ಈಚೆಗೆ ಮಹಿಳಾವಾದಿಯಾದ ಸಾಹಿತ್ಯವು ಹೆಚ್ಚು ಗಟ್ಟಿಗೊಳ್ಳಲು ಮತ್ತು ಅರ್ಥಪೂರ್ಣವಾಗಲು ಸಾಧ್ಯವಾಯಿತು.

ಪುರುಷನಿಗೆ ಹೋಲಿಸಿದರೆ ಮಹಿಳೆಯ ಅನುಭವ, ಅವಕಾಶಗಳು ಅಧಿಕ. ಒಂದು ವಿಷಯವನ್ನು ಮಹಿಳೆ ಗ್ರಹಿಸುವುದಕ್ಕೂ, ಪುರುಷ ಗ್ರಹಿಸುವುದಕ್ಕೂ ವ್ಯತ್ಯಾಸವಿದೆ. ಹಾಗಾಗಿ ಈ ವ್ಯತ್ಯಾಸ ಅಭಿವ್ಯಕ್ತಿಯಲ್ಲಿಯೂ

ಕಾಣಿಸಿಕೊಳ್ಳುತ್ತದೆ. ಮಹಿಳೆಯ ಕನಸು, ಅವಳ ಅನುಭವಗಳು ಈ ಭಿನ್ನತೆಗೆ ಕಾರಣ. ಈ ಹಿನ್ನಲೆಯಲ್ಲಿ ಮಹಿಳಾ ಸಾಹಿತ್ಯವನ್ನು ನೋಡುವ ಅಗತ್ಯವಿದೆ.

ಅಧ್ಯಾಯ ೮ ಕರಾವಳಿ ಕತೆಗಳಲ್ಲಿ ಮಹಿಳಾ ಸಂವೇದನೆಯ ಸಂಕೀರ್ಣತೆಗಳು

ಮನುಷ್ಯ ತನ್ನ ಅನುಭವಗಳನ್ನು ಸಂವೇದನೆಯ ರೂಪದಲ್ಲಿ ಹಿಡಿದಿಡುವುದಕ್ಕೆ ಮುಖ್ಯ ಸಾಧನವಾದದ್ದು ಸಾಹಿತ್ಯ. 'ಸಂವೇದನೆ' ಎನ್ನುವುದು ಒಂದರ್ಥದಲ್ಲಿ 'ಮೌಲ್ಯ ವಿವೇಚನೆ'. ಬದುಕಿನ ನೋಟಗಳು ಹೊರ ಕಣ್ಣುಗಳಿಗೆ ಒಂದು ತೆರನಾಗಿ ಕಂಡರೆ, ಒಳಕಣ್ಣುಗಳಿಗೆ ಕಾಣುವ ರೀತಿಯೇ ಬೇರೆ. ಹೊರನೋಟಕ್ಕೆ ಎಲ್ಲವೂ ಸುಂದರವಾಗಿದ್ದರೂ, ಅದರ ಒಳಹೊಕ್ಕು ನೋಡಿದರೆ ಆಳವಾದ ಅನುಭವವನ್ನು ಪರಿಚಯಮಾಡಿಸುತ್ತದೆ. ಈ ಅನುಭವ ನಮ್ಮ ಜೀವನದೊಂದಿಗೆ ನಡೆಯುವ ನಿರಂತರ ಹೋರಾಟವೂ ಹೌದು. ಇದು ಬದುಕಿನೊಂದಿಗೆ ಇರಬೇಕಾದ ಸಾಮರಸ್ಯವನ್ನೂ, ಹೊಂದಾಣಿಕೆಯ ಪ್ರವೃತ್ತಿಯನ್ನು ನಮ್ಮಲ್ಲಿ ಜಾಗೃತಗೊಳಿಸುತ್ತದೆ. ಅಂತರಂಗದಲ್ಲಿ ಹುಟ್ಟುವ ವಿಚಾರವು ಸಂವೇದನೆಯ ರೂಪದಲ್ಲಿ ತನ್ನದೇ ಆದ ವೈಚಾರಿಕ ವಲಯವೊಂದನ್ನು ಸ್ಥಾಪಿಸಿಕೊಳ್ಳುತ್ತದೆ. ವ್ಯಕ್ತಿ ವಿಚಾರಶೀಲನಾಗುತ್ತಾ ಹೋದಂತೆ, ಪ್ರಬುದ್ಧತೆಯನ್ನು ಬೆಳೆಸಿಕೊಂಡಂತೆ ಈ ವೈಚಾರಿಕ ಗುಣ ಅಥವಾ ಶಕ್ತಿ ಅವನಲ್ಲಿ ಮೂಡುವುದಕ್ಕೆ ಸಾಧ್ಯವಾಗುತ್ತದೆ. ಅದು ಮುಸ್ಲಿಂ ಸ್ತ್ರೀ ಸಂಸ್ಕೃತಿ ಇರಬಹುದು, ದಲಿತ ಸ್ತ್ರೀ ಸಂಸ್ಕೃತಿ ಇರಬಹುದು, ವಿದ್ಯಾವಂತ ಸ್ತ್ರೀ ಸಂಸ್ಕೃತಿ ಇರಬಹುದು ಇಲ್ಲವೆ, ಉದ್ಯೋಗಸ್ಥ ಸ್ತ್ರೀ ಸಂಸ್ಕೃತಿಯು ಆಗಿರಬಹುದು. ಸ್ತ್ರೀಯ ಭಿನ್ನ ಭಿನ್ನ ಸ್ತರದಲ್ಲಿ ನಿಂತು ವೈಚಾರಿಕತೆಯ ನಮ್ಮ ಮೌಲ್ಯಗಳನ್ನು ವೈಚಾರಿಕ ನಿಕಷಕ್ಕೊಡ್ಡುವುದೇ ಸ್ತ್ರೀಸಂಸ್ಕೃತಿಯಾಗಿದೆ.

ಕರಾವಳಿ ಲೇಖಕಿಯರ ಅಂತಃಪ್ರಜ್ಞೆಯಲ್ಲಿ ಕೇಂದ್ರೀಕೃತವಾದ ಮೌಲ್ಯ ವಿವೇಚನೆ ಅವರ ಕಥೆಗಳಲ್ಲಿ ಎಷ್ಟರಮಟ್ಟಿಗೆ ಬಂದಿದೆ ಎನ್ನುವುದರ ಮೇಲೆ ಸ್ತ್ರೀ ಸಂಸ್ಕೃತಿಯ ನೆಲೆಗಳನ್ನು ಅರಿಯುವುದಕ್ಕೆ ಸಾಧ್ಯವಾಗುತ್ತದೆ. "ತನ್ನ ಬದುಕಿಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ಹೆಣ್ಣಿನಲ್ಲೂ ಒಂದು ರೀತಿಯ ಮೌಲ್ಯ ವಿವೇಚನೆ ಇದ್ದೇ ಇರುತ್ತದೆ. ಅದನ್ನು ಅಭಿವ್ಯಕ್ತಗೊಳಿಸುವುದರಲ್ಲಿ ಆಕೆ ತೋರುವ ಪ್ರಾಮಾಣಿಕತೆ ಮತ್ತು ಆ ಪ್ರಾಮಾಣಿಕತೆಯ ತೀವ್ರತೆ ಆಕೆಯ ವ್ಯಕ್ತಿಗತ ಅನುಭವ ಎಷ್ಟು ಆಳವಾಗಿ ಅಂತಃ ಪ್ರಜ್ಞೆಯಲ್ಲಿ ಜಾಗೃತವಾಗಿದೆ ಎನ್ನುವುದನ್ನು ಹೊಂದಿಕೊಂಡಿರುತ್ತದೆ"[1] ಸ್ತ್ರೀಗೆ ಇಂದು ಬೇಕಾಗಿರುವುದು ಪುರುಷನ ಸಹಭಾಗಿತ್ವದ ಅಗತ್ಯತೆಯೇ ಹೊರತು ಅನುಕಂಪವಲ್ಲ. ಈ ಪ್ರಜ್ಞೆಯಿಂದಲೇ ಸ್ತ್ರೀ ಸಂಸ್ಕೃತಿಯ ಅರ್ಥ ಚರ್ಚೆ ಪ್ರಾರಂಭವಾಗುತ್ತದೆ. ಸ್ತ್ರೀವಾದವೂ ಕೂಡಾ ಹೇಳುವುದು ಇದನ್ನೇ ಆಗಿದೆ.

ಈ ಹಿನ್ನೆಲೆಯಲ್ಲಿ ಕರಾವಳಿ ಲೇಖಕಿಯರ ಕಥೆಗಳಲ್ಲಿ ಸ್ತ್ರೀಸಂಸ್ಕೃತಿಯ ವಿಭಿನ್ನ ನೆಲೆಗಳನ್ನು ಹುಡುಕುವ ಪ್ರಯತ್ನವನ್ನು ಈ ಅಧ್ಯಯನ ಮಾಡುತ್ತದೆ. ಅಧ್ಯಯನಕ್ಕೆ ಒಂದು ಚೌಕಟ್ಟನ್ನು ಒದಗಿಸುವ ಕಾರಣಕ್ಕಾಗಿ ೧೯೫೦ರ ನಂತರದ ಪ್ರಮುಖ ಲೇಖಕಿಯರ ಪ್ರಾತಿನಿಧಿಕ ಕಥೆಗಳನ್ನಷ್ಟೇ ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಲೇಖಕೀಯರೆಂದರೆ,

ಗಂಗಾ ಪಾದೇಕಲ್ ,

ಪ್ರೇಮಾಭಟ್

ಮಿತ್ರಾ ವೆಂಕಟ್ರಾಜ್

ವೈದೇಹಿ

ಸಾರಾ ಅಬೂಬಕ್ಕರ್

ಈ ಲೇಖಕಿಯರ ಬದುಕಿನ ವಿವರಗಳನ್ನು ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ.

ಅಧ್ಯಾಯ ೬. ಸಮಾರೋಪ

ಈ ಅಧ್ಯಾಯ ಒಟ್ಟು ಸಂಶೋಧನಾ ಪ್ರಬಂಧದ ಸಾರ ಸಂಗ್ರಹಗಳನ್ನೊಳಗೊಂಡಿದೆ. ಈ ಸಾರವನ್ನು ಹೀಗೆ ಸಂಕ್ಷೇಪಿಸಬಹುದು.

ಇಲ್ಲಿಯ ಸ್ತ್ರೀ ಸಂಸ್ಕೃತಿಯ ನಿರ್ವಚನವು ಒಂದು ಸಾಮಾಜಿಕ ವ್ಯವಸ್ಥೆಯೊಳಗೆ ಬಂಧಿಸಲ್ಪಟ್ಟ ಗಂಡು - ಹೆಣ್ಣಿನ ಸಂಬಂಧದ ಸ್ವರೂಪವನ್ನು ಆಧರಿಸಿದೆ. ಕರಾವಳಿ ಲೇಖಕಿಯರು ತಮ್ಮ ಕಥೆಗಳ ಮೂಲಕ ಒಟ್ಟು ಸಾಮಾಜಿಕ ವ್ಯವಸ್ಥೆಯ ಕ್ರೌರ್ಯವನ್ನು ತಿರಸ್ಕರಿಸುತ್ತಿದ್ದಾರೆಯೇ ವಿನಃ ಸಮಾಜವನ್ನಲ್ಲ. ಸ್ತ್ರೀವಾದವೆನ್ನುವುದು ವಿಶಾಲಾರ್ಥದಲ್ಲಿ 'ಮಾನವತಾವಾದ'ವೇ ಆಗಿದೆ.

ಕೊನೆಯಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಐದು ಮಂದಿ ಕಥೆಗಾರ್ತಿಯರ ಪರಿಚಯ ಮಾಹಿತಿ ಸಂಗ್ರಹಕ್ಕೆ ಅಳವಡಿಸಿಕೊಂಡ ಪ್ರಶ್ನಾವಳಿ, ಹಾಗೂ ವಿವರವಾದ ಮಾಹಿತಿ ಹಾಗೂ ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ನೀಡಿದೆ.

ಅಡಿಟಿಪ್ಪಣಿ

೧. ಶ್ರೀಮತಿ ಎಚ್. ಎಸ್. (ಡಾ.) : ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪುಟ ೩, ೨೦೦೬.

೨. ಇಂದಿರಾ ಆರ್. (ಡಾ.) : ಮಹಿಳೆ - ಸಮಾಜ ಮತ್ತು ಸಂಸ್ಕೃತಿ, ಪುಟ ೧೦೩. ೨೦೦೨ .

೩. ಉಷಾ ಕಟ್ಟೇಮನೆ, ಡಾ. ಪುರುಷೋತ್ತಮ ಬಿಳಿಮಲೆ (ಸಂ): ಕಡಲತಡಿಯ ತಲ್ಲಣಗಳು, ಪು. ೨, ೨೦೦೯,

೪. ಉಷಾ ಕಟ್ಟೇಮನೆ, ಡಾ. ಪುರುಷೋತ್ತಮ ಬಿಳಿಮಲೆ (ಸಂ): ಕಡಲತಡಿಯ ತಲ್ಲಣಗಳು, ಪು. ೭ , ೨೦೦೯.

೫. ಮೊಳೆಯಾರ ವಿ. ಬಿ. (ಸಂ) : ಕಾರಂತ ಚಿಂತನ, ಪು. ೨೯ , ೧೯೯೮.

ಅಧ್ಯಾಯ – ೨

ಸ್ತ್ರೀವಾದಿ ಚಳುವಳಿ ಮತ್ತು ಸಾಹಿತ್ಯ ವಿಮರ್ಶೆ

೨.೧. ಸ್ತ್ರೀವಾದದ ಹುಟ್ಟು ಮತ್ತು ಬೆಳವಣಿಗೆ

೨.೨. ಫ್ರೆಂಚ್ ಮಹಾಕ್ರಾಂತಿ ಮತ್ತು ಸ್ತ್ರೀವಾದಿ ಚಿಂತನೆ

೨.೩. ಸ್ತ್ರೀವಾದ – ಅರ್ಥ ಮತ್ತು ಪರಿಕಲ್ಪನೆ

೨.೪. ಸ್ತ್ರೀವಾದಿ ಚಳುವಳಿಯ ಸ್ವರೂಪ

೨.೪.೧. ಸಾಮಾಜಿಕ ಚಳುವಳಿಯಾಗಿ ಸ್ತ್ರೀವಾದ
೨.೪.೨. ಸಾಹಿತ್ಯಕ ಚಳುವಳಿಯಾಗಿ ಸ್ತ್ರೀವಾದ
೨.೪.೩. ರಾಜಕೀಯ ಚಳುವಳಿಯಾಗಿ ಸ್ತ್ರೀವಾದ
೨.೪.೪. ಸಾಂಸ್ಕೃತಿಕ ಚಳುವಳಿಯಾಗಿ ಸ್ತ್ರೀವಾದ

೨.೫. ಭಾರತದಲ್ಲಿ ಮಹಿಳಾ ಚಳುವಳಿ : ಒಂದು ಐತಿಹಾಸಿಕ ಸಮೀಕ್ಷೆ

೨.೫.೧. ಬ್ರಿಟಿಷ ಯುಗ
೨.೫.೨. ಸುಧಾರಣಾವಾದಿ ದೃಷ್ಟಿ
೨.೫.೩. ರಾಷ್ಟ್ರೀಯವಾದ

೨.೬. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆ

೨.೭. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ

೨.೮. ಸ್ತ್ರೀವಾದಿ ನಿರಚನ ಸಿದ್ಧಾಂತ (ಡಿಕಂಸ್ಟ್ರಕ್ಷನ್ ಥಿಯರಿ)

ಅಧ್ಯಾಯ – ೨

ಸ್ತ್ರೀವಾದಿ ಚಳುವಳಿ

'ಸಾಹಿತ್ಯ ಮತ್ತು ಯುಗಧರ್ಮ' ಇವುಗಳು ಪರಸ್ಪರ ಪೂರಕವಾದ ಅಂಶಗಳು. ಬರಹಗಾರನ ಮನೋಧರ್ಮ ಆಯಾ ಯುಗಧರ್ಮದ ಪ್ರಭಾವಕ್ಕೆ ಒಳಗಾಗಿರುತ್ತದೆ. ಸಾಹಿತ್ಯದ ಹೊಸ ಹೊಸ ಪರಿಭಾಷೆಗಳು ಹುಟ್ಟಿಕೊಳ್ಳುವುದಕ್ಕೂ ಯುಗಧರ್ಮವೇ ಕಾರಣ. ಸೃಜನ ಹಾಗೂ ವಿಮರ್ಶನ ಎಂಬ ಎರಡು ಕ್ರಿಯೆಗೂ ಇದು ಪೂರಕವಾದುದು. ಬಸವಯುಗದ ಜೀವನದೃಷ್ಟಿಯನ್ನು ಅನುಸರಿಸಿಕೊಂಡು ಹುಟ್ಟಿದ ವಚನ ಸಾಹಿತ್ಯ ಚಳುವಳಿ ಸೃಜನಶಕ್ತಿಯ ಹೊಸ ಅಭಿವ್ಯಕಿಯಾಗಿ ಕಾಣಿಸಿಕೊಂಡಿರುವುದೂ ಈ ಯುಗಧರ್ಮದ ವಿಶೇಷತೆಯಿಂದಲೇ ಆಗಿದೆ. ನಮ್ಮ ಸಮಕಾಲೀನ ಬದುಕು ಚಿಂತನೆಗಳೆಲ್ಲ ಆಯಾಯ ಕಾಲಘಟ್ಟದ ಗುಣ ವಿಶೇಷತೆಗಳೊಂದಿಗೆ ಇತಿಹಾಸದ ಧ್ವನಿಯನ್ನು ಸಮನ್ವಯಗೊಳಿಸಿಕೊಂಡು ಉದ್ಭವವಾಗಿದೆ. ಏಕೆಂದರೆ ನಮ್ಮ ಸಾಮಾಜಿಕ ಸ್ವರೂಪಕ್ಕೆ ಇವತ್ತಿನ ಅಂಶಗಳೊಂದಿಗೆ ಹಿಂದಿನ ಇತಿಹಾಸದ ಅಚ್ಚೂ ಇದೆ. ಧರ್ಮ, ಪ್ರಭುತ್ವ, ಆರ್ಥಿಕ ವ್ಯವಸ್ಥೆ, ದುಡಿಮೆ ಇವೆಲ್ಲ ಹೇಗೆ ಕೆಲಸ ಮಾಡಿವೆ, ಯಾವ ಯಾವ ಸ್ಥಾನ ಪಡೆದಿವೆ ಎಂಬುದು ಒಂದು ಸಮಾಜದ ಬದುಕನ್ನು ಕಂಡುಕೊಳ್ಳಲು ಸಹಾಯಕ ಸಾಮಾಗ್ರಿ. ಆದ್ದರಿಂದ ಐತಿಹಾಸಿಕ ಮತ್ತು ಸಮಕಾಲೀನ ಸ್ಥಿತಿಗತಿಗಳ ವೈಜ್ಞಾನಿಕ ಅರಿವಿನಿಂದ ಬದುಕನ್ನು ಕಾಣುವ ಕ್ರಿಯೆ ಸಾಗಬೇಕಾದುದಷ್ಟೇ ಅಲ್ಲ, ಅದರಿಂದ ರೂಪಿತವಾದ ಧೋರಣೆ ಯಾವುದು, ಅದು ಯಾರನ್ನು ಪ್ರತಿನಿಧಿಸುತ್ತದೆ ಎಂಬುದು ಮುಖ್ಯ"[೧] ಎಂದು ಬರಗೂರು ರಾಮಚಂದ್ರಪ್ಪನವರು ಅಭಿಪ್ರಾಯ ಪಡುತ್ತಾರೆ.

ಸಾಹಿತ್ಯದ ಪುನರ್ ಮೌಲ್ಯೀಕರಣದಲ್ಲಿ ನಮ್ಮ ಗ್ರಹಿಕೆಯ ಕ್ರಮವು ನಾವು ನಿಂತಿರುವ ಸಾಮಾಜಿಕ ಮತ್ತು ಚಾರಿತ್ರಿಕ ನೆಲೆಗಳ ಆಧಾರವನ್ನು ಪಡೆದಿದೆ. ಇದನ್ನು ಸ್ಪಷ್ಟಪಡಿಸುವ ಒಂದು ಉದಾಹರಣೆಯೆಂದರೆ, ೧೨ನೆಯ ಶತಮಾನದಲ್ಲಿ ಕ್ರಾಂತಿಕಾರಕವಾಗಿ ಕಂಡ ವಚನ ಚಳುವಳಿಯು ಇಪ್ಪತ್ತೊಂದನೆ ಶತಮಾನದಲ್ಲಿ ನಿಂತು ನೋಡಿವಾಗ ಕ್ರಾಂತಿಕಾರಕವಾಗಿರದೆ ಕೇವಲ ಪ್ರಗತಿಪರವಾಗಿ ಕಾಣಿಸುತ್ತದೆ. ಮೌಲ್ಯಗಳೂ ಕೂಡ ಇಂತಹ ಪಲ್ಲಟಕ್ಕೆ ಒಳಗಾಗುವುದರಲ್ಲಿ ಆಶ್ಚರ್ಯವಿಲ್ಲ. ಸತಿಸಹಗಮನ, ಬಾಲ್ಯವಿವಾಹ ಮುಂತಾದ ಸಾಮಾಜಿಕ ಪದ್ಧತಿಗಳು ಅಮಾನವೀಯವಾಗಿ ಕಾಣುವುದಕ್ಕೆ ಪ್ರಗತಿಪರ ಚಿಂತನೆಗಳೇ ಕಾರಣ. ಯಾವುದೋ ಕಾಲಘಟ್ಟದ ಪಾಚಿಗಟ್ಟಿದ ಚಿಂತನೆಯ ಕ್ರಮಗಳು ಬದಲಾಗಬೇಕಾದರೆ ಹೊಸ ಚಿಂತನೆಯ ನೀರು ಹರಿಯಲೇಬೇಕು. ಪರ-ವಿರೋಧ, ಸ್ವೀಕರಣೆ-ನಿರಾಕರಣೆ ಎಂಬ ದ್ವಂದ್ವದಲ್ಲಿ ಹೊಸ ಚಿಂತನೆಗಳು ಗಟ್ಟಿಯಾಗಬೇಕು. ನಿರ್ದಿಷ್ಟ ಕಾಲಘಟ್ಟದಲ್ಲಿ ರಚಿತವಾದ ಸಾಹಿತ್ಯ ಬದಲಾಗುವುದಿಲ್ಲ. ಅದನ್ನು ನೋಡುವ ದೃಷ್ಟಿ ಬದಲಾಗುತ್ತದೆ. ಯಾವುದೇ ಒಂದು

ಸಾಹಿತ್ಯಕೃತಿ ಈ ಬದಲಾವಣೆಯ ಆಶಯಗಳಿಗೆ ಸ್ಪಂದಿಸುತ್ತ ಹೋಗುವುದರಿಂದ ಸಮಕಾಲೀನ ಮಹತ್ವ ಪಡೆದುಕೊಳ್ಳುತ್ತವೆ. ಯಾವಾಗ ಇದರ ಸ್ಪಂದನ ಸ್ಥಗಿತಗೊಳ್ಳುತ್ತದೆಯೋ ಆಗ ಸಾಹಿತ್ಯಕೃತಿಯೂ ಮಹತ್ವ ಕಳೆದುಕೊಳ್ಳುತ್ತದೆ.

ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಕಾಣಿಸಿಕೊಳ್ಳುವುದಕ್ಕೆ ಮುಖ್ಯ ಪ್ರೇರಣೆಯೆಂದರೆ ಫ್ರೆಂಚ್, ರಷ್ಯಾ ದೇಶದಲ್ಲಿ ನಡೆದ ಕ್ರಾಂತಿಗಳು. ಇದಕ್ಕೂ ಮೊದಲು ಭಾರತದಲ್ಲಿ ಕಾಣಿಸಿಕೊಂಡ ಸಮಾಜ ಸುಧಾರಣಾ ದೃಷ್ಟಿಯೂ ರಷ್ಯಾ ಕ್ರಾಂತಿಗೆ ಹೆಚ್ಚಿನ ಪ್ರೇರಣೆ ಒದಗಿಸಿದೆ. ಜಾಗತಿಕ ಮಟ್ಟದ ಅಮೇರಿಕನ್, ಫ್ರೆಂಚ್ ಕ್ರಾಂತಿಗಳಿಂದ ಸ್ತ್ರೀವಾದಿ ಚಳುವಳಿಯಂತಹ ಉಪಚಳುವಳಿಗಳು ಹುಟ್ಟುವುದರಿಂದ ಭಾರತೀಯ ಸಂದರ್ಭದಲ್ಲಿ, ಸಮಾಜ ಸುಧಾರಣಾ ದೃಷ್ಟಿಯಲ್ಲಿ ಸ್ತ್ರೀ ಅಸ್ಮಿತೆಯ ಪ್ರಜ್ಞೆ ಕಾಣಿಸಿಕೊಂಡಿದೆ.

ಕರಾವಳಿ ಲೇಖಕಿಯರ ಕಥೆಗಳು ಸ್ತ್ರೀವಾದಿ ಚಿಂತನೆಯ ತತ್ವ ವಿಷಯಗಳಿಗೆ ಯಾವ ರೀತಿ ಸ್ಪಂದಿಸುತ್ತವೆ, ಎಲ್ಲಿ ಭಿನ್ನವಾಗಿ ಕಾಣುತ್ತವೆ? ಎನ್ನುವುದನ್ನು ಕಂಡುಕೊಳ್ಳುವುದಕ್ಕಾಗಿ ವಿಶ್ವದಾದ್ಯಂತ ನಡೆದ ಸ್ತ್ರೀವಾದಿ ಚಳುವಳಿ ಮತ್ತು ಅದರ ತಾತ್ವಿಕ ಅಂಶಗಳನ್ನು ಕುರಿತು ಯೋಚಿಸುವ ಅಗತ್ಯವಿದೆ. 'ಸ್ತ್ರೀವಾದಿ ಚಳುವಳಿ ಮತ್ತು ಸಾಹಿತ್ಯ ವಿಮರ್ಶೆಯನ್ನು'ಯನ್ನು ಕರಾವಳಿ ಲೇಖಕಿಯರ ಕಥೆಗಳಿಗೆ ಪೂರಕವಾಗಿ ಅಭ್ಯಾಸಮಾಡಲು ಆಯ್ದುಕೊಳ್ಳಲಾಗಿದೆ. ಬೇರೆ ಬೇರೆ ಸ್ತ್ರೀವಾದಿ ಪಂಥಗಳ ಆಶಯಗಳು ಕಥೆಗಳಲ್ಲಿ ಎಲ್ಲಿ ಅನ್ವಯಿಸುತ್ತವೆ, ಎಲ್ಲಿ ಅನ್ವಯಿಸುವುದಿಲ್ಲ ಎಂಬುದನ್ನು ತಿಳಿಯುವುದಕ್ಕೂ, ಸ್ತ್ರೀವಾದಿ ವಿಮರ್ಶಾ ಮಾನದಂಡಗಳಿಗೆ ಕರಾವಳಿ ಕಥೆಗಳು ಹೇಗೆ, ಮತ್ತು ಎಷ್ಟು ಒಗ್ಗಿಕೊಳ್ಳುತ್ತವೆ ಎನ್ನುವುದನ್ನು ವಿವೇಚಿಸಬೇಕಾಗಿದೆ. ಆದ್ದರಿಂದಲೇ ಈ ಅಧ್ಯಾಯ ಕರಾವಳಿ ಲೇಖಕಿಯರ ಕಥೆಗಳ ಅಧ್ಯಯನಕ್ಕೆ ಪೂರಕವಾಗಿ ಬಂದಿದೆ ಎನ್ನಬಹುದು.

೨.೧. ಸ್ತ್ರೀವಾದದ ಹುಟ್ಟು ಮತ್ತು ಬೆಳವಣಿಗೆ

ಯಾವುದೇ ಒಂದು ವ್ಯವಸ್ಥೆಯಲ್ಲಿ ಕಂಡುಬರುವ ಅತಿರೇಕತೆಯ ವಿರುದ್ಧ ಹುಟ್ಟಿಕೊಳ್ಳುವ ಸಾಮಾಜಿಕ ಚಳುವಳಿಯ ಹಿಂದೆ ರಾಜಕೀಯ ಇತಿಹಾಸದ ಧ್ವನಿ ಇದ್ದೇ ಇರುತ್ತದೆ. ಆಳುವ ಪ್ರಭು ಶಕ್ತಿಯ ದೌರ್ಜನ್ಯಗಳನ್ನು ಖಂಡಿಸುತ್ತಾ, ಆಳರಸರ ವಿರುದ್ಧ ಬಂಡೆದ್ದ ಜನ ಸಮುದಾಯದ ಹೋರಾಟವೇ ನಮ್ಮ ವಿಶ್ವ ಚರಿತ್ರೆಯನ್ನು ರೂಪಿಸಿದೆ. ಇದು ಹಿಂದಿನಿಂದಲೂ ನಿರಂತರವಾಗಿ ನಡೆದುಕೊಂಡು ಬಂದಿದೆ. ೧೭೮೯ರ ಫ್ರಾನ್ಸಿನ ಮಹಾಕ್ರಾಂತಿ ವಿಶ್ವ ರಾಜಕೀಯ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆ ಮಾಡಿತು. ಈ ಮಹಾಕ್ರಾಂತಿ ಜನಶಕ್ತಿಯ ಆಕ್ರೋಶದ ಬೆಂಕಿಯನ್ನು ಪ್ರಪಂಚದೆಲ್ಲೆಡೆ ಹರಡಿಸಿತು. ಸಾಮಾಜೋ – ರಾಜಕೀಯ (ಸೋಶಿಯೋ-ಪೊಲಿಟಿಕಲ್)

ಚಳುವಳಿಯಾಗಿ ಐತಿಹಾಸಿಕ ದಾಖಲೆ ಸ್ಥಾಪಿಸಿತು. ಇದು ಅಂದಿನ ಯುರೋಪಿನ ಮಧ್ಯಯುಗದ ಬೆಳವಣಿಗೆಗಳಲ್ಲಿ ಮುಖ್ಯವಾಗಿದ್ದ ಊಳಿಗಮಾನ್ಯ ಪದ್ಧತಿ (ಫ್ಯೂಡಲಿಸಂ), ಬಂಡವಾಳಶಾಹಿ ಪದ್ಧತಿ (ಕ್ಯಾಪಿಟಲಿಸಂ), ನಿರಂಕುಶವಾದ (ಡಿಕ್ಟೇಟರಿಯಲಿಸಂ) ಮೊದಲಾದ ವ್ಯವಸ್ಥೆಗಳ ಪ್ರಬಲ ರಾಜಕಾರಣಕ್ಕೆ ಪ್ರತಿರೋಧವಾಗಿ ಜನ್ಮ ತಾಳಿತು. ಮುಂದ ವರ್ಗ, ವರ್ಣ, ಲಿಂಗ ಇತ್ಯಾದಿ ಅಂಶಗಳನ್ನು ಆಧರಿಸಿ ಹುಟ್ಟಿದ ಹಲವು ಚಳುವಳಿಗೆ ಫ್ರಾನ್ಸ್ ಮಹಾಕ್ರಾಂತಿಯು ತಳಹದಿಯನ್ನು ಒದಗಿಸಿತು.

ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಪಶ್ಚಿಮ ಯುರೋಪಿನ ಬೌದ್ಧಿಕ ಜೀವನದಲ್ಲಿ ಪರಿವರ್ತನೆಯ ಗಾಳಿ ಬೀಸತೊಡಗಿತು. ವೈಚಾರಿಕ ತಾಕಲಾಟ, ಸಮಾನತೆ, ಸ್ವಾತಂತ್ರ್ಯ, ಅಧಿಕಾರ ವಿವೇಚನೆಯ ಹೊಸ ಹೊಸ ಪರಿಭಾಷೆಗಳು ಹುಟ್ಟಿಕೊಂಡವು. "೧೭ನೆಯ ಶತಮಾನದ ಅಂತ್ಯದ ವೇಳೆಗೆ ರಾಜಕೀಯದಲ್ಲಿ ಸ್ವತಂತ್ರವಾದಿಗಳು, ಧರ್ಮದಲ್ಲಿ ಅಸಂಪ್ರದಾಯಸ್ಥರು, ಸಂದೇಹವಾದಿಗಳು ಹೆಚ್ಚಾಗಿ ಕಂಡುಬಂದರು. ಹೊಸದಾದ ಮತ್ತು ಮುಖ್ಯವಾದ ಮಾನವ ಚಿಂತನಾ ಸ್ಫೂರ್ತಿ ಪ್ರಾರಂಭವಾಯಿತು. ಹೊಸ ಧಾರ್ಮಿಕ ಪಂಥಗಳು ಹುಟ್ಟಿಕೊಂಡವು ಮತ್ತು ಹಳೆಯದು ಬದಲಾದವು. ವಿಜ್ಞಾನ ಸಾಹಿತ್ಯ, ತತ್ವಜ್ಞಾನದಲ್ಲಿ ಸಾಧಿಸಿದ ಪ್ರಗತಿ 'ಮಾನವ ಚಿಂತನಾ' ಇತಿಹಾಸದಲ್ಲಿಯೇ ಹೊಸ ಕ್ರಾಂತಿ ಮೂಡಿಸಿತು. 'ಜ್ಞಾನೋದಯ' ಯುಗವೆಂದು ಕರೆಸಿಕೊಳ್ಳುವ ಈ ಬದಲಾವಣೆಯು ವಿಶ್ವವನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡುವುದಕ್ಕೆ ಮೊದಲು ಮಾಡಿತು. ಒಟ್ಟು ವ್ಯವಸ್ಥೆಯನ್ನು ವಿವರಿಸಲು ಧರ್ಮಶಾಸ್ತ್ರದ ಸ್ಥಾನದಲ್ಲಿ ವಿಜ್ಞಾನವನ್ನು ಪ್ರತಿಷ್ಠಾಪಿಸಿತು. ಪ್ರಗತಿಯ ಅಡಿಗಲ್ಲಾಗಿ ಮಾನವ ವಿವೇಚನೆಗೆ ಮಹತ್ವ ನೀಡಿತು ಮತ್ತು ಸಮಾಜ ಮತ್ತು ವ್ಯಕ್ತಿಗಳಲ್ಲಿ ವ್ಯಕ್ತಿ ಸ್ಥಾನದ ಘನತೆಯನ್ನು ಹೆಚ್ಚಿಸಿತು"[೨] ಎಂಬುದು ಕೆ. ಸದಾಶಿವರವರ ಅಭಿಪ್ರಾಯವಾಗಿದೆ.

"ಪುನರುಜ್ಜೀವನದೊಂದಿಗೆ"[೩] (ರೆನೈಸ್ಸ್ಯಾನ್ಸ್) ಸಂಬಂಧ ಹೊಂದಿ ಅದರ ಮುಂದುವರಿದ ಚಳುವಳಿ ಎಂದು ಗುರುತಿಸಲ್ಪಡುವ ಈ 'ಏಜ್ ಆಫ್ ರೀಸನ್' ಅಥವಾ 'ಎನ್ ಲೈಟನ್‌ಮೆಂಟ್' ಪಾಶ್ಚಾತ್ಯ ಜೀವನ ಶೈಲಿಯ ಮೇಲೆ ಅಗಾಧವಾದ ಪ್ರಭಾವಬೀರಿದ ಒಂದು ಸಾಂಸ್ಕೃತಿಕ ಅವಧಿಯಾಗಿದೆ. ವೈಚಾರಿಕತೆಗೆ ಇದರಲ್ಲಿ ಪ್ರಾತಿನಿಧ್ಯತೆಯಿದೆ. "ಮಾನವನ ಮನಸ್ಸಿನಲ್ಲಿರುವ ಅಜ್ಞಾನ, ಪೂರ್ವಾಗ್ರಹ, ರೂಕ್ಷತೆಯ ಕತ್ತಲನ್ನು ಹೊಡೆದೋಡಿಸಿ, ಎಲ್ಲಾ ರೀತಿಯ 'ಅಧಿಕಾರ', ವೈಚಾರಿಕ, ಅಸಂಬದ್ಧ, ಸಂಪ್ರದಾಯಗಳ ಮೇಲೆ ಮನುಷ್ಯನ ಬದುಕು ಅವಲಂಬಿತವಾಗುವುದನ್ನು ತಪ್ಪಿಸಿ ಅದನ್ನು ಸ್ವತಂತ್ರಗೊಳಿಸುವುದು: 'ವಿಚಾರದ ಬೆಳಕಿನಲ್ಲಿ' ನಿರ್ದಿಷ್ಟ ಸತ್ಯವನ್ನು ಕಂಡುಕೊಳ್ಳುವುದು"[೪] ಇದರಿಂದ ಸಾಧ್ಯವಾಯಿತು. 'ಜ್ಞಾನೋದಯ ಯುಗ'ದ ಒಂದು ಅಂತರ್ಗತ ಅಂಶವೆಂದರೆ ಮಾನವತಾವಾದ

(ಹ್ಯೂಮಸಿಟೇರಿಯನಿಸಂ). ಒಟ್ಟು ಮಾನವ ಕುಲದ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂಬ ಕಳಕಳಿ ಇದರಲ್ಲಿ ಅಡಗಿತ್ತು. ಜೀನ್ ಜಾಕ್ವಸ್ ರೂಸೊ ಬೋಧಿಸಿದ ಸಮಾಜಸುಧಾರಣೆ, ಆ್ಯಡಮ್ ಸ್ಮಿತ್ ಪ್ರತಿಪಾದಿಸಿದ ಆರ್ಥಿಕ ಸುಧಾರಣೆ, ವಾಲ್ಟೇರ್, ವೆಸ್ಲಿ ಮುಂತಾದವರು ಪ್ರತಿಪಾದಿಸಿದಂತೆ ಧರ್ಮದ ಸುಧಾರಣೆಗೆ ಈ ಮಾನವತಾವಾದವೇ ಒತ್ತು ನೀಡಿತು. ಇಂತಹ ಎಲ್ಲಾ ಸುಧಾರಣೆಯ ಹಿಂದೆ ಮಾನವನ ಸ್ವಾತಂತ್ರ್ಯ, ಮಾನವನ ಆರೋಗ್ಯ ಮತ್ತು ಸಂಪತ್ತು, ಮಾನವನ ಪರಿಪೂರ್ಣತೆ ಇವುಗಳನ್ನು ಸಾಧಿಸುವ ಉದ್ದೇಶವೇ ಪ್ರಧಾನವಾಗಿತ್ತು. ಮಾನವತಾವಾದದ ಜೊತೆಗೆ ರಾಷ್ಟ್ರೀಯವಾದವೂ ಬೆಳೆಯಿತು. ಈ ಎಲ್ಲಾ ಅಂಶಗಳು ಮುಂದಿನ ವಿಶ್ವ ರಾಜಕೀಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ, ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಕ್ರಾಂತಿಗಳಾಗಲು ನಾಂದಿ ಹಾಡಿದವು.

ಬೌದ್ಧಿಕ ಚಿಂತನಾಕ್ರಾಂತಿಯು ವಿಚಾರಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಪ್ರಭಾವಿಸಿ ಮಾನವ ಅಸ್ತಿತ್ವ, ವ್ಯಕ್ತಿತ್ವಗಳನ್ನು ಮುಕ್ತವಾಗಿ ವಿಮರ್ಶಿಸುವುದಕ್ಕೆ ಸಹಕರಿಸಿತು. 'ಅಧಿಕಾರ' ಮತ್ತು 'ಹಕ್ಕು' ಈ ಎರಡು ಪರಿಕಲ್ಪನೆಗಳು ತೀವ್ರ ಸಂಘರ್ಷಕ್ಕೆ ಒಡ್ಡಿ ನಿಂತವು. ಮನುಷ್ಯರು ಪರಸ್ಪರ ನಡೆಸುವ ದಬ್ಬಾಳಿಕೆಯ ಹಿಂದಿರುವ 'ಅಧಿಕಾರ' ಪ್ರಜ್ಞೆ, ಅದನ್ನು ಹತ್ತಿಕ್ಕುವ ಮೂಲಕ ಸಮಾಜದಲ್ಲಿ ಬದುಕುವ ನಿಸರ್ಗ ಸಹಜ ಹಕ್ಕಿನ ದೃಷ್ಟಿಯೂ ಇಲ್ಲಿ ಮುಖ್ಯವಾಯಿತು. ವ್ಯಕ್ತಿ ಸ್ವಾತಂತ್ರ್ಯದ ಬೌದ್ಧಿಕ ಚಿಂತನೆಯಲ್ಲಿ ಸ್ತ್ರೀಸ್ವಾತಂತ್ರ್ಯ ಸಮಾನತೆಯ ಮೊದಲ ಹೊಳಹು ಕಾಣಿಸಿಕೊಂಡರೂ, ಅವು ನೇರವಾಗಿ ಸ್ತ್ರೀ ಚಳುವಳಿಯ ಸಾಂಘಿಕ ಪ್ರಯತ್ನಕ್ಕೆ ಪೂರಕವಾಗಿಯೂ ಕಾಣಿಸಲಿಲ್ಲ ಮತ್ತು ಅದನ್ನು ಪ್ರಭಾವಿಸಲೂ ಇಲ್ಲ. ಫ್ರೆಂಚ್ ಕ್ರಾಂತಿಗೆ ಕಾರಣವಾದ ಇಂತಹ ಚಿಂತನೆಯಲ್ಲಿ ಸ್ತ್ರೀಯರನ್ನು ಉಪೇಕ್ಷಿಸಿರುವುದೇ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ತ್ರೀವಾದಿ ಚಳವಳಿ ಶಕ್ತಿಯುತವಾಗಿ ಹುಟ್ಟಿಕೊಳ್ಳಲು ಕಾರಣವಾಯಿತು, ಜೊತೆಗೆ ಇಂಗ್ಲೆಂಡ್ ಮತ್ತು ಅಮೇರಿಕಾಗಳಲ್ಲಿ ಮತಾಧಿಕಾರ (ಓಟಿಂಗ್ ರೈಟ್)ಕ್ಕಾಗಿ ನಡೆದ ಹೋರಾಟದ ಹಿನ್ನೆಲೆಯು ಸ್ತ್ರೀವಾದಿ ಚಳುವಳಿಯ, ಚಿಂತನೆ ಹುಟ್ಟಿಕೊಳ್ಳುವುದಕ್ಕೆ ವೇದಿಕೆಯನ್ನು ಒದಗಿಸಿತು.

೨.೨. ಫ್ರೆಂಚ್ ಮಹಾಕ್ರಾಂತಿ ಮತ್ತು ಸ್ತ್ರೀವಾದಿ ಚಿಂತನೆ

೧೭೮೯ರ ಫ್ರಾನ್ಸಿನ ಮಹಾಕ್ರಾಂತಿ ಪ್ರಜಾಪ್ರಭುತ್ವದ ನೆಲೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಘನತೆಯನ್ನು ಎತ್ತಿ ಹಿಡಿಯುವುದರೊಂದಿಗೆ ವಿಚಾರಕ್ರಾಂತಿಯ ಹೊಸ ದಿಕ್ಕು ದಿಸೆಗಳನ್ನು ಪರಿಚಯ ಮಾಡಿಕೊಟ್ಟಿತು. ಫ್ರೆಂಚ್ ಕ್ರಾಂತಿಯ ಹರಿಕಾರರೆನಿಸಿಕೊಂಡ ಲಾಕ್, ರೂಸೋ, ಬೆಂಥಮ್ ಇವರ ವಿಚಾರ ಕ್ರಾಂತಿಯಫಲವಾಗಿ ಸಮಾನ ಹಕ್ಕು, ಸಮಾನ ದರ್ಜೆ, ಸ್ವಾತಂತ್ರ್ಯ ಮೊದಲಾದ ಪರಿಕಲ್ಪನೆಗಳು ಹುಟ್ಟಿಕೊಂಡವು. ಈ ಪರಿಕಲ್ಪನೆಗಳನ್ನೇ ಸ್ತ್ರೀವಾದ

ತನ್ನ ಮೂಲ ಕಲ್ಪನೆಗಳೆಂದು ಸ್ವೀಕರಿಸಿದರೂ ಒಟ್ಟು ಮಾನವಕುಲದ ಏಳಿಗೆಯನ್ನು ಬಯಸಿ ಹೊಸೆದ ಇಂತಹ ಕಲ್ಪನೆಗಳಲ್ಲಿ ಸ್ತ್ರೀಯರನ್ನು ಸಮಾವೇಶಗೊಳಿಸಲೇ ಇಲ್ಲ ಎನ್ನುವುದು ಬೇಸರದ ಸಂಗತಿ. ಕ್ರಾಂತಿಗೆ ಕಾರಣವಾದ ವಿಚಾರವಾದವು ನೇರವಾಗಿ ಸ್ತ್ರೀಯರನ್ನು ಒಳಗೊಳ್ಳದೆ ಹೋದರೂ ಆ ಕ್ರಾಂತಿಯ ಭುಗಿಲೆದ್ದ ಜ್ವಾಲೆಯ ಒಂದು ಕಿಡಿ ಸ್ತ್ರೀವಾದದ ಹುಟ್ಟಿಗೆ ಕಾರಣವಾಯಿತು. ಲಿಂಗಾಧಾರಿತ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಒಳಗೊಳಗೆ ಕುದಿಯುತ್ತಿದ್ದ ಸ್ತ್ರೀ ಸ್ವಾಯತ್ತತೆಯ ಬೌದ್ಧಿಕ ಚಿಂತನೆಗಳು ಒಂದು ಸಂಘಟಿತ ಪ್ರತಿಧ್ವನಿಯಾಗಿ ಹೊಮ್ಮಿದ್ದು ಮಾತ್ರ ಈ ಸಂದರ್ಭದಲ್ಲಿ ಎನ್ನುವುದು ನೆನಪಿಡಬೇಕಾದ ಸಂಗತಿ. ‘ಜನ್ಮತ ಮನುಷ್ಯನು ಸ್ವತಂತ್ರನಾಗಿ ಹುಟ್ಟಿದ್ದಾನೆ. ಆದರೆ ಅವನು ಎಲ್ಲ ಕಡೆಯಿಂದಲೂ ಸರಪಳಿಯಿಂದ ಬಂಧಿತನಾಗಿದ್ದಾನೆ’ ಎಂದ ರೂಸೋ ಪುರುಷಾಧಿಕಾರಕ್ಕೆ ಸ್ತ್ರೀಯು ಒಳಗಾಗುವುದು ಅನಿವಾರ್ಯವೆಂದು ಭಾವಿಸಿದ. ಅವನ ಪ್ರಕಾರ ಸ್ತ್ರೀಯರು ದುರ್ಬಲರು, ದುರ್ದೈವಿಗಳು. ಮಗುವಿನ ಲಾಲನೆ, ಪಾಲನೆ, ಸ್ವಚ್ಛತೆ ಮತ್ತು ಪುರುಷರ ಉಪಭೋಗಕ್ಕಾಗಿ ಇರಬೇಕಾದ ವಸ್ತುವೆಂದು ಸ್ತ್ರೀಯರ ವ್ಯಕ್ತಿತ್ವವನ್ನು ಗ್ರಹಿಸುತ್ತಾನೆ. ಶಿಕ್ಷಣದ ವಿಷಯದಲ್ಲಿ ಅವನ ನಿಲುವು ಸ್ತ್ರೀ ವಿರೋಧಿಯಾಗಿರುವುದು ಕಂಡು ಬರುತ್ತದೆ. ಸ್ತ್ರೀಯರ ಸ್ವಭಾವ, ಆವಶ್ಯಕತೆಗಳಿಗೆ ತಕ್ಕಂಥ ಶಿಕ್ಷಣ ನೀಡಿ ಅವರನ್ನು ಬೆಳೆಸಬೇಕೆಂದೂ ಅಭಿಪ್ರಾಯ ಪಡುತ್ತಾನೆ.

ಫ್ರೆಂಚ್ ಕ್ರಾಂತಿಯ ಇನ್ನೊಬ್ಬ ಹರಿಕಾರನಾಗಿರುವ ಲಾಕ್ ‘ಸ್ತ್ರೀಯರು ಪುರುಷರಿಗಿಂತ ಗೌಣಸ್ಥಾನಿ, ಇದೆ ನಿಸರ್ಗ ನಿಯಮ’ವೆಂಬಂತೆ ಪ್ರತಿಪಾದಿಸಿದನು. ಅವನ ಎರಡು ಪ್ರಮುಖ ತತ್ವಗಳಾಗಿರುವ ವ್ಯಕ್ತಿ ಸಮೂಹದಲ್ಲಿ ಸಮಾನ ಹಕ್ಕುಗಳು ಇರಬೇಕೆನ್ನುವುದು ಹಾಗೂ ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ ಮಾಡುವುದು ಇವು ಸ್ತ್ರೀಯರಿಗೆ ಅನ್ವಯಿಸುವುದೇ ಇಲ್ಲ. ನವ ಸಮಾಜ ನಿರ್ಮಾಣದಲ್ಲಿ ಸ್ತ್ರೀಯರಿಗೆ ಅವಕಾಶ ಮಾಡಿಕೊಡಲಿಲ್ಲ. ಮನೆ, ಕುಟುಂಬ, ಸಮಾಜದಲ್ಲಿ ಪುರುಷ ಪ್ರಭುತ್ವವೇ ಅಂತಿಮವೆಂದು ಲಾಕ್ ಸಾರಿದ. ಇವರ ವಿಚಾರಧಾರೆಗಳನ್ನು ಗಮನಿಸಿದ ಡಾ.ಅಶ್ವಿನಿ ಧೋಂಗಡೆಯವರು “ಈ ಸ್ತ್ರೀವಾದಿ ತರ್ಕವನ್ನು ಪ್ರಜಾಪ್ರಭುತ್ವದ ನೆಲೆಗಳನ್ನು ರೂಪಿಸುವವರೇ ವಿರೋಧಿಸಿದ್ದು ಮಾತ್ರ ಅತ್ಯಂತ ದುರ್ದೈವದ ಸಂಗತಿ” ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಈ ವಿಚಾರವಾದಗಳಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಕಡೆಗಣಿಸಿರುವುದರ ವಿರುದ್ಧವಾಗಿ ಸ್ತ್ರೀವಾದದ ಆದಿ ಚಿಂತನೆಯು ಹುಟ್ಟಿರುವುದನ್ನು ಗಮನಿಸಬಹುದು. ಮೇರಿವುಲ್‌ಸ್ಟನ್ ಕ್ರಾಫ್ಟ್ (೧೭೫೯-೧೭೯೭) ಹದಿನೆಂಟನೆಯ ಶತಮಾನದ ಅಂತ್ಯದಲ್ಲಿ ಯುರೋಪಿನಾದ್ಯಂತ ಹರಡಿದ್ದ ರೂಸೋ, ಲಾಕ್‌ರ ವಿಚಾರಗಳಲ್ಲಿ ಮಾನವ ಸ್ವಾತಂತ್ರ್ಯ, ಸಮಾನತೆಯ ಪರಿಕಲ್ಪನೆಯಲ್ಲಿ ಸಮಾವೇಶಗೊಳ್ಳದ ಮಹಿಳೆಯರ ಪರವಾಗಿ ಹಕ್ಕೊತ್ತಾಯಗಳನ್ನು ಮುಂದಿಟ್ಟಳು. ತನ್ನ ಚರಿತ್ರಾರ್ಹ ಕೃತಿ ‘೦ ತುಟಿಜುಛಿಚಿಣುಠಿ ಠಜಿ ಡುಝಣ ಠಜಿ ತಿಠಟಜಟಿ’ (೧೭೯೧) ನಲ್ಲಿ ಸ್ತ್ರೀ ವಿಮುಕ್ತಿಯ

ಪ್ರಶ್ನೆಯನ್ನು ಎತ್ತಿದ್ದಾಳೆ. ಈ ಕೃತಿಯಲ್ಲಿ ಫ್ರಾನ್ಸ್ ಮಹಾಕ್ರಾಂತಿಯ ಆದರ್ಶಗಳನ್ನು ಸ್ತ್ರೀಯರ ಬದುಕಿನ ಹಿನ್ನೆಲೆಯಲ್ಲಿ ಚರ್ಚಿಸಿದ್ದಾಳೆ. ಮಾನವರೆಂದರೆ ಯಾರು? ಸ್ತ್ರೀಯರೂ ಮಾನವರಲ್ಲವೇ? ಅವರಿಗೂ ಪ್ರತಿಭಾ ವಿಕಾಸದ ಅವಕಾಶ ದೊರಿಯಬೇಕೆಂದು ಮೇರಿವುಲ್‌ಸ್ಟನ್ ಕ್ರಾಫ್ಟ್ ಪ್ರತಿಪಾದಿಸಿದಳು. ರೂಸೋ ಪ್ರತಿಪಾದಿಸಿದ ಗೃಹ ಶಿಕ್ಷಣದ ನೀತಿ ನಿಯಮಗಳನ್ನು ಬದಲಾಯಿಸಿ ಸ್ತ್ರೀಯರೂ ತತ್ವಶಾಸ್ತ್ರ, ತರ್ಕಶಾಸ್ತ್ರ, ಮತ್ತು ಗಣಿತ ಶಾಸ್ತ್ರಗಳನ್ನು ಅಭ್ಯಾಸ ಮಾಡಬೇಕು. ಆರ್ಥಿಕ, ರಾಜಕೀಯ ಕ್ಷೇತ್ರಗಳನ್ನು ಮಹಿಳೆ ಪ್ರವೇಶ ಮಾಡಬೇಕಾದರೆ ಅವಳಿಗೆ ದೈಹಿಕ ಶಕ್ತಿಯ ಅವಶ್ಯಕತೆಯಿದೆ; ಅದಕ್ಕಾಗಿ ಮಹಿಳೆಯರು ವ್ಯಾಯಾಮದಂತಹ ದೈಹಿಕ ಪರಿಶ್ರಮದತ್ತ ಗಮನಹರಿಸಬೇಕೆಂದು ಒತ್ತಾಯಪಡಿಸಿದಳು. ನಾಗರಿಕ ಶಿಕ್ಷಣ ಮಹಿಳೆಯರಿಗೂ ದೊರೆಯಬೇಕಾದ ಅನಿವಾರ್ಯತೆಯನ್ನು ಎತ್ತಿಹಿಡಿದಳು. ಲಿಂಗಭೇದ ನೀತಿಯಿಂದಾಗಿ ಮಹಿಳೆಯರು ದಾಸ್ಯಕ್ಕೆ ಒಳಗಾಗಿದ್ದಾರೆ ಎನ್ನುವ ಮೇರಿ, ಫ್ರೆಂಚ್ ಕ್ರಾಂತಿಯ ವಿಚಾರ ವಾದವನ್ನು ಮಾನವೀಯ ನೆಲೆಯಲ್ಲಿ ಶೋಧಿಸುವ ಪ್ರಯತ್ನವನ್ನು ಮಾಡಿದ್ದಾಳೆ. ಸ್ತ್ರೀವಾದಿ ಚಿಂತನೆಯ ಮೂಲ ಹೊಳವುಗಳನ್ನು ನೀಡಿದ ಮೇರಿ ವುಲ್ ಸ್ಟನ್ ಕ್ರಾಫ್ಟ್ ಫ್ರೆಂಚ್ ಕ್ರಾಂತಿಯು ರೂಪಿಸಿದ ಸಾಮಾಜಿಕ ನಿಯಮಗಳಲ್ಲಿ ಸ್ತ್ರೀಯರ ಸ್ಥಾನ-ಮಾನಗಳನ್ನು ಉತ್ಕೃಷ್ಟಗೊಳಿಸುವಲ್ಲಿ ತನ್ನದೇ ಮಹತ್ತರ ಕೊಡುಗೆಗಳನ್ನು ನೀಡಿದ್ದಾಳೆ.

ಫ್ರೆಂಚ್ ಕ್ರಾಂತಿಯು ಅಲ್ಲಿನ ಮಹಿಳಾ ಚಳುವಳಿಯ ಮೇಲೆ ಪ್ರಭಾವ ಬೀರಿದಂತೆ ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿ ಪ್ರಭಾವ ಬೀರಿದೆ. ಕೈಗಾರಿಕಾ ಕ್ರಾಂತಿಯಿಂದ ಮಹಿಳೆಯರಿಗೆ ಉದ್ಯೋಗಾವಕಾಶಗಳು ದೊರೆತರೂ ಅವರ ದುಡಿಮೆಗೆ ತಕ್ಕ ಸಮಾನ ವೇತನಕ್ಕಾಗಿ ಹೋರಾಟ ನಡೆಸಬೇಕಾಯಿತು. ಶಿಕ್ಷಣ ಕ್ಷೇತ್ರದಲ್ಲಿಯೂ ಮಹಿಳೆಯರಿಗೆ ಸಮಾನತೆ ಇರಲಿಲ್ಲ. ೧೮೭೭ರವರೆಗೂ ಮಹಿಳಾ ವೈದ್ಯರ ನೇಮಕವಾಗುತ್ತಿರಲಿಲ್ಲ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಂತಹ ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ಮಹಿಳೆಯರು ಪ್ರವೇಶ ಪಡೆಯುವುದಕ್ಕೆ ೧೯೨೦ರವರೆಗೆ ಕಾಯಬೇಕಾಯಿತು. ಅಷ್ಟು ಮಾತ್ರವಲ್ಲ, ೧೯೧೯ರವರೆಗೂ ಇಂಗ್ಲೆಂಡಿನಲ್ಲಿ ಮಹಿಳೆಯರಿಗೆ ವಕೀಲರಾಗುವ ಅವಕಾಶವಿರಲಿಲ್ಲ. ಇವೆಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯರು ಮತದಾನದ ಅಧಿಕಾರ ಪಡೆಯುವುದಕ್ಕಾಗಿ ೧೯೨೮ರ ವರೆಗೆ ಕಾಯಬೇಕಾಯಿತು. ಇದಕ್ಕಾಗಿ 'ಮತಾಧಿಕಾರದ ಚಳುವಳಿ' (Suffragist Movement)ಯನ್ನು ಮಹಿಳೆಯರು ನಡೆಸಬೇಕಾಯಿತು. ಸುಮಾರು ಎಪ್ಪತ್ತು ವರ್ಷಗಳ ಅವಿರತ ಹೋರಾಟದ ಫಲವಾಗಿ ಮಹಿಳೆಯರಿಗೆ ಮತದಾನದ ಹಕ್ಕು ದೊರೆಯಿತು. ಆರಂಭದಿಂದಲೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧಿಕಾರ, ಗರ್ಭಪಾತವನ್ನು ಕಾನೂನುಬದ್ಧಗೊಳಿಸುವುದು, ಉದ್ಯೋಗಾವಕಾಶ, ಆಯ್ಕೆಯ ಸ್ವಾತಂತ್ರ್ಯ ಈ ಮೊದಲಾದ ಹತ್ತು ಹಲವು ಸಮಸ್ಯೆಗಳನ್ನು ಆಧರಿಸಿ ಇಂಗ್ಲೆಂಡ್, ಅಮೇರಿಕಾ, ಕೆನಡಾ ಮೊದಲಾದ

ದೇಶಗಳಲ್ಲಿ ನಡೆದು ಬಂದ ಹೋರಾಟವು ಸ್ತ್ರೀವಾದಿ ಚಳುವಳಿಯು ಜಾಗತಿಕ ಮಟ್ಟದಲ್ಲಿ ರೂಪುಗೊಳ್ಳುವುದಕ್ಕೆ ಕಾರಣವಾಯಿತು.

೨.೩. ಸ್ತ್ರೀವಾದ - ಅರ್ಥ ಮತ್ತು ಪರಿಕಲ್ಪನೆ

ಸ್ತ್ರೀವಾದ-ಒಂದು ಬಗೆಯ ಅರ್ಥೈಸುವಿಕೆಯ ವಿಧಾನವಾಗಿದೆ. ಭಾವನಾತ್ಮಕ ತಿಳಿವಿನ ಮಟ್ಟವನ್ನು ಮೀರಿ ವಸ್ತುಸ್ಥಿತಿಯನ್ನು ಅದರ ನೈಜ ಸ್ವರೂಪದಲ್ಲಿಯೇ ನಿರಚನಗೊಳಿಸುವ ಚಿಂತನೆಯ ಕ್ರಮವಾಗಿದೆ. ಲಿಂಗಾಧಾರಿತ ಸಾಮಾಜಿಕ ವ್ಯವಸ್ಥೆಯು ಸೃಷ್ಟಿಸಿದ ಪರಂಪರಾಗತ ನಂಬಿಕೆ, ಆದರ್ಶಗಳ 'ಮಿಥ್' (ಒಥಿಣ್ಣು, - 'ಬಾಯಿ ಮಾತಿನ ಕಥೆ' ಎಂಬ ಅರ್ಥವುಳ್ಳ ಗ್ರೀಕ್ ನಿಷ್ಪತ್ತಿಯ ಪದ) ನ್ನು ಒಡೆದು ತೋರಿಸುವ ಸ್ತ್ರೀ ಪುರುಷರ ನಡುವಿನ ಸಂಬಂಧಗಳ 'ರಾಜಕಾರಣ' ಬಿಚ್ಚಿಡುವ 'ಸ್ತ್ರೀ ಸಾಂಸ್ಕೃತಿಕ ಮೌಲ್ಯ' (feminine cultural value) ಗಳನ್ನು ಆಧುನಿಕ ಜ್ಞಾನ, ವಿಜ್ಞಾನಗಳ ಬೆಳಕಿನಡಿ ಪುನರ್ ಶೋಧಿಸುವ ಕೆಲಸವನ್ನು ಮಾಡುತ್ತದೆ. 'ಮಾನವ ಜಗತ್ತಿನ ಅಧಿಕಾರ ಮತ್ತು ಸವಲತ್ತುಗಳು ಸ್ತ್ರೀ ಪುರುಷರಲ್ಲಿ ಸಮಾನವಾಗಿ ಹಂಚಿಕೆಯಾಗಬೇಕು' ಎಂಬ ಧ್ಯೇಯದೊಂದಿಗೆ ದೈನಂದಿನ ಜೀವನದಲ್ಲಿ ಮಹಿಳೆಯರು ಎದುರಿಸುವ ಭೌತಿಕ ಶೋಷಣೆ, ಮಾನಸಿಕ ಹಿಂಸೆಯ ಪರಿಸಮಾಪ್ತಿಗೆ ವ್ಯವಸ್ಥಿತ ಸಂಘಟನೆಯನ್ನು ಹುಟ್ಟು ಹಾಕುವುದು ಸ್ತ್ರೀವಾದದ ಪ್ರಮುಖ ಉದ್ದೇಶವಾಗಿತ್ತು. ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಯನ್ನು ತಂದುಕೊಡುವಲ್ಲಿ 'ಪ್ರಜ್ಞಾಜಾಗೃತಿ'ಯನ್ನುಂಟು ಮಾಡುವ ಈ ಸ್ತ್ರೀವಾದ, ಕಳೆದ ನಾಲ್ಕು ದಶಕಗಳಿಂದ ಪ್ರಮುಖ ರಾಜಕೀಯ, ಸಾಮಾಜಿಕ, ಸಾಹಿತ್ಯಕ ಚಳುವಳಿಯಾಗಿ ರೂಪು ಪಡೆದಿದೆ.

ಆಂಗ್ಲ ಭಾಷೆಯ 'ಫೆಮಿನಿಸಂ' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಸ್ತ್ರೀವಾದ' ಅಥವಾ 'ಮಹಿಳಾವಾದ' ಎಂಬ ಪದವು ಬಳಕೆಯಲ್ಲಿದೆ. ಪುರುಷರಿಗಿಂತ ಭಿನ್ನ ದೈಹಿಕ ಅರ್ಹತೆಗಳನ್ನು ಹೊಂದಿರುವ 'ಫೆಮಿನಾ' (femina) ಅರ್ಥಾತ್ 'ಹೆಂಗಸು' ಎಂಬ ಅರ್ಥವನ್ನು ಹೊಂದಿರುವ ಲ್ಯಾಟಿನ್ ಭಾಷೆಯ ಪದದಿಂದ 'ಫೆಮಿನಿಸಂ' ಹುಟ್ಟಿಕೊಂಡಿದೆ. ಅಸ್ತಿತ್ವವಾದ, ವಾಸ್ತವವಾದ ಮೊದಲಾದ 'ಇಸಂ'ಗಳಿಗೆ ಹೋಲಿಸಿದರೆ ಸ್ತ್ರೀವಾದದ ವ್ಯಾಪಕ ಸ್ವರೂಪವು ಸೈದ್ಧಾಂತಿಕ ನೆಲೆಗಳನ್ನು ಮೀರಿ ಬದುಕಿಗಾಗಿ ನಡೆಸುವ ಹೋರಾಟವಾಗಿ ಜನವಾಹಿನಿಯಲ್ಲಿ ಕಾಣಿಸಿಕೊಂಡಿದೆ.

ಸ್ತ್ರೀವಾದವನ್ನು ಅರ್ಥೈಸುವುದಕ್ಕೆ ಕೆಲವು ಪ್ರಮುಖ ಪರಿಕಲ್ಪನೆಗಳನ್ನು ಪೂರಕವಾಗಿ ಈ ಕೆಳಗಿನಂತೆ ಸಂಗ್ರಹಿಸಬಹುದು.

೧. ಸ್ತ್ರೀವಾದ - ಪುರುಷಾಧಿಪತ್ಯ ಹಾಗೂ ಮಹಿಳೆಯನ್ನು ಕೀಳಾಗಿ ನಡೆಸಿಕೊಳ್ಳುವ ಪುರುಷ ದಾರ್ಷ್ಟ್ಯ ಮನೋಭಾವದ ವಿರುದ್ಧವಾಗಿ ಹುಟ್ಟಿ ಬಂದ ಹೊಸ ಪ್ರಜ್ಞಾಜಾಗೃತಿ ಮತ್ತು ಭಾಷಿಕ ಪ್ರತಿರೋಧ.

೨. ಲಿಂಗ ವಿವಕ್ಷೆ ಸಾಂಸ್ಕೃತಿಕವಾಗಿ ರೂಪಿಸಲ್ಪಟ್ಟಿರುವುದೇ ಹೊರತು, ಜೈವಿಕವಾಗಿ ಅಲ್ಲ, ಮತ್ತು ಪುರುಷ ದೃಷ್ಟಿಕೋನದ ಚೌಕಟ್ಟಿನಲ್ಲಿ ಮಹಿಳೆಯರ ಸಾಮಾಜಿಕ ಗುಂಪನ್ನು ನ್ಯೂನ್ಯ ಲಿಂಗ (defective sex) ವೆಂದು ಪರಿಗಣಿಸುವ ಸಾಮಾಜಿಕ ತೀರ್ಮಾನವನ್ನು ಇದು ಪ್ರಶ್ನಿಸುತ್ತದೆ.

೩. ಹುಟ್ಟಿನಿಂದಲೇ ಬಂದ ಸಮಾನ ಜೈವಿಕ ಅರ್ಹತೆಯನ್ನು ಪಡೆದ ಒಂದು ಗುಂಪು ಅಥವಾ ಜೀವ ಸಮುದಾಯ, ಇನ್ನೊಂದು ಜೀವ ಸಮುದಾಯಕ್ಕಿಂತ ಶ್ರೇಷ್ಠ ಎಂಬ ಮೂಲ ಶ್ರೇಣೀಕರಣ ವ್ಯವಸ್ಥೆಯನ್ನು ತಿರಸ್ಕರಿಸುತ್ತದೆ.

೪. ಪಿತೃ ಪ್ರಧಾನ ಸಾಂಸ್ಥಿಕ ಸಂರಚನೆಯ ವ್ಯವಸ್ಥೆಯನ್ನು ನಾಶಪಡಿಸುವುದು, ತನ್ಮೂಲಕ ಲಿಂಗ ಸಮಾನತೆಯನ್ನು ಪ್ರತಿಪಾದಿಸುವುದು ಇದರ ಆಶಯ

೫. ಸಾಮಾಜಿಕವಾಗಿ ಸ್ವೀಕರಿಸಲ್ಪಟ್ಟ ಪರಂಪರಾಗತ ನಂಬಿಕೆ, ಮೌಲ್ಯ, ಸಂಪ್ರದಾಯಗಳಲ್ಲಿ ವ್ಯಕ್ತವಾಗಿರುವ ಪೂರ್ವಾಗ್ರಹ ಮತ್ತು ಸಂಕುಚಿತ ಮನೋಭಾವನೆಗಳನ್ನು ಪುನರ್ ವಿವೇಚನೆಗೆ ಒಳಪಡಿಸುವುದು-ಇತ್ಯಾದಿ ಪರಿಕಲ್ಪನೆಗಳು ಸ್ತ್ರೀವಾದದಲ್ಲಿ ಸಮನ್ವಯಗೊಂಡಿದೆ.

ಸ್ತ್ರೀವಾದದ ಸಮಗ್ರ ಸ್ವರೂಪವನ್ನು ತಿಳಿಯುವಲ್ಲಿ ಈ ಕೆಳಗಿನ ವ್ಯಾಖ್ಯಾನಗಳು ಸಹಕಾರಿಯಾಗಬಲ್ಲವು.

೧. **ಬಾರ್ಬರಾ ಸ್ಮಿಥ್ (೧೯೨೯)** – "ಸ್ತ್ರೀವಾದ ಒಂದು ರಾಜಕೀಯ ಸಿದ್ಧಾಂತ. ಮಹಿಳಾ ಸ್ವಾತಂತ್ರ್ಯದ ಒಂದು ದನಿ. ವರ್ಣಾಧಾರಿತ ವಿಭಜನೆಗೆ ಒಳಗಾದ ಮಹಿಳೆಯರು ಕೂಲಿಕಾರ ಮಹಿಳೆಯರು, ಬಡ ಮಹಿಳೆಯರು, ಅಂಗವಿಕಲ ಮಹಿಳೆಯರು, ಲೆಸ್ಬಿನಿಯನ್ಸ್, ವೃದ್ಧ ಮಹಿಳೆಯರು, ಗೃಹಿಣಿಯರು-ಇವರೆಲ್ಲರನ್ನೂ ಒಳಗೊಂಡಿರುವಂತದ್ದು ಮತ್ತು ಇವರೆಲ್ಲರ ಸ್ವ- ಅಭ್ಯುದಯ (Self aggrandizement) ವನ್ನು ಬಯಸುವುದೇ ಸ್ತ್ರೀವಾದ" ಎನ್ನುತ್ತಾರೆ.

೨. **ರಿಬೇಕಾ ಲೇವಿನ್ (೧೯೮೩)**- "ಇದುವರೆಗೂ ಪುರುಷರು ಹೊಂದಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಧಿಕಾರ ಮತ್ತು ಅವಕಾಶಗಳನ್ನು ಮಹಿಳೆಯೂ ಸರಿಸಮಾನವಾಗಿ ಪಡಯಬೇಕೆಂದು ಕರೆ ನೀಡುವ, ಸಾಮಾಜಿಕ ಸಮಾನತೆಯ ರಾಜ್ಯ ಪರಿಕಲ್ಪನೆಯ ಮಾದರಿ ರೂಪವೇ ಸ್ತ್ರೀವಾದ. ಇದೊಂದು ಆದರ್ಶ ಅಥವಾ ಜಗತ್ತು ಈವರೆಗೂ ಕಾಣದೇ ಇರುವ ಇಚ್ಛಿತ ಪರಿಪೂರ್ಣತೆಯ ಗುಣಮಟ್ಟ" ಎಂದು ಅಭಿಪ್ರಾಯ ಪಡುತ್ತಾರೆ.

ಪಾಶ್ಚಾತ್ಯ ಸ್ತ್ರೀವಾದ ವರ್ಗ ಪ್ರಶ್ನೆ ಹಾಗೂ ವರ್ಣಪ್ರಶ್ನೆಯಿಂದ ಹುಟ್ಟಿಕೊಂಡದ್ದು. ಭಾರತೀಯ ಸ್ತ್ರೀವಾದ ಕುಟುಂಬ ಮೂಲದಿಂದ ಬಂದದ್ದು. ಇಲ್ಲಿ ಜಾತಿ, ವರ್ಗದ ಚಿಂತನೆಯನ್ನು ಗಮನಿಸ ಬಹುದು.

೩. ಡಾ. ಬಿ.ಎಸ್. ಸುಮಿತ್ರಾಬಾಯಿ-'ಸ್ತ್ರೀವಾದ' ಅಥವಾ 'ಫೆಮಿನಿಸಂ' ಎನ್ನುವುದು ಒಂದು ರಾಜಕೀಯ ಸಿದ್ಧಾಂತ. ಅದು ಸ್ತ್ರೀಪುರುಷರ ನಡುವಿನ ಲಿಂಗಾಧಾರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೇ ಅದರ ಮುಖ್ಯವಾದ ಕಾರ್ಯವಿಧಾನವಾಗಿದೆ.

ಈ ಮೇಲಿನ ವ್ಯಾಖ್ಯಾನಗಳು ನಿರೂಪಿಸುವ ತತ್ವ ವಿಚಾರಗಳು ಪ್ರಾಯಶಃ ಜಗತ್ತಿನ ಎಲ್ಲಾ ಮಹಿಳೆಯರಿಗೂ ಅನ್ವಯಿಸುವಂಥದ್ದು. ಲಿಂಗಾಧಾರಿತ ಅಸಮಾನತೆ, ಶೋಷಣೆ, ದೌರ್ಜನ್ಯ ಎಲ್ಲಾ ಸಮಾಜದಲ್ಲಿಯೂ ಇದೆ. ಮಹಿಳೆಯರ ಸಮಸ್ಯೆಗಳು ಹಲವಾದರೂ, ಶೋಷಣೆಯ ಮೂಲ ಮಾತ್ರ ಒಂದೆ.

ಬಿ.ಎನ್. ಸುಮಿತ್ರಾಬಾಯಿಯವರು ಹೇಳುವ ಹಾಗೆ, "ಸ್ತ್ರೀವಾದವು ಒಂದೇ ಸಮಸ್ಯೆಯ ಸುತ್ತ ಬೆಳೆದ ಏಕಪ್ರಕಾರದ, ಏಕಸೂತ್ರದ ವಿಚಾರಧಾರೆಯಾಗಿರದೆ, ಕಾಲ, ದೇಶ, ರಾಜಕೀಯ ಶಕ್ತಿ, ಭಾಷೆ, ವರ್ಗ, ಜನಾಂಗ ಮುಂತಾದ ರೀತಿಗಳಲ್ಲಿ ಮಹಿಳಯರ ಬೇರೆ ಬೇರೆ ಪರಿಸ್ಥಿತಿಗಳಿಗೆ ತಕ್ಕಂತೆ ಬೇರೆ ಬೇರೆಯಾದ ಸಮಸ್ಯೆಗಳ ತಳಹದಿಯ ಮೇಲ ಬೆಳೆದಂತೆ ಬಹುರೂಪದ ಚಿಂತನೆಗಳನ್ನೊಳಗೊಂಡಿದೆ"[೬] ಸಾಂಪ್ರದಾಯಿಕ ದೃಷ್ಟಿ ಪ್ರಾಧಾನ್ಯತೆಯನ್ನು ಹೊಂದಿರುವ ಭಾರತದಂತಹ ರಾಷ್ಟ್ರಗಳಲ್ಲಿ ಸ್ತ್ರೀವಾದವು 'ಸಂಸ್ಕೃತಿ' ಮತ್ತು 'ಮೌಲ್ಯ ವ್ಯವಸ್ಥೆ'ಯೊಂದಿಗೆ ಮೊದಲು ಮುಖಾಮುಖಿಯಾಗಬೇಕಾಗುತ್ತದೆ. ನಮ್ಮಲ್ಲಿ ಸಂಸ್ಕೃತಿಯು ವ್ಯಕ್ತಿಗಿಂತ ಸಮಾಜದ ಭಾಗವಾಗಿದೆ. ಇಲ್ಲಿ ವ್ಯಕ್ತಿಮೌಲ್ಯಕ್ಕಿಂತಲೂ ಸಾಮಾಜಿಕ ಮೌಲ್ಯವೇ ಪ್ರಧಾನ. ಸಂಸ್ಕೃತಿಯ ಸ್ಥಗಿತ ಮತ್ತು ಚಲನಶೀಲ ಸ್ಥಿತಿಗಳ ವೈರುಧ್ಯದ ನಡುವೆಯೂ ಅದರ ತಾತ್ವಿಕ ವೈಚಾರಿಕ ಪ್ರಶ್ನೆಗಳಿಗೆ ಉತ್ತರಿಸುವ ಕಸುವನ್ನು ಸ್ತ್ರೀವಾದ ತುಂಬಿಸಿಕೊಳ್ಳಬೇಕಾಗಿದೆ. ಭಾರತೀಯ ಸಂದರ್ಭದಲ್ಲಿ ಸ್ತ್ರೀವಾದವನ್ನು 'ಹೊಸ ಅರಿವು' 'ಪ್ರಜ್ಞೆ' ಎಂದು ವ್ಯಾಖ್ಯಾನಿಸಬಹುದು. "ಸಮಾಜದಲ್ಲಿ ಉದ್ಯೋಗದಲ್ಲಿ ಮತ್ತು ಕುಟುಂಬಗಳಲ್ಲಿ ಮಹಿಳೆಯರ ತುಳಿತ ಮತ್ತು ಶೋಷಣೆಯ ಬಗ್ಗೆ ಅರಿವು ಮೂಡಿಸಿ ಈ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕಾಗಿ ಪುರುಷರು ಮತ್ತು ಮಹಿಳೆಯರು ಸೇರಿ ನಡೆಸುವ ಪ್ರಜ್ಞಾಪೂರ್ವಕ ಕ್ರಿಯೆಯೇ ಸ್ತ್ರೀವಾದ"[೭] ವೆಂದು ಗುರುತಿಸಬಹುದು ಎಂಬುದಾಗಿ ವಿಜಯಲಕ್ಷ್ಮಿ ಕೆ. ಎಂ. ಅಭಿಪ್ರಾಯ ಪಡುತ್ತಾರೆ ಮಾತ್ರವಲ್ಲ, ಇದನ್ನೊಂದು ಪ್ರಭಾವೀ ಸಿದ್ಧಾಂತವೆಂದೂ ಪರಿಗಣಿಸಿರುತ್ತಾರೆ. "ಲಿಂಗಾಧಾರಿತ ಮೌಲ್ಯವ್ಯವಸ್ಥೆಯ ವಿರುದ್ಧವಾದ ರಾಜಕೀಯ, ಆರ್ಥಿಕ ಸಾಮಾಜಿಕ ಹೋರಾಟದ ಸಿದ್ಧಾಂತ ರೂಪವೇ ಸ್ತ್ರೀವಾದ".[೮] ಎಲ್ಲಕ್ಕಿಂತ ಹೆಚ್ಚಾಗಿ ಸ್ತ್ರೀವಾದವೂ ಮಾನವತಾವಾದವೇ ಆಗಿದೆ. ಸ್ತ್ರೀ ಪುರುಷರ ಸಂಬಂಧಗಳ ಮಾನವೀಯ ಸ್ವರೂಪದ ಶೋಧವನ್ನು ಇದು ನಡೆಸುತ್ತದೆ. ಕೌಟುಂಬಿಕ ಸ್ವಾಸ್ಥ್ಯ,

ಐಕ್ಯತೆಯ ನೆಪದಲ್ಲಿ ಅಳು ನುಂಗಿಕೊಂಡು ಬದುಕುವ 'ಸಹನಶೀಲೆ'ಯರ ಒಳಮನಸ್ಸನ್ನು ಅರಿಯಲು ಸ್ತ್ರೀವಾದವೇ ಬೇಕು. ಮಹಿಳಾ ಬದುಕಿನ ಹಲವು ಮಗ್ಗುಲುಗಳನ್ನು ತನ್ನೊಳಗೆ ಸೇರಿಸಿಕೊಂಡು ಬೆಳೆಯುವ ಸ್ತ್ರೀವಾದ, ಸೈದ್ಧಾಂತಿಕ ಸ್ವರೂಪವನ್ನು ನಿರ್ದಿಷ್ಟ ಚೌಕಟ್ಟಿಗೆ ಅನ್ವಯಿಸಿ ನಿರ್ಣಯಿಸಲು ಸಾಧ್ಯವಿಲ್ಲ. ಅದರ ವ್ಯಾಪಕತೆ ಇಂದು-ಹಿಂದು–ಮುಂದನ್ನು ಆವರಿಸಿರುವಂತದ್ದು. ಅದರ ತೀಕ್ಷ್ಣ ಜ್ಞಾನ ಪ್ರಖರತೆ ಶತ ಶತಮಾನಗಳಿಂದ ಮಹಿಳಾ ಅನುಭವದ ಬೇರಿನ ಗದ್ದಲನ್ನು ತೆರೆದು ತೋರಿಸುವಂತದ್ದು. ಪಾಶ್ಚಾತ್ಯರು ರೂಪಿಸಿರುವ ಸ್ತ್ರೀವಾದದ ತಾತ್ವಿಕ ಚೌಕಟ್ಟು ಭಾರತೀಯವೆನಿಸುವ ಸಾಂಸ್ಕೃತಿಕ ಪರಿಸರಕ್ಕೆ ಸಂಪೂರ್ಣವಾಗಿ ಒಗ್ಗಿಕೊಳ್ಳಲು ಇನ್ನೂ ಹಲವು ದಶಕಗಳು ಬೇಕೆನಿಸಿದರೂ, ಅದರ ಪ್ರಯತ್ನ ಪ್ರಭಾವ ನಿತ್ಯ ನಿರಂತರವಾಗಿದೆ. ಮಹಿಳೆಯರ ಸಮಸ್ಯೆಗಳು ಎಂದೂ ಸಾಯುವುದಿಲ್ಲ. ಅದನ್ನು ಪ್ರಶ್ನಿಸುವ ನೈತಿಕ ಧೈರ್ಯವಿರುವುದು ಸ್ತ್ರೀವಾದಕ್ಕೆ ಮಾತ್ರ. ನಿಶ್ಚಿತ ಕಾಲಘಟ್ಟಕ್ಕೆ ಸ್ತ್ರೀ ವಾದವನ್ನು ಅನ್ವಯಿಸಿ ಹೇಳುವುದು ಎಷ್ಟರಮಟ್ಟಿಗೆ ಸಮಂಜಸ? ದಿನದಿಂದ ದಿನಕ್ಕೆ ವಿಭಿನ್ನ ನೆಲೆಗಳಲ್ಲಿ ಸ್ತ್ರೀ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವುದರಿಂದ ಆಯಾಯ ಸಾಂಸ್ಕೃತಿಕ, ಸಮಸ್ಯಾತ್ಮಕ ಸ್ವರೂಪಕ್ಕೆ ಹೊಂದಿಕೊಂಡು ರೂಪಿತವಾಗುವ ಸ್ತ್ರೀವಾದ ತನ್ನದೇ ಆದ ಜೀವಂತಿಕೆಯನ್ನು ಉಳಿಸಿಕೊಂಡು ಬೆಳೆಯುವ ಅವಶ್ಯಕತೆಯಿದೆ.

೨.೪. ಸ್ತ್ರೀವಾದಿ ಚಳುವಳಿಯ ಸ್ವರೂಪ

ವ್ಯಕ್ತಿ ತನ್ನನ್ನು ಸಮೂಹವೊಂದರ ಜೊತೆ ಸಮೀಕರಿಸಿಕೊಳ್ಳುವಂತೆ ನಡೆಸುವ ತೀವ್ರತರವಾದ ಹೋರಾಟವನ್ನು 'ಚಳವಳಿ' ಅಥವಾ 'ಮೂವ್‌ಮೆಂಟ್' ಎಂದು ಕರೆಯಲಾಗಿದೆ. ಹಳೆಯ ಫ್ರೆಂಚ್ ಭಾಷೆಯ 'ಮೂವಿಯರ್' ಎಂಬ ಶಬ್ದದಿಂದ ಇಂಗ್ಲಿಷ್ ಭಾಷೆಯ 'ಮೂವ್‌ಮೆಂಟ್' ಶಬ್ದ ನಿಷ್ಪನ್ನಗೊಂಡಿದೆ. ಸಮುದಾಯವೊಂದರಲ್ಲಿ ನೆಲೆಯಾಗಿರುವ ಸ್ಥಿರೀಕೃತ ಚಿಂತನೆಗಳು, ಹಲವಾರು ಮೌಲ್ಯಗಳು, ಆದರ್ಶ, ನಂಬಿಕೆಗಳು ಶತಮಾನಗಳವರೆಗೆ ಬದಲಾಗದೆ, ಪ್ರಶ್ನಿಸಲ್ಪಡದೆ ರೂಢಿಗತವಾಗಿ ಆಚರಿಸಲ್ಪಡುತ್ತಿದ್ದರೆ ಅಂತಹ ಸಮಾಜವು ಕೊಚ್ಚೆ ಕೆಸರು ತುಂಬಿದ ನೀರಾಗುತ್ತದೆ, ಜಡವಾಗುತ್ತದೆ, ಕಳಾಹೀನವಾಗುತ್ತದೆ. ಆಗ ಘರ್ಷಣೆ, ಸಂಘರ್ಷ, ವಿಮುಖತೆ, ಅತೃಪ್ತಿ, ಮತ್ತು ಇರುವ ಸಂದರ್ಭಗಳಿಗೆ ಪ್ರತಿಭಟನೆ ಸೂಚಿಸುವಿಕೆ, ಬದಲಾವಣೆಗಳನ್ನು ವಿರೋಧಿಸುವಿಕೆ ಮುಂತಾದ ಹಲವು ಪ್ರಕ್ರಿಯೆಗಳು ಏರ್ಪಡುತ್ತವೆ. ಇವೇ ಚಳುವಳಿಯೊಂದರ ಆವಿರ್ಭಾವಕ್ಕೆ ಕಾರಣ.

'ಚಳುವಳಿ'ಯೊಂದು ಹುಟ್ಟುವುದಕ್ಕೆ ಕಾರಣೀಭೂತವಾದ ಸಾಮಾಜಿಕ ಸನ್ನಿವೇಶಗಳ ಅಧ್ಯಯನಕ್ಕೆ ಪೂರಕವಾಗಿ ಸಮಾಜಶಾಸ್ತ್ರಜ್ಞರು ಕೆಲವು ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಾರೆ. ಇವುಗಳಲ್ಲಿ,

ಒತ್ತಡ ಸಿದ್ಧಾಂತ (ಸ್ಟ್ರೈನ್ ಥಿಯರಿ)

ಪುನಶ್ಚೈತನ್ಯ ಸಿದ್ಧಾಂತ (ರೆವಿಟಲೈಜೇಷನ್ ಥಿಯರಿ)

ತಾರತಮ್ಯ ನಷ್ಟ ಸಿದ್ಧಾಂತ (ದಿ ರಿಲೇಟಿವ್ ಡಿಪ್ರಿವೇಶನ್ ಥಿಯರಿ) ಇತ್ಯಾದಿಗಳು ಮುಖ್ಯವಾಗಿವೆ. ಚಳವಳಿಗೂ, ಸಮಾಜಕ್ಕೂ ಇರುವ ಅವಿನಾಭಾವ ಸಂಬಂಧವೇ ಇಲ್ಲಿನ ಅಧ್ಯಯನದ ಕೇಂದ್ರ ದೃಷ್ಟಿಯಾಗಿದೆ.

"ಒತ್ತಡ ಸಿದ್ಧಾಂತ" ದ ಪ್ರಕಾರ ಚಳುವಳಿಯೊಂದು ಹುಟ್ಟುವುದಕ್ಕೆ ಸಾಮಾಜಿಕ ಒತ್ತಡವೇ ಕಾರಣ. ಸಮುದಾಯವು ಉಸಿರುಗಟ್ಟುವ ವಾತಾವರಣದಲ್ಲಿ ಬದುಕುವ ಪರಿಸ್ಥಿತಿ ಏರ್ಪಟ್ಟಾಗ ಅದರ ಪ್ರತಿಕ್ರಿಯೆ ಚಳುವಳಿಯ ರೂಪವನ್ನು ಪಡೆಯುತ್ತದೆ ಎಂದು ಈ ಸಿದ್ಧಾಂತವು ಪ್ರತಿಪಾದಿಸುತ್ತದೆ. ಉದಾಹರಣೆಗೆ ಜಾತಿ ವ್ಯವಸ್ಥೆ, ವರ್ಣಾಶ್ರಮ ಧರ್ಮಗಳೇ ಜಾತಿಗಳಾಗಿ ಪರಿವರ್ತನೆ ಹೊಂದಿದವು. ಜಾತಿ ವ್ಯವಸ್ಥೆ ಆರಂಭದಲ್ಲಿ ಕಳಂಕವೆನಿಸುವ ಸ್ಥಿತಿಯಲ್ಲಿರಲಿಲ್ಲ. ಸಾಮಾಜಿಕ ಸ್ವೀಕೃತಿಯನ್ನೂ ಪಡೆದಿದ್ದವು. ಆದರೆ ಸಾಮಾಜಿಕ ಪ್ರಜ್ಞೆಯ ವಿಕಾಸದಿಂದಾಗಿ ಅಸ್ಪೃಶ್ಯತೆಯಂತಹ ಕ್ರೂರ ಪದ್ಧತಿಯಿಂದಾಗಿ ಶೋಷಣೆಗೆ ಸಾಮಾನ್ಯ, ನಿಮ್ನವರ್ಗದ ಜನರು ಒಳಗಾಗಬೇಕಾಯಿತು. ಸಮಾಜದಲ್ಲಿ ಉಸಿರುಗಟ್ಟಿ ಬಾಳುವಂಥ ಪರಿಸ್ಥಿತಿ ಎದುರಾಯಿತು. ಇಂತಹ ಅನ್ಯಾಯಗಳ ವಿರುದ್ಧ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ರಂತಹ ಮಹಾನುಭಾವರು ಸಾಮಾಜಿಕ ಆಂದೋಲನಗಳನ್ನು ಹುಟ್ಟು ಹಾಕಿದರು. ಜಡಗಟ್ಟಿದ ಸಮಾಜದ ಪರಂಪರಾಗತ ದೃಷ್ಟಿಕೋನಗಳನ್ನು ಪುನರ್‌ವಿವೇಚನೆಗೆ ಒಳಪಡಿಸುವ ಸಾಮಾಜಿಕ ಚಳುವಳಿಗಳು ರೂಪುಗೊಂಡವು.

ತೀವ್ರವಾದ ಸಾಮಾಜಿಕ, ಸಾಂಸ್ಕೃತಿಕ ಒತ್ತಡದಿಂದ ಹುಟ್ಟಿಕೊಂಡ ಸ್ತ್ರೀವಾದಿ ಚಳುವಳಿ ಶೋಷಣಾತ್ಮಕವಾದ ಲಿಂಗ ಅಸಮಾನತೆಯ ಸಂರಚನೆಯನ್ನು ವಿರೋಧಿಸುತ್ತದೆ. ಇತರ ಸಾಮಾಜಿಕ ಚಳುವಳಿಗೆ ಹೋಲಿಸಿದರೆ ಸ್ತ್ರೀವಾದಿ ನೆಲೆಯಿಂದ ಹುಟ್ಟಿದ ಹೋರಾಟವು ಹೆಚ್ಚು ಕಡಿಮೆ ಭಿನ್ನವಾಗಿಯೇ ನಿಲ್ಲುತ್ತದೆ. ವರ್ಗಾಧಾರಿತ, ವರ್ಣಾಧಾರಿತ ಸಾಮಾಜಿಕ ಚಳುವಳಿಯು ಒಟ್ಟು ವ್ಯವಸ್ಥೆಯ ಶೋಷಣಾತ್ಮಕ ವಲಯದಿಂದ ಸಿಡಿದು ಬೇರೆಯಾಗಿ ನಿಂತು ತಮ್ಮ ಅಸ್ತಿತ್ವವನ್ನು ಸಾಧಿಸಿಕೊಳ್ಳಲು ಬಯಸುತ್ತದೆ. ಶೋಷಣೆಯ ಶೋಧ ಪ್ರಕ್ರಿಯೆಯಲ್ಲಿ ದೌರ್ಜನ್ಯಕ್ಕೆ ಒಳಪಡುವ ಮತ್ತು ಒಳಪಡಿಸುವ ಸಮುದಾಯದ ನಡುವೆ ಇರುವ ಸ್ಪಷ್ಟ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಿದೆ. ಆದರೆ ಸ್ತ್ರೀವಾದಿ ಚಳುವಳಿಯಲ್ಲಿ ಹಾಗಾಗುವುದಿಲ್ಲ. ಎನ್. ಗಾಯತ್ರಿಯವರು ಹೇಳುವ ಹಾಗೆ, "ಶೋಷಿತರ ಹಾಗೂ ಶೋಷಕರ ಸ್ಪಷ್ಟವಾದ ವ್ಯತ್ಯಾಸವನ್ನು ಸ್ತ್ರೀವಾದದಲ್ಲಿ ಗುರುತಿಸಲು ಸಾಧ್ಯವಾಗುವುದಿಲ್ಲ. ಪುರುಷ ಪ್ರಾಧಾನ್ಯತೆಯನ್ನು ವಿರೋಧಿಸುವ ದೃಷ್ಟಿಯೇ ಇಲ್ಲಿ ಪ್ರಧಾನವಾದರೂ ಪುರುಷದ್ವೇಷವನ್ನು ಇದು ಪ್ರಚೋದಿಸುವುದಿಲ್ಲ. ಮಹಿಳೆಯರ ಸಮಸ್ಯೆಗಳು ಬಹುಮಟ್ಟಿಗೆ ಪುರುಷರೊಂದಿಗೆ

ಅವರ ಸಂಬಂಧಗಳ ಮೂಲಕ ಹುಟ್ಟಿರುವಂಥದ್ದು"[೧೦] ಎನ್ನುವ ನೈಜ ಪರಿಜ್ಞಾನ ಸ್ತ್ರೀವಾದಿ ಚಳುವಳಿಗಿದೆ. ತಂದೆ, ಸಹೋದರ, ಪತಿ, ಮಗ - ಹೀಗೆ ಹಲವು ಆಪ್ತ ಸಂಬಂಧಗಳ ಮೂಲಕ ಮಹಿಳೆಯ ಜೀವನವನ್ನು ಪ್ರವೇಶಿಸುವ ಪುರುಷ ಅನನ್ಯವಾಗಿ ಮಹಿಳೆಯನ್ನೇ ಅವಲಂಬಿಸಿದ್ದಾನೆ. ಸ್ತ್ರೀ ಪುರುಷ ಸಂಬಂಧಗಳ ಸಂಕೀರ್ಣತೆ ಕುಟುಂಬ ವ್ಯವಸ್ಥೆಯನ್ನು ರೂಪಿಸಿದೆ. ಕುಟುಂಬ ಹಾಗೂ ಸಾಮಾಜಿಕ ವ್ಯವಸ್ಥೆಯೇ ಸ್ತ್ರೀಯ ಬದುಕನ್ನು ನಿಯಂತ್ರಿಸುವುದರಿಂದ ಈ ನಿಯಂತ್ರಣದಿಂದ ಹೊರಬರಲು ಸ್ತ್ರೀಯು ತೀವ್ರವಾದ ಪ್ರತಿರೋಧವನ್ನು ಒಡ್ಡಬೇಕಾಗುತ್ತದೆ. "ಹುಟ್ಟಿನಿಂದಲೇ ಒಂದು ಗುಂಪು ಇನ್ನೊಂದು ಗುಂಪಿಗಿಂತ ಶ್ರೇಷ್ಠ ಎಂಬ ಮೂಲ ಶ್ರೇಣೀಕೃತ ವ್ಯವಸ್ಥೆಯನ್ನೇ ಸ್ತ್ರೀವಾದ ತಿರಸ್ಕರಿಸುತ್ತದೆ."[೧೧] ಈ ಹಿನ್ನೆಲೆಯಲ್ಲಿ ಸ್ತ್ರೀವಾದವನ್ನು 'ಪ್ರತಿರೋಧ ಸಾಮಾಜಿಕ ಚಳುವಳಿ' ಎನ್ನಬಹುದು. ಸಮಾಜ ಶಾಸ್ತ್ರಜ್ಞಎಡ್ವರ್ಡ್ ರಾಯ್ ಅಭಿಪ್ರಾಯ ಪಡುವಂತೆ, 'ಪ್ರತಿರೋಧ' ಉಂಟಾಗಲು ಇರುವ ಕಾರಣಗಳೆಂದರೆ,

೧. ಪ್ರಬಲ ಸಂಸ್ಕೃತಿ ಮತ್ತು ಅಧೀನ ಸಂಸ್ಕೃತಿಗಳ ನಡುವೆ ಸಾಂಸ್ಕೃತಿಕ ವಿಲೀನೀಕರಣ ಪ್ರಕ್ರಿಯೆ ಉಂಟಾದಾಗ,
೨. ಸಾಮಾಜಿಕ ಹೀನಸ್ಥಿತಿ ಮತ್ತು ಅತ್ಯಧಿಕಾಂಶದ ಆರ್ಥಿಕ ಶೋಷಣೆಯಿಂದ ಅಧೀನತೆ ಏರ್ಪಟ್ಟಾಗ,
೩. ಪ್ರಬಲ ಸಂಸ್ಕೃತಿಯೊಂದನ್ನು ಅನುಸರಿಸಲು ಕಂದರಗಳು ಏರ್ಪಟ್ಟಾಗ – ಸಾಮಾಜಿಕ ಪರಿಸರವೊಂದು ಪ್ರತಿರೋಧದ ಅರ್ಥವನ್ನು ಪಡೆಯುತ್ತದೆ.

ಇಲ್ಲಿ 'ಪ್ರಬಲ' ಮತ್ತು 'ಅಧೀನ' ಸಂಸ್ಕೃತಿಗಳು ಪರಸ್ಪರ ಪ್ರತಿಸ್ಪರ್ಧಿಗಳಲ್ಲ. ಅನುಕೂಲ ಮತ್ತು ಅಧಿಕಾರದ ಹಂಚಿಕೆಯಲ್ಲಿ ಅಧೀನ ಸಂಸ್ಕೃತಿಯ ನಿಲುವುಗಳನ್ನು ವಿರೋಧಿಸುತ್ತವೆ. 'ಪ್ರಧಾನ'ವು ಪ್ರಧಾನವಾಗಿಯೇ ಉಳಿದುಕೊಳ್ಳುವ ಸಾಮಾಜಿಕ ತಂತ್ರವನ್ನು ಬಯಲಿಗೆಳೆಯುತ್ತದೆ. ಪುರುಷನನ್ನು ಪ್ರಬಲ ಅಥವಾ ಪ್ರಧಾನವೆಂದೂ, ಸ್ತ್ರೀಯನ್ನು ಅಧೀನವೆಂದೂ ಪರಿಭಾವಿಸುವ ಸಂಸ್ಕೃತಿ ಮೀಮಾಂಸೆಗೆ ಸ್ತ್ರೀವಾದವು ವಿರೋಧವನ್ನು ಸೂಚಿಸುವುದರಿಂದ ಅದು ಪ್ರತಿರೋಧದ ಅರ್ಥವನ್ನು ಪಡೆಯುತ್ತದೆ.

ಮಹಿಳಾ ಚಳವಳಿಯ ಒಟ್ಟು ಸೈದ್ಧಾಂತಿಕ ಸ್ವರೂಪವೇ ಸ್ತ್ರೀವಾದವೆಂದು ಗುರುತಿಸಬಹುದು. ಆದರೆ ಈ ಚಳವಳಿಗೆ ಒಂದೇ ಸಾಮಾನ್ಯ ಸ್ವರೂಪವಿಲ್ಲ. ಅದರ ಭಿನ್ನ ಭಿನ್ನ ಆಶಯಗಳಿಗೆ ಭಿನ್ನ ಭಿನ್ನ ಸ್ವರೂಪವಿದೆ. ಸ್ತ್ರೀವಾದವು ಸೃಜಿಸಿಕೊಂಡ ಹೊಸ ಚಿಂತನೆಯ ಕ್ರಮಗಳು ಸಾಮಾಜಿಕ, ಸಾಹಿತ್ಯಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸ್ತ್ರೀಯ ಅಸ್ಮಿತೆಯನ್ನು ಗುರುತಿಸುವ 'ಚಳುವಳಿ'ಯಸ್ವರೂಪವನ್ನು ಪಡೆಯಿತು. ಅವುಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಸಾಮಾಜಿಕ ಚಳುವಳಿಯಾಗಿ ಸ್ತ್ರೀವಾದ

೨. ಸಾಹಿತ್ಯಕ ಚಳುವಳಿಯಾಗಿ ಸ್ತ್ರೀವಾದ

೩. ರಾಜಕೀಯ ಚಳುವಳಿಯಾಗಿ ಸ್ತ್ರೀವಾದ

೪. ಸಾಂಸ್ಕೃತಿಕ ಚಳುವಳಿಯಾಗಿ ಸ್ತ್ರೀವಾದ

೨.೪.೧. ಸಾಮಾಜಿಕ ಚಳುವಳಿಯಾಗಿ ಸ್ತ್ರೀವಾದ:

ಮಹಿಳೆಯರಿಗೆ ಸಾಮಾಜಿಕ ನ್ಯಾಯ ಒದಗಿಸುವುದೇ ಸ್ತ್ರೀವಾದದ ಮೂಲ ಆಶಯ. ಸಮಾಜ ಮಹಿಳೆಯನ್ನು ನಿರಂತರವಾಗಿ ಎರಡನೇ ದರ್ಜೆಯ ಪ್ರಜೆಯನ್ನಾಗಿ ಮಾಡಿದೆ. ಈ ಮೂಲಕ ಅವರನ್ನು ಹಲವು ಸಾಮಾಜಿಕ ಸವಲತ್ತುಗಳಿಂದ ವಂಚಿಸಿದೆ. ಸಾಮಾಜಿಕ ವಲಯದ ಪ್ರಧಾನ ವಾಹಿನಿಯಲ್ಲಿ ಗೈರು ಹಾಜರಾದ ಹೆಣ್ಣಿನ ವ್ಯಕ್ತಿತ್ವದ ಅಪಮೌಲ್ಯೀಕರಣ ನಿಸರ್ಗ ಸಹಜವೆಂಬಂತೆ ಕಂಡುಕೊಳ್ಳುವುದರೊಂದಿಗೆ ಬಸಿರು, ಹೆರಿಗೆ, ಬಾಣಂತನ, ಮಕ್ಕಳ ಲಾಲನೆ - ಪಾಲನೆ, ಪೋಷಣೆ, ಕುಟುಂಬದ ಇತರ ಸದಸ್ಯರ ಯೋಗಕ್ಷೇಮ ನೋಡಿಕೊಳ್ಳುವುದಕ್ಕಾಗಿಯೇ ಸೃಷ್ಟಿಯಾದ ಜೀವವೆಂದು ಆಕೆಯನ್ನು ಪರಿಗಣಿಸಿದೆ. ಧಾರ್ಮಿಕ ಕಟ್ಟುಪಾಡುಗಳು ಹೆಣ್ಣಿನ ಬದುಕನ್ನು ನಿಯಂತ್ರಿಸಿವೆ. ಅವಳ ಹಿತಾಸಕ್ತಿಯನ್ನು ನಿರ್ಬಂಧಿಸುವುದರೊಂದಿಗೆ ಸಂಸ್ಕೃತಿಯ ಹೊರೆ ಆಕೆಯ ಮೇಲೆ ಹೇರಲ್ಪಟ್ಟಿದೆ. ಮಹಿಳೆಯ ಬಗೆಗೆ ಪುರುಷ ಹೊಂದಿರುವ ಕೀಳು ಅಭಿಪ್ರಾಯ, ಭಾವನೆಗಳನ್ನು ಪ್ರಶ್ನಿಸುತ್ತಲೇ ಮಹಿಳೆಯ ಮೇಲಿನ ದೌರ್ಜನ್ಯ, ಶೋಷಣೆ, ಪುರುಷಾಧಿಕಾರದ ಏಕಸ್ವಾಮ್ಯತೆಯನ್ನು ಪ್ರತಿಭಟಿಸುವ ನೆಲೆಯಲ್ಲಿ ಸ್ತ್ರೀವಾದವು ಪ್ರಮುಖ ಸಾಮಾಜಿಕ ಚಳುವಳಿಯಾಗಿ ಕಾಣಿಸಿಕೊಳ್ಳುತ್ತದೆ.

ಲೈಂಗಿಕತೆ, ಸಂತಾನೋತ್ಪತ್ತಿಯ ಕಾರಣಗಳನ್ನು ನೀಡಿ ಹೆಣ್ಣಿನ ಮೇಲೆ ಪುರುಷ ನಡೆಸುವ 'ಅಧಿಪತ್ಯ'ವು 'ಸಾಮಾಜಿಕ ನ್ಯಾಯ' (Social Justice) ಪರಿಕಲ್ಪನೆಯ ಅಡಿಯಲ್ಲಿ ತೀವ್ರ ವಿವೇಚನೆಗೆ ಒಳಪಡುತ್ತದೆ. ವಿಚಾರ ಜಾಗೃತಿ ಮತ್ತು ಸಾಮಾಜಿಕ ಹಕ್ಕುಗಳಿಗಾಗಿ ಹೋರಾಟ – ಈ ಎರಡೂ ನೆಲೆಯಲ್ಲಿ ಸ್ತ್ರೀವಾದವು ಸಾಮಾಜಿಕ ಕ್ರಾಂತಿಗೆ ಆಹ್ವಾನ ನೀಡುತ್ತದೆ. ಕ್ರಾಂತಿ ಎನ್ನುವುದು 'ಸಾಮಾಜಿಕ ವ್ಯವಸ್ಥೆಯ ಬದಲಾವಣೆ'. ಸ್ತ್ರೀ - ಪುರುಷರ ನಡುವಿನ ಅಧಿಕಾರ ಹಾಗೂ ಅನುಭೋಗದ ಸಮಾನ ಹಂಚಿಕೆಯನ್ನು ಇದು ಪ್ರತಿಪಾದಿಸುತ್ತದೆ. "ತಾನು ಬದುಕುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಪುರುಷದೃಷ್ಟಿ ಮಾತ್ರವೇ ಪ್ರತಿನಿಧಿತವಾಗುತ್ತಿದ್ದರೆ ಅದರ ಮಿತಿಗಳನ್ನು ಒಡೆಯಲು ಸಕ್ರಿಯವಾದ ಚಳವಳಿ ಸ್ತ್ರೀಗೆ ಬೇಕಾಗುತ್ತದೆ"[೨] ಎಂಬ ಅನಿವಾರ್ಯತೆಯೊಂದಿಗೆ ಈ ಚಳುವಳಿ ಅಸ್ತಿತ್ವ

ಪಡೆದುಕೊಂಡಿತು. ಸ್ತ್ರೀಯರ ದಾಸ್ಯ, ಪರಾಧೀನತೆ, ಶೋಷಣೆಯ ಹಿಂದಿರುವ ಯಾಜಮಾನ್ಯ ಸಂಸ್ಕೃತಿಯ ಕ್ರೌರ್ಯವನ್ನು ಗುರುತಿಸುವ ಸಂಘಟನಾತ್ಮಕ ಪ್ರಯತ್ನದ ಫಲವಾಗಿಯೇ ಸ್ತ್ರೀವಾದಿ ಚಳುವಳಿ ಹುಟ್ಟಿಕೊಂಡಿತು.

೨.೪.೨. ಸಾಹಿತ್ಯಕ ಚಳುವಳಿಯಾಗಿ ಸ್ತ್ರೀವಾದ:

ಸಾಹಿತ್ಯಮುಖಿಯಾದ ಸ್ತ್ರೀವಾದಿ ಚಳುವಳಿಯು ಸಾಹಿತ್ಯ ಚಳುವಳಿಯ ಪ್ರಮುಖ ಘಟ್ಟವೆಂದೂ, ಸಾಹಿತ್ಯ ವಿಮರ್ಶೆಯ ಪ್ರಧಾನ ಮಾನದಂಡವೆಂದೂ ಪರಿಭಾವಿಸುತ್ತದೆ. ಈ ಚಳುವಳಿಯು ಕಳೆದು ಹೋದ, ಅವಜ್ಞೆಗೆ ಒಳಗಾದ ಮಹಿಳಾ ಸಾಹಿತ್ಯ ಶೋಧದ ಪ್ರಕ್ರಿಯೆಯತ್ತ ಆಂದೋಲನ ಕೈಗೊಳ್ಳುವುದರೊಂದಿಗೆ ಮಹಿಳಾ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡುತ್ತದೆ.

ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸುವ ನವೋದಯ, ಪ್ರಗತಿಶೀಲ, ನವ್ಯ, ದಲಿತ - ಬಂಡಾಯ ಘಟ್ಟಗಳಲ್ಲಿ ದಲಿತ-ಬಂಡಾಯ ಚಳವಳಿಯನ್ನೇ ಕೊನೆಯ ಘಟ್ಟವೆಂದು ಪರಿಗಣಿಸಲಾಗಿದ್ದು "ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆ, ಗ್ರಾಮೀಣ ಸಂವೇದನೆ"[೧೩] – ಇವು ಬಂಡಾಯ ಸಾಹಿತ್ಯದ ಪ್ರಮುಖ ಸಂವೇದನೆಗಳಾಗಿವೆ ಎಂದು ಗುರುತಿಸುವ ಪ್ರಯತ್ನ ನಡೆದಿದೆ.

ಅಸಮಾನತೆಯ ವಿರುದ್ಧದ ಹೋರಾಟದ ಮನೋಧರ್ಮವಾಗಿ ಬೆಳೆದ ಬಂಡಾಯ ಸಾಹಿತ್ಯವೇ ಸ್ತ್ರೀವಾದಿ ಚಳವಳಿಯ 'ತಾಯಿಬೇರು' ಎನ್ನುವುದರಲ್ಲಿ ಸಂಶಯವಿಲ್ಲ. ೧೨ನೇ ಶತಮಾನದ ವಚನ ಚಳವಳಿಯನ್ನು ಹೊರತುಪಡಿಸಿದರೆ ಮಹಿಳಾ ಸಾಹಿತ್ಯ ರಚನೆಗೆ ಕ್ರಿಯಾತ್ಮಕ ಬೆಂಬಲ ನೀಡಿರುವುದು ಬಂಡಾಯ ಸಾಹಿತ್ಯ ಚಳವಳಿಯೇ ಆಗಿದೆ. ಬಂಡಾಯ ಚಳವಳಿಯ ಆಶಿಯವಾಗಿದ್ದ ಜಾತಿಭೇದ ಹಾಗೂ ಲಿಂಗ ಭೇದದ ನಿರಾಕರಣೆಯ ಸ್ತ್ರೀವಾದವು ತನ್ನ ಸಾಹಿತ್ಯಕ ಸ್ವಂತಿಕೆ ಪಡೆದುಕೊಳ್ಳಲು ಮೂಲ ಆಕರವಾಯಿತು. ಯಾಜಮಾನ್ಯ ಸಂಸ್ಕೃತಿಯ ಸೋಗಲಾಡಿತನವನ್ನು ನೇರವಾಗಿ ತಿರಸ್ಕರಿಸುವ ಬಂಡಾಯ ಲೇಖಕರು ಮಹಿಳೆ ಪುರುಷನಿಗೆ ಸಮಾನವೆಂದು ಸಾರಿದರು. ದಲಿತ ಚಳುವಳಿಯು ಕೂಡಾ ಬಂಡಾಯ ಸಾಹಿತ್ಯದೊಂದಿಗೆ ಗುರುತಿಸಲ್ಪಟ್ಟಿತು. ಬಂಡಾಯ ಚಳುವಳಿಯಿಂದ ಪ್ರೇರಣೆ ಪಡೆದರೂ ಸ್ತ್ರೀವಾದಿ ಚಳುವಳಿಗೆ ತನ್ನದೇ ಆದ ವಿಶಿಷ್ಟ ಸಂವೇದನೆಗಳಿವೆ, ವಿಮರ್ಶೆಯ ಮಾನದಂಡಗಳಿವೆ. ಪುರುಷನಿಷ್ಠ ಕೃತಿ ವಿಮರ್ಶೆಯ ಮಾನದಂಡಗಳಿಗೆ ಪ್ರತಿಯಾಗಿ ತನ್ನದೇ ಆದ ಸ್ವತಂತ್ರ ವಿಮರ್ಶೆಯ ಮಾನದಂಡಗಳನ್ನು ಹೊಂದಲು ಬಯಸುವ ಸ್ತ್ರೀವಾದ, ಒಂದು ಕಾಲಘಟ್ಟದ ಜನಸಮುದಾಯದ

ಆಶಯಗಳಿಗೆ ಸ್ಪಂದಿಸಲು ಸಮರ್ಥವಾಗಿದ್ದು, ಸಾಹಿತ್ಯ ಚಳುವಳಿಯ ಪ್ರಮುಖ ಘಟ್ಟವೆಂದು ಪರಿಗಣಿಸಲು ಬೇಕಾದ ಎಲ್ಲಾ ರೀತಿಯ ಅರ್ಹತೆಯನ್ನು ಪಡೆದುಕೊಂಡಿದೆ.

ಸ್ತ್ರೀ ಸಾಹಿತ್ಯಶೋಧ, ಮಹಿಳೆಯರು ಸಾಹಿತ್ಯ ರಚಿಸುವಲ್ಲಿ ಪ್ರೋತ್ಸಾಹ, ಪುರುಷ ಹಾಗೂ ಮಹಿಳಾ ಸಾಹಿತ್ಯಕಾರರು ರಚಿಸಿದ ಸ್ತ್ರೀಸಂವೇದನೆಗಳ ಅಧ್ಯಯನ, ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆದ ಮಹಿಳಾ ಮಾದರಿಗಳ ಪುನರ್‌ಮೌಲ್ಯೀಕರಣ ಮುಂತಾದುವು ಸ್ತ್ರೀವಾದಿ ಚಳವಳಿಯ ಇತರ ಉದ್ದೇಶಗಳಾಗಿವೆ. ವಾಸ್ತವ ಬದುಕಿನ ತಾರತಮ್ಯಗಳೇ ಸಾಂಸ್ಕೃತಿಕವಾಗಿ, ಸಾಹಿತ್ಯದಲ್ಲೂ ಪ್ರತಿನಿಧೀಕರಣಗೊಳ್ಳುತ್ತವೆಯೆಂಬುದನ್ನು ಗುರುತಿಸಿದ ಸ್ತ್ರೀವಾದವು, ಸಾಹಿತ್ಯವನ್ನು ಈ ನಿಟ್ಟಿನಿಂದ ವಿಶ್ಲೇಷಿಸಿ ವಿಮರ್ಶಿಸುವ ಮೂಲಕ ಮಹಿಳಾ ಅಸ್ಮಿತೆಗೆ ಪ್ರಯತ್ನಿಸುತ್ತದೆ. ಸಾಹಿತ್ಯವನ್ನು ಈ ಹೊಸ ಪ್ರಜ್ಞೆಗೆ ಸಾಧನವಾಗಿ ಬಳಸಿಕೊಂಡಿದೆ. ಚರಿತ್ರೆಯಲ್ಲಿ ದಾಖಲಾಗದೆ ಉಳಿದಿರುವ ಮಹಿಳಾ ಕೃತಿಗಳನ್ನು ಶೋಧಿಸುವ ಕೆಲಸ ನಡೆಯಿತು. ಕನ್ನಡದ ಸಂದರ್ಭದಲ್ಲಿ ಹೇಳುವುದಾದರೆ ತಿರುಮಲಾಂಬ, ಕಲ್ಯಾಣಮ್ಮ, ಬೆಳಗೆರೆ ಜಾನಕಮ್ಮ, ಶ್ಯಾಮಲಾದೇವಿ ಮುಂತಾದವರ ಬದುಕು - ಬರಹಗಳನ್ನು ಗಮನಿಸಿ ಚರಿತ್ರೆಯನ್ನು ಪುನರ್‌ನಿರ್ಮಿಸುವ ಕೆಲಸ ಸ್ತ್ರೀವಾದಿ ಸಾಹಿತ್ಯ ಚಳುವಳಿಯಿಂದ ಸಾಧ್ಯವಾಯಿತು.

೨.೪.೩. ರಾಜಕೀಯ ಚಳುವಳಿಯಾಗಿ ಸ್ತ್ರೀವಾದ:

ಮಹಿಳಾ ಪ್ರಶ್ನೆ 'ರಾಜಕೀಯ ಪ್ರಶ್ನೆ'ಯಾಗಿ ಬದಲಾಗುವ ಅನಿವಾರ್ಯತೆಯನ್ನು ಸ್ತ್ರೀವಾದವು ಪ್ರತಿಪಾದಿಸುತ್ತದೆ. ಇಲ್ಲಿ 'ರಾಜಕೀಯ' ಎಂದರೆ ಚುನಾವಣಾ ರಾಜಕೀಯವಲ್ಲ. ಪ್ರಭುತ್ವರೂಪಿ ಶಕ್ತಿ ರಾಜಕಾರಣದ ಏಕಸ್ವಾಮ್ಯತೆಯನ್ನು ಭಂಜನಗೊಳಿಸುವ ಪ್ರಕ್ರಿಯೆಯಲ್ಲಿ ಮತ್ತು 'ಅಧಿಕಾರ' ರಾಜಕಾರಣವನ್ನು ಪ್ರಶ್ನಿಸುವ ನೆಲೆಯಲ್ಲಿ ಇದು ಹುಟ್ಟಿಕೊಂಡಿದೆ. ಈ ಅರ್ಥದಲ್ಲಿ ಸ್ತ್ರೀವಾದಿ ಚಳುವಳಿಯನ್ನು 'ರಾಜಕೀಯ ಚಳುವಳಿ' ಎಂದೇ ಕರೆಯಲಾಗಿದೆ. ಮಹಿಳೆಯರು ಸ್ವಾತಂತ್ರ್ಯ, ಸಮಾನತೆ, ಅಭಿವೃದ್ಧಿಯನ್ನು ಸಾಧಿಸಬೇಕಾದರೆ ರಾಜಕೀಯಾರ್ಥದ ಹೋರಾಟದ ನೆಲೆಯನ್ನು ಆಶ್ರಯಿಸಬೇಕಾಗುತ್ತದೆ. ಸಾಮಾನ್ಯವಾಗಿ ರಾಜಕಾರಣ, ಉದ್ಯೋಗ, ಮನರಂಜನೆ ಇತ್ಯಾದಿ ವಿಷಯಗಳು ಪುರುಷರಿಗಾಗಿಯೂ ಮತ್ತು ಅಡುಗೆ ಮನೆ, ಕುಟುಂಬ, ಮಕ್ಕಳು ಇವು ಸ್ತ್ರೀನಿಷ್ಠ ವಿಷಯಗಳೆಂದೂ ಬಹು ಕಾಲದಿಂದಲೂ ನಂಬಿಕೊಂಡು ಬರಲಾಗಿದೆ. ಈ ವರ್ಗೀಕರಣ ಸಂಸ್ಕೃತಿನಿಷ್ಠವಾದುದು. ಇದರ ಬಹುದೊಡ್ಡ ಅಪಾಯವೆಂದರೆ ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನವನ್ನು ನಿರಾಕರಿಸುವುದೇ ಆಗಿದೆ. ಈ ನಿರಾಕರಣೆಯ ಹಿಂದೆ ಇರುವ ಹುನ್ನಾರವೆಂದರೆ ಸಮಾಜವೆನ್ನುವ ಬಹು ಸಾಂಸ್ಕೃತಿಕ ವಲಯದಿಂದ ಮಹಿಳೆಯನ್ನು ಪ್ರತ್ಯೇಕಿಸುವುದು ಹಾಗೂ ಕುಟುಂಬವೆನ್ನುವ ಸಾಂಸ್ಥಿಕ ವಲಯಕ್ಕೆ ಸೀಮಿತಗೊಳಿಸುವುದು. ಈ ದೇಶ, ಭಾಷೆ,

ಸಂಸ್ಕೃತಿ, ಸಮಾಜ ಎಲ್ಲವನ್ನೂ ಸ್ತ್ರೀಪುರುಷರಿಬ್ಬರೂ ಕೂಡಿ ನಿರ್ಮಿಸಿರುವುದರಿಂದ ಇದರ ಸರ್ವ ಸವಲತ್ತನ್ನು ಸಮಾನವಾಗಿ ಅನುಭೋಗಿಸುವುದರಲ್ಲಿ ಇಬ್ಬರಿಗೂ ಸಮಾನವಾದ ಅರ್ಹತೆಯಿದೆ. ಇಂತಹ ಶ್ರೇಣೀಕರಣವೇ ಸಮಾಜದ, ರಾಷ್ಟ್ರದ ಪ್ರಗತಿಗೆ ಮಾರಕ. ಮಹಿಳಾ ಸಶಕ್ತೀಕರಣವೂ ಇದನ್ನೇ ಪ್ರತಿಪಾದಿಸಿ ಹೆಣ್ಣು ಮಕ್ಕಳ ಸ್ವಾಯತ್ತ ಬಹುಮುಖೀ ಸಮಾಜ ನಿರ್ಮಾಣಕ್ಕೆ ಕರೆ ನೀಡಿದೆ. ಮಹಿಳಾ ವಿಮೋಚನಾ ಹೋರಾಟ ಮಹಿಳಾ ಜಾಗೃತಿ ಈ ಮೊದಲಾದ ಎಲ್ಲಾ ಚಿಂತನೆಗಳ ಹಿನ್ನೆಲೆಯಲ್ಲಿ ರಾಜಕೀಯ ಸ್ವಾತಂತ್ರ್ಯದ ಧ್ವನಿಯೇ ಇದೆ. ಇದನ್ನು ಸಾಧಿಸುವ ಕಿಯಾತ್ಮಕ ಮಾರ್ಗವೇ ಚಳುವಳಿ ಅಥವಾ ಹೋರಾಟ ಎನಿಸಿಕೊಳ್ಳುತ್ತದೆ.

ಮೀಸಲಾತಿ, ಮಹಿಳಾ ವಿಧೇಯಕ ಮಂಡನೆ, ವರದಕ್ಷಿಣೆ, ಹೆಣ್ಣು ಶಿಶು ಹತ್ಯೆ, ಹೆಣ್ಣು ಭ್ರೂಣ ಹತ್ಯೆ, ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಮೊದಲಾದ ವಿಷಯಗಳಲ್ಲಿ ಮಹಿಳೆಗೆ ಒದಗಬೇಕಾದ ಸಂವಿಧಾನಾತ್ಮಕ ನ್ಯಾಯ, ಕಾನೂನು ತಿದ್ದುಪಡಿ ಮಾಡುವಲ್ಲಿ ಸರಕಾರದ ಮೇಲೆ ತೀವ್ರ ಒತ್ತಡ ತರುವಲ್ಲಿ ಸ್ತ್ರೀವಾದಿ ಚಳುವಳಿ ರಾಜಕೀಯ ಸಂಘಟನೆಗೆ ಕರೆ ನೀಡುತ್ತದೆ. ಎನ್. ಗಾಯತ್ರಿಯವರು ಹೇಳುವಂತೆ "ಮಹಿಳಾ ಚಳುವಳಿಯ ಭಾಷೆ ಮತ್ತು ಘೋಷಣೆಗಳನ್ನು ಸರಿಯಾದ ರೀತಿಯಲ್ಲಿ ಸರಕಾರಕ್ಕೆ ಮನವರಿಕೆ ಮಾಡುವುದು ಮತ್ತು ಮಹಿಳೆಯರ ದುಸ್ಥಿತಿ ಹೆಚ್ಚುತ್ತಿರುವಲ್ಲಿ ಸರಕಾರದ ನಿಷ್ಕ್ರಿಯತೆಯನ್ನು ಕುರಿತು ಅದರ ಸ್ವರೂಪವನ್ನು ಬಯಲು ಮಾಡಿ ಅದಕ್ಕೆ ಎದುರಾಗಿ ಕ್ರಿಯಾಶೀಲವಾಗುವುದು"[೨] ಇತ್ಯಾದಿ ಅಂಶಗಳು ಸ್ತ್ರೀಯರ ರಾಜಕೀಯಾತ್ಮಕ ಸಂಘಟನೆಯ ಮಹತ್ವವನ್ನು ತಿಳಿಸುತ್ತದೆ.

೨.೪.೪. ಸಾಂಸ್ಕೃತಿಕ ಚಳುವಳಿಯಾಗಿ ಸ್ತ್ರೀವಾದ:

ಸ್ತ್ರೀ ಸಾಂಸ್ಕೃತಿಕ 'ವೈಶಿಷ್ಟ್ಯ' ಹಲವು ಮೂಢನಂಬಿಕೆ ಅಂಧಾನುಕರಣೆ, ಸಾಂಸ್ಕೃತಿಕ ಕಟ್ಟು - ಪಾಡುಗಳ ಬಲೆಯನ್ನು ಹೆಣೆದುಕೊಂಡಿದೆ. ಸಿಮೋನ್ ದಿ ಬುವಾ ಹೇಳುವಂತೆ, 'ಯಾರೂ ಹೆಣ್ಣಾಗಿ ಹುಟ್ಟುವುದಿಲ್ಲ, ಆದರೆ ಸಮಾಜ ಅವಳನ್ನು ಹೆಣ್ಣಾಗಿ ರೂಪಿಸುತ್ತದೆ'. ಸಂಪ್ರದಾಯ, ಧರ್ಮ, ಆಚಾರಗಳು ಹೆಜ್ಜೆ ಹೆಜ್ಜೆಗೂ ಹೆಣ್ಣಿನ ವ್ಯಕ್ತಿತ್ವಕ್ಕೆ ಕಾವಲುಗಾರರಾಗಿ ನಿಂತಿವೆ. ಹೆಣ್ಣಿನ ಬಯಕೆ, ಭಾವನೆಗಳನ್ನು ಅದುಮಿಟ್ಟಿವೆ. ಈ ಅರ್ಥದಲ್ಲಿಯೇ ಸಮಾಜ ವಿಜ್ಞಾನಿ ಜೀರಿಂಗ್ಸ್ 'ಸಂಪ್ರದಾಯಗಳು ಸಮಾಜದ ಭದ್ರತಾ ಪಡೆಗಳು' ಎಂದು ಕರೆದಿರುವುದು. ಹೆಣ್ಣಿನ ಭಾಷೆ, ಭಾವನೆ, ನಡೆ-ನುಡಿ, ಆಹಾರ–ವಿಹಾರ, ಉಡುಗೆ–ತೊಡುಗೆ ಮೊದಲಾದ ಸ್ತ್ರೀ ಸಾಂಸ್ಕೃತಿಕ ವಸ್ತು ವಿಷಯಗಳ ಕೂಲಂಕಷ ಪರಿಶೀಲನೆ ನಡೆಸುವುದೂ ಸ್ತ್ರೀ ಸಾಂಸ್ಕೃತಿಕ ಚಳುವಳಿಯ ಉದ್ದೇಶ. ಹೆಣ್ಣೆಂದರೆ ಸಂಸ್ಕೃತಿ; ಸಂಸ್ಕೃತಿಯೆಂದರೆ ಹೆಣ್ಣು ಎಂಬ ಪೂರ್ವ ತಿಳುವಳಿಕೆ ಆಧುನಿಕ ಯುಗದ ಮಹಿಳೆಯ ವ್ಯಕ್ತಿತ್ವಕ್ಕೆ ಮಾರಕವಾಗಿದೆ. ಹಾಗಾಗಿ ಸ್ತ್ರೀ ಸಾಂಸ್ಕೃತಿಕ

ವಾದವು ರೂಢಮೂಲ ಸ್ತ್ರೀ ಸಂಸ್ಕೃತಿಯ ಸ್ವರೂಪವನ್ನು ಮಹಿಳೆಯ ವ್ಯಕ್ತಿತ್ವಕ್ಕೆ ಧಕ್ಕೆ ಬರದಂತೆ, ಅವಳ ಭಾವನೆಗಳನ್ನು ಹತ್ತಿಕ್ಕಲ್ಪಡದಂತೆ ಬಹು ಎಚ್ಚರದಿಂದ ಮುರಿದು ಕಟ್ಟುವ ಪ್ರಯತ್ನಕ್ಕೆ ಮುಂದಾಗಿದೆ. ಮಹಿಳೆಯರ ಕುರಿತಾದ ಮೂಢನಂಬಿಕೆ, ಮೌಢ್ಯಗಳನ್ನು ಶೋಧಿಸುವುದು, ಅವುಗಳ ಸತ್ಯಾಸತ್ಯತೆಯನ್ನು ವಿವೇಚಿಸುವುದು, ಶಿಕ್ಷಣ, ಉದ್ಯಮಶೀಲತೆ, ಆರೋಗ್ಯ, ಆಸಕ್ತಿಗಳನ್ನು ಕುದುರಿಸುವುದು, ಆತ್ಮವಿಶ್ವಾಸವನ್ನು ತುಂಬುವುದು ಇತ್ಯಾದಿ ಕಾರ್ಯಗಳನ್ನು ಸ್ತ್ರೀವಾದಿ ಚಳುವಳಿ ಕೈಗೊಂಡಿದೆ. ಪುರುಷರಷ್ಟೇ ಸ್ತ್ರೀಯರ ಸಂಖ್ಯೆಯೂ ಇರಬೇಕು. ಇಲ್ಲವೆಂದರೆ ಸ್ತ್ರೀಜೀವಶಕ್ತಿಯ ದಮನ, ನಾಶಕ್ರಿಯೆ ನಡೆಯುತ್ತಿದೆ ಎಂಬುದನ್ನು ಗುರುತಿಸಿ ಆ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡುವುದು ಮತ್ತು ಸಂಸ್ಕೃತಿಯ ಮೂಲ ಸತ್ವ ಸಾಮಾಜಿಕ ಸಂರಚನೆಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಹೆಣ್ಣೇ ಮೂಲ ಕಾರಣಳು ಎಂಬುದರ ತಿಳುವಳಿಕೆಯ ಹಿನ್ನಲೆಯಲ್ಲಿ ಸಮಾಜದ ಮಾತೃಪ್ರಧಾನ ಜೈವಿಕ ಅಂಶಗಳನ್ನು ಸಂಗ್ರಹಿಸುವುದು ಇತ್ಯಾದಿ ಸ್ತ್ರೀ ಸಾಂಸ್ಕೃತಿಕ ಶೋಧ ಪ್ರಕ್ರಿಯೆಯನ್ನು ಇದು ಕೈಗೊಳ್ಳುತ್ತದೆ.

ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಸ್ತ್ರೀವಾದಿ ಚಳುವಳಿ, ಹೋರಾಟ ರೂಪುಗೊಳ್ಳುವುದರಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಪಾತ್ರ ಮಹತ್ವಪೂರ್ಣವಾದುದು. ಜಾಗತಿಕ ಮಟ್ಟದಲ್ಲಿ ಮಹಿಳಾ ಸಮಸ್ಯೆಗಳು ಚರ್ಚೆಗೊಳ್ಳುವುದಕ್ಕೆ ಪರಿಪೂರ್ಣ ವೇದಿಕೆಯನ್ನು ಇದು ನಿರ್ಮಿಸಿಕೊಟ್ಟಿತು. ವಿಚಾರ ಜಾಗೃತಿಯ ದಿಕ್ಕುಗಳನ್ನು ಪರಿಚಯಿಸಿತು. ಮಹಿಳಾ ಸಮುದಾಯದ ಸುಧಾರಣೆಗಾಗಿ ಒಕ್ಕೊರಲಿನ ಕರೆ ನೀಡಿತು. ಮಹಿಳಾ ಸಮಸ್ಯೆಗಳ ವಿಶ್ಲೇಷಣೆಗಾಗಿ ವಿವಿಧ ಮಾದರಿಯ ವಿಚಾರ ಸರಣಿಗಳು ವಿವಿಧ ಪಂಥಗಳಾಗಿ ಹುಟ್ಟಿಕೊಂಡು ಪ್ರಪಂಚದಾದ್ಯಂತ ಮಹಿಳಾ ಜಾಗೃತಿಯನ್ನುಂಟುಮಾಡಿದವು. ತಮ್ಮದೆ ಆದ ಸಿದ್ಧಾಂತಗಳನ್ನು ರೂಪಿಸಿಕೊಂಡವು. ಆದರೆ ಇವು ಸಿದ್ಧಾಂತಗಳಿಗಾಗಿ ಹುಟ್ಟಿಕೊಂಡ ಸಿದ್ಧಾಂತಗಳಲ್ಲ. ವಸ್ತುಸ್ಥಿತಿಯ ಪುನರ್‌ಶೋಧ ಪ್ರಕ್ರಿಯೆಯಲ್ಲಿ ರೂಪು ಪಡೆಯುತ್ತಲೇ ಹೋದ ಅನೇಕ ವಿಚಾರವಾದಗಳು. ನಿರ್ದಿಷ್ಟ ಸತ್ಯವನ್ನು ಅನ್ವೇಷಿಸುತ್ತಲೇ ಭಿನ್ನ ಭಿನ್ನವಾದ ಸಿದ್ಧಾಂತಗಳನ್ನು ಆವಿಷ್ಕರಿಸಿವೆ.

ಸ್ತ್ರೀವಾದವನ್ನು ಸೈದ್ಧಾಂತಿಕ ಚೌಕಟ್ಟಿನೊಳಗೆ ನಿರ್ವಚಿಸುವ ಪ್ರಯತ್ನಗಳಿಗೆ ಪರ – ವಿರೋಧದ ನಿಲುವುಗಳಿವೆ. ಸ್ತ್ರೀವಾದಕ್ಕೆ ತಾತ್ವಿಕ ನೆಲೆಗಟ್ಟಿಲ್ಲ. ಎಷ್ಟೋ ಬಾರಿ ಅದು ದ್ವಂದ್ವಕ್ಕೆ ಎಡೆ ಮಾಡಿಕೊಡುತ್ತದೆ ಎನ್ನುವ ಅಭಿಪ್ರಾಯವಿದೆ. ಆದರೆ ಅದಕ್ಕೆ ತಾತ್ವಿಕ ನೆಲೆಗಟ್ಟು ಹುಡುಕಬೇಕಿಲ್ಲವೆಂದು ಕಾಣುತ್ತದೆ. ಯಾವುದೇ ನಿರ್ದಿಷ್ಟ ತತ್ವ, ಸಿದ್ಧಾಂತಗಳಿಂದ ಅದು ಹುಟ್ಟಿಲ್ಲ. ವರ್ತಮಾನದ ಸಾಂದರ್ಭಿಕತೆಯೇ ಸ್ತ್ರೀವಾದವನ್ನು ಸೃಷ್ಟಿಸಿದೆ. ಪುರುಷ ಮಾದರಿಯ ಸಿದ್ಧ ಸಾಂಸ್ಕೃತಿಕ ದೃಷ್ಟಿಕೋನವನ್ನು ಆಸ್ಫೋಟಿಸುತ್ತಲೇ ಹುಟ್ಟಿಕೊಂಡ ಸ್ತ್ರೀವಾದ ಬದಲಾವಣೆಯ

ಪ್ರಕೃತಿ ಸಹಜ ಪ್ರಕ್ರಿಯೆಗೆ ತನ್ನನ್ನು ತಾನು ಹೊಂದಿಸಿಕೊಳ್ಳುತ್ತ ಬೆಳೆಯುತ್ತಾ ಬಂದಿದೆ. ಹಾಗಾಗಿ ಸ್ತ್ರೀವಾದವೆಂದರೆ 'ಹೀಗೆ' ಎಂದು ನಿರ್ದಿಷ್ಟವಾಗಿ ನಿರ್ವಹಿಸುವುದು ಕಷ್ಟಸಾಧ್ಯ. ಸ್ತ್ರೀವಾದದ ಸೈದ್ಧಾಂತೀಕರಣವನ್ನು ವಿರೋಧಿಸುವ ತೀವ್ರಗಾಮಿ ಸ್ತ್ರೀವಾದಿಗಳು ತಾತ್ವಿಕ ಚೌಕಟ್ಟು ಬೇಡವೆಂದೇ ವಾದಿಸುತ್ತಾರೆ. ಪ್ರಾದೇಶಿಕ, ಜನಾಂಗಿಕ, ಲೈಂಗಿಕ ಸಂಬಂಧಾಂತರಗಳ ಆಧಾರದ ಮೇಲೆ ಈ ತಾತ್ವಿಕತೆಯು ರೂಪಿಸಲ್ಪಟ್ಟಿರುವುದರಿಂದ ಇದರ ಸಾರ್ವತ್ರೀಕರಣ ಅಸಾಧ್ಯವೆಂದು ಭಾವಿಸುತ್ತಾರೆ. ಇವರ ದೃಷ್ಟಿಯಲ್ಲಿ ಸಿದ್ಧಾಂತವೆನ್ನುವುದು ಪುರುಷ ದೃಷ್ಟಿಕೋನವನ್ನು ಪ್ರತಿಪಾದಿಸುವಂತಾದ್ದು. ಪುರುಷ ಬೌದ್ಧಿಕ ಸಂಸ್ಥೆಗಳ ಸಾಂಸ್ಕೃತಿಕ ಸ್ವರೂಪವೇ ಅಕಾಡೆಮಿಕ್ ಅರ್ಥದ 'ಸಿದ್ಧಾಂತ'. ಅದರ ನಿರ್ದಿಷ್ಟತೆಯಲ್ಲಿ ಗಂಡಸಿನ 'ಅಧಿಕಾರ' ಪ್ರಜ್ಞೆಯಿರುವುದರಿಂದಲೂ, ಅದರ ಸಾರ್ವತ್ರೀಕರಣದಲ್ಲಿ ಅಡ್ಡಿ, ಆತಂಕಗಳಿರುವುದರಿಂದಲೂ ಅಲ್ಲದೆ ಇನ್ನೂ ಕೆಲವು ಕಾರಣಗಳಿಂದಾಗಿ ಸ್ತ್ರೀವಾದದ ಸೈದ್ಧಾಂತೀಕರಣವನ್ನು ತೀವ್ರಗಾಮಿಗಳು ವಿರೋಧಿಸುತ್ತಾರೆ.

"ಸ್ತ್ರೀವಾದದ ಅತ್ಯಧಿಕ ಕ್ರಾಂತಿಕಾರಕ ಶಕ್ತಿ ಇರುವುದು ಅದರ ಸಾಂಸ್ಕೃತಿಕ, ಸಾಹಿತ್ಯಕ ಸಿದ್ಧಾಂತಗಳಲ್ಲಿ"[೧೫] ಎನ್ನುವ ಎನ್. ಮನುಚಕ್ರವರ್ತಿಯವರು ಪುರುಷ ಸೃಷ್ಟಿಯ ತಾತ್ವಿಕ ಪರಂಪರೆಗಿಂತ ಭಿನ್ನವಾಗಿ ಸ್ತ್ರೀವಾದಿ ಸಿದ್ಧಾಂತದ ನೆಲೆಗಟ್ಟನ್ನು ಗ್ರಹಿಸುತ್ತಾರೆ. ಸ್ತ್ರೀವಾದದ ಬಹುರೂಪತೆಯಿಂದಾಗಿ ಇಲ್ಲಿ ಕಂಡುಕೊಳ್ಳುವ ಸೈದ್ಧಾಂತಿಕ ನೆಲೆಗಳು ಕೆಲವೇ ಕೆಲವು ನಿರ್ದಿಷ್ಟ ಸತ್ಯಗಳತ್ತ ಬೆರಳುಮಾಡದೆ ಸಮಗ್ರವಾಗಿ ತನ್ನಲ್ಲಿ ತಾನು ಸಮನ್ವಯಗೊಳಿಸಿಕೊಳ್ಳುತ್ತದೆ. ಬಿ.ಎನ್. ಸುಮಿತ್ರಾಬಾಯಿಯವರ ಅಭಿಪ್ರಾಯದಲ್ಲಿ, "ಸೈದ್ಧಾಂತಿಕವಾಗಿ ಸ್ತ್ರೀವಾದಕ್ಕೆ ಬಹುರೂಪತೆ ಉಂಟಾಗಿದೆ. ಆದರೆ ಈ ರೀತಿ ಬಹುರೂಪವು ಆಕಾರವಿಲ್ಲದ, ಹೇಗೆಂದರೆ ಹಾಗೆ ಹಿಗ್ಗುವ ಸ್ಥಿತಿಯಲ್ಲ; ಬದಲಾಗಿ ವಿಭಿನ್ನ ಸಾಂಸ್ಕೃತಿಕ ನೆಲೆಯ ಸ್ತ್ರೀಯರ ಅನುಭವಗಳ ಸೇರ್ಪಡೆಯ ಫಲವಾಗಿ ಹುಟ್ಟಿರುವ ಬಹುಮುಖೀ ಆಯಾಮಗಳುಳ್ಳ ಸ್ಥಿತಿ ಇದಾಗಿದೆ".[೧೬]

ಮಹಿಳೆಯರ ಬದುಕಿನ ವಿವಿಧ ಮಗ್ಗುಲುಗಳನ್ನಾಧರಿಸಿ ಸ್ತ್ರೀಮುಕ್ತಿಯ ಚಿಂತನೆಗಳು ವಿವಿಧ ಪಂಥಗಳಾಗಿ, ವಿವಿಧ ಸೈದ್ಧಾಂತಿಕ ನೆಲೆಗಳನ್ನು ಆಶ್ರಯಿಸಿಕೊಂಡು ಬೆಳೆದಿವೆ. ಈ ಪಂಥಗಳು ಬೆಳೆಸಿಕೊಂಡ ತತ್ವ, ಆದರ್ಶಗಳು ಸ್ತ್ರೀ ಬದುಕಿನ ಔನ್ನತ್ಯದ ಏಕಮುಖೀ ಉದ್ದೇಶವನ್ನು ಹೊಂದಿವೆ. ಬೇರೆ ಬೇರೆ ಬಗೆಯ ಸ್ತ್ರೀವಾದಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡುವ ದಿಸೆಯಲ್ಲಿ ಒಂದೊಂದು ತಾತ್ವಿಕ ಚೌಕಟ್ಟನ್ನು ಹುಟ್ಟುಹಾಕಿಕೊಂಡಿವೆ. ಈ ತಾತ್ವಿಕತೆಯನ್ನು ಆಧರಿಸಿಯೇ ಅದರ ವಿಶಿಷ್ಟತೆಯನ್ನು ಕಂಡುಕೊಳ್ಳಬಹುದು. ಸ್ತ್ರೀಪರ ಕಾಳಜಿಯಿಂದ ಅನೇಕ

ಪಂಥಗಳು ಹುಟ್ಟಿಕೊಂಡಿವೆ. ಆದರೆ ಈ ಪಂಥಗಳು ಈ ಪ್ರಬಂಧಕ್ಕೆ ಸಂಬಂಧಿಸಿಲ್ಲವಾದ್ದರಿಂದ ಅವುಗಳ ಕುರಿತಾದ ಚರ್ಚೆಯನ್ನು ಇಲ್ಲಿ ಎತ್ತಿಕೊಳ್ಳಲಾಗಿಲ್ಲ.

೨.೫. ಭಾರತದಲ್ಲಿ ಮಹಿಳಾ ಚಳುವಳಿ: ಒಂದು ಐತಿಹಾಸಿಕ ಸಮೀಕ್ಷೆ

ಭಾರತದಲ್ಲಿ 'ಚಳುವಳಿ'ಗೆ ಸುದೀರ್ಘವಾದ ಇತಿಹಾಸವಿದೆ. ಪಾರಂಪರಿಕವಾಗಿ ಬಂದ ಅರ್ಥಹೀನ ಆಚರಣೆಗಳು, ವಿಧಿ – ವಿಧಾನಗಳು, ನಂಬಿಕೆಗಳನ್ನು ಪ್ರತಿಭಟಿಸುವ ನಿಟ್ಟಿನಲ್ಲಿ ಹುಟ್ಟಿಕೊಂಡ ಧಾರ್ಮಿಕ ಚಳುವಳಿಗಳೇ ಅತ್ಯಂತ ಪ್ರಾಚೀನ ಚಳುವಳಿಗಳೆನಿಸಿಕೊಳ್ಳುತ್ತವೆ. "ಒತ್ತಡಯುಕ್ತ, ಅಸ್ವಸ್ಥ ಸಾಮಾಜಿಕ ಸ್ಥಿತಿಗತಿಗಳು 'ಆತ್ಮಹತ್ಯೆ'ಯ ಹಂತಕ್ಕೆ ಬಂದಾಗ ಸಮಾಜವೊಂದರಲ್ಲಿ ಪ್ರಬಲವಾದ (ಮತಧರ್ಮ) ಚಳುವಳಿಗಳು ಪುನರುದ್ಭವಿಸಿ ಸಾಂಸ್ಕೃತಿಕ ಪುನರುತ್ಥಾನಕ್ಕೆ ಕಾರಣವಾಗುತ್ತದೆ. ಇಂತಹ ಚಳುವಳಿಗಳನ್ನು ಜೀವನೋತ್ಸಾಹ ಮರಳಿಸುವ ಚಳುವಳಿ"[೧೭] (ರಿವಿಟಲೈಸ್ ಮೂಮೆಂಟ್) ಎಂದು ಸಮಾಜಶಾಸ್ತ್ರಜ್ಞರು ಗುರುತಿಸುತ್ತಾರೆ.

ವಿಗ್ರಹಾರಾಧನೆ, ವ್ರತಾಚರಣೆಗಳಿಂದ ಹೊರತಾದ ಶುದ್ಧ ನೈತಿಕತೆಯೇ ಆಧಾರವಾಗಿರುವ ಬೌದ್ಧ, ಜೈನ, ವೀರಶೈವ ಧರ್ಮಗಳು ನಡೆಸಿದ ಧಾರ್ಮಿಕ ಕ್ರಾಂತಿ, ಪಾರಂಪರಿಕ ಹಿಂದುತ್ವದಲ್ಲಿ ಪರಿವರ್ತನೆಯನ್ನು ಉಂಟುಮಾಡಿದ ಬ್ರಹ್ಮ ಸಮಾಜ, ಆರ್ಯ ಸಮಾಜಗಳು ನಡೆಸಿದ ಸುಧಾರಣಾ ಚಳುವಳಿಗಳು, ಸಮುದಾಯದ ವರ್ಗ – ವರ್ಣ - ಭೇದಗಳನ್ನು ಪ್ರತಿಭಟಿಸಲು ನಿಂತ ಕಾರ್ಮಿಕ, ದಲಿತ ಹಿಂದುಳಿದ ವರ್ಗಗಳ ಚಳುವಳಿಗಳು, ಲಿಂಗ ಅಸಮಾನತೆಯನ್ನು ಪ್ರಕಟಿಸುವ ಮಹಿಳಾ ಚಳುವಳಿಗಳು – ಇವೆಲ್ಲವೂ ಪ್ರಕ್ಷುಬ್ಧ ಸಾಮಾಜಿಕ ವ್ಯವಸ್ಥೆಯಲ್ಲಿ 'ಜೀವನೋತ್ಸಾಹ' ತರುವ ಚಳುವಳಿಗಾಗಿಯೇ ಹುಟ್ಟಿಕೊಂಡಿರುವುದನ್ನು ಕಾಣಬಹುದು. "ಎಲ್ಲಿಯವರೆಗೆ ನಾಗರಿಕ ಹಕ್ಕುಗಳಿಗೆ ಮಾನ್ಯತೆಯಿರುವುದಿಲ್ಲವೋ, ಎಲ್ಲಿಯವರೆಗೆ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆಗಳಂಥ ಸಂವಿಧಾನದತ್ತ ಹಕ್ಕುಗಳಿಗೆ ಅವಕಾಶವಿಲ್ಲವೋ, ಎಲ್ಲಿಯವರೆಗೆ ಜೀವನಾವಶ್ಯಕ ವಸ್ತುಗಳ ವಿಷಯದಲ್ಲಿ ವ್ಯಕ್ತಿಗೆ ಭದ್ರತೆಯಿಲ್ಲವೋ, ಅಲ್ಲಿಯವರೆಗೆ ಚಳುವಳಿಯ ಸಾಧ್ಯತೆಗಳಿಗೆ ಬಾಗಿಲು ತೆರೆದುಕೊಂಡೇ ಇರುತ್ತದೆ".[೧೮]

ಚಳುವಳಿಗಳು ಮುಖ್ಯವಾಗಿ ಮೂರು ವಲಯಗಳಲ್ಲಿ ಹುಟ್ಟಿಕೊಳ್ಳುತ್ತವೆ. ಅವುಗಳೆಂದರೆ, ಒಂದು: ವರ್ಗಾಧಾರಿತ ವಲಯ; ಎರಡು: ವರ್ಣಾಧಾರಿತ ವಲಯ; ಮೂರು: ಲಿಂಗಾಧಾರಿತ ವಲಯ. ಈ ಮೂರೂ ವಲಯಗಳು ಒಂದಲ್ಲ ಒಂದು ವಿಧದಲ್ಲಿ ಶೋಷಿತ ವಲಯಗಳೇ ಆಗಿವೆ.

ಲಿಂಗಾಧಾರಿತ ಚಳುವಳಿಯ ಇತಿಹಾಸಕ್ಕೆ ಭಾರತದಲ್ಲಿ ನಿರ್ದಿಷ್ಟ ಕಾಲವನ್ನು ಗುರುತಿಸುವುದು ಕಷ್ಟ. ಧಾರ್ಮಿಕ ಮಡಿವಂತಿಕೆಯು ಆರಂಭವಾದ ಕಾಲಘಟ್ಟದಿಂದಲೇ ಈ ಸಂಘರ್ಷ ಆರಂಭವಾಗಿರಬೇಕು. ಬಹಳ ಹಿಂದಿನಿಂದಲೂ ಧರ್ಮ ಎನ್ನುವುದು ಮನುಷ್ಯನ ಜೀವನದಲ್ಲಿ ಪ್ರಧಾನಪಾತ್ರ ವಹಿಸಿದೆ. ಧರ್ಮದ ವಿಧಿಗಳೇ ಸ್ತ್ರೀಯ ವ್ಯಕ್ತಿತ್ವವನ್ನು ರೂಪಿಸುವುದರೊಂದಿಗೆ ಈ ಧರ್ಮವೆನ್ನುವುದು ಅವಳ ಜೀವನಕ್ಕೆ ವಿದ್ಯುತ್‌ನ ಬೇಲಿಯಾಗಿ ಪರಿಣಮಿಸಿದೆ. ಮೌಲ್ಯ ಸಂಘರ್ಷದ ಮೊದಲ ಇತಿಹಾಸ ನಮಗೆ ದ್ರಾವಿಡ ಹಾಗೂ ಆರ್ಯ ಸಂಸ್ಕೃತಿಯ ನಡುವಿನ ತಿಕ್ಕಾಟದಲ್ಲಿ ದೊರೆಯುತ್ತದೆ. ಆರ್ಯರು ಭಾರತಕ್ಕೆ ಪ್ರವೇಶಿಸುವುದಕ್ಕೆ ಪೂರ್ವದಲ್ಲಿ ಇದ್ದ ಸ್ತ್ರೀ ಸಮಾನತೆಯ ಮಾತೃಮೂಲೀಯ ಸ್ತ್ರೀ ಸಾಂಸ್ಕೃತಿಕ ವಿನ್ಯಾಸ ಈ ಘರ್ಷಣೆಯಲ್ಲಿ ಪಲ್ಲಟಗೊಂಡಿತು. ವೇದ - ಪುರಾಣಗಳು ಆದರ್ಶೀಕರಣದ ನೆಪದಲ್ಲಿ ಮಹಿಳೆಯನ್ನು ವೈಭವೀಕರಿಸಿದವು. ಸೀತೆ – ದ್ರೌಪದಿಯರ ಪ್ರತಿಮೆಗಳು ಆದರ್ಶದ ನೆಲೆಯನ್ನು ಪಡೆದವು. ಧರ್ಮವು ಹೆಣ್ಣಿನ ಪೂರ್ಣ ಜೀವನ ಕ್ರಮವನ್ನೇ ನಿಯಂತ್ರಿಸಿತು. ಕೆಲವು ಧಾರ್ಮಿಕ ನಂಬಿಕೆ, ಆಚರಣೆಗಳು ಸ್ತ್ರೀ ವಿಶಿಷ್ಟ ಹಾಗೂ ಪುರುಷ ವಿಶಿಷ್ಟ ಎನಿಸುವ ಶ್ರೇಣೀಕರಣಕ್ಕೆ ಒಳಗಾಗಿವೆ. ಸ್ತ್ರೀತ್ವವನ್ನು ಸಾಮಾಜೀಕರಣಗೊಳಿಸುವಾಗಲೂ ಶೀಲ, ಚಾರಿತ್ರ್ಯಗಳನ್ನೇ ಮುಂದೊಡ್ಡಿ ಆಕೆಯನ್ನು ಅಧೀನ ಸ್ಥಿತಿಗೆ ತಳ್ಳಲಾಯಿತು. ಸ್ತ್ರೀ-ಪುರುಷರಿಗೆ ಸಮಾನ ಹಕ್ಕುಗಳನ್ನು ನೀಡಬೇಕೆಂಬುದನ್ನು ಧರ್ಮ, ಸಂಹಿತೆಗಳು ಮಾನ್ಯ ಮಾಡುತ್ತಿರಲಿಲ್ಲ. ಶಾಸ್ತ್ರ ಗ್ರಂಥಗಳು ಸ್ತ್ರೀ-ಪುರುಷರ ವೈಯುಕ್ತಿಕ ಹಾಗೂ ಸಾಮಾಜಿಕ ನಡತೆಗಳನ್ನು ನಿರ್ಣಯಿಸಿದವು. ಇಂದಿಗೂ ಕೂಡಾ ಮಹಿಳಾ ಪ್ರಶ್ನೆಗೆ ಗಂಭೀರ ಪ್ರತಿರೋಧ ಬರುವುದು ಧಾರ್ಮಿಕ ಮೂಲಭೂತವಾದಿಗಳಿಂದಲೇ. ಅನಾದಿಕಾಲದಿಂದಲೂ ಸಂಪ್ರದಾಯ, ನಂಬಿಕೆಗಳನ್ನು ಹೆಣ್ಣಿನ ತಲೆಯ ಮೇಲೆ ಹೊರಿಸಿ ಧರ್ಮ, ದೇವರುಗಳ ಹೆಸರಿನಲ್ಲಿ ಆಕೆಯನ್ನು ಕಟ್ಟಿ ಹಾಕುತ್ತಾ ಬಂದಿರುವುದು ಧಾರ್ಮಿಕ ಮೂಲಭೂತವಾದವೇ. ಒಂದು ಕಡೆಯಲ್ಲಿ ಹೆಣ್ಣು ಮಾತೃತ್ವದ ಉನ್ನತ ಮಾದರಿಯಾಗಿ 'ಶಕ್ತಿ ಸ್ವರೂಪಿಣಿ'ಯಾಗಿ ಕಾಣಿಸಿಕೊಂಡರೆ, ಇನ್ನೊಂದು ಕಡೆಯಲ್ಲಿ ಪುರುಷನ ಭೋಗ ವಸ್ತುವಾಗಿ, 'ವೇಶ್ಯೆ'ಯಾಗಿ ಕಾಣಿಸಿಕೊಳ್ಳುತ್ತಾಳೆ. ಇಲ್ಲಿ ಆಕೆಯ ಶಕ್ತಿ - ಸಾಮರ್ಥ್ಯಗಳು ಗೌಣವೆನಿಸಿ 'ಲೈಂಗಿಕ ಪ್ರತಿಮೆ'ಯಾಗಿ ಆಕೆಯನ್ನು ಕಾಣಲಾಯಿತು. ಶಿಕ್ಷಣದಿಂದ ವಂಚಿಸಲ್ಪಟ್ಟ ಹೆಣ್ಣು ಸಾಮಾಜಿಕ ಮಾನ್ಯತೆಯನ್ನು ಪಡೆಯದೆ ಆರ್ಥಿಕ ಚಟುವಟಿಕೆಗಳಲ್ಲೂ ನಿಯಂತ್ರಣಕ್ಕೆ ಒಳಪಟ್ಟಳು. ಕೆಲವು ಸಾಮಾಜಿಕ ಅನಿಷ್ಟಗಳಿಂದಲೂ ಸತೀಸಹಗಮನ, ಬಾಲ್ಯವಿವಾಹ, ವೈಧವ್ಯ, ಶಿಶುಹತ್ಯೆ, ಪರ್ದಾ ಪದ್ಧತಿಗಳಂತಹ ದುಷ್ಟ ಸಾಮಾಜಿಕ ಪದ್ಧತಿಗಳಿಂದಾಗಿ ಆಕೆಯ ಬದುಕು, ಬವಣೆಗಳಿಂದ ಕೂಡಿದ್ದನ್ನು ಕಾಣಬಹುದು.

ಬೌದ್ಧ ಜೈನ ಧರ್ಮಗಳಂತಹ ಧಾರ್ಮಿಕ ಪಂಥಗಳು ಹಿಂದೂ ಧರ್ಮವನ್ನು, ಆ ಮೂಲಕ ಸ್ತ್ರೀಯರ ಬದುಕನ್ನು ಎತ್ತರಿಸುವ ಪ್ರಯತ್ನವನ್ನು ನಡೆಸಿವೆ. ೧೧ನೆಯ ಶತಮಾನದ ಇಸ್ಲಾಂ ಸಂಸ್ಕೃತಿಯ ದಾಳಿಯು ಹೆಣ್ಣಿನ ಬದುಕನ್ನು ಇನ್ನಷ್ಟು ದಾರುಣಗೊಳಿಸಿತು. ಅವಳ ವ್ಯಕ್ತಿತ್ವಕ್ಕೆ ಪರದೆ ಹಾಕಲಾಯಿತು. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಸ್ಥಾಪನೆಯಾದದ್ದು ಆಧುನಿಕತೆಯ ಗಾಳಿ ಬೀಸುವುದಕ್ಕೆ ಕಾರಣವಾಯಿತು. ಬ್ರಿಟಿಷ್ ಅಧಿಕಾರವು ಭಾರತೀಯ ಸ್ತ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿತು. ಈ ಜಾಗೃತ 'ಪ್ರಜ್ಞೆ'ಯು ರೂಪುಗೊಳ್ಳುವುದಕ್ಕೆ ಕೆಲವು ಅಂಶಗಳು ಕಾರಣವಾದುವು. ಈ ಅಂಶಗಳನ್ನು ಭಾರತೀಯ ಮಹಿಳಾ ಬದುಕಿನ ಬದಲಾವಣೆಯ ಘಟ್ಟ ಎಂದು ಪರಿಗಣಿಸಲಾಯಿತು. ಈ ಅಂಶಗಳೆಂದರೆ:

೧. ಬ್ರಿಟಿಷ್ ಯುಗ

೨. ಸುಧಾರಣಾವಾದಿ ದೃಷ್ಟಿ

೩. ರಾಷ್ಟ್ರೀಯವಾದ

೪. ಮಹಿಳಾ ನೇತೃತ್ವದ ಸ್ವತಂತ್ರ ಚಳುವಳಿಗಳು

೫. ಸ್ವಾತಂತ್ರೋತ್ತರ ಭಾರತದಲ್ಲಿ ಮಹಿಳೆ

೨.೫.೧. ಬ್ರಿಟಿಷ್ ಯುಗ:

ಭಾರತದಲ್ಲಿ ಬ್ರಿಟಿಷ್ ಪ್ರಭುತ್ವ ಅನೇಕ ಜ್ಞಾನ ಶಾಖೆಗಳನ್ನು ಹೊತ್ತು ತಂದಿತು. ಬ್ರಿಟಿಷರು ಭಾರತವನ್ನು ಪ್ರವೇಶಿಸಿರುವುದು ಒಂದು ಐತಿಹಾಸಿಕ ಮೆಟ್ಟಿಲೆಂದು ಪರಿಗಣಿಸುವ ಸಂದರ್ಭದಲ್ಲಿಯೇ ಭಾರತದಲ್ಲಿದ್ದ ಸಾಂಪ್ರದಾಯಿಕ ಮೌಲ್ಯಗಳ ಸ್ಥಿತ್ಯಂತರವನ್ನಾಗಿಯೂ ಇದನ್ನು ಗುರುತಿಸಲಾಗುತ್ತದೆ. ಬ್ರಿಟಿಷರಿಂದ ಪ್ರಾರಂಭವಾದ ಉದ್ಯಮೀಕರಣ, ಆಂಗ್ಲಶಿಕ್ಷಣ ಪದ್ಧತಿ ಸಮಾಜದಲ್ಲಿದ್ದ ಜಡತ್ವವನ್ನು ಕೊಡವಿ, ಕ್ರಿಯಾತ್ಮಕವಾಗಿ ಸ್ಪಂದಿಸುವ ಅವಕಾಶವನ್ನು ನೀಡಿತು.

ಪಾಶ್ಚಾತ್ಯರಲ್ಲಿ ಆಗಲೇ ಸ್ತ್ರೀ ಸಂಸ್ಕೃತಿಯ ಶೋಧ ಪ್ರಕ್ರಿಯೆಯು ಪ್ರಾರಂಭವಾಗಿದ್ದು, ಅದು ಮೂರು ಹಂತಗಳನ್ನು ಒಳಗೊಂಡಿದೆ. ಅವುಗಳೆಂದರೆ:

೧. ಕೂಡಿಸುವ ಚರಿತ್ರೆ (ಎಡಿಟಿವ್ ಹಿಸ್ಟರಿ): ಈಗಾಗಲೇ ರೂಢಿಗೆ ಬಂದಿರುವ ವಸ್ತು ವಿಷಯಗಳನ್ನು ಮರು ಪರೀಕ್ಷೆಗೆ ಒಳಪಡಿಸುವ ಮಹಿಳೆಯರ ಕೊಡುಗೆ, ಅವರ ಪಾರಂಪರಿಕ ಪಾತ್ರಗಳನ್ನು ಶೋಧಿಸುವ ಕೆಲಸ.

೨. **ಲಿಂಗ ಪರಿಗಣನಾ ಚರಿತ್ರೆ** (ಜಂಡರ್ಡ್ಸ್ ಹಿಸ್ಟರಿ): ಇತಿಹಾಸಕ್ಕೆ ಸಂಬಂಧಿಸಿದ ಸಂಗತಿಗಳನ್ನು ಹೊಸ ಸ್ತ್ರೀವಾದಿ ದೃಷ್ಟಿಕೋನದಿಂದ ಪರಿಶೀಲಿಸಿ, ಸಾಮಾಜಿಕ ಸಂಬಂಧಗಳ ವಿಶ್ಲೇಷಣೆಯಲ್ಲಿ ಲಿಂಗ ವ್ಯವಸ್ಥೆಯ ಭೇದ, ಭಾವನೆ ಹೇಗೆ ಮುಖ್ಯ ಸೂತ್ರವಾಗುತ್ತದೆ ಎಂದು ಚಿಂತಿಸುವ ಕ್ರಮ.

೩. **ಕೊಡುಗೆಯ ಚರಿತ್ರೆ** (ಕ್ವಾಂಟ್ರಿಬ್ಯೂಟರಿ ಹಿಸ್ಟರಿ): ಪಿತೃಪ್ರಾಧಾನ್ಯತೆಯ ಮಹಿಳೆಯ ಚಟುವಟಿಕೆಗಳನ್ನು ಹೇಗೆ ಹತ್ತಿಕ್ಕುತ್ತಲೇ ಇರುತ್ತದೆ ಎಂಬುದನ್ನು ಇದು ಗುರುತಿಸುತ್ತದೆ.

೧೯ನೆಯ ಶತಮಾನದಲ್ಲಿ ಯುರೋಪಿನಲ್ಲಿ ಕಂಡು ಬಂದ ಹೊಸ ರಾಜಕೀಯ, ಸಾಮಾಜಿಕ, ಹಾಗೂ ವೈಜ್ಞಾನಿಕ ಚಿಂತನೆಗಳಿಂದಾಗಿ ಬ್ರಿಟಿಷ್ ರಾಜಪ್ರಭುತ್ವ ತನ್ನ ವಸಾಹತು ಕ್ಷೇತ್ರಗಳಲ್ಲಿಯೂ ಹೊಸ ಹೊಸ ಬದಲಾವಣೆಗಳನ್ನು ತಂದಿತು. ಈಗಾಗಲೇ ಪ್ರಚಲಿತಗೊಂಡ ಹೊಸ ಸ್ತ್ರೀವಾದಿ ಪ್ರಜ್ಞೆಯ ಮೂಲಕ ಕೈಗೊಂಡ ಸ್ತ್ರೀ ಸಂಸ್ಕೃತಿ ಶೋಧಕಾರ್ಯ ಭಾರತೀಯ ಮಹಿಳೆಯರನ್ನು ಆಧುನಿಕರಾಗಿಸುವ ಹಂಬಲದೊಂದಿಗೆ ಮಹಿಳಾ ಪ್ರಶ್ನೆಯು ಅಸ್ತಿತ್ವಕ್ಕೆ ಬಂತು. ಪಾಶ್ಚಾತ್ಯ ಚಿಂತಕರು ಭಾರತೀಯ ಸಮಾಜದಲ್ಲಿ ರೂಪಿತವಾದ ಸ್ತ್ರೀ - ಪುರುಷ ಸಂಬಂಧಗಳ ಬಗೆಗೆ ಜಿಜ್ಞಾಸೆಗೆ ತೊಡಗಿದರು. ಧರ್ಮ ಮತ್ತು ಸಂಸ್ಕೃತಿಗಳು ಮಹಿಳೆಯನ್ನು ಹೇಗೆ ನಿರ್ಬಂಧಿಸಿವೆ ಎನ್ನುವ ವಿಶ್ಲೇಷಣೆಯಿಂದ ತೊಡಗಿ ಭಾರತೀಯ ಮಹಿಳೆಯರ ಸ್ಥಿತಿಗತಿಯನ್ನು ಉಗ್ರವಾಗಿ ಟೀಕಿಸಲು ಆರಂಭಿಸಿದರು. ಈ ಬಗೆಯ ಆಲೋಚನೆ ಭಾರತೀಯ ಸಂಸ್ಕೃತಿಯ 'ಕತ್ತಲು ಯುಗ'ದ ಪರಿಜ್ಞಾನವನ್ನು ಮೂಡಿಸಿತು. ಜೇಮ್ಸ್ ಮಿಲ್, ರೆವೆರೆಂಡ್ ಇ ಸ್ಟೋರೋ, ಸರ್ ಹಾರ್ಬರ್ಟ್ ಹೋಪ್ ರಿಪ್ಲೆ ಮೊದಲಾದ ಬ್ರಿಟಿಷ್ ಚಿಂತಕರು ಲಿಂಗ ಸಂಬಂಧಿ ಆಯಾಮದಲ್ಲಿ ಹೊಸ ಆದರ್ಶದ ಕಲ್ಪನೆ, ಮಾನವತಾವಾದ, ರಾಷ್ಟ್ರೀಯವಾದವನ್ನು ಮುಂದಿಟ್ಟರು. ಪುರಾತನ ನಾಗರಿಕತೆಯ ಉನ್ನತ ಇತಿಹಾಸ ಹೊಂದಿದ ಭಾರತದಲ್ಲಿ ಮಹಿಳೆಗೆ ಮಾನವೀಯ ನೆಲೆಯ ಸಾಮಾಜಿಕ ಸ್ಥಾನಗಳಿಲ್ಲದಿರುವುದನ್ನು ಮಿಲ್ ಗುರುತಿಸುತ್ತಾನೆ. ಆತನಿಗೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗಿರುವುದು ಮನುಸ್ಮೃತಿ, ಕೆಲವು ಧರ್ಮಗ್ರಂಥಗಳು, ವಿದೇಶಿ ಪ್ರವಾಸಿಗರು ಹಾಗೂ ಮಿಷನರಿಗಳ ಬರಹದಿಂದ ಎಂಬುದು ಗಮನಾರ್ಹ ಸಂಗತಿ.

ಸರ್ ಹರ್ಬರ್ಟ್ ಹೋಪ್ ರಿಸ್ಲೆ ಎಂಬ ವಿದ್ವಾಂಸ 'ಭಾರತೀಯರು ಜ್ಞಾನ ಮತ್ತು ರಾಜಕೀಯ ವಿಚಾರಧಾರೆಗಳಲ್ಲಿ ಮಾತ್ರ ಸಂಪನ್ನರಾಗಿದ್ದಾರೆ. ಆದರೆ ಸಮಾಜ ಸುಧಾರಣೆಯ ಬಗೆಗೆ ಅವರಿಗೆ ಆಸಕ್ತಿ ಇಲ್ಲ ಎನ್ನುತ್ತಾನೆ'. ಕುಂದಿದ ಮನಸ್ಸುಗಳು, ಹೀನಾಯ ಪರಿಸ್ಥಿತಿಗಳು ಇರುವಲ್ಲಿ ರಾಷ್ಟ್ರೀಯವಾದದ ಉತ್ಸಾಹವನ್ನು ಉದ್ದೀಪನ ಮಾಡಲು ಸಾಧ್ಯ ಎಂಬುದಕ್ಕೆ ಚರಿತ್ರೆಯಲ್ಲೆಲ್ಲೂ ಉದಾಹರಣೆಗಳೇ ಕಾಣುವುದಿಲ್ಲ. "ಬೌದ್ಧಿಕವಾಗಿ

ನಿಷ್ಕ್ರಿಯರಾಗಿರುವುದೇ, ನೈತಿಕವಾಗಿ ಜಡವಾಗಿರುವುದೇ ತಮ್ಮ ಮಹಿಳೆಯರ ಸಹಜಗುಣವೆಂದು ಯಾವ ಸಮಾಜವು ಒಪ್ಪಿಕೊಂಡು ಬಂದಿದೆಯೋ ಅಂಥ ಸಮಾಜದಲ್ಲಿ ರಾಷ್ಟ್ರವೊಂದನ್ನು ಕಟ್ಟಲು ಅಗತ್ಯವಾದ ಧೈರ್ಯ, ತ್ಯಾಗ ಹಾಗೂ ಸಮರ್ಪಣಾ ಭಾವಗಳಂತಹ ಉತ್ತಮ ಗುಣಗಳು ವರ್ಧಿಸುವ ನಿರೀಕ್ಷೆಯನ್ನು ಮಾಡಲಾಗದು"[೧೯] ಎಂದು ರಿಸ್ಲೆ ಅಭಿಪ್ರಾಯ ಪಡುತ್ತಾನೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಬ್ರಿಟಿಷರಿಗೆ ಕೇವಲ ಅಧಿಕಾರ ದಾಹ ಮಾತ್ರವಿರಲಿಲ್ಲ; ಭಾರತೀಯ ಸಮಾಜದ ಕಾಳಜಿಯೂ ಇತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಭಾರತೀಯ ಸಂಸ್ಕೃತಿಯ ಮೇಲೆ ಆದ ಪ್ರಮುಖ ದಾಳಿಗಳನ್ನು ಅವಲೋಕಿಸಿದರೆ ಮುಸ್ಲಿಂ ಮತ್ತು ಕ್ರೈಸ್ತ ಪ್ರಭುತ್ವದ ಮಾದರಿಗಳು ಒಂದಲ್ಲಾ ಒಂದು ರೀತಿಯಲ್ಲಿ ಪ್ರಭಾವ ಬೀರಿದ್ದು ಗಮನಕ್ಕೆ ಬರುತ್ತದೆ. ಮುಸ್ಲಿಂ ಹಾಗೂ ಬ್ರಿಟಿಷ್ ಪ್ರಭುತ್ವ ಇವೆರಡರ ಅಂತರವನ್ನು ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರದ ಹಿನ್ನಲೆಯಲ್ಲಿ ನೋಡಿದಾಗ ಬ್ರಿಟಿಷ್ ಪ್ರಭುತ್ವ ಸಮಾಜ ಸಂರಚನೆಯನ್ನು ಬದಲಿಸಿದಷ್ಟು ಮುಸ್ಲಿಂ ಸಮಾಜ ಬದಲಿಸಲಿಲ್ಲ ಎನ್ನುವುದು ತಿಳಿಯುತ್ತದೆ. ಧರ್ಮ ಪ್ರಚಾರದ ಮೂಲ ಆಶಯಗಳು ಎರಡೂ ಪ್ರಭುತ್ವಕ್ಕಿದ್ದರೂ ಮಾನವೀಯ ಕಳಕಳಿ, ಸುಧಾರಣಾ ದೃಷ್ಟಿ ಬ್ರಿಟಿಷ್ ಪ್ರಭುತ್ವಕ್ಕಿತ್ತು ಎಂಬುದನ್ನು ಮರೆಯಲಾಗದು. ಹಾಗಾಗಿ ಬ್ರಿಟಿಷರಿಗೆ ಭಾರತೀಯ ಸಂಬಂಧಗಳನ್ನು ನವೀಕರಿಸುವುದು ಮುಖ್ಯವಾಯಿತು. ಈ ಹಿನ್ನಲೆಯಲ್ಲಿ ಬ್ರಿಟಿಷ್ ಪ್ರಭುತ್ವ ನಮ್ಮ ಸಾಂಸ್ಕೃತಿಕ ಪುನರುಜ್ಜೀವನ ಹಾಗೂ ಮಹಿಳಾ ಪ್ರಜ್ಞೆಗೆ ಪೀಠಿಕೆಯಾಗಿ ಪರಿಣಮಿಸಿದೆ ಎನ್ನಬಹುದು.

೨.೫.೨. ಸುಧಾರಣಾವಾದಿ ದೃಷ್ಟಿ:

ಪಾಶ್ಚಾತ್ಯ ವಿದ್ವಾಂಸರು ತಮ್ಮ ಚಿಂತನೆಗಳ ಮೂಲಕ ಮಾಡಿದ 'ಸಾಂಸ್ಕೃತಿಕ ಅವಮಾನ' ಭಾರತೀಯ ಬುದ್ಧಿಜೀವಿಗಳ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸಿತು; ಭಾರತೀಯರ ಸಮಾಜ ಸುಧಾರಣೆಯ ತೀವ್ರ ಕಾಳಜಿಯನ್ನು ಪ್ರಕಟಿಸಿತು. 'ದೀರ್ಘಕಾಲದ ಅಥವಾ ಅಲ್ಪಾವಧಿಯ ನಿದ್ರೆಯ ನಂತರ ರಾಷ್ಟ್ರದ ಬುದ್ಧಿ, ಮನಸ್ಸು ಅಥವಾ ಆತ್ಮವನ್ನು ಎಚ್ಚರಿಸುವಿಕೆಯ ಕ್ರಿಯೆಯಾಗಿ' ಧಾರ್ಮಿಕ ಹಾಗೂ ಸಮಾಜ ಸುಧಾರಣೆಯ ಎರಡೂ ದೃಷ್ಟಿಯಿಂದ ೧೯ನೇ ಶತಮಾನದಲ್ಲಿ ಭಾರತೀಯ ಸಮಾಜವು 'ಹೊಸಹುಟ್ಟು' ಅಥವಾ 'ಪುನರುತ್ಥಾನ'ವನ್ನು ಕಂಡಿತು.

೧೯ನೇ ಶತಮಾನದಲ್ಲಿ ಮಧ್ಯಮ ವರ್ಗದ ಹಿಂದೂ ಕುಟುಂಬ ವ್ಯವಸ್ಥೆಯಲ್ಲಿ ಆದ ಬದಲಾವಣೆಯಲ್ಲಿ ಈ ಪುನರುತ್ಥಾನ ಕಾಣಿಸಿಕೊಳ್ಳುತ್ತದೆ. ಪೂರ್ವದಲ್ಲಿ ಬಂಗಾಳದಿಂದಲೂ, ಪಶ್ಚಿಮದಲ್ಲಿ ಮುಂಬಯಿಯಿಂದಲೂ,

ದಕ್ಷಿಣದಲ್ಲಿ ಮದ್ರಾಸಿನಿಂದಲೂ, ಉತ್ತರದಲ್ಲಿ ಪಂಜಾಬಿನಿಂದಲೂ ಈ ಸುಧಾರಣಾ ಚಳುವಳಿಗಳು ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದವು. ಸಮಾಜ ಸುಧಾರಣಾ ಚಳುವಳಿಯು ಮಹಿಳಾ ಸುಧಾರಣೆಯ ಪ್ರಧಾನ ಆಶಯವನ್ನಿಟ್ಟುಕೊಂಡು ಮೊದಲು ಬಂಗಾಳದಲ್ಲಿ ಪ್ರಾರಂಭವಾಯಿತು. ಇದರ ನೇತೃತ್ವ ವಹಿಸಿದವರು ರಾಜಾರಾಮ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಕೇಶವಚಂದ್ರಸೇನ್ ಮೊದಲಾದವರು. ರಾಜರಾಮ್ ಮೋಹನ್‌ರಾಯ್‌ರವರು ಸತಿಪದ್ಧತಿಯ ಅಮಾನವೀಯ ಮುಖಗಳನ್ನು ಅನಾವರಣ ಮಾಡಿದರು. ಇದಕ್ಕಾಗಿ ಅವರು ಶಾಸ್ತ್ರಾಧಾರಗಳನ್ನು ಬಳಸಿಕೊಂಡು ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದರು. ೧೮೧೯ರಲ್ಲಿ 'ಸಮಾಚಾರ ದರ್ಪಣ', 'ವಂಗದೂತ' ಮೊದಲಾದ ಪತ್ರಿಕೆಗಳ ಮೂಲಕ ಬಹುಪತ್ನಿತ್ವ, ಮದುವೆ ಎಂಬ ಮಾರುಕಟ್ಟೆಯಲ್ಲಿ ಹೆಣ್ಣು ಮಕ್ಕಳ ಮಾರಾಟ ಮುಂತಾದವುಗಳನ್ನು ಖಂಡಿಸಿದರು. ಇದರ ಪ್ರಚಾರಕ್ಕಾಗಿ ೧೮೨೮ರಲ್ಲಿ ಬ್ರಹ್ಮ ಸಮಾಜವನ್ನು ಸ್ಥಾಪಿಸಿದರು. ಈಶ್ವರಚಂದ್ರ ವಿದ್ಯಾಸಾಗರು (೧೮೨೦ – ೯೧) ಹಿಂದೂ ವಿಧವೆಯರ ವಿವಾಹವಾದವನ್ನೂ, ಸ್ತ್ರೀಶಿಕ್ಷಣದ ಮಹತ್ವವನ್ನು ಪ್ರಚಾರ ಮಾಡುವಲ್ಲಿ ಶ್ರಮಿಸಿದರು.

ಸಾಮಾಜಿಕ ಕ್ರಾಂತಿಯ ಹರಿಕಾರರೆನಿಸಿಕೊಂಡಿದ್ದ ಮಹಾತ್ಮ ಜ್ಯೋತಿ ಬಾಫುಲೆ (೧೮೨೭ – ೧೮೯೦), ಧೊಂಡೋ ಕೇಶವಪಂತ ಕರ್ವೆ ಮಹರ್ಶಿಗಳು, ಜಸ್ಟಿಸ್ ಮಹಾದೇವ ಗೋವಿಂದ ರಾನಡೆ ಮೊದಲಾದ ಮಹನೀಯರು ಮಹಾರಾಷ್ಟ್ರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಹಲವು ಸ್ತ್ರೀಸುಧಾರಣಾ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಫುಲೆಯವರು ಕನ್ಯಾಶಾಲೆ (೧೮೪೮), ದಲಿತ ಮಹಿಳಾ ಶಾಲೆ (೧೮೫೨)ಗಳನ್ನು ತೆರೆದರು. ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡುವುದರ ಜೊತೆಗೆ ವಿಧವೆಯರು ಹೆತ್ತ ಮಕ್ಕಳಿಗೆ ಅನಾಥಾಶ್ರಮವನ್ನೂ ತೆರೆದರು. ಕರ್ವೆಯವರೂ ವಿಧವಾ ವಿವಾಹ ಸಂಘವನ್ನು ಸ್ಥಾಪಿಸಿ, ವಿಧವಾ ವಿವಾಹದಿಂದ ಹುಟ್ಟಿದ ಮಕ್ಕಳಿಗಾಗಿ ಶಾಲೆ, ವಸತಿಗೃಹಗಳನ್ನು ಕಟ್ಟಿಸಿದರು. ೧೯೦೭ರಲ್ಲಿ ಪುಣೆಯಲ್ಲಿ ಮಹಿಳಾ ವಿದ್ಯಾಲಯವನ್ನು ಸ್ಥಾಪಿಸಿ, ಸ್ತ್ರೀ ಶಿಕ್ಷಣಕ್ಕೆ ಕೊಡುಗೆ ನೀಡಿದರು. ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿ ವಿಧವೆಯರ ವಿವಾಹಕ್ಕೆ ಶ್ರಮಿಸಿದ ರಾನಡೆಯವರನ್ನು ಇಲ್ಲಿ ಸ್ಮರಿಸಲೇಬೇಕಾಗುತ್ತದೆ.

ಮದ್ರಾಸಿನಲ್ಲಿ ಸುಧಾರಣಾ ಚಳುವಳಿಯನ್ನು ತಂದ ಕಂದುಕುರಿ ವೀರೇಶಲಿಂಗ ಪಂತುಲು (೧೮೪೮ – ೧೯೧೯) ಅವರ ಕೊಡುಗೆ ಗಮನಾರ್ಹವಾದುದು. ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಒತ್ತಾಯ, ವಿಧವಾ ವಿವಾಹ ಸಮರ್ಥನೆ, ಅಸ್ಪೃಶ್ಯತಾ ಅಂದೋಲನಾ, ವಿಗ್ರಹಾರಾಧನೆ, ಮೂಢನಂಬಿಕೆ ಮೊದಲಾದ ಸಾಮಾಜಿಕ ಸಮಸ್ಯೆಗಳಲ್ಲಿ

ಮಹಿಳೆಯನ್ನು ಕೇಂದ್ರವಾಗಿರಿಸಿಕೊಂಡು ಸುಧಾರಣೆಗೆ ಪ್ರಯತ್ನಿಸಿದರು. ಬಾಲಕಿಯರಿಗಾಗಿ ಶಾಲೆಯನ್ನು, ವಿಧವೆಯರಿಗಾಗಿ ರಕ್ಷಣಾ ಗೃಹವನ್ನು ತೆರೆದಿರುವುದಲ್ಲದೆ ೧೯೦೭ರಲ್ಲಿ 'ಹಿತಕಾರಿಣಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

೧೮೮೦ – ೯೦ರ ದಶಕದಲ್ಲಿ ಪಂಜಾಬಿನಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರ ಆರ್ಯ ಸಮಾಜವು ಸ್ತ್ರೀ ಸುಧಾರಣಾಪರ ದೃಷ್ಟಿಯಿಂದ ದುಡಿಯಿತು. ಮೂರ್ತಿಪೂಜೆ, ಬಾಲ್ಯವಿವಾಹ, ಬಹುದೇವೋಪಾಸನೆ, ವಿಧವೆಯರ ಪುನರ್ವಿವಾಹದ ಮೇಲೆ ವಿಧಿಸಿದ ವಿಧಿ ನಿಷೇಧ, ಜಾತಿ ಪದ್ಧತಿಗಳ ವಿರುದ್ಧ ಸಾಮಾಜಿಕ ಕ್ರಾಂತಿಯನ್ನು ಸಂಘಟಿಸಿತು. ಮಹಿಳಾ ಶಿಕ್ಷಣದ ಔಚಿತ್ಯವನ್ನು ಜನಸಾಮಾನ್ಯರಿಗೆ ಮನದಟ್ಟು ಮಾಡುವಲ್ಲಿ ಆರ್ಯ ಸಮಾಜದ ಕೊಡುಗೆ ಅಪೂರ್ವವಾದುದು. ಹೀಗೆ ಹುಟ್ಟಿಕೊಂಡ ಅನೇಕ ಧಾರ್ಮಿಕ, ಸಾಮಾಜಿಕ ಸಂಘಟನೆಗಳು ಮಹಿಳೆಯನ್ನು ಕೇಂದ್ರೀಕರಿಸಿಕೊಂಡು ಕೌಟುಂಬಿಕ ನೆಲೆಯಲ್ಲಿ ಮಹಿಳಾ ಸುಧಾರಣೆಗೆ ಯತ್ನಿಸಿವೆ.

ಇವುಗಳಲ್ಲದೆ ಆರ್. ವೆಂಕಟರತ್ನಂ ನಾಯಿಡು ಎನ್ನುವವರು ದೇವದಾಸಿ ಪದ್ಧತಿ ನಿರ್ಮೂಲನದ ಮೂಲಕ ಮಹಿಳಾ ಸುಧಾರಣೆಗೆ ಆದ್ಯತೆ ನೀಡಿದರು. ಖ್ವಾಜಾ ಆಲ್‌ಟಾಸ್ ಹುಸೈನ್, ಆಲಿ, ಶೇಖ್ ಮಹಮದ್ ಅಬ್ದುಲ್ಲಾ ಮುಸ್ಲಿಂ ಮಹಿಳೆಯರ ಶಿಕ್ಷಣದ ಮಹತ್ವವನ್ನು ಪ್ರಚಾರ ಮಾಡಿದರು. ಇಂತಹ ಅನೇಕ ಸಮಾಜ ಸುಧಾರಕರ ಪಾತ್ರವು ಭಾರತದಲ್ಲಿ ಸಾಮಾಜಿಕ ಕ್ರಾಂತಿಗೆ ನೆರವಾಯಿತು.

೨.೫.೩. ರಾಷ್ಟ್ರೀಯವಾದ:

ಭಾರತದಲ್ಲಿ ರಾಷ್ಟ್ರೀಯ ವಾದದೊಂದಿಗೆ ಮಹಿಳಾವಾದವು ಸೇರಿಕೊಂಡಿದೆ. ಸ್ವಾಮಿ ವಿವೇಕಾನಂದ, ಮಹರ್ಷಿ ಅರವಿಂದ, ಅನ್ನಿಬೆಸೆಂಟ್, ರಾಮಕೃಷ್ಣ ಪರಮಹಂಸರಂತವರ ಚಿಂತನೆಯು ಈ 'ರಾಷ್ಟ್ರೀಯವಾದ' ಪರಿಕಲ್ಪನೆಗೆ ಸಂವಾದಿಯಾದುದು. ಮಹಿಳೆಯನ್ನು ಪೂಜ್ಯಭಾವನೆಯಿಂದ ಕಾಣುವುದಕ್ಕೆ ಇದರಿಂದ ಸಾಧ್ಯವಾಯಿತು. ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿರುವುದು ಪ್ರಮುಖ ಅಂಶ. ಗಾಂಧೀಯುಗದ ಪ್ರಾರಂಭ ನಮ್ಮ ಮಹಿಳೆಯರ ಹೊಸ ಅವಕಾಶಗಳ ಸಾಧ್ಯತೆಯ ಬಾಗಿಲನ್ನು ತೆರೆಯಿತು. ಮಹಿಳೆಯರಿಗೆ ಸಕ್ರಿಯವಾಗಿ ಸ್ವಾತಂತ್ರ್ಯಾಂದೋಲನದಲ್ಲಿ ಭಾಗವಹಿಸುವ ಅವಕಾಶವನ್ನು ಗಾಂಧೀಜಿಯವರು ನೀಡಿದರು. ಅವರ ಅಹಿಂಸೆ, ಸತ್ಯಾಗ್ರಹದಂತಹ ಪರಿಕಲ್ಪನೆಗಳಲ್ಲಿ ಮಹಿಳಾ ದೃಷ್ಟಿಯೇ ಪ್ರಧಾನವಾಗಿತ್ತು. ಜವಾಹರಲಾಲ್ ನೆಹರೂ ಪಾಶ್ಚಾತ್ಯ ರಾಷ್ಟ್ರಗಳ ಮತಾಧಿಕಾರದ ಚಳುವಳಿಯಿಂದ ಪ್ರಭಾವಿತರಾಗಿ ಮಹಿಳಾ ಸುಧಾರಣೆಯ ವಿಚಾರಧಾರೆಗಳನ್ನು ಮಂಡಿಸಿದರು. ಅವರು ಆರ್ಥಿಕ ಸ್ವಾತಂತ್ರ್ಯ ಸಿಗದ ಹೊರತು ಉಳಿದ ವಿಚಾರಗಳಲ್ಲಿ ಮಹಿಳಾ ಸಮಾನತೆ ಸಾಧ್ಯವಿಲ್ಲ ಎಂಬ ವಾದವನ್ನು ಮುಂದಿಟ್ಟರು.

ರಾಷ್ಟ್ರೀಯ ಚಳುವಳಿಗಾರರು ನೀಡಿದ ಈ ತೆರನಾದ ಸ್ಪೂರ್ತಿಯಿಂದ ಎಷ್ಟೋ ಮಹಿಳಾ ನಾಯಕಿಯರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಗಾಂಧೀ ಕರೆಗೆ ಸ್ಪಂದಿಸಿದ ಮೊದಲ ಮಹಿಳೆಯರೆಂದರೆ, ಕಸ್ತೂರಾಬಾ, ಮೇಡಮ್ ಕಾಮಾ, ಸಿಸ್ಟರ್ ನಿವೇದಿತಾ, ಅನಿಬೆಸೆಂಟ್, ಪಂಡಿತ್ ರಮಾಬಾಯಿ, ಸರೋಜಿನಿ ನಾಯ್ಡು ಕಮಲಾ ನೆಹರು, ವಿಜಯಲಕ್ಷ್ಮೀ ಪಂಡಿತ್, ಸುಚೇತಾ ಕೃಪಲಾನಿ, ಪ್ರಭಾವತಿದೇವಿ, ಅಸಫ್ ಆಲಿ, ಕ್ಯಾ. ಲಕ್ಷ್ಮೀ ಸೆಹಗಲ್, ರಾಜಕುಮಾರಿ ಅಮೃತ್‌ಕೌರ್ ಮೊದಲಾದವರು. ಇವರು ರಾಷ್ಟ್ರೀಯ ಚಳುವಳಿಗೆ ಧುಮುಕಿದ ಮಹಿಳೆಯರ ಸಾಲಿಗೆ ಸೇರುತ್ತಾರೆ. ಸರೋಜಿನಿ ನಾಯ್ಡು ಮುಂದಾಳತ್ವದಲ್ಲಿ ೧೯೧೭ರಲ್ಲಿ ಪ್ರಥಮ ಬಾರಿಗೆ ಮಹಿಳೆಯರಿಗೆ ಮತಚಲಾಯಿಸುವ ಅಧಿಕಾರವನ್ನು ಕೇಳಲಾಯಿತು. ಮದ್ರಾಸು ಪ್ರಾದೇಶಿಕ ವ್ಯಾಪ್ತಿಗೆ ಮೊದಲು ಮತಾಧಿಕಾರದ ಹಕ್ಕನ್ನೂ ನೀಡಲಾಯಿತು. ಕ್ರಮೇಣ ಇತರ ಪ್ರದೇಶಗಳಲ್ಲೂ ಈ ಅಧಿಕಾರದ ಪ್ರಸ್ತಾಪವಾಯಿತು. ಸ್ವದೇಶಿ ಚಳುವಳಿ, ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದಲ್ಲದೆ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಾಧ್ಯವಾಗಿದ್ದು ರಾಷ್ಟ್ರೀಯ ಚಳುವಳಿಯಿಂದ ಎಂಬುದು ಗಮನಾರ್ಹ ಅಂಶವಾಗಿದೆ.

೨.೬. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆ ವಿವಿಧ ಸಂಘಟನೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಹೊಸ ಆತ್ಮವಿಶ್ವಾಸದಿಂದ, ಸ್ವಂತಿಕೆಯಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಸ್ವತಂತ್ರ ಭಾರತದಲ್ಲಿ ಮಹಿಳಾ ಪ್ರಶ್ನೆಯು ಪ್ರಧಾನವಾಹಿನಿಯಲ್ಲಿ ಕಾಣಿಸಿಕೊಂಡಿತು. ಸಂವಿಧಾನಾತ್ಮಕ ಮೂಲಭೂತ ಹಕ್ಕುಗಳ ರಕ್ಷಣೆಯಿಂದಾಗಿ ಮಹಿಳೆಯು ಪುರುಷನಿಗೆ ಎಲ್ಲಾ ರೀತಿಯಲ್ಲೂ ಸಮಾನಳು ಎಂಬ ತತ್ವವನ್ನು ಸಾರ್ವತ್ರಿಕವಾಗಿ ಒಪ್ಪಲಾಯಿತು. ೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತ ಚಲಾಯಿಸಿದರು. ೧೯೫೪ರಲ್ಲಿ ಕಮ್ಯುನಿಸ್ಟ್ ಪಾರ್ಟಿಯ ವಿಭ್ಲಾ ಪಾರೂಕಿ ಮತ್ತು ಇತರ ಸಹೋದ್ಯೋಗಿಗಳ ಸಹಕಾರದಿಂದ 'ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ' (ಎನ್. ಎಫ್. ಐ. ಡಬ್ಲ್ಯು)ವನ್ನು ಸ್ಥಾಪನೆ ಮಾಡಲಾಯಿತು. ಎ.ಐ.ಡಬ್ಲ್ಯು.ಸಿ.ಯ ನಂತರ ಇದೇ ಬಹುದೊಡ್ಡ ಮಹಿಳಾ ಸಂಘಟನೆಯಾಗಿ ಕಾರ್ಯ ನಿರ್ವಹಿಸಿತು.

ಸ್ವತಂತ್ರ ಭಾರತದಲ್ಲಿ ಹೊಸ ಶಕ್ತಿಯಾಗಿ ರೂಪು ಪಡೆದ ಮಹಿಳೆ ಅನೇಕ ಉದ್ದೇಶಗಳನ್ನಿಟ್ಟುಕೊಂಡಿದ್ದಳು. ಅವುಗಳಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಹೊಸ ಎಚ್ಚರ ಪಡೆಯುವುದು, ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನದಲ್ಲಿ ಆಸಕ್ತಿ ವಹಿಸುವುದು ಮುಖ್ಯವಾದುವು. ಸ್ವತಂತ್ರ ಭಾರತದ ಮಹಿಳಾ ವ್ಯಕ್ತಿತ್ವದ

ಅನೇಕ ಮುಖಗಳನ್ನು ಎಸ್. ಗಾಯತ್ರಿಯವರ ಮಾತಿನಲ್ಲಿ ಸಮನ್ವಯಗೊಳಿಸಬಹುದು. "ನೆಹರೂ ಯುಗದಲ್ಲಿ ಉಂಟಾದ ಔದ್ಯೋಗೀಕರಣ, ಹೆಚ್ಚಿನ ವಿದ್ಯಾಭ್ಯಾಸ ಹಾಗೂ ಆಧುನೀಕರಣದಿಂದಾಗಿ ಮಹಿಳೆಯರೂ ಹಲವು ಸೌಲಭ್ಯಗಳ ಪಾಲುದಾರರಾದರು. ಉದ್ಯೋಗರಂಗಕ್ಕೆ ಧುಮುಕಿದ ಮಹಿಳೆಯರು ಸಾಂಪ್ರದಾಯಿಕ ಸ್ತ್ರೀ ಪಾತ್ರಗಳಿಂದಾಚೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಮಹಿಳೆಯ ಹೊಸ ಹೊಸ ಪಾತ್ರಗಳು ಈ ಸನ್ನಿವೇಶದಲ್ಲಿ ಮೂರ್ತಗೊಂಡವು. ಅವಿವಾಹಿತ ಮಹಿಳೆ, ವಿಚ್ಛೇದಿತ ಮಹಿಳೆ, ವಿಧವೆ ಮುಂತಾದವರು, ಗೌರವಾನ್ವಿತರಾಗಿ ಉದ್ಯೋಗ ಹಿಡಿದು ಸ್ವತಂತ್ರರಾಗಿ ಬದುಕಬಹುದಾದ ಸಾಧ್ಯತೆಯೊಂದು ಮಧ್ಯಮ ವರ್ಗದ ಹೆಂಗಸರ ನಡುವೆ ಹುಟ್ಟಿಕೊಂಡಿತು. ಒಟ್ಟಿನಲ್ಲಿ ಮಹಿಳೆಯ ಇರವು ಎಲ್ಲ ಕಡೆಗೆ ವ್ಯಾಪಿಸುವುದಕ್ಕೆ ಈ ಕಾಲಾವದಿಯಲ್ಲಿ ಸಾಧ್ಯವಾಯಿತು"[೨೦]

೨.೭. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ

'ಮಹಿಳೆ' ಮತ್ತು 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಕೇಂದ್ರೀಕೃತ ದೃಷ್ಟಿಯಿಂದ ಹುಟ್ಟುವ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಮಹಿಳೆಯ ಜೈವಿಕ ಅಸ್ತಿತ್ವದಿಂದ ಹಿಡಿದು, ಅವಳ ಕೌಟುಂಬಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಕ ಅಸ್ಮಿತೆಯನ್ನು ಗುರುತಿಸಿಕೊಳ್ಳುವವರೆಗೂ ಮುಂದುವರಿದು, ಚರಿತ್ರೆ, ವಿಜ್ಞಾನ, ವಾಣಿಜ್ಯ, ವೈದ್ಯಕೀಯ - ಹೀಗೆ ಹಲವು ಕ್ಷೇತ್ರಗಳಲ್ಲಿ ಸ್ತ್ರೀಜೀವ ವಿರೋಧಿ ನಿಲುವುಗಳನ್ನು ಶೋಧಿಸುವ ಕೆಲಸ ಮಾಡುತ್ತದೆ. ಈ ಎಲ್ಲಾ ವಸ್ತು ವಿಷಯಗಳಲ್ಲಿ ಸ್ತ್ರೀ ವ್ಯಕ್ತಿತ್ವ ಹೇಗೆ ಅಲಕ್ಷಿಸಲ್ಪಟ್ಟಿದೆ ಮತ್ತು ಅವಳ ಅಭಿವ್ಯಕ್ತಿ ಸಾಧ್ಯತೆಯ ಹೊಸ ಬಗೆಯ ಅವಕಾಶಗಳ ಅನ್ವೇಷಣೆಗೆ ತೊಡಗುತ್ತದೆ. ಪರಂಪರಾಗತ ದೃಷ್ಟಿ ಧೋರಣೆಗಳು ರೂಪಿಸಿಕೊಂಡು ಬಂದ ಸಾಂಪ್ರದಾಯಿಕ, ವೈಜ್ಞಾನಿಕ ಅಭಿಪ್ರಾಯಗಳ ಪುನರ್ ವಿವೇಚನೆ ಮತ್ತು ಇಂತಹ ಅಭಿಪಾಯಗಳಲ್ಲಿ ಹಾಸು ಹೊಕ್ಕಾಗಿರುವ ಪುರುಷ ಸಾಂಸ್ಕೃತಿಕ ನಿಷ್ಠೆಯನ್ನು ಬಯಲು ಮಾಡುವುದೂ ಕೂಡ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯಪ್ರಧಾನ ಆಶಯ.

'ಸ್ತ್ರೀವಾದಿ ವಿಮರ್ಶೆ' ಎನ್ನುವುದು ಕೇವಲ ವಿಮರ್ಶಕನ ಕೈಯ ಒಂದು ಉಪಕರಣವಲ್ಲ, ಅನ್ವಯಿಸಿದಾಗ ಯಾವುದೇ ಪಠ್ಯದ ಅಥವಾ ಸಾಮಾಜಿಕ ಸಂದರ್ಭದ ನಿರ್ದಿಷ್ಟ ಅರ್ಥವನ್ನು ಬಿಚ್ಚಿಡುವ ಕೀಲಿಕೈ ಅಲ್ಲ. ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯು ಸಾಮಾಜಿಕ, ಬೌದ್ಧಿಕ ಪರಂಪರೆಗಳನ್ನೇ ಪರೀಕ್ಷಿಸುವ ಒಂದು ದೃಷ್ಟಿಕೋನ. ಮಹಿಳಾ ಅಧೀನತೆಯಿಂದ ಹಾಗೂ ಈ ಪರಿಸ್ಥಿತಿಗಳನ್ನು ಬದಲಾಯಿಸುವ ಅವಶ್ಯಕತೆಯಿಂದ ಹುಟ್ಟುವ ದೃಷ್ಟಿಕೋನ. ಅಧಿಕಾರ ಸಂಬಂಧಗಳ ಮೇಲೆ, ಲಿಂಗಭೇದ ಸಂಬಂಧಗಳ ಸಾಮಾಜಿಕ ಅರ್ಥ ಕಲ್ಪನೆಯು ಹೇಗೆ ಕಟ್ಟಲ್ಪಟ್ಟಿದೆ ಎನ್ನುವುದರ ಮೇಲೆ ಒತ್ತು ಕೊಡುವುದೇ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ವೈಶಿಷ್ಟ್ಯವಾಗಿದೆ.[೨೧]

ಸಾಹಿತ್ಯ ಮತ್ತು ಸಮಾಜದ ಪರಸ್ಪರ ಪೂರಕ ಸಂಬಂಧದಿಂದಲೇ ಹುಟ್ಟುವ ಈ ವಿಮರ್ಶೆ, ಸಾಹಿತ್ಯದಲ್ಲಿ ರೂಪುಗೊಂಡ ಪರಂಪರಾಗತ ಸ್ತ್ರೀ ಪ್ರತಿಮೆಗಳನ್ನು ಮುರಿದು ಹಾಕಿ ವ್ಯಕ್ತಿತ್ವದ ಹೊಸ ಮಾದರಿಗಳನ್ನು ಸೃಷ್ಟಿ ಮಾಡುತ್ತದೆ. ಸಾಹಿತ್ಯ ಕೃತಿಯೊಂದರ ವಿಮರ್ಶಾ ಮಾನದಂಡವಾಗಿಯೂ ಕಾರ್ಯ ನಿರ್ವಹಿಸುತ್ತದೆ. ಒಟ್ಟು ಸಾಹಿತ್ಯ ಪರಂಪರೆಯನ್ನು ನೋಡಿದಾಗ ಸ್ತ್ರೀಯರಿಂದ ರಚಿಸಲ್ಪಟ್ಟ ಸಾಹಿತ್ಯ ಕೃತಿಗಳು ಗಮನಾರ್ಹ ಸಂಖ್ಯೆಯಲ್ಲಿ ಉಳಿದು ಬಂದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಕೆಲವೇ ಕೆಲವು ಕೃತಿಗಳು ಉಳಿದು ಬಂದಿವೆಯಾದರೂ ಅವು ಸರಿಯಾದ ಮೌಲ್ಯಮಾಪನಕ್ಕೆ ಒಳಗಾಗಿಲ್ಲ. ಸ್ತ್ರೀ ವಿಶಿಷ್ಟ ಧ್ವನಿಯ ದಾಖಲೆಯಾಗಿ ಉಳಿದುಕೊಂಡ ಇಂತಹ ಸಾಹಿತ್ಯ ಕೃತಿಗಳು ಯಾವುದೋ ಪೂರ್ವಾಗ್ರಹಕ್ಕೆ ಒಳಗಾಗಿ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡಿಲ್ಲ. ಅಂದರೆ ಒಂದು ರೀತಿಯ ಅಲಕ್ಷ್ಯಕ್ಕೆ ಒಳಗಾಗಿವೆ ಎಂಬುದು ಇಲ್ಲಿಯ ಮುಖ್ಯ ಆಕ್ಷೇಪವಾಗಿದೆ. ಹಾಗಾಗಿ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಈಗಾಗಲೇ ಪುರುಷನಿಷ್ಠ ವಿಮರ್ಶಾ ಮಾನದಂಡಗಳಿಂದ ಮೌಲ್ಯಮಾಪನಕ್ಕೆ ಒಳಗಾದ ಸಾಹಿತ್ಯ ಕೃತಿಗಳನ್ನು ಸ್ತ್ರೀವಾದಿ ನಿಲುವಿನಿಂದ ಪುನರ್ ವಿವೇಚನೆ ಮಾಡುವ ಕೆಲಸವನ್ನು ಕೈಗೊಳ್ಳುತ್ತದೆ. ದೈನಂದಿನ ಜೀವನದಲ್ಲಿ ಅಲಕ್ಷ್ಯಕ್ಕೆ ಒಳಗಾದ ಸ್ತ್ರೀ ಬದುಕಿನ ಸಾಮಾನ್ಯ ವಿವರಗಳನ್ನೂ, ಸೂಕ್ಷ್ಮ ಮಾನಸಿಕ ಸಂವೇದನೆಯನ್ನು ಗಂಭೀರವಾದ ಚಿಂತನೆಗೆ ಒಳಪಡಿಸುತ್ತದೆ. ಪಿತೃಪ್ರಾಧಾನ್ಯತೆಯು ತನ್ನ ಹಿತಾಸಕ್ತಿ ಕಾಯ್ದುಕೊಳ್ಳುವಲ್ಲಿ ಗೌಪ್ಯವಾಗಿರಿಸಿಕೊಂಡ ಸ್ತ್ರೀಯರ ಮಾನಸಿಕ, ದೈಹಿಕ ಹಿಂಸೆಯ ಒಳನೋಟಗಳನ್ನು ಅನಾವರಣಗೊಳಿಸಿ ಪ್ರಜ್ಞಾಪೂರ್ವಕ ಬದಲಾವಣೆಯನ್ನು ಸಾಮಾಜಿಕ ವಲಯದಲ್ಲಿ ಸ್ಥಾಪಿಸುವುದು ಇದರ ಇನ್ನೊಂದು ಉದ್ದೇಶ. "ಪಿತೃಸಂಸ್ಕೃತಿಯ ಪರಾಮರ್ಶೆ ಮತ್ತು ವಿರೋಧವು ಸ್ತ್ರೀವಾದಿ ವಿಮರ್ಶೆಯ ಮುಖ್ಯ ಗುರಿಯಾಗಿದೆ. ಈಗಿರುವ ಸಂಸ್ಕೃತಿ ಪುರುಷಕೇಂದ್ರಿತ ಚಿಂತನೆಯುಳ್ಳದ್ದೂ, ಏಕಲಿಂಗಿಯೂ ಆಗಿರುವುದರಿಂದ ಇಲ್ಲಿಯ ಮೌಲ್ಯಗಳು ಏಕಪಕ್ಷೀಯವಾಗಿದೆ. ಹೆಂಗಸಿನ ದೃಷ್ಟಿಯಿಂದ ದಮನಕಾರಿಯಾಗಿವೆ. ಸಾಹಿತ್ಯವು ಪಿತೃಪ್ರಧಾನತೆಯ ಸಾಮೂಹಿಕ ಪ್ರಜ್ಞೆಯ ಒಂದು ದಾಖಲೆಯಾಗಿರುವುದರಿಂದ ಈ ಸಾಹಿತ್ಯ ವಿಮರ್ಶೆಯು ಈ ಪ್ರಜ್ಞೆ ವ್ಯಕ್ತಗೊಳ್ಳುವ ಹಲವು ರೀತಿಗಳನ್ನು ಕಂಡು ವಿಮರ್ಶಿಸುತ್ತದೆ."[೨೨]

ಸ್ತ್ರೀವಾದಿ ವಿಮರ್ಶೆಯನ್ನು ನವ್ಯವಿಮರ್ಶೆಗೆ ಬಂದ ಪ್ರತಿಕ್ರಿಯೆ ಎಂತಲೂ, ನವ್ಯೋತ್ತರ ವಿಮರ್ಶೆಯಲ್ಲಿ ಕಾಣಿಸಿಕೊಳ್ಳುವ ವಿಶಿಷ್ಟ ಜೀವ ಪರಧ್ವನಿ ಎಂತಲೂ ಗುರುತಿಸಬಹುದು. ಸಾಮಾಜಿಕ ಸಂರಚನೆಯಲ್ಲಿ ಸಮನ್ವಯಗೊಂಡ ಸ್ತ್ರೀವಿರೋಧಿ ನಿಲುವುಗಳನ್ನಷ್ಟೇ ಬೇರ್ಪಡಿಸಿ, ಸ್ತ್ರೀಯರ ಬಗೆಗಿನ ಮಿಥ್ಯಾರೋಪಗಳನ್ನು ಸರಿಪಡಿಸಿ, ಸ್ತ್ರೀಪುರುಷರೆಂಬ ಭಿನ್ನ ಜೈವಿಕ ಅಸ್ತಿತ್ವಗಳನ್ನು ಏಕತ್ರಗೊಳಿಸುವುದು ಸ್ತ್ರೀವಾದದ ಗುರಿಯಾಗಿದೆಯೇ ಹೊರತು ಕುಟುಂಬ ವ್ಯವಸ್ಥೆಯನ್ನು ಒಡೆಯುವುದಲ್ಲ. ಸ್ತ್ರೀ - ಪುರುಷರ ಸಂಬಂಧಗಳನ್ನು ಪ್ರಾಕೃತಿಕ ಸಹಜತೆಯಿಂದ

ವಿಮುಖಗೊಳಿಸುವುದೂ ಅಲ್ಲ. ಆದರೆ ನೇತ್ಯಾತ್ಮಕ ಸಂಬಂಧಗಳನ್ನು ಇತ್ಯಾತ್ಮಕಗೊಳಿಸುವಲ್ಲಿ ಸುಳ್ಳಿನ ಸಂರಚನೆಯನ್ನು ಒಡೆಯುಸುತ್ತದೆ; ನಿರಚನಗೊಳಿಸುತ್ತದೆ.

೨.೮. ಸ್ತ್ರೀವಾದಿ ನಿರಚನ ಸಿದ್ಧಾಂತ

'ನಿರಚನ' ಎಂಬ ಪದವು ಪಾಶ್ಚಾತ್ಯ ತತ್ವಶಾಸ್ತ್ರದೊಂದಿಗೆ ಸಂಬಂಧ ಪಡೆದ ಒಂದು ಪದವಾಗಿದೆ. ರಚನೋತ್ತರ ಸಾಹಿತ್ಯ ವಿಮರ್ಶಾವಾದವಾಗಿಯೂ ಇದು ಬಳಸಲ್ಪಟ್ಟಿದೆ. ಇದನ್ನು ಮೊದಲು ರೂಪಿಸಿದವನು ಫ್ರೆಂಚ್ ತತ್ವಜ್ಞಾನಿ, ವಿಮರ್ಶಕ ಜೇಕೋಸ್ ಡೆರಿಡಾ. ರಚನಾವಾದವನ್ನು ಒಡೆಯುವ ಪ್ರಕ್ರಿಯೆಯಾಗಿ ನಿರಚನಾ ಸಿದ್ಧಾಂತವನ್ನು ಬಳಸಲಾಗುತ್ತದೆ. ಕೃತಿಕಾರನೊಬ್ಬನ ಕೇಂದ್ರ ಪ್ರಜ್ಞೆಯಲ್ಲಿ ರಚನೆಯ ಕೇಂದ್ರವಿದೆ. ಅದನ್ನು ಒಡೆದು ಬಿಡಿಬಿಡಿಯಾಗಿ ನೋಡದೇ ಅಖಂಡವಾಗಿ ನೋಡಬೇಕೆಂದು ರಚನಾವಾದವು ಹೇಳಿದರೆ, ನಿರಚನಾವಾದವು ಅದನ್ನು ತಿರಸ್ಕರಿಸಿ, ಒಡೆದು ನೋಡುತ್ತದೆ. 'ಕೇಂದ್ರೀಕೃತ', 'ನಿರ್ದಿಷ್ಟ'ವೆಂಬ ನಂಬಿಕೆ, ಆಲೋಚನ ಕ್ರಮಗಳನ್ನು ವಿರೋಧಿಸುತ್ತದೆ ಎಂಬ ನೆಲೆಯಲ್ಲಿ ಡೆರಿಡಾನ ನಿರಚನ ಸಿದ್ಧಾಂತವನ್ನು ಸಾಹಿತ್ಯ ವಿಮರ್ಶೆಯ ಪರಿಭಾಷೆಯಲ್ಲಿ ಕಂಡುಕೊಳ್ಳಲಾಗಿದೆ. ಹಾಗಾಗಿ 'ನಿರಚನ' ಸಿದ್ಧಾಂತವೆನ್ನುವುದು 'ಓದುವಿಕೆಯ ವಿಧಾನ'ವಾಗಿ, 'ಅರ್ಥೈಸುವಿಕೆಯ ಒಂದು ತತ್ವ'ವಾಗಿ ಬಳಕೆಯಾಗುತ್ತಿದೆ.

ನಿರಚನ ಸಿದ್ಧಾಂತವು ನಿರ್ದಿಷ್ಟ ಚೌಕಟ್ಟಿನೊಳಗೆ ಅರ್ಥವಂತಿಕೆ ಕಾಣುವ ಎಲ್ಲಾ ಪೂರ್ವ ಸಿದ್ಧಾಂತಗಳನ್ನು ನಿರಾಕರಿಸುತ್ತದೆ. ಮನುಷ್ಯನ ಮನಸ್ಸು, ಭಾಷೆ - ಭಾವನೆಗಳೊಂದಿಗೆ ತಳುಕುಹಾಕಿಕೊಂಡು ನಮ್ಮೊಳಗೆ ಪರಸ್ಪರ ಘರ್ಷಣೆಗೆ, ದ್ವಂದ್ವಕ್ಕೆ ಕಾರಣವಾಗುವ ಅಂಶಗಳನ್ನು ವಿಭಜಿಸಿ ತೋರಿಸುತ್ತದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಇದು ಮೌಲ್ಯಗಳ ಮರುಶೋಧ, ಪುನರ್ ಮೌಲ್ಯೀಕರಣ ವಿಧಾನ. ನಮ್ಮ ನಂಬಿಕೆ, ಆದರ್ಶಗಳು ಕೆಲವೊಂದು ಸಂದರ್ಭದಲ್ಲಿ ಎಷ್ಟು ಟೊಳ್ಳಾಗಿ ಕಾಣುತ್ತವೆ, ಎಷ್ಟು ಸಡಿಲವಾಗಿವೆ ಎಂಬುದನ್ನು ಇದು ತೆರೆದು ತೋರಿಸುತ್ತದೆ. ನಮ್ಮ ಅರಿವಿಗೆ ಬಾರದೇ ಇರುವ, ಆದರೆ ಭಾಷೆ - ಬರಹಗಳಲ್ಲಿ ರೂಢಿಸಿಕೊಂಡಿರುವ ಚಿಂತನೆಯ ಕ್ರಮವನ್ನು ಪ್ರಶ್ನಿಸುವ, ಸಂದೇಹಕ್ಕೆ ಒಳಪಡಿಸುವ ಈ ವಿಶಿಷ್ಟ ದೃಷ್ಟಿಕೋನ ಸಾಹಿತ್ಯ, ಸಮಾಜ ವಿಜ್ಞಾನಗಳಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದೆ. "ಯಾವುದೇ ಆಗಲಿ ಒಂದರ ಮೇಲೆ ಇನ್ನೊಂದು ಯಜಮಾನಿಕೆಯನ್ನು ವಹಿಸುತ್ತದೆಯೆಂಬ ಪರಿಕಲ್ಪನೆಯಾಗಲಿ, ಒಂದರ ಮುಖಾಂತರ ಇನ್ನೊಂದು ವಿಷಯವನ್ನು ಗ್ರಹಿಸುತ್ತೇವೆ ಎಂಬ ನಿಲುವನ್ನಾಗಲೀ ನಿರಚನ ಸಿದ್ಧಾಂತವು ನಿರಾಕರಿಸುತ್ತದೆ."[೨೩] ಈ ತಾತ್ವಿಕತೆಯನ್ನು ಬಹುವಾಗಿ ಮೆಚ್ಚುವ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಸ್ತ್ರೀವಾದಿ ನಿರಚನ ಸಿದ್ಧಾಂತವನ್ನು ರೂಪಿಸಿಕೊಂಡಿದೆ.

'ಸ್ತ್ರೀವಾದಿ ನಿರಚನ ಸಿದ್ಧಾಂತ'ವು ತನ್ನ ತಾತ್ವಿಕತೆಯನ್ನು ಅನ್ವಯಗೊಳಿಸುವಲ್ಲಿ ಪ್ರಧಾನವಾಗಿ ಸಂಸ್ಕೃತಿ, ಭಾಷೆ, ಬರಹ ಇತ್ಯಾದಿ ಅಂಶಗಳನ್ನು ಗಮನಿಸುತ್ತದೆ. ಈಗಾಗಲೇ ಪುರುಷನಿಷ್ಠ ಸೈದ್ಧಾಂತಿಕ ಚೌಕಟ್ಟಿನ ಅಡಿಯಲ್ಲಿ ಸ್ಥಾಪಿತವಾದ ಭಾಷಿಕ ಕ್ರಮ, ನಿರೂಪಣೆಯ ಕ್ರಮ, ವಿಮರ್ಶಾ ಮಾನದಂಡ ಮುಂತಾದವುಗಳನ್ನು ನಿರಚನ ಸ್ತ್ರೀವಾದಿ ದೃಷ್ಟಿ ನಿರಾಕರಿಸುತ್ತದೆ. ಮೊದಲೇ ನಿರ್ಧರಿತವಾಗಿರುವಂತಹ ಲಿಂಗವೈದೃಶ್ಯದ ಕಲ್ಪನೆಗಳು ಪೂರ್ವಾಗ್ರಹಕ್ಕೆ ಒಳಗಾಗಿರುವುದರಿಂದ ಅಂತಹ ಪ್ರಮೇಯ, ಕಲ್ಪನೆಗಳನ್ನು ಒಡೆಯದ ಒಂದು ವಸ್ತುವನ್ನು ಗ್ರಹಿಸಲು ಸಾಧ್ಯವಿಲ್ಲ. ಒಂದು ವೇಳೆ ಒಡೆಯದೇ ಇದ್ದರೆ ಬರವಣಿಗೆಯಲ್ಲಿ ಅಭಿವ್ಯಕ್ತಿಗೊಳ್ಳುವ ಆ 'ವಸ್ತು'ವಿನ ಪರಿಕಲ್ಪನೆಯನ್ನು ಪೂರ್ವಸಿದ್ಧ ಪ್ರಮೇಯಗಳಿಂದಲೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಇದರಿಂದಾಗಿ ವಸ್ತುವಿನ ಲಿಂಗವೈದೃಶ್ಯದ ಪರಿಕಲ್ಪನೆಗಳು ಪರಂಪರೆಯಿಂದ ಪರಂಪರೆಗೆ ಹಾಗೆಯೇ ಮುಂದುವರಿಯುತ್ತ ಹೋಗುತ್ತದೆ. ಸಂಸ್ಕೃತಿಯ ಪರಿಭಾಷೆಯಲ್ಲಿ ಇದು ಹೆಣ್ಣಿನ ಮೇಲೆ ಹೇರಲ್ಪಡುತ್ತದೆ. ಅದೇ ಭಾಷಿಕ ಕ್ರಮ, ಪರಿಕಲ್ಪನೆಯಡಿಯಲ್ಲಿ ಹೆಣ್ಣಿನ ಚಿತ್ರವನ್ನು ಪರಿಕಲ್ಪಿಸಿಕೊಳ್ಳುವ ಸಾಧ್ಯತೆಯಿರುವುದರಿಂದ ಲಿಂಗವೈದೃಶ್ಯದ ಪರಿಕಲ್ಪನೆಗಳನ್ನು ಒಡೆಯಬೇಕಾದ ಅನಿವಾರ್ಯತೆಯನ್ನು ಸ್ತ್ರೀವಾದಿ ನಿರಚನ ಸಿದ್ಧಾಂತ ಎತ್ತಿ ಹಿಡಿಯುತ್ತದೆ. ಉದಾಹರಣೆಗೆ ಭೂಮಿ ಹೆಣ್ಣು, ಆಕಾಶ ಗಂಡು ಎಂಬ ಒಂದು ಭಾಷಿಕ ಸಂರಚನೆ ಎಷ್ಟೆಲ್ಲಾ ಅರ್ಥ ಪ್ರತೀತಿಯನ್ನು ಹೊರಡಿಸುತ್ತದೆ ಎಂದರೆ, ಭೂಮಿ - ಹೆಣ್ಣು – ಕೆಳಗೆ, ಆಕಾಶ – ಗಂಡು – ಮೇಲೆ; ಭೂಮಿ – ತಾಯಿ - ಸಹನೆ – ಕಷ್ಟ ಸಹಿಷ್ಣು – ಗರ್ಭಧರಿಸುವವಳು, ಆಕಾಶ – ತಂದೆ – ಗುಡುಗು - ಸಿಡಿಲಿನ ಆರ್ಭಟ ಉಳ್ಳವನು – ಗರ್ಭದಾನ ಮಾಡುವವನು; ಭೂಮಿ – ಕ್ಷೇತ್ರ; ಆಕಾಶ - ಬೀಜ; ಭೂಮಿ - ಪ್ರಕೃತಿ, ಆಕಾಶ - ಪುರುಷ; ಭೂಮಿ - ಪಾರ್ವತಿ, ಆಕಾಶ - ಪರಮೇಶ್ವರ ಈ ಎಲ್ಲಾ ಸಂದರ್ಭಗಳಲ್ಲಿಯೂ ಭೂಮಿ ಹೆಣ್ಣಾಗಿಯೆ, ಸಂರಚನೆಗೊಳ್ಳುವುದರಿಂದ, ಹೆಣ್ಣಿನ ಎಲ್ಲಾ ಗುಣಗಳನ್ನು ಭೂಮಿಗೆ ಹೋಲಿಸುವುದರಿಂದ ಹೆಣ್ಣನ್ನು ಕಲ್ಪಿಸುವಾಗಲೆಲ್ಲಾ, ಭೂಮಿಯ ಗ್ರಹಿಕೆಯೆ, ಮನಸ್ಸಿನಲ್ಲಿ ಉಳಿಯುವುದರಿಂದ ಅದೇ ಒಂದು ಕೇಂದ್ರವನ್ನು ರಚಿಸಿಕೊಂಡು ಬಿಡುತ್ತದೆ. ಬರವಣಿಗೆಯಲ್ಲಿ ಕಾಣುವ ಈ ಚಿಂತನೆಯಲ್ಲಿ ಹೆಣ್ಣೇ ಏಕೆ ಭೂಮಿಯಾಗಬೇಕು? ಭೂಮಿಗಿಂತ ಭಿನ್ನವಾಗಿ ಹೆಣ್ಣಿನ ಪರಿಕಲ್ಪನೆಯನ್ನು ಮೂಡಿಸಿಕೊಳ್ಳಲು ಏಕೆ ಸಾಧ್ಯವಿಲ್ಲ ಎನ್ನುವ ಪ್ರಶ್ನೆ ನಿರಚನವಾದಿಗಳದ್ದಾಗಿದ್ದು, ಇಂಥ ಅನುಕ್ರಮಣಿಕೆಯನ್ನು ನಾಶಮಾಡುವುದೇ ಸ್ತ್ರೀವಾದಿ ನಿರಚನ ಸಿದ್ಧಾಂತದ ಉದ್ದೇಶವಾಗಿದೆ.

'ಯಜಮಾನಿಕೆಯ ಧೋರಣೆ' 'ಪ್ರಭುತ್ವರೂಪಿ ಸಾಂಸ್ಕೃತಿಕ ಸಂಗತಿ'ಗಳನ್ನು ಒಡೆದು ನೋಡುವಲ್ಲಿ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯು ನಿರಚನ ಸಿದ್ಧಾಂತದ ಅಭಿಪ್ರಾಯಗಳನ್ನು ಗಮನಿಸುತ್ತದೆ. 'ಸಂತಾನೋತ್ಪತ್ತಿ' ಮಕ್ಕಳ ಲಾಲನೆ-

ಪಾಲನೆ, ಪೋಷಣೆಗಳ ಜವಾಬ್ದಾರಿಯನ್ನು ಸ್ತ್ರೀಯರಿಗೆ 'ನಿರ್ದಿಷ್ಟ'ಗೊಳಿಸಿ, ಆರ್ಥಿಕೋತ್ಪಾದನೆಯಂತಹ ವಿಶಾಲಕ್ಷೇತ್ರಗಳನ್ನು ಪುರುಷರಿಗೆ ವಹಿಸುವ ಹಿಂದಿನ ರಾಜಕಾರಣ ಸಾಮಾಜಿಕವಾದುದು. ಇಂತಹ ಚಿಂತನೆಯ ಹಿಂದಿರುವ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಅಧಿಕಾರ ಸಂಬಂಧಗಳನ್ನು ನಿರಚನಗೊಳಿಸುವಲ್ಲಿ ಸ್ತ್ರೀ ಮತ್ತು ಆರ್ಥಿಕತೆಯ ಪ್ರಶ್ನೆ ಪರಿಗಣಿಸಲ್ಪಡುತ್ತದೆ. ನಿರಚನವಾದ ಸಿದ್ಧಾಂತವು ಹೆಣ್ಣು–ಗಂಡಿನ ವರ್ಗೀಕೃತ ವ್ಯಾಖ್ಯಾನಗಳಲ್ಲಿರುವ ಶ್ರೇಣೀಕರಣವನ್ನೂ ವಿರೋಧಿಸುತ್ತದೆ. ಪುರುಷರ ಚಟುವಟಿಕೆಗಳು ಆರ್ಥಿಕ - ಸಾಂಸ್ಕೃತಿಕ; ಮಹಿಳೆಯರ ಚಟುವಟಿಕೆಗಳು ಜೈವಿಕ-ಪ್ರಾಕೃತಿಕ ಎಂಬ ವರ್ಗೀಕರಣದ ಕ್ರಮವನ್ನು ಭಾರತೀಯ ಸ್ತ್ರೀವಾದಿಗಳು ಪ್ರಬಲವಾಗಿ ಪ್ರಶ್ನಿಸಿದ್ದಾರೆ. ಸಂಸ್ಕೃತಿಯು ಪ್ರಭು, ಪ್ರಕೃತಿ ಪ್ರಜೆ; ಪ್ರಕೃತಿಯು ಕ್ಷೇತ್ರ, ಸಂಸ್ಕೃತಿ ಬೀಜ, ಎನ್ನುವ ಪ್ರಕೃತಿಯ ವಿಕರಾಳತೆಯನ್ನು ಒಪ್ಪ ಓರಣ ಮಾಡುವ ಅದನ್ನು ನಿಯಂತ್ರಿಸುವ, ಮಣಿಸುವ ಜವಾಬ್ದಾರಿ ಸಂಸ್ಕೃತಿಗೆ ಸೇರಿದೆ ಎಂಬ ಯಾಜಮಾನ್ಯತನದ ಸಾಂಸ್ಥಿಕ ಧೋರಣೆಯನ್ನು ಸ್ತ್ರೀವಾದಿಗಳು ಸ್ವೀಕರಿಸುವುದಿಲ್ಲ. ಗಂಡು ಭಾಷೆ, ಭಾವನೆಗಳೇ ಶ್ರೇಷ್ಠವೆಂಬ ಸಂಸ್ಕೃತಿದತ್ತ ಅಭಿಪ್ರಾಯಗಳನ್ನು ಸ್ತ್ರೀವಾದವು ನಿರಾಕರಿಸುವುದರೊಂದಿಗೆ ಮಹಿಳಾ ದೃಷ್ಟಿಯ ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಯ ಪುನರ್ ನಿರ್ಮಿತಿಗೆ ತುಡಿಯುತ್ತದೆ. ಹೆಣ್ಣನ್ನು ಕೀಳೆಂದು ಭಾವಿಸುವ ಗಾದೆ, ಒಗಟು, ನುಡಿಗಟ್ಟುಗಳಂತಹ ಭಾಷಿಕ ಸಂರಚನೆಯ ಮೇಲೂ ನಿರ್ಬಂಧವನ್ನು ಹಾಕುತ್ತದೆ. ಈ ರೀತಿಯ ಭಾಷಾ ಬಳಕೆಯನ್ನು ನಿಷೇಧಿಸುವ ಕಡೆ ಸ್ತ್ರೀವಾದಿ ವಿಮರ್ಶೆ ಪ್ರತಿಭಟನೆಯ ಧೋರಣೆಯನ್ನು ತಳೆದಿದೆ. ಭಾಷೆಯ ಆಚೆ ಇರುವ ಅರ್ಥವ್ಯವಸ್ಥೆಯನ್ನು ಸುಳ್ಳೆಂದು ಪ್ರತಿಪಾದಿಸುವ ಡೆರಿಡಾಳ ಅಭಿಪ್ರಾಯವನ್ನು ಸ್ತ್ರೀವಾದಿಗಳು ಮುಕ್ತವಾಗಿ ಸ್ವೀಕರಿಸುತ್ತಾರೆ. ಈ ದೃಷ್ಟಿಯಲ್ಲಿ ಡೆರಿಡಾಳ ನಿರಚನ ಸಿದ್ಧಾಂತವು ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಮೌಲ್ಯಮಾಪನ ವಿಧಾನವಾಗಿಯೂ ಕಾಣುತ್ತದೆ.

ಅಡಿಟಿಪ್ಪಣಿ

೧. ಬರಗೂರು ರಾಮಚಂದ್ರಪ್ಪ: ಸಾಹಿತ್ಯ ಮತ್ತು ರಾಜಕಾರಣ , ಪುಟ ೪೫ – ೪೬, ೧೯೯೮.

೨. ಸದಾಶಿವ ಕೆ : ವಿಶ್ವ ಇತಿಹಾಸ ಪ್ರಿಯದರ್ಶಿನಿ ಪ್ರಕಾಶನ, ಮೈಸೂರು ಪುಟ- ೯೮, ೧೯೯೮.

೩. ಎಲ್ಲಾ ಬೌದ್ಧಿಕ ಬೆಳವಣಿಗೆಗಳನ್ನು ಬದಲಾವಣೆಗಳನ್ನು ಒಳಗೊಳ್ಳುವ ಸಂಯುಕ್ತ ಪದ.

ಕಲೆ,ಸಾಹಿತ್ಯ, ಸಂಗೀತ ವಿಜ್ಞಾನದಲ್ಲಿ ಹೊಸ ದೃಷ್ಟಿ ಮೈಗೂಡಿಸಿಕೊಂಡು, ರೂಢಿಗತ ಪಾರಂಪರಿಕ ಮೌಲ್ಯಗಳ ಪುನರ್ ವಿವೇಚನೆಗೆ ನಾಂದಿ ಹಾಡಿದ ಪದವೆಂದು ಅರ್ಥೈಸಲಾಗಿದೆ.

೪. ಓ.ಎಲ್. ನಾಗಭೂಷಣ ಸ್ವಾಮಿ, ವಿಮರ್ಶೆಯ ಪರಿಭಾಷೆ, ಪುಟ ೪೯, ೧೯೯೮.

೫. ಅಶ್ವಿನಿ ಧೋಂಗಡೆ, ವಿಠಲರಾವ್ ಗಾಯಕ್ವಾಡ್ (ಅನು): ಸ್ತ್ರೀವಾದಿ ವಿಮರ್ಶೆ: ಸ್ವರೂಪ ಮತ್ತು ಪರಿಕಲ್ಪನೆಗಳು, ಪುಟ. ೨೧, ೨೦೦೧.

೬. ಸುಮಿತ್ರಾಬಾಯಿ ಬಿ.ಎನ್: ಸ್ತ್ರೀವಾದ, ಪುಟ ೩, ೧೯೯೯

೭. ವಿಜಯಲಕ್ಷ್ಮಿ ಕೆ. ಎಂ. : ಪ್ರಜಾವಾಣಿ ಸಾಪ್ತಾಹಿಕ ಪುರವಣಿ (ಭಾನುವಾರ ಡಿಸೆಂಬರ್ ೨, ೨೦೦೧)

೮. ಸುಮಿತ್ರಾಬಾಯಿ ಬಿ.ಎನ್. : ವಿಚಯ, ಪುಟ ೧೩, ೧೯೯೫.

೯. ೧೯೯೭ರಲ್ಲಿ ಸ್ಮೆಲ್ ಸರ್ ಎಂಬುವವರು ಈ ಸಿದ್ಧಾಂತವನ್ನು ಪ್ರತಿಪಾದಿಸಿದರು. "ಸಮುದಾಯ ಒಂದರಲ್ಲಿರುವ ಮೌಲ್ಯಗಳು, ಸಂದರ್ಭಗಳು, ನಿಯಮಗಳ ಚಾಲನೆಯಲ್ಲಿ ವಿವಿಧ ರೀತಿಯ ಒತ್ತಡಗಳು ಏರ್ಪಡುತ್ತವೆ . ಇವುಗಳಿಂದ ಸಾಮಾಜಿಕ ಚಳವಳಿಗಳು ಪ್ರಚೋದಿಸಲ್ಪಡುತ್ತವೆ" ಎನ್ನುತ್ತಾರೆ. ವಿವರಣೆಗೆ: ನಾಗರಾಜು ಟಿ. ಸಾಮಾಜಿಕ ಚಳವಳಿಗಳು.

೧೦. ರಾಮಯ್ಯಂಗಾರ್ ಎಚ್. ಜೆ. ಹಿಂದೂ ಕುಟುಂಬದಲ್ಲಿ ಸ್ತ್ರೀ, ಪುಟ – ೨೪, ೧೯೯೯

೧೧. ನೇಮಿಚಂದ್ರ: ಮಹಿಳಾ ಅಧ್ಯಯನ, ಪುಟ ೧೦, ೨೦೦೧.

೧೨. ಶ್ರೀಮತಿ ಎಚ್. ಎಸ್. ಚಹರೆ, ಪುಟ ೧೨೪, ೨೦೦೧.

೧೩. ಬಸವರಾಜ ಸಬರದ, ಚಂದ್ರಶೇಖರ ಪಾಟೀಲ: ಸಂಕ್ರಮಣ, ೨೨೨, ಪುಟ. ೬೨, (ಸೆಪ್ಟೆಂಬರ್ – ಅಕ್ಟೋಬರ್- ೨೦೦೦)

೧೪. ಗಾಯತ್ರಿ ಎನ್. ಮಹಿಳಾ ಚಳುವಳಿಯ ಮಜಲುಗಳು, ಪುಟ ೬೨, ೧೯೯೭

೧೫. ಮನುಚಕ್ರವರ್ತಿ ಎನ್: ಭಾರಯೀಯ ಸ್ತ್ರೀವಾದ, ಪು. ೯ (ಪೀಠಿಕೆಯಲ್ಲಿ), ೧೯೯೩

೧೬. ಸುಮಿತ್ರಾಬಾಯಿ ಬಿ.ಎನ್: ಸ್ತ್ರೀವಾದ, ಪು. ೩೭ (೧೯೯೯)

೧೭. ನಾಗರಾಜ, ಟಿ : ಸಾಮಾಜಿಕ ಚಳುವಳಿಗಳು, ಪುಟ. ೩೬, ೧೯೯೯.

೧೮. ಮಣಿಪಾಲ ಆರ್. ಕೆ. : ಸಾಮಾಜಿಕ ಚಳುವಳಿಗಳು, ಪುಟ. ೩೩, ೧೯೯೭

೧೯. ಶ್ರೀಮತಿ ಎಚ್. ಎಸ್. (ಅನು) ಆಧುನಿಕ ಭಾರತದಲ್ಲಿ ಮಹಿಳೆ, ಪುಟ. ೨೧, ೨೦೦೧.

೨೦. ಗಾಯತ್ರಿ ಎನ್: ಮಹಿಳಾ ಚಳುವಳಿಯ ಮಜಲುಗಳು, ಪುಟ. ೬೦, ೧೯೯೭

೨೧. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (ಸಂ): ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಪುಟ. ೫೪, ೧೯೯೪

೨೨. ವಿಜಯಾದಬ್ಬೆ: ನಾರಿ: ದಾರಿ - ದಿಗಂತ, ಪುಟ. ೧೭, ೧೯೯೭

೨೩. ಕೇಶವ ಶರ್ಮ ಕೆ. : ರಚನೆ - ನಿರಚನೆ, ಪುಟ ೭೦, ೨೦೦೦.

ಅಧ್ಯಾಯ – ೩

ಕನ್ನಡದಲ್ಲಿ ಕಥಾ ಸಾಹಿತ್ಯ

೩.೧. 'ಕಥೆ'–ಒಂದು ವಿವೇಚನೆ

೩.೨. ಕನ್ನಡ ಕಥಾಸಾಹಿತ್ಯ ಬೆಳೆದು ಬಂದ ಬಗೆ

೩.೩. ಮಹಿಳಾ ಕಥಾ ಸಾಹಿತ್ಯ ಬೆಳೆದು ಬಂದ ಬಗೆ

ಅಧ್ಯಾಯ – ೩

ಕನ್ನಡದಲ್ಲಿ ಕಥಾ ಸಾಹಿತ್ಯ

೩.೧. 'ಕಥೆ' – ಒಂದು ವಿವೇಚನೆ

ಭಾರತೀಯ ಭಾಷೆಗಳಲ್ಲಿ ಸಾಹಿತ್ಯ ಪ್ರಕಾರಗಳಿಗೆ ಹೊಸ ಹುಟ್ಟು ದೊರಕಿದ್ದು ಆಂಗ್ಲಭಾಷಾ ಸಾಹಿತ್ಯದ ಪರಿಚಯದಿಂದ ಎನ್ನಬಹುದು. ಕನ್ನಡದ ಸಣ್ಣಕಥೆಗಳಿಗೆ ಪಾಶ್ಚಾತ್ಯ ಕಥೆಗಳು ಪ್ರೇರಣೆ ಒದಗಿಸಿದವು. ವಸಾಹತು ಶಾಹಿಯ ಪರಿಣಾಮದಿಂದಾಗಿ ೧೯ನೆಯ ಶತಮಾನದಲ್ಲಿ ಸೊರಗಿ ಹೋದ ಕೆಲವು ಸಾಹಿತ್ಯ ಪ್ರಕಾರಗಳು ೨೦ನೆಯ ಶತಮಾನದಲ್ಲಿ ಪುನರ್ಜನ್ಮ ಪಡೆದವು. ಈ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥಾ ಪ್ರಕಾರವೂ ಒಂದು.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ 'ಕಥೆ' ಮತ್ತು 'ಕತೆ' ಈ ಎರಡೂ ಪದಗಳು ಬಳಕೆಯಲ್ಲಿವೆ. ಈ ಎರಡೂ ಪದಗಳು ಪರಸ್ಪರ ಪರ್ಯಾಯ ಪದಗಳು ಎಂಬಂತೆ ಬಳಕೆಯಾಗುತ್ತಿವೆ. ಆದರೆ 'ಕಥೆ'ಗೂ 'ಕತೆ'ಗೂ ವ್ಯತ್ಯಾಸವಿದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ 'ಕಥೆ' ಎಂಬ ಪದ ಬಳಕೆಯಾಗಿದ್ದರೆ, ೧೯೦೦ರ ನಂತರ 'ಕತೆ' ಎಂಬ ಪದ ಬಳಕೆಯಾಗಿರುವುದನ್ನು ಗಮನಿಸಬಹುದು. ಸಂಸ್ಕೃತದ 'ಕಥಾ' ಶಬ್ದದ ಕನ್ನಡ ರೂಪ 'ಕಥೆ'. ಪಂಚತಂತ್ರ, ಜಾತಕ, ಪುರಾಣ, ಜನಪದ, ನೀತಿಕಥೆ ಮೊದಲಾದವುಗಳಿಗೆ 'ಕಥೆ' ಎಂದು ಕರೆಯುವ ವಾಡಿಕೆಯಿತ್ತು. ಆಧುನಿಕ ಸಣ್ಣಕಥೆಗಳನ್ನು 'ಕತೆ' ಎಂಬ ಪದದಿಂದಲೇ ಕರೆಯುವುದು ಚಾಲ್ತಿಯಲ್ಲಿದೆ. ಇಂಗ್ಲೀಷಿನ 'ಶಾರ್ಟ್ ಸ್ಟೋರಿ' (ಖುಂಡಿಣ್ಣ ಣಂಡಿಥಿ) ಎಂಬ ಪದ ಕನ್ನಡಕ್ಕೆ ಬರುವಾಗ ಸಣ್ಣಕಥೆ ಎಂದು ಕರೆಸಿಕೊಳ್ಳುತ್ತದೆಯಾದರೂ, ಆಧುನಿಕ ಸಣ್ಣಕಥೆಗಳನ್ನು 'ಕತೆ' ಎಂಬ ಪದದಿಂದಲೇ ಕರೆಯುವುದು ಹೆಚ್ಚು ಸಮಂಜಸವೆನಿಸುತ್ತದೆ. 'ಕತೆ' ಶಬ್ದಕ್ಕೆ 'ಸಣ್ಣ' ಎಂಬ ಪುನರ್‌ಪದವನ್ನು ಸೇರಿಸುವ ಅವಶ್ಯಕತೆ ಇಲ್ಲವೆನಿಸುತ್ತದೆ. ವಾರಪತ್ರಿಕೆಗಳಲ್ಲಿ ಗಂಭೀರ ಕಥಾ ಸಂಕಲನಗಳಲ್ಲಿ 'ಕತೆ' ಎಂಬ ಪ್ರಯೋಗವೇ ಅಧಿಕವಾಗಿ ಗೋಚರಿಸುತ್ತದೆ. ಕಥೆಗಳನ್ನು ಬರೆಯುವವರು ಕಥೆಗಾರರೆಂದು ಗುರುತಿಸಿಕೊಳ್ಳುತ್ತಾರೆಯೇ ವಿನಃ ಸಣ್ಣಕಥೆಗಾರರು ಎಂದು ಕರೆಯಿಸಿಕೊಳ್ಳುವುದು ವಿರಳ.

೧೯೦೦ರಲ್ಲಿ ಕಥಾ ಸಾಹಿತ್ಯಕ್ಕೆ ಒಂದು ಹೊಸ ತಿರುವು ಸಿಕ್ಕಿದ ಹಾಗೆ 'ಕತೆ' ಎಂಬ ಶಬ್ದದ ಬಳಕೆಯೂ ಪ್ರಾರಂಭವಾಯಿತು. ಈ ಹೊತ್ತಿನಲಿಯೇ ಚಿಕ್ಕ ಕತೆ, ಸಂಪೂರ್ಣ ಕತೆ, ಕಥಾಗುಲ್ಮ, ಸಣ್ಣಕಥೆ, ತೀರಾ ಸಣ್ಣ ಕಥೆ, ಹೀಗೆ ವೈವಿಧ್ಯಮಯವಾಗಿ ಬಳಕೆಯಾಗಿರುವುದು ಕಂಡುಬರುತ್ತದೆ.

೧೯೦೦ಕ್ಕಿಂತ ಹಿಂದಿನ ಪುರಾಣ ಕಥೆ, ಜನಪದ ಕಥೆ, ನೀತಿಕಥೆ, ಮುಂತಾದವುಗಳಿಗೆ 'ಕಥೆ' ಎಂದು ಕರೆಯುವ ವಾಡಿಕೆ ಇತ್ತು. ಇಂಗ್ಲಿಷಿನ 'ಟೇಲ್' ಪದಕ್ಕೆ ಸಂವಾದಿಯಾಗಿ ಇದು ಬಳಕೆಯಾಗಿದೆ. ಇದು ೧೯೦೦ರ ಮೊದಲಿಗೆ ಬಂದ ಕಥಾ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿತ್ತು.

'ಕಥೆ' ಮತ್ತು 'ಕತೆ' ಇವು ಎರಡನ್ನು ಒಟ್ಟಿಗೆ ಗುರುತಿಸುವಾಗ 'ಕಥಕ'[೧] ಎಂದು ಕರೆಯಲಾಗಿದೆ. ನೀತಿಕಥೆ, ಧಾರ್ಮಿಕ ಕಥೆ, ಜನಪದ ಕಥೆ, ಪೌರಾಣಿಕ ಕಥೆಗಳಲ್ಲಿ ಕಾಣಿಸಿಕೊಳ್ಳುವ ಎಲ್ಲ ಕಥಕಗಳನ್ನು ಒಟ್ಟಿಗೆ ಗುರುತಿಸುವಾಗ 'ಕಥಕ'ಗಳು ಎಂದು ಕರೆಯಲಾಗಿದೆ.

'ಕತೆ', 'ಕಾದಂಬರಿ' ಈ ಎರಡು ಪ್ರಕಾರಗಳೂ ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಆರಂಭವಾದವು. ಸಣ್ಣಕಥೆ ಮತ್ತು ಕಾದಂಬರಿಯನ್ನು ಒಟ್ಟಿಗೆ ಗುರುತಿಸುವ ಒಂದು ನಿರ್ದಿಷ್ಟವಾದ ಪದ ನಮ್ಮಲ್ಲಿ ಬಳಕೆಯಲ್ಲಿಲ್ಲ. ಆದ್ದರಿಂದ ಇದಕ್ಕೆ 'ಕಥಾನಕ' (ಫಿಕ್ಷನ್) ಎಂದು ಕರೆಯುವುದು ಸೂಕ್ತ. ಈ ಮೇಲೆ ಹೇಳಿದ 'ಕಥೆ', ಕತೆ, ಕಾದಂಬರಿ ಇವುಗಳನ್ನೆಲ್ಲಾ ಒಟ್ಟು ಸೇರಿಸಿ ಹೇಳುವಾಗ 'ಕಥಾನಕ' ಎಂದು ಕರೆಯುವುದು ಒಳ್ಳೆಯದು ಎಂದು ಡಾ। ಸಬಿಹಾ ಅಭಿಪ್ರಾಯಪಡುತ್ತಾರೆ. ಕತೆಗಿಂತ ದೊಡ್ಡದಾದ, ಕಾದಂಬರಿಗಿಂತ ಚಿಕ್ಕದಾದ ಸಾಹಿತ್ಯರೂಪಕ್ಕೆ 'ನೀಳ್ಗತೆ' ಎನ್ನಲಾಗುತ್ತದೆ.

'ಕಥೆ' ಎಂಬ ಪದಕ್ಕೆ ನಿರ್ದಿಷ್ಟವಾದ ವ್ಯಾಖ್ಯಾನ ನೀಡುವುದು ಕಷ್ಟಸಾಧ್ಯ. ಬಿ. ಜನಾರ್ದನ ಭಟ್‌ರವರು, "ಪಾತ್ರ, ಘಟನೆ, ವಸ್ತು ಮತ್ತು ಸನ್ನಿವೇಶ ಈ ನಾಲ್ಕು ಅಂಶಗಳು ಒಂದು ಆಧುನಿಕ ಪ್ರಜ್ಞೆಯಿಂದ ಉದ್ದೇಶಿತ ಪರಿಣಾಮಕ್ಕಾಗಿ ಮಡಿಯುವ ಗದ್ಯ ಕಥಾನಕವೇ 'ಸಣ್ಣಕಥೆ'[೨] ಎಂದು ವ್ಯಾಖ್ಯಾನಿಸಿರುತ್ತಾರೆ. ಈ ನಾಲ್ಕು ಅಂಶಗಳಲ್ಲಿ ಯಾವುದಾದರೂ ಒಂದರ ಕೊರತೆಯುಂಟಾದರೂ ಕಥೆ ಪರಿಣಾಮಕಾರಿಯಾಗಿ ಮೂಡಿಬರುವಲ್ಲಿ ವಿಫಲವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಗಾತ್ರದಲ್ಲಿ ಕಾದಂಬರಿಗಿಂತಲೂ ಚಿಕ್ಕದಾಗಿರುವ 'ಕಥೆ'ಯ ಬಗೆಗೆ ವ್ಯಾಖ್ಯಾನಗಳನ್ನು ನೀಡುವುದು ಕಷ್ಟದ ಕೆಲಸವಾದರೂ ಡಾ. ಸಬಿಹಾರವರು ಕತೆಯ ಕುರಿತ ವ್ಯಾಖ್ಯಾನದ ಮೂರು ನೆಲೆಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ,

೧. ಕಥೆಯನ್ನು ಓದಿ ಮುಗಿಸುವ ನಿಗದಿತ ಸಮಯ ಅಥವಾ ಕಥೆಗಳ ಬರವಣಿಗೆಯ ನಿಗದಿತ ಪುಟಗಳ ಸಂಖ್ಯೆ ಇಲ್ಲವೆ ಶಬ್ದಗಳ ಪ್ರಮಾಣವನ್ನು ಪ್ರಧಾನವಾಗಿಟ್ಟುಕೊಂಡು ಕಥೆಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದವರು.

೨. ಕಥೆಯ ವಸ್ತು, ಕಥೆಗಾರ ಮತ್ತು ಓದುಗ ಇವರ ಸಂಬಂಧವನ್ನು ಅನುಸರಿಸಿ ಕಥೆಯ ವ್ಯಾಖ್ಯಾನವನ್ನು ಕೊಡಲು ಪ್ರಯತ್ನಿಸಿದವರು.

೩. ಕಥೆಯಲ್ಲಿ ಒಳಗೊಳ್ಳುವ ಆಂತರಿಕವಾದ ರಚನೆಯ ಪ್ರಧಾನ ಅಂಶಗಳು ಹಾಗೂ ಚಲನೆಯ ರೀತಿ ಇಂತಹ ವಿಚಾರಗಳಿಗೆ ಆದ್ಯತೆಯನ್ನು ಕೊಟ್ಟು ಕಥೆಯ ವ್ಯಾಖ್ಯಾನ ಮಾಡಲು ಪ್ರಯತ್ನಿಸಿದವರು.

ಮೇಲಿನ ಮೂರು ನೆಲೆಗಳನ್ನು ಗಮನಿಸಿದಾಗ, ಈ ನೆಲೆಗಳು ಕಥೆಯ ಒಟ್ಟು ಆಶಯ, ಗಾತ್ರ, ವರ್ಗದ ಕುರಿತಾದ ಮಾಹಿತಿಗಳನ್ನು ನೀಡುತ್ತವೆಯೇ ಹೊರತು 'ಕಥೆ'ಯ ಬಗೆಗೆ ನಿರ್ದಿಷ್ಟ ವ್ಯಾಖ್ಯಾನ ನೀಡುವುದಿಲ್ಲ.

ಆಧುನಿಕ ಕಥೆಗಳು ರೂಪುಗೊಂಡದ್ದು ಭಾರತೀಯ ಪರಂಪರೆಯ ಕತೆಗಳಿಂದ. ಕ್ರಿ.ಶ. ೧ನೆಯ ಶತಮಾನದಿಂದ ೬ನೆಯ ಶತಮಾನದ ಮಧ್ಯದಲ್ಲಿ ರಚಿತವಾದದ್ದು ಎಂದು ಹೇಳಲಾಗುವ 'ಗುಣಾಢ್ಯ'ನ 'ಬೃಹತ್ಕಥೆ' ಭಾರತವಷ್ಟೇ ಅಲ್ಲ, ವಿಶ್ವದ ಕಥಾಸಂಕಲನಗಳಿಗೆ ಸ್ಫೂರ್ತಿಯಾಯಿತು. 'ಬೃಹತ್ಕಥೆ'ಯ ಕಥನಕಲೆಯ ವೈಶಿಷ್ಟ್ಯಗಳು ಸಂಸ್ಕೃತ ಗದ್ಯ ಕವಿಗಳಿಗೆ ನೂತನ ಕಾವ್ಯರಚನೆಗೆ ಸ್ಫೂರ್ತಿಯಿತ್ತುದರಲ್ಲಿ ಸಂದೇಹವಿಲ್ಲ.

೩.೨. ಕನ್ನಡ ಕಥಾಸಾಹಿತ್ಯ ಬೆಳೆದು ಬಂದ ಬಗೆ

"ಆಧುನಿಕ ಸಣ್ಣಕಥೆಗಳು ಮೊದಲು ಕಾಣಿಸಿಕೊಂಡದ್ದು ಪತ್ರಿಕೆಗಳಲ್ಲಿ. ಅಲ್ಲದೆ ಕಥೆಗಳು ಹಿಂದಿನ ಕಥೆಗಳ ಹಾಗೆ ಸಾಂಪ್ರದಾಯಿಕವಾಗಿ ಪ್ರಾರಂಭವಾಗದೆ ಘಟನೆಯ ನಡುವಿನಿಂದ ಪ್ರಾರಂಭಿಸುವ ಪದ್ಧತಿಯನ್ನು ಅನುಸರಿಸುತ್ತವೆ".[೨]

ಇಂಗ್ಲಿಷಿನ ಮೊತ್ತಮೊದಲ ಸಣ್ಣಕಥೆ ೧೮೩೨ರ ಜನವರಿ ೧೪ರ 'ಸ್ಯಾಟರ್‌ಡೇ ಕೋರಿಯರ್' ಪತ್ರಿಕೆಯಲ್ಲಿ ಪ್ರಕಟವಾದ 'ಎಡ್ಗರ್ ಅಲನ್ ಪೋ'ನ 'ಮೆಟ್‌ಜೆಂಗರ್‌ಸ್ಟೈನ್' ಎಂಬ ಕಥೆ. ಕನ್ನಡದ ಮೊದಲ ಆಧುನಿಕ ಸಣ್ಣಕಥೆ ೧೯೦೦ರ ಆಗಸ್ಟ್ ಸಂಚಿಕೆಯಲ್ಲಿ 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟವಾದ ಪಂಜೆಯವರ 'ನನ್ನ ಚಿಕ್ಕ ತಾಯಿ' ಕಥೆ. ಕನ್ನಡದಲ್ಲಿ ಸಣ್ಣ ಕಥೆಗಳನ್ನು ಮೊದಲು ಬರೆದವರು ಪಂಜೆಯವರಾದರೂ ಬೇರೆ ಭಾಷೆಗಳಲ್ಲಿ ಪಂಜೆಯವರಿಗಿಂತ ಮೊದಲೇ ಸಣ್ಣ ಕಥೆಗಳನ್ನು ಬರೆದವರಿದ್ದಾರೆ. ಇಂಗ್ಲೀಷಿನ ನ್ಯಾಶ್, ಸರ್ ವಾಲ್ಟರ್ ಸ್ಕಾಟ್, ವಾಷಿಂಗ್ಟನ್ ಐರ್ವಿಂಗ್, ಹಾಫ್‌ಮನ್, ಹಾಥರ್ನ್ ಮುಂತಾದವರು (ಪೋಗಿಂತಲೂ) ಮೊದಲೇ ಇಂಥ ಪ್ರಯತ್ನ ಮಾಡಿದ್ದರು.

೧೯೦೦ರಲ್ಲಿ 'ಸುವಾಸಿನಿ' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಪಂಜೆಯವರ 'ನನ್ನ ಚಿಕ್ಕ ತಾಯಿ' ಹಾಗೂ 'ನನ್ನ ಚಿಕ್ಕ ತಂದೆ' ಎಂಬ ಕಥೆಗಳು ಮೊದಲ ಆಧುನಿಕ ಸಣ್ಣಕಥೆಗಳೆನಿಸಿದವು. ಪಂಜೆಯವರ ಕಥಾ ರಚನೆಗೆ ಇಂಗ್ಲಿಷ್ ಕಥೆಗಳೇ ಪ್ರೇರಣೆ ನೀಡಿದವು. ಅಂದಿನ 'ಸ್ಟ್ರಾಂಡ್' ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಕಥೆಗಳು ಪ್ರಕಟವಾಗುತ್ತಿದ್ದವು. ಆಗ ಆಂಗ್ಲ ಕಥಾ ಸಾಹಿತ್ಯವೂ ಈಗಿನಷ್ಟು ಸಮೃದ್ಧವಾಗಿರಲಿಲ್ಲ. ಇದ್ದ ಸ್ವಲ್ಪ ಸಾಹಿತ್ಯವೂ ಎಲ್ಲರ ಕೈಗೆ ಎಟಕುತ್ತಿರಲಿಲ್ಲ. ಮಂಗಳೂರಿನ ಒಂದೆರಡು ಶಾಲೆಗಳಲ್ಲಿ ತರಿಸುತ್ತಿದ್ದ ಕೆಲವು ಮಾಸ ಪತ್ರಿಕೆಗಳು ಪ್ರಕಟವಾಗುತ್ತಿದ್ದ ಕೆಲವೇ ಓದುಗರಿಗೆ ದೊರೆಯುತ್ತಿದ್ದವು. ಪಂಜೆಯವರು ತಾವು ಓದುತ್ತಿದ್ದ ಆ ಕಥೆಗಳನ್ನು ಕನ್ನಡಕ್ಕೆ ಅನುವಾದಿಸುತ್ತಿರಲಿಲ್ಲ. ಬದಲಾಗಿ ಅದರ ಕಥನಕಲೆಯನ್ನು ಕನ್ನಡಿಸುತ್ತಿದ್ದರು. ಇದು ಮುಂದಿನ ಬರಹಗಾರರಿಗೆ ಅನುಕೂಲವಾಯಿತು. ಪಂಜೆಯವರಂತೆ ಮಾಸ್ತಿಯವರೂ 'ಸ್ಟ್ರಾಂಡ್' ಪತ್ರಿಕೆಯ ಕಥೆಗಳಿಂದ ಸ್ಫೂರ್ತಿಗೊಂಡು 'ಇಂಥ ಕಥೆಗಳು ಕನ್ನಡದಲ್ಲೂ ಬರಬೇಕು' ಎಂದು ತೀರ್ಮಾನಿಸಿ ಸಣ್ಣಕಥೆಗಳನ್ನು ಬರೆಯತೊಡಗಿದರು.

ಮಿಶನರಿಗಳ ಪ್ರವೇಶದಿಂದ ಮುದ್ರಣಯುಗ ಆರಂಭವಾಗಿದ್ದು ಮಂಗಳೂರಿನ ಬಾಸೆಲ್ ಮಿಶನ್ ಈ ನಿಟ್ಟಿನಲ್ಲಿ ದೊಡ್ಡ ಕೊಡುಗೆಯನ್ನೇ ನೀಡಿದೆ. ಮುಂದೆ ಧಾರ್ಮಿಕ ಕೇಂದ್ರಗಳು, ವೃತ್ತಪತ್ರಿಕೆಗಳು, ಪಠ್ಯಪುಸ್ತಕಗಳು, ಪ್ರಾಚೀನ ಕಥೆಗಳ ಮರುನಿರೂಪಣೆಗಳು, ಅನುವಾದಗಳು ಗದ್ಯ ಬರವಣಿಗೆಗೆ ಚಾಲನೆ ಕೊಟ್ಟವು. ಆಧುನಿಕ ಕನ್ನಡ ಗದ್ಯ ಹೀಗೆ ರೂಪುಗೊಂಡರೂ ಅದಕ್ಕೆ ಜೀವಸ್ಪರ್ಷ ನೀಡಿದ್ದು ಪಾಶ್ಚಾತ್ಯ ಆಧುನಿಕ ಸಣ್ಣಕಥೆಗಳು. ಪಂಜೆಯವರಿಂದ ಆರಂಭವಾಗಿ ಉಳ್ಳಾಲ ಮಂಗೇಶರಾವ್, ಎಂ. ಎನ್. ಕಾಮತ್, ಆರ್. ಶ್ರೀನಿವಾಸರಾವ್, ಗೋಪಾಲಕೃಷ್ಣ, ಕೆ. ಸುಂದರರಾವ್, ಐರೋಡಿ ಶಿವರಾಮಯ್ಯ, ಅನಂತ ಪೈ ಕಾಸರಗೋಡು, ಶಿವರಾಮ ಕಾರಂತ, ಪಿ. ಎನ್. ವೆಂಕಟರಾವ್, ಸುರತ್ಕಲ್ ಸುಬ್ಬರಾವ್, ಬೆಳ್ತಂಗಡಿ ಕೃಷ್ಣರಾವ್, ಕುಡ್ಪಿ ವಾಸುದೇವ ಶೆಣೈ, ಜೆ. ವಾಮನಭಟ್, ಅಲೆವೂರು ಶೇಷಪ್ಪಯ್ಯ, ಕೇಶವ ಕುಡುವ, ಬೇವಿಂಜೆ ಶ್ರೀಧರ ಕಕ್ಕಿಲ್ಲಾಯ ಮೊದಲಾದವರು ಕಥೆಗಳನ್ನು ಬರೆದರು. ಮುಂದೆ ಇದು ಜನಪ್ರಿಯ ಪ್ರಕಾರವಾಗಿ ಬೆಳೆಯುವುದರೊಂದಿಗೆ ಸಾವಿರಾರು ಕಥೆಗಾರರನ್ನು ಸೃಷ್ಟಿಸಿತು.

ಕನ್ನಡದಲ್ಲಿ ಕಾದಂಬರಿಯ ನಂತರ ಜನಪ್ರಿಯವಾದ ರೂಪವೇ ಸಣ್ಣಕಥೆ. ಒಂದು ಕಾಲಕ್ಕೆ ಸಂಸ್ಕೃತದಲ್ಲಿ ಸುಭಾಷಿತಗಳು ಹುಟ್ಟಿಕೊಂಡ ಹಾಗೆ ಈಗಿನ ಕಾಲದಲ್ಲಿ ಲೆಕ್ಕವಿಲ್ಲದಷ್ಟು ಸಣ್ಣಕಥೆಗಳು ಹುಟ್ಟುತ್ತಿವೆ. ಸಂಖ್ಯೆಗಳ ದೃಷ್ಟಿಯಿಂದ ಸಣ್ಣಕಥಾ ಪ್ರಕಾರ ಒಂದು ಸಮೃದ್ಧ ಸಾಹಿತ್ಯ ಪ್ರಕಾರವಾಗಿ ಕಂಡರೂ ಬೆಳವಣಿಗೆಯ ದೃಷ್ಟಿಯಿಂದ ನೋಡಿದಾಗ ಸ್ವಲ್ಪ ಮಟ್ಟಿನ ಕೊರತೆ ಎದ್ದು ಕಾಣುತ್ತದೆ. ಪತ್ರಿಕೆಗಳ ಪುಟ ತುಂಬುವುದಕ್ಕಾಗಿಯೋ, ಕೆಲವರನ್ನು ಬರಹಗಾರರೆಂದು ಕರೆಸಿಕೊಳ್ಳುವ ತರಾತುರಿಯೋ ಕೆಲವರನ್ನು ಕಥೆಗಾರರನ್ನಾಗಿ ರೂಪಿಸಿದ್ದಿರಬಹುದು. ಅಂದರೆ

ಇದರರ್ಥ ಪರಿಪೂರ್ಣವಾದ ಸಾಹಿತ್ಯ ಅದರಲ್ಲಿ ಇರಲಿಲ್ಲವೆಂದಲ್ಲ. ಆದರೆ ಭಾವಗೀತೆಯ ಹಾಗೆ ಸಣ್ಣಕಥೆ ಒಂದು ಹೊಸ ಸಂಸ್ಕಾರವನ್ನು ಪಡೆದು ಬೆಳೆಯಲಿಲ್ಲ.

ಸಣ್ಣಕಥೆಯು ತಂತ್ರ, ವ್ಯಾಪ್ತಿ, ನಿರೂಪಣೆ, ಪರಿಣಾಮ ಇವುಗಳಿಂದ ಕೂಡಿದ ಒಂದು ವಿಶಿಷ್ಟ ಪ್ರಕಾರವಾಗಿದ್ದರೂ ಸಣ್ಣಕಥೆಯ ಬರವಣಿಗೆ ತೀರಾ ಲಘುವಾಗಿಬಿಟ್ಟಿದೆ. ಆರಂಭದ ನಮ್ಮ ಲೇಖಕರಿಗೆ ಈ ಪ್ರಕಾರದ ಬಗ್ಗೆ ಇದ್ದ ಉತ್ಸಾಹ, ಕುತೂಹಲವೇ ಕಥಾ ಸಾಹಿತ್ಯದ ಬೆಳವಣಿಗೆಗೆ ಕಾರಣವಾಯಿತು. ಆರಂಭದಲ್ಲಿ ಅಂದರೆ ೧೯೨೦ರಿಂದ ೧೯೩೦ರ ಅವಧಿಯಲ್ಲಿ ಹುಟ್ಟಿಕೊಂಡ ಸಣ್ಣಕಥೆಗಳ ಹಿಂದೆ ಲೇಖಕರ ಪ್ರಾಮಾಣಿಕ ಪರಿಶ್ರಮ, ಕಾಳಜಿ ಇದ್ದುದು ವ್ಯಕ್ತವಾಗುತ್ತದೆ. ಆದರೆ ಆ ಕಾಲದ ಕಥೆಗಳೆಲ್ಲ ಉತ್ತಮ ವರ್ಗದ ಕಥೆಗಳೆಂದು ತೀರ್ಮಾನಿಸುವಂತಿಲ್ಲ. ವಿಷಯದ ಆಯ್ಕೆಯಲ್ಲಾಗಲೀ, ನಿರೂಪಣಾ ಶೈಲಿಯಲ್ಲಾಗಲೀ ಅಪರಿಪೂರ್ಣತೆ ಗೋಚರಿಸುತ್ತದೆ. ಹಾಗಾಗಿ ಸಾಹಿತ್ಯಕವಾಗಿ ಒಂದು ಗಟ್ಟಿಯಾದ ಪ್ರಕಾರವಾಗಿರಲಿಲ್ಲ ಸಣ್ಣಕಥೆ. ಅಂದರೆ ಸಣ್ಣಕಥೆಯನ್ನೇ ಅಭಿವ್ಯಕ್ತಿಯ ಮುಖ್ಯ ಮಾಧ್ಯಮವನ್ನಾಗಿ ಪರಿಗಣಿಸಿದ ಬರಹಗಾರರ ಕೊರತೆ ಎದ್ದು ಕಾಣುತ್ತಿತ್ತು. ಈ ಕೊರತೆಯನ್ನು ತುಂಬಿದವರು ಶ್ರೀನಿವಾಸರು.

ಸಣ್ಣಕಥೆಗೆ ಒಂದು ಸ್ವರೂಪವನ್ನು ತಂದುಕೊಡುವುದರೊಂದಿಗೆ ಅದನ್ನು ಒಂದು ಗಂಭೀರ ಚಿಂತನೆಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿದವರು ಕನ್ನಡದ ಆಸ್ತಿ ಎಂದೇ ಹೆಸರಾದ ಮಾಸ್ತಿಯವರು. ಹಾಗಾಗಿ 'ಸಣ್ಣಕಥೆಗಳ ಜನಕ' ಎಂದು ಕರೆಸಿಕೊಂಡರು. ಸಣ್ಣಕಥೆಗೆ ನಿಜವಾದ ಸಾಹಿತ್ಯಕ ಸ್ವರೂಪ ಬಂದದ್ದು ಮಾಸ್ತಿಯವರಿಂದ. ೧೯೧೧ರಿಂದ ೧೯೨೦ರವರೆಗಿನ ಕಥೆಗಳು 'ಕೆಲವು ಸಣ್ಣ ಕಥೆಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಇದರಲ್ಲಿ ಪ್ರಕಟವಾದ 'ರಂಗಪ್ಪನ ಮದುವೆ' ಮತ್ತು 'ರಂಗಪ್ಪನ ದೀಪಾವಳಿ' ಕಥೆಗಳು ಹೊಸ ಸಾಹಿತ್ಯ ಲೋಕವನ್ನು ತೆರೆದು ತೋರಿಸಿದವು. ಮನುಷ್ಯ ಜೀವನವನ್ನು ಗಂಭೀರವಾಗಿ ಕಂಡು ಆತ ಏರಬಹುದಾದ ಹಿರಿಮೆಯ ಶಿಖರಗಳನ್ನು ಚಿತ್ರಿಸುವ ಕಥೆಗಳು ಇವಾಗಿವೆ. ವಿಡಂಬನಾರಹಿತವಾದ ನವಿರು ಹಾಸ್ಯವನ್ನು ತನ್ನ ಕಥೆಗೆ ತಂದುಕೊಟ್ಟ ಮಾಸ್ತಿಯವರು ಸುಮಾರು ಅರವತ್ತು ವರ್ಷಗಳಲ್ಲಿ ಎಪ್ಪತ್ತೈದು ಕಥೆಗಳನ್ನು ಬರೆದರು. 'ಗೌತಮಿ ಹೇಳಿದ ಕಥೆ', 'ಕೃಷ್ಣಮೂರ್ತಿಯ ಹೆಂಡತಿ', 'ವೆಂಕಟಶಾಮಿಯ ಪ್ರಣಯ', 'ಮಸುಮತ್ತಿ', 'ಮೊಸರಿನ ಮಂಗಮ್ಮ', 'ಕವಿಯ ಬಾಳ ಕೊನೆಯ ದಿನ', 'ವೆಂಕಟಿಗನ ಹೆಂಡತಿ', 'ಒಂದು ಹಳೆಯ ಕಥೆ', ಜೋಗ್ಯೋರ ಅಂಜಪ್ಪನ ಕೋಳೀ ಕಥೆ', 'ವಿಚಿತ್ರ ಪ್ರೇಮ' – ಇಂತಹ ವಿಶಿಷ್ಟ ಕಥೆಗಳನ್ನು ಬರೆದಿರುವ ಮಾಸ್ತಿಯವರು ಮನುಷ್ಯ ಪ್ರಯತ್ನದ ಸಫಲತೆ ಹಾಗೂ ಪ್ರಾಮಾಣಿಕ ಬದುಕು – ಇವುಗಳ ಕುರಿತಾದ ನಂಬಿಕೆಗಳನ್ನು ಕಥೆಗಳ ಮೂಲಕ ನಿರೂಪಿಸುತ್ತಾರೆ. ಕಣ್ವ

ಋಷಿಗಳಲ್ಲಿ, ಮಹರ್ಷಿ ದ್ವೈಪಾಯನರಲ್ಲಿ ಆದರ್ಶದ ಬದುಕನ್ನು ಕಂಡಿದ್ದಾರೆ. ಸೌದೆ ಮಾರುವ ವೆಂಕಟಿಗನಲ್ಲಿ ಆದರ್ಶವನ್ನು ಕಾಣಿಸುತ್ತಾರೆ. ಜೀವನ ಪ್ರೀತಿ, ಶ್ರದ್ಧೆ ಉತ್ಸಾಹ, ಅನುಕಂಪ ಮುಂತಾದ ಮೌಲ್ಯಗಳನ್ನು ತನ್ನ ಕಥೆಗಳ ಮೂಲಕ ಓದುಗರಿಗೆ ನೀಡುವ ಮಾಸ್ತಿಯವರದು ನಿರಾಡಂಬರ ತಂತ್ರವಾಗಿದೆ.

ಹೊಸಗನ್ನಡದ ಆರಂಭದ ಕಾಲದಲ್ಲಿ ಲೇಖಕರು ಹೆಚ್ಚಾಗಿ ಭಾವೋದ್ವೇಗಕ್ಕೆ ಒಳಗಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಾಗ ಮಾಸ್ತಿಯವರು ಸ್ವಾಸ್ಥ್ಯಮನಸ್ಸಿನಿಂದ ಕಥೆಗಳನ್ನು ಬರೆಯತೊಡಗಿದರು. ಹಾಗಾಗಿ ಮಾಸ್ತಿಯವರ ಕಥೆಗಳ ಶ್ರೇಷ್ಠತೆ ಅವರ ಕಥೆಗಳನ್ನು ಅಖಂಡವಾಗಿ ನೋಡಿದಾಗ ಮಾತ್ರ ಸಿಗುತ್ತದೆಯೇ ವಿನಃ ಬಿಡಿಬಿಡಿಯಾಗಿ ನೋಡಿದಾಗ ಅಲ್ಲ. ಮಾಸ್ತಿಯವರ ಸಾಮಾಜಿಕ ಕಥೆಗಳಲ್ಲಿ ತೆಳುವಾದ ಹಾಸ್ಯದ ಹಿಂದೆ ಗಂಭೀರತೆಯ ದರ್ಶನವಿರುತ್ತದೆ. 'ನಮ್ಮ ಮೇಷ್ಟರು' ಕಥೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಈ ಕಥೆಯ ಮೇಷ್ಟ್ರು ಹುಚ್ಚುತನದಿಂದ ಹಾಸ್ಯಕ್ಕೆ ಒಳಗಾದರೂ ಕಥೆಯ ಅಂತ್ಯ ಬದುಕಿನ ಗಂಭೀರತೆಯ ಕಡೆಗೆ ಮುಖ ಮಾಡುತ್ತದೆ. ಒಬ್ಬ ವ್ಯಕ್ತಿಯ ಇತಿಹಾಸ ಹಾಗೂ ವರ್ತಮಾನದ ಬದುಕನ್ನು ಅರ್ಥ ಮಾಡಿಕೊಳ್ಳುವುದರತ್ತ ಕಥೆ ಸಾಗುತ್ತದೆ.

ಮಾಸ್ತಿಯವರ ಐತಿಹಾಸಿಕ ಹಾಗೂ ಪೌರಾಣಿಕ ಕಥೆಗಳು ಅವುಗಳದ್ದೇ ಆದ ಶ್ರೀಮಂತಿಕೆಯನ್ನು ಪಡೆದಿವೆ. ಈ ಕಥೆಗಳ ಮೂಲಕ ನಮ್ಮ ಸಂಸ್ಕೃತಿಯ ಹೆಜ್ಜೆ – ಗುರುತುಗಳನ್ನು ಕಾಣಬಹುದಾಗಿದೆ. ಅವರ 'ಬಾದಷಹನ ದಂಡನೆ', 'ಪಂಡಿತನ ಮರಣ ಶಾಸನ' ಮುಂತಾದ ಕಥೆಗಳು ರಾಜಕೀಯ ಜೀವನವನ್ನು ತೆರೆದಿಟ್ಟರೆ, 'ನಿಜಗಲ್ಲಿನ ರಾಣಿ', 'ಪನುಗೊಂಡೆಯ ಕೃಷ್ಣಮೂರ್ತಿ'ಯಂತಹ ಕಥೆಗಳು ನಮ್ಮ ನಾಡಿನ ಹೆಣ್ಣು ಮಕ್ಕಳ ಬದುಕನ್ನು ತೆರೆದಿಡುವ ಕಥೆಗಳಾಗಿ ಕಾಣಿಸುತ್ತವೆ. 'ಪ್ರಿಯದರ್ಶಿ ಅಶೋಕ' ಕಥೆ ಕೇವಲ ಅಶೋಕನ ಹೃದಯ ಪರಿವರ್ತನೆಯ ಕಥೆಯಷ್ಟೇ ಆಗಿರದೆ ಒಂದು ಯುಗಧರ್ಮದ ಪರಿವರ್ತನೆಯೂ ಹೌದು. ಕಥಾ ಸಾಹಿತ್ಯದ ಮೂಲಕ ಪರಿಪೂರ್ಣ ಸಾಹಿತ್ಯ ರಚನೆ ಮಾಡಿದ ಮಾಸಿಯವರು ಇತರ ಕಥೆಗಾರರಿಗೂ ಪ್ರೇರಣೆಯಾಗಿದ್ದಾರೆ.

ಎ. ಆರ್. ಕೃಷ್ಣಶಾಸ್ತ್ರಿಗಳ 'ಶ್ರೀಪತಿಯ ಕಥೆಗಳು', 'ಗುರುಗಳ ಮಹಿಮೆ', ಕುವೆಂಪುರವರ 'ಧನ್ವಂತರಿಯ ಚಿಕಿತ್ಸೆ' ಮುಂತಾದ ಕಥೆಗಳು ಮಾನವ ಬದುಕಿನ ಮೌಲ್ಯಗಳನ್ನು ಎತ್ತಿ ತೋರಿಸಿದವು. ಇವರುಗಳಲ್ಲದೆ ಬೇಂದ್ರೆ, ಆನಂದ ಕಂದ, ದೇವುಡು ನರಸಿಂಹಶಾಸ್ತ್ರಿ, ಸಿ.ಕೆ. ವೆಂಕಟರಾಮಯ್ಯ, ರಂ. ಶ್ರೀ. ಮುಗಳಿ, ಎಂ. ವಿ. ಸೀತಾರಾಮಯ್ಯ, ವ್ಯಾಸರಾಯ ಬಲ್ಲಾಳ ಮುಂತಾದವರು ಬದುಕಿನ ಕುರಿತಾದ ಚಿಂತನೆಯನ್ನು ತಮ್ಮ ಕಥೆಗಳ ಮೂಲಕ ಹರಿಸಿದರು. ನವೋದಯದ ಸಂದರ್ಭದಲ್ಲಿಯೇ ಕಂಡುಬರುವ ಇತರ ಕಥೆಗಾರರೆಂದರೆ ಜೆ.ಪಿ. ರಾಜರತ್ನಂ, ಕೊಡಗಿನ

ಗೌರಮ್ಮ, ಶ್ಯಾಮಲಾದೇವಿ, ಕೃಷ್ಣಕುಮಾರ ಕಲ್ಲೂರ, ಸಿ.ಕೆ. ನಾಗರಾಜರಾವ್, ಎಲ್.ಎಸ್. ಶೇಷಗಿರಿರಾವ್, ಚದುರಂಗ, ಶ್ರೀನಿವಾಸ ಹಾವನೂರ, ಹಿರೇಮಲ್ಲೂರ ಈಶ್ವರನ್, ದ.ಬಾ. ಕುಲಕರ್ಣಿ, ಮಿರ್ಜಿ ಅಣ್ಣಾರಾಯ ಮುಂತಾದವರು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬಾಗಲೋಡಿ ದೇವರಾವ್, ಪಡುಕೋಣೆ ರಮಾನಂದರಾಯರು ಹಾಸ್ಯಪ್ರಜ್ಞೆಯ ಬರಹಗಾರರೆನಿಸಿಕೊಂಡರು.

ತ್ರಿವೇಣಿಯವರಿಂದ ನವೋದಯದ ಮಹಿಳಾ ಕಥಾ ಸಾಹಿತ್ಯ ಆರಂಭವಾಯಿತೆನ್ನಬಹುದು. ತಿರುಮಲಾಂಬ ಎಂ.ಕೆ. ಇಂದಿರಾ, ಕೊಡಗಿನ ಗೌರಮ್ಮ, ಹೆಚ್. ಎಸ್. ಪಾರ್ವತಿ, ಪ್ರೇಮಾಭಟ್, ನೀಳಾದೇವಿ, ನಿರುಪಮಾ, ಶಾಂತಾದೇವಿ ಕಣವಿ, ಸರಿತಾ ಜ್ಞಾನಾನಂದ ಮುಂತಾದ ಮಹಿಳೆಯರು ಉತ್ತಮ ಕತೆಗಳನ್ನು ಬರೆದರು.

'ಭಾರತೀಯ ಪ್ರಗತಿಶೀಲ ಲೇಖಕರು ಜಾಗತಿಕ ನೆಲೆಯಲ್ಲಿ ನಡೆಸಿದ್ದ ಸಮಾಜವಾದಿ ಹೋರಾಟದ ಸೈದ್ಧಾಂತಿಕ ಅಂಶಗಳನ್ನು ಬೆಂಬಲಿಸುವ ನಿರ್ಧಾರದೊಂದಿಗೆ ತಮ್ಮ ತಮ್ಮ ಬರಹಗಳನ್ನು ರೈತರು, ದಲಿತರು, ಕಾರ್ಮಿಕರು, ಸ್ತ್ರೀಯರು ಮುಂತಾದ ಸಮಾಜದ ಎಲ್ಲ ಅಪಮಾನಿತರ ಸಮಸ್ಯೆಗಳನ್ನು ಕುರಿತು ಬರೆದರು'. ಪ್ರಗತಿಶೀಲ ಲೇಖಕರು ಸಮಾಜದ ಕೆಳಸ್ತರದ ಜನ, ಶೋಷಣೆಗೆ ಒಳಗಾದವರು ಹಾಗೂ ಸ್ತ್ರೀಯರ ಬದುಕಿನ ಬಗೆಗೆ ಯೋಚಿಸತೊಡಗಿದರು. ಜಾತಿ, ವರ್ಗ, ಲಿಂಗಾಧಾರಿತ ನೆಲೆಯಲ್ಲಿ ಶ್ರೇಣೀಕರಿಸಲ್ಪಟ್ಟ ವಾಸ್ತವ ಸ್ಥಿತಿಯನ್ನು ಪ್ರಜ್ಞಾಪೂರ್ವಕವಾಗಿ ಸಾಹಿತ್ಯದಲ್ಲಿ ತುಂಬಲು ಪ್ರಗತಿಶೀಲರು ಪ್ರಯತ್ನಿಸಿದರು. ಹಾಗಾಗಿ ಸಾಮಾಜಿಕ ಸಮಸ್ಯೆಗಳ ಕರಾಳ ಸ್ವರೂಪವೇ ಪ್ರಗತಿಶೀಲ ಲೇಖಕರ ಬರಹಗಳಿಗೆ ವಸ್ತುವಾಯಿತು. ಊಳಿಗಮಾನ್ಯ ಪದ್ಧತಿ, ಬಂಡವಾಳಶಾಹಿ ಪದ್ಧತಿಯೊಂದಿಗೆ ತೆರೆದುಕೊಳ್ಳುವ ಸಂಕ್ರಮಣ ಕಾಲದಲ್ಲಿ ಪ್ರಗತಿಶೀಲ ಚಳುವಳಿ ಹುಟ್ಟಿತೆನ್ನಬಹುದು. ಕೆಲವೇ ವರ್ಷಗಳ ಅವಧಿಯಲ್ಲಿ ಸಮೃದ್ಧ ಸಾಹಿತ್ಯ ಕೃಷಿ ಮಾಡಿದ ಪ್ರಗತಿಶೀಲ ಲೇಖಕರು ನವೋದಯದವರಿಗಿಂತ ಭಿನ್ನ ಮಾರ್ಗವನ್ನು ಹಿಡಿದರು.

ಪ್ರಗತಿಶೀಲ ಚಳುವಳಿಯನ್ನು ಸಣ್ಣಕಥಾ ಪ್ರಕಾರಕ್ಕೆ ಬಳಸಿಕೊಂಡ ಅ.ನ.ಕೃ, ತ.ರಾ.ಸು, ನಿರಂಜನ, ಬಸವರಾಜ ಕಟ್ಟೀಮನಿ, ಅನುಪಮಾ ನಿರಂಜನಾ ಮುಂತಾದವರು ರೈತರು, ಕಾರ್ಮಿಕರು, ಸ್ತ್ರೀಯರು, ಶೋಷಣೆಗೆ ಒಳಗಾದವರ ಬಗೆಗೆ ಕಥೆಗಳನ್ನು ರಚಿಸಿದರು. ಹಳೆಯ ಸಾಹಿತ್ಯವೆಲ್ಲಾ "ಬೂರ್ಜುವಾ ಸಾಹಿತ್ಯ" ಎಂದು ನಂಬಿದ ಪ್ರಗತಿಶೀಲ ಪಂಥದ ಅನೇಕ ತರುಣರು ಪ್ರಗತಿಶೀಲವನ್ನು ಒಂದು ಪ್ರಚಾರದ ಮಾಧ್ಯಮವನ್ನಾಗಿಗಿ ಬಳಸಿಕೊಂಡರು.

ಅವರಿಗೆ ಅನುಭವಕ್ಕಿಂತ, ಮನೋಧರ್ಮ ಮುಖ್ಯವಾದದ್ದರಿಂದ ಪ್ರಗತಿಶೀಲರ ಆರಂಭದ ಕಥೆಗಳಲ್ಲಿಯ ಪಾತ್ರಗಳಲ್ಲಿ ಅಸಹಜತೆ ಕಂಡು ಬಂತು.

ಪ್ರಗತಿಶೀಲ ಪಂಥದ ಸ್ವಯಂಘೋಷಿತ ನಾಯಕರಾಗಿದ್ದ ಅ.ನ.ಕೃ.ರವರು ಸ್ತ್ರೀಯ ಬದುಕನ್ನು ಕೇಂದ್ರೀಕರಿಸಿಕೊಂಡು 'ಕಾಮನಬಿಲ್ಲು', 'ಅಗ್ನಿಕನ್ಯೆ'ಯಂತಹ ಕಥಾಸಂಕಲನಗಳನ್ನು ಹೊರತಂದಿದ್ದಾರೆ. "ಅ.ನ.ಕೃ.ರವರ ಕಥೆಗಳಿಗಿಂತ ಅವರ ವಾದವೇ ಹೆಚ್ಚು ಪರಿಣಾಮಕಾರಿಯಾದ್ದರಿಂದ ಕಥಾ ಸಾಹಿತ್ಯ ಅವರಿಗೆ ಒಗ್ಗಲಿಲ್ಲ"[5]. ಅ.ನ.ಕೃ. ಪ್ರಗತಿಶೀಲ ಪಂಥದವರಾದರೂ ಅವರ ಕಥೆಗಳು ಪ್ರಗತಿಶೀಲದ ಲಕ್ಷಣಗಳನ್ನು ಹೋಲುವುದಿಲ್ಲ.

ಸಾಹಿತ್ಯದ ಬಗ್ಗೆ ಪ್ರಾಮಾಣಿಕವಾದ ಕಳಕಳಿಯನ್ನು ಹೊಂದಿದ್ದ ತ.ರಾ.ಸು.ರವರು ಪ್ರಗತಿಶೀಲತೆಯ ಆವರಣದಲ್ಲಿ ಬೆಳೆದರೂ ಅವರ ಕಥೆಯ ತಂತ್ರ ನವ್ಯದ ಕಡೆಗೆ ಮುಖಮಾಡಿದೆ. ಅವರ '೦ – ೦ = ೦' ಎಂಬ ಕಥೆ ಒಂದು ವಿಶಿಷ್ಟ ರೀತಿಯ ಕತೆಯಾಗಿದ್ದು ಕೇವಲ ಪ್ರತಿಮೆಗಳ ಮೂಲಕ ಕಥೆಯನ್ನು ಬೆಳೆಸುವ ಕತೆಗಾರರ ಕೌಶಲ ಶ್ಲಾಘನೀಯವಾದುದು. 'ಗಿರಿಮಲ್ಲಿಗೆಯ ನಂದನದಲ್ಲಿ', 'ರಾಜಾ ಸಾಹೇಬ' ವಿಶಿಷ್ಟ ರೀತಿಯ ಕಥೆಗಳಾಗಿವೆ. ವಿಲಾಸಿ ರಾಜಕಾರಣಿಯೊಬ್ಬ ತನ್ನ ವಿಲಾಸೀ ಬದುಕಿಗೆ ಅನುಕೂಲವಾಗಿದ್ದ ಗೆಳೆಯನನ್ನು ಕಡೆಗಣಿಸಿ ದ್ರೋಹ ಬಗೆಯುವುದು 'ರಾಜಾ ಸಾಹೇಬ' ಕಥೆಯಲ್ಲಿನ ವಸ್ತು. ಈ ಕಥೆಯಲ್ಲಿನ ಪಾತ್ರ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ.

ಈ ರೀತಿಯ ಬೆಳವಣಿಗೆಯನ್ನು ಬಸವರಾಜ ಕಟ್ಟೀಮನಿಯವರ ಕಥೆಗಳಲ್ಲೂ ಕಾಣಬಹುದು. ಇವರ 'ಕಾರವಾನ್' ಎಂಬ ಕಥೆ ಅರ್ಧ ರಾಜಕೀಯ ಆದರ್ಶದ ಕಡೆಗೆ ಮುಖ ಮಾಡಿದರೆ ಉಳಿದರ್ಧ ಸಾಮಾಜಿಕ ಸಮಸ್ಯೆಯೊಂದರ ಕಡೆ ಮುಖ ಮಾಡುತ್ತದೆ. ಅವರ 'ಜೀವನ ಕಲೆ' ಹಾಗೂ 'ಬಣ್ಣದ ಬುಗ್ಗೆ'ಯಂತಹ ಕಥೆಗಳು ಇದನ್ನೇ ಮಾಡುತ್ತವೆ. 'ಜೀವನ ಕಲೆ'ಯಲ್ಲಿ ಕಲಾಭಿಮಾನಿಯಾದ ರಾಯರೊಬ್ಬರು ಐನೂರು ರೂಪಾಯಿಗಳಿಗೆ ಭಿಕ್ಷುಕನ ಚಿತ್ರವೊಂದನ್ನು ಕೊಂಡುಕೊಂಡು ಪಕ್ಕದಲ್ಲೇ ಇರುವ ಭಿಕ್ಷುಕನನ್ನು ಕಣ್ಣೆತ್ತಿಯೂ ನೋಡದಿರುವುದು ರಾಯರ ಡಾಂಭಿಕತೆಯನ್ನು ಬಯಲಿಗೆಳೆಯುತ್ತದೆ.

ಇದೇ ಸಂಪ್ರದಾಯದಲ್ಲಿ ಬಂದ ನಿರಂಜನರು ಪರಿಣಾಮಕಾರಿ ಕಥೆಗಳನ್ನು ಬರೆದಿದ್ದಾರೆ. ಯಾವುದೇ ರೀತಿಯ ಅಹಂಕಾರದ ಅಬ್ಬರವಿಲ್ಲದೆ, ಸಮರ್ಪಕವಾದ, ಧ್ವನಿಪೂರ್ಣವಾದ ಭಾಷೆ ಇವರ ಕಥೆಗಳಲ್ಲಿ ಎದ್ದು ಕಾಣುವ ಅಂಶಗಳು. ಸ್ತ್ರೀ - ಪುರುಷರೆಂಬ ಪ್ರತ್ಯೇಕತೆಗೆ ಎಡೆಯಿಲ್ಲದೆ ಒಟ್ಟು ಸಾಮಾಜಿಕ ವ್ಯವಸ್ಥೆಯ ಸ್ವರೂಪವನ್ನು ತನ್ನ

ಕಥೆಗಳಲ್ಲಿ ವಿಶ್ಲೇಷಿಸುತ್ತಾರೆ. 'ಬನಶಂಕರಿ', 'ಅಭಯ', 'ವಿಶಾಲಾಕ್ಷಿ', ಹೆಣ್ಣಾಗಿ ಕಾಡಿತ್ತು ಮಾಯೆ', ನಂದಗೋಕುಲ' ಮುಂತಾದ ಕಥೆಗಳಲ್ಲಿ ಸಮಸ್ಯೆಗಳನ್ನು ವೈಯುಕ್ತಿಕ ನೆಲೆಯಲ್ಲಿ ಕಾಣದೆ ಕೌಟುಂಬಿಕ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವಲಯಗಳಿಗೂ ವಿಸ್ತರಿಸುತ್ತಾರೆ. ಕನಸುಗಾರಿಕೆ, ಆದರ್ಶವಾದದ ಉಪದೇಶಗಳು ನಿರಂಜನರ ಕಥೆಗಳಲ್ಲಿ ಕಾಣ ಸಿಗುವುದಿಲ್ಲ.

ಅ.ನ.ಕೃ. ಅವರ ಕಥೆಗಳನ್ನು ಪೂರ್ತಿಯಾಗಿ ಪ್ರಗತಿಶೀಲದ ಪಂಥಕ್ಕೆ ಸೇರಿಸಲು ಸಾಧ್ಯವಾಗುವುದಿಲ್ಲ. ಆರಂಭದಲ್ಲಿ ಮಾಸ್ತಿ, ಆನಂದರ ರೀತಿಯಲ್ಲೇ ಕಥೆಗಳನ್ನು ಬರೆದ ಅ.ನ.ಕೃ.ರವರ 'ಅಗ್ನಿಕನ್ಯೆ' ಎಂಬ ಕಥೆ ಪ್ರಗತಿಶೀಲರ ಲಕ್ಷಣವನ್ನು ಹೊಂದಿದೆ. ಅ.ನ.ಕೃ. ಅವರ ಬರವಣಿಗೆ ಬಹಳ ಸರಳವಾದದ್ದು ಹಾಗೂ ಆಸಕ್ತಿ ಹುಟ್ಟಿಸುವಂಥದ್ದು. ಆದರೆ ಕಥೆಗಾರರಾಗಿ ಅ.ನ.ಕೃ. ಗುರುತಿಸಿಕೊಂಡದ್ದು ಕಡಿಮೆ.

ಕೋ. ಚೆನ್ನಬಸಪ್ಪ ಹಾಗೂ ಬಾಗಲೋಡಿ ದೇವರಾಯ ಹಾಗೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಈ ಪಂಥಕ್ಕೆ ಸೇರಿದ ಕಥೆಗಾರರು. ಕೋ. ಚನ್ನಬಸಪ್ಪನವರ 'ಗಡೀಪಾರು' ಹಾಗೂ 'ನಮ್ಮೂರಿನ ದೀಪ' ಕಥಾಸಂಕಲನಗಳಲ್ಲಿನ ಕಥೆಗಳು ಶೋಷಕವರ್ಗದ ಅನ್ಯಾಯಗಳು ಹಾಗೂ ಶೋಷಿತರ ಸ್ಥಿತಿಗಳನ್ನು ಚಿತ್ರಿಸುವ ಕಥೆಗಳಾಗಿವೆ. ಕಥನ ಶೈಲಿಯಲ್ಲಿಯೂ ಸಹಜತೆಯಿದೆ. ಕೋ. ಚೆನ್ನಬಸಪ್ಪನವರ 'ಆ ಕಥೆಯ ಹಿಂದೆ', ಉಂಗುರದ ಉರಲು', 'ನಮ್ಮೂರಿನ ದೀಪ' ಮುಂತಾದವು ಉತ್ತಮ ಕಥೆಗಳಾಗಿವೆ.

ಸಣ್ಣ ಕಥೆಯ ಜಗತ್ತಿಗೆ ಹಳ್ಳಿಯ ಜೀವನವನ್ನು ತಂದುಕೊಟ್ಟವರು ಗೊರೂರರು. ಹಳ್ಳಿಯ ಜೀವನವೇ ಶ್ರೇಷ್ಠವೆಂದು ಹೇಳದೆ ಅಲ್ಲಿನ ಅಸೂಯೆ, ಮೇಲು – ಕೀಳು, ಸಂಚು ಮುಂತಾದುವನ್ನು ತನ್ನ ಕಥೆಗಳಲ್ಲಿ ಚಿತ್ರಿಸಿದರು. ಜೊತೆಗೆ ಹಳ್ಳಿಯ ಜೀವನದ ಲವಲವಿಕೆ, ಅನುಕಂಪ ಮುಂತಾದುವನ್ನು ಕಥೆಗಳಲ್ಲಿ ತಂದರು. ಅವರ 'ಮಲ್ಲಿಗೆ ಹಳ್ಳಿಯಲ್ಲಿ ಬಯಲಾಟ', 'ಗಂಡು ಬೀರಿ ಹೊಸಬಿ', ಬೆಸ್ತರ ಕರಿಯ', 'ನಾಯಬಾಲ', 'ಭೂತಯ್ಯನ ಮಗ ಅಯ್ಯು' ಮೊದಲಾದವು ಹೆಸರಿಸಲೇಬೇಕಾದ ಕಥೆಗಳು.

ಬಾಗಲೋಡಿ ದೇವರಾಯರು ಆರೋಗ್ಯಕರ ಲೇವಡಿ, ಹರಿತವಾದ ವಿಡಂಬನೆ ಹಾಗೂ ತೀಕ್ಷ್ಣ ಶೈಲಿಯ ಮೂಲಕ ಗುರುತಿಸಿಕೊಂಡವರು. ಮಾನವೀಯತೆ ಇಲ್ಲದ ಮಡಿವಂತಿಕೆಯನ್ನು ಹಾಸ್ಯ ಮಾಡಿದರು. 'ಸತ್ಯಮೇವಜಯತೆ', 'ಪವಾಡ ಪುರುಷ'ದಂತಹ ಕಥೆಗಳು ಪ್ರಸಿದ್ಧಿಯಾದ ಕಥೆಗಳು.

ಮಾಸ್ತಿಯವರ ಮಾರ್ಗದಲಿಯೇ ನಡೆದ ಎಸ್. ಅನಂತನಾರಾಯಣ, ಅಶ್ವತ್ಥರಂಥವರು ಒಳ್ಳೆಯ ಬರಹಗಾರರು. ಅಶ್ವತ್ಥರ ಆರಂಭದ ಕಥೆಗಳಲ್ಲಿ ಒಂದಾದ 'ಶ್ರೀಧರನ ಹಸಿವು' ಕಥೆ ಮಾಸ್ತಿಯವರ ರಂಗಪ್ಪನ ಕಥೆಗಳನ್ನು ಹೋಲಿಸುತ್ತವೆ. ಆದರೆ 'ಗಂಗು', 'ಜೂಜುಗಾರ' ಮೊದಲಾದ ಕಥೆಗಳು ಶ್ರೇಷ್ಠ ಮಾದರಿಯ ಕಥೆಗಳಾಗಿವೆ.

ಪ್ರಗತಿಶೀಲದ ಸಂದರ್ಭದ ಕಥೆಗಾರರಲ್ಲಿ ಇನ್ನೊಂದು ಹೆಸರು ವ್ಯಾಸರಾಯ ಬಲ್ಲಾಳರದ್ದು. ಮನೋಧರ್ಮದ ದೃಷ್ಟಿಯಿಂದ ಇವರ ಕಥೆಗಳು ಮಾಸ್ತಿಯವರ ಕಥಾ ಪರಂಪರೆಯನ್ನು ಅನುಸರಿಸಿದರೂ ಮುಂಬಯಿಯಂಥ ನಗರದ ಹೋರಾಟದ ಬದುಕನ್ನು ಕಟ್ಟಿಕೊಡುತ್ತವೆ. ಮುಂಬಯಿ ಜನರ ಸಮಸ್ಯೆಯ ಬೇರೆ ಬೇರೆ ಮುಖಗಳನ್ನು ಪರಿಚಯಿಸುವುದರ ಮೂಲಕ ಮಾನವೀಯ ಅಂತಃಕರಣದ ಮೇಲೆ ಇವು ಬೀರುವ ಪರಿಣಾಮವನ್ನೂ ಚಿತ್ರಿಸುತ್ತಾರೆ. ಸಾಮಾಜಿಕ ಸಮಸ್ಯೆಗಳನ್ನು ಬಯಲಿಗೆಳೆಯುತ್ತಾ ಅಂತಃಕರಣದ ಪ್ರೀತಿಯಿಂದ ಅವುಗಳಿಗೆ ಪರಿಹಾರ ಕೊಡುವ ಮಾರ್ಗವನ್ನು ಸೂಚಿಸುತ್ತಾರೆ. 'ಸಂಪಿಗೆ ಹೂ', 'ಭಾವಬಂಧನ', 'ಕೆಂಪು ಭೀತಿ' ಮೊದಲಾದ ಕಥೆಗಳು ಒಳ್ಳೆಯ ಕಥೆಗಳಾಗಿ ಮೂಡಿಬಂದಿವೆ.

ದ. ಬಾ. ಕುಲಕರ್ಣಿ ಹಾಗೂ ರಾಮಚಂದ್ರ ಕೊಟ್ಟಲಗಿ ಸಣ್ಣಕಥಾ ಪ್ರಕಾರದಲ್ಲಿ ಚಿರಪರಿಚಿತರು. ಕುಲಕರ್ಣಿಯವರ 'ಲೇಡಿ ಟೈಪಿಸ್ಟ್' ಹಾಗೂ 'ಕಪ್ಪು ಹುಡುಗಿ' ಕಥೆಗಳು ಆಧುನಿಕ ಕಥೆಗಳಾಗಿವೆ. ಕಥೆಗಳಲ್ಲಿ ಅತಿಶಯೋಕ್ತಿಯನ್ನು ಹೇಳದೆ ಬದುಕನ್ನು ಇದ್ದಂತೆಯೇ ನಿರೂಪಿಸಿ, ಅದರ ಸೌಂದರ್ಯವನ್ನು ತೋರಿಸುವ ಶಕ್ತಿ ಕುಲಕರ್ಣಿಯವರ ಕಥೆಗಳಲ್ಲಿದೆ.

ರಾಮಚಂದ್ರ ಕೊಟ್ಟಲಗಿಯವರ 'ಗೀಚುಗೆರೆ', 'ಒಂದೇ ದೇಟಿನ ಕಾಯಿಗಳು' ಎಂಬ ಕಥೆಗಳು ವಿಶಿಷ್ಟ ಶೈಲಿಯ ಕಥೆಗಳಾಗಿವೆ. 'ಅತೃಪ್ತ ವಿಲಾಸ' ಎಂಬ ಕಥೆಯಲ್ಲಿ ವಿಧವೆಯರ ಭೀಕರವಾದ ಮನೋಸ್ಥಿತಿಯನ್ನು ಚಿತ್ರಿಸಿದ್ದಾರೆ. ಬದುಕಿನ ಗಟ್ಟಿತನವನ್ನು, ಹೃದಯಸ್ಪಂದನವನ್ನು ಇವರ ಕಥೆಗಳಲ್ಲಿ ಕಾಣಬಹುದು.

'ನವ್ಯತೆ' ಕಾದಂಬರಿ ಹಾಗೂ ಸಣ್ಣಕಥೆಯನ್ನು ಪ್ರವೇಶಿಸಿ ಒಂದು ಹೊಸ ದನಿಯನ್ನು ನೀಡಿತು. ಕೆಲವರು 'ನವ್ಯ'ದ ಮಾರ್ಗದಲ್ಲೇ ಬರೆಯುತ್ತಿದ್ದರೆ, ಇನ್ನು ಕೆಲವರು ಹೊಸ ದಾರಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೂ ಇದೆ. ಧ್ವನಿ, ಪ್ರತಿಮೆ ಹಾಗೂ ಸಂಕೇತಗಳ ಮೂಲಕ ಅನುಭವಕ್ಕೆ ಮಾತಿನ ಶರೀರವನ್ನು ಕೊಡುವ ಪ್ರಯತ್ನ ನವ್ಯ ಪಂಥದ್ದಾಗಿದೆ.

ಅನಂತಮೂರ್ತಿಯವರ ಕಥೆಗಳಲ್ಲಿ ಪರಂಪರಾಗತ ಮೌಲ್ಯಗಳ ಕುರಿತಾದ ಪ್ರಶ್ನೆ ಎದ್ದು ಕಾಣುತ್ತದೆ. 'ಕಾಮ'ವನ್ನೇ ವಸ್ತುವಾಗಿಟ್ಟುಕೊಂಡು ಅದು ಅನಿವಾರ್ಯವಾದ ಹಾಗೂ ಪ್ರಬಲವಾದ ಅನುಭವ ಎಂಬುದಾಗಿ ಹೇಳುತ್ತಾರೆ. ಪಾತ್ರಗಳ ಸ್ವಭಾವದ ವಿಶ್ಲೇಷಣೆಯನ್ನು ಮಾಡುತ್ತಾರೆ. 'ಪ್ರಕೃತಿ', 'ನವಿಲುಗಳು', 'ಪ್ರಶ್ನೆ', 'ಭೋಜರಾಜ', 'ಕ್ಲಿಪ್ ಜಾಯಿಂಟ್', 'ಕಾರ್ತಿಕ', 'ಘಟಶ್ರಾದ್ಧ' 'ಪ್ರಸ್ತ' ಮೊದಲಾದವು ಅನಂತಮೂರ್ತಿಯವರ ಪ್ರಸಿದ್ಧ ಕಥೆಗಳು.

ಲಂಕೇಶರು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೈಯಾಡಿಸಿದರೂ ಅವರಿಗೆ ಒಗ್ಗಿರುವುದು ಸಣ್ಣಕಥಾ ಪ್ರಕಾರವೇ. ಸಾಮಾನ್ಯ ಅನುಭವವನ್ನೇ ತೆಗೆದುಕೊಂಡು ಅದನ್ನು ವಿಶಿಷ್ಟ ಕಥೆಯಾಗಿ ಬೆಳೆಸುವುದು ಲಂಕೇಶರ ವಿಶಿಷ್ಟತೆ. ಅವರ 'ರೊಟ್ಟಿ', 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ', 'ಮಾರಲಾಗದ ನೆಲ' ಕಥೆಗಳು ಸಾಹಿತ್ಯಲೋಕದಲ್ಲಿ ಯಶಸ್ಸು ಕಂಡ ಕಥೆಗಳು. 'ಕಲ್ಲು ಕರಗುವ ಸಮಯ ಹಾಗೂ ಇತರ ಕಥೆಗಳು' ಸಂಕಲನದಲ್ಲಿ ಸಾಮಾಜಿಕ ತಿಳುವಳಿಕೆಯ ಜೊತೆಗೆ ಮಾಂತ್ರಿಕತೆಯ ತೀವ್ರತೆ ಇದೆ. ಶಾಂತಿನಾಥ ದೇಸಾಯಿಯವರ ಕಥೆಗಳಲ್ಲಿ ಆಧುನಿಕತೆಯ ಭರಾಟೆಯಿಂದಾಗಿ ಕುಸಿಯುತ್ತಿರುವ ಜೀವನ ಮೌಲ್ಯಗಳ ಆಲೋಚನೆಯಿದೆ. ಇಂದಿನ ಯುವಕ – ಯುವತಿಯರು ಹೇಗೆ ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಾರೆ ಎನ್ನುವುದರ ಚಿತ್ರಣಗಳನ್ನು ತಮ್ಮ ಕಥೆಗಳಲ್ಲಿ ನೀಡುವ ಪ್ರಯತ್ನ ಮಾಡಿದ್ದಾರೆ. 'ಕ್ಷಿತಿಜ', 'ಚಂದು' ಮೊದಲಾದ ಕಥೆಗಳನ್ನು ಈ ನಿಟ್ಟಿನಲ್ಲಿ ಗುರುತಿಸಬಹುದು.

ಸಾಮಾನ್ಯವಾಗಿ ನವ್ಯ ಸಾಹಿತ್ಯ ಪಂಥದಲ್ಲಿ ಕಾಣುವುದಕ್ಕೆ ಸಾಧ್ಯವಾಗದ ಮಾನವೀಯ ಅಂತಃಕರಣವನ್ನು ಗಿರಡ್ಡಿ ಗೋವಿಂದರಾಜರ ಕಥೆಗಳಲ್ಲಿ ಕಾಣಬಹುದು. ಭಾಷೆಯ ಅಬ್ಬರವಿಲ್ಲದೆ ಸಹಜ ನಿರೂಪಣೆಯ ಮೂಲಕ ಪಾತ್ರಗಳ ಮನಸ್ಸಿನಲ್ಲಿ ನಡೆಯುವುದನ್ನು ಓದುಗರ ಅನುಭವಕ್ಕೆ ತಂದುಕೊಡುವ ಶಕ್ತಿ ಇವರ ಕಥೆಗಳಲ್ಲಿದೆ. 'ಅಸಹಜ', 'ತಬ್ಬಲಿಗಳು' ಎಂಬ ಕಥೆಗಳು ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಕಥೆಗಳಾಗಿವೆ.

ಜಿ.ಟಿ. ರಾಘವರ 'ಶ್ರಾದ್ಧ', ಚಿತ್ತಾಲರ 'ಸೆಕೆ', ಕೆ. ಸದಾಶಿವರ 'ನಲ್ಲಿಯಲ್ಲಿ ನೀರು ಬಂದಿತು' ಕಥೆಗಳು ನವ್ಯ ಪಂಥದ ಹೆಸರಾಂತ ಕಥೆಗಳಾಗಿವೆ. ಕೆ. ಸದಾಶಿವರ 'ನೆರಳು ಬೆಳಕಿನಾಟದಲ್ಲಿ ಕಂಡದ್ದೇನು?', 'ಹಾವು' ಕಥೆಗಳಲ್ಲಿ ಸಂಕೇತವನ್ನು ಸಮರ್ಥವಾಗಿ ಬಳಸಿದ್ದಾರೆ. ಜಿ.ಎಸ್. ಸದಾಶಿವರ 'ತುಣುಕುಗಳು', 'ಉಳಿಯುವುದು ನೆನಪು ಮಾತ್ರ', ಹಾಗೂ 'ಸನ್ನಿಹಿತ', 'ಸೋಮುವಿನ ಪ್ರಣಯ ಪ್ರಸಂಗ' ಮೊದಲಾದ ಕಥೆಗಳು ಕುತೂಹಲ ಹುಟ್ಟಿಸುವ ಕಥೆಗಳಾಗಿವೆ.

ವಾಣಿ, ಜಯಲಕ್ಷ್ಮಿ ಆರ್. ಶ್ರೀನಿವಾಸನ್, ಕಾತ್ಯಾಯನಿ, ಎಂ. ಸೀತಾರತ್ನ, ತ್ರಿವೇಣಿ, ಸಾವಿತ್ರಮ್ಮ, ಉಷಾದೇವಿ, ವೀಣಾ ಎಲ್ಬುರ್ಗಿ, ಮುಂತಾದ ಲೇಖಕಿಯರು ಕಥಾಪ್ರಕಾರಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಸಾವಿತ್ರಮ್ಮನವರ 'ಮರುಮದುವೆ', ಎಂ. ಸೀತಾರತ್ನರವರ 'ಕೆಂಪುಗುಲಾಬಿ', ವಾಣಿಯವರ 'ಅರ್ಪಣೆ', ಮುಕುಂದನ ಉಡುಗೊರೆ', ಒಡೆದ ಕನಸು', ಕಾತ್ಯಾಯನಿಯವರ 'ಮಾಲಾ ಮತ್ತು ಇತರ ಕಥೆಗಳು' ಪರಂಪರೆಯ ದೃಷ್ಟಿಯಿಂದ ಒಳ್ಳೆಯ ಕಥೆಗಳಾಗಿವೆ. ವೀಣಾ ಎಲ್ಬುರ್ಗಿಯವರ ಕಥೆಗಳಲ್ಲಿ ಮನುಷ್ಯ ಸ್ವಭಾವದ ಬೇರೆ ಬೇರೆ ಸ್ತರಗಳ ಪರಿಚಯವಾಗುತ್ತದೆ.

ನವ್ಯ - ನವ್ಯೋತ್ತರ ಎಂಬ ವಿಭಾಗ ಸಣ್ಣಕಥಾ ಪ್ರಪಂಚದಲ್ಲಿ ಸ್ಪಷ್ಟವಾಗುವುದಿಲ್ಲ. ಏಕೆಂದರೆ ನವ್ಯ ಬರಹಗಾರರೆಂದು ಗುರುತಿಸಿಕೊಳ್ಳುವವರಲ್ಲಿಯೇ ಇದರ ಲಕ್ಷಣಗಳು ಕಾಣಿಸುವುದಿಲ್ಲ. ನವ್ಯ ಬರಹಗಾರರೆಂದು ಹೇಳುವ ಪೂರ್ಣಚಂದ್ರ ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು', 'ಹುಲಿಯೂರಿನ ಸರಹದ್ದುಗಳು' ಎಂಬ ಕಥೆಗಳಲ್ಲಿ ನವ್ಯದ ಲಕ್ಷಣ ಕಾಣಿಸುವುದಿಲ್ಲ. ಅವರು ಸಂಕೇತಗಳನ್ನು ಬಳಸುವುದಿಲ್ಲ. ದಟ್ಟವಾದ ಅನುಭವದ ಹಿನ್ನೆಲೆಯಲ್ಲಿ ಕಥೆಯ ಜಗತ್ತನ್ನು ಜೀವಂತವಾಗಿ ಸೃಷ್ಟಿ ಮಾಡುತ್ತಾರೆ. ಕಥಾಸಾಹಿತ್ಯ ಮುಂದೆ ಹಿಡಿಯಬಹುದಾದ ದಾರಿಯ ಸೂಚನೆ ತೇಜಸ್ವಿಯವರ ಕಥೆಗಳಲ್ಲಿ ಕಾಣುತ್ತದೆ. ಬೆಸಗರಹಳ್ಳಿ ರಾಮಣ್ಣ, ದೇವನೂರ ಮಹಾದೇವರ ಕಥೆಗಳು ಈ ದಾರಿಯಲ್ಲಿ ನಡೆದಿವೆ ಎನ್ನಬಹುದು.

ಗಂಭೀರವಾದ ಕಥೆಗಳಲ್ಲದೆ ಹಾಸ್ಯಭರಿತವಾದ ಕಥೆಗಳನ್ನು ಬರೆದ ಬರಹಗಾರರೂ ಇದ್ದಾರೆ. ಮಾಸ್ತಿಯವರ 'ರಂಗಪ್ಪನ ದೀಪಾವಳಿ', ರಂಗಪ್ಪನ 'ಕೋರ್ಟ್‌ಷಿಪ್' ಕೃಷ್ಣಶಾಸ್ತ್ರಿಗಳ 'ಅಗ್ಗದ ಮದುವೆ', ಸಿ.ಕೆ. ವೆಂಕಟರಾಮಯ್ಯನವರ 'ಅದೃಷ್ಟದ ಕರವಸ್ತ್ರ', 'ಚಿತ್ರಪಟ ತಾರೆ' ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಕಥೆಗಳಾಗಿವೆ.

ಕಥೆಗಳಲ್ಲಿ ವಿಡಂಬನೆಯನ್ನು ತಂದ ಕಥೆಗಾರರಲ್ಲಿ ಬೀಚಿ ಮುಖ್ಯರಾಗುತ್ತಾರೆ. ಇವರಲ್ಲದೆ ರಾಮಚಂದ್ರ ಶರ್ಮ, ಟಿ. ಸುನಂದಮ್ಮ, ವಿ.ಜಿ. ಭಟ್ಟ, ಶ್ರೀನಿವಾಸ ಹಾವನೂರು ಮುಖ್ಯರಾಗುತ್ತಾರೆ.

ಹೊಸ ತಲೆಮಾರಿನ ಕಥೆಗಳಲ್ಲಿ ಹೊಸ ರೀತಿಯ ದನಿಗಳು ಕೇಳುತ್ತಿವೆ. ಕೆಲವರು ನವ್ಯಪ್ರಜ್ಞೆಯನ್ನು ಅಳವಡಿಸಿಕೊಂಡು ಬರೆದರೆ, ಇನ್ನು ಕೆಲವರು ಹೊಸ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಹೊಸ ಸಾಹಿತ್ಯ ನಿರ್ಮಾಣದ ಹಂಬಲಕ್ಕಾಗಿ ದುಡಿಯುತ್ತಿರುವ ಇಂದಿನ ತರುಣ ಕಥೆಗಾರರು ಅದರ ಶೋಧದಲ್ಲಿ ತೊಡಗಿದ್ದಾರೆ.

ಕಳೆದ ಶತಮಾನದ ಅರವತ್ತರ ದಶಕದಲ್ಲಿ ನವ್ಯ ಕಥೆಗಳನ್ನು ಸೃಷ್ಟಿಸುವುದರ ಮೂಲಕ ಈ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಿದವರು ತೇಜಸ್ವಿಯವರು. ಇವರು ತೊಂಭತ್ತರ ದಶಕದ ಹೊತ್ತಿಗೆ ಸಣ್ಣಕಥೆಗೆ ಮತ್ತೊಂದು ಸಾಮಾಜಿಕ ಹಾಗೂ ರಾಜಕೀಯ ಆಯಾಮವನ್ನು ತಂದುಕೊಟ್ಟರು. ಆ ಮೂಲಕ ತಮ್ಮ ಹಿಂದಿನ ಕಥೆಗಳಲ್ಲಿದ್ದ ಸೌಂದರ್ಯ ಪ್ರಜ್ಞೆಯನ್ನು ಮತ್ತಷ್ಟು ಎತ್ತರಕ್ಕೆ ವಿಸ್ತರಿಸಿದರು. ಇವರ ಹೆಚ್ಚಿನ ಕಥೆಗಳ ಆವರಣ ಮಲೆನಾಡು. 'ಗಯ್ಯಾಳಿಗಳು' ಮತ್ತು ,ಕೃಷ್ಣೇಗೌಡನ ಆನೆ, ಕಥೆಗಳು ಮಹತ್ವಾಕಾಂಕ್ಷೆಯನ್ನು ಬದಲಾದ ಸಾಮಾಜಿಕ ಸನ್ನಿವೇಶವನ್ನು ಬಲಿಷ್ಟವಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

ಎಲ್ಲಾ ಕಾಲಘಟ್ಟಗಳಲ್ಲಿಯೂ, ಎಲ್ಲಾ ಚಳುವಳಿಗಳ ಸಂದರ್ಭದಲ್ಲಿಯೂ ಆರೋಗ್ಯಕಾರಿಯಾದ ನಿಲುವನ್ನು ಇಟ್ಟುಕೊಂಡು ಕಥೆಗಳನ್ನು ಬರೆದ ಕತೆಗಾರರಲ್ಲಿ ಚದುರಂಗರೂ ಒಬ್ಬರು. ಭೂಮಿ ಮತ್ತು ಮನುಷ್ಯನ ಸಂಬಂಧ, ಪ್ರತಿಭಟನೆ, ಕ್ರಾಂತಿ, ಬದುಕಿನ ವಿವಿಧ ಬಗೆಗಳನ್ನು ಶೋಧಿಸುವ ಪ್ರವೃತ್ತಿಯನ್ನು ಇವರ ಕಥೆಗಳು ಪ್ರಕಟಿಸುತ್ತವೆ. ಇವರ ಕಥೆಗಳ ಭಾಷೆ, ವಸ್ತು, ಹಳೇ ಮೈಸೂರು, ಹುಣಸೂರು, ಪಿರಿಯಾಪಟ್ಟಣದ ಪ್ರಾಂತ್ಯಕ್ಕೆ ಸೇರಿದ್ದು. 'ಕ್ವಾಟೆ', 'ಮೃಗಯಾ' ಈ ಎರಡೂ ಕಥಾ ಸಂಕಲನಗಳು ಕಳೆದ ದಶಕದ ಬಹುಮುಖ್ಯ ಕಥಾಸಂಕಲನಗಳಾಗಿವೆ. ಹೆಣ್ಣಿನ ಮಾನಸಿಕ ಹಾಗೂ ಲೈಂಗಿಕ ಶೋಷಣೆಯನ್ನು 'ಕ್ವಾಟೆ' ಸಂಕಲನದ ಕಥೆಗಳು ಚಿತ್ರಿಸಿದರೆ, ಮಾನವೀಯತೆಗೆ ಒದಗಿದ ದುಸ್ಥಿತಿಯನ್ನು 'ಮೃಗಯಾ' ಸಂಕಲನದ ಕಥೆಗಳು ಶೋಧಿಸುತ್ತವೆ.

ಬೆಸಗರ ಹಳ್ಳಿಯವರ 'ಕೊಳಲು ಮತ್ತು ಖಡ್ಗ' ಕಥಾ ಸಂಕಲನದ ಕಥೆಗಳು ಗ್ರಾಮೀಣ ಪ್ರದೇಶದ ರೈತಾಪಿ ವರ್ಗದ ಬದುಕನ್ನು ಚಿತ್ರಿಸುತ್ತವೆ. ಅವರ ಕಥೆಗಳು ಬದುಕಿನ ಸಾದೃಶ್ಯದ ಚಿತ್ರಣಗಳನ್ನು ನಿರ್ಮಿಸುವಲ್ಲಿ ಅತ್ಯಂತ ಯಶಸ್ವೀ ರಚನೆಗಳು. ಬದುಕಿನ ಕೇಡು ಮತ್ತು ಮಾರ್ದವತೆಗಳೆರಡನ್ನೂ ಚೆನ್ನಾಗಿ ಇವರು ಚಿತ್ರಿಸಿದ್ದಾರೆ. ಹಾಗಾಗಿ ಸಮಕಾಲೀನ ಕಥೆಗಾರರಿಗಿಂತ ಭಿನ್ನವಾಗಿ ಕಾಣುತ್ತಾರೆ.

ಮುಂಬೈನ ಮಧ್ಯಮ ವರ್ಗದ ಜನತೆಯ ಸುಖದುಃಖಗಳನ್ನು, ನಾಗರೀಕತೆಯ ದಾಳಿಗೆ ತುತ್ತಾಗಿ ಎದುರಿಸುವ ತಲ್ಲಣಗಳನ್ನು, ಸಂಘರ್ಷಗಳನ್ನು, ಸಂಪ್ರದಾಯದ ಬಿಕ್ಕಟ್ಟುಗಳನ್ನು ಬೆಸಗರ ಹಳ್ಳಿಯವರ ಕಥೆಗಳು ಯಶಸ್ವಿಯಾಗಿ ಚಿತ್ರಿಸುತ್ತವೆ.

ವೀರಭದ್ರಪ್ಪ ಅವರ ಕಥೆಗಳಲ್ಲಿ ಬಂಡವಾಳಶಾಹೀ ಪ್ರವೃತ್ತಿಗಳನ್ನು ಅನಾವರಣಗೊಳಿಸುವ ಮನೋಧರ್ಮವು ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ಈ ದೃಷ್ಟಿಯಿಂದ ಅವರ 'ಕನ್ನಡಿಯಲ್ಲಿ ನೋಡಿದ ನಾಯಿ' ಗಮನಾರ್ಹ ಕಥೆಯಾಗಿದೆ.

ಶಾಂತರಸರ ಕಥೆಗಳ ಕೇಂದ್ರವಸ್ತು ನೈತಿಕ ಪ್ರಜ್ಞೆಯ ವಿಕಾಸ ಮತ್ತು ಶೋಧನೆ. ಅವರ ಕಥೆಗಳು ಜೀವನ ಮೌಲ್ಯದ ಹುಡುಕಾಟದಲ್ಲಿ ತೊಡಗುತ್ತವೆ. ಹೈದರಾಬಾದು ಕರ್ನಾಟಕದ ಪ್ರದೇಶದ ಬದುಕಿನ ಮಹತ್ವದ ಸಂಗತಿಗಳನ್ನು ಹುಡುಕುವ ಮನೋಧರ್ಮವನ್ನು ಇವರ ಕಥೆಗಳು ಪ್ರಕಟಿಸುತ್ತವೆ.

ಶ್ರೀಕೃಷ್ಣ ಆಲನಹಳ್ಳಿಯವರ ಕಥೆಗಳು ಮನುಷ್ಯ ಸಂಬಂಧಗಳ ಶೋಧನೆಯಲ್ಲಿ ತೊಡಗುತ್ತವೆ. ಇವರ ಶೈಲಿಯೂ. ನಿರೂಪಣೆಯೂ ವಿಶಿಷ್ಟವಾದದ್ದು. ಪರಂಪರೆ ಮತ್ತು ಆಧುನಿಕತೆಗಳ ಮುಖಾಮುಖಿ ಇವರ ಕಥೆಗಳಲ್ಲಿ ಎದ್ದು ಕಾಣುತ್ತದೆ.

ಪರಿಣಾಮಕಾರಿಯಾದ ಭಾಷೆಯನ್ನು ತನ್ನ ಕಥೆಗಳಲ್ಲಿ ದುಡಿಸಿಕೊಂಡಿರುವ ಕೆ.ವಿ. ತಿರುಮಲೇಶ್‌ರವರು ತಮ್ಮ ಕಥೆಗಳಲ್ಲಿ ಆಧುನಿಕತೆ ಹಾಗೂ ಪರಂಪರೆಗಳ ನಡುವಿನ ಮನುಷ್ಯ ಸಂಬಂಧಗಳನ್ನು ಚೆನ್ನಾಗಿ ನೀಡಿದ್ದಾರೆ. ವಸ್ತು, ಭಾಷೆ ಹಾಗೂ ಕಥೆಗಳ ಮನೋಧರ್ಮ ಈ ಎಲ್ಲಾ ನೆಲೆಯಲ್ಲಿಯೂ ಇವರ ಕಥೆಗಳು ಗೆಲ್ಲುತ್ತವೆ. 'ಕಳ್ಳಿಗಿಡ ಹೂ' ಕಥಾ ಸಂಕಲನ ಇದಕ್ಕೆ ಉದಾಹರಣೆಯಾಗಿದೆ.

ಧರ್ಮ, ಸಂಪ್ರದಾಯ, ನಂಬಿಕೆ, ಆಚರಣೆಗಳ ಕುರಿತು ಬೆಳಕು ಹರಿಸುವ ಅಂಶಗಳು ಎಸ್. ದಿವಾಕರ ಮತ್ತು ಬೊಳುವಾರು ಮಹಮ್ಮದ್ ಕುಂಞಯವರ ಕಥೆಗಳಲ್ಲಿ ಸ್ಪಷ್ಟವಾಗುತ್ತವೆ. ಮನುಷ್ಯ ಬದುಕಿನ ಬೇರೆ ಬೇರೆ ಅವಸ್ಥೆಗಳಾದ ಮದುವೆ, ಮುಂಜಿ, ಹುಟ್ಟು, ಸಾವು, ವಿಚ್ಛೇದನ ಇವುಗಳ ಬಗೆಗೆ ಮಾನವೀಯ ದೃಷ್ಟಿಯ ವಿಶ್ಲೇಷಣೆ ನಡೆಸುತ್ತಾರೆ.

ಕೆಳಜಾತಿ ಹಾಗೂ ಕೆಳ ಜನಾಂಗದ ಬದುಕಿನ ನೋವು - ನಲಿವುಗಳನ್ನು, ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ತನ್ನ ಕಥೆಗಳ ಮೂಲಕ ಸಮರ್ಥವಾಗಿ ನೀಡುತ್ತಾರೆ ಮೊಗಳ್ಳಿ ಗಣೇಶ್. ಶೋಷಣೆಯ ಬೇರೆ ಬೇರೆ ಮುಖಗಳ ಅನಾವರಣ ಇವರ ಕಥೆಗಳಲ್ಲಿ ನಡೆಯುತ್ತದೆ. ಆಧುನಿಕತೆಗೆ ತೆರೆದುಕೊಳ್ಳುವ ಹಳ್ಳಿಗಳ ಚಿತ್ರಣ ಇವರ ಕಥೆಗಳಲ್ಲಿದೆ. 'ಬುಗುರಿ' ಮತ್ತು 'ನನ್ನಜ್ಜನಿಗೊಂದಾಸೆಯಿತ್ತು' ಎಂಬ ಕಥೆಗಳಲ್ಲಿ ಈ ಅಂಶಗಳು ಎದ್ದು ಕಾಣುತ್ತವೆ.

ವ್ಯಕ್ತಿಕೇಂದ್ರಿತ ನೆಲೆಯ ಕಥೆಗಳನ್ನು ಬರೆಯುವ ವಿವೇಕ ಶಾನಭಾಗರು ಪ್ರತಿಮೆ, ಸಂಕೇತಗಳ ಮೂಲಕ ಅದನ್ನು ಚಿತ್ರಿಸುತ್ತಾರೆ. ಆಧುನಿಕ ಜಗತ್ತಿನ ತಲ್ಲಣಗಳು ಇವರ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಮನುಷ್ಯನ ವ್ಯವಹಾರ ಪ್ರಜ್ಞೆ ಹೇಗೆ ಮಾನವೀಯತೆಯನ್ನು ದೂರ ಮಾಡುತ್ತದೆ ಎಂಬುದನ್ನು ತನ್ನ ಕಥೆಗಳ ಮೂಲಕ ಹೇಳುವ ಪ್ರಯತ್ನ ಮಾಡುತ್ತಾರೆ.

ಕಾ. ತ. ಚಿಕ್ಕಣ್ಣರವರ ಕಥೆಗಳಲ್ಲಿ ಗ್ರಾಮೀಣ ಬದುಕಿನ ಮುಗ್ಧ ಪಾತ್ರಗಳ ಚಿತ್ರಣವಿದೆ. ಬದುಕಿನ ಮೌಲ್ಯಗಳನ್ನು ತನ್ನದೇ ಆದ ವಿಶಿಷ್ಟ ಭಾಷೆಯಲ್ಲಿ ಹೃದಯಂಗಮವಾಗಿ ಹೇಳುವ ಇವರ ಕಥೆಗಳಲ್ಲಿ ಆತ್ಮೀಯತೆಯಿದೆ, ಗ್ರಾಮೀಣ ಸೊಗಡಿದೆ.

ಹೈದ್ರಾಬಾದ್ ಕರ್ನಾಟಕ ಪ್ರದೇಶದ ಗ್ರಾಮೀಣ ಬದುಕನ್ನು ತಮ್ಮ ಕಥೆಗಳ ಮೂಲಕ ಕಟ್ಟಿಕೊಡುವ ಅಮರೇಶ ನುಗುಡೋಣಿಯವರದು ಕಲಾತ್ಮಕವಾದ ಅಭಿವ್ಯಕ್ತಿ. ಬಡತನ, ಮೌಢ್ಯ ಇವುಗಳ ನಡುವೆಯೂ ಆಶಾದಾಯಕ ಜೀವನವನ್ನು ಕಾಣಬಹುದು ಎನ್ನುವುದನ್ನು ಇವರ ಕಥೆಗಳು ನಿರೂಪಿಸುತ್ತವೆ. ಹೆಣ್ಣಿನ ಬದುಕಿನ ಸಮಸ್ಯೆಯ ವಿವಿಧ ಮುಖಗಳನ್ನು ಸ್ಪಷ್ಟಪಡಿಸುವ ಪ್ರಯತ್ನ ಇವರ ಕಥೆಗಳಲ್ಲಿದೆ.

ರಾಘವೇಂದ್ರ ಪಾಟೀಲರ ಕಥೆಗಳಲ್ಲಿ ಕೌಟುಂಬಿಕ ಸಂಘರ್ಷ ಹಾಗೂ ಅದನ್ನು ಸರಿದೂಗಿಸಿಕೊಂಡು ಹೋಗಬೇಕಾದ ಅನಿವಾರ್ಯತೆಯ ಚಿತ್ರಣವಿದೆ. ಹೆಣ್ಣಿನ ಭಾವನೆಗಳನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಇವರ ಕಥೆಗಳು ಪ್ರಯತ್ನಿಸುತ್ತವೆ. ಜಯಂತ ಕಾಯ್ಕಿಣಿ, ಮೊಗಳ್ಳಿ ಗಣೇಶ್, ವಿವೇಕ್ ಶಾನುಭಾಗ್, ಜೋಗಿ ಮುಂತಾದವರು ವರ್ತಮಾನದ ತುರ್ತಿಗೆ ಸ್ಪಂದಿಸುವ ಕಥೆಗಳನ್ನು ನೀಡಿದ್ದಾರೆ.

ಮೇಲೆ ಹೇಳಿರುವ ಯಾವ ಸಾಹಿತ್ಯ ಪಂಥಗಳಿಗೂ ಕಟ್ಟುಬೀಳದೆ ಸ್ವತಂತ್ರವಾಗಿ ಕಥೆಗಳನ್ನು ಬರೆದ ಅನೇಕ ಕಥೆಗಾರರಿದ್ದಾರೆ. ಕೊ.ಸು. ಸೀತರಾಮ, ಗೋವಿಂದಮೂರ್ತಿ ದೇಸಾಯಿ, ಇತ್ತೀಚಿನ ಬರಹಗಾರರಾದ ಸುಧಾಕರ ಮುಂತಾದವರು ತಮಗೆ ಕಂಡ ದಾರಿಯಲ್ಲಿ ಸಾಗಿದವರು.

ಕಳೆದ ಶತಮಾನದ ಕೊನೆಯ ದಶಕದ ಹಾಗೂ ಈ ಶತಮಾನದಲ್ಲಿ ಇನ್ನೂ ಅನೇಕ ಸಂಖ್ಯೆಯ ಕತೆಗಾರರು ಕಾಣಸಿಗುತ್ತಾರೆ. ಬಿದರಹಳ್ಳಿ ನರಸಿಂಹಮೂರ್ತಿ, ಕೆ. ಸತ್ಯನಾರಾಯಣ, ರಾಜೇಂದ್ರ ಚೆನ್ನಿ, ಮಹಾಬಲಮೂರ್ತಿ ಕೊಡ್ಲಕೆರೆ, ಜಯಪ್ರಕಾಶ ಮಾವಿನಕುಳಿ, ಎಂ. ರಾಜಗೋಪಾಲ, ಮೂಡ್ನಕೂಡು ಚಿನ್ನಸ್ವಾಮಿ, ಎಸ್. ವಸುಧೇಂದ್ರ, ಶ್ರೀಧರ ಬಳಿಗಾರ, ಶ್ರೀಕಾಂತ ಪಾಟೀಲ, ಆನಂದ ಋಗ್ವೇದಿ, ಅಬ್ದುಲ್ ರಶೀದ್, ಶೂದ್ರ ಶ್ರೀನಿವಾಸ, ರವಿಬೆಳಗೆರೆ, ಸಂಧ್ಯಾರೆಡ್ಡಿ, ಸಾರಾ ಅಬೂಬಕರ್, ವೀಣಾ ಶಾಂತೇಶ್ವರ, ವೈದೇಹಿ, ನೇಮಿಚಂದ್ರ, ಎಚ್. ಎಸ್. ಸುಜಾತ, ಮಾಲತಿ ಪಟ್ಟಣಶೆಟ್ಟಿ, ಡಾ. ಎಚ್. ಗಿರಿಜಮ್ಮ, ಎಚ್. ನಾಗವೇಣಿ, ತುಳಸೀ ವೇಣುಗೋಪಾಲ್, ಮಿತ್ರಾ ವೆಂಕಟ್ರಾಜ್, ಕುಸುಮಾ ಇನ್ನೂ ಅನೇಕರು.

ಹೊಸ ಶತಮಾನದ ಕತೆಗಳು ಜಾಗತೀಕರಣದ ಸಂಕೀರ್ಣತೆಯಲ್ಲಿ ಹುಟ್ಟಿಕೊಂಡ ಕಥೆಗಳು. ಹಾಗಾಗಿ ಮನುಷ್ಯ ಜಗತ್ತಿನ ಬದಲಾವಣೆಗಳನ್ನೂ ದಾಖಲು ಮಾಡುವ ಪ್ರಯತ್ನದಲ್ಲಿ ಈ ಸಂದರ್ಭದ ಕಥೆಗಳು ಪ್ರಯತ್ನಿಸುತ್ತವೆ. ಆಧುನಿಕ ಜಗತ್ತಿನ ತಲ್ಲಣಗಳ ಕಡೆಗೆ, ಜಗತ್ತಿನ ಕೊಡುಗೆಗಳ ಬಗೆಗೆ ಮುಖಮಾಡುವ ಕಥೆಗಳು ಕಳೆದ ಇಪ್ಪತ್ತೈದು ವರ್ಷಗಳಿಂದೀಚೆಗೆ ಕಾಣಸಿಗುತ್ತವೆ. ಅಂದರೆ ಆಧುನಿಕ ತುರ್ತುಗಳಿಗೆ ಸ್ಪಂದಿಸುವ ಕಥೆಗಳು ಸೃಷ್ಟಿಯಾಗುತ್ತಿರುವುದು ಗಮನಾರ್ಹ ವಿಚಾರವಾಗಿದೆ.

ಇಂದು ಓದುಗರ ವಿಮರ್ಶಾ ಪ್ರಜ್ಞೆಯ ಜೊತೆಗೆ ಸಾಹಿತ್ಯದ ಸ್ವರೂಪ, ಉದ್ದೇಶಗಳು ಹೆಚ್ಚು ನಿಶ್ಚಿತವಾಗತೊಡಗಿವೆ. ಕಾದಂಬರಿಯ ಲೋಕಪ್ರಿಯತೆಯಿಂದಾಗಿ ಸಣ್ಣಕತೆಗಳ ಪ್ರಕಟಣೆಯೂ ಕಷ್ಟಸಾಧ್ಯವಾದದ್ದು. ಇದರ ನಡುವೆಯೂ ಸಣ್ಣಕಥೆಗಳು ಬೆಳೆದು ಬಂದಿರುವುದು ಸಂತೋಷದ ವಿಚಾರವಾಗಿದೆ.

ಮಿತವಾದ ಮಾತಿನ ಬಳಕೆ ಹೊಂದಿರುವ ಕಥಾಸಾಹಿತ್ಯ ನಿಂತ ನೀರಾಗದೆ ಪ್ರವಹಿಸುತ್ತಿದೆ. ಅನೇಕ ಸಂಖ್ಯೆಯ ಹೊಸ ಕಥೆಗಾರರು ಹುಟ್ಟಿಕೊಳ್ಳುತ್ತಿದ್ದಾರೆ. ಕಾಲಮಾನಕ್ಕೆ ತಕ್ಕಂತೆ ಕಥೆಗಳು ಬದಲಾವಣೆಯನ್ನು ಕಾಣಬೇಕಾಗಿದೆ. ಏಕೆಂದರೆ ಬದಲಾವಣೆಯೇ ಜಗತ್ತಿನ ನಿಯಮ. ಸಮಕಾಲೀನ ತುರ್ತುಗಳಿಗೆ ಅಗತ್ಯವಾದ ಕಥೆಗಳು ಇಂದು ಹುಟ್ಟಿಕೊಳ್ಳುತ್ತಿವೆ, ಹುಟ್ಟಿಕೊಳ್ಳಬೇಕಾಗಿದೆಯೂ ಕೂಡಾ.

ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳನ್ನು ತೆರೆದಾಗ ಆರಂಭದ ಕಾಲಘಟ್ಟಗಳಲ್ಲಿ ಮಹಿಳೆ ಕಾಣಿಸಿಕೊಂಡದ್ದು ಬಹಳ ವಿರಳ. ಸುಮಾರು ಕ್ರಿ.ಶ. ೧೧ನೆಯ ಶತಮಾನದ ಹೊತ್ತಿಗೆ 'ಕಂತಿ' ಎನ್ನುವ ಹೆಣ್ಣುಮಗಳ ಹೆಸರನ್ನು ಕೇಳಿಸಿಕೊಂಡರೆ ಸಾಹಿತ್ಯಾಭಿವ್ಯಕಿಯ ಪ್ರತಿನಿದಿಯಾಗಿ ನಮಗೆ ಸಿಗುವುದು ೧೨ನೆಯ ಶತಮಾನದ ಅಕ್ಕಮಹಾದೇವಿ. ಅಂದರೆ ಹಲವು ಶತಮಾನಗಳಿಂದ ಮೂಕಳಾಗಿಯೇ ಉಳಿದ ಹೆಣ್ಣಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ದೊರಕಿದ್ದೇ ವಚನಕಾರರ ಕಾಲಕ್ಕೆ. ನಂತರ ಅಲ್ಲೊಂದು ಇಲ್ಲೊಂದು ಎನ್ನುವಂತೆ ಸಾಹಿತ್ಯ ವಲಯದಲ್ಲಿ ಹೆಣ್ಣು ಕಾಣಿಸಿಕೊಂಡರೂ ಇಪ್ಪತ್ತನೆಯ ಶತಮಾನ ಆಕೆಯ ಪಾಲಿಗೆ ಕತ್ತಲೆ ಕೋಣೆಯ ಬಾಗಿಲನ್ನು ತೆರೆಯಿತು ಎನ್ನಬಹುದು. ಕಥೆಗಾರ್ತಿಯಾಗಿ ಹೆಣ್ಣು ಗುರುತಿಸಿಕೊಂಡದ್ದೇ ಕಳೆದ ಶತಮಾನದಲ್ಲಿ. ಅಕ್ಕಮಹಾದೇವಿ ಮಾತ್ರವಲ್ಲದೆ ಅದೆಷ್ಟೋ ಸಂಖ್ಯೆಯ ವಚನಕಾರ್ತಿಯರು ಸಮಾಜದ ಮುಖ್ಯವಾಹಿನಿಗೆ ಬಂದಿರುವುದು ಆಕಾಲದ ಒಂದು ರೀತಿಯ ಸಮಾನತೆಗೆ ಕಾರಣವಾಯಿತು.

೩.೩. ಮಹಿಳಾ ಕಥಾ ಸಾಹಿತ್ಯ ಬೆಳೆದು ಬಂದ ಬಗೆ

೨೦ನೇ ಶತಮಾನದ ಆದಿಯಲ್ಲೇ ಕನ್ನಡ ಲೇಖಕಿಯರು ಕಥಾ ರಚನೆಯಲ್ಲಿ ತೊಡಗಿಕೊಂಡರು. ಆರಂಭದಿಂದಲೂ ಕಥೆ, ಲೇಖಕಿಯರ ಬಹಳ ಪ್ರಿಯವಾದ ಅಭಿವ್ಯಕ್ತಿ ಪ್ರಕಾರವಾಗಿ ಬೆಳೆಯಿತು. ಶಿಷ್ಟ ಸಾಹಿತ್ಯವಲ್ಲದೆ ಜನಪದ ಕಥೆಗಳನ್ನು ಹೇಳುವುದರಲ್ಲಿಯೂ ಮಹಿಳೆ ಸಿದ್ಧಹಸ್ತಳು ಎನ್ನುವುದು ಗಮನಿಸಬೇಕಾದ ವಿಚಾರವಾಗಿದೆ. ಬಹಳ ಮುಖ್ಯವಾಗಿ ಹೆಣ್ಣಿಗಿದ್ದ ಅಭಿವ್ಯಕ್ತಿ ಸ್ವಾತಂತ್ರ್ಯದ ನಿರ್ಬಂಧವೇ ಆಕೆಯನ್ನು ಕಥೆಗಾರ್ತಿಯನ್ನಾಗಿ ರೂಪಿಸಿದೆ. ಸಾಮಾಜಿಕವಾಗಿ ಅನೇಕ ಅಡೆತಡೆಗಳನ್ನು ಹೊಂದಿದ್ದ ಮಹಿಳೆಯ ಅನುಭವಗಳು ಆಕೆಯ ಮನಸ್ಸಿನಲ್ಲಿ ಹರಳುಗಟ್ಟಿ ಕಥೆಯಾಗಿದೆ.

ವೈದೇಹಿಯವರು ಹೇಳುವಂತೆ, "... ನಮ್ಮ ಮನೆಯ ಒಳ ಅಂಗಳ ಎಂದರೆ ಅಮ್ಮನ ಸಾಮ್ರಾಜ್ಯ. ಕಥಾನಕಗಳ ಆಗರವದು. ಎಷ್ಟು ಜನ ಬರುತ್ತಿದ್ದರು. ಸುಖ–ದು:ಖ, ಕಥನ, ಹಾಡು, ಹಸೆ ಅದೊಂದು ಮನುಷ್ಯ ಲೋಕದ ದೊಡ್ಡ ದರ್ಶನ ಎಂತಲೇ ಬರೆಯಲು ಹೊರಟ ನನಗೆ ಸಣ್ಣಕಥೆಯೇ ಒಂದು ಸಾಧನವಾಗಿ ಸಿಕ್ಕಿತೇನೋ"[೪] ಎಂಬ ಮಾತುಗಳು ಮೇಲಿನ ಅರ್ಥವನ್ನು ಧ್ವನಿಸುತ್ತವೆ. ಪ್ರತಿಯೊಬ್ಬ ಹೆಣ್ಣಿನ ಒಡಲಲ್ಲಿ ತನ್ನ ಕಥೆಗಳಲ್ಲದೆ ಇತರರ ಕಥೆಗಳೂ ಹುದುಗಿಕೊಂಡಿರುತ್ತವೆ. ಅನುಪಮಾ ನಿರಂಜನರ ಬಳಿ ಚಿಕಿತ್ಸೆಗಾಗಿ ಬರುತ್ತಿದ್ದ ಹೆಣ್ಣುಮಕ್ಕಳು ಹೇಳಿಕೊಳ್ಳುತ್ತಿದ್ದ ಕಥೆಗಳೇ ಅವರ ಕಥಾರಚನೆಗೆ ಪ್ರೇರಣೆಯಾಯಿತಂತೆ. ವ್ಯಕ್ತಿಯೊಬ್ಬನ ಬದುಕಿನಲ್ಲಿ ಅನೇಕ ತಿರುವುಗಳಿದ್ದಾಗ ಅವನ ಬದುಕೇ ಒಂದು ಕಥೆಯಾಗುತ್ತದೆ. ಇಂತಹ ಅನಿರೀಕ್ಷಿತ ತಿರುವುಗಳನ್ನು ಹೆಣ್ಣು ಪಡೆಯುತ್ತಾಳಾದ್ದರಿಂದ ಅವಳ ಬದುಕು ಕಥೆಯ ಬದುಕೇ ಆಗಿರುತ್ತದೆ. ಆಕೆ ಮಗಳಾಗಿ, ಹೆಂಡತಿಯಾಗಿ, ಸೊಸೆಯಾಗಿ, ತಾಯಿಯಾಗಿ, ಅತ್ತೆಯಾಗಿ, ವಿಧವೆಯಾಗಿ,.... ಹೀಗೆ ಪ್ರತಿಯೊಂದು ಹಂತವೂ ಅವಳ ಬದುಕಿನ ಮೇಲೆ ಗಾಢವಾದ ಪರಿಣಾಮವನ್ನುಂಟುಮಾಡುತ್ತದೆ. ಹೀಗಾಗಿ ಹೆಣ್ಣಿಗೆ ಬದುಕಿನ ಕಥೆಗೆ ಒಂದು ಮುಕ್ತಾಯವಿಲ್ಲ. ಅದು ಅನೇಕ ಆತಂಕ, ನಿರೀಕ್ಷೆ, ತಲ್ಲಣಗಳಿಂದ ಮುಂದುವರಿಯುತ್ತಲೇ ಇರುತ್ತದೆ. ಈ ಆತಂಕ, ತಲ್ಲಣಗಳಿಗೆ ಬಹುಮುಖ್ಯ ಕಾರಣ ಆಕೆಗೆ ಆಯ್ಕೆಯ ಸ್ವಾತಂತ್ರ್ಯ ಇಲ್ಲದಿರುವುದೇ ಆಗಿದೆ. ಹಾಗಾಗಿ ಕೌಟುಂಬಿಕವಾಗಿ, ಸಾಮಾಜಿಕವಾಗಿ ಅನೇಕ ಪಾತ್ರಗಳನ್ನು ಇಷ್ಟವಿಲ್ಲದಿದ್ದರೂ ಒಪ್ಪಿಕೊಳ್ಳಬೇಕಾದ ಸ್ಥಿತಿ ಹೆಣ್ಣಿನ ಪಾಲಿಗಿದ್ದು, ಅವಳ ಕಥೆಯೇ ಕಥೆಗೆ ವಸ್ತುವಾಗುತ್ತದೆ.

"ಕಥೆ ಹೇಳುವುದು ಹೆಣ್ಣಿನ ತಾಯ್ತನದ ಜಾಯಮಾನಕ್ಕೆ ತೀರ ಸಹಜವಾದ ಕ್ರಿಯೆಯಾಗಿದೆ. ಮಗುವಿಗೆ ಭಾಷೆಯ ಮೊದಲ ಶಬ್ದವನ್ನು ಕಲಿಸಿದವಳು ತಾಯಿಯಲ್ಲವೇ? ಭಾಷೆ ತಿಳಿದ ಮಗುವಿಗೆ ಮೊದಲ ಕತೆಹೇಳಿದವಳೂ ಅವಳೇ. ಅವಳಿಗೆ ಬಿಡುವು ಇಲ್ಲದಿದ್ದರೆ ಮೊಮ್ಮಕ್ಕಳಿಗೆ ಕಥೆ ಹೇಳಲೆಂದೇ ಹುಟ್ಟಿ ಬಂದಂತಿದ್ದ ಅಜ್ಜಿ

ಇದ್ದಾಳೆ. ಕಥೆ ಹೇಳುವ ಮೌಖಿಕ ಪರಂಪರೆಯನ್ನು ಆರಂಭಿಸಿದವರು ಸ್ತ್ರೀಯರೇ ಇರಬೇಕು ಎನ್ನುವುದು ನನ್ನ ಅನುಮಾನ" ಎಂದು ಕನ್ನಡದ ಹಿರಿಯ ಕಥೆಗಾರ ಯಶವಂತ ಚಿತ್ತಾಲ ಹೇಳಿದ್ದಾರೆ.

ಪಿತೃಪ್ರಧಾನ ಸಮಾಜ ಲೇಖಕಿಯನ್ನು ಕೇವಲ ಹೆಣ್ಣಾಗಿಯೇ ಕಾಣುವುದರಿಂದ ಆಕೆಯ ಅನುಭವಗಳು ಅಡುಗೆ ಮನೆಯಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗದೆ, ಆಕೆಗೆ ಕಥಾ ಸಾಮಾಗ್ರಿ ಒದಗಿಸುವ ಆಕರಗಳೇ ಅಡುಗೆ ಮನೆ, ಕುಟುಂಬ ಎಂಬಂತಾಯಿತು. ಹಿಂದೆ ಬರೆಯುತ್ತಿದ್ದ ಲೇಖಕಿಯರಿಗೂ ಸಮಕಾಲೀನ ಲೇಖಕಿಯರಿಗೂ ವ್ಯತ್ಯಾಸವಿದೆ. ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ರೂಪಿಸಿದ್ದರಿಂದ ಅವಳ ಬದುಕು, ಆಲೋಚನಾ ರೀತಿ ಬರವಣಿಗೆಗಳಲ್ಲಿ ಸ್ಪಷ್ಟವಾಗುತ್ತದೆ. ಒಟ್ಟು ನಮ್ಮ ಮಹಿಳಾ ಸಾಹಿತ್ಯದ ಇತಿಹಾಸವನ್ನು ಗಮನಿಸಿದಾಗ ಪ್ರಧಾನವಾದ ೩ ಹಂತಗಳಲ್ಲಿ ನಮ್ಮ ಮಹಿಳೆಯರ ಬರವಣಿಗೆಗಳು ಮೂಡಿ ಬಂದಿದ್ದನ್ನು ಗಮನಿಸಬಹುದು. ಅವುಗಳೆಂದರೆ,

೧. ಸಮಾಜದ ಸಿದ್ಧ ಮಾದರಿಯನ್ನು ಒಪ್ಪಿಕೊಂಡು ಅದನ್ನೇ ವೈಭವೀಕರಣದಲ್ಲಿ ಬರೆಯತೊಡಗಿದ ಮಹಿಳೆಯರು
೨. ಸಿದ್ಧ ಮಾದರಿಗಳನ್ನು ಪ್ರಶ್ನಿಸುತ್ತಾ, ವಿರೋಧಿಸುತ್ತಾ ಬರೆದವರು
೩. ಅಸ್ಮಿತೆಯ ಹುಡುಕಾಟದಲ್ಲಿ ತೊಡಗಿದವರು

ಮಹಿಳಾ ಕಥಾ ಸಾಹಿತ್ಯಕ್ಕೆ ನಿಜವಾಗಿಯೂ ಒಂದು ಹೊಸ ತಿರುವು ದೊರಕಿದ್ದು ಕಳೆದ ಶತಮಾನದಲ್ಲಿ ಹುಟ್ಟಿದ ಹೊಸ ಲೇಖಕಿಯರಿಂದ. ಹೆಣ್ಣಿನ ಸಮಸ್ಯೆಯ ಬಗೆಗೆ ಸರಿಯಾದ ತಿಳುವಳಿಕೆ ಹೊಂದಿರುವ ಇಂದಿನ ಲೇಖಕಿಯರಿಗೆ ಕಥೆ ಹೇಳುವ ತುಡಿತಕ್ಕಿಂತಲೂ ಕಥೆಯ ಮೂಲಕ ಪ್ರತಿಪಾದಿಸಬೇಕಾಗಿರುವ ಧೋರಣೆಯೇ ಮುಖ್ಯವಾಗಿದೆ. ಹಾಗಾಗಿ ಇಂದಿನ ತಮ್ಮ ಬರಹಗಾರ್ತಿಯರಲ್ಲಿ ತಮ್ಮ ಬರವಣಿಗೆಯ ಮೂಲಕ ಶೋಷಣೆಯ ಮೂಲವನ್ನು ಹುಡುಕುವ ಪ್ರಯತ್ನವಿದೆ. ಇದರಿಂದ ಗಂಭೀರ ವಿಚಾರವೊಂದನ್ನು ಬರವಣಿಗೆಗೆ ಆಯ್ದುಕೊಳ್ಳುವುದರೊಂದಿಗೆ ಅದನ್ನು ಅಭಿವ್ಯಕ್ತಪಡಿಸುವುದರಲ್ಲೂ ಅಷ್ಟೇ ಗಂಭೀರತೆಯನ್ನು ತೋರಿಸುತ್ತಿದ್ದಾರೆ. ಕನ್ನಡದ ಹೆಸರಾಂತ ಕಥೆಗಾರ್ತಿ ನೇಮಿಚಂದ್ರ ಒಂದು ಕಡೆ, "...ಹೆಣ್ತನಕ್ಕೆ ಅಂಟಿಸಿದ ಆತಂಕಗಳು ಬಹುಶಃ ನಮ್ಮ ಲೇಖಕಿಯರನ್ನು ಕಾಡಿಸಿರಲಿಕ್ಕಿಲ್ಲ. ಇದೇ ಕಾರಣಕ್ಕಿರಬೇಕು ನಾವು ಸ್ತ್ರೀಯರು ನಮ್ಮ ಅನುಭವಗಳನ್ನು ತೆರೆದುಕೊಂಡದ್ದು ತೀರಾ ಕಡಿಮೆ. ಆಳಕ್ಕಿಳಿದು ನಮ್ಮ ನಿಜವಾದ ಅನಿಸಿಕೆಗಳನ್ನು ಮುಟ್ಟಲು ಬೆಚ್ಚಿದ್ದೇವೆ. ಸೀತೆ, ಸಾವಿತ್ರಿಯರ ನಾಡಿನಲ್ಲಿ ನಮಗೆ ಹೀಗನ್ನಿಸುವುದಲ್ಲ ಎಂಬ ಭಯಕ್ಕೆ ಬಹುಶಃ ಸೀತೆ, ಸಾವಿತ್ರಿಯರಿಗೂ ಹೀಗನ್ನಿಸಿರಬಾರದೇಕೆ ಎಂದು ಪ್ರಶ್ನಿಸಿದ್ದು ಎಚ್.ವಿ. ಸಾವಿತ್ರಮ್ಮನವರಂಥ ಅಲ್ಲೊಬ್ಬ ಇಲ್ಲೊಬ್ಬ ಲೇಖಕಿಯರು ಮಾತ್ರ. ನಮ್ಮ ಅನುಭವಗಳನ್ನು ಮುಟ್ಟಿದಾಗಲೂ ಮೆಟ್ಟಿ ಬಿದ್ದಿದ್ದೇವೆ, ತೆರೆದಿಡಲು ಹಿಂಜರಿದಿದ್ದೇವೆ. ಯಾರಾದರೂ ಇದು

ನಿಮ್ಮದೇ ಅನುಭವವಾ ಎಂದು ಕೇಳಿಬಿಟ್ಟರೆ ಎಂಬ ಭಯ. ಇಂಥಾ ಸಂಕೋಚ ಮುಜುಗರಗಳಲ್ಲಿ ಸರ್ವಕಾಲಕ್ಕೂ ಹೇಳಿಕೊಂಡು ಬಂದಿದ್ದನ್ನೇ, ಅನಿಸದಿದ್ದರೂ ಅನಿಸಬೇಕೆಂದದ್ದನ್ನೇ ಜನ ನಿರೀಕ್ಷಿಸಿದ್ದನ್ನೇ, ಸಮಾಜ ಅಂಗೀಕರಿಸಿದ್ದನ್ನೆ ಹೇಳುತ್ತಾ ಬಂದೆವು. ನಾವು ಗಂಡು ಮೌಲ್ಯಗಳಿಗೆ, ಗಂಡು ಮಾದರಿಗಳಿಗೆ, ಗಂಡು ನಿರೀಕ್ಷೆಗಳಿಗೆ ತಕ್ಕಂತೆ ಬರೆದೆವು. 'ಹೆಣ್ಣಾಗಿ' ಬರೆದದ್ದು ಗಟ್ಟಿನಿಂತ ಕೆಲವು ಲೇಖಕಿಯರು ಮಾತ್ರ"[೬]. ನೇಮಿಚಂದ್ರರ ಈ ಮಾತುಗಳು ಸಾಹಿತ್ಯ ರಚನೆಗೆ ತೊಡಗಿದ ಮಹಿಳೆಯರ ದೃಷ್ಟಿಕೋನದ ಮೇಲೆ ಬೆಳಕು ಚೆಲ್ಲುತ್ತವೆ.

ಮಹಿಳಾ ಕನ್ನಡ ಸಾಹಿತ್ಯ ಸಾಗಿ ಬಂದ ಹಾದಿಯನ್ನು ಗಮನಿಸಿದಾಗ ಒಂದು ಅಂಶ ಸ್ಪಷ್ಟವಾಗುತ್ತದೆ. ಅದೇನೆಂದರೆ ನಮ್ಮ ಆರಂಭದ ಲೇಖಕಿಯರು ಪರಂಪರಾಗತ ಮೌಲ್ಯಗಳನ್ನು ವೈಭವೀಕರಿಸಿದರೇ ವಿನಾಃ ಮಹಿಳೆ ಅನುಭವಿಸಿದ ಶೋಷಣೆ, ದೌರ್ಜನ್ಯಗಳ ಬಗೆಗಿನ ಕಾಳಜಿ ಗೌಣವಾಯಿತು. ಬರವಣಿಗೆಯನ್ನು ಒಂದು ಸಮಾಜ ಸುಧಾರಣೆಯ ಅಸ್ತ್ರವಾಗಿ ಬಳಸಿದ ನಮ್ಮ ಸಮಕಾಲೀನ ಲೇಖಕಿಯರು ಅನುಭವ ಕೇಂದ್ರಿತ ನೆಲೆಯಲ್ಲಿ ಮಹಿಳಯರ ಸಮಸ್ಯೆಗಳನ್ನು ಪ್ರತಿಪಾದಿಸಿದ್ದಾರೆ.

ಕಥಾ ಪ್ರಕಾರವನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡ ಲೇಖಕಿಯರು ಸಿಗುವುದು ಇಪ್ಪತ್ತನೆಯ ಶತಮಾನದಲ್ಲಿಯೇ. ೧೯೮೨ರವರೆಗೆ ಬದುಕಿದ್ದ ತಿರುಮಲಾಂಬ, ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಆರಂಭದ ಬಿಂದುವೆನ್ನಬಹುದು. ಅವರಿಗಿಂತ ಮೊದಲೇ ಲೇಖಕಿಯರು ಇದ್ದರಾದರೂ ಸಾಹಿತ್ಯದ ವಸ್ತು, ಶೈಲಿಗಳ ನೆಲೆಯಲ್ಲಿ ಹೆಣ್ಣು ಮಕ್ಕಳಿಗೆ ಆತ್ಮವಿಶ್ವಾಸವನ್ನು ನೀಡಿದ ಲೇಖಕಿ ತಿರುಮಲಾಂಬ. ೧೯೨೫ರಲ್ಲಿ 'ಸಚ್ಚರಿತ ಸುಧಾರ್ಣವ' ಎಂಬ ಮಹಾಪುರುಷರ ಜೀವನ ಚರಿತ್ರೆಗಳುಳ್ಳ ಸಣ್ಣಕಥೆಗಳನ್ನು ಬರೆದರು.

೧೮೯೧ರಲ್ಲಿ ಜನಿಸಿದ ಆರ್. ಕಲ್ಯಾಣಮ್ಮ ಸಾಮಾಜಿಕ ಜೀವನವನ್ನು ಆರಂಭಿಸಿದ್ದೇ ಬರವಣಿಗೆಯಿಂದ. ತನ್ನೊಳಗಿನ ನೋವನ್ನು ಹೊರಹಾಕುವುದಕ್ಕಾಗಿ ಬರವಣಿಗೆಯನ್ನು ಒಂದು ಮಾಧ್ಯಮವನ್ನಾಗಿ ಮಾಡಿಕೊಂಡರು. ಆಗಿನ ಪ್ರಸಿದ್ಧ ಪತ್ರಿಕೆಗಳಾಗಿದ್ದ ಸಾಧ್ವಿ, ಒಕ್ಕಲಿಗರ ಪತ್ರಿಕೆ, ನುಡಿಗನ್ನಡಿ, ವಿದ್ಯಾದಾಯಿನಿ, ಕೊಡಗು ಮುಂತಾದವುಗಳಲ್ಲಿ ಇವರ ಕಥೆಗಳು ಪ್ರಕಟವಾಗುತ್ತಿದ್ದವು.

ಚಾರಿತ್ರಿಕವಾಗಿ ಹಾಗೂ ವ್ಯಕ್ತಿಗತ ಪ್ರತಿಭೆಯಿಂದಾಗಿ ಕನ್ನಡ ಕಥಾಸಾಹಿತ್ಯದಲ್ಲಿ ಚಿರಪರಿಚಿತ ಹೆಸರು ಕೊಡಗಿನ ಗೌರಮ್ಮನವರದು. ಅವರು ಬರೆಯತೊಡಗಿದ ಕಾಲ ಆಗಿನ್ನೂ ಸಣ್ಣಕಥೆಗಳ ಆರಂಭದ ಕಾಲ. ವಿದ್ಯಾವಂತೆಯಾದ ಎಳೆವಯಸ್ಸಿನ ಗೌರಮ್ಮ ತಮ್ಮ ಸಾಹಿತ್ಯಾಭಿವ್ಯಕ್ತಿಗೆ ಆರಿಸಿಕೊಂಡದ್ದು ಸಣ್ಣಕಥೆಗಳನ್ನು. ತನ್ನ ಸುತ್ತಲಿನ ತರುಣ – ತರುಣಿಯರ ಮುಗ್ಧ ಪ್ರೇಮ, ವಿವಾಹದ ಹಲವಾರು ಕನಸುಗಳು, ನಿರಾಶೆ ಮುಂತಾದ ಹತ್ತು -

ಹಲವು ಸಮಸ್ಯೆಗಳನ್ನು ತನ್ನ ಕಥೆಗಳಲ್ಲಿ ಗೌರಮ್ಮ ಚಿತ್ರಿಸಿದ್ದಾರೆ. ವಸಾಹತುಶಾಹಿ ಪರಿಣಾಮ, ಇಂಗ್ಲಿಷ್ ಶಿಕ್ಷಣ, ನಗರೀಕರಣ – ಇವೆಲ್ಲಾ ಹೆಣ್ಣು – ಗಂಡುಗಳ ಬದುಕಿನಲ್ಲಿ ಮೂಡಿಸುವ ನಿರೀಕ್ಷೆ, ಆಕಾಂಕ್ಷೆ, ಅವು ಉಂಟುಮಾಡುವ ತಲ್ಲಣಗಳನ್ನು ಇವರ ಕಥೆಗಳಲ್ಲಿ ಕಾಣಬಹುದು. ಪತ್ರಿಕೆಯ ಸುದ್ದಿಗಳು ಇವರ ಕಥೆಗಳಿಗೆ ವಸ್ತುವಾದದ್ದಿದೆ. 'ಒಂದು ಚಿತ್ರ' ಕಥೆಯ ರೋಹಿಣಿ, 'ಮರದ ಬೊಂಬೆ' ಕಥೆಯ ಬೋರ್ಡಿಂಗ್ ಸ್ಕೂಲಿನ ಹುಡುಗಿ ಶೈಲಾ, 'ಅಪರಾಧಿ ಯಾರು' ಕಥೆಯ ಲತೀಫಾ, 'ಪಾಯಶ್ಚಿತ' ಕಥೆಯ ಮೂರ್ತಿ – ಈ ಪಾತ್ರಗಳನ್ನು ಮೇಲಿನ ಲಕ್ಷಣಗಳಿಗೆ ಪೂರಕವಾಗಿ ಗುರುತಿಸಬಹುದು.

ಹೆಣ್ಣಿನ ಸೌಂದರ್ಯದ ಕುರಿತಾದ ಗೌರಮ್ಮನ ಪರಿಕಲ್ಪನೆ ವಿಶಿಷ್ಟವಾದದ್ದು. ಹೆಣ್ಣಿನ ದೈಹಿಕ ಸೌಂದರ್ಯಕ್ಕಿಂತ ಅವಳ ಅಂತರಂಗ, ನಡವಳಿಕೆಗಳೇ ಪ್ರಧಾನ ಅಂಶಗಳಾಗಿ ಕಂಡುಬರುತ್ತವೆ. ಮಾನವೀಯ ಸಂಬಂಧಗಳಿಗೆ ಒತ್ತು ಕೊಡುತ್ತಾ ವೈಚಾರಿಕ ನಿಲುವನ್ನು ವ್ಯಕ್ತಪಡಿಸುತ್ತಾರೆ. ಈ ನಿಟ್ಟಿನಲ್ಲಿ 'ವಾಣಿಯ ಸಮಸ್ಯೆ' ಕಥೆಯ ಇಂದು, 'ಅವಳ ಭಾಗ್ಯ' ಕಥೆಯ ಪಾರುವನ್ನು ಗಮನಿಸಬಹುದು.

೧೯೧೬ರಲ್ಲಿ ಬೆಂಗಳೂರಿನಲ್ಲಿ ಹುಟ್ಟಿದ ರಾಜೇಶ್ವರಿ ನರಸಿಂಹ ಮೂರ್ತಿ 'ಬೆಳದಿಂಗಳ ರಾತ್ರಿ ಕಥೆಗಳು' ಹಾಗೂ 'ಗುಲಾಬಿ ಹೂ ಕಥೆಗಳು' ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ೧೯೨೩ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಜನಿಸಿದ ಸರಸ್ವತಿದೇವಿ ಗೌಡರ ಒಟ್ಟು ೫ ಕೃತಿಗಳನ್ನು ಪ್ರಕಟಿಸಿದ್ದು ಅದರಲ್ಲಿ 'ಅಲ್ಪವಿರಾಮ' ಹಾಗೂ 'ಪುಣ್ಯಸ್ಮೃತಿ' ಎಂಬ ಕಥಾ ಸಂಕಲನಗಳು ಸೇರಿವೆ. ಆಧುನಿಕ ಮಹಿಳಾ ಸಾಹಿತ್ಯದಲ್ಲಿ ಒಂದು ಹೊಸ ಅಲೆ ಎಬ್ಬಿಸಿದವರು ವೀಣಾ ಶಾಂತೇಶ್ವರ. ಕಥೆಗಾರಿಕೆ ಮತ್ತು ವಸ್ತುವಿನಲ್ಲಿ ಹೊಸತನವನ್ನು ತರುವುದರ ಜೊತೆಗೆ ಹೆಣ್ಣು ಮಕ್ಕಳ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಒದಗಿಸಿದರು. ಕಥೆ ಹೆಣೆಯುವ ರೀತಿ, ಹಾಗೂ ಕಥಾವಸ್ತುವಿನ ಆಯ್ಕೆಯಲ್ಲಿ ಮಹಿಳಾ ಸಾಹಿತ್ಯಕ್ಕೆ ವಿಶಿಷ್ಟತೆಯನ್ನು ತಂದುಕೊಟ್ಟರು. ಕಥೆಯ ವಸ್ತು, ಧೋರಣೆ, ನಿರೂಪಣೆಯ ಧಾಟಿ, ಈ ಎಲ್ಲಾ ವಿಷಯಗಳಲ್ಲಿ ವೀಣಾ ಇತರರಿಗಿಂತ ಭಿನ್ನರಾಗಿ ಕಾಣುತ್ತಾರೆ. ತಮ್ಮ ಕಥೆಗಳಲ್ಲಿ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಮುಖಾಮುಖಿಯಾಗಿಸುತ್ತಾರೆ. ಇವರ ಕಥೆಗಳಲ್ಲಿ ಪುರುಷನೇ ವಂಚಕನಾಗಿ, ದುರ್ಬಲನಾಗಿ ಕಾಣಿಸಿಕೊಳ್ಳುತ್ತಾನೆ. ಮೊದಲ ಬಾರಿಗೆ ಸೂಕ್ಷ್ಮ ಸಂವೇದನೆಯ, ದಿಟ್ಟ ನಿಲುವಿನ, ವಿದ್ಯಾವಂತ ವಿಚಾರವಾದಿ ನಾಯಕಿ ಕಾಣಸಿಗುವುದು ವೀಣಾ ಶಾಂತೇಶ್ವರರ ಕತೆಗಳಲ್ಲಿಯೇ. ಸಾಮಾನ್ಯವಾಗಿ ಇವರ ಎಲ್ಲಾ ಕಥೆಗಳ ನಾಯಕಿಯರೂ ಹೀಗೆ. ಪುರುಷನ ಮೋಸ, ಹೇಡಿತನ, ಸಂಪ್ರದಾಯ ಶರಣತೆಗಳನ್ನು ವೀಣಾ ಶಾಂತೇಶ್ವರರವರು ತಮ್ಮ ಕಥೆಗಳ ಮೂಲಕ ಬಹಿರಂಗಗೊಳಿಸುತ್ತಾರೆ.

ಇದೇ ಸಾಲಿಗೆ ಸೇರುವ ರಾಜಲಕ್ಷ್ಮಿ ಎನ್. ರಾವ್. ಸೂಕ್ಷ್ಮ ಸಂವೇದನಾಶೀಲ ಬರಹಗಾರ್ತಿಯಾಗಿದ್ದಾರೆ. ಇವರ ಕಥೆಗಳಲ್ಲಿ ವ್ಯಕ್ತಿನಿಷ್ಠವಾದ ಆಲೋಚನೆಗಳಿಗಿಂತ ವಸ್ತುನಿಷ್ಠವಾದ ಆಲೋಚನೆಗಳೇ ಎದ್ದು ಕಾಣುತ್ತವೆ. ಇವರ ಕಥೆಗಳ ವಸ್ತು ಹೆಣ್ಣು – ಗಂಡುಗಳ ಸಂಬಂಧವನ್ನು ಕುರಿತದ್ದು. ಮಹಿಳೆಯರಿಗೇ ವಿಶಿಷ್ಟವಾದ ದೃಷ್ಟಿಕೋನ, ಶೈಲಿ, ಅನಿವಾರ್ಯತೆಯನ್ನು ಇವರ ಕಥೆಗಳು ಸೂಚಿಸುತ್ತವೆ.

ಜಾತಿ ವರ್ಗಗಳ ಜೀವನಾನುಭವದ ಒಳನೋಟ ಇವರ ಕಥೆಗಳಲ್ಲಿದೆ. ವೇಶ್ಯಾವೃತ್ತಿ ಲೈಂಗಿಕ ಸಮಸ್ಯೆ, ವಿವಾಹೇತರ ಹಾಗೂ ವಿವಾಹಪೂರ್ವ ಲೈಂಗಿಕ ಸಂಬಂಧಗಳ ಬೇರೆ ಬೇರೆ ಮುಖಗಳನ್ನು ಕಥೆಗಳ ಮೂಲಕ ಅನಾವರಣಗೊಳಿಸುತ್ತಾರೆ. ಪ್ರತಿಕೂಲ ಪರಿಸ್ಥಿತಿಯಲ್ಲೂ ಎದ್ದು ನಿಲ್ಲುವ ಗಟ್ಟಿ ಪಾತ್ರಗಳು ವೈಚಾರಿಕ ದೃಷ್ಟಿಕೋನವನ್ನು ಹೊಂದಿವೆ. ಸ್ವಾವಲಂಬನೆಗಾಗಿ ತುಡಿಯುವ ಹೆಣ್ಣು, ವೇಶ್ಯಾವೃತ್ತಿಯ ಕರಾಳತೆಯಿಂದ ಹೊರಬರಲು ಬಯಸುವ ಹೆಣ್ಣುಗಳು ಇವರ ಕಥೆಗಳಲ್ಲಿ ಕಾಣಸಿಗುತ್ತಾರೆ. ಬಾಲ್ಯವಿವಾಹ ಇಲ್ಲವೇ ಮುದಿವಯಸ್ಸಿನವನೊಡನೆ ವಿವಾಹ – ಈ ರೀತಿಯ ಸಂಬಂಧಗಳಿಗೆ ವಿದ್ಯಾವಂತ ಹೆಣ್ಣು ಪ್ರತಿಕ್ರಿಯಿಸುವ ಬಗೆಯನ್ನು ಇವರ ಕಥೆಗಳು ಚಿತ್ರಿಸುತ್ತವೆ. ('ಕರುಳ ಕತ್ತರಿ', 'ಸವತಿಯರು', 'ನಡೆದು ಬಂದ ಲಕ್ಷ್ಮೀ', 'ನೀತಿಯ ಸಂಸಾರ', 'ದೊಡ್ಡಮ್ಮ ನೋಡಿದ ವರ')

ಪ್ರಗತಿಶೀಲತೆಯ ಪ್ರಭಾವಕ್ಕೆ ಒಳಗಾಗಿ ಬರೆದ ಅನೇಕ ಮಹಿಳೆಯರಿದ್ದಾರೆ. ಸಮಾಜದ ಪ್ರಧಾನ ಸಮಸ್ಯೆಗಳನ್ನು ಧೈರ್ಯವಾಗಿ ಚಿತ್ರಿಸುವ ಮನಸ್ಸು ಮಾಡಿದ ಪ್ರಗತಿಶೀಲ ಲೇಖಕಿಯರು ಅದಕ್ಕೆ ಪರಿಹಾರ ಹುಡುಕುವಲ್ಲಿ ಪ್ರಯತ್ನಿಸಿದರು. ಹೆಣ್ಣಿನ ಹೊಣೆ, ಕರ್ತವ್ಯಗಳ ಬಗೆಗೆ ಅರಿವು ಮೂಡಿಸಿದರು.

ಕನ್ನಡದ ಪ್ರಗತಿಶೀಲ ಪ್ರೇರಣೆಯಿಂದ ಬರೆಯತೊಡಗಿದ ಲೇಖಕಿಯರಲ್ಲಿ ಸುಶೀಲಾ ಕೊಪ್ಪರ ಒಬ್ಬರು. ಗಂಡು - ಹೆಣ್ಣಿಗೆ ಸಂಬಂಧಿಸಿದಂತೆ ಸಮಾಜ ನೀಡುವ ವಿಭಿನ್ನ ಅವಕಾಶ ಹಾಗೂ ಪುರುಷನಾದವನು ಹೆಣ್ಣನ್ನು ನಡೆಸಿಕೊಳ್ಳುವ ರೀತಿಯನ್ನು ಇವರು ಪ್ರಶ್ನಿಸುತ್ತಾರೆ. 'ಲೇಖಕನ ಹೆಂಡತಿ ಮತ್ತು ಇತರ ಕಥೆಗಳು', 'ಸಾಲು ದೀಪ', 'ನಾನು ನಮ್ಮ ಅಜ್ಜ' – ಇವು ಸುಶೀಲಾ ಕೊಪ್ಪರರವರ ಕಥಾ ಸಂಕಲನಗಳು. ಇವರ ಕಥೆಗಳ ಕೇಂದ್ರ ವ್ಯಕ್ತಿ ಹೆಣ್ಣಾಗಿದ್ದು ಅತ್ಯಂತ ಆತ್ಮವಿಶ್ವಾಸದಿಂದ ಬದುಕುವ ಹೆಣ್ಣುಮಕ್ಕಳ ಚಿತ್ರಣ ನೀಡುತ್ತಾರೆ.

ಕನ್ನಡ ಮಹಿಳಾ ಸಾಹಿತ್ಯದ ದಿಕ್ಕು ಬದಲಾಯಿಸಿದ ಲೇಖಕಿ ತ್ರಿವೇಣಿಯವರು, ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಹೆಣ್ಣುಮಕ್ಕಳ ಕೌಟುಂಬಿಕ ಸಮಸ್ಯೆಗಳ ಬೇರೆ ಬೇರೆ ಮುಖಗಳನ್ನು ತಮ್ಮ ಕಥೆಗಳಲ್ಲಿ ತೋರಿಸಿದ್ದಾರೆ. ಪರಿಣಾಮಕಾರಿಯಾದ ಕಥೆಗಳನ್ನು ಹೆಣೆಯುವ ಸಾಮರ್ಥ್ಯ ಪಡೆದ ತ್ರಿವೇಣಿಯವರಿಗೆ ಕಥೆ

ಹೇಳುವ ಕಲೆ ಕರಗತವಾಗಿದೆ ಎನ್ನಬಹುದು. 'ಅವರ ಬೆಡ್ ನಂ. ೭', 'ಆಕರ್ಷಣೆ' 'ಸೇರದ ದಾರಿ', 'ಹೆಂಡತಿಯ ಹೆಸರು', 'ಕೊನೆಯ ನಿರ್ಧಾರ' ಮುಂತಾದ ಕಥೆಗಳಲ್ಲಿ ಹೆಣ್ಣಿನ ಒಳಮನಸ್ಸಿನ ಚಿತ್ರಣವಿದೆ. ಇವರ ಕಥೆಗಳಲ್ಲಿನ ಹೆಣ್ಣುಮಕ್ಕಳು ಸಾಂಪ್ರದಾಯಿಕ ಮೌಲ್ಯಗಳನ್ನು ಮೀರಲಾರದ, ಒಪ್ಪಿಕೊಳ್ಳಲಾರದ ಇಕ್ಕಟ್ಟಿನಲ್ಲಿ ಸಿಲುಕುತ್ತಾರೆ. ಕ್ಷಮೆ, ತ್ಯಾಗ ಮುಂತಾದ ಹೆಣ್ಣಿನ ಒಳ್ಳೆಯ ಗುಣಗಳು ತ್ರಿವೇಣಿಯವರ ಕಥೆಗಳಲ್ಲಿ ಕಾಣಸಿಗುತ್ತವೆ.

ಕನ್ನಡ ಮಹಿಳಾ ಸಾಹಿತ್ಯದ ಎರಡನೇ ಹಂತದ ಲೇಖಕಿಯರಲ್ಲಿ ಎಚ್. ಎಸ್. ಪಾರ್ವತಿಯವರದು ಚಿರಪರಿಚಿತ ಹೆಸರು. 'ಸ್ವರ – ಅಪಸ್ವರ', 'ಬದಲಾದ ಪ್ರತಿಬಿಂಬ', 'ಹೆಣ್ಣು ಹೃದಯ', 'ಒಂಟಿಮೋಡ', 'ಯಾರಿಗಾಗಿ ಕಾದಿರುವೆ', 'ಸುಳಿ' ಕಥಾ ಸಂಕಲನಗಳನ್ನು ಬರೆದಿರುವ ಪಾರ್ವತಿಯವರ ಕಥೆಗಳಲ್ಲಿ ಹೆಣ್ಣಿನ ಒಳಮನಸ್ಸಿನ ಚಿತ್ರಣವಿದೆ. ಹೆಣ್ಣು ತನ್ನನ್ನು ಪ್ರೀತಿಸುವವರಿಗೆ ದ್ರೋಹ ಬಗೆಯುವವಳಲ್ಲ ಎನ್ನುವುದನ್ನು ಕಥೆಗಳ ಮೂಲಕ ಮನದಟ್ಟು ಮಾಡುತ್ತಾರೆ. ಹೆಣ್ಣಿನ ಸಮಸ್ಯೆಗಳನ್ನೇ ವಸ್ತು – ಕೇಂದ್ರವಾಗಿಸಿಕೊಂಡಿರುವ ಎಚ್. ಎಸ್. ಪಾರ್ವತಿಯವರಲ್ಲಿ ಸ್ತ್ರೀಪರ ಕಾಳಜಿಯಿದೆ.

ಉತ್ತರ ಕರ್ನಾಟಕದ ಪ್ರಾರಂಭದ ಲೇಖಕಿಯರಲ್ಲಿ ಗೀತಾ ಕುಲಕರ್ಣಿಯವರೂ ಒಬ್ಬರು. 'ಅಂದು–ಇಂದು' ಎಂಬುದು ಇವರ ಮೊದಲ ಕಥೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೈಯಾಡಿಸಿದ ಗೀತಾ ಕುಲಕರ್ಣಿಯವರು 'ಸುವರ್ಣೆಯ ಗ್ರೀನ್ ರೂಂ', 'ಚಿಪ್ಪಿನೊಳಗಿನ ಮುತ್ತು', 'ಪಾತಾಳ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಾಂಸಾರಿಕ ಜೀವನದ ಬಿರುಕುಗಳು, ಭಿನ್ನಾಭಿಪ್ರಾಯಗಳು ಹಾಗೂ ಅವುಗಳ ನಿವಾರಣೆಗಾಗಿ ಇರುವ ಪರಿಹಾರಗಳನ್ನು ತನ್ನ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಇವುಗಳ ಕಥೆ – ಕಾದಂಬರಿಗಳ ಕೇಂದ್ರ ವ್ಯಕ್ತಿ ಹೆಣ್ಣೇ ಆಗಿದ್ದಾಳೆ. ಹೆಣ್ಣು – ಗಂಡುಗಳ ಪ್ರೇಮದ ವೈಭವೀಕರಣಕ್ಕೆ ಹೋಗದೆ ಬದುಕಿನ ಒಳಗೆ ಹುಟ್ಟಿಕೊಳ್ಳುವ ಸಂಕಷ್ಟಗಳು, ಹೆಣ್ಣು ಅನಿವಾರ್ಯವಾಗಿ ಅದನ್ನು ಸ್ವೀಕರಿಸುವ ಸ್ಥಿತಿಯನ್ನು ಬಹಳ ಸೂಕ್ಷ್ಮವಾಗಿ ಗೀತಾ ಕುಲಕರ್ಣಿ ಗಮನಿಸುತ್ತಾರೆ.

ಸಮಾಜ ಸೇವೆ, ಮಹಿಳಾಪರ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಸರಸ್ವತಿದೇವಿ ಗೌಡರ್ ಉತ್ತರ ಕರ್ನಾಟಕದ ಪ್ರಾರಂಭಿಕ ಮಹಿಳಾ ಸಾಹಿತಿಗಳಲ್ಲಿ ಒಬ್ಬರು. 'ಹಾಲು ಉಕ್ಕಿತು', 'ಅಲ್ಪವಿರಾಮ', 'ಒಂದು ಸಮಸ್ಯೆ', 'ಅವಳು ವಿಧವೆ', 'ಸೌಭಾಗ್ಯವತಿ' ಮೊದಲಾದ ಕಥೆಗಳಲ್ಲಿ ಹೆಣ್ಣಿನ ಶೋಷಣೆಯ ವಿವಿಧ ಮುಖಗಳನ್ನು, ಅವಳ ಉದಾರತೆ, ತ್ಯಾಗ ಗುಣಗಳನ್ನು ಚಿತ್ರಿಸುತ್ತಾರೆ. 'ಹೃದಯ ಪರಿವರ್ತನೆಯಾಗದೆ ಸಮಾಜದಲ್ಲಿ ಯಾವ ಕಾನೂನುಗಳಿಗೂ ಬೆಲೆಯಿಲ್ಲ' ಎಂಬ ಭಾವವನ್ನು ತನ್ನ ಕಥೆಗಳಲ್ಲಿ ತಂದಿದ್ದಾರೆ. ಸ್ತ್ರೀಪರ ಕಾಳಜಿ ಹೊಂದಿರುವ

ಇವರು ಪುರುಷ ಜಗತ್ತಿನಲ್ಲಿ ಗೊತ್ತಿದ್ದು, ಗೊತ್ತಿಲ್ಲದೆಯೂ ಶೋಷಣೆಗೆ ಒಳಗಾಗುವ ಹೆಣ್ಣುಮಕ್ಕಳ ಎರಡೂ ಮಾದರಿಗಳ ಚಿತ್ರಣವನ್ನು ನೀಡಿದ್ದಾರೆ.

ಹಾಸನ ಜಿಲ್ಲೆಯ ಎಚ್. ಎಸ್. ಕಾತ್ಯಾಯಿನಿಯವರು ಕಥೆಯನ್ನೇ ತನ್ನ ಅಭಿವ್ಯಕ್ತಿಯ ಪ್ರಧಾನ ಮಾಧ್ಯಮವನ್ನಾಗಿ ಮಾಡಿಕೊಂಡರು. ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರತಿಭಟಿಸುವ ತವಕ ಇವರ ಕಥೆಗಳಿಗಿದ್ದರೂ ಕೆಲವೊಮ್ಮೆ ಆ ಮೌಲ್ಯಗಳನ್ನೇ ಒಪ್ಪಿಕೊಂಡು ಬಿಡುತ್ತವೆ. ಗ್ರಾಮೀಣ ಹಿನ್ನೆಲೆಯಿಂದ ಬಂದ ಕಾತ್ಯಾಯಿನಿಯವರು ಅಲ್ಲಿನ ಪರಿಸರ, ನಂಬಿಕೆಗಳನ್ನು ತನ್ನ ಕಥೆಗಳಲ್ಲಿ ತಂದಿದ್ದಾರೆ. ಕೆಲವು ಕಥೆಗಳಲ್ಲಿ ಸಮಾಜದ ಅಪಮೌಲ್ಯಗಳನ್ನು ವಿರೋಧಿಸುತ್ತಾರೆ.

ತೆಲುಗು ಕಥೆಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಬರವಣಿಗೆಯನ್ನು ಆರಂಭಿಸಿದ ಡಾ. ನಿರುಪಮಾರವರು 'ತುಂಗಭದ್ರೆಯ ಮಡಿಲಲ್ಲಿ' ಹಾಗೂ 'ನಾಳೆ' ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮಹಿಳಾಪರ ಕಾಳಜಿಯ ಜೊತೆಗೆ ವೈಚಾರಿಕ ನೆಲೆಯಲ್ಲಿ ಚಿಂತನೆಯನ್ನು ನಡೆಸುತ್ತಾರೆ. ಇವರ ಬರವಣಿಗೆಗಳಲ್ಲಿ ಮಹಿಳಾ ಸಂವೇದನೆಯಿದೆ.

ನವೋದಯ ಸಾಹಿತಿಗಳ ಸಾಲಿಗೆ ಸೇರುವ ಉತ್ತರ ಕರ್ನಾಟಕದ ಲೇಖಕಿ ಶಾಂತಾದೇವಿ ಕಣವಿಯವರು ಕನ್ನಡ ಸಾಹಿತ್ಯದ ವಿವಿಧ ಚಳುವಳಿಗಳನ್ನು ಬಹಳ ಹತ್ತಿರದಿಂದ ಕಂಡವರು. ಆದರೆ ಯಾವುದೇ ಚಳುವಳಿಯಲ್ಲಿ ತನ್ನನ್ನು ಗುರುತಿಸಿಕೊಳ್ಳದೆ ಹೆಣ್ಣನ್ನು ತನ್ನ ಸಾಹಿತ್ಯದ ಕೇಂದ್ರ ವಸ್ತುವಾಗಿಟ್ಟುಕೊಂಡು ಚಿಂತಿಸಿದವರು. 'ಸಂಜೆ ಮಲ್ಲಿಗೆ', 'ಬಯಲು ಆಲಯ' ಎಂಬ ಕಥಾ ಸಂಕಲನಗಳ ಕತೆಗಳಲ್ಲಿ ಹೆಣ್ಣೇ ಕೇಂದ್ರ ಪಾತ್ರವಾಗಿದ್ದಾಳೆ. ಅವರ ಹೆಚ್ಚಿನ ಕಥೆಗಳಲ್ಲಿ ಪ್ರೀತಿ, ವಿವಾಹ, ಹೆಣ್ಣಿನ ಅವಿದ್ಯಾವಂತಿಕೆ ಮುಂತಾದವುಗಳ ಕುರಿತು ಚಿತ್ರಿಸುತ್ತಾರಾದರೂ ಎಲ್ಲಾ ಪ್ರತಿಭಟನೆಯ ಧ್ವನಿಗಳು ಕಾಣಿಸುವುದಿಲ್ಲ.

ಹಿಂದುಳಿದ ಜನಾಂಗವೊಂದರಿಂದ ಬಂದ ಡಾ. ಕಮಲಾ ಹಂಪನಾ 'ನಕ್ಕಿತು ಹಾಲಿನ ಬಟ್ಟಲು', 'ರೆಕ್ಕೆ ಮುರಿದಿತ್ತು', ಚಂದನಾ', 'ಬಣವೆ' ಮುಂತಾದ ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ಇವರ ಕಥೆಗಳಲ್ಲಿ ಹೆಣ್ಣಿನ ವೈಚಾರಿಕತೆಗೆ ಹೆಚ್ಚಿನ ಒತ್ತು ಕೊಟ್ಟಿದ್ದಾರೆ. ಜಾತಿ, ವಿವಾಹ, ಅಂತರ್ಜಾತಿ ವಿವಾಹಗಳು ಉಂಟುಮಾಡುವ ಗೊಂದಲಗಳನ್ನು ತನ್ನ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಇವರ ಬರವಣಿಗೆಗಳಲ್ಲಿ ಸ್ತ್ರೀಪರ ಕಾಳಜಿ ಎದ್ದು ಕಾಣುತ್ತದೆ.

ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಬಂದ ಗೀತಾ ನಾಗಭೂಷಣ ಅವರು ಅನಕ್ಷರತೆ, ಮೂಢನಂಬಿಕೆ, ಬಡತನ, ಅಜ್ಞಾನಗಳ ಬಗೆಗೆ ಚಿಂತಿಸಿದ ಬರಹಗಾರ್ತಿಯಾಗಿದ್ದಾರೆ. ದೇವಿಯ ಹೆಸರಿನಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಲೈಂಗಿಕ ಶೋಷಣೆ, ದಬ್ಬಾಳಿಕೆ, ವೇಶ್ಯಾವಾಟಿಕೆಗಳ ಕುರಿತಾಗಿ ತಮ್ಮ ಕಥೆಗಳಲ್ಲಿ ನಿರೂಪಿಸುತ್ತಾರೆ. ಗುಲ್ಬರ್ಗಾ ಪರಿಸರದ ಕೆಳವರ್ಗದ ಜನರ ಆಡುನುಡಿಯ ಸೊಗಡು ಹಾಗೂ ಪ್ರಾದೇಶಿಕ ಸಂಸ್ಕೃತಿಯನ್ನು ತಮ್ಮ ಬರಹಗಳಲ್ಲಿ ಪರಿಣಾಮಕಾರಿಯಾಗಿ ನೀಡಿದ್ದಾರೆ.

ಇದೇ ಸಾಲಿಗೆ ಸೇರುವ ಕಮಲಾ ಹಮ್ಮಿಗೆಯವರು ಮನುಷ್ಯ ಬದುಕಿನ ಘಟನೆಗಳನ್ನಾಗಲೀ ಗಂಡು-ಹೆಣ್ಣಿನ ಸಂಬಂಧವನ್ನಾಗಲೀ ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ಕಾಣುವ ಪ್ರಮುಖ ಲೇಖಕಿಯಾಗಿದ್ದಾರೆ. ಇವರ ಕಥೆಗಳಲ್ಲಿ ಹೆಣ್ಣಿನ ಒಳಮನಸ್ಸನ್ನು ತೆರೆದಿಡುವ ಪ್ರಯತ್ನವಿದೆ. ಮನುಷ್ಯ ಸಂಬಂಧಗಳನ್ನು, ಸ್ವಭಾವಗಳನ್ನು ಕಲಾತ್ಮಕವಾಗಿ ಚಿತ್ರಿಸುವ ಹಮ್ಮಿಗೆಯವರು ಓರ್ವ ಸೂಕ್ಷ್ಮ ಸಂವೇದನಾಶೀಲ ಬರಹಗಾರ್ತಿಯಾಗಿ ಕಾಣಿಸಿಕೊಂಡಿದ್ದಾರೆ.

ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಬಿ.ಟಿ. ಲಲಿತಾ ನಾಯಕ್‌ರವರು ಲಂಬಾಣಿ ಬುಡಕಟ್ಟಿನ ಹಿನ್ನೆಲೆಯಿಂದ ಬಂದವರು. ತಮ್ಮ ಜನಾಂಗದ ಹೆಣ್ಣುಮಕ್ಕಳ ಶೋಷಣೆ, ಸಂಕಷ್ಟಗಳನ್ನು ಬಹಳ ಹತ್ತಿರದಿಂದ ಕಂಡವರು. ಹಾಗೂ ಅನುಭವಿಸಿದವರು. ಹಾಗಾಗಿ ತಮ್ಮ ಬರಹಗಳಲ್ಲಿ ಇದನ್ನು ನೇರವಾಗಿ ಹಾಗೂ ದಿಟ್ಟ ನಿಲುವಿನಿಂದ ಚಿತ್ರಿಸಿದ್ದಾರೆ. ವಿಶಿಷ್ಟ ಶೈಲಿಯ ಬರವಣಿಗೆಯನ್ನು ರೂಢಿಸಿಕೊಂಡಿರುವ ಲಲಿತಾ ನಾಯಕ್‌ರವರಿಗೆ ಸಾಮಾಜಿಕ ಬದ್ಧತೆಯಿದೆ.

ಎಂ. ಎಸ್. ವೇದಾ ದಲಿತ ಸಂವೇದನೆ ಹಾಗೂ ಕಾಳಜಿಗಳನ್ನು ತಮ್ಮ ಕಥೆಗಳಲ್ಲಿ ವ್ಯಕ್ತಪಡಿಸಿರುವ ಉತ್ತಮ ಬರಹಗಾರ್ತಿ. ಮೈಸೂರಿನ ಪ್ರಾದೇಶಿಕ ಶೈಲಿಯಲ್ಲಿ ಕಂಡುಬರುವ ಇವರ ಬರವಣಿಗೆಯಲ್ಲಿ ಒಂದು ರೀತಿಯ ಪ್ರಬುದ್ಧತೆ ಇದೆ. ಗ್ರಾಮೀಣ ಬದುಕಿನ ರೀತಿ - ನೀತಿಗಳನ್ನು ಜಾತಿ ಪದ್ಧತಿಯ ಅಮಾನುಷ ಕ್ರೌರ್ಯವನ್ನು ಇವರ ಕಥೆಗಳು ಬಿಂಬಿಸುತ್ತವೆ.

ವೈಚಾರಿಕ ಪ್ರಜ್ಞೆಯನ್ನು ತನ್ನ ಬರವಣಿಗೆಯಲ್ಲಿ ಮೈಗೂಡಿಸಿಕೊಂಡಿರುವ ಬಾನುಮುಷ್ತಾಕ್ ಮುಸ್ಲಿಂ ಸಮುದಾಯದಿಂದ ಬಂದವರು. ಆ ಸಮುದಾಯದ ಪುರುಷ ಪ್ರಧಾನ ಸಮಾಜ ಧರ್ಮ-ದೇವರುಗಳನ್ನು ಹೇಗೆ ಬಳಸಿಕೊಳ್ಳುತ್ತಿದೆ ಎಂಬುದನ್ನು ವಸ್ತುನಿಷ್ಠವಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಸ್ತ್ರೀ ಶೋಷಣೆಯ ವಿವಿಧ ಮುಖಗಳು ಇವರ ಬರವಣಿಗೆಯಲ್ಲಿ ಕಾಣಸಿಗುತ್ತವೆ.

ಅಡಿಟಿಪ್ಪಣಿ

೧. ಡಾ. ಸಬಿಹಾ: ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣಕತೆಗಳ ಹುಟ್ಟು ಮತ್ತು ಬೆಳವಣಿಗೆ ಪುಟ. ೩೧, ೧೯೯೨

೨. ಜನಾರ್ಧನ ಭಟ್ ಬಿ. : ಸಾಹಿತ್ಯ ಸಮೀಕ್ಷೆ ಪುಟ. ೩೧, ೨೦೦೩.

೩. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪು. ೧೬೭, ೨೦೦೯

೪. ವೈದೇಹಿ: ವಿಜಯ ಕರ್ನಾಟಕ, ಮಾರ್ಚ್ ೧೦, ೨೦೦೩

೫. ಮಿತ್ರಾ ವೆಂಕಟ್ರಾಜ್, ಗಿರಿಜಾ ಶಾಸ್ತ್ರಿ , ತುಳಸೀ ವೇಣುಗೋಪಾಲ್(ಸಂ): ಕತೆ ಹೇಳೇ..! ೨೦೦೪.

೬ ನೇಮಿಚಂದ್ರ : ಮಹಿಳಾ ಅಧ್ಯಯನ ಪು. ೧೪, ೨೦೦೧

ಅಧ್ಯಾಯ - ೪

ಕರಾವಳಿ ಮಹಿಳಾ ಸಾಹಿತ್ಯ

೪.೧. ತುಳು ಲೇಖಕಿಯರು

೪.೨. ಸ್ತ್ರೀ ಸಂಸ್ಕೃತಿ –ಒಂದು ವಿವೇಚನೆ

ಅಧ್ಯಾಯ -೪

ಕರಾವಳಿ ಮಹಿಳಾ ಸಾಹಿತ್ಯ

ಮನುಕುಲದ ಇತಿಹಾಸದಲ್ಲಿ ಕಳೆದ ಕೆಲವು ಶತಮಾನಗಳು ವಿಶಿಷ್ಟ ಕಾಲಘಟ್ಟಗಳಾಗಿವೆ. ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ನೆಲೆಗಳಲ್ಲಿ ಆದ ಬದಲಾವಣೆಗಳು ಈ ವಿಶಿಷ್ಟತೆಗೆ ಕಾರಣಗಳು ಎನ್ನಬಹುದು. ಜಾಗತಿಕ ಮಟ್ಟದಲ್ಲಿ ಏರ್ಪಟ್ಟ ಸಂಬಂಧದ ಪರಿಣಾಮವಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕ್ಷಿಪ್ರ ಗತಿಯಲ್ಲಿ ಸ್ಥಿತ್ಯಂತರ ರೂಪುಗೊಳ್ಳುವುದಕ್ಕೆ ಕಾರಣವಾಯಿತು. ವಸಾಹತುಶಾಹಿ ಪ್ರಭುತ್ವದಿಂದ ಬಿಡುಗಡೆ ಪಡೆದು, ಸ್ವತಂತ್ರವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅನುಭವಿಸುವಂತಾದದ್ದು, ಎಷ್ಟೋ ಶತಮಾನಗಳಿಂದ ಮುಚ್ಚಿಹೋಗಿದ್ದ ಅಕ್ಷರ ಪರಂಪರೆಯ ಬಾಗಿಲು ಜನಸಾಮಾನ್ಯರಿಗೆ ತೆರೆದದ್ದು, ಅಲಕ್ಷ್ಯಕ್ಕೆ ಒಳಗಾದ ಹೆಣ್ಣು ಜೀವ ಸ್ವಾವಲಂಬನೆಯ ಬದುಕನ್ನು ಕಾಣುವಂತಾದುದು, ಬೇರೆ ಬೇರೆ ಶೋಷಣೆಗಳಿಂದ ಮುಕ್ತರಾಗಿ ದಲಿತರು ಸ್ವತಂತ್ರ ಬದುಕನ್ನು ಹೊಂದಲು ಸಾಧ್ಯವಾದದ್ದು – ಇವೆಲ್ಲವೂ ಭಾರತೀಯರಾದ ನಾವು ಅಭಿಮಾನ ಪಟ್ಟುಕೊಳ್ಳಬೇಕಾದ ಸಂಗತಿಗಳು.

ಕನ್ನಡ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ನಮ್ಮ ಲೇಖಕರು ಸಾಂಸ್ಕೃತಿಕ ಸಂಘರ್ಷಗಳಿಗೆ ತಮ್ಮನ್ನು ಮುಖಾಮುಖಿಯಾಗಿಸಿಕೊಂಡದ್ದು ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ಪ್ರಭಾವಗಳಿಗೆ ಒಳಗಾಗಿಯೂ ತಮ್ಮತನವನ್ನು ಉಳಿಸಿಕೊಳ್ಳುವುದಕ್ಕಾಗಿ ನಡೆಸಿದ ಹೋರಾಟ ಗಮನಾರ್ಹವಾದುದು. ಕರಾವಳಿಯ ಆರಂಭದ ಕಥೆಗಳನ್ನು ಈ ಹಿನ್ನೆಲೆಯಲ್ಲಿಯೂ ನೋಡುವುದಕ್ಕೆ ಸಾಧ್ಯವಾಗುತ್ತದೆ. ವಸಾಹತುಶಾಹಿಯ ಕರಿನೆರಳಿನಿಂದ ಬಿಡುಗಡೆ ಪಡೆಯುವುದಕ್ಕಾಗಿ ಜಾಗತಿಕ ಮಟ್ಟದಲ್ಲಿ ನಡೆದ ವಿಮೋಚನಾ ಚಳುವಳಿಗಳು ನಮ್ಮ ಜನರ ಬದುಕಿನ ರೀತಿಯನ್ನೇ ಬದಲಾಯಿಸಿದವು. ಈ ಸಾಂಸ್ಕೃತಿಕ ಸನ್ನಿವೇಶವು ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಸ್ವತಂತ್ರ ಧ್ವನಿಯನ್ನು ನೀಡಿದವು. ಕರಾವಳಿಯ ಕಥೆಗಳು ಈ ಮೇಲಿನ ಮಾತುಗಳಿಗೆ ಸಾಕ್ಷಿಯೊದಗಿಸುತ್ತವೆ. ಪಾಶ್ಚಾತ್ಯ ಪ್ರಭಾವದಿಂದುಂಟಾದ ಸಾಮಾಜಿಕ, ಧಾರ್ಮಿಕ ಪಲ್ಲಟಗಳಿಗೆ ಇಪ್ಪತ್ತನೆಯ ಶತಮಾನದ ಆರಂಭದ ಕಥೆಗಳಲ್ಲಿ ಪ್ರತಿಕ್ರಿಯೆ ದೊರಕುತ್ತದೆ. ಹಾಗಾಗಿ ಸಾಂಸ್ಕೃತಿಕ ಸಂಘರ್ಷವೊಂದಕ್ಕೆ ಸಮಕಾಲೀನ ಸೃಜನಶೀಲ ಮನಸ್ಸು ಪ್ರತಿಕ್ರಿಯಿಸಿದ ಬಗೆಯನ್ನು ಈ ಕಥೆಗಳು ಬಿಚ್ಚಿಡುವುದರಿಂದ ಇಲ್ಲಿನ ಕಥೆಗಳು ಒಂದು ಕಾಲದ ಸಾಂಸ್ಕೃತಿಕ ಪಠ್ಯಗಳಾಗಿ ಸಹಕರಿಸಬಲ್ಲವು.

ನೆಲ್ಲಿಕಾರು ರಾಧಾಬಾಯಿ, ಸರಸ್ವತಿಬಾಯಿ ರಾಜವಾಡೆ, ವಾಸಂತಿಬಾಯಿ ಪಡುಕೋಣೆ ಮುಂತಾದವರಿಂದ ಕರಾವಳಿಯ ಮಹಿಳಾ ಸಾಹಿತ್ಯ ಆರಂಭವಾಗುತ್ತದೆ. ಇವರೆಲ್ಲರೂ ಕಳೆದ ಶತಮಾನದ ೨ನೆಯ ದಶಕದಲ್ಲಿ ಸಾಹಿತ್ಯ ರಚನೆಗೆ ತೊಡಗಿದವರು. ಭಾರತೀಬಾಯಿ ಪಣೆಯಾಡಿ, ಕೃಷ್ಣವೇಣಿ ಮಟ್ಪಾಡಿ, ಲಲಿತಾ ಬಿ., ಕೆ. ಸುಶೀಲಾ, ವಾರಿಜಾ ಬಾಯಿ ಕೆ., ವತ್ಸಲಾ ತಾಳಿತ್ತಾಯ, ಸಾ. ಫಾತಿಮಾ ಎಂಬುವವರು ನಲವತ್ತರ ದಶಕದಲ್ಲಿ ಸಾಹಿತ್ಯ ರಚನೆಗೆ ತೊಡಗಿದವರು. ನಂತರದ ಅವಧಿಯಲ್ಲಿ ಕಾಣಿಸಿಕೊಳ್ಳುವ ಹೆಚ್ಚಿನ ಲೇಖಕಿಯರು ಕಥನ ಸಾಹಿತ್ಯವನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಆಯ್ದುಕೊಂಡವರು.

ಕಳೆದ ಶತಮಾನದ ಐವತ್ತರ ಹಾಗೂ ನಂತರದ ದಶಕಗಳಲ್ಲಿ ಬರೆಯತೊಡಗಿದ್ದ ಲೇಖಕಿಯರ ಮಾತೃಭಾಷೆ ಕನ್ನಡ ಆಗಿರಲಿಲ್ಲ. ಆದರೂ ತಮ್ಮ – ತಮ್ಮ ಮಾತೃಭಾಷೆಯ ಸಾಹಿತ್ಯದ ಓದನ್ನು ಕನ್ನಡದಲ್ಲಿಯೆ ಉಣಬಡಿಸುವುದಕ್ಕೆ ಮುಂದಾದರು. ತಮ್ಮ ಸಣ್ಣವಯಸ್ಸಿನಲ್ಲಿಯೇ ಗೃಹಸ್ಥಾಶ್ರಮಕ್ಕೆ ಪ್ರವೇಶಿಸಿದ ಲೇಖಕಿಯರಿಗೆ ಅಡುಗೆ ಮನೆಯೇ ಶಾಲೆಯಾಯಿತು. ಗಂಡನ ಮನೆಯಲ್ಲಿ ಪ್ರೋತ್ಸಾಹ, ಬೆಂಬಲಗಳನ್ನು ಪಡೆದವರು ವಿದ್ಯಾಭ್ಯಾಸ ಮುಂದುವರಿಸಿದರು. ಕೌಟುಂಬಿಕ ಜವಾಬ್ದಾರಿಯ ಜೊತೆ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೆ ಕಾಲಿರಿಸಿದರು. ಈ ಕಾರಣಗಳಿಂದಾಗಿ ಅನೇಕ ಲೇಖಕಿಯರ ಸಾಹಿತ್ಯ ಕೃಷಿ ಗಂಭೀರವಾಗಿ, ಸರಾಗವಾಗಿ ಸಾಗದೆ ಕುಂಟುತ್ತಾ ನಡುಮಾರ್ಗದಲ್ಲೇ ನಿಲ್ಲಬೇಕಾಯಿತು. ತಮಗೆ ಅನಿವಾರ್ಯವಾಗಿ ಬಂದ ಪರ್ಯಟನೆಯ ಬದುಕು ಕೆಲವರ ಪಾಲಿಗೆ ವರವಾದರೆ, ಇನ್ನು ಕೆಲವರ ಪಾಲಿಗೆ ಶಾಪವಾಗಿ ಪರಿಣಮಿಸಿತು. ಈ ಭಾಗದ ಉಳಿದ ಲೇಖಕಿಯರಿಗೆ ಒಳಗಿನ ಸಂಪರ್ಕ ಕಡಿಮೆಯಾಗಿ ಒಬ್ಬೊಬ್ಬರೂ ಒಂದೊಂದು ದ್ವೀಪವಾಗಿ ಬರೆಯುವಂತಾಯಿತು. ಹಾಗಾಗಿ ಗಂಭೀರ ಸಾಹಿತ್ಯ ರಚನೆಯನ್ನು ಕೈಗೊಂಡವರ ಸಂಖ್ಯೆ ಕಡಿಮೆ ಎನ್ನಬಹುದು. ಎಷ್ಟೋ ಭರವಸೆಯ ಲೇಖಕಿಯರು ಅಕಾಲ ಮೃತ್ಯುವಿಗೆ ಒಳಗಾದರು. (ಭಾರತೀಬಾಯಿ ಪಣೆಯಾಡಿ, ಕೃಷ್ಣವೇಣಿಬಾಯಿ) ಆ ಕಾಲದ ಮುಖ್ಯ ಸಮಸ್ಯೆಗಳಲ್ಲೊಂದಾದ ಸ್ತ್ರೀ ಸಮಸ್ಯೆಯೇ ಲೇಖಕಿಯರ ಕಥೆಗಳಿಗೆ ವಸ್ತುವಾದುವು. ಬಾಲ್ಯವಿವಾಹ, ವರದಕ್ಷಿಣೆ, ವಿಧವೆಯ ಬದುಕು, ವಿಷಮ ವಿವಾಹ ಮುಂತಾದ ಸಮಸ್ಯೆಗಳ ನಿವಾರಣೆಯೇ ಅಂದಿನ ಲೇಖಕಿಯರ ಪ್ರಮುಖ ಕಾಳಜಿಗಳಾಗಿದ್ದವು. ಆದರೆ ಈ ಎಲ್ಲಾ ಸಮಸ್ಯೆಗಳ ನಿವಾರಣೆಗೆ ಲೇಖಕಿಯರು ಸೂಚಿಸುತ್ತಿದ್ದ ಪರಿಹಾರಗಳು ಆ ಕಾಲದ ಪುರುಷರ ಚಿಂತನಾಕ್ರಮಗಳಿಗಿಂತ ತೀರಾ ಭಿನ್ನವಾದುದೇನೂ ಆಗಿರಲಿಲ್ಲ.

ಕರಾವಳಿಯ ಮಹಿಳಾ ಸಾಹಿತ್ಯದ ಹರಿಕಾರರೆಂದು ಕರೆಯಿಸಿಕೊಳ್ಳುವ ಸರಸ್ವತಿಬಾಯಿ ರಾಜವಾಡೆ ಮತ್ತು ವಾಸಂತಿಬಾಯಿ ಪಡುಕೋಣೆಯವರು ಹೆಚ್ಚು ಕಡಿಮೆ ಒಂದೇ ಅವಧಿಯಲ್ಲಿ ಬರವಣಿಗೆಯನ್ನು ಆರಂಭಿಸಿದವರು.

ತಮ್ಮ ಸಮಕಾಲೀನರಿಗಿಂತ ಭಿನ್ನವಾದ ಹಾಗೂ ವೈವಿಧ್ಯಮಯವಾದ ಸಾಹಿತ್ಯವನ್ನು ನೀಡಿದವರು. 'ಆಹುತಿ ಇತ್ಯಾದಿ ಕಥೆಗಳು', 'ಕದಂಬ' ಹಾಗೂ 'ಪ್ರೇಮ ವಿವಾಹ' ರಾಜವಾಡೆಯವರ ಕಥಾ ಸಂಕಲನಗಳು. ಇವರ ಕಥೆಗಳಲ್ಲಿ ನಾಯಕಿ ಪ್ರಧಾನ ಪಾತ್ರಗಳನ್ನು ಕಾಣಬಹುದು. ಸ್ತ್ರೀಪರ ದೃಷ್ಟಿಕೋನ, ಸಾಮಾಜಿಕ ಅನಿಷ್ಟ ಪದ್ಧತಿಗಳ ಕುರಿತ ವ್ಯಂಗ್ಯ, ಪ್ರತಿಭಟನೆ, ತೀಕ್ಷ್ಣ ವಿಮರ್ಶಾತ್ಮಕ ದೃಷ್ಟಿಕೋನ ಇವರ ಕಥೆಗಳಲ್ಲಿವೆ. ಅಂಕಣಕಾರ್ತಿಯಾಗಿ, ಮಹಿಳಾ ವಿಭಾಗದ ಸಂಪಾದಕಿಯಾಗಿ, ಮಹಿಳೆಯರಿಗಾಗಿಯೇ ಪತ್ರಿಕೆಯೊಂದನ್ನು ಪ್ರಕಟಿಸಿದ ರಾಜವಾಡೆಯವರು ತನ್ನ ಕಾಲದ ಹಾಗೂ ತನ್ನ ಮುಂದಿನ ತಲೆಮಾರಿಗೆ ಆದರ್ಶಪ್ರಾಯರಾಗಿದ್ದಾರೆ.

ಕಥಾ ಪ್ರಕಾರದಲ್ಲಿ ತನ್ನನ್ನು ಮುಖ್ಯವಾಗಿ ಗುರುತಿಸಿಕೊಂಡ ವಾಸಂತಿಬಾಯಿ ಪಡುಕೋಣೆಯವರು ಆಗಿನ ಸಮಾಜದ ಮುಖ್ಯ ಸಮಸ್ಯೆಗಳೆನಿಸಿದ ಬಾಲ್ಯವಿವಾಹ, ವಿಧವಾ ಸಮಸ್ಯೆ, ಮುಂತಾದವುಗಳನ್ನು ತನ್ನ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಹಾಗೇನೇ ವಿವಾಹ ಎಂಬ ಚೌಕಟ್ಟಿನ ಹೊರಗಿನ ಗಂಡು - ಹೆಣ್ಣಿನ ಸಂಬಂಧದ ವೈಪರೀತ್ಯಗಳನ್ನು ತನ್ನ ಕತೆಗಳಲ್ಲಿ ಒಡಮೂಡಿಸುವುದರೊಂದಿಗೆ ಸಂಸಾರದೊಳಗಿನ ಭಾವಶೂನ್ಯ ಸಂಬಂಧಗಳನ್ನೂ ನಿರೂಪಿಸುತ್ತಾರೆ. ಅನುವಾದಕಿಯಾಗಿ, ಮಹಿಳಾ ಆತ್ಮಚರಿತ್ರೆಯ ಪರಂಪರೆಯನ್ನು ಹಾಕಿಕೊಟ್ಟ ವಾಸಂತಿಬಾಯಿ ಪಡುಕೋಣೆಯವರು ಹೋರಾಟದ ಬದುಕನ್ನು ಕಂಡವರು.

ಪಡುಕೋಣೆ ಸೀತಾದೇವಿ, ಬೆಳ್ಳೆ ಸೀತಾರತ್ನಮ್ಮ, ಹಾಗೂ ಲೀಲಾಬಾಯಿ ಕಾಮತ್ ಅನುವಾದ ಸಾಹಿತ್ಯದಲ್ಲಿ ಹೆಸರು ಮಾಡಿದವರು. ಲೀಲಾಬಾಯಿ ಕಾಮತ್‌ರವರು ಹಿಂದಿ, ಮರಾಠಿ ಮತ್ತು ಬಂಗಾಲಿ ಭಾಷೆಗಳ ಕೆಲವು ಉತ್ತಮ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಇವಲ್ಲದೆ 'ಹಾರಿ ಹೋದ ಹಕ್ಕಿ' ಹಾಗೂ 'ನಮ್ಮೂರ ಶಿವಪಾರ್ವತಿ' ಎಂಬ ಸ್ವತಂತ್ರ ಕಥಾ ಸಂಕಲನಗಳನ್ನು ಪ್ರಕಟಿಸಿರುತ್ತಾರೆ.

೧೯೫೦ರ ನಂತರದಲ್ಲಿ ಕಾಣಿಸಿಕೊಳ್ಳುವ ಪದ್ಮಾಶೆಣೈ ಹಾಗೂ ಆನಂದಿ ಸದಾಶಿವರಾವ್ ಇವರಿಗೆ ಮೊದಲ ತಲೆಮಾರಿನ ಲೇಖಕಿಯರಿಗಿದ್ದ ಅಡ್ಡಿ – ಆತಂಕಗಳು ಇರಲಿಲ್ಲ. ಶಿಕ್ಷಣ ಹಾಗೂ ಉದ್ಯೋಗದ ಅವಕಾಶಗಳು ಈ ತಲೆಮಾರಿನ ಲೇಖಕಿಯರಿಗೆ ತೆರೆದುಕೊಂಡವು. ಸಾಮಾಜಿಕ, ಸಾರ್ವಜನಿಕ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಅವಕಾಶಗಳು ಲೇಖಕಿಯರಿಗೆ ದೊರೆತವು. ಬರವಣಿಗೆಯಿಂದ ಬದುಕಿನ ನಿಜವಾದ ತೃಪ್ತಿ, ಸಾರ್ಥಕ್ಯವನ್ನು ಕಂಡುಕೊಂಡ ಆನಂದಿ ಸದಾಶಿವರಾವ್ 'ಅಪರ್ಣಾ', 'ಕಲಾವಿದೆ', 'ಸ್ವಾಭಿಮಾನ', 'ಉಡುಗೊರೆ ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನಗಳನ್ನು ನಾಡಿಗೆ ನೀಡಿದ್ದಾರೆ. ಸಾರ್ವಕಾಲಿಕ ಮೌಲ್ಯಗಳನ್ನು ಸಾರುವ ಸ್ತ್ರೀ ಪ್ರಧಾನವಾದ ಕಥೆಗಳು ಇವರಿಂದ ಮೂಡಿಬಂದಿವೆ. ಸಾಹಿತ್ಯದ ಒಲವಿನಿಂದ ಪ್ರೇರಣೆ ಪಡೆದು ಕತೆಗಳನ್ನು

ಬರೆಯಲು ಆರಂಭಿಸಿದ ಪದ್ಮಾಶೆಣೈ 'ದೂರದ ಆಸೆ', 'ನೂಲಿನಂತೆ ಸೀರೆ', 'ಹರಿದ ಗಾಳಿಪಟ' ಎಂಬ ಕಥಾ ಸಂಕಲನಗಳಲ್ಲಿ ವೈವಿಧ್ಯಮಯ ವಸ್ತುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇವರ ಕಥೆಗಳು ಮನುಷ್ಯ ಸಂಬಂಧಗಳಿಗೆ ಹೆಚ್ಚು ಒತ್ತು ಕೊಡುತ್ತವೆ. ಆದರೆ ಒಂದು ಕಾಲಕ್ಕೆ ಬಹಳ ವೇಗವಾಗಿ ಸಾಗಿದ ಇವರಿಬ್ಬರ ಸಾಹಿತ್ಯ ಪ್ರವಾಹ ಕ್ರಮೇಣ ತನ್ನ ಚಲನಶೀಲತೆಯನ್ನು ಕಳೆದುಕೊಂಡಿತು ಎಂದೆನಿಸುತ್ತದೆ.

ಎಪ್ಪತ್ತರ ದಶಕದ ಕರಾವಳಿಯ ಮಹಿಳಾ ಸಾಹಿತ್ಯ ವಿಶೇಷವಾಗಿ ಕಥನ ಸಾಹಿತ್ಯದ ಕಡೆಗೆ ದೃಷ್ಟಿ ಬೀರಿತ್ತು. ಸಾಹಿತ್ಯದ ಚಳುವಳಿಗಳಾಗಲೀ ಚರ್ಚೆಗಳಾಗಲೀ, ಮಹಿಳಾ ಸಾಹಿತ್ಯದ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ತಮಗೆ ಸಿಗುತ್ತಿದ್ದ ಅವಕಾಶವನ್ನು ಧನ್ಯತಾ ಭಾವದಿಂದ ಸ್ವೀಕರಿಸಿದ ಲೇಖಕಿಯರು ಹೆಣ್ಣುಮಕ್ಕಳ ಸಮಸ್ಯೆಗಳ ಕುರಿತಂತೆ ಪ್ರಗತಿಪರರಾಗಿ ಚಿಂತಿಸುವ ಕಡೆಗೆ ಅಥವಾ ಪರಿಹಾರದ ಮಾರ್ಗಗಳ ಕಡೆಗೆ ಗಮನಹರಿಸದೆ ಸಾಂಪ್ರದಾಯಿಕ ನಿಲುವನ್ನೇ ತಾಳಿದರು. ಪ್ರೇಮಾಭಟ್‌ರವರನ್ನು ಈ ನೆಲೆಯಲ್ಲಿ ಗುರುತಿಸಬಹುದು.

ಎಪ್ಪತ್ತರ ದಶಕದ ಕೊನೆಯ ಭಾಗದಿಂದ ಕರಾವಳಿ ಮಹಿಳಾ ಸಾಹಿತ್ಯವು ವಿಭಿನ್ನವಾದ ಆಯಾಮವನ್ನು ಪಡೆಯಿತು ಎನ್ನಬಹುದು. ಈ ಕಾಲಾವಧಿಯಲ್ಲಿ ಅನೇಕ ಸ್ತರದ ಲೇಖಕಿಯರು ಕಾಣಿಸಿಕೊಂಡರು. ಬಂಡಾಯ – ದಲಿತ ಚಳುವಳಿಯ ಪ್ರಭಾವ ಇಲ್ಲಿನ ಲೇಖಕಿಯರ ಮೇಲಾಯಿತು. ಸುಮಾರು ಎರಡು ದಶಕಗಳ ಅವದಿಯಲ್ಲಿ ಅನೇಕ ಲೇಖಕಿಯರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಮಾತ್ರವಲ್ಲ, ಪ್ರಬುದ್ಧ ಲೇಖಕಿಯರಾಗಿ ಗುರುತಿಸಿಕೊಳ್ಳಲು ಸಾಧ್ಯವಾಯಿತು. ಇತ್ತೀಚಿನ ದಿನಗಳಲ್ಲಿ ಲೇಖಕಿಯರು ಸಂಘಟನಾತ್ಮಕವಾಗಿ ಹಾಗೂ ವೈಚಾರಿಕವಾಗಿ ಬೆಳೆಯುತ್ತಿದ್ದಾರೆ ಎಂಬುದು ಈ ಅವಧಿಯಲ್ಲಿ ಹುಟ್ಟಿಕೊಂಡ ಸಾಹಿತ್ಯ ಕೃತಿಗಳಿಂದ ಮನವರಿಕೆಯಾಗುತ್ತದೆ. ಈ ನಲವತ್ತು ವರ್ಷಗಳ ಸಾಹಿತ್ಯದಲ್ಲಿ ಲೇಖಕಿಯರ ಕೊಡುಗೆ ಅವಿಸ್ಮರಣೀಯ ಎನ್ನಬಹುದು. ಕಥೆ, ಕಾದಂಬರಿ, ಕಾವ್ಯ, ನಾಟಕ, ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕರಾವಳಿಯ ಲೇಖಕಿಯರು ಗುರುತಿಸಿಕೊಂಡರೂ, ಕಥಾ ಸಾಹಿತ್ಯಕ್ಕಷ್ಟೇ ಈ ಅಧ್ಯಯನ ಸೀಮಿತವಾಗಿರುವುದರಿಂದ ಅವುಗಳ ಕಡೆಗಷ್ಟೇ ಬೆಳಕು ಬೀರುವ ಪ್ರಯತ್ನವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ 'ಕನ್ನಡದ ಪರ್ಲ್‌ಬಕ್' ಎಂದು ಕರೆಸಿಕೊಂಡಿದ್ದ ಲಲಿತಾ ಆರ್. ರೈ ಅವಿಭಜಿತ ದ.ಕ. ಜಿಲಯ ಮೊದಲ ತಲೆಮಾರಿನ ಲೇಖಕಿಯರ ಸಾಲಿಗೆ ಸೇರುತ್ತಾರೆ. ಬಾಲ್ಯದಲ್ಲಿಯೇ ಬಹಳಷ್ಟು ಕಥೆ, ಲೇಖನಗಳನ್ನು ಬರೆದ ಇವರು 'ಮತ್ತೆ ಬೆಳಗಿತು ಸೊಡರು', 'ಇಂಟರ್ನೆಟ್ಟಿನ ಒಳಗೆ ಮತ್ತು ಇತರ ಕಥೆಗಳು' ಎಂಬ

ಸಂಕಲನಗಳನ್ನು ಪ್ರಕಟಿಸಿರುತ್ತಾರೆ. ಸ್ವಾತಂತ್ರ್ಯಪೂರ್ವದ ಹೆಣ್ಣು – ಗಂಡುಗಳ ನಡುವಿನ ಪ್ರೇಮವನ್ನು, ಮನುಷ್ಯನ ಮನಸ್ಸಿನ ಬೇರೆ ಬೇರೆ ಮುಖಗಳನ್ನು ಇವರ ಕಥೆಗಳು ಅನಾವರಣಗೊಳಿಸುತ್ತವೆ.

ತನ್ನ ಸಾಹಿತ್ಯಾಸಕ್ತಿಗೆ ಪೂರಕವಾದ ವಾತಾವರಣ ಸಿಗದೆ ಇದ್ದ ಸಂದರ್ಭದಲ್ಲೂ ಸಾಹಿತ್ಯ ರಚನೆಯನ್ನೇ ತನ್ನ ಕಾಯಕವನ್ನಾಗಿ ಮಾಡಿಕೊಂಡ ಲಕ್ಷ್ಮಿ ಕುಂಜತ್ತೂರು ಮೂರನೆಯ ತರಗತಿಯಲ್ಲಿರುವಾಗಲೇ ಬರವಣಿಗೆಯನ್ನು ಆರಂಭಿಸಿದವರು. 'ಚಾಕ್ಲೆಟ್ ಮಿಠಾಯಿ' ಎಂಬ ಕಥಾಸಂಕಲನದಲ್ಲಿ ಇವರು ಹಿರಿಯರು, ಕಿರಿಯರನ್ನು ಅವರ ಎಳವೆಯಲ್ಲಿಯೇ ಹೇಗೆ ತಿದ್ದಬೇಕೆನ್ನುವುದನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ತನ್ನದೇ ಆದ ನಿಲುವುಗಳಿಗೆ, ವಿಚಾರಧಾರೆಗಳಿಗೆ ಬದ್ಧರಾಗಿ ಬದುಕುತ್ತಿರುವ ಮನೋರಮಾ ಎಂ. ಭಟ್‌ರವರ ಬರವಣಿಗೆಗಳಲ್ಲಿ ದಟ್ಟವಾದ ಜೀವನಾನುಭವವಿದೆ. ಸಮಾಜದ ಪರಂಪರಾಗತ ಕಟ್ಟುಪಾಡುಗಳ ಕುರಿತಾದ ಅಸಹನೆ ಇದೆ. 'ಸ್ವಯಂವರ', 'ಶಬ್ದಗಳಾಗದ ಧ್ವನಿಗಳು' ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿರುತ್ತಾರೆ. ತಮ್ಮ ಕತೆಗಳಲ್ಲಿ ಶೋಷಿತ ವರ್ಗದ, ಧ್ವನಿಯಾಗಿ ಕಾಣಿಸಿಕೊಳ್ಳುತ್ತಾರೆ. ಸಾಂಪ್ರದಾಯಿಕ, ಸಾಮಾಜಿಕ ದೌರ್ಜನ್ಯಗಳಿಗೆ ಬಲಿಯಾಗುವವರಿಗೆ ನೀಡುವ ಎಚ್ಚರಿಕೆಯ ಮಾತುಗಳೂ ಇದರಲ್ಲಿವೆ.

ತನ್ನಲ್ಲಿರುವ ಪುಸ್ತಕ ಪ್ರೀತಿಯನ್ನು, ಸಾಹಿತ್ಯಾಸಕ್ತಿಯನ್ನು ಇತರರಲ್ಲೂ ಬೆಳೆಸುವ ಮಾತೃಹೃದಯದ ಇಂದಿರಾ ಹಾಲಂಬಿಯವರು ಸಾಹಿತ್ಯ ಪ್ರಕಾಶನವೊಂದನ್ನು ನಡೆಸಿದ ದ.ಕ.ದ ಮೊದಲ ಮಹಿಳೆಯಾಗಿದ್ದಾರೆ. ಸ್ತ್ರೀ ಶೋಷಣೆ, ಹೆಣ್ಣು–ಗಂಡುಗಳ ನಡುವಿನ ತಾರತಮ್ಯ, ಮೂಢನಂಬಿಕೆ, ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ನೀತಿಬೋಧೆ ಇವರ ಕಥೆಗಳ ವಸ್ತುಗಳಾಗಿವೆ. 'ಕಥಾವೃಂದ', 'ಜೀವದ ಅಲೆಗಳ ಮೇಲೆ', 'ಮಾರ್ದನಿಗಳು', 'ವಜ್ರ ಪರಿಸರ', 'ಜನಪದ ಹನಿರುಚಿ' ಇವರ ಕಥಾಸಂಕಲನಗಳು.

'ಸಹನಾ' ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಯಶೋದ ಜೆನ್ನಿಯವರದು ಸಮಾಜವನ್ನು ತಿದ್ದುವ ಶಿಕ್ಷಕಿಯ ಸುಧಾರಣಾವಾದಿ ಮನಸ್ಸು. 'ಕಥಾಸ್ಮೃತಿ', 'ಬಾಳಿನ ಬೆಳೆ' ಎಂಬ ಕತಾಸಂಕಲನಗಳಲ್ಲಿ ಸಮಾಜದ ಸಿದ್ಧ ಮಾದರಿಗಳ ಬಗೆಗೆ ಕ್ರೋಧ ವ್ಯಕ್ತವಾಗುತ್ತದೆ. ಶೋಷಿತರ, ದುಃಖಿತರ, ಅಸಹಾಯಕರ, ಮುಗ್ಧರ ಪರವಾದ ಧ್ವನಿಯಾಗಿ ತನ್ನ ಬರವಣಿಗೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹಚ್ಚ ಹಸುರು ಪರಿಸರದಲ್ಲಿ ಜನಿಸಿದ ಯಶವಂತಿ ಸುವರ್ಣರು ಸಾಹಿತ್ಯದ ಮೂಲಕ ಸಮಾಜವನ್ನು ಹಸಿರಾಗಿಸಿದವರು. 'ಆ ಹೆಣ್ಣು ನಾಯಿಯ ಆತ್ಮಕಥೆ', ಹಾಗೂ 'ದಾರಿ' ಎಂಬ

ಕಥಾಸಂಕಲನಗಳಲ್ಲಿ 'ಹೆಣ್ಣಿನ ಅಸಹಾಯಕ ಸ್ಥಿತಿಯನ್ನು, ಹೆಣ್ಣು – ಗಂಡಿನ ಪ್ರೀತಿ - ಪ್ರಣಯಗಳನ್ನು ಚಿತ್ರಿಸಿದ್ದಾರೆ. ಭಾರತೀಯ ಸಂಸ್ಕೃತಿಯ ಕಡೆಗೆ ಇವರ ಕಥೆಗಳು ಮುಖಮಾಡುತ್ತವೆ.

ಮಹಿಳಾಪರ ಚಿಂತನೆಗಳ ಮೂಲಕ ತನ್ನನ್ನು ಗುರುತಿಸಿಕೊಂಡ ಬಿ.ಎಂ. ರೋಹಿಣಿಯವರ ಬರವಣಿಗೆಗಳ ಹಿಂದೆ ಆಳವಾದ ಅಧ್ಯಯನ ಹಾಗೂ ದಟ್ಟವಾದ ಜೀವನಾನುಭವವಿದೆ. 'ಕರ್ತವ್ಯ' ಎಂಬ ಕಥಾಸಂಕಲನದ ಕಥೆಗಳಲ್ಲಿ ಸಾಮಾಜಿಕ ತಲ್ಲಣವಿದೆ. ರೋಹಿಣಯವರು ಹೆಣ್ಣಿನ ಬದುಕಿನ ವಿವಿಧ ಮುಖಗಳನ್ನು ಅರ್ಥಮಾಡಿಕೊಂಡವರು.

ಭಾಷೆಯ ಬಳಕೆ, ವಸ್ತುವಿನ ಆಯ್ಕೆ ಹಾಗೂ ನಿರೂಪಣೆಯ ತಂತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ ಲೇಖಕಿ ಎ.ಪಿ. ಮಾಲತಿಯವರು. ಕರಾವಳಿಯ ಜನಪ್ರಿಯ ಕಥೆಗಾರ್ತಿಯರಲ್ಲಿ ಒಬ್ಬರಾಗಿರುವ ಇವರು ಕಾದಂಬರಿಯನ್ನು ತನ್ನ ಪ್ರಮುಖ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡರೂ ಸಣ್ಣಕಥಾ ಪ್ರಕಾರದಲ್ಲಿಯೂ ಯಶಸ್ವಿಯಾಗಿದ್ದಾರೆ. 'ವಸಂತದ ಹೂವುಗಳು' ಹಾಗೂ 'ಸಂಜೆ ಬಿಸಿಲು' ಎಂಬ ಎರಡು ಕಥಾಸಂಕಲನಗಳನ್ನು ನಾಡಿಗೆ ನೀಡಿರುವ ಇವರು ಕೌಟುಂಬಿಕ ಬದುಕು, ಅದರಲ್ಲಿನ ಸಂಬಂಧಗಳು, ಸಾಮರಸ್ಯ, ಹೊಂದಾಣಿಕೆಯ ನೆಲೆಗಳನ್ನು ಕಾಣಬೇಕು ಎಂಬ ತುಡಿತವನ್ನು ತಮ್ಮ ಕಥೆಗಳಲ್ಲಿ ನಿರೂಪಿಸುತ್ತಾರೆ. ಸಂಬಂಧಗಳನ್ನು ಮಾರಿ ಬೆಳೆಯಬೇಕಾದ ಮಾನವ ಪ್ರೀತಿಯ ಕುರಿತಾಗಿ ಚಿಂತಿಸುತ್ತಾರೆ. ಕುಟುಂಬ ಜೀವನ ಹೆಣ್ಣು ಮಕ್ಕಳ ಬದುಕನ್ನು ಪಕ್ವವಾಗಿಸುವ ಪರಿಯನ್ನು ಇವರ ಬರವಣಿಗೆಯಲ್ಲಿ ಕಾಣಬಹುದು.

'ಸೂಕ್ಷ್ಮ ಸಂವೇದನೆಯ ಪ್ರಬಲ ವೈಚಾರಿಕ ಲೇಖಕಿ' ಎಂದು ವಿಮರ್ಶಕರ ಹೆಗ್ಗಳಿಕೆಗೆ ಪಾತ್ರವಾಗಿರುವ ಕೆ. ಶಾರದಾಭಟ್‌ರವರ 'ಸಾಹೇಬರು ಬರುತ್ತಾರೆ ಮತ್ತು ಇತರ ಕಥೆಗಳು' ಹಾಗೂ 'ಸಾತತ್ತೆಗೊಂದು ಸನ್ಮಾನ ಮತ್ತು ಇತರ ಕಥೆಗಳು' ಎಂಬ ಕಥಾಸಂಕಲನಗಳಲ್ಲಿ ತಿಳಿ ಹಾಸ್ಯದಿಂದ ಕೂಡಿದ, ಮನುಷ್ಯನ ಆಧುನಿಕ ಬದುಕಿನ ಟೊಳ್ಳುತನಗಳ ಪರಿಚಯವಿದೆ. ಮನುಷ್ಯ ಬದುಕಿನ ಕುಂದು – ಕೊರತೆಗಳನ್ನು, ಅವನ ಬದುಕಿನ ಸಾಮಾಜಿಕ - ಸಾಂಸ್ಕೃತಿಕ ಆಯಾಮವನ್ನು ಶೋಧಿಸುವ ಆಶಯ ಇವರ ಕಥೆಗಳದ್ದಾಗಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸಿರುವ ಸರೋಜಾ ಆರ್. ಆಚಾರ್ಯರು 'ವ್ಯವಸ್ಥೆ', 'ಅಲ್ಲಿದೆ ನಮ್ಮನೆ' ಕಥಾಸಂಕಲನಗಳನ್ನು ಪ್ರಕಟಿಸಿರುತ್ತಾರೆ. ಕೌಟುಂಬಿಕ ಬದುಕು, ಮನುಷ್ಯ ಸಂಬಂಧದ ಸೂಕ್ಷ್ಮ ಎಳೆಗಳನ್ನು

ಇವರ ಕಥೆಗಳು ಚಿತ್ರಿಸುತ್ತವೆ. ಗ್ರಾಮೀಣ ಹಾಗೂ ನಗರದ ಹೆಣ್ಣು ಮಕ್ಕಳ ಬದುಕಿನ ವಿವಿಧ ಮುಖಗಳನ್ನು, ಅವರ ದ್ವಂದ್ವಗಳನ್ನು ವಿವರಿಸುತ್ತಾರೆ.

"ಸಾ. ಫಾತಿಮಾ ಅವರ ಕಥೆ ನಲವತ್ತರ ದಶಕದಲ್ಲಿ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಅದರ ಬಗ್ಗೆ ಹೆಚ್ಚಿನ ಮಾಹಿತಿಯೇನೂ ದೊರಕಿಲ್ಲವಾದ್ದರಿಂದ ಹಾಗೂ ಅವರ ಇತರ ಬರಹಗಳು ಉಪಲಬ್ಧವಾಗಿಲ್ಲವಾದ್ದರಿಂದ ಮುಮ್ತಾಜ್ ಬೇಗಂ ಅವರೆ, ಕರಾವಳಿಯ ಮೊದಲ ಮುಸ್ಲಿಂ ಬರಹಗಾರ್ತಿ ಎನಿಸಿಕೊಳ್ಳುತ್ತಾರೆ"[1] ಇವರು ಮುನ್ನೂರಕ್ಕೂ ಹೆಚ್ಚು ಕಥೆಗಳನ್ನು ಬರೆದಿದ್ದಾರೆ. 'ಅಧ್ಯಕ್ಷ' ಇವರ ಮೊದಲ ಕಥಾಸಂಕಲನ. ೧೯೬೫ರಿಂದ ೨೦೦೦ದವರೆಗೆ ಉದ್ಯೋಗಕ್ಕಾಗಿ ದುಬೈಗೆ ತೆರಳಿದ ಇವರು ತನ್ನ ಕಥೆಗಳ ಹಸ್ತಪ್ರತಿಗಳನ್ನು ಪ್ರಕಟನೆಗಾಗಿ ಪ್ರಕಾಶಕರಿಗೆ ನೀಡಿದ್ದು, ಅವರು ಅದೆಲ್ಲವನ್ನೂ ಕಳೆದುಹಾಕಿ ಕ್ಷಮೆಯಾಚಿಸಿ ಕೈತೊಳೆದುಕೊಂಡರು. ಇದರಿಂದ ಇವರ ಬರವಣಿಗೆಯ ಶಕ್ತಿಯೇ ಕುಂಠಿತವಾಯಿತು. ಇದು ಕನ್ನಡ ಸಾಹಿತ್ಯಕ್ಕಾದ ದೊಡ್ಡ ನಷ್ಟವೆನ್ನಬಹುದು.

ಕಥೆ-ಕವನಗಳ ಮೂಲಕ ಸುಲಲಿತ ಬರವಣಿಗೆಯನ್ನು ರೂಢಿಸಿಕೊಂಡ ಸುಶೀಲಾ ಆರ್. ರಾವ್ ಓರ್ವ ಚಿಂತನಾಶೀಲ ಬರಹಗಾರ್ತಿಯೆನಿಸಿಕೊಂಡಿದ್ದಾರೆ. 'ಮುಸ್ಸಂಜೆಯಲ್ಲೊಂದು ಗ್ರಹಣ' ಕಥಾಸಂಕಲನದಲ್ಲಿ ಮಾನವ ಮನಸ್ಸಿನ ತಳಮಳ, ಕುಂದು-ಕೊರತೆಗಳನ್ನು ಪದರ- ಪದರವಾಗಿ ಬಿಚ್ಚಿಡುತ್ತಾರೆ. ತನ್ನ ಸುತ್ತಲಿನ ಘಟನೆ, ಮಾನವೀಯ ಸಂಬಂಧ, ಕೌಟುಂಬಿಕ ಸಮಸ್ಯೆಗಳ ಚಿತ್ರಣ ಇವರ ಕಥೆಗಳಲ್ಲಿದೆ. ಇವರ ಕಥೆಗಳು ಹೊಸಗನ್ನಡ ಸಾಹಿತ್ಯದ ವಿವಿಧ ಘಟ್ಟಗಳಿಗೆ ಸೇರಿದ ಕಥೆಗಳಾಗಿದ್ದು ಇವರ ಪ್ರಬುದ್ಧತೆಗೆ ಸಾಕ್ಷಿಯಾಗಿದೆ.

ಉಪನ್ಯಾಸಕಿಯಾಗಿ, ಗೌರವಯುತ ಪ್ರಾಂಶುಪಾಲರ ಹುದ್ದೆಯನ್ನು ಅಲಂಕರಿಸಿದ ಚಂದ್ರಕಲಾ ನಂದಾವರ ಅವರದ್ದು ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತ ಹೆಸರು. ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಗುರುತಿಸಿಕೊಂಡ ಇವರು 'ಮುಖಾಮುಖಿ' ಎಂಬ ಕಥಾಸಂಕಲನದ ಮನುಷ್ಯ ಸಂಬಂಧದ ಬೇರೆ ಬೇರೆ ನೆಲೆಗಳನ್ನು, ಹೆಣ್ಣಿನ ಮನಸ್ಸಿನ ಒಳಸೂಕ್ಷ್ಮವನ್ನು ಸುಂದರವಾಗಿ ಬಿಚ್ಚಿಡುತ್ತಾರೆ. ಇವರ ಕಥೆಗಳು ಓದುಗರ ಅಂತರಂಗವನ್ನು ತೇವವಾಗಿಸುತ್ತವೆ.

ಹೈಸ್ಕೂಲ್ ವಿದ್ಯಾರ್ಥಿಯಾಗಿರುವಾಗ ಬರವಣಿಗೆಯನ್ನು ಆರಂಭಿಸಿದ ಸವಿತಾ ಎಸ್. ಭಟ್‌ರವರ 'ಪುಟ್ಟತ್ತೆ' ಎಂಬ ಕಥಾಸಂಕಲನದಲ್ಲಿ ಒಟ್ಟು ಹದಿಮೂರು ಕತೆಗಳಿವೆ. ಇವರ ಕಥೆಗಳ ಕೇಂದ್ರವಸ್ತು ಹೆಣ್ಣು, ಸಹಜ ಸ್ತ್ರೀ ಸಂವೇದನೆಯನ್ನು ಇವರ ಕಥೆಗಳು ಧ್ವನಿಸುತ್ತವೆ. ಹೆಣ್ಣಿನ ಬದುಕಿನ ವಿವಿಧ ಪಾತ್ರ, ಆ ಪಾತ್ರಗಳನ್ನು ಆಕೆ

ನಿಭಾಯಿಸುವ ಪರಿಯನ್ನು ಇವರ ಕಥೆಗಳು ಚಿತ್ರಿಸುತ್ತವೆ. ಎಲ್ಲಾ ಕಥೆಗಳು ಕೊನೆಗೆ ಮನುಷ್ಯತ್ವದ ಕಡೆಗೇ ಮುಖಮಾಡುತ್ತವೆ.

ಬಂಡಾಯ ಚಳುವಳಿಯಲ್ಲಿ ತನ್ನನ್ನು ಗುರುತಿಸಿಕೊಂಡ ಡಾ. ಮಾಧವಿ ಭಂಡಾರಿ ಸಮಾಜಮುಖೀ ಚಿಂತನೆಯ ಕಥೆಗಳನ್ನು ಬರೆದಿದ್ದಾರೆ. ತಲೆಮಾರುಗಳ ಅಂತರ, ಲಿಂಗ ತಾರತಮ್ಯ ಇವರ ಕಥೆಗಳಲ್ಲಿ ಎದ್ದು ಕಾಣುವ ಅಂಶಗಳು. ಕಥೆಗಳ ಕೊನೆಯಲ್ಲಿ ಮಾನವ ಸಂಬಂಧಗಳೇ ಗೆಲುವು ಸಾಧಿಸುತ್ತವೆ.

ಬಹುಭಾಷಾ ಬರಹಗಾರ್ತಿ, ಅನುವಾದಕಿ ಎಂದು ಹೆಸರಾಗಿರುವ ಪಾರ್ವತಿ ಜಿ. ಐತಾಳ್ 'ಅಶ್ಕರ ಕಥೆಗಳು', 'ಯುಗಾಂತರ ಮತ್ತು ಇತರ ಕಥೆಗಳು', 'ಪ್ರಸಿದ್ಧರ ಪ್ರಾತಿನಿಧಿಕ ಕಥೆಗಳು' ಎಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಮಾಜದ ಸಂಸ್ಕೃತಿ, ಆಚಾರ–ವಿಚಾರಗಳನ್ನು ತನ್ನ ಕಥೆಗಳಲ್ಲಿ ಪರಿಚಯಿಸುತ್ತಾರೆ. ಬೇರೆ ಭಾಷೆಯ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿರುತ್ತಾರೆ.

ಇಂದಿನ ಸಂದರ್ಭದಲ್ಲಿ ಬರೆಯುತ್ತಿರುವ ಕನ್ನಡದ ಪ್ರಮುಖ ಲೇಖಕಿಯರಲ್ಲಿ ಡಾ. ಸಬಿಹಾ ಎದ್ದು ಕಾಣುವ ಹೆಸರು. ಕಥೆ, ಕವನ, ವಿಮರ್ಶೆ, ಸಂಪಾದನೆ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಇವರ ಕಥಾಸಂಕಲನ 'ಕಡಲ ತಡಿಯ ಮನೆ'. ಇದರಲ್ಲಿ ಸಾಮಾಜಿಕ ಪಲ್ಲಟಕ್ಕೆ ಒಳಗಾಗಿ ನಲುಗುವ ಹೆಣ್ಣಿನ ಮನಸ್ಸಿನ ಸೂಕ್ಷ್ಮ ಸಂವೇದನೆಗಳನ್ನು ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಇವರ ಕಥೆಗಳು ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಜೀವನವನ್ನು ಬಹುಮುಖಿ ನೆಲೆಯಲ್ಲಿ ಚಿತ್ರಿಸುತ್ತವೆ.

ಕರಾವಳಿಯ ಮಹಿಳಾ ಸಾಹಿತ್ಯದಲ್ಲಿ ಕಥಾ ರಚನೆಯ ಮೂಲಕ ಸೃಜನಶೀಲ ಬರವಣಿಗೆಯನ್ನು ನೀಡಿದ ಮೊದಲ ಮುಸ್ಲಿಂ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಮುಮ್ತಾಜ್ ಬೇಗಂ. ಮುಸ್ಲಿಂ ಸಮುದಾಯದಲ್ಲಿ ಜನಿಸಿ ಮಾತೃಭಾಷೆ ಉರ್ದುವಾಗಿದ್ದರೂ ತನ್ನ ಶಾಲಾ ದಿನಗಳಿಂದಲೇ ಕನ್ನಡದಲ್ಲಿ ಕಥೆಗಳನ್ನು ಬರೆಯುವ ಅಭ್ಯಾಸ ಬೆಳೆಸಿಕೊಂಡರು. ೧೯೬೫ರಲ್ಲಿ ಇವರ ಮೊದಲ ಕಥೆ 'ನವಭಾರತ' ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ೧೯೮೫ರಲ್ಲಿ ಪ್ರಥಮ ಕಥಾಸಂಕಲನ 'ಅಧ್ಯಕ್ಷ' ಪ್ರಕಟವಾಯಿತು. ಮುನ್ನೂರಕ್ಕೂ ಹೆಚ್ಚು ಸಣ್ಣಕತೆಗಳನ್ನು ಬರೆದು ಕರಾವಳಿಯ ಮಾತ್ರವಲ್ಲ, ಕನ್ನಡನಾಡಿನ ಶ್ರೇಷ್ಠ ಬರಹಗಾರರೆನಿಸಿಕೊಂಡಿದ್ದಾರೆ.

ಕರಾವಳಿಯ ಕಥಾಸಾಹಿತ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದ ಸಾರಾ ಅಬೂಬಕ್ಕರ್ 'ಚಪ್ಪಲಿಗಳು', 'ಪಯಣ ಮತ್ತು ಇತರ ಕಥೆಗಳು', 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು', 'ಖೆಡ್ಡಾ', ಸುಮಯ್ಯಾ (ಜನಪದ ಕಥೆಗಳು),

'ಗಗನಸಖಿ' ಎಂಬ ಆರು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಥಾ ಪ್ರಕಾರವನ್ನೇ ತನ್ನ ಪ್ರಧಾನ ಮಾಧ್ಯಮವನ್ನಾಗಿ ಮಾಡಿಕೊಂಡ ಸಾರಾ ಹೆಣ್ಣು ಮನಸ್ಸಿನ ಭಾವನೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

'ವೈದೇಹಿ' ಕಾವ್ಯನಾಮದಿಂದ ಪ್ರಸಿದ್ಧವಾಗಿರುವ ಜಾನಕಿ ಶ್ರೀನಿವಾಸಮೂರ್ತಿಯವರು ಕರಾವಳಿಯ ಓರ್ವ ವಿಶಿಷ್ಟ ಬರಹಗಾರ್ತಿ ಎನಿಸಿಕೊಂಡಿದ್ದಾರೆ. ಸಣ್ಣ ಕಥೆಗಳ ಮೂಲಕವೇ ಚಿರಪರಿಚಿತರಾದ ವೈದೇಹಿಯವರು 'ಮರಗಿಡಬಳ್ಳಿ', 'ಅಂತರಂಗದ ಪುಟಗಳು', 'ಗೋಲ', 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ', 'ಕ್ರೌಂಚ ಪಕ್ಷಿಗಳು' ಎಂಬ ಕಥಾಸಂಕಲನಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಇವರ ಕಥೆಗಳಲ್ಲಿ ಗಂಡು-ಹೆಣ್ಣಿನ ಮುಖಾಮುಖಿ, ಕೌಟುಂಬಿಕ ಬಿಕ್ಕಟ್ಟು, ಹೆಣ್ಣಿನ ಸೂಕ್ಷ್ಮ ಪ್ರತಿಭಟನೆಗಳ ಚಿತ್ರಣವಿದೆ.

ಸ್ತ್ರೀವಾದಿ ನೆಲೆಯಿಂದ ಬರೆಯುತ್ತಿರುವ ಇಂದಿರಾ ಹೆಗ್ಗಡೆಯವರು 'ಮೋನಿಯ ಸೇಡು', 'ಪುರುಷರೇ ನಿಮಗೆ ನೂರು ನಮನಗಳು' ಹಾಗೂ 'ಬದುಕು' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಕರಾವಳಿಯ ಓರ್ವ ಸಂವೇದನಾಶೀಲ ಕಥೆಗಾರ್ತಿ ಎಚ್. ನಾಗವೇಣಿಯವರು 'ನಾಕನೇ ನೀರು', 'ಮೀಯುವ ಆಟ' ಕಥಾ ಸಂಕಲನಗಳಲ್ಲಿ ಸ್ತ್ರೀಯರ ಬದುಕನ್ನು ಕಟ್ಟಿ ಕೊಡುತ್ತಾರೆ.

ತುಳಸೀ ವೇಣುಗೋಪಾಲ್, ಲಕ್ಷ್ಮೀ ಕುಂಜತ್ತೂರು, ಲೀಲಾ ಮಣ್ಣಾಲ, ಲಲಿತಾ ಎಸ್. ಎನ್. ಭಟ್, ಯಜ್ಞಾವತಿ ಕೇಶವ ಕಂಗನ್, ಉಷಾ ಪಿ. ರೈ, ಕ್ಯಾಥರಿನ್ ರಾಡ್ರಿಗಸ್, ಎಚ್. ಶಕುಂತಳಾ ಭಟ್, ಯಶವಂತಿ ಎಸ್. ಸುವರ್ಣಾ, ಸವಿತಾ ಭಟ್ ಅಡ್ವಾಯಿ, ರತ್ನ ಜಿ.ಕೆ. ಶೆಟ್ಟಿ, ಶಹನಾಝ್ ಎಂ., ಅನುಪಮಾ ಪ್ರಸಾದ್, ನಾಗಮಣಿ ಎಸ್. ಹೊಸ್ಕೆರೆ, ಜಾನಕಿ ಸುಂದರೇಶ್, ನಾಗವೇಣಿ ಮಂಚಿ, ಪ್ರತಿಮಾ ಪಾನತ್ತಿಲ, ಇನ್ನೂ ಅನೇಕರು ಈ ಕ್ಷೇತ್ರದಲ್ಲಿ ದುಡಿದಿದ್ದಾರೆ. ಹಾಗಂತ ಎಲ್ಲಾ ಕಥೆಗಳೂ ಸತ್ವಪೂರ್ಣವಾದವು ಎನ್ನುವಂತಿಲ್ಲ.

೪.೧. ತುಳು ಲೇಖಕಿಯರು

ಕನ್ನಡ ಮಾತ್ರವಲ್ಲದೆ ಇತರ ಭಾಷೆಗಳ ಸಾಹಿತ್ಯದಲ್ಲೂ ನಿರತರಾದ ಲೇಖಕಿಯರಿದ್ದಾರೆ. ಪ್ರಮೋದ ಕೆ. ಸುವರ್ಣ ತುಳು ಭಾಷೆಯ ಹೆಸರಾಂತ ಲೇಖಕಿಯಾಗಿದ್ದಾರೆ. ಆದರೆ ಇವರ ಬರವಣಿಗೆಗಳು ಕಾವ್ಯಕ್ಕೆ ಸಂಬಂಧಿಸಿದ್ದಾಗಿವೆ. ಲಲಿತಾ ಆರ್ ರೈ ತುಳುವಿನಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಡಾ. ಸುಶೀಲಾ ಉಪಾಧ್ಯಾಯರು ತುಳು ಭಾಷೆಯ ಬಗೆಗಿನ ಸಂಶೋಧನೆ ನಡೆಸಿದ್ದಾರೆ. ಕ್ಯಾಥರಿನ್ ರಾಡ್ರಿಗಸ್, ಆತ್ರಾಡಿ ಅಮೃತ ಶೆಟ್ಟಿ ಕನ್ನಡ, ತುಳು

ಎರಡೂ ಭಾಷೆಯಲ್ಲಿ ಬರೆಯಬಲ್ಲವರು. ಗ್ಲೇಡಿಸ್ ರೇಗೋ ಕೊಂಕಣಿ ಭಾಷೆಯಲ್ಲಿ ಕಥೆಗಳನ್ನು ಬರೆಯುತ್ತಾರೆ. ಜಯಂತಿ ಎಸ್. ಬಂಗೇರ ಕೇವಲ ತುಳು ಭಾಷೆಯನ್ನೇ ಆಯ್ದುಕೊಂಡವರು.

ಒಟ್ಟಿನಲ್ಲಿ ಕರಾವಳಿಯ ಕತೆಗಾರ್ತಿಯರಲ್ಲಿ ಎರಡು ಸ್ತರಗಳಿರುವುದು ಸ್ಪಷ್ಟವಾಗುತ್ತದೆ. ಮೊದಲ ಸ್ತರದ ಕಥೆಗಾರ್ತಿಯರು ಕನ್ನಡದ ನವೋದಯಕ್ಕೆ ಬದ್ಧರಾಗಿ ಬರೆದರು ಮಾತ್ರವಲ್ಲ ಭಾವುಕತೆಗೆ ಒತ್ತುಕೊಟ್ಟರು. ಕಥೆಯನ್ನು ನಿರೂಪಿಸುವಾಗ ವಿವರಣೆಯ ಕಡೆಗೆ ವಾಲುವ ಯಾಂತ್ರಿಕತೆಯನ್ನು ಈ ಮೊದಲ ಸ್ತರದ ಲೇಖಕಿಯರಲ್ಲಿ ಕಾಣಬಹುದು. ವಾಸಂತಿಬಾಯಿ ಪಡುಕೋಣೆ, ಬೆಳ್ಳೆ ಸೀತಾರತ್ನಮ್ಮನಂತವರು ಮೊದಲ ಸ್ತರವನ್ನು ಪ್ರತಿನಿಧಿಸಿದರೆ, ಗಂಗಾ ಪಾದೇಕಲ್, ವೈದೇಹಿಯಂತವರು ಎರಡನೇ ಸ್ತರದಲ್ಲಿ ಕಾಣಿಸಿಕೊಳ್ಳುತ್ತಾರೆ. ಪುರುಷ ಪ್ರಧಾನ ಚಿಂತನಾ ಕ್ರಮಕ್ಕೆ ಭಿನ್ನರಾಗಿ ಯೋಚಿಸುತ್ತಾರೆ.

ಹೊಸ ತಲೆಮಾರಿನ ಲೇಖಕಿಯರ ಕಥೆಗಳು ಸಾಂಪ್ರದಾಯಿಕ ಕಥನ ಕ್ರಮಕ್ಕಿಂತ ತೀರಾ ಭಿನ್ನವಾಗಿವೆ. ಸಂಕೇತ - ಪ್ರತಿಮೆಗಳನ್ನು ತಮ್ಮ ಕಥೆಗಳಿಗೆ ಬಳಸಿಕೊಂಡು, ಹೇಳಿಕೊಳ್ಳಲಾಗದ ಮನದಾಳದ ನೋವುಗಳಿಗೆ ಈ ಲೇಖಕಿಯರು ಧ್ವನಿ ನೀಡಿದ್ದಾರೆ. ಹೆಣ್ಣಿನ ಸ್ವತಂತ್ರ ವ್ಯಕ್ತಿತ್ವದ ಹುಡುಕಾಟ ಆರಂಭವಾಗಿದೆ. ಸಾಮಾಜಿಕ ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಹೆಣ್ಣಿನ ಮೇಲಾಗುವ ಶೋಷಣೆಯ ವಿವಿಧ ಮುಖಗಳನ್ನು ಬಯಲಿಗೆಳೆದು, ಪ್ರತಿಭಟಿಸುವ ಧೀರತನವನ್ನು ಇಂದಿನ ಲೇಖಕಿಯರು ತಮ್ಮ ಬರವಣಿಗೆಗಳಲ್ಲಿ ತೋರಿದ್ದಾರೆ.

ಕರಾವಳಿಯ ಲೇಖಕಿಯರ ಕಥೆಗಳನ್ನು ಕರ್ನಾಟಕದ ಮಟ್ಟದಲ್ಲಿ ಗಮನಿಸಿದಾಗ ಒಂದಂಶ ಸ್ಪಷ್ಟವಾಗುತ್ತದೆ. ಕರ್ನಾಟಕದ ಲೇಖಕಿಯರಲ್ಲಿ ಕಂಡುಬರುವ ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ಹಾಗೂ ಪ್ರತಿಭಟಿಸುವ ತೀಕ್ಷ್ಣತೆಯು ಕರಾವಳಿ ಲೇಖಕಿಯರಲ್ಲಿ ಕಂಡುಬರುವುದಿಲ್ಲ. ಎರಡೂ ಕಡೆಗಳಲ್ಲಿ ಸಮಾಜದ ಮೇಲ್ವರ್ಗದ ಸ್ತ್ರೀಯರೇ ಬರವಣಿಗೆಗೆ ತೊಡಗಿಕೊಂಡರೂ ಈ ವ್ಯತ್ಯಾಸ ಯಾಕೆಂದು ಸ್ಪಷ್ಟವಾಗುವುದಿಲ್ಲ. ಭಿನ್ನ ಭಿನ್ನವಾದ ಸಾಮಾಜಿಕ ಪರಿಸರವೇ ಇದಕ್ಕೆ ಕಾರಣವಾಗಿರಬಹುದೇ? ಮಠಗಳ ಹಿಡಿತ ಹಾಗೂ ಭೂಮಾಲಿಕರ ಹಿಡಿತಗಳೇ ಯೋಚನಾ ದಾರಿಯನ್ನು ಬದಲಾಯಿಸಿರಬಹುದೇ? ಪ್ರತಿಭಟನೆಗಿಂತ ಹೊಂದಾಣಿಕೆಯ ಮನೋಭಾವದ ಕಡೆಗೆ ಕೊಂಡೊಯ್ಯುವ ಭೌಗೋಳಿಕ ರಚನೆಯೇ ಇದಕ್ಕೆ ಕಾರಣವಾಗಿರಬಹುದೆ? ಎಂಬ ಪ್ರಶ್ನೆಗಳ ಕುರಿತು ಗಂಭೀರವಾದ ಅಧ್ಯಯನ ನಡೆಯುವ ಅಗತ್ಯವಿದೆ.

೪.೨ ಸ್ತ್ರೀ ಸಂಸ್ಕೃತಿ – ಒಂದು ವಿವೇಚನ

'ಸಂಸ್ಕೃತಿ' ಎನ್ನುವುದು ಮೂಲತಃ ಒಂದು ಬೌದ್ಧಿಕ ರಚನೆ. ಅದಕ್ಕೆ ಸ್ವಂತ ಅರ್ಥವಿಲ್ಲ. ನಾವು ನೀಡುವ ಅರ್ಥವನ್ನು ಸ್ವೀಕರಿಸಿಕೊಂಡು ಆಯಾ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗುತ್ತದೆ. ಈ ಪದಕ್ಕೆ ಒಂದು ಭಾವನಾತ್ಮಕ ಅರ್ಥವಿರುತ್ತದೆ. ಯಾಕೆಂದರೆ, ಅದು 'ಹಿರಿಯರಿಂದ ಬಂದ ಮೌಲ್ಯ' ಎಂಬ ನೆಲೆಯಲ್ಲಿ. ಯಾವುದೇ ಒಂದು ಸಮಾಜದ ಮನುಷ್ಯನ ಆಚಾರ–ವಿಚಾರ- ನಂಬಿಕೆ-ನಡವಳಿಕೆ, ಉಡುಗೆ–ತೊಡುಗೆ ಇವೆಲ್ಲವುಗಳ ಒಟ್ಟು ಮೊತ್ತವೇ 'ಸಂಸ್ಕೃತಿ' ಎನಿಸಿಕೊಳ್ಳುತ್ತದೆ. ಹಾಗಾಗಿ ಇದೊಂದು ವ್ಯವಸ್ಥೆಯಾಗಿರದೆ ಒಟ್ಟು ಜೀವನ ಕ್ರಮವಾಗಿದೆ. ಸಂಸ್ಕೃತಿ ಎನ್ನುವುದು ನಿರಂತರತೆ ಹಾಗೂ ಬದಲಾವಣೆಗಳನ್ನು ಒಳಗೊಂಡಿರುವ ಪ್ರಕ್ರಿಯೆ. ನಿರಂತರತೆಯನ್ನು ಆಚರಣೆಗಳಲ್ಲಿ ಕಂಡರೆ, ಬದಲಾವಣೆಗೆ ಕಾರಣ ಬೆಳೆಯುತ್ತಿರುವ ನಾಗರೀಕತೆ. ಸಂಸ್ಕೃತಿಯ ಹೆಸರಿನಲ್ಲಿ ಕಂಡುಬರುವ ಕೆಲವು ಕುರುಹುಗಳ ಪ್ರತೀ ಪದರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದರ ಆಳ–ಅಗಲಗಳ ಪರಿಚಯವಾಗುತ್ತದೆ. ಈ ದೃಷ್ಟಿಯಿಂದ ಸಂಸ್ಕೃತಿ ಎನ್ನುವುದನ್ನು ಒಟ್ಟು ಜೀವನಕ್ರಮದ ಹಿನ್ನೆಲೆಯಿಂದ ಅರ್ಥ ಮಾಡಿಕೊಳ್ಳಬಹುದೇ ಹೊರತು ಅದನ್ನೂ ಪ್ರತ್ಯೇಕವಾದ ಅಂಗವಾಗಿ ಕಂಡಾಗ ಸಾಧ್ಯವಿಲ್ಲ.

ಸಂಸ್ಕೃತಿ ಎಂಬ ಪದದ ನಿಷ್ಪತ್ತಿಗೆ ಮೂಲ 'ಸಂಸ್ಕಾರ' ಎನ್ನುವುದೇ ಆಗಿದೆ. 'ಸಂಸ್ಕಾರ' ಎಂದರೆ 'ಪವಿತ್ರವಾದ', 'ಸುಧಾರಿಸಿದ', 'ವಿಧಿ–ವಿಧಾನ' ಮುಂತಾದ ಅರ್ಥಗಳಿವೆ. 'ಸಂಸ್ಕೃತ'ದಲ್ಲಿ 'ಸಂ' ಎಂದರೆ 'ಮೌಲ್ಯಗಳ ಕಡೆಗೆ ಮುಖಮಾಡಿ ನಿಲ್ಲುವಂಥದ್ದು' ಎಂದರ್ಥ. ಈ 'ಸಂಸ್ಕೃತಿ' ಎಂಬ ಪದವು ಆಂಗ್ಲಭಾಷೆಯ 'ಕಲ್ಚರ್' ಎಂಬುದರಿಂದ ಬಂದಿದೆ. ಇದು ಮೂಲತಃ ಲ್ಯಾಟಿನ್ ಪದವಾಗಿದ್ದು, 'ಕಲ್ಟ್' ಅಥವಾ 'ಕಲ್ಟಸ್' ಎಂಬ ಶಬ್ದದಿಂದ ಬಂದಿದೆ. ಈ ಶಬ್ದಗಳಿಗೆ ಮೂಲದಲ್ಲಿ 'ಭೂಮಿಯ ಆರಾಧನೆ', 'ಪೈರು ಬೆಳೆಯುವುದು' ಎಂಬ ಅರ್ಥಗಳಿದ್ದವು. ಇಂದು 'ಕೃಷಿಯನ್ನು ಇಂಗ್ಲಿಷಿನಲ್ಲಿ 'ಅಗ್ರಿಕಲ್ಚರ್' ಎಂದು ಕರೆಯಲಾಗುತ್ತದೆ. ಅಂದರೆ 'ಕಲ್ಚರ್' ಎಂಬ ಪದ 'ಬೆಳೆಯುವುದು' ಎಂಬ ಅರ್ಥದಲ್ಲಿ ಉಳಿದುಕೊಂಡಿದೆ. ಒಂದು ಕಾಲದಲ್ಲಿ 'ಕಲ್ಚರ್' ಪದ ಭೂಮಿಯ ಮೇಲಿನ ಆಚರಣೆಗಳಿಗೂ, ಕೃಷಿಗೂ ಸಂಬಂಧವನ್ನು ಕಲ್ಪಿಸುವ ಸಂಕೇತಾರ್ಥದಲ್ಲಿ ಬಳಕೆಯಾಗುತ್ತಿತ್ತು. ಆದರೆ ಮೂಲದಲ್ಲಿ 'ಕಲ್ಚರ್' ಎಂಬ ಪದ ಪಡೆದುಕೊಂಡು ಬಂದ ಅರ್ಥದಲ್ಲಿ ಇಂದು ಬಳಕೆಯಾಗುತ್ತಿಲ್ಲ.

ಆರಂಭದಲ್ಲಿ 'ಶ್ರೇಷ್ಠ ಜೀವನಾದರ್ಶ' ಎಂಬ ನೆಲೆಯಲ್ಲಿ ಬಳಕೆಯಾಗುತ್ತಿದ್ದ 'ಸಂಸ್ಕೃತಿ' ಎಂಬ ಪದವನ್ನು ನಂತರ ಸಾಹಿತ್ಯ-ಸಂಗೀತಗಳಿಗೆ ಹೊಂದಿಸಿ ಅರ್ಥ ಕಲ್ಪಿಸಲಾಯಿತು. ಅನಂತರದಲ್ಲಿ ಮಾನವನ ಜೀವನ ವಿಧಾನ

ಎಂಬರ್ಥ ಬಂತು. ಒಂದು ಕಡೆ 'ಬೆಳೆ' ಎಂಬ ಅರ್ಥ ಸೇರಿದರೆ, ಇನ್ನೊಂದು ಕಡೆ 'ಸಂಸ್ಕಾರ' 'ಶುದ್ಧೀಕರಿಸುವುದು' ಎಂಬ ಅರ್ಥ ಬರುವ ಹಾಗೆ ಬಳಕೆಯಾಗುತ್ತದೆ.

'ಸಂಸ್ಕೃತಿ'ಯ ಬಗೆಗೆ ಅನೇಕ ವಿದ್ವಾಂಸರು ಬೇರೆ ಬೇರೆ ಅಭಿಪ್ರಾಯಗಳನ್ನು ನೀಡುತ್ತಾರೆ. ಆ ಅಭಿಪ್ರಾಯಗಳು ಇಂತಿವೆ.

೧. ಕನ್ನಡದ ಹಿರಿಯ ವಿದ್ವಾಂಸ ಡಿ.ವಿ.ಜಿ.ಯವರು ಹೀಗೆ ಹೇಳುತ್ತಾರೆ. "ಸಂಸ್ಕಾರದಿಂದ 'ಸಂಸ್ಕೃತಿ'. 'ಸಂಸ್ಕಾರ' ಅಥವಾ 'ಸಂಸ್ಕರಣ' ಎಂದರೆ ಸಮ್ಯಕ್‌ಕರಣ-ಸಮ್ಯಕ್ ಕೃತಿ,-ಸಂಸ್ಕೃತಿ. ಹಾಗೆಂದರೆ ಚೆನ್ನಾಗುವಂತೆ ಮಾಡುವುದು. ಒಳ್ಳೆಯದನ್ನಾಗಿಸುವುದು. ಶುದ್ಧ ಮಾಡಿ ಉತ್ತಮ ಪಡಿಸುವುದು ಎಂದರ್ಥ. 'ಒಳ್ಳೆಯದು' ಎಂದರೆ ಒಂದಾನೊಂದು ಪದಾರ್ಥವು ಅಥವಾ ಸಂಗತಿಯು ಹೇಗಿರಬೇಕೋ ಹಾಗಿರುವುದು. ಒಂದು ವಸ್ತು ಅಥವಾ ಒಂದು ವರ್ತನೆ ಹೇಗಿದ್ದರೆ ನಮ್ಮ ಜೀವನದ ಪರಮೋದ್ದೇಶ ಸಿದ್ಧಿಯು ನಮಗೆ ಹತ್ತಿರ ಹತ್ತಿರವಾದೀತೋ ಅದೇ 'ಒಳ್ಳೆಯದು'. ಅದೇ ಹಿತ. ಅದೇ ಔಚಿತ್ಯ. ಅದೇ ಸಾಧುತೆ. ಆ ಒಳ್ಳೆಯದನ್ನು ಕಂಡುಕೊಳ್ಳುವ ಪ್ರಯತ್ನವೇ–ಆ ಹಿತವನ್ನು ಹುಡುಕುವುದೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಉಂಟಾಗಿಸುವ ಔಚಿತ್ಯವೇ ಸಂಸ್ಕೃತಿ"[೨].

೨. ಮ್ಯಾಥ್ಯೂ ಅರ್ನಾಲ್ಡನ ಪ್ರಕಾರ, "ಜೀವನದ ಪ್ರತಿಯೊಂದು ಸನ್ನಿವೇಶದಲ್ಲಿಯೂ ನಮ್ಮ ಮನೋಭಾವವೂ ವರ್ತನೆಯೂ ಔಚಿತ್ಯ ಪರಿಪೂರ್ಣವಾಗುವಂತೆ ಮಾಡುವ ಪ್ರಯತ್ನವೇ ಸಂಸ್ಕೃತಿ"[೩].

೩. ಕನ್ನಡದ ಹೆಸರಾಂತ ಚಿಂತಕ ಬರಗೂರು ರಾಮಚಂದ್ರಪ್ಪನವರು, "ಮನುಷ್ಯ ತನ್ನ ಅಸ್ತಿತ್ವಕ್ಕಾಗಿ, ಬದುಕಿಗಾಗಿ ನಿಸರ್ಗದ ಜೊತೆ ನಡೆಸಿದ ಹೋರಾಟ ಮತ್ತು ಹೊಂದಾಣಿಕೆಗಳ ಫಲವೇ ಸಂಸ್ಕೃತಿ"[೪] ಎನ್ನುತ್ತಾರೆ. ಹೀಗೆ ಮನುಷ್ಯ ನಿಸರ್ಗದೊಂದಿಗೆ ಹೋರಾಡುತ್ತಲೇ ಹೊಂದಾಣಿಕೆಯ ನೆಲೆಯಲ್ಲಿ ನಿರ್ದಿಷ್ಟ ಜೀವನ ಶೈಲಿಯೊಂದನ್ನು ರೂಪಿಸಿಕೊಳ್ಳತೊಡಗಿದ. ಇದುವೇ ಸಂಸ್ಕೃತಿಯಾಯಿತು. ಇದು ಶ್ರಮದೊಂದಿಗೆ ಹುಟ್ಟಿಕೊಂಡದ್ದು.

೪. ಕನ್ನಡದ ಇನ್ನೊರ್ವ ಲೇಖಕ, ವಿಮರ್ಶಕ ಡಾ. ರಹಮತ್ ತರೀಕೆರೆಯವರು 'ಸಂಸ್ಕೃತಿ' ಎಂಬ ಪದವನ್ನು ಈ ಕೆಳಗಿನಂತೆ ಅರ್ಥೈಸುತ್ತಾರೆ.

- " 'ಸಂಸ್ಕೃತಿ' ಎಂಬುದು ಒಂದು ಸಮುದಾಯ ಬದುಕುವ, ಆಲೋಚಿಸುವ ಸಮಸ್ತ ಆಯಾಮಗಳನ್ನು ಒಳಗೊಳ್ಳುವ ಒಂದು ಪರಿಭಾಷೆ.
- 'ಸಂಸ್ಕೃತಿ' ಎನ್ನುವುದು ಹಲವಾರು ಗುಂಪುಗಳ ನಂಬಿಕೆ, ಆಚರಣೆಗಳ ಒಟ್ಟು ಮೊತ್ತ.

❖ 'ಸಂಸ್ಕೃತಿ' ಏಕರೂಪಿಯಾಗಿರದೆ, ಪ್ರಾದೇಶಿಕ, ಜಾತೀಯ, ಧಾರ್ಮಿಕ, ಬುಡಕಟ್ಟಿನ ರೂಪಗಳೊಂದಿಗೆ, ಬಹುರೂಪಿ ಗುಣಗಳಿಂದ ಕೂಡಿದೆ.

❖ 'ಸಂಸ್ಕೃತಿ' ಸದಾ ಸಂಕರರೂಪಿಯಾಗಿದ್ದು, ಅದು ಚಲನಶೀಲತೆಯ ಸಂಕೇತ"[೫] ಎಂದಿದ್ದಾರೆ.

೩. ಹೊಸ ತಲೆಮಾರಿನ ಲೇಖಕಿಯರಲ್ಲಿ ಒಬ್ಬರಾದ ಡಾ। ಸಬಿತಾ ಬನ್ನಾಡಿಯವರು, "ಸಮಾಜದ ಬದುಕಿನ ರೀತಿಯ ಫಲಿತಗಳೇ 'ಸಂಸ್ಕೃತಿ'ಗಳು. ಹೀಗಾಗಿ ಇವು ಒಂದಕ್ಕೊಂದು ಬೆಸೆದುಕೊಂಡಿರುತ್ತವೆ. ಒಂದು ಸಮಾಜದ ಸಂಸ್ಕೃತಿಯನ್ನು ಆ ಸಮಾಜದ ಚಿಂತನೆಗಳು ಒಟ್ಟಾಗಿ ರೂಪಿಸುತ್ತವೆ"[೬] ಎಂದು ಅಭಿಪ್ರಾಯಪಡುತ್ತಾರೆ.

ಈ ಮೇಲಿನ ಅಭಿಪ್ರಾಯಗಳನ್ನು ಗಮನಿಸಿದಾಗ ಸಂಸ್ಕೃತಿ ಎಂಬುದು ನಿಂತ ನೀರಲ್ಲ. ಅದು ಚಲನಶೀಲವಾದದ್ದು ಎನ್ನುವುದು ಸ್ಪಷ್ಟವಾಗುತ್ತದೆ. ಎಲ್ಲಾ ಜನರ, ಎಲ್ಲಾ ರೀತಿಯ ನಂಬಿಕೆ, ಆಚರಣೆಗಳು 'ಸಂಸ್ಕೃತಿ' ಎಂದು ಕರೆಯಿಸಿಕೊಳ್ಳುತ್ತವೆಯಾದ್ದರಿಂದ ಇದರಲ್ಲಿ ಶ್ರೇಷ್ಠ ಸಂಸ್ಕೃತಿ, ನಿಕೃಷ್ಟ ಸಂಸ್ಕೃತಿ ಎಂಬ ವಿಭಾಗವಿಲ್ಲ. ಪ್ರತಿಯೊಂದು ಸಂಸ್ಕೃತಿಗೂ ತನ್ನದೇ ಆದ ಅಸ್ತಿತ್ವವಿರುತ್ತದೆ. ಅದರಷ್ಟಕ್ಕೇ ಅದು ಸ್ವತಂತ್ರ ಸಂಸ್ಕೃತಿಯಾಗಿರುತ್ತದೆ. ಆದರೆ ಕೊಡು – ಕೊಳ್ಳುವಿಕೆ ಅನಿವಾರ್ಯ.

ಸಂಸ್ಕೃತಿಗೆ ಆಂತರಿಕ ಹಾಗೂ ಬಾಹ್ಯ ಎಂಬ ಎರಡು ರೀತಿಯ ಮುಖಗಳಿವೆ, ಇವೆರಡರ ಕೂಡುವಿಕೆಯಿಂದ 'ಸಂಸ್ಕೃತಿ' ರೂಪಿತವಾಗುತ್ತದೆ. ಬಾಹ್ಯಮುಖವೆನ್ನುವುದು ನಾವು ನಿಂತ ಪರಿಸರವಾದರೆ, ಆಂತರಿಕ ಮುಖ ನಮ್ಮ ಮನಸ್ಸು. ಇವು ಒಂದಕ್ಕೊಂದು ಪೂರಕವಾದವು. ಒಂದು ಪರಿಸರಕ್ಕೆ ಸಂಸ್ಕೃತಿಯನ್ನು ಸೃಷ್ಟಿಸುವ, ರೂಪಿಸುವ, ಬೆಳೆಸುವ ಶಕ್ತಿಯಿದೆ. ಹಾಗೆಯೇ ಒಂದು ಸಂಸ್ಕೃತಿಗೆ ಪರಿಸರವನ್ನು ಸೃಷ್ಟಿಸುವ ಹಾಗೂ ಬದಲಾಯಿಸುವ ಸಾಮರ್ಥ್ಯವಿದೆ.

ಒಟ್ಟಿನಲ್ಲಿ 'ಸಂಸ್ಕೃತಿ' ಎನ್ನುವುದು ಆಯಾಯ ಕಾಲಘಟ್ಟದ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ವಿಚಾರಗಳನ್ನು ಹೇಳಲು ರೂಪಿಸಿಕೊಂಡ ಒಂದು 'ಭಾಷಿಕ ಪ್ರಕ್ರಿಯೆ' ಎನ್ನಬಹುದು. 'ಸಂಸ್ಕೃತಿ' ಎಂಬ ಪದವೊಂದರ ಬೇರೆ ಬೇರೆ ಅರ್ಥ ಸಾಧ್ಯತೆಗಳನ್ನು ವ್ಯಾಖ್ಯಾನಗಳ ಮೂಲಕ ನೀಡಿದಾಗ, ಅಥವಾ ತಾತ್ವಿಕವಾಗಿ ಚಿಂತನೆ ಮಾಡಿ ಉದಾಹರಣೆಗಳ ಮೂಲಕ ವಿವರಿಸಹೊರಟರೆ ಅದು 'ಸಂಸ್ಕೃತಿ ಚಿಂತನೆ' ಎನಿಸಿಕೊಳ್ಳುತ್ತದೆ. ಯಾವುದಾದರೊಂದು ವಿಷಯವನ್ನು ಆಯ್ದುಕೊಂಡು ಅದನ್ನು ವಿಸ್ತಾರವಾಗಿ, ವಿಶ್ಲೇಷಣಾತ್ಮಕ ನೆಲೆಯಿಂದ ಅಧ್ಯಯನ ಮಾಡಿದರೆ ಅದು 'ಸಾಂಸ್ಕೃತಿಕ ಅಧ್ಯಯನ' ಎನಿಸಿಕೊಳ್ಳುತ್ತದೆ.

ಹೆಣ್ಣು ಸಂಸ್ಕೃತಿಯ ಒಂದು ಅಂಗ. ಆಕೆಯ ಜೀವನದ ಗತಿಯನ್ನು ನಿರ್ಧರಿಸುವ ಶಕ್ತಿ, ಸಾಮರ್ಥ್ಯವನ್ನು ಪರಿಸರ ಅಥವಾ ಸಮಾಜ ಪಡೆದಿದೆ. ಹೆಚ್ಚಿನ ಸಂದರ್ಭಗಳಲ್ಲಿ ಸಂಸ್ಕೃತಿ ಎನ್ನುವುದು ಮಹಿಳೆಯ ಉನ್ನತಿಗೆ ಪ್ರತಿಕೂಲವಾಗಿರುತ್ತದೆ. ಯಾವುದನ್ನು ನಾವು ಸಂಸ್ಕೃತಿಯ ದ್ಯೋತಕಗಳು ಎನ್ನುತ್ತೇವೆಯೋ ಅವು ಪುರುಷ ಪ್ರಾಧಾನ್ಯತೆಯನ್ನು ಬಿಂಬಿಸುತ್ತವೆ. ಪ್ರತಿಯೊಂದು ಸಂಸ್ಕೃತಿಯಲ್ಲಿ ಪುರುಷ ಪರವಾದ ಹಾಗೂ ಸ್ತ್ರೀ ವಿರೋಧವಾದ ಪರಿಸರ ನಿರ್ಮಾಣವಾಗಿರುವುದನ್ನು ಮನಗಾಣಬಹುದು. ಪರಿಸರವು ಪ್ರಪಂಚದೆಲ್ಲೆಡೆ ಮಹಿಳೆಗೆ ಎರಡನೇ ದರ್ಜೆಯ ಸ್ಥಾನವನ್ನೇ ನೀಡುತ್ತ ಬಂದಿರುವುದರಿಂದ ಆಕೆ ಸಾಮಾಜಿಕ ಹಾಗೂ ಆರ್ಥಿಕ ಮನ್ನಣೆಯನ್ನು ಪಡೆದುಕೊಂಡಿಲ್ಲ. ಹೆಣ್ಣು-ಗಂಡುಗಳ ನಡುವಿನ ಜೈವಿಕ ವ್ಯತ್ಯಾಸವೇ ಪುರುಷ ಶ್ರೇಷ್ಠ, ಸ್ತ್ರೀ ಕನಿಷ್ಠ ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಿದೆ. ಸಮಾಜ ಹೆಣ್ಣನ್ನು ನೋಡುವುದೇ ಎರಡು ಪಾತ್ರಗಳಲ್ಲಿ. ಅವುಗಳೆಂದರೆ ಹೆಂಡತಿಯಾಗಿ ಮತ್ತು ತಾಯಿಯಾಗಿ. ಹಾಗಾಗಿ ಮಕ್ಕಳನ್ನು ಹೆರುವುದಕ್ಕೆ, ಪೋಷಿಸುವುದಕ್ಕೆ ಆಕೆ ನಿಯುಕ್ತಳಾದಳೇ ವಿನಾ ಬುದ್ಧಿ ಭಾವಗಳ ಉತ್ಪಾದನಾ ವಲಯದಲ್ಲಿ ಆಕೆಗೆ ಸ್ಥಾನ ಸಿಗಲಿಲ್ಲ. ಇದರಿಂದಾಗಿ ಇತಿಹಾಸದಲ್ಲಿ ಮರೆಯಾದ ಹೆಣ್ಣಿನ ಬದುಕಿನ ಅನನ್ಯತೆಯನ್ನು ಹುಡುಕುವುದರ ಮೂಲಕ ಸ್ತ್ರೀ ಸಂಸ್ಕೃತಿಯನ್ನು ಕಟ್ಟುವ ಪ್ರಯತ್ನ ನಡೆಯುತ್ತಿದೆ.

ಅಡಿಟಿಪ್ಪಣಿ

೧. ಡಾ.ಸಬಿಹಾ ಭೂಮಿಗೌಡ : ಬಗೆ, ಪು. ೧೯, ೨೦೦೧

೨. ಡಿ. ವಿ. ಜಿ. : ಸಂಸ್ಕೃತಿ : ಪು. ೨, ೨೦೦೬.

೩. ಡಿ. ವಿ. ಜಿ. : ಸಂಸ್ಕೃತಿ : ಪು. ೫, ೨೦೦೬.

೪. ಬರಗೂರು ರಾಮಚಂದ್ರಪ್ಪ : ಸಂಸ್ಕೃತಿ ಚಿಂತನೆ, ಪು. ೧೨, ೧೯೯೮.

೫. ಡಾ. ಸಬಿತಾ ಬನ್ನಾಡಿ : ಆಲಯವು ಬಯಲಾಗಿ, ಪು. ೧೪, ೨೦೧೦.

ಅಧ್ಯಾಯ - ೫

ಸ್ತ್ರೀತ್ವದ ನೆಲೆ

೫.೧. ವೈಯಕ್ತಿಕ ನೆಲೆ

೫.೨. ಕೌಟುಂಬಿಕ ನೆಲೆ

೫. ೩. ಧಾರ್ಮಿಕ ನೆಲೆ

ಅಧ್ಯಾಯ - ೫

ಸ್ತ್ರೀತ್ವದ ನೆಲೆ

ಗಂಡು-ಹೆಣ್ಣಿನ ನಡುವಿನ ಜೈವಿಕ ವ್ಯತ್ಯಾಸವೇ ಸಮಾಜದ ಆಲೋಚನೆಯ ದಾರಿಯನ್ನು ನಿರ್ಧರಿಸಿದ್ದು. ಪರಂಪರಾಗತವಾಗಿ ಹೆಣ್ಣು ಗಂಡಿನ ಅಧೀನಳಾಗಿ ಗುರುತಿಸಿಕೊಂಡು ಬಂದಿದ್ದು ಅವನ ರೀತಿ, ನೀತಿಗಳಿಗೆ ಆಚಾರ, ಆಲೋಚನೆಗಳಿಗೆ ಬದ್ಧಳಾಗಿ ಬದುಕಬೇಕಾದ ಸ್ಥಿತಿ ನಿರ್ಮಾಣವಾಯಿತು. ಬುದ್ಧಿ - ಭಾವಗಳು ಕೇವಲ ಗಂಡಿಗೆ ಮಾತ್ರ ಸಂಬಂಧಿಸಿದ್ದಾಗಿ ಹೆಣ್ಣು ಕೇವಲ ಭೋಗ ವಸ್ತುವಾಗಿಯಷ್ಟೇ ಉಳಿದುಬಿಟ್ಟಳು. ಪುರಾಣ ಕಾವ್ಯಗಳಲ್ಲಿ ಇದ್ದ ಹೆಣ್ಣಿನ ಸ್ವಾತಂತ್ರ್ಯ ಶಾಸ್ತ್ರಕಾರರ ಕಾಲಕ್ಕೆ ನಿರ್ಬಂಧಿಸಲ್ಪಟ್ಟಿತು. ಹೆಣ್ಣು 'ಅಬಲೆ' ಎನ್ನುವ ಹಣೆಪಟ್ಟಿಯನ್ನು ಹಾಕಿ ಇತರರ ಆಶ್ರಯದಲ್ಲಿ ರಕ್ಷಿಸಲ್ಪಡುವವಳಾದಳು.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಬೆಳೆದು ಬಂದ ಹೆಣ್ಣು ಮಕ್ಕಳು ಆ ವ್ಯವಸ್ಥೆಯನ್ನು ಒಪ್ಪಿಕೊಂಡರೇ ವಿನಾಃ ಅದರ ವಿರುದ್ಧ ಚಿಂತಿಸುವುದಕ್ಕೆ ಸಾಧ್ಯವಾಗಲಿಲ್ಲ. ಹಾಗಾಗಿ ಅವರ ಬದುಕು ಆ ವ್ಯವಸ್ಥೆಗೆ ಹೊಂದಿಕೊಂಡು ಹೋಯಿತೇ ವಿನಾಃ ಅದರಾಚೆಗೆ ಇಣುಕುವುದಕ್ಕೆ ಮನಸ್ಸು ಮಾಡಲಿಲ್ಲ. ಸಮಾಜದ ವ್ಯವಸ್ಥೆಯೇ ಹೀಗೆ ಎಂದು ತಿಳಿದ ಅವರು ಅಲ್ಲಿನ ಲೋಪ – ದೋಷಗಳನ್ನು ಅಸಮಾನತೆಯನ್ನು ಸಹಜವೆಂಬಂತೆ ಸ್ವೀಕರಿಸಿ ಬದುಕು ನಡೆಸಿದರು.

ಅಕ್ಷರ ಜಗತ್ತಿಗೆ ತಮ್ಮನ್ನು ತೆರೆದುಕೊಂಡ ನಂತರ ತಮ್ಮ ಸಾಹಿತ್ಯಾಭಿವ್ಯಕ್ತಿಯಲ್ಲಿಯೂ ಮೇಲಿನ ಆಲೋಚನೆಗಳನ್ನೇ ಪಡಿಮೂಡಿಸಿದರು. ಮನು ಹೇಳಿರುವ

> ಕಾರ್ಯೇಷು ದಾಸಿ
> ಕರಣೇಷು ಮಂತ್ರಿ
> ಭೋಜ್ಯೇಷು ಮಾತಾ
> ಶಯನೇಷು ರಂಭಾ ......

ಇತ್ಯಾದಿ ಹೇಳಿಕೆಗಳಿಗೆ ಪೂರಕವಾಗಿ ಸಾಹಿತ್ಯವನ್ನು ಕಟ್ಟಿಕೊಟ್ಟರು. ಹಾಗಾಗಿ ಹೆಣ್ಣಿನ ವೈಯುಕ್ತಿಕ, ಕೌಟುಂಬಿಕ, ಧಾರ್ಮಿಕ ನೆಲೆಯಲ್ಲಿ ಬರುವ ಎಲ್ಲಾ ರೀತಿಯ ಸಮಸ್ಯೆಗಳ ವೈಭವೀಕರಣ ಆರಂಭದ ಮಹಿಳಾ ಸಾಹಿತ್ಯದಲ್ಲಿ ನಡೆಯಿತೇ ವಿನಾಃ ಆ ಸಮಸ್ಯೆಗಳ ಪರಿಹಾರ ಅವರಿಗೆ ಮುಖ್ಯವೆನಿಸಲಿಲ್ಲ.

ಕರಾವಳಿಯ ಲೇಖಕಿಯರೂ ಇದರಿಂದ ಹೊರತಾಗಲಿಲ್ಲ. ಹಾಗಾಗಿ ಸ್ವಾತಂತ್ರ್ಯೋತ್ತರ ಕಾಲ ಘಟ್ಟದ ನಮ್ಮ ಲೇಖಕಿಯರಲ್ಲಿ ಈ ನೆಲೆಯನ್ನು ಪ್ರತಿನಿಧಿಸುವ ಎಷ್ಟೋ ಮಂದಿ ಸಿಗುತ್ತಾರೆ. ಸಾಹಿತ್ಯದ ಯಾವ ಪ್ರಕಾರದಲ್ಲೇ ಅವರು ಕೃಷಿ ಮಾಡಿರಲಿ, ಅವರ ನಿಲುವುಗಳು ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪುವಂತದ್ದೇ ಆಗಿವೆ.

೫.೧. ವೈಯಕ್ತಿಕ ನೆಲೆ:

ವೈಯಕ್ತಿಕ ನೆಲೆಯ ಬರಹಗಳು ವ್ಯಕ್ತಿಗತವಾಗಿ ವ್ಯಕ್ತಿಯೊಬ್ಬನ ಅನುಭವವನ್ನು ಹೇಳುವುದರ ಜೊತೆಗೆ ಸಾರ್ವಕಾಲಿಕವಾದ ಸಮಸ್ಯೆ, ವಿಚಾರ, ಹಾಗೂ ತತ್ವಗಳು ಮುಖ್ಯವಾಗುತ್ತವೆ. ಲೋಕ ಸತ್ಯದ ವಿಚಾರಗಳು ವ್ಯಕ್ತಿಗತವಾದ ನೆಲೆಯಲ್ಲಿ ಪ್ರಕಟವಾದರೂ ಅಲ್ಲಿಯ ಧೋರಣೆಗಳು, ಚಿಂತನೆಗಳು ಸಮಾಜದ ರೀತಿ-ನೀತಿಗಳನ್ನು ಹೇಳುವ, ಪ್ರಶ್ನಿಸುವ, ಪ್ರತಿರೋಧಿಸುವ ನೆಲೆಯೊಂದಿಗೆ ಸಾಮಾಜಿಕ ವ್ಯಂಗ್ಯವಾಗಿಯೂ ನಿರೂಪಣೆಗೊಳ್ಳುತ್ತವೆ. ಈ ನೆಲೆಯ ಬರಹಗಳು ವೈಯಕ್ತಿಕ ನೆಲೆಯನ್ನು ದಾಟಿ ಸಾರ್ವಕಾಲಿಕೆಯತ್ತ ಮುಖ ಮಾಡುತ್ತವೆ. ವೈಧವ್ಯ, ವೇಶ್ಯಾ ಸಮಸ್ಯೆ, ನೈತಿಕತೆ, ತಾಯ್ತನ, ಇವೆಲ್ಲವೂ ವೈಯಕ್ತಿಕ ಸಮಸ್ಯೆಗಳಾಗಿರುವುದರ ಜೊತೆ ಜೊತೆಗೆ ಅವು ಕೇವಲ ವ್ಯಕ್ತಿಯೊಬ್ಬರ ಸಮಸ್ಯೆಯಾಗಿ, ಅನುಭವ ಕಥನವಾಗಿ ಉಳಿಯದೆ ಸ್ತ್ರೀ ಸಮುದಾಯದ ಅನುಭವವನ್ನು ವಿಸ್ತರಿಸಲು ಸಾಧ್ಯವಾಗುತ್ತದೆ. ಹೆಣ್ಣೊಬ್ಬಳು ಶಿಕ್ಷಣವನ್ನು ಪಡೆದು ವಿವಾಹ ಸಂಸ್ಥೆಯಲ್ಲಿ ದಾಖಲಾಗಲು ಹೆಣಗಾಡುವ ರೀತಿಯು ಕಥೆಯಾಗುತ್ತಾ ವಿವಾಹ ಎನ್ನುವುದು ಎಷ್ಟು ವೈಯಕ್ತಿಕವೋ ಅಷ್ಟೇ ಕೌಟುಂಬಿಕ ಮತ್ತು ಸಾಮಾಜಿಕ ಗಡಿರೇಖೆಯನ್ನು ದಾಟುತ್ತದೆ ಎನ್ನುವುದು ಕೂಡಾ ಕಥೆಗಳೊಳಗಿನ ಸಾಮಾಜಿಕ ದ್ವಂದ್ವಗಳೇ ಆಗಿವೆ. ಆದರೂ ವ್ಯಕ್ತಿನಿಷ್ಠವಾದ ಅನುಭವಗಳು ಕಥನಗಳಾಗುವಾಗ ವೈಯುಕ್ತಿಕ ನೆಲೆಯನ್ನು ದಾಟಿ ಸಾರ್ವಕಾಲಿಕತೆಯತ್ತ ಮುಂದುವರಿದಾಗ ಮಹಿಳಾ ಅಸ್ಮಿತೆಯ ದನಿಗಳಾಗಿಯೂ ಗುರುತಿಸಿಕೊಳ್ಳುತ್ತವೆ. ಈ ಕೆಳಗಿನ ಕಥೆಗಳಲ್ಲಿ ಈ ಮೇಲಿನ ಅಂಶಗಳು ಸ್ಪಷ್ಟವಾಗುತ್ತವೆ.

ಮಿತ್ರಾ ವೆಂಕಟ್ರಾಜ್‌ರವರ,

ರುಕುಮಾಯಿ (ರುಕುಮಾಯಿ, ೧೯೯೦)

'ರುಕುಮಾಯಿ' ಕಥೆಯಲ್ಲಿ ಮುಗ್ಧ ಹೆಣ್ಣೊಬ್ಬಳ ಬಗೆಗೆ ಪುರುಷನೊಬ್ಬ ಹೊಂದಿದ್ದ ಪ್ರೀತಿರು ಸಾವಿನೊಂದಿಗೆ ಕೊನೆಯಾಗುವ ದುರಂತ ಚಿತ್ರಣವಿದೆ. ಶ್ರೀಮಂತರ ದರ್ಪ, ಅಹಂಕಾರಗಳು ಬಡವರ ಬದುಕಿಗೆ

ಹೇಗೆ ಮುಳುವಾಗುತ್ತದೆ ಎನ್ನುವುದು ಈ ಕಥೆಯಲ್ಲಿ ಸ್ಪಷ್ಟವಾಗುತ್ತದೆ. ಅಮಾಯಕ ಹೆಣ್ಣು ಮಕ್ಕಳು ಶ್ರೀಮಂತರ ಕಾಮ ಪಿಪಾಸೆಯನ್ನು ನೀಗಿಸುವ ವಸ್ತುಗಳಾಗಿ ಬದುಕು ಸಾಗಿಸಬೇಕಾಗುವ ದುರಂತವನ್ನು ಈ ಕಥೆ ನಿರೂಪಿಸುತ್ತದೆ.

ಈ ಕಥೆಯ ಕಾಡ್ಯ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಗಟ್ಟಿತನ ಹೊಂದಿದವನು. ನಿಷ್ಕಲ್ಮಶ ಪ್ರೀತಿಯ ಸಹೃದಯ ವ್ಯಕ್ತಿಯಾಗಿ ರುಕುಮಾಯಿಯನ್ನು ಕೊನೆಯವರೆಗೂ ರಕ್ಷಿಸಿಕೊಂಡು ಬಂದವನು. ಹೆಣ್ಣೊಬ್ಬಳ ಬದುಕು ಶ್ರೀಮಂತರ ಕಾಲಡಿಯ ಧೂಳಾಗುವ ಹೃದಯವಿದ್ರಾವಕ ಸ್ಥಿತಿ ಈ ಕಥೆಯಲ್ಲಿದೆ. ಅನ್ಯಾಯಕ್ಕೆ ಪ್ರತಿಭಟಿಸಲಾರದ ರುಕುಮಾಯಿಯ ಪಾಲಿಗೆ ಬಂದದ್ದು ಸಾವು ಮಾತ್ರ.

ಮಿತ್ರಾ ವೆಂಕಟ್ರಾಜ್‌ರವರ ಚಿಂತನೆಗಳು ಪುರುಷ ಪ್ರಧಾನ ವ್ಯವಸ್ಥೆಯ ಒಪ್ಪಿತ ನೆಲೆಯನ್ನು ದಾಟಿದ್ದರೂ ಸಾಂಪ್ರದಾಯಿಕತೆಯನ್ನು ಒಪ್ಪಿಕೊಳ್ಳುವ ವಿಚಾರಗಳು ಕಾಣಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕೇವಲ ಒಂದು ಕಥೆಯಲ್ಲಿ ಬರುವ 'ರುಕುಮಾಯಿ' ಯಂತಹ ಪಾತ್ರ ಮಾತ್ರ ಹೆಣ್ಣು ಭೋಗದ ವಸ್ತು ಎನ್ನುವ ಪರಂಪರಾಗತ ವಿಚಾರವನ್ನು ಒಪ್ಪಿಕೊಂಡಂತೆ. ಹೆಣ್ಣಿನ ಶೋಷಣೆಯ ನಿಜ ಚಿತ್ರಣವನ್ನು ದಾಖಲಿಸುವುದೇ ಆ ಕಾಲಕ್ಕೆ ಪ್ರಗತಿಗಾಮಿಯಾಗಿ ಗೋಚರಿಸುತ್ತಿತ್ತು. ಗಂಡು - ಹೆಣ್ಣಿನ ಸಂಬಂಧಗಳು ಪ್ರೀತಿ-ಪ್ರಣಯ ದಾಟಿ ಜೀವನ ಪ್ರೀತಿಗಿಂತ ಜೀವ ವಿರೋಧಿಯಾಗುವ ಅಪಾಯಕಾರಿ ನೆಲೆಯನ್ನು ಹೇಳುವುದರ ಮೂಲಕ ಪುರುಷನ ದಬ್ಬಾಳಿಕೆಯನ್ನು ನಿರೂಪಿಸುತ್ತಾರೆ. ಗಂಡಿನ ಕ್ರೌರ್ಯ ಮತ್ತು ಹೆಣ್ಣಿನ ಸೌಮ್ಯತನಗಳೇ ಅವಳ ವಿನಾಶಕ್ಕೆ ಮೂಲವಾಗುತ್ತದೆ ಎನ್ನುವ ಸೂಕ್ಷ್ಮ ಒಳಹನ್ನು ನೀಡುತ್ತಾರೆ.

ಮಿತ್ರಾ ವೆಂಕಟ್ರಾಜ್‌ರವರು ಆಧುನಿಕ ಜಗತ್ತಿಗೆ ತೆರೆದುಕೊಂಡ ರೀತಿ ವಿಸ್ತೃತವಾಗಿರುವುದರಿಂದ ಅವರ ಸ್ತ್ರೀಪರವಾದ ಕಾಳಜಿಯೂ ಕೂಡ ಹತಾಶೆ, ನಿರಾಶೆಗಳಲ್ಲಿ ಹುದುಗಿ ಹೋಗದೆ ಸಾಂಪ್ರದಾಯಿಕ ಮಹಿಳಾ ಜಗತ್ತನ್ನು ನಿರೂಪಿಸಲು ಸಾಧ್ಯವಾಗುತ್ತದೆ. ಹಾಗಾಗಿ ಮೇಲಿನ ನೆಲೆಯ ಕಥೆಗಳು ಮಿತ್ರಾ ವೆಂಕಟ್ರಾಜ್‌ರವರಲ್ಲಿ ಕಡಿಮೆ ಸಂಖ್ಯೆಯಲ್ಲಿ ಸಿಗುತ್ತವೆ.

ಗಂಗಾ ಪಾದೇಕಲ್‌ರವರ ,

ಪುಲಪೇಡಿ (ಪುಲಪೇಡಿ ಮತ್ತು ಇತರ ಕಥೆಗಳು - ೧೯೮೭)

ಒಂದು ಸಾವಿನ ಕಥೆ (ಹೊಸಹೆಜ್ಜೆ - ೧೯೯೬)

ಹಕ್ಕು (ಹೊಸಹೆಜ್ಜೆ - ೧೯೯೬)

ಭಾವನೆ, ವಾಸ್ತವ, ಇತ್ಯಾದಿ.... (ನೆಲೆ ತಪ್ಪಿದ ಹಕ್ಕಿ, ೨೦೦೩)

ಒಂದೇ ಮಣ್ಣಿನ ಬೇರುಗಳು (ನೆಲೆ ತಪ್ಪಿದ ಹಕ್ಕಿ, ೨೦೦೩)

ನೆಲೆ ತಪ್ಪಿದ ಹಕ್ಕಿ (ನೆಲೆ ತಪ್ಪಿದ ಹಕ್ಕಿ, ೨೦೦೩)

ಕಲಿಯುಗದೊಳು (ಈ ಪ್ರಜಾ ರಾಜ್ಯದೊಳಗೆ, ೨೦೦೬)

'ಪುಲಪೇಡಿ' ಕತೆಯು ಸಮಾಜದ ವಿಚಿತ್ರ ಪದ್ಧತಿಯೊಂದು ಹೆಣ್ಣಿನ ಬದುಕಿನೊಂದಿಗೆ ಆಟವಾಡುವ ಪರಿಯನ್ನು ಚಿತ್ರಿಸುವ ಕಥೆಯಾಗಿದೆ. ಭಗವತಿಯ ದರ್ಶನಕ್ಕೆಂದು ಹೋದ ಲಲಿತೆ ಪರಯನ ಕಣ್ಣಿಗೆ ಬಿದ್ದು ಆತನ ಹೆಂಡತಿಯಾಗುವ ಅನಿವಾರ್ಯ ಸಂದರ್ಭ ಒದಗಿ ಬಂದರೂ ಗರ್ಭಿಣಿಯಾಗಿದ್ದ ಲಲಿತೆ ಗಂಡು ಮಗುವಿಗೆ ಜನ್ಮ ನೀಡುವುದರ ಮೂಲಕ ಪರಯನಿಂದ ಪಾರಾಗುತ್ತಾಳೆ.

ಮದುವೆಯಾಗಿ ಪ್ರೀತಿಸದೆ ಇರುವ ಗಂಡ ನಂಬೂದಿರಿಗಿಂತ ಇನ್ನೂ ಮದುವೆಯಾಗದೆ ಪ್ರೀತಿ ತೋರಿಸಿದ ಪರಯನೇ ಲಲಿತಳಿಗೆ ಶ್ರೇಷ್ಠನಾಗಿ ಕಾಣುತ್ತಾನೆ. ತನ್ನನ್ನು ಪ್ರೀತಿಸಿದವರಿಗೆ ಹೆಣ್ಣು ಹೃದಯದಲ್ಲಿ ಜಾಗ ಕೊಡುತ್ತಾಳೆ ಎನ್ನುವುದು ಈ ಕಥೆಯ ಆಶಯ. ಪುರುಷ ಪ್ರಧಾನ ಸಮಾಜ ಹೆಣ್ಣನ್ನು ತನ್ನ ಆಟದ ದಾಳಗಳನ್ನಾಗಿ ಬಳಸುವ ಹೃದಯ ವಿದ್ರಾವಕ ಚಿತ್ರಣ ಈ ಕಥೆಯಲ್ಲಿದೆ. ಆದರೆ 'ತಾನೊಂದು ಬಗೆದರೆ ದೈವವೊಂದು ಬಗೆವುದು' ಎಂಬ ಮಾತಿಗೆ ಸರಿಯಾಗಿ ಪರಯನ ಬದುಕು ನಿಲ್ಲುತ್ತದೆ.

'ಒಂದು ಸಾವಿನ ಕಥೆ'ಯ ಸಾವಿತ್ರಿ ಪ್ರತಿಭಾವಂತ ಹುಡುಗಿಯಾಗಿದ್ದರೂ ತನ್ನ ಭಾವನ ದುರ್ವರ್ತನೆಯಿಂದಾಗಿ ಅವಳ ಬದುಕು ಮುರುಟಿ ಹೋಯಿತು. ಕಾಯಿಲೆ ಬಿದ್ದ ತನ್ನ ಅಕ್ಕ, ಮನೆ-ಹೋಟೆಲಿನ ಕೆಲಸಗಳು, ಇವೆಲ್ಲವುಗಳಿಂದಾಗಿ ಓದುವುದಕ್ಕೆ ಸಾಧ್ಯವಾಗದೇ ಒದ್ದಾಡುತ್ತಿದ್ದ ಸಾವಿತ್ರಿ ಕೊನೆಗೆ ಸಮಾಜದ ತುಚ್ಛ ಮಾತುಗಳನ್ನು ಕೇಳಿಸಿಕೊಂಡೇ ಭಾವ ಎಂದು ಕರೆಯಬೇಕಾದವನಿಗೆ ಹೆಂಡತಿಯಾಗಬೇಕಾಯಿತು.

ಹೆಣ್ಣೊಬ್ಬಳು ದಾರಿ ತಪ್ಪಿದಾಗ ಎಲ್ಲರೂ ಆಕೆಯನ್ನು ದೂರ ಮಾಡುತ್ತಾರೆಯೇ ವಿನಃ ಆಕೆಗೆ ಸಮಾಧಾನ ಹೇಳಿ ಸರಿದಾರಿಗೆ ತರಲು ಯಾರೂ ಇರುವುದಿಲ್ಲ. ಹಾಗಾಗಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲಾರದ ಹೆಣ್ಣು ಪಾಲಿಗೆ ಬಂದದ್ದನ್ನೇ ಪಂಚಾಮೃತ ಎಂದು ಒಪ್ಪಿಕೊಂಡು ಬದುಕು ಸವೆಸಬೇಕಾಗುತ್ತದೆ. ಈ ಕಥೆಯ ಸಾವಿತ್ರಿಯ ಬದುಕೂ ಅದಕ್ಕಿಂತ ಹೊರತಾಗಲಿಲ್ಲ.

'ಹಕ್ಕು' ಕಥೆಯ ಕಮಲಮ್ಮ ತನ್ನ ತಂಗಿಯ ಮಗಳು ಕಿರಣಳನ್ನು ಬಹಳ ಪ್ರೀತಿಯಿಂದ ಸಾಕಿದಳು. ಹೆತ್ತ ತಾಯಿ – ತಂದೆಗೆ ಹೊರೆಯಾದ ಆ ಮಗುವನ್ನು ತನ್ನ ಸ್ವಂತ ಮಗುವಿನಂತೆ ಬೆಳೆಸಿದರೂ ಆ ಹುಡುಗಿಯ ತಂದೆ ಅವಳ ಮದುವೆಯ ಕುರಿತಾಗಿ ತಾನೇ ನಿರ್ಧಾರ ತೆಗೆದುಕೊಳ್ಳುತ್ತಾನೆ. ಮಾತ್ರವಲ್ಲ, ಮಗಳನ್ನು ಮನೆಗೆ ಕರೆದುಕೊಂಡು

ಹೋಗುತ್ತಾನೆ. ಈ ದುಃಖದಿಂದ ಹೊರಬರುವುದಕ್ಕೆ ಕಮಲಮ್ಮನಿಗಾಗಲೀ, ಅವಳ ಮಗ ಮೋಹನನಿಗಾಗಲೀ ಸಾಧ್ಯವಾಗದೇ ಚಡಪಡಿಸುತ್ತಾರೆ.

ಸಾಕಿ ಬೆಳೆಸುವುದಕ್ಕೊಬ್ಬರು, ಮುಂದೆ ಹೆಸರು ಪಡೆಯುವುದಕ್ಕೆ ಇನ್ನೊಬ್ಬರು ಎನ್ನುವ ಸ್ಥಿತಿಯನ್ನು ಮನದಟ್ಟು ಮಾಡುವ ಈ ಕಥೆಯಲ್ಲಿ ಹೆಣ್ಣಿಗೆ ತಾನು ಸಾಕಿದ ಮಕ್ಕಳ ಬಗೆಗೆ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಹಕ್ಕಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

'ಭಾವನೆ, ವಾಸ್ತವ ಇತ್ಯಾದಿ. . .' ಎಂಬ ಕಥೆಯ ಸರೋಜ ಕಾಮುಕ ಪುರುಷರ ಕಾಮಕೇಳಿಗೆ ಬಲಿಯಾಗಿ ಜೀವ ಕಳೆದುಕೊಂಡವಳು. ತನ್ನ ಗರ್ಭಕ್ಕೆ ಕಾರಣನಾದವನ ಬಳಿಗೆ ಬಂದು ನೆಲೆಸಿದರೂ ಕಾಲ ಕಸಕ್ಕಿಂತ ಕಡೆಯಾಗಿ ನರಕ ಯಾತನೆ ಅನುಭವಿಸಿದವಳು. ಕೊನೆಗೊಂದು ದಿನ ಬಾವಿಯಲ್ಲಿ ಕಾಣಿಸಿಕೊಂಡ ಅವಳ ಮೃತದೇಹ ಆತ್ಮಹತ್ಯೆಯಾಗಿರದೆ ಕೊಲೆಯಾಗಿತ್ತು. ತನಗೆ ಅನ್ಯಾಯ ಮಾಡಿದವರ ವಿರುದ್ಧ ಸೇಡು ತೀರಿಸಿಕೊಳ್ಳಲಾಗದೆ, ತನ್ನ ದಾರಿಯನ್ನು ತಾನು ಕಂಡುಕೊಳ್ಳಲಾರದೆ ಸರೋಜ ಶ್ರೀಮಂತರ ಚೆಲ್ಲಾಟದ ಇಲಿಯಾಗುತ್ತಾಳೆ.

'ಒಂದೇ ಮಣ್ಣಿನ ಬೇರುಗಳು' ಕಥೆಯು ಬೆಳೆದ ಮಕ್ಕಳ ಪ್ರತಿಭೆಯನ್ನು ಕತ್ತರಿಸಿ ಹಾಕುವ ಕ್ರೂರ ಮುಖದ ಪರಿಚಯ ಮಾಡಿಕೊಡುತ್ತದೆ. ಪ್ರತಿಭಾವಂತಳದ ಸುಮಾ ಬಡತನದ ಕಾರಣದಿಂದ ಶಾಲಾ ವಾರ್ಷಿಕೋತ್ಸವದಲ್ಲಿ ಡ್ಯಾನ್ಸ್ ಮಾಡುವುದರಿಂದ ವಂಚಿತಳಾದದ್ದು ಮಾತ್ರವಲ್ಲ. ಚಿನ್ನ ಕದ್ದಳೆಂಬ ಆರೋಪಕ್ಕೂ ಗುರಿಯಾಗುತ್ತಾಳೆ. ಈ ಕಥೆಯು ಸರೋಜಮ್ಮ ಹೆಣ್ಣಿನ ಕೆಟ್ಟ ಮನಸ್ಸಿಗೆ ಹಿಡಿದ ಕನ್ನಡಿಯಾಗಿದ್ದಾಳೆ.

ಸಭೆಯಲ್ಲಿ ಸರೋಜಮ್ಮನ ಕಟಕಿ ಮಾತುಗಳನ್ನು ಸಹಿಸಲಾಗದೆ ಸುಮಾ ಹಾಗೂ ಅವಳ ತಮ್ಮ, ತಂಗಿಯರು ಮನೆಗೆ ಮರಳುತ್ತಾರೆ. ಆ ಮೂಲಕ ಹಾಡುವ ಅವಕಾಶವೂ ತಪ್ಪಿ ಹೋಗುತ್ತದೆ. 'ಬಡತನ ಒಂದು ಶಾಪ' ಎನ್ನುವುದನ್ನು ಈ ಕಥೆ ಧ್ವನಿಸುತ್ತದೆ.

'ನೆಲೆ ತಪ್ಪಿದ ಹಕ್ಕಿ' ಕಥೆಯು ಶಿಕ್ಷಕಿಯೊಬ್ಬರ ಅನುಚಿತ ವರ್ತನೆ ವಿದ್ಯಾರ್ಥಿಗಳ ಭವಿಷ್ಯದ ನೆಲೆಯನ್ನು ತಪ್ಪಿಸುತ್ತದೆ ಎಂಬುದನ್ನು ನಿರೂಪಿಸುವ ಕಥೆಯಾಗಿದೆ. ತಂದೆಯ ಬಗೆಗಿದ್ದ ಸಂಶಯ ಮಗಳ ಕಡೆಗೂ ಹರಿದು ಶಾಂತ ಕಳ್ಳಿ ಎಂಬ ಕಾರಣಕ್ಕಾಗಿ ಶಿಕ್ಷಕಿ ಚೆನ್ನಾಗಿ ಹೊಡೆದದ್ದು ಆಕೆ ಶಾಲೆ ಬಿಡುವುದಕ್ಕೆ ಕಾರಣವಾಗುತ್ತದೆ.

ತೀರಾ ಬಡತನದಿಂದಾಗಿ ಶಾಂತಾ ಬೀಡಿ ಕಟ್ಟಲು ಪ್ರಾರಂಭಿಸುತ್ತಾಳೆ. ಇದನ್ನು ಕಂಡ ಶಿಕ್ಷಕಿಗೆ ಕರುಳು ತಿವಿದಂತಾಗುತ್ತದೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರೇ ಈ ರೀತಿ ದುಡುಕು ಸ್ವಭಾವ ತೋರಿಸಿದರೆ ಉಳಿದವರ

ಪಾಡೇನು? ಎಂಬ ಪ್ರಶ್ನೆಯನ್ನು ಈ ಕಥೆ ಎತ್ತುತ್ತದೆ. ದೇವರಾಗಬೇಕಾದ ಶಿಕ್ಷಕರು ಎಷ್ಟೋ ಬಾರಿ ಮಕ್ಕಳ ಪಾಲಿಗೆ ಯಮ ಆಗುತ್ತಾರೆ ಎನ್ನುವುದು ಈ ಕಥೆಯಿಂದ ಸ್ಪಷ್ಟವಾಗುತ್ತದೆ.

'ಕಲಿಯುಗದೊಳು' ಈ ಕಥೆಯಲ್ಲಿ ಮಾತೃದ್ರೋಹಿ ಮಗನೊಬ್ಬನ ಕಥೆಯಿದೆ. ಹೆಂಡತಿಯ ಪ್ರೀತಿಯ ಬಲೆಗೆ ಬಿದ್ದ ಮಗ ಹೆತ್ತ ತಾಯಿಯನ್ನೇ ದೂರಮಾಡಿದ ಎಂಬ ಚಿತ್ರಣ ಈ ಕಥೆಯಲ್ಲಿದೆ. ಬೇರೆಯವರ ಕಣ್ಣಿಗೆ ಒಳ್ಳೆಯವನಾಗಿ ಕಾಣುವ ವ್ಯಕ್ತಿ ತನ್ನ ಹೆತ್ತವರ ಪಾಲಿಗೆ ಕ್ರೂರಿಯಾಗುತ್ತಾನೆ ಎನ್ನುವುದು ಈ ಕಥೆಯಿಂದ ತಿಳಿಯುತ್ತದೆ.

ಗಂಗಾ ಪಾದೆಕಲ್‌ರವರ ಕಥೆಗಳಲ್ಲಿ ಎರಡು ಮಾದರಿಯ ಹೆಣ್ಣುಗಳು ಕಾಣಸಿಗುತ್ತಾರೆ. ಒಂದು ಸಾಂಪ್ರದಾಯಿಕ ನೆಲೆಯ ಗೃಹಿಣಿಯ ಪಾತ್ರಗಳು, ಎರಡನೆಯದು ಆಧುನಿಕ ಶಿಕ್ಷಣ ಪಡೆದು ಹೊರ ಜಗತ್ತಿಗೆ ತನ್ನನ್ನು ತೆರೆದುಕೊಂಡ ಹೆಣ್ಣಿನ ಪಾತ್ರಗಳು. ಈ ಎರಡು ಮಾದರಿಯ ಪಾತ್ರಗಳು ಪುರುಷ ಪ್ರಧಾನ ವ್ಯವಸ್ಥೆಯ ಒಪ್ಪಿತ ಮೌಲ್ಯಗಳಿಗೆ ಬದ್ಧವಾಗುವ ಹಾಗೆ ಗಂಗಾ ಬರೆದರು. ಹೀಗೆ ಬರೆಯಲು ಕಾರಣವಾದುದು ಒಂದು ಅವರ ಸಾಂಪ್ರದಾಯಿಕ ಚಿಂತನೆಯ ಮನೋಧರ್ಮ, ಇನ್ನೊಂದು ಆಧುನಿಕತೆ ಎಂದ ತಕ್ಷಣ ಹೊಸಿಲು ದಾಟಿದ ಹೆಣ್ಣು ಮಗಳು ಎಲ್ಲಾ ಅವಕಾಶಗಳನ್ನು ಸರಳವಾಗಿ, ಸಹಜವಾಗಿ ತನ್ನಿಂದ ತಾನೆ ಪಡೆಯುತ್ತಾಳೆ ಎನ್ನುವ ದೃಷ್ಟಿಕೋನ. ಉದ್ಯೋಗಸ್ಥ ಮಹಿಳೆ, ಗೃಹಿಣಿ, ವಿಧವೆಯರು, ಒಂಟಿ ಮಹಿಳೆಯರನ್ನು ಕಥೆಯ ಪಾತ್ರಗಳಾಗಿಸುತ್ತಾ ನೋಡುವ ಇವರಲ್ಲಿ ದೂರಗಾಮಿತ್ವದ ಚಿಂತನೆಗಳಿಗಿಂತ ಅವಾಸ್ತವದ ನೋಟಗಳೇ ಹೆಚ್ಚಾಗಿವೆ.

ಆದರ್ಶ ಮಹಿಳೆ ಎನ್ನುವ ಕಲ್ಪನೆ ಸಾಂಪ್ರದಾಯಿಕ ನೆಲೆಯ ಚಿಂತನೆಯಲ್ಲಿ ಸಾಗುತ್ತದೆಯೇ ಹೊರತು ಅದರ ಆಚೆಗೆ ನಿಲ್ಲುವುದಿಲ್ಲ. ಬದುಕಿನ ವಿವಿಧ ಹಂತಗಳಲ್ಲಿ ಅನ್ಯಾಯಕ್ಕೆ, ಶೋಷಣೆಗೆ ಒಳಗಾದ ಸ್ತ್ರೀ ಕೇಂದ್ರಿತ ಪಾತ್ರಗಳಾದರೂ ಆ ಶೋಷಣೆಯನ್ನು ಪ್ರತಿಭಟಿಸುವ ಧ್ವನಿಯಿಲ್ಲದೆ ಗಂಡಿನ ಧೋರಣೆಗೆ, ದರ್ಪಕ್ಕೆ ತಲೆಬಾಗುತ್ತವೆ. ಹೆಣ್ಣಿನ ಅಸಹಾಯಕತೆಯು ಕೂಡ ಕಥೆಗಳಲ್ಲಿ ನಿರೂಪಣೆಗೊಂಡರೂ ಅದನ್ನು ಪ್ರಕಟಪಡಿಸಲು ಆಗದೆ ಇರುವ ಸಂದರ್ಭದಲ್ಲಿ ಹೆಣ್ಣು ಮೌನಿಯಾಗುತ್ತಾ ತನ್ನತನವನ್ನು ತಾನು ಕಳೆದುಕೊಳ್ಳುವ ಚಿಂತನೆಗಳು ದಾಖಲುಗೊಳ್ಳುತ್ತವೆ.

ಮೇಲಿನ ಈ ಎರಡು ಪಾತ್ರಗಳು ಬದಲಾವಣೆಯನ್ನು ಸ್ವೀಕರಿಸುವ ಮನೋಧರ್ಮದವುಗಳಲ್ಲ. 'ಹೆಣ್ಣಿಗೆ ಹೆಣ್ಣೇ ಶತ್ರು' ಎನ್ನುವ ಪುರುಷನಿಷ್ಠ ಯೋಚನೆಯನ್ನು ಒಪ್ಪಿಕೊಳ್ಳುತ್ತವೆ.

'ಪುಲಪೇಡಿ'ಯಂತಹ ಕಥೆಯಲ್ಲಿ ಧರ್ಮದ ಆಚರಣೆಯ ಹಿನ್ನೆಲೆಯಲ್ಲಿ ಹೆಣ್ಣೊಬ್ಬಳ ವೈಯಕ್ತಿಕ ಬದುಕು ಮುಖ್ಯವಾಗುವಾಗ ಅಲ್ಲಿ ಅವಳ ಆಯ್ಕೆಗಳಿಗೆ ಯಾವುದೇ ಮಾನ್ಯತೆ ಇಲ್ಲದಿರುವುದು ಕಾಣಿಸುತ್ತದೆ. ಪುಲಪೇಡಿಯಂತಹ ಒಂದು ಧಾರ್ಮಿಕ ಆಚರಣೆಯಲ್ಲಿ ಮೇಲ್ವರ್ಗದ ಮಹಿಳೆಯ ಮನಸ್ಸಿನ ಒಳತೋಟಿಗಳನ್ನು ನಿರೂಪಿಸಿದ್ದಾರೆ. ಮೇಲ್ವರ್ಗದ ಸ್ತ್ರೀಯೊಬ್ಬಳನ್ನು ಕೆಳವರ್ಗದ ಪುರುಷನೊಬ್ಬ ಬಳಸಿಕೊಳ್ಳುವ ಆಚರಣೆಯನ್ನು ವಿಶ್ಲೇಷಿಸುತ್ತಲೇ ಸ್ತ್ರೀ ಪರ ವಾದ ನಿಲುವು ಗೋಚರಿಸಲು ಸಾಧ್ಯವಾಗುವುದಿಲ್ಲ. ಇಲ್ಲಿ ಮೇಲ್ವರ್ಗದ ಸ್ತ್ರೀಯೊಬ್ಬಳ ಒಳತೋಟಿಯ ಸ್ವರೂಪ ಸಾಂಪ್ರದಾಯಿಕ ಚೌಕಟ್ಟನ್ನು ದಾಟಲಾಗದಂತಹದ್ದಾಗಿದೆ. ಈ ಕಥೆ ಯಾಕೆ ಮುಖ್ಯವಾಗುತ್ತದೆಯೆಂದರೆ ಮೇಲ್ವರ್ಗದ ಹೆಣ್ಣು ಮಗಳೊಬ್ಬಳಿಗೆ ಸಮಾಜದ ಕೆಳವರ್ಗದ ಪುರುಷನೊಬ್ಬನ ಪ್ರೀತಿ ಸಿಗುವಾಗಲೂ ಆಕೆಗೆ ಅದರಲ್ಲಿ ಅವಳದ್ದೇ ಆದ ಮಿತಿ ಇರುತ್ತದೆ.

ವಿಧವೆಯರ, ಪರಿತ್ಯಕ್ತೆಯರ, ಒಂಟಿ ಮಹಿಳೆಯರ ತಲ್ಲಣಗಳು ಕಥೆಗಳಲ್ಲಿ ಬೇರೆ ಬೇರೆ ಸ್ವರೂಪಗಳಲ್ಲಿ ಕಾಣಿಸಿಕೊಂಡರೂ ಬದುಕಿಗೆ ಮುಖಾಮುಖಿಯಾಗುವ ರೀತಿಯಲ್ಲಿಯೇ ಸಂಘರ್ಷಗಳಿಲ್ಲದೆ ಪರಿಹಾರದ ದಾರಿಯನ್ನು ಕಂಡುಕೊಳ್ಳುತ್ತವೆ.

ಲೇಖಕಿಯ ಬರಹದ ತಾತ್ವಿಕತೆಯನ್ನು ವಿಶ್ಲೇಷಿಸುವುದಾದರೆ, ಆಧುನಿಕ ಜಗತ್ತಿಗೆ ತೆರೆದುಕೊಂಡ ಕಾಲದಲ್ಲಿ ಬದುಕಿದ್ದರೂ ಸ್ತ್ರೀಯರ ಬಗೆಗಿನ ಸಾಂಪ್ರದಾಯಿಕ ದೃಷ್ಟಿಕೋನ ಬದಲಾಗದೇ ಇರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಸ್ತ್ರೀ ಕೇಂದ್ರಿತವಾಗಿ ಬರೆಯುವುದರ ಮೂಲಕವೇ ಸ್ತ್ರೀಯರ ಬದುಕಿನ ಸಮಸ್ಯೆಗಳನ್ನು ತೆರೆದಿಡುತ್ತಾರೆ. ಪಾತ್ರಗಳಲ್ಲಿ ವೈವಿಧ್ಯತೆ ಇದ್ದರೂ ಈ ಧೋರಣೆಯ ಕಥೆಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬರೆದ ಗಂಗಾ ಪಾದೇಕಲ್‌ರವರು ತಮ್ಮ ಧೋರಣೆಯನ್ನು ಸಮಸ್ಯೆಗಳ ವಿಶ್ಲೇಷಣೆ ಮಾಡುವತ್ತ ಪ್ರಕಟಗೊಳಿಸುತ್ತಾರೆ.

ಪ್ರೇಮಾಭಟ್‌ರವರ,

ಬಳ್ಳಿಗೊಂದು ಆಸರೆ (ಕಥಾವರ್ಷ, ೨೦೦೭)

ಮುಳ್ಳುಗಳು (ಕಥಾವರ್ಷ, ೨೦೦೭)

ಒಂದು ಮುಸ್ಸಂಜೆ (ಕಥಾವರ್ಷ, ೨೦೦೭)

ಬಾಡಿಗೆ ಮನೆ (ಕಥಾವರ್ಷ, ೨೦೦೭)

ಕಳೆದು ಹೋದವಳು (ಕಥಾವರ್ಷ, ೨೦೦೭)

ದೆಹಲಿಯಲ್ಲಿ ಒಂದು ಸಂಜೆ (ಕಥಾವರ್ಷ, ೨೦೦೭)

ಹುಟ್ಟು ಸಾವಿನ ನಡುವಿನ ಬದುಕು (ಕಥಾವರ್ಷ, ೨೦೦೭)

ಅಕ್ಕಯ್ಯ (ಕಥಾವರ್ಷ, ೨೦೦೭)

ಅನುಭವಕ್ಕೊಂದು ಕೊಂಡಿ (ಕಥಾವರ್ಷ, ೨೦೦೭)

ಸಂದಾಯ (ಕಥಾವರ್ಷ, ೨೦೦೭)

ಏಕಾಕಿ (ಕಥಾವರ್ಷ, ೨೦೦೭)

ಮಹಾಪಾತ್ರ (ಕಥಾವರ್ಷ, ೨೦೦೭)

ಗೊಂಟಿ (ಕಥಾವರ್ಷ, ೨೦೦೭)

ತೇರು ಬಂತು ತವರಿಗೆ (ಕಥಾವರ್ಷ, ೨೦೦೭)

ಅಮ್ಮನಿಲ್ಲದ ತೌರು (ಕಥಾವರ್ಷ, ೨೦೦೭)

ತಿಮಿಂಗಿಲ (ಕಥಾವರ್ಷ, ೨೦೦೭)

ಉಯ್ಯಾಲೆ (ಕಥಾವರ್ಷ, ೨೦೦೭)

ಮೇಡಂ (ಕಥಾವರ್ಷ, ೨೦೦೭)

ಅತಂತ್ರರು (ಕಥಾವರ್ಷ, ೨೦೦೭)

'ಬಳ್ಳಿಗೊಂದು ಆಸರೆ' ಕಥೆಯು ಎಲ್ಲೋ ತೊಟ್ಟಿಯಲ್ಲಿ ಸಿಕ್ಕಿದ ಮಗುವಿಗೆ ಆಸರೆಯಾದ ಹೆಣ್ಣೊಬ್ಬಳ ಕಥೆಯಾಗಿದೆ. ಮಕ್ಕಳಿಲ್ಲದ ಶ್ಯಾಮರಾಯ-ಸುಭದ್ರ ದಂಪತಿಗಳಿಗೆ ಸಿಕ್ಕಿದ ಮಗುವನ್ನು ಬೆಳೆಸುವುದೇ ಕಷ್ಟವಾಗುತ್ತಿತ್ತು. ಶ್ಯಾಮರಾಯರು ತೀರಿ ಸುಭದ್ರ ಹಾಗೂ ಮಗು ಇಬ್ಬರೇ ಆ ಮನೆಯಲ್ಲಿ ಉಳಿಯುವಂತಾಯಿತು.

ತನಗೆ ಕೆಲಸಕೊಟ್ಟ ಮನೆಯಾಕೆ ರಾಣಿ ಮುಂದೊಂದು ದಿನ ಮಗು ಹಾಗೂ ಸುಭದ್ರೆಗೆ ಆಸರೆ ನೀಡುತ್ತಾಳೆ. ಈ ಮಧ್ಯೆ ಆಗಾಗ ಕೆಲಸದ ಮನೆಗಳನ್ನು ಬದಲಾಯಿಸುತ್ತಾ ಹೋಗುವ ಸುಭದ್ರೆಗೆ ಪ್ರತಿಯೊಬ್ಬರಲ್ಲೂ ಒಂದೊಂದು ದೋಷ ಕಾಣುತ್ತದೆ. ಪ್ರಾಯಶಃ ಬಾಳಸಂಗಾತಿಯನ್ನು ಕಳೆದುಕೊಂಡು ಒಬ್ಬಂಟಿಯಾಗಿ ಉಳಿದ ಹೆಣ್ಣಿಗೆ ಸಹಜವಾಗಿ ಕಾಡುವ ಅಭದ್ರತೆ, ಭಯ, ಆತಂಕಗಳು ಇಲ್ಲೂ ಇವೆ.

'ಮುಳ್ಳುಗಳು' ಕಥೆಯು ಪ್ರೀತಿಸಿದವಳನ್ನು ಮದುವೆಯಾಗುವುದಕ್ಕಾಗದೆ ವ್ಯಥೆಪಟ್ಟ ಪೇದ್ರುವಿನ ಕಥೆಯನ್ನು ಹೇಳುತ್ತದೆ. ಪೇದ್ರು ರುಕ್ಕುವನ್ನು ಪ್ರೀತಿಸುತ್ತಿದ್ದರೂ ಆಕೆ ಮೇಲ್ವರ್ಗದವಳು ಎನ್ನುವ ಕಾರಣಕ್ಕಾಗಿ ಅವಳನ್ನು

ಮದುವೆಯಾಗುವುದಕ್ಕೆ ಆಗುವುದಿಲ್ಲ. ರುಕ್ಕುವಿಗೆ ಅವಳ ತಂದೆ ಬೇರೆ ಮದುವೆ ಮಾಡಿಸುತ್ತಾರೆ, ಪೇದ್ರುವೂ ಬೇರೆ ಹೆಣ್ಣನ್ನು ಮದುವೆಯಾದರೂ ಸಾಂಸಾರಿಕ ಸುಖವನ್ನು ಕಾಣುವುದಿಲ್ಲ.

ಸಮಾಜದಲ್ಲಿ ಮುಳ್ಳುಗಳನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬರುವ ಪೇದ್ರುವಿನ ಮನಸ್ಸಿನ ದುರ್ಬಲತೆಯೇ ಇದಕ್ಕೆ ಕಾರಣ ಎನ್ನುತ್ತಾನೆ. ಮನೋದೌರ್ಬಲ್ಯವನ್ನು ಮೀರದ ಹೊರತು ಸಮಾಜದ ಮುಳ್ಳುಗಳನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲ ಎಂಬ ಸತ್ಯ ಈ ಕಥೆಯಲ್ಲಿದೆ.

'ಒಂದು ಮುಸ್ಸಂಜೆ' ಕಥೆಯು ಹೆಣ್ಣಿನ ಮನಸ್ಸಿನ ತಳಮಳವನ್ನು ಬಿಡಿಸಿಡುವ ಕಥೆಯಾಗಿದೆ. 'ದೂರದ ಬೆಟ್ಟ ನುಣ್ಣಗೆ' ಎನ್ನುವಂತೆ ವೃದ್ಧ ದಂಪತಿಗಳನ್ನು ನೋಡಿ ಅವರೆಷ್ಟು ಸುಖಿಗಳು, ತನಗೆ ಆ ಸುಖವಿಲ್ಲ ಎಂದು ಭಾವಿಸಿದ್ದ ಮಂಜುಳಾ ಬದುಕಿನ ಅರ್ಥಗಳನ್ನು ಬಗೆಯುವುದಕ್ಕೆ ಮುಂದಾಗುತ್ತಾಳೆ. 'ಅನಾಯಾಸೇನ ಮರಣಂ ಕೊಡು' (ಕಥಾವರ್ಷ, ಪು. ೨೭, ೨೦೦೭) ಎಂದು ದಿನಾಲೂ ಶಾರದಾಂಬೆಯ ಎದುರಿನಲ್ಲಿ ಬೇಡಿಕೊಳ್ಳುತ್ತಿದ್ದ ಡಾ। ಸರ್ವಮಂಗಳಾರನ್ನು ನೋಡಿದಾಗೆಲ್ಲ ಇಷ್ಟೊಂದು ಸುಖ ಸಂಪತ್ತಿನಲ್ಲಿ ಇರುವವರು ಹೀಗೇಕೆ ಕೇಳಿಕೊಳ್ಳುತ್ತಾರೆ, ತನ್ನ ಕಷ್ಟದ ಎದುರು ಇವರದೇನು? ಎಂದು ಭಾವಿಸುತ್ತಿದ್ದ ಮಂಜುಳಾಗೆ ನಿಜ ವಿಷಯ ತಿಳಿದಾಗ ಎಲ್ಲವೂ ಅರ್ಥವಾಗುತ್ತದೆ. ಕೇವಲ ಹಣವೇ ಶ್ರೀಮಂತಿಕೆಯಲ್ಲ ಎಂಬ ಸತ್ಯವನ್ನು ಮಂಜುಳಾ ಅರ್ಥಮಾಡಿಕೊಳ್ಳುತ್ತಾಳೆ.

'ಬಾಡಿಗೆ ಮನೆ' ಕಥೆಯು ಪುರುಷನೊಬ್ಬನ ಕಾಮುಕ ದೃಷ್ಟಿಯಿಂದ ತಪ್ಪಿಸಿ ಕೊಳ್ಳುವುದಕ್ಕಾಗಿ ಚಡಪಡಿಸುವ ಹೆಣ್ಣಿನ ಕಥೆಯಾಗಿದೆ. ತಂದೆ-ತಾಯಿಯರನ್ನು ಕಳೆದುಕೊಂಡು ಇಬ್ಬರು ಚಿಕ್ಕ ತಮ್ಮಂದಿರೊಂದಿಗೆ ಕೆಲಸಕ್ಕಾಗಿ ಬೆಂಗಳೂರಿಗೆ ಬಂದ ವೇದಾ, ತನ್ನ ಚಿಕ್ಕಪ್ಪನ ಸಹಾಯದಿಂದ ಬಾಡಿಗೆ ಮನೆಯೊಂದನ್ನು ಪಡೆಯುತ್ತಾಳೆ. ಆದರೆ ಮನೆ ಮಾಲೀಕನ ಕಾಮಭಿಕ್ಷೆಯನ್ನು ಸ್ವೀಕರಿಸಲಾಗದೆ ಬೇರೆ ಮನೆ ಹುಡುಕುವುದಕ್ಕಾಗಿ ಪರಿತಪಿಸುತ್ತಾಳೆ. ಕೊನೆಗೆ ತನ್ನ ಗೆಳತಿಯೊಬ್ಬಳ ಸಹಾಯದಿಂದ ಬೇರೆ ಮನೆಗೆ ಹೋಗುತ್ತಾಳೆ.

ಹೆಣ್ಣೊಬ್ಬಳು ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಈ ಸಮಾಜ ಎಷ್ಟೊಂದು ಅಡ್ಡಿಯನ್ನುಂಟುಮಾಡುತ್ತದೆ ಎಂಬ ಚಿತ್ರಣ ಇಲ್ಲಿದೆ. ಹೆಣ್ಣನ್ನು ಕೇವಲ ಭೋಗದ ವಸ್ತುವಾಗಿಯೇ ಕಾಣುವ ಈ ಸಮಾಜದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನಡೆಸುವ ಹೋರಾಟದ ಚಿತ್ರಣ ಈ ಕಥೆಯಲ್ಲಿದೆ.

'ಕಳೆದುಹೋದವಳು' ಕಥೆಯು ಹುಟ್ಟಿದ ಮಗಳೇ ತಾಯಿಯನ್ನು ಮರೆತುಬಿಟ್ಟ ಪ್ರಸಂಗವನ್ನು ಚಿತ್ರಿಸುತ್ತದೆ. ಗಂಡನನ್ನು ಕಳೆದುಕೊಂಡ ಮಾರಿಯಮ್ಮಳ ಒಬ್ಬಳೇ ಮಗಳು ಚೆಲುವಿ ಹೆಸರಿಗೆ ತಕ್ಕಂತೆ ಇದ್ದಳು. ಬಹಳ ಕಷ್ಟದಿಂದ ಆಕೆಯನ್ನು ಓದಿಸಿದರೂ ಸಿನಿಮಾದಲ್ಲಿ ನಟಿಸುವುದಕ್ಕೆ ಅವಕಾಶ ಸಿಕ್ಕಿ ಮನೆಯಿಂದ ಹೋದವಳು ತಿರುಗಿ ಬರುವುದೇ

ಇಲ್ಲ. ಒಂಟಿಯಾಗಿ ಬದುಕು ಕಳೆಯಲು ಆಗದ ಮಾರಿಯಮ್ಮ ನಿರ್ಗತಿಕ ಬಾಲಕ ಶಿವನನ್ನು ತಂದು ಸಾಕುತ್ತಾಳೆ. ನಾಯಿಮರಿ ಬೇಕು ಎನ್ನುವ ನೆಪವೊಡ್ಡಿ ಈಕೆಯ ಬಳಿ ಇದ್ದ ದುಡ್ಡನ್ನೆಲ್ಲಾ ಅಪಹರಿಸಿ ಮನೆಬಿಟ್ಟು ಹೋಗುತ್ತಾನೆ.

ಇತ್ತ ಸ್ವಂತ ಮಗಳೂ ತನ್ನನ್ನು ಮರೆತುಬಿಡುತ್ತಾಳೆ, ಅತ್ತ ಸಾಕಿದ ಮಗನೂ ಮೋಸ ಮಾಡುತ್ತಾನೆ. ಜವಾಬ್ದಾರಿಯುತ ಮಕ್ಕಳನ್ನು ನಿರ್ಮಾಣ ಮಾಡುವಲ್ಲಿ ಸಮಾಜ ಸೋಲುತ್ತಿದೆ ಎಂಬ ಸತ್ಯವನ್ನು ಈ ಕಥೆ ನಿರೂಪಿಸುತ್ತದೆ.

'ದೆಹಲಿಯಲ್ಲಿ ಒಂದು ಸಂಜೆ' ಕಥೆಯು ಗಂಡನಾದವನ ತಪ್ಪನ್ನು ಹೆಂಡತಿಯಾದವಳು ಪ್ರಶ್ನಿಸುವ ಹಾಗಿಲ್ಲ ಎನ್ನುವ ಪುರುಷ ಪ್ರಧಾನ ವ್ಯವಸ್ಥೆಯನ್ನು ಚಿತ್ರಿಸುತ್ತದೆ. ಗಂಡನ ಅನೈತಿಕ ವ್ಯವಹಾರವನ್ನು ತಿಳಿದೂ ಕಣ್ಣುಮುಚ್ಚಿ ಸಹಿಸಿಕೊಳ್ಳುವ ಹೆಣ್ಣು 'ಪತಿವ್ರತೆ' ಎನಿಸಿಕೊಳ್ಳುತ್ತಾಳೆ. ಗಂಡನ ತಪ್ಪನ್ನು ಪ್ರಶ್ನಿಸುವ ಹೆಣ್ಣು 'ಬಜಾರಿ'ಯೆನಿಸಿಕೊಳ್ಳುತ್ತಾಳೆ ಎಂಬ ಪುರುಷ ಪ್ರಧಾನ ನಿಲುವನ್ನು ಈ ಕಥೆ ನಿರೂಪಿಸುತ್ತದೆ.

'ಹುಟ್ಟು ಸಾವಿನ ನಡುವಿನ ಬದುಕು' ಕಥೆಯಲ್ಲಿ ಹುಟ್ಟು ಸಾವುಗಳ ನಡುವಿನ ಹೆಣ್ಣಿನ ಆತಂಕವನ್ನು ಚಿತ್ರಿಸಲಾಗಿದೆ. ತನ್ನ ಗಂಡ ಉದ್ಯೋಗ ನಿಮಿತ್ತ ಹೋದಾಗ ವಯಸ್ಸಾದ ಮಾವನ ಆರೈಕೆ ಮಾಡುತ್ತಾ ಗರ್ಭಿಣಿ ದಿನಕಳೆಯುತ್ತಿರುತ್ತಾಳೆ. ತನ್ನ ಹೊಟ್ಟೆಯಿಂದ ಮಗು ಹೊರಬರುವುದಕ್ಕೂ, ಮಾವನ ಪ್ರಾಣಪಕ್ಷಿ ಹಾರಿಹೋಗುವುದಕ್ಕೂ ಸಮವಾಗುತ್ತದೆ. ತನ್ನ ಮಗುವನ್ನು ಮಾವನಿಗೆ ತೋರಿಸಬೇಕು ಎಂದು ಕಾತರಪಡುತ್ತಿದ್ದ ನೀತುವಿಗೆ ಅದು ಸಾಧ್ಯವಾಗದೇ ಹೋಗುತ್ತದೆ. ತನ್ನವರೆಂಬುವವರು ಯಾರೂ ಇಲ್ಲದ ಹೊತ್ತಲ್ಲಿ ಎರಡೂ ರೀತಿಯ ವೇದನೆಗಳ ಮಧ್ಯೆ ತೊಳಲಾಡುವ ಹೆಣ್ಣಿನ ಅಸಹಾಯಕ ಸ್ಥಿತಿ ಇಲ್ಲಿ ನಿರೂಪಿತವಾಗಿದೆ. ಹುಟ್ಟು ಸಾವು ಎರಡೂ ನಾವು ಎಣಿಸಿದಂತಿಲ್ಲ ಎಂಬ ಸತ್ಯವನ್ನು ಈ ಕಥೆ ಹೃದಯಂಗಮವಾಗಿ ಚಿತ್ರಿಸಿದೆ.

'ಅಕ್ಕಯ್ಯ' ಕಥೆಯಲ್ಲಿ ತುಂಬು ಬದುಕನ್ನು ಕಂಡ ಹೆಣ್ಣೊಬ್ಬಳ ಬದುಕಿನ ಪುಟಗಳು ಎಳೆಎಳೆಯಾಗಿ ತೆರೆದುಕೊಳ್ಳುತ್ತವೆ. ಅಕ್ಕಯ್ಯನು ತನ್ನ ಕಾಲದ ಪರಿಸ್ಥಿತಿಯನ್ನು ವಿವರಿಸುವುದರೊಂದಿಗೆ ಆಧುನಿಕ ಜಗತ್ತಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾಳೆ. ಆಗಿನ ಕಾಲದ ಹೆಣ್ಣು ಮಕ್ಕಳ ನಿಯತ್ತು, ನಂಬಿಕೆ, ಜವಾಬ್ದಾರಿ, ಅವಿರತ ಶ್ರಮ ಇವೆಲ್ಲ ಈಗಿನವರಿಗಿಲ್ಲ ಎಂಬ ನಿಲುವು ಕಥೆಯಲ್ಲಿ ವ್ಯಕ್ತವಾಗುತ್ತದೆ. ಪುರುಷ ಪ್ರಧಾನ ಸಮಾಜದ ರೀತಿ ನೀತಿಗಳನ್ನೇ ಒಪ್ಪುವ ಅಕ್ಕಯ್ಯ 'ದೇಶಕ್ಕೆ ಬಂದ ಸ್ವಾತಂತ್ರ ಬದುಕನ್ನು ಕೆಡಿಸಿಬಿಟ್ಟಿದೆ. ವ್ಯಕ್ತಿವ್ಯಕ್ತಿಗಳೂ ಸ್ವಾತಂತ್ರಕ್ಕಾಗಿ ಚಡಪಡಿಸುತ್ತ ಬದುಕಿಗೆ ಬೆಲೆ ಕೊಡದೆ ಹೋಗುತ್ತಿದ್ದಾರೆ' (ಕಥಾವರ್ಷ ಪು. ೮೨, ೨೦೦೭) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾಳೆ.

'ಅನುಭವಕ್ಕೊಂದು ಕೊಂಡಿ' ಕಥೆಯಲ್ಲಿ ತನ್ನ ತಾಯಿಯೇ ಕಥಾ ನಿರೂಪಕರಿಗೆ ಪ್ರೇರಣೆ ಎಂಬ ಚಿತ್ರಣವಿದೆ. ಎಲ್ಲಾ ಕಷ್ಟಗಳನ್ನು ಹೊತ್ತ ತಾಯಿ ಮಕ್ಕಳನ್ನು ಕರೆದುಕೊಂಡು ಗಂಡನ ಜೊತೆ ಬದುಕಲು ಬೆಂಗಳೂರಿಗೆ ಹೋಗುತ್ತಾಳೆ. ಸದಾ ಸಿಡುಕುವ ಗಂಡನೊಂದಿಗೆ ಮಕ್ಕಳ ವಿದ್ಯಾಭ್ಯಾಸದ ಹೊಣೆ ಹೊತ್ತ ತಾಯಿ ಎಂದೂ ಮಕ್ಕಳೊಡನೆ ಅಪ್ಪನನ್ನು ಬೈದು ಮಾತನಾಡುತ್ತಿರಲಿಲ್ಲ. ಗಂಡ ಸತ್ತ ಮೇಲೆ ತನ್ನೂರಿಗೆ ಮರಳಿ ಮತ್ತೆ ಬದುಕು ಮುಂದುವರಿಸಿದ ತಾಯಿಯ ಕಷ್ಟ ಕಾರ್ಪಣ್ಯಗಳೆಲ್ಲವೂ ಮಕ್ಕಳಿಗೆ ಅರ್ಥವಾದದ್ದು ತಾಯಿ ತೀರಿಕೊಂಡ ಮೇಲೆಯೇ.

ಕಥೆಯ ಕೊನೆಯಲ್ಲಿ ನಿರೂಪಕರು ಹೇಳುವ, 'ಮುಂದೆ ಇವೆಲ್ಲ ನಾನು ಕಥೆಗಾರನಾಗಲು ಪ್ರೇರಕ ಶಕ್ತಿಯಾಗುತ್ತವೆಂದು ನಾನಾಗ ಅಂದು ಕೊಂಡಿರಲಿಲ್ಲ, ನನ್ನ ಅನುಭವಕ್ಕೊಂದು ಕೊಂಡಿಯಾಗಿ ನಿಂತು ಅಮ್ಮ ಈ ಕಥೆ ಬರೆಸಿರಬಹುದೇ' (ಕಥಾವರ್ಷ, ಪು. ೯೩, ೨೦೦೭) ಎಂಬ ಮಾತು, ಬರವಣಿಗೆಗೆ ಪ್ರೇರಣೆಯಾದದ್ದು ನೋವೇ ಹೊರತು ನಲಿವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

'ಸಂದಾಯ' ಕಥೆಯು ಹೆಣ್ಣಿನ ಒಳ್ಳೆಯತನವನ್ನು ಎತ್ತಿ ಹಿಡಿಯುವ ಕಥೆಯಾಗಿದೆ. ಬಸ್ಸಿನಲ್ಲಿ ಸಿಕ್ಕಿದ ಮಾಂಗಲ್ಯವನ್ನು ಗಂಡ ತಂದು ಹೆಂಡತಿಯ ಕೈಗೆ ನೀಡಿದಾಗ ಆಕೆ ತನಗಾಯಿತು ಎಂದು ಇಟ್ಟುಕೊಳ್ಳದೆ ತಾನು ನಡೆಸುತ್ತಿದ್ದ ಸಾಮೂಹಿಕ ವಿವಾಹಕ್ಕಾಗಿ ಬಳಸಿಕೊಳ್ಳುತ್ತಾಳೆ.

ಸ್ವಾರ್ಥಿಗಳೇ ತುಂಬಿರುವ ಈ ಸಮಾಜದಲ್ಲಿ ಇಂಥ ನಿಷ್ಕಲ್ಮಷ ಮನಸ್ಸಿನ ಹೆಣ್ಣು ಮಕ್ಕಳೂ ಇರುತ್ತಾರೆ ಎನ್ನುವುದನ್ನು ಈ ಕಥೆ ನಿರೂಪಿಸುತ್ತದೆ.

'ಏಕಾಕಿ' ಕಥೆಯು ಅಪ್ಪ-ಅಮ್ಮರ ನಡುವಿನ ಮೌನದ ಕಾರಣವನ್ನು ಹುಡುಕುತ್ತಾ ಹೋಗುವ ಮಗನ ಪರಿಸ್ಥಿತಿಯನ್ನು ವಿವರಿಸುತ್ತದೆ. ಅಪ್ಪ ತೀರಿದ ಮೇಲೆ ತಾಯಿಯೊಂದಿಗೆ ವಿಶ್ವ ಈ ಮೌನದ ಕಾರಣವನ್ನುಕೇಳುತ್ತಾನೆ. ಬೇರೊಬ್ಬ ಹೆಂಗಸಿನೊಂದಿಗೆ ಸಂಬಂಧವಿಟ್ಟುಕೊಂಡ ಅಪ್ಪನನ್ನು ಪ್ರಶ್ನಿಸಲಾಗದೆ ಮೌನವಾಗಿಯೇ ತಾಯಿ ಬದುಕು ದೂಡುತ್ತಿದ್ದಳು. ತಾನು ಆ ಗಂಗವ್ವನ ಮಗ ಎಂಬುದು ವಿಶ್ವನಿಗೆ ಖಾತ್ರಿಯಾದಾಗ ಆಕೆಯನ್ನು ನೋಡಿ ಮಾತನಾಡಿಸುವುದಕ್ಕಾಗಿ ಹೋಗುತ್ತಾನೆ. ಆದರೆ ಆಗಲೇ ಆಕೆ ಸಾವನ್ನಪ್ಪಿರುತ್ತಾಳೆ. ಅತ್ತ ಹೆತ್ತ ತಾಯಿಯ ಪ್ರೀತಿಯನ್ನು ಕಾಣದೇ ಇತ್ತ ಈ ತಾಯಿಯ ಪ್ರೀತಿಯೂ ಸಿಗದೆ ಕೊನೆಗೂ ವಿಶ್ವ ಏಕಾಕಿಯಾಗಿ ಉಳಿಯುತ್ತಾನೆ.

'ಮಹಾಪಾತ್ರ' ಕಥೆಯಲ್ಲಿ ಪುರಾಣ ಹಾಗೂ ವರ್ತಮಾನಗಳ ನಡುವೆ ಹೆಣ್ಣಿನ ಪಾತ್ರವೊಂದರ ಬೆಸೆಯುವಿಕೆಯ ಚಿತ್ರಣವಿದೆ. ಐವರು ಮಕ್ಕಳನ್ನು ಪಡೆದ ಕುಂತಿಗೆ ತಾನು ಮೊದಲ ಬಾರಿಗೆ ಪಡೆದ ಕರ್ಣನ ನೆನಪಾಗುತ್ತದೆ. ತಾಯಿಯ ಜವಾಬ್ದಾರಿಯನ್ನು ತಾನು ಸಂಪೂರ್ಣ ನಿಭಾಯಿಸಿಲ್ಲ ಎಂಬ ಅಪರಾಧಿ ಭಾವ ಕಾಡುತ್ತದೆ.

ಈ ಕಥೆಯಲ್ಲಿ ಕುಂತಿ ಕೇವಲ ಪುರಾಣದ ಒಂದು ಪಾತ್ರವಾಗಿ ಕಾಣದೆ ವರ್ತಮಾನದ ಹೆಣ್ಣುಗಳ ನಡುವೆ ಸೇರಿ ಹೋಗುತ್ತಾಳೆ.

'ಗೊಂಬೆ' ಕಥೆಯು ನಿರ್ಜೀವ ಗೊಂಬೆಯೊಂದರ ಆಸೆಯಿಂದ ಸಜೀವ ಗೊಂಬೆಯನ್ನು ಕಳೆದುಕೊಂಡ ತಾಯಿಯೊಬ್ಬಳ ದುರಂತ ಸ್ಥಿತಿಯನ್ನು ಹೇಳುತ್ತದೆ. ಬೇರೆ ಹೆಣ್ಣು ಮಕ್ಕಳ ಮನ ನೋಯಿಸುವುದರಲ್ಲೇ ಖುಷಿ ಕಾಣುತ್ತಿದ್ದ ಸರಸ್ವತಿ ಹೊಟ್ಟೆಕಿಚ್ಚಿನ ಗೂಡಾಗಿದ್ದಳು. ಬೇರೆಯವರ ಮನೆಯಲ್ಲಿ ನೋಡಿದ್ದ ಗೊಂಬೆಯನ್ನು ತನ್ನ ಮನೆಗೂ ತರುವುದಕ್ಕಾಗಿ ಮಗ ಮುಕುಂದನೊಂದಿಗೆ ಹೋಗಿದ್ದಳು ಸರಸ್ವತಿ. ಮಳೆಯಲ್ಲಿ ನೆನೆದು ಜ್ವರ ಹಿಡಿಸಿಕೊಂಡ ಮುಕುಂದ ಇಹಲೋಕ ತ್ಯಜಿಸುತ್ತಾನೆ. ಜೀವಂತ ಗೊಂಬೆಯಾಗಿದ್ದ ಮುಕುಂದನನ್ನು ಕಳೆದುಕೊಂಡ ಸರಸ್ವತಿ ನಿರ್ಜೀವ ಗೊಂಬೆಯೊಂದಿಗೆ ಬದುಕುವಂತಾಯ್ತು. ಈ ಗೊಂಬೆಯ, ಅವಳಿಗೆ ಬದುಕಿನ ಅರ್ಥವನ್ನು ತಿಳಿಸುತ್ತದೆ.

'ತೇರು ಬಂತು ತೌರಿಗೆ' ಕಥೆಯು ದುಃಖದಿಂದ ಊರಿನ ತೇರನ್ನು ನಿರೀಕ್ಷಿಸುವ ಹೆಣ್ಣೊಬ್ಬಳ ಚಿತ್ರಣವನ್ನು ನೀಡುತ್ತದೆ. ಬೇಜವಾಬ್ದಾರಿ ಗಂಡನಿಂದಾಗಿ ತವರಿಗೆ ಬಂದ ಸುಮತಿ ಕೆಲವೇ ದಿನಗಳಲ್ಲಿ ಬರುವ ತೇರಿನಲ್ಲಿ ಪಾಲ್ಗೊಳ್ಳುವ ಬಯಕೆ ಇದ್ದರೂ ಹೋಗುವ ಸ್ಥಿತಿಯಲ್ಲಿಲ್ಲ. ಎಲ್ಲಾ ರೀತಿಯ ಅನುಕೂಲಗಳಿರುವ ತನ್ನ ತಂಗಿ ಪಾರ್ವತಿಯ ಬದುಕಿಗೂ, ತನ್ನ ಬದುಕಿಗೂ ಎಷ್ಟೊಂದು ವ್ಯತ್ಯಾಸ? ಎಂದು ಕೊಳ್ಳುತ್ತಾಳೆ. ತಂಗಿ ಹೊಸ ಸೀರೆ ಕೊಟ್ಟರೂ ಅದನ್ನು ಸ್ವೀಕರಿಸುವ ಸ್ಥಿತಿ ಸುಮತಿಯಲ್ಲಿರಲಿಲ್ಲ. ತೇರಿಗಾಗಿ ಬರುವ ನೆಂಟರಿಷ್ಟರಿಗೆಲ್ಲ ತನ್ನ ಪರಿಸ್ಥಿತಿ ತಿಳಿಯುತ್ತದಲ್ಲ ಎಂಬ ಆತಂಕ ಒಂದು ಕಡೆಯಾದರೆ, ನಡುನಡುವೆ ಮಗ ಮುರಳಿ ಎತ್ತುವ ಪ್ರಶ್ನೆಗಳು ಇನ್ನೊಂದೆಡೆ. ಇವೆಲ್ಲವುಗಳಿಂದ ಬೇಸರಗೊಂಡ ಸುಮತಿ ಹೆತ್ತ ಮನೆಗೂ ತಾನು ಹೊರೆಯಾಗಿ ಬದುಕಬೇಕಾಯಿತಲ್ಲ ಎಂದು ವ್ಯಥೆ ಪಡುತ್ತಾಳೆ. ಆದರೆ ತೇರಿನ ದಿನ ಮುಂಜಾನೆ ಗಂಡ ದಿಢೀರ್ ಪ್ರತ್ಯಕ್ಷವಾದಾಗ ತನ್ನನ್ನೇ ತಾನು ನಂಬಲಾರದ ಸ್ಥಿತಿಗೆ ಹೋಗುತ್ತಾಳೆ ಸುಮತಿ. ಹೆಣ್ಣಿನ ಮನಸ್ಸಿನ ಒಳಸೂಕ್ಷ್ಮಗಳು ಈ ಕಥೆಯಲ್ಲಿ ಮನಮುಟ್ಟುವಂತೆ ಚಿತ್ರಿತವಾಗಿವೆ.

'ಅಮ್ಮನಿಲ್ಲದ ತೌರು' ಕಥೆಯಲ್ಲಿ ಕಳೆದುಕೊಂಡ ತಾಯಿಯನ್ನು ನೆನಪು ಮಾಡಿಕೊಳ್ಳುವ ಹೆಣ್ಣಿನ ಚಿತ್ರಣವಿದೆ. ತಾಯಿಯ ನಿಜವಾದ ವ್ಯಕ್ತಿತ್ವದ ಅರಿವಾಗುವುದು ಆಕೆ ಸತ್ತ ಮೇಲೆಯೇ ಎಂಬ ಸತ್ಯವನ್ನು ಈ ಕಥೆ ಬಿಚ್ಚಿಡುತ್ತದೆ.

ಗಂಡನ ಪ್ರೀತಿಯ ಹೆಂಡತಿಯಾಗಿ ಅತ್ತೆ ಮನೆಯಲ್ಲಿ ಕಾಲಕಳೆಯುವ ಭಾವನಾಳಿಗೆ ತೌರಿನ ನೆನಪು ಕಾಡುತ್ತದೆ. ಬಾಣಂತನಕ್ಕಾಗಿ ತವರಿಗೆ ಬಂದಾಗ ತಮ್ಮನ ಹೆಂಡತಿ ತನ್ನೊಡನೆ ನಡೆದುಕೊಂಡ ರೀತಿಯನ್ನೆಲ್ಲಾ ನೆನಪು ಮಾಡಿಕೊಳ್ಳುತ್ತಾ ಭಾವನಾ, ಯಾವ ಹೆಣ್ಣಿಗಾದರೂ ತಾಯಿಯಿಲ್ಲದ ತವರು ಶೂನ್ಯ ಎನ್ನುತ್ತಾಳೆ. ಈ ಶೂನ್ಯತೆಯಲ್ಲಿಯೇ ಬದುಕಿನ ಸುಖವನ್ನು ಕಾಣಲಾರದೆ ಒದ್ದಾಡುತ್ತಾಳೆ.

'ತಿಮಿಂಗಿಲ' ಕಥೆ ಉದ್ಯೋಗ ಕ್ಷೇತ್ರವೊಂದರ ಒಳಗಿನ ಚಿತ್ರಣಗಳನ್ನು, ರಾಜಕೀಯಗಳನ್ನು ತೆರೆದಿಡುವ ಕಥೆಯಾಗಿದೆ. ಮ್ಯಾನೇಜರನನ್ನು ಕಂಡರೆ ನಿರ್ದೇಶಕನಿಗೆ ಆಗುವುದಿಲ್ಲ, ನಿರ್ದೇಶಕನನ್ನು ಕಂಡರೆ ಮ್ಯಾನೇಜರಿಗೆ ಆಗುವುದಿಲ್ಲ. ಇವರ ನಡುವೆ ಪ್ರಾಮಾಣಿಕರಾಗಿ ದುಡಿವ ಶಾಲಿನಿಯಂತವರು ಬಲಿ ಪಶುಗಳಾಗುತ್ತಾರೆ. ಯದುಪತಿಯಂತಹ ಸಮಯ ಸಾಧಕರೂ ಶಾಲಿನಿಯಂತವರ ಬದುಕಿನಲ್ಲಿ ಆಟವಾಡಲು ಪ್ರಯತ್ನಿಸುತ್ತಾರೆ.

ಹೆಣ್ಣೊಬ್ಬಳು ಸ್ವಾವಲಂಬನೆಯ ಜೀವನ ಸಾಗಿಸುವುದಕ್ಕೆ ಮುಂದಡಿಯಿಟ್ಟರೂ ಅಧಿಕಾರ ವರ್ಗದವರ ಕಿರುಕುಳ ತಪ್ಪಿದಲ್ಲ. ಕೆಲಸಕ್ಕೆ ರಾಜೀನಾಮೆ ಕೊಟ್ಟು ಮನೆಯಲ್ಲೇ ಕುಳಿತುಬಿಡುವಂತೆ ಮಾಡುತ್ತದೆ ಇಂದಿನ ಪರಿಸ್ಥಿತಿ. ತಿಮಿಂಗಿಲಗಳ ಹಾಗೆ ಕಾಡುವ ಮನುಷ್ಯರಿಂದ ತಪ್ಪಿಸಿಕೊಳ್ಳಬೇಕಾದರೆ ರಾಜೀನಾಮೆ ನೀಡುವುದೊಂದೇ ದಾರಿ ಎಂದು ಶಾಲಿನಿ ಯೋಚಿಸುತ್ತಾಳೆ.

'ಉಯ್ಯಾಲೆ' ಕಥೆಯು ಹೆಣ್ಣಿನ ಭಾವನೆಗಳು ಉಯ್ಯಾಲೆಯಾಡುವುದನ್ನೂ ಹೇಳುತ್ತದೆ. ತುಂಬಾ ಒಳ್ಳೆಯವನಾಗಿ ಕಾಣುವ ಎದುರು ಮನೆಯ ಯಶವಂತ, ಸದಾ ಸೋಮಾರಿಯಂತೆ ಇರುವ ತನ್ನ ಗಂಡ ಸುಧಾಕರ ಇವರಿಬ್ಬರನ್ನೂ ಸದಾ ಹೋಲಿಸುತ್ತಿರುವ ಶ್ಯಾಮಲೆಗೆ ಯಶವಂತನ ಬಗೆಗೆ ಗೌರವ ಮೂಡುತ್ತದೆ. ಆತನ ಹೆಂಡತಿಯಾದ ಪುಷ್ಪಾ ಪುಣ್ಯವಂತೆ ಎನ್ನುತ್ತಾಳೆ. ಆದರೆ ಯಶವಂತನ ಹುಳುಕುಗಳೆಲ್ಲ ಅರ್ಥವಾದ ಮೇಲೆ ತನ್ನ ಗಂಡ ಸುಧಾಕರನ ಒಳ್ಳೆಯತನವನ್ನು ಅರಿತು ಖುಷಿಪಡುತ್ತಾಳೆ. ಕಣ್ಣಿಗೆ ಕಂಡದ್ದೆಲ್ಲಾ ಸುಂದರವಾಗಿ ಇರುವುದಿಲ್ಲ ಎನ್ನುವ ಸತ್ಯವನ್ನು ಶ್ಯಾಮಲೆ ಅರಿತುಕೊಳ್ಳುತ್ತಾಳೆ.

'ಮೇಡಂ' ಕಥೆಯು ಬಂಜೆಯೊಬ್ಬಳ ದಿಟ್ಟತನದ ಬದುಕನ್ನು ಹೇಳುತ್ತದೆ. ತಾನು ಬಂಜೆ ಎನ್ನುವ ಕಾರಣಕ್ಕಾಗಿ ಗಂಡ ತನ್ನನ್ನು ಬಿಟ್ಟು ಬೇರೊಬ್ಬಳನ್ನು ಮದುವೆಯಾದರೂ ಕೆಟ್ಟ ಯೋಚನೆ ಮಾಡದೆ ಬದುಕಿದವಳು. ಅವಳು ಗಂಡ ಶಶಿಧರನಿಗೆ ಹೇಳುವ, 'ನೋಡಿ ಶಶಿಧರ ನಿಮಗೆ ಮಗುವನ್ನು ಕೊಡೋಕೆ ನನ್ನಿಂದ ಸಾಧ್ಯವಿಲ್ಲ ಎಂದಮೇಲೆ, ನನ್ನೊಡನೆ ನಿಮಗೆ ಸಂಸಾರ ಮಾಡೋಕು ಸಾಧ್ಯವಿಲ್ಲ ಎನ್ನಿ. ಹಾಗಿದ್ದ ಮೇಲೆ ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ.

ನೀವಿನ್ನೊಂದು ಮದುವೆಯಾಗಿ ಸುಖವಾಗಿರಿ' (ಕಥಾವರ್ಷ ಪು. ೪೨೭, ೨೦೦೭) ಎನ್ನುವ ಮಾತು ಆಕೆಯ ದಿಟ್ಟತನಕ್ಕೆ ಸಾಕ್ಷಿಯಾಗಿದೆ.

'ಅತಂತ್ರರು' ಕಥೆಯಲ್ಲಿ ಸಂಸಾರದ ಮರ್ಯಾದೆಗಾಗಿ ಒದ್ದಾಡುವ ಇಬ್ಬರು ಹೆಣ್ಣುಮಕ್ಕಳ ಚಿತ್ರಣವಿದೆ. ಪರಸ್ಪರ ಒಬ್ಬರ ಕಷ್ಟವನ್ನು ಒಬ್ಬರು ಹಂಚಿಕೊಳ್ಳುತ್ತಾ ಬದುಕುವ ಭವಾನಿ ಹಾಗೂ ಮೈಥಿಲಿಗೆ ಸಂಸಾರದಲ್ಲಿ ನೆಮ್ಮದಿ ಎಂಬುದಿಲ್ಲ. ಮೈಥಿಲಿ ಭವಾನಿಯೊಡನೆ ಹೇಳುವ 'ಭವಾನಿ ನೀವೇನೇ ಹೇಳಿ ನಾನು ದುಡೀತೀನಿ ಅಂತ, ಈ ಅಪ್ರಯೋಜಕ ಪತಿಯನ್ನು ಬಿಟ್ಟು ಹೊರಹೋಗುವ ಹಾಗುಂಟೆ? ಸಂತೃಪ್ತಿ ಇಲ್ಲಿ, ಇಲ್ದೆ ಹೋಗ್ಲಿ ಕಟ್ಟಿಕೊಂಡ ಮೇಲೆ ಕಟ್ಟಿಕೊಂಡವನ ಜೊತೆ ನಾವು ಏಗ್ಲೇಬೇಕು. ಅವರಿಗೆ ಮೇರಿಯಂತೋರು ಸಾವಿರ ಜನ ಸಿಗಬಹುದು. ನಮಗೆ ಹಾಗಾಗೋದಿಲ್ಲ. ಹಾಗಾದ್ರೆ ಭಾರತದ ಸಂಸ್ಕೃತಿ ಉಳಿಬೇಕು ಅಂತ್ಲೆ ನಮ್ಮಂಥ ಎಷ್ಟೋ ಹೆಣ್ಣುಮಕ್ಕು ಎಷ್ಟೇ ಕಷ್ಟ ಇದ್ರೂ ನುಂಗಿಕೊಂಡು ಬದುಕು ಮಾಡ್ತಿರಬಹುದು' (ಕಥಾವರ್ಷ, ಪು. ೫೮೫, ೨೦೦೭). ಇಲ್ಲಿ ಗಂಡಿಗಿಲ್ಲದ ಪಾವಿತ್ರ್ಯದ ಕಲ್ಪನೆ ಹೆಣ್ಣಿಗಿರಬೇಕೆನ್ನುವುದು ಸಾಂಪ್ರದಾಯಿಕ ನಿಲುವಾಗಿ ಕಾಣುತ್ತದೆ.

ವಿಭಿನ್ನ ವಸ್ತು ಮತ್ತು ವಿಭಿನ್ನ ಸ್ವರೂಪದ ಪಾತ್ರಗಳನ್ನು ನಿರೂಪಿಸಿದರೂ ಪ್ರೇಮಾ ಭಟ್‌ರವರ ಹೆಚ್ಚಿನ ಎಲ್ಲಾ ಕಥೆಗಳು ಸರಳ ತಾತ್ವಿಕತೆಯನ್ನು ಪ್ರತಿಪಾದಿಸುತ್ತವೆ. ಆಧುನಿಕ ಜಗತ್ತು ಮತ್ತು ಸಾಂಪ್ರದಾಯಿಕ ಜಗತ್ತು – ಈ ಎರಡು ಲೋಕಗಳ ಪಾತ್ರಗಳು ಕಥೆಯೊಳಗೆ ದಾಖಲುಗೊಂಡರೂ ಸರಳ ತೀರ್ಪುಗಳ ಅಂತ್ಯಗಳಿಂದಾಗಿ ಕಥೆಗಾರ್ತಿಯ ಧೋರಣೆ ಪುರುಷ ನಿಷ್ಠವಾಗಿಯೇ ಉಳಿದುಬಿಡುತ್ತದೆ. ನಗರ ಜೀವನದ ಅನುಭವಗಳು ಕಥೆಗಳಲ್ಲಿ ದಾಖಲುಗೊಂಡಿದ್ದರೂ ಎಲ್ಲೂ ಕ್ಲೀಷೆಯಾಗಿ ಗೋಚರಿಸುವುದಿಲ್ಲ. ಮನುಷ್ಯ ಸಂಬಂಧಗಳ ವ್ಯತ್ಯಯಗಳು ಬದಲಾಗುತ್ತಾ ಸಾಗುವಾಗ ಆಧುನಿಕತೆಯು ಹೇಗೆ ಕೊಡುಗೆಯಾಗುತ್ತದೆ ಎನ್ನುವುದು ಮುಖ್ಯ. ಪುರಾಣದ ಪಾತ್ರಗಳನ್ನು ಕಥೆಯೊಳಗೆ ಸೃಷ್ಟಿಸಿದ್ದರೂ ಅಲ್ಲಿಯ ಸಂಘರ್ಷ ವರ್ತಮಾನದಲ್ಲಿ ಉಪೇಕ್ಷೆಗೆ ಒಳಗಾಗಿದೆ (ಉದಾ: ಕರ್ಣ, ಕುಂತಿ). ಗಂಡು ಹೆಣ್ಣನ್ನು ನೋಡುವ, ಬಳಸಿಕೊಳ್ಳುವ, ಆ ಮೂಲಕ ತುಳಿಯುವ ಆಯಾಮಗಳು ಎಳೆಎಳೆಯಾಗಿ ದಾಖಲುಗೊಂಡಿದ್ದರೂ ಗಂಡಿನ ಬಗೆಗಿನ ಸಾಂಪ್ರದಾಯಿಕ ದೃಷ್ಟಿಕೋನ ಎಲ್ಲೂ ಬದಲಾಗಿಲ್ಲ.

ಹೆಚ್ಚಿನ ಕಥೆಗಳಲ್ಲಿ ಕಥೆಯ ಆಶಯಗಳನ್ನು ಕಥೆಯ ಶೀರ್ಷಿಕೆಗಳೇ ಧ್ವನಿಸುತ್ತವೆ (ಮುಳ್ಳುಗಳು, ಮುಸ್ಸಂಜೆ). ಗೃಹಿಣಿ ಧರ್ಮವೇ ಪರಮೋಚ್ಚ ಎನ್ನುವಾಗ ತನ್ನಂತಹದೇ ಇನ್ನೊಂದು ಹೆಣ್ಣು ಜೀವದ ಬಗೆಗೆ ಪ್ರೀತಿ, ಅನುಕಂಪಗಳ ಧ್ವನಿ ಇಲ್ಲವೇ ಇಲ್ಲ. ವಾಸ್ತವಿಕತೆಯ ಘಟನೆಗಳೇ ಕಥೆಗಳಿಗೆ ವಸ್ತುಗಳಾದರೂ, ಕಥೆಯ ಆಶಯ ಸೀಮಿತ ಚೌಕಟ್ಟಿನೊಳಗೆ ಪ್ರಕಟಗೊಳ್ಳುವುದು ಕಥೆಗಳ ಮಿತಿಯೂ ಆಗಿದೆ. ಒಂದು ಬಾರಿಯ ಓದನ್ನು ಮಾತ್ರ ಬಯಸುವ

ಇಲ್ಲಿನ ಕಥೆಗಳು ಅಂತಹ ಗಟ್ಟಿತನವನ್ನು ಏನನ್ನೂ ಪ್ರತಿಪಾದಿಸುವುದಿಲ್ಲ. ಹಾಗಾಗಿಯೇ ಗಂಡಿನ ಪಾರಮ್ಯಕ್ಕೆ ಶರಣು ಹೋಗುವ ಕಥೆಗಳೇ ಇಲ್ಲಿ ಹೆಚ್ಚಾಗಿ ಕಾಣಸುತ್ತವೆ.

೫.೨.೨. ಕೌಟುಂಬಿಕ ನೆಲೆ :

ಕುಟುಂಬ ಜೀವನವನ್ನು ಧಿಕ್ಕರಿಸಿ ಅರ್ಥೈಸಲು ಆ ಕಾಲದ ಕಥೆಗಾರ್ತಿಯರಿಗೆ ಪರಿಪೂರ್ಣವಾಗಿ ಸಾಧ್ಯವಾಗಿಲ್ಲ. ವಿಭಕ್ತ ಇಲ್ಲವೇ ಅವಿಭಕ್ತ ಕುಟುಂಬವನ್ನು ಒಪ್ಪಿಕೊಂಡೇ ಕರಾವಳಿಯ ಹೆಣ್ಣುಮಕ್ಕಳು ಬದುಕಿದರೂ ಆ ಕುಟುಂಬವೇ ಅವಳ ಸಾಮಾಜಿಕ ಮನ್ನಣೆಯನ್ನು, ಗೌರವವನ್ನು ನೀಡುವ ಸ್ಥಾನ ಎನ್ನುವ ದ್ವಂದ್ವ ನಮ್ಮ ಕಥೆಗಾರ್ತಿಯರಿಗೆ ಬಹಳಷ್ಟು ಕಾಡಿದೆ. ಸ್ತ್ರೀಯಾಗಿ ಈ ಜಗತ್ತಿನಲ್ಲಿ ತಮ್ಮ ಸ್ಥಾನ ಏನು ಅನ್ನುವಾಗ ಕುಟುಂಬ ಮತ್ತು ಸಮಾಜದ ಪರಿಕಲ್ಪನೆಗಳು ಮುಖ್ಯವಾಗುತ್ತವೆ. ಹಾಗಿರುವಾಗ ಕುಟುಂಬದೊಳಗಿನ ಒಪ್ಪಿತ ಮಾದರಿಯ ಪಾತ್ರಗಳೇ ಮತ್ತೆ ಮತ್ತೆ ಪುನರಾವರ್ತನೆಯಾಗಲು ಸಾಧ್ಯವಾಗಿದೆ. ಅತ್ತೆ-ಸೊಸೆಯರ ಸಂಬಂಧವನ್ನು ಸಾಮಾಜಿಕ ವ್ಯಂಗ್ಯವಾಗಿ ಕಾಣುವಾಗ ಕಥೆಗಾರ್ತಿಯರು ಅದನ್ನು ಗ್ರಹಿಸಿದ ರೀತಿ ಮುಖ್ಯವಾಗದೆ ವ್ಯಕ್ತಿಗಿಂತ ಕುಟುಂಬವೇ ಮುಖ್ಯವೆನಿಸುತ್ತದೆ. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು.

ಮಿತ್ರಾ ವೆಂಕಟ್ರಾಜ್‌ರವರ,

ಇನ್ನಿಲ್ಲದ ನಿರೀಕ್ಷೆ (ರುಕುಮಾಯಿ, ೧೯೯೦)

'ಇನ್ನಿಲ್ಲದ ನಿರೀಕ್ಷೆ' ಕಥೆಯ ಅಕ್ಕಯ್ಯು ತನ್ನ ನೋವನ್ನೆಲ್ಲಾ ಒಳಗಿಟ್ಟುಕೊಂಡು ನಗುವ ಹೆಣ್ಣಾಗಿದ್ದಾಳೆ. ಬೆಳಿಗ್ಗೆ ಎದ್ದಲ್ಲಿಂದ ರಾತ್ರಿ ಮಲಗುವ ತನಕ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ದುಡಿಯುತ್ತಾಳೆ. ಅವಳ ಗಂಡ ಘಟ್ಟದ ಮೇಲಿರುವವನು. ತಿಂಗಳಿಗೋ, ಎರಡು ತಿಂಗಳಿಗೋ ಒಮ್ಮೆ ಊರಿಗೆ ಬರುತ್ತಿದ್ದವನು ಎಷ್ಟೋ ಸಮಯ ಬಾರದೇ ಹೋದಾಗಲೂ ಅವಳು ತನ್ನ ಗಂಡನ ಬಗೆಗೆ ಆದರ – ಅಭಿಮಾನಗಳನ್ನು ವ್ಯಕ್ತಪಡಿಸುತ್ತಾ ಬದುಕಿದವಳು. ವೈಯಕ್ತಿಕ ನೆಲೆಯಲ್ಲಿ ಬದುಕನ್ನು ಸಹ್ಯವಾಗಿಸಿಕೊಂಡವಳು.

ಇದೇ ಕಥೆಯ ಗೀತ ಹಾಗೂ ಅವಳ ತಾಯಿಯ ಬದುಕು ಇದಕ್ಕೆ ವಿರುದ್ಧವಾದುದು. ಲೋಕದ ಗೊಡವೆಯಿಲ್ಲದ ಹಾಗೆ ವರ್ತಿಸುವ ಗೀತಾಳ ತಂದೆಯ ಬರುವಿಕೆಗಾಗಿ ಕಾದು ಕಾದು ಸುಸ್ತಾಗಿ ಊಟ ಮಾಡಿ ಮಲಗಿಕೊಳ್ಳುವ ಸ್ಥಿತಿ ತಾಯಿ– ಮಗಳದ್ದು. ತಂದೆಯನ್ನು ಬಿಟ್ಟು ಊಟ ಮಾಡಲಾರದ ಸ್ಥಿತಿಯ ಗೀತಾ, ಗಂಡ ದೂರದಲ್ಲಿದ್ದಾಗ ಅವನ ನೆನಪಿನೊಂದಿಗೆ ಬದುಕುವ ಅಕ್ಕಯ್ಯು ಈ ಕಥೆಗಳ ವಿರುದ್ಧ ಮನಸ್ಥಿತಿಯ ಪಾತ್ರಗಳು.

ಅಕ್ಕಯ್ಯುವಿನ ಗಟ್ಟಿ ಮನಸ್ಸಿನ ಎದುರು ಗೀತಾ ಹಾಗೂ ಆಕೆಯ ತಾಯಿ ಸೋಲುತ್ತಾರೆ. ಅಕ್ಕಯ್ಯು ವ್ಯವಸ್ಥೆಯನ್ನು ಒಪ್ಪಿಕೊಂಡವಳು.

ಕರಾವಳಿಯ ಕುಟುಂಬ ಜೀವನದಲ್ಲಿ ಎರಡು ರೀತಿಯ ಕುಟುಂಬ ವ್ಯವಸ್ಥೆಯನ್ನು ಗಮನಿಸುತ್ತೇವೆ. ಒಂದು ಮಾತೃ ಮೂಲೀಯ ಕುಟುಂಬ ವ್ಯವಸ್ಥೆ, ಇನ್ನೊಂದು ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ. ಹೆಣ್ಣಿನ ಜನನಕ್ಕೆ ಮತ್ತು ಹೆಣ್ಣಿನ ವಂಶಕ್ಕೆ ಒತ್ತು ನೀಡುವ ಮಾತೃ ಮೂಲೀಯ ಕುಟುಂಬ ವ್ಯವಸ್ಥೆಯು ಆಧುನಿಕತೆಯ ಸುಳಿಗಾಳಿಗೆ ಸಿಕ್ಕಿ ನವ ಪಿತೃ ಪ್ರಧಾನತೆಯೆಡೆಗೆ ಸಾಗುತ್ತದೆ.

ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಪುರುಷನದೇ ಪಾರಮ್ಯವಿರುತ್ತದೆ. ಸಾಂಪ್ರದಾಯಿಕ ಕುಟುಂಬದಲ್ಲಿ ಆಧುನಿಕತೆಯ ಕೊಡುಗೆಯಾಗಿ ಅವಿಭಕ್ತ ಕುಟುಂಬಗಳೆಲ್ಲ ವಿಭಕ್ತವಾದಂತೆ ಯಾಜಮಾನ್ಯ ಸಂಸ್ಕೃತಿಯ ಹಿನ್ನೆಲೆ – ಮುನ್ನೆಲೆಗಳು ಮುಖ್ಯವಾಗುತ್ತವೆ. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯ ಮೌಲ್ಯಗಳನ್ನು ಆಧುನಿಕ ಜಗತ್ತಿನ ಆದರ್ಶಗಳೆಂದು ಸಾರಾ ಸಗಟಾಗಿ ಸಾರುತ್ತಿರುವ ಸಂದರ್ಭದಲ್ಲಿ ಕೌಟುಂಬಿಕ ನೆಲೆಯಲ್ಲಿ ಕುಟುಂಬದ ಯಶಸ್ಸು ಇರುವುದೇ ಹೆಣ್ಣಿನ ತ್ಯಾಗ, ಕ್ಷಮೆ, ಬಲಿದಾನಗಳಲ್ಲಿ ಎಂಬುದು ಹಿಂದಿನಿಂದಲೂ ರೂಢಿಸಿಕೊಂಡು ಬಂದ ವಿಚಾರವಾಗಿದೆ.

ಇಲ್ಲಿ ಬರುವ ಲೇಖಕಿಯರೆಲ್ಲರೂ ಕೂಡ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಾ ಬಂದವರಾಗಿರುವುದರಿಂದ ಆ ಪರವಾದ ಒಲವುಗಳೇ ಗೋಚರಿಚುತ್ತವೆ. ಕುಟುಂಬ ಎಂದ ತಕ್ಷಣ ಗಂಡು ಮತ್ತು ಹೆಣ್ಣು ಮನೆಯ ಅಸ್ತಿತ್ವದ ಒಳಗಡೆ ಬದುಕಬೇಕಾಗಿರುವುದರಿಂದ ಆ ಕುಟುಂಬ ಅವಳನ್ನು ರಕ್ಷಿಸುತ್ತದೆ, ಕಾಪಾಡುತ್ತದೆ ಎನ್ನುವುದು ಸಾಮಾನ್ಯ ಧೋರಣೆ. ಹಾಗಾಗಿ ಈ ಕುಟುಂಬದ ಅಘೋಷಿತ ನಿಯಮಗಳಿಗೆ ಹೆಣ್ಣು ಬದ್ಧಳಾಗಿ ಬದುಕಬೇಕೆನ್ನುವ ನಿರೀಕ್ಷೆ ಸಮಾಜದ್ದಾಗಿರುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ ಕಥೆಯ ಹೆಣ್ಣು ಆಯ್ಕೆಗೆ ಅವಕಾಶಗಳಿಲ್ಲದೆ, ತನ್ನ ಲೈಂಗಿಕ ಕಾಮನೆಗಳನ್ನು ಅದುಮಿಟ್ಟು ಗಂಡನ ಆಗಮನದ ನಿರೀಕ್ಷೆಯನ್ನು ಮಾಡುವ ಆದರ್ಶ ಸ್ತ್ರೀಯಾಗಿ ಚಿತ್ರಿತಳಾಗಿದ್ದಾಳೆ. ಕುಟುಂಬ ಎಂದ ತಕ್ಷಣ ಊಟ, ತಿಂಡಿಗಳನ್ನು ಜೊತೆಯಾಗಿ ಹಂಚಿಕೊಂಡು ತಿನ್ನಬೇಕು. ಆ ಮೂಲಕ ತಮ್ಮ ಪ್ರೇಮವನ್ನು ಜಗತ್ತಿಗೆ ತೋರ್ಪಡಿಸಬೇಕು ಎನ್ನುವ ಆದರ್ಶ ಪ್ರಣಯದ ಕಲ್ಪನೆ ಹುಸಿಯಾದಾಗ ನಿರೀಕ್ಷೆ ಇನ್ನಿಲ್ಲವಾಗುತ್ತದೆ.

ಸಾರಾ ಅಬೂಬಕ್ಕರ್ ರವರ,

ಅಂಕುರ (ಪಯಣ ಮತ್ತು ಇತರ ಕತೆಗಳು, ೧೯೯೨)

ಮೂಲೆ ಮುಟ್ಟಿದ ಹುಳು (ಪಯಣ ಮತ್ತು ಇತರ ಕತೆಗಳು, ೧೯೯೨)

ಹುಟ್ಟು (ಪಯಣ ಮತ್ತು ಇತರ ಕತೆಗಳು , ೧೯೯೨)

'ಅಂಕುರ' ಕಥೆಯು ಸಮಾಜದ ಕ್ರೌರ್ಯ ಮುಖವೊಂದರ ಪರಿಚಯ ಮಾಡುತ್ತದೆ. 'ವರದಕ್ಷಿಣೆ' ಎಂಬ ಅನಿಷ್ಟ ಪದ್ಧತಿ ಹೆಣ್ಣಿನ ಬಾಳಿಗೆ ಹೇಗೆ ಮುಳುವಾಗುತ್ತದೆ ಎಂಬುದರ ಶೋಚನೀಯ ಸ್ಥಿತಿ ಇಲ್ಲಿದೆ. ಮದುವೆಯಾಗಿ ನಾಲ್ಕು ವರ್ಷಗಳವರೆಗೆ ಗಂಡ ಮತ್ತು ಮಕ್ಕಳಿಗಾಗಿ ನರಕ ಯಾತನೆಯನ್ನು ಅನುಭವಿಸಿ ತನ್ನ ಸರ್ವಸ್ವವನ್ನೂ ಕಳೆದುಕೊಂಡ ಶಕೀಲ ಕೊನೆಗೆ ತವರಿನಲ್ಲಿ ದಿನ ನೂಕಬೇಕಾದ ಪರಿಸ್ಥಿತಿ ಹೃದಯ ವಿದ್ರಾವಕವಾಗಿ ಮೂಡಿಬಂದಿದೆ.

'ಮೂಲೆ ಮುಟ್ಟಿದ ಹುಳು' ಕಥೆಯಲ್ಲಿ ಮಗನೇ ಸರ್ವಸ್ವ ಎಂದು ತಿಳಿದು ಆತನಿಗಾಗಿ ತನ್ನ ಆಯುಷ್ಯವನ್ನೇ ಸವೆಸಿಕೊಂಡ ತಾಯಿಯ ಬದುಕಿನ ದುರಂತವಿದೆ. ಓದಿದವನು ಎಂಬ ಅಹಂಕಾರದೊಂದಿಗೆ ತಾಯಿಗೆ ಕೆಲಸದಲ್ಲಿ ನೆರವಾಗದೆ, ಇದ್ದುದನ್ನೆಲ್ಲಾ ಮಾರಿ ಅಡ್ಡದಾರಿ ಹಿಡಿದ ಮಗನಿಂದಾಗಿ ಮೂಲೆ ಮುಟ್ಟಿದ ಹುಳುವಾಗುತ್ತಾಳೆ ಸರಸಮ್ಮ. 'ಅಯ್ಯೋ ಮಗಾ, ನನ್ನನ್ನು ಕೊಂದೇ ಬಿಟ್ಟಿಯಲ್ಲಾ ? ತೊಟ್ಟಿಲಿನಿಂದ ಇನ್ನೂ ಕಾಲು ಹೊರಗಿಟ್ಟಿಲ್ಲ; ಆಗಲೇ ಇದನ್ನು ಪ್ರಾರಂಭಿಸಿದೆಯಾ ?' (ಪಯಣ ಮತ್ತು ಇತರ ಕಥೆಗಳು, ಪುಟ. ೧೧೬, ೧೯೯೨) ಎಂಬ ಸರಸಮ್ಮನ ಮಾತು ಮಗನನ್ನು ಹಿಡಿತದಲ್ಲಿಟ್ಟುಕೊಳ್ಳಲಾಗದ ಅಸಹಾಯಕ ಸ್ಥಿತಿ ಹಾಗೂ ಇದ್ದ ಒಂದೇ ಒಂದು ಆಸೆಯ ಕುಡಿ ಕೊಳಚೆ ಗುಂಡಿಯ ಬಳಿ ಸಾರುತ್ತಿರುವುದರ ಬಗೆಗಿನ ನೋವನ್ನು ಮನವರಿಕೆ ಮಾಡಿಕೊಡುತ್ತದೆ.

'ಹುಟ್ಟು' ಕಥೆಯಲ್ಲಿ ಮಕ್ಕಳನ್ನು ಹೆರುವುದೇ ಬದುಕಿನ ಸಾರ್ಥಕ್ಯ ಎಂದು ಭಾವಿಸುವ ಸಮಾಜದ ಅಂಧಕಾರದಲ್ಲಿ ಒದ್ದಾಡುವ ಹೆಣ್ಣಿನ ಚಿತ್ರಣವಿದೆ. ದಾಂಪತ್ಯದ ಸುಖ, ಸಂತೋಷ, ಭಾವನೆಗಳಿಗೆ ಎಡೆಗೊಡದೆ ಖದೀಜಳ ಗಂಡ ಇನ್ನೊಬ್ಬಳನ್ನು ಮದುವೆಯಾಗುವುದರೊಂದಿಗೆ ಮಕರಂದವನ್ನು ಹೀರುವ ದುಂಬಿಯಾಗುತ್ತಾನೆ. ತವರಿನ ಸಂಬಂಧದಿಂದ ದೂರವಾದ ಖದೀಜ ಗಾಣದೆತ್ತಾಗಿ ಗಂಡನ ಮನೆಯಲ್ಲಿ ದುಡಿದು, ಬದುಕು ಸವೆಯಿಸಿ ಅಲ್ಲೇ ಅಂತ್ಯ ಕಾಣುತ್ತಾಳೆ.

ಸಾರಾರವರ ಅಂಕುರ ಕಥೆ ವಿವಾಹ ಸಂಸ್ಥೆಯೊಳಗಡೆ ದಾಖಲಾಗುವ ಸಂದರ್ಭವು ಸಾಮಾಜಿಕ ಕಟ್ಟುಪಾಡುಗಳಿಗೆ ಬದ್ಧರಾಗಬೇಕಾದ ಅನಿವಾರ್ಯತೆಯನ್ನು ನಿರೂಪಿಸುತ್ತದೆ. ಕುಟುಂಬದ ಚೌಕಟ್ಟನ್ನು ದಾಟಿ ಹೊರಬರಲಾಗದೆ ಒದ್ದಾಡುವ ಹೆಣ್ಣಿನ ಅಸಹಾಯಕತೆಯನ್ನು ಇವರ ಕಥೆಗಳು ಧ್ವನಿಸುತ್ತವೆ.

ಗಂಗಾ ಪಾದೇಕಲ್‌ರವರ,

ಭಗ್ನ (ಹೆಜ್ಜೆ ಮೂಡದ ಹಾದಿಯಲ್ಲಿ, ೧೯೮೮)

ನಮ್ಮಲ್ಲೊಬ್ಬಳು ಆಲೀಮ (ಹೆಜ್ಜೆ ಮೂಡದ ಹಾದಿಯಲ್ಲಿ, ೧೯೮೮)

ಮೂರಾಬಟ್ಟೆ (ಹೊಸಹೆಜ್ಜೆ, ೧೯೯೬)

ಉತ್ತರಾರ್ಧ (ವಾಸ್ತವ, ೧೯೯೬)

ಕಂದ ನಿಮ್ಮವಳೆಂದು ಕಾಣೆರಿ (ವಾಸ್ತವ, ೧೯೯೬)

ಕಲ್ಲರಳಿ ಹೂವಾಗಿ (ವಾಸ್ತವ, ೧೯೯೬)

ಕುಬ್ಜ (ನೆಲೆ ತಪ್ಪಿದ ಹಕ್ಕಿ, ೨೦೦೩)

ಯಾತ್ರೆ (ನೆಲೆ ತಪ್ಪಿದ ಹಕ್ಕಿ, ೨೦೦೩)

ಅಪ್ಸರವರೆಗೆ (ಈ ಪ್ರಜಾರಾಜ್ಯದೊಳಗೆ, ೨೦೦೬)

ಕರ್ಮಣ್ಯೆವಾಧಿಕಾರಸ್ತೆ (ಈ ಪ್ರಜಾರಾಜ್ಯದೊಳಗೆ, ೨೦೦೬)

'ಭಗ್ನ' ಕಥೆಯಲ್ಲಿ ಹೊಸ ತಲೆಮಾರಿನ ಪ್ರತಿನಿಧಿಯಾಗಿದ್ದ ನಳಿನ ಹಳೆಯ ನಂಬಿಕೆ, ಸಂಪ್ರದಾಯಗಳ ಅರ್ಥ ತಿಳಿಯದೆ ತತ್ತರಿಸುತ್ತಾಳೆ. ಮಡಿ – ಮೈಲಿಗೆಯ ಬಗೆಗೆ ತಲೆಕೆಡಿಸಿಕೊಳ್ಳದೆ ಎಲ್ಲವನ್ನೂ ಪ್ರಕೃತಿ ಸಹಜ ನಿಯಮ ಎಂದು ಭಾವಿಸಿಕೊಂಡು ಬದುಕುವ ಡೆಲ್ಲಿಯ ವಾತಾವರಣಕ್ಕೂ 'ದೇವರ ಪೂಜೆ ಇಪ್ಪ ಮನೆ' ಎಂದು ಎಲ್ಲವನ್ನೂ ದೊಡ್ಡದು ಮಾಡಿ ಬದುಕುವ ಈ ಹಳ್ಳಿಯ ಪರಿಸರಕ್ಕೂ ಅಜಗಜಾಂತರ.

'ಕೇಳಿದ್ಯಾ ಕುಸುಮಾ ? ನಿನ್ನ ಮಗಳ ಕಥೆ ? ಎದೆ ಎತ್ತರಕ್ಕೆ ಬೆಳೆದದ್ದು, ಬೋರನೊಟ್ಟಿಗೆ ತೋಟಕ್ಕೆ ಹೋದ್ದಡ' (ಹೆಜ್ಜೆ ಮೂಡದ ಹಾದಿಯಲ್ಲಿ, ಪು. ೫, ೧೯೮೮) ಎಂಬ ಅಜ್ಜಿಯ ಮಾತುಗಳು ಪರಂಪರಾಗತ ಆಲೋಚನೆಯಿಂದ ಆಚೆ ಬರಲಾರವು.

'ನಮ್ಮಲ್ಲೊಬ್ಬಳು ಆಲೀಮ' ಕಥೆಯಲ್ಲಿ ಖತೀಜ ತನ್ನ ಸ್ವಂತ ಮಕ್ಕಳನ್ನು ಕಾಣುವ ಭಾಗ್ಯವಿಲ್ಲದಿದ್ದರೂ, ತಾಯಿಯನ್ನು ಕಳೆದುಕೊಂಡ ಅಲೀಮಳನ್ನು ಬೆಳೆಸಿ ದೊಡ್ಡವಳನ್ನಾಗಿ ಮಾಡುತ್ತಾಳೆ. ಮುಂದೆ ಖತೀಜಳಿಗೆ ತಿಳಿಯದ ಹಾಗೆ ಅಲೀಮಳ ತಂದೆ ಆಕೆಗೆ ಹುಡುಗ ಹುಡುಕಿ ಮದುವೆಗೆ ಏರ್ಪಾಡು ಮಾಡುತ್ತಾನೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಭಾವನೆಗಳಿಗೆ ಬೆಲೆಯಿಲ್ಲ ಎಂಬುದನ್ನು ಖತೀಜಳ ಪಾತ್ರ ಸ್ಪಷ್ಟಪಡಿಸುತ್ತದೆ. ಕಷ್ಟಪಡಬೇಕಾದವಳು ಹೆಣ್ಣು, ಆದರೆ ನಿರ್ಧಾರ ತೆಗೆದುಕೊಳ್ಳುವ ಯಾವ ಅಧಿಕಾರವೂ ಆಕೆಗಿಲ್ಲದೆ ನೋವೊಂದೇ ಅವಳ ಪಾಲಿಗೆ ಉಳಿಯುತ್ತದೆ.

'ಮೂರಾಬಟ್ಟೆ' ಕಥೆಯಲ್ಲಿ ಶ್ರೀಮಂತ ಪುರುಷರ ಕಾಮಪಿಪಾಸೆಗೆ ಬಡ ಹೆಣ್ಣುಮಕ್ಕಳು ಹೇಗೆ ಬಲಿಯಾಗುತ್ತಾರೆ ಎಂಬುದರ ಚಿತ್ರಣವಿದೆ. ತನ್ನ ಚಿಕ್ಕ ಮಗುವನ್ನು ಇನ್ನೊಬ್ಬರ ಬಳಿ ಬಿಟ್ಟು ಸಾಹೇಬರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದ ಗೋಪಾಲನ ಹೆಂಡತಿ ಗೌರಿಯನ್ನು ಸಾಹೇಬನು 'ನೆಕ್ಲೆಸ್ ಕಳವಿನ' ನೆಪವೊಡ್ಡಿ, ಆಕೆಯನ್ನು ಬೆದರಿಸಿ, ಏನೇನೋ ಆರೋಪಗಳನ್ನೆಸಗಿ ಆಕೆಯೊಡನೆ ತನ್ನ ಕಾಮದಾಹವನ್ನು ತೀರಿಸಿಕೊಳ್ಳುತ್ತಾನೆ. ಇದರಿಂದ ನೊಂದುಕೊಂಡ ಗೌರಿ ಹುಚ್ಚಿಯಾಗುತ್ತಾಳೆ. ಮಾನ – ಮರ್ಯಾದೆಗಳಿಗೆ ಹೆದರಿ ಜೀವನ ನಡೆಸುವ ಬಡವರ ಬದುಕನ್ನೇ ನುಚ್ಚುನೂರು ಮಾಡುವ ಸಾಹೇಬನ ಅಮಾನವೀಯ ವರ್ತನೆ ಇಲ್ಲಿ ಚಿತ್ರಿತವಾಗಿದೆ. ಗೋಪಾಲನ ಸಂಸಾರ ದುಃಖದ ಸಂಸಾರವಾಗುತ್ತದೆ.

ಶ್ರೀಮಂತ ಸಾಹೇಬನ ವಿರುದ್ಧ ಹಟ ತೀರಿಸಿಕೊಳ್ಳಲಾಗದ ಗೌರಿ ಹುಚ್ಚಿಯಾಗುತ್ತಾಳೆ. ಸಮಾಜದ ವಾಸ್ತವ ಸತ್ಯವನ್ನು ಈ ಕಥೆ ಮನವರಿಕೆ ಮಾಡುತ್ತದೆ.

'ಉತ್ತರಾರ್ಧ' ಕಥೆಯಲ್ಲಿ ಹೆಣ್ಣೊಬ್ಬಳ ಹೃದಯ ವೈಶಾಲ್ಯದ ಚಿತ್ರಣವಿದೆ. ಬೇಜವಾಬ್ದಾರಿಯ ಗಂಡನನ್ನು ಪಡೆದ ಸರಳ ಹೆರಿಗೆ ನೋವು ಕಾಣಿಸಿಕೊಂಡಾಗ ತನಗೆ ಬಾಡಿಗೆ ನೀಡಿದ ಮನೆಯ ದೊಡ್ಡಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾಳೆ. ತಾಯಿಯ ಸ್ಥಾನದಲ್ಲಿ ನಿಂತು ಸರಳೆಯ ಕಷ್ಟ - ಸುಖ ಹಂಚಿಕೊಂಡ ದೊಡ್ಡಮ್ಮನಿಗೆ ತನ್ನ ಮಗ ಅರವಿಂದನ ಬೇಜವಾಬ್ದಾರಿಯ ಬಗೆಗೆ ಬೇಸರ ಮೂಡುತ್ತದೆ. ತಾನೇ ಸಾಕಿದ ಮಗ ಅವನಿಷ್ಟದಂತೆ ಮದುವೆಯಾಗಿದ್ದ, ಆದರೆ ತಾಯಿಯೆಂಬ ಪ್ರೀತಿಯಿಲ್ಲದೆ ಆಕೆಯನ್ನು ದೂರವಿಟ್ಟಿದ್ದ.

ಇಲ್ಲಿ ದೊಡ್ಡಮ್ಮ ಸಮಾಜದ ವ್ಯವಸ್ಥೆಯನ್ನು ಪ್ರಶ್ನಿಸುತ್ತಾಳೆ. ದೂರವಾಗುವ ಮನುಷ್ಯ ಸಂಬಂಧದ ಕುರಿತಾದ ಅಸಹನೆ ಆಕೆಯಲ್ಲಿರುವುದು ಈ ಕಥೆಯಿಂದ ತಿಳಿಯುತ್ತದೆ.

'ಕಂದ ನಿಮ್ಮವಳೆಂದು ಕಾಣೆರಿ' ಕಥೆಯು ಕೌಟುಂಬಿಕ ಬಿರುಕಿನೊಂದಿಗೆ ನಲುಗಿಹೋಗುವ ಹೆಣ್ಣು ಜೀವನೊಂದರ ಬದುಕಿನ ಅಸ್ಥಿರತೆಯನ್ನು ಹೇಳುತ್ತದೆ. ತಾಯಿಯನ್ನು ಕಳೆದುಕೊಂಡ ಸರಸಿ ಅಜ್ಜಿ ಮನೆಯಲ್ಲಿ ಬೆಳೆಯುತ್ತಾಳೆ. ಎರಡನೇ ಮದುವೆಯಾದ ಅವಳಪ್ಪ ಮಗಳನ್ನು ಇಣುಕಿ ನೋಡುವುದಕ್ಕೂ ಬರುವುದಿಲ್ಲ. ಅತ್ತೆ – ಮಾವಂದಿರು, ಅವರ ಮಕ್ಕಳ ವ್ಯಂಗ್ಯದ ಮಾತುಗಳಿಗೆ ತುತ್ತಾಗಿ ಬದುಕುವ ಸರಸಿಯು ತಾಯಿಯನ್ನು ಕಳೆದುಕೊಂಡ ದನದ ಕರು ಬೆಳ್ಳಿಯೊಂದಿಗೆ ತನ್ನ ನೋವನ್ನು ಹಂಚಿಕೊಳ್ಳುತ್ತಾಳೆ.

ಜವಾಬ್ದಾರಿಯಿಲ್ಲದ, ಸಂಸಾರದಲ್ಲಿ ತಾಯಿಯನ್ನು ಕಳೆದುಕೊಂಡ ತಬ್ಬಲಿಯಾಗುವ ಮಕ್ಕಳ ಬದುಕಿನ ಬಗೆಗೆ ಈ ಕಥೆ ನೀಡುವ ಚಿತ್ರಣ ಹೃದಯ ವಿದ್ರಾವಕವಾದುದು. ಹೆಣ್ಣಿನ ಮನಸ್ಸು ಹೆಣ್ಣಿಗೆ ಅರ್ಥವಾಗದೆ ಎಲ್ಲರೂ ಜವಾಬ್ದಾರಿಯಿಂದ ಪಾರಾಗುವುದಕ್ಕೆ ಹೆಣಗುತ್ತಿರುವ ಈ ಸಮಾಜ ಹೀಗೆಯೇ? ಎಂಬ ಪ್ರಶ್ನೆ ಮನಸ್ಸನ್ನು ಕಾಡುತ್ತದೆ. ಗೋವಿನ ಹಾಡನ್ನು ನೆನಪಿಸುವ ಸ್ಥಿತಿಯಾಗಿದೆ ಸರಸಿಯದ್ದು.

'ಕಲ್ಲರಳಿ ಹೂವಾಗಿ' ಕಥೆಯು ನಮ್ಮ ಒಳ್ಳೆತನ ಎಂಥ ಕಲ್ಲುಹೃದಯಗಳ ಮನಸ್ಸನ್ನೂ ಅರಳಿಸುತ್ತದೆ ಎನ್ನುವುದನ್ನು ನಿರೂಪಿಸುವ ಕಥೆಯಾಗಿದೆ. ಗಂಡನನ್ನು ಕಳೆದುಕೊಂಡ ಗಂಡನ ಮನೆಯವರ ಎಳ್ಳಷ್ಟೂ ಪ್ರೀತಿ ಸಿಗದ ಈ ಕಥೆಯ ಹೆಣ್ಣಿಗೆ ಗಂಡನ ಮನೆಯ ಬಗೆಗಿನ ಪ್ರೀತಿ ಹೋಗಿರುವುದಿಲ್ಲ. ತನ್ನ ಅತ್ತೆ ಸತ್ತಾಗ ಮಗನೊಂದಿಗೆ ಅಲ್ಲಿಗೆ ಹೋದರೂ ಯಾರೂ ಮಾತನಾಡಿಸದೆ ಒಂಟಿಯಾಗಿ ಉಳಿದ ಆಕೆಗೆ ಕೊನೆಗೆ ಮಾವನ ಪ್ರೀತಿಯ ಮಾತುಗಳು ಬೆರಗನ್ನುಂಟುಮಾಡುತ್ತದೆ.

ಅಜ್ಜಿಯನ್ನು ಕಳೆದುಕೊಂಡು ಇನ್ನಾರೂ ನಮ್ಮ ಪಾಲಿಗಿಲ್ಲ ಎಂದುಕೊಳ್ಳುತ್ತಿರುವಾಗ ಅಜ್ಜನ ಪ್ರೀತಿಯ ಮಾತುಗಳು ಅಶೋಕನಲ್ಲಿ ಹೊಸ ಭರವಸೆಯನ್ನು ತುಂಬುತ್ತವೆ. ಅಜ್ಜಿಯ ವಾತ್ಸಲ್ಯ ಈ ಮನೆಯಲ್ಲಿ ಮರೆಯಾಗಿಲ್ಲ ಎಂಬ ಭಾವನೆಯೊಂದಿಗೆ ಆಕೆ ತನ್ನ ಮಗನೊಂದಿಗೆ ಹೊರಟು ಬರುತ್ತಾಳೆ.

'ಕುಬ್ಜ' ಕಥೆಯು ಶ್ರೀಧರ ಹಾಗೂ ಆತನ ಹೆಂಡತಿ ಸುಜಾತರ ಕುಬ್ಜ ಮನಸ್ಥಿತಿಯನ್ನು ಚಿತ್ರಿಸುತ್ತದೆ. ಎಷ್ಟೋ ವರ್ಷಗಳಿಂದ ಮನೆಯಲ್ಲಿ ಎಲ್ಲರಿಗೂ ಬೇಕಾದವನಾಗಿ ಬದುಕಿದ ಕಿಟ್ಟಣ್ಣನನ್ನು ಕೊನೆಗೆ ಶ್ರೀಧರ ತನ್ನ ಹೆಂಡತಿಯ ಮಾತಿನಂತೆ ದೂರಮಾಡುತ್ತಾನೆ. 'ಸಂಬಂಧಕ್ಕೆ ಬೆಲೆಯಿಲ್ಲ' ಎಂಬುದನ್ನು ಶ್ರೀಧರ ಹಾಗೂ ಸುಜಾತರ ಪಾತ್ರಗಳು ನಿರೂಪಿಸುತ್ತವೆ.

ಹಳ್ಳಿಯಲ್ಲಿ ಹುಟ್ಟಿ ಆಧುನಿಕತೆಗೆ ತೆರೆದುಕೊಳ್ಳುವ ವಿದ್ಯಾವಂತನೊಬ್ಬ ಅನಾರಿಕನಾಗಿ ಯೋಚಿಸುತ್ತಾನೆಂಬುದಕ್ಕೆ ಈ ಕಥೆಯ ಶ್ರೀಧರನೇ ಸಾಕ್ಷಿ. ಸಣ್ಣ ಆಪಾದನೆ ತನ್ನ ಮೇಲೆ ಬಂದಾಗ ಸಾವಿಗೆ ಶರಣಾಗುವ ಕಿಟ್ಟಣ್ಣನ ಪತ್ನಿ ಶಾರದೆ ಹಾಗೂ ಮನುಷ್ಯ ಸಂಬಂಧವೇ ಬೇಕಾಗಿಲ್ಲದ ಶ್ರೀಧರನ ಹೆಂಡತಿ ಸುಜಾತ ಇವರಿಬ್ಬರ ಮನೋಭಾವನೆಯಲ್ಲಿ ಅಜಗಜಾಂತರವಿದೆ.

'ಯಾತ್ರೆ' ಕಥೆಯು ಗಂಡನನ್ನು ಕಳೆದುಕೊಂಡು ಮೂವರು ಮಕ್ಕಳಿಗಾಗಿ ಪಡಬಾರದ ಕಷ್ಟವನ್ನೆಲ್ಲಾ ಪಟ್ಟ ಶಾರದಮ್ಮರ ದುರಂತ ಬದುಕಿನ ಚಿತ್ರಣವನ್ನು ನೀಡುತ್ತದೆ. ಅಪ್ಪ ಸತ್ತ ನಂತರ ಸಹೋದರಿಯ ಮದುವೆಗಾಗಿ ಮನೆ ಮಾರಿ ತಮ್ಮ ತಮ್ಮ ಹೆಂಡತಿ – ಮಕ್ಕಳೊಂದಿಗೆ ಸುಖವಾಗಿ ಬದುಕಿದ್ದ ಮಕ್ಕಳು ಕೊನೆಗೆ ತಾಯಿ ಶಾರದಮ್ಮನನ್ನು ಬೀದಿಗೆ ತಳ್ಳುತ್ತಾರೆ. ಸತ್ತ ಗಂಡನ ಅಸ್ಥಿಯನ್ನು ಪವಿತ್ರ ಜಾಗಕ್ಕೆ ಹಾಕಿ ಸತ್ತ ಗಂಡನಿಗೆ ಸದ್ಗತಿ ದೊರಕಬೇಕೆಂದು ಹಾರೈಸುತ್ತಿದ್ದ ಶಾರದಮ್ಮನಿಗೆ ಅದಕ್ಕೆ ಅವಕಾಶವೇ ಸಿಗಲಿಲ್ಲ.

ಗಂಡು ಮಕ್ಕಳಿಂದ ಹಿರಿಯರಿಗೆ ಸದ್ಗತಿ ಎಂದು ಶಾರದಮ್ಮ ನಂಬಿದ್ದರು. ಆದರೆ ತನ್ನ ಮಕ್ಕಳು ತಂದೆಗೆ ಸದ್ಗತಿ ದೊರಕಿಸಿಕೊಡಲಿಲ್ಲ ಮಾತ್ರವಲ್ಲ ತನ್ನ ಸಾವಿಗೂ ಕಾರಣರಾಗುತ್ತಾರೆ. ಮಕ್ಕಳಿದ್ದೂ ಇಲ್ಲದ ಪರಿಸ್ಥಿತಿ ಶಾರದಮ್ಮನದು.

'ಅಷ್ಟರವರೆಗೆ' ಕಥೆ ತಾಯಿಯೊಬ್ಬಳ ಮನಸ್ಸಿನ ಬೇಗುದಿಯನ್ನು ತೆರೆದಿಡುವ ಕಥೆಯಾಗಿದೆ. ಮಗನಿಗೆ ಮೈಸೂರಿಗೆ ವರ್ಗವಾಯಿತು ಎಂಬ ಸುದ್ದಿ ಕೇಳಿ ಮೈಸೂರಿಗೆ ಹೋಗಲು ಅವಕಾಶ ಸಿಕ್ಕಿತಲ್ಲ ಎಂದು ಕಮಲಮ್ಮ ಬೇಸರದ ನಡುವೆಯೂ ಸಂತೋಷಪಡುತ್ತಾರೆ. ಅದಕ್ಕಾಗಿ ತನ್ನ ಸ್ವಂತ ಮನೆಯನ್ನೂ ಬಿಟ್ಟು ಹೋಗುವುದಕ್ಕೆ ಅವರು ಸಿದ್ಧರಿದ್ದರು. ಆದರೆ ಮಗ ತನ್ನ ಹೆಂಡತಿಯನ್ನು ಮಾತ್ರ ಕರೆದುಕೊಂಡು ಹೋಗುವುದಾಗಿ ಹೇಳಿದಾಗ ಕಮಲಮ್ಮನಿಗೆ ಹೇಳಿಕೊಳ್ಳಲಾರದ ದುಃಖವಾಗುತ್ತದೆ. ಮಗ ಶೇಖರ ಹೇಳುವ 'ಲಲಿತೆಯನ್ನು ಬಿಟ್ಟು ಹೋಗುವುದೆಂತಲೇ ಇದ್ದೆ. ಆದರೆ ಮೈಸೂರು ನೋಡಲು ತುದಿಗಾಲಲ್ಲಿ ನಿಂತಿದ್ದಾಳೆ. ಇನ್ನೂ ಚಿಕ್ಕ ವಯಸ್ಸು, ಆಸೆ ಪಡುವುದು ಸಹಜವೇ. ಅದೂ ಅಲ್ಲದೆ ಈಗಲ್ಲದೆ ಇನ್ನಾವಾಗ ನೋಡುತ್ತಾಳೆ'? (ಈ ಪ್ರಜಾರಾಜ್ಯದೊಳಗೆ, ಪು. ೪೦, ೨೦೦೬) ಎನ್ನುವ ಮಾತಿನ ಕೊನೆಯ ಸಾಲು ಕಮಲಮ್ಮನ ಕಿವಿಗಳಲ್ಲಿ ಮಾರ್ದನಿಗೊಳ್ಳುತ್ತವೆ.

ತಾಯಯನ್ನು ಅರ್ಥಮಾಡಿಕೊಳ್ಳಲಾರದ ಮೂರ್ಖ ಮಗನೊಬ್ಬನ ಚಿತ್ರಣ ಈ ಕಥೆಯಲ್ಲಿ ಅನಾವರಣಗೊಂಡಿದೆ.

'ಕರ್ಮಣ್ಯೇವಾಧಿಕಾರಸ್ತೇ' ಕಥೆಯು ಸಾಕಮಗನೊಬ್ಬ ತನ್ನನ್ನು ಸಾಕಿದವರಿಗೆ ನೀಡಿದ ಪ್ರತಿಫಲವನ್ನು ನಿರೂಪಿಸುವ ಕಥೆಯಾಗಿದೆ. ಹೆಂಡತಿಯ ದೈಹಿಕ ಸಮಸ್ಯೆಯಿಂದಾಗಿ ಮಕ್ಕಳಾಗದ ದಂಪತಿಗಳು ಅನಾಥಾಶ್ರಮದ ಮಗುವೊಂದನ್ನು ತಂದು ಮುದ್ದಿನಿಂದ ಸಾಕಿ ದೊಡ್ಡವವನ್ನಾಗಿ ಮಾಡಿದರು. ಕೊನೆಗೆ ನಿಜ ವಿಷಯ ತಿಳಿದ ಆತ ತಂದೆ – ತಾಯಿಯರನ್ನು ನಿಂದಿಸಲು ಆರಂಭಿಸುತ್ತಾನೆ. ಅದೇ ಬೇಸರದಲ್ಲಿ ತಾಯಿ ತೀರಿಹೋಗುತ್ತಾಳೆ. ಮುಂದೆ ಮದುವೆಯಾದ ಮಗ ಹಾಗೂ ಅವನ ಹೆಂಡತಿ ಮುದುಕನನ್ನು ಕಾಲ ಕಸವಾಗಿ ಕಾಣುತ್ತಾರೆ. ತನ್ನ ಹಿಂದಣ ನೆನಪುಗಳನ್ನೆಲ್ಲಾ ಮೆಲುಕು ಹಾಕುವ ಮುದುಕ ತನಗೆ ಸಿಕ್ಕ ಭಗವದ್ಗೀತೆಯ ಒಂದು ಶ್ಲೋಕವನ್ನು ಓದುತ್ತಾ ಸಮಾಧಾನ ತಂದುಕೊಳ್ಳುತ್ತಾರೆ. ಶ್ಲೋಕವೇ ಹೇಳುವಂತೆ 'ನಿನ್ನ ಕರ್ಮವನ್ನು ನೀನು ಮಾಡು' ಎನ್ನುವ ಹಾಗೆ ಅನಾಥ ಮಗುವೊಂದಕ್ಕೆ ಬದುಕು ನೀಡಿದರು.

ದೂರವಾಗುತ್ತಿರುವ ಸಂಬಂಧಗಳ ಚಿತ್ರಣ ಈ ಕಥೆಯಲ್ಲಿ ಮನಕರಗುವಂತೆ ಮೂಡಿಬಂದಿದೆ.

ಗಂಗಾ ಪಾದೇಕಲ್‌ರವರ ಕಥೆಗಳಲ್ಲಿ ಬರುವ ಪಾತ್ರಗಳು ಕುಟುಂಬದ ಚೌಕಟ್ಟನ್ನು ದಾಟಿ ಹೋಗಲು ಅಸಹಾಯಕವಾಗಿದ್ದರೂ, ಆ ಚೌಕಟ್ಟನ್ನು ದಾಟಬೇಕೆಂಬ ತುಡಿತವನ್ನು ಹೊಂದಿವೆ. ಸಂಪ್ರದಾಯಕ್ಕೆ ಶರಣು ಹೋದ ಕುಟುಂಬದ ಚಿತ್ರಣಗಳ ಜೊತೆಗೆ ವಿಭಕ್ತವಾಗಿ ಸ್ವತಂತ್ರದಿಂದ ಇರುವ ಕುಟುಂಬಗಳ ಬಗ್ಗೆ ಪ್ರಸ್ತಾಪಿಸುತ್ತಾರೆ,

ಹೆಣ್ಣಿನ ಶೀಲವನ್ನು ಕಾಪಾಡುವ ಹೊಣೆಗಾರಿಕೆ ಗಂಡಿಗಿರುತ್ತದೆ. ಶೀಲ ವಂಚಿತಳಾದ ಹೆಣ್ಣು ಸಾಮಾಜಿಕವಾದ ಬಹಿಷ್ಕಾರಕ್ಕೆ ಒಳಗಾಗುವ ಮೂಲಕ ಪುರುಷ ನಿಷ್ಠ ಯೋಚನೆಯ ಸಂಪ್ರಾದಾಯಿಕ ನಿಲುವು ಗೋಚರಿಸುತ್ತದೆ. ಗಂಡು ಮಗು ಎನ್ನುವ ಸಾಮಾನ್ಯ ವಾಂಛೆ ಪಾದೇಕಲ್‌ರವರ ಕಥೆಗಳಲ್ಲೂ ಕಾಣಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಒಂಟಿ ಮಹಿಳೆಯರು, ಅಸಹಾಯಕ ಮಹಿಳೆಯರು ಕುಟುಂಬವನ್ನು ಬಿಟ್ಟು ಜೀವಿಸಲು ಸಾಧ್ಯವಿಲ್ಲ ಎನ್ನುವ ಅಂಶವನ್ನು ಇವರ ಕಥೆಗಳು ಪ್ರತಿಪಾದಿಸುತ್ತವೆ.

ಪ್ರೇಮಾಭಟ್‌ರವರ,

ಕಾಣಿಕೆ (ಕಥಾವರ್ಷ, ೨೦೦೭)

ತುತ್ತು (ಕಥಾವರ್ಷ, ೨೦೦೭)

ಪಾರಿವಾಳ (ಕಥಾವರ್ಷ, ೨೦೦೭)

ಕರುಳಿನ ಕರೆ (ಕಥಾವರ್ಷ, ೨೦೦೭)

ಬೆಳಕು (ಕಥಾವರ್ಷ, ೨೦೦೭)

ಹಂಗು(ಕಥಾವರ್ಷ, ೨೦೦೭)

ಬೇಡ ಅಂತ ಅಂದ್ರೂ ಕೇಳ್ಲಿಲ್ಲಾ (ಕಥಾವರ್ಷ, ೨೦೦೭)

ಆತಂಕ (ಕಥಾವರ್ಷ, ೨೦೦೭)

ಆದಿ - ಅಂತ್ಯ (ಕಥಾವರ್ಷ, ೨೦೦೭)

ಗೀಳು (ಕಥಾವರ್ಷ, ೨೦೦೭)

ಸುಖ ಎಲ್ಲಿದೆ (ಕಥಾವರ್ಷ, ೨೦೦೭)

ಅಪಹರಣ (ಕಥಾವರ್ಷ, ೨೦೦೭)

ಬದುಕು (ಕಥಾವರ್ಷ, ೨೦೦೭)

ಪಂದ್ಯ (ಕಥಾವರ್ಷ, ೨೦೦೭)

'ಕಾಣಿಕೆ' ಕಥೆಯು 'ಹೆತ್ತ ತಾಯಿಗೆ ಹೆಗ್ಗಣ ಮುದ್ದು' ಎನ್ನುವ ಗಾದೆಯನ್ನು ನೆನಪಿಸುವ ಕಥೆಯಾಗಿದೆ. ಮಕ್ಕಳೆಲ್ಲಾ ತುಂಬಾ ದೊಡ್ಡವರಾದ ಮೇಲೆ ಗರ್ಭವತಿಯಾದ ಸರೋಜ ಆ ಮಗುವನ್ನು ಶಾರದಳಿಗೆ ಕೊಡುವುದೆಂದು ನಿರ್ಧಾರ ಮಾಡಿದರೂ ಕ್ರಮೇಣ ಅವಳಿಗೆ ಅದರ ಮೇಲೆ ಪ್ರೀತಿ ಹುಟ್ಟುತ್ತದೆ. ಸರೋಜಳ ಮಗಳು ಕಲ್ಪನಾ ಆ ಮಗುವನ್ನು ಯಾರಿಗೂ ಕೊಡುವುದಕ್ಕೆ ಬಿಡದೆ ತಾನೇ ಮನೆಗೊಯ್ಯುತ್ತಾಳೆ.

ಸರೋಜಳ ಗಂಡ ವೆಂಕಟೇಶ ಇದರಲ್ಲಿ ತನ್ನ ತಪ್ಪು ಏನೂ ಇಲ್ಲ ಎನ್ನುವಂತೆ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವವನಾಗಿ ಹೆಂಡತಿಯನ್ನಾಗಲಿ ಮಗುವನ್ನಾಗಲೀ ನೋಡಲು ಬರುವುದಿಲ್ಲ. ಸರೋಜ ಎಲ್ಲವೂ ತನ್ನದೇ ತಪ್ಪು ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

'ತುತ್ತು' ಕಥೆಯಲ್ಲಿ ಮಕ್ಕಳ ಸುಖವೇ ನಮ್ಮ ಸುಖ ಎಂದು ತಿಳಿದ ತಂದೆ- ತಾಯಿ ಹೃದಯ ವೈಶಾಲ್ಯತೆಯ ಚಿತ್ರಣವಿದೆ. ಮಗ ದಯಾನಂದನ ಹೆಂಡತಿ ಮನೆಯವರ ಆಜ್ಞೆಯಂತೆ ದಯಾನಂದನ ಅಪ್ಪ-ಅಮ್ಮ ಆಶ್ರಮದಲ್ಲಿ ಹೋಗಿ ಬದುಕುತ್ತಾರೆ. ತಾವು ಕಷ್ಟ ಅನುಭವಿಸಿದರೂ ಮಗನ ಸಂಸಾರ ಚೆನ್ನಾಗಿರಲಿ ಎಂದು ಹಾರೈಸುವ ತಂದೆ-ತಾಯಿಗಳಿಗೆ ಒಳಗಿಂದೊಳಗೆ ತಮಗೆ ಹೆಣ್ಣುಮಗಳಿರುತ್ತಿದ್ದರೆ ... ಎಂದು ಅನಿಸುತ್ತದೆ.

ಪತ್ರದಲ್ಲಿ ತಾಯಿ ತಿಳಿಸುವ 'ಗಂಡು ಮಕ್ಕಳಿಗಿಂತ ಹೆಣ್ಣು ಮಗಳಿದ್ದರೆ ಸುಖ ಕಾಣೋ, ಅಳಿಯ ಒಳ್ಳೆಯನಾಗಿದ್ದರೆ ತುತ್ತುಕೊಟ್ಟವಳನ್ನು ಸಾಯೋಕಾಲದಲ್ಲಿ ನೋಡೋದು ಮಗಳೇ' (ಕಥಾವರ್ಷ ಪು. ೫, ೨೦೦೭)

ಎಂಬ ಮಾತು ದಯಾನಂದನಿಗೆ ಛಾಟಿಯ ಏಟಿನಂತೆ ತಾಗುತ್ತದೆ. ಈ ಕಥೆ ಪ್ರಸ್ತುತ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ.

'ಪಾರಿವಾಳ' ಕಥೆಯು ಒಂದು ಪಕ್ಷಿಯ ಜೊತೆಯಲ್ಲಿ ಹೆಣ್ಣೊಬ್ಬಳ ಸಂಬಂಧವನ್ನು ಹೊಸರೀತಿಯಲ್ಲಿ ಚಿತ್ರಿಸುತ್ತದೆ. ತನ್ನ ಪ್ರಾಣವೇ ಆಗಿದ್ದ ಪಾರಿವಾಳವನ್ನು ಗೌರಿ ಮದುವೆಯಾಗಿ ಗಂಡನ ಮನೆಗೆ ಹೋಗುವಾಗಲೂ ಕರೆದುಕೊಂಡು ಹೋಗುತ್ತಾಳೆ. ಗೌರಿಯನ್ನು ಒಂದು ನಿಮಿಷವೂ ಬಿಟ್ಟಿರಲಾರದ ಪಾರಿವಾಳ ಕೊನೆಗೆ ಗೌರಿಯ ಮನೆಯಲ್ಲಿ ಪ್ರಾಣತ್ಯಾಗ ಮಾಡುತ್ತದೆ.

ಗೌರಿಯ ತಂದೆ ಪಾರ್ಶ್ವವಾಯು ಪೀಡಿತರಾದಾಗ ಪಾರಿವಾಳದ ಬಿಸಿರಕ್ತ ಕುಡಿಸುವುದಕ್ಕಾಗಿ ಅದನ್ನು ಕೊಂದು ಬಿಡುತ್ತಾರೆ. ಆ ವಿಚಾರ ಗೌರಿಗೆ ಮರುದಿನ ತಿಳಿಯುತ್ತದೆ. ಹಕ್ಕಿಯ ದುರಂತ ಜೊತೆಗೆ ಅಪ್ಪನ ಕಾಯಿಲೆ ಇವೆರಡೂ ಗೌರಿಯನ್ನು ಮೌನವಹಿಸುವಂತೆ ಮಾಡುತ್ತದೆ.

'ಕರುಳಿನ ಕರೆ' ಕಥೆಯು ತಾಯಿಯ ವಿಶಾಲ ಮನಸ್ಸನ್ನು ತೆರೆದಿಡುವ ಕಥೆಯಾಗಿದೆ. ಇಡೀ ಸಂಸಾರವನ್ನು ಸರಿದೂಗಿಸಿಕೊಂಡು ಹೋಗುವ ತನ್ನ ತಾಯಿಯ ವ್ಯಕ್ತಿತ್ವವನ್ನು ಈ ಕಥೆಯ ನಳಿನಿ ತೆರೆದಿಡುತ್ತಾಳೆ. ಅವಳು ಆರಂಭದಲ್ಲೇ ಹೇಳುವ ಹಾಗೆ 'ಅಮ್ಮ ಅರ್ಥಕ್ಕೆ ಸಿಗದ ಅದ್ಭುತ ಪದ' (ಕಥಾವರ್ಷ, ಪು. ೫೨, ೨೦೦೭) ಎನ್ನುವ ಮಾತು ಕೇವಲ ನಳಿನಿಯ ತಾಯಿಗಷ್ಟೇ ಸೀಮಿತವಾಗದೇ ಲೋಕದ ಅದೆಷ್ಟೋ ತಾಯಂದಿರಿಗೆ ಅನ್ವಯವಾಗುತ್ತದೆ.

ತನ್ನ ಗಂಡ, ಮಕ್ಕಳು, ಬಂಧುಗಳು, ಸಮಾಜ ಹೀಗೆ ಲೋಕಕ್ಕೆಲ್ಲಾ ಒಳಿತು ಹಾರೈಸುವ ಅಮ್ಮಾ ಯಾವತ್ತೂ ನಿಸ್ವಾರ್ಥಿ. ಈ ಲೋಕದಲ್ಲಿ ಬೆಲೆ ಕಟ್ಟಲಾರದ, ಬೆಲೆ ಕಾಟ್ಟಬಾರದ ಒಂದು ಮೌಲ್ಯವೆಂದರೆ ತುಂಬ ಎಂಬ ವಿಚಾರ ಈ ಕಥೆಯಲ್ಲಿ ನಿರೂಪಿತವಾಗುತ್ತದೆ. 'ಅಮ್ಮ ನಿನ್ನಂತೆ ನಾನು ಕೂಡ ವಾಣಿಯ ಒಡವೆಗಳನ್ನು ಅವಳಿಗೆ ಹಿಂದಿರುಗಿಸಿ ಋಣಮುಕ್ತಳಾಗಿದ್ದೇನೆ'. (ಅದೇ ಪು. ೫೫) ಎನ್ನುವ ಮಾತು ತಾಯಿಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

'ಬೆಳಕು' ಕಥೆಯಲ್ಲಿ ಸಂಪ್ರದಾಯದ ಆವರಣದಿಂದ ಹೊರಗೆ ಇಣುಕದ ತಾಯಿ ಹಾಗೂ ಸ್ವಾತಂತ್ರ್ಯಕ್ಕಿಂತಲೂ ಭಿನ್ನವಾಗಿ ಸ್ವೇಚ್ಛಾಚಾರವನ್ನೇ ಬದುಕೆಂದು ಭಾವಿಸಿಕೊಂಡ ಮಗಳ ಚಿತ್ರಣವಿದೆ. ಕೌಟುಂಬಿಕ ಸಂಬಂಧಗಳನ್ನು ಗಟ್ಟಿಗೊಳಿಸುವುದಕ್ಕಾಗಿ ತಾಯಿ ಶ್ರಮವಹಿಸಿದರೆ ಮಗಳು ನೀತಾ ಹೊರಗಿನ ಆಕರ್ಷಣೆಯೇ ಬದುಕು ಎಂದು ಭಾವಿಸಿಕೊಂಡವಳು. ತಾನು ಪ್ರೀತಿಸುವ ಶಶಿಧರ್ ಇನ್ನೊಬ್ಬಳೊಡನೆ ತಿರುಗುವುದನ್ನು ನೋಡಿದ ನೀತಾ ವಾಸ್ತವ ಪ್ರಪಂಚಕ್ಕಿಳಿಯುತ್ತಾಳೆ.

'ಹಂಗು' ಕಥೆಯು ಮಕ್ಕಳು ದಾರಿ ತಪ್ಪುವಲ್ಲಿ ತಂದೆ – ತಾಯಿಯರ ಪಾತ್ರ ಇದೆ ಎನ್ನುವುದನ್ನು ಸ್ಪಷ್ಟಪಡಿಸುವ ಕಥೆ. ಭಾರ್ಗವಿಗೆ ತನ್ನ ಮಗ ಹಾಗೂ ಮಗಳು ವರ್ತಿಸುವ ರೀತಿ ತುಂಬಾ ಅಸಮಾಧಾನವನ್ನುಂಟು ಮಾಡುತ್ತದೆ. ಬುದ್ಧಿ ಹೇಳಿ ಸರಿ ದಾರಿಗೆ ತರುವುದಕ್ಕೆ ಹೋದಾಗ ಜಗಳವೇರ್ಪಡುತ್ತದೆ. ಬುದ್ಧಿ ಹೇಳಲು ಹೋದ ತಾಯಿಗೆ ದೇವಕಿ ಹೇಳುವ 'ನೀನೀಗ ಮೊದಲು ಅಪ್ಪ ಮತ್ತು ನಿನ್ನ ಸಂಬಂಧದ ಬಗ್ಗೆ ಯೋಚಿಸು, ಮತ್ತೆ ನನಗೆ ಉಪದೇಶ ಕೊಡಲು ಬಾ' (ಕಥಾವರ್ಷ, ಪು. ೮೬, ೨೦೦೭) ಎಂಬ ಮಾತು ಭಾರ್ಗವಿಯನ್ನು ಆಲೋಚಿಸುವಂತೆ ಮಾಡುತ್ತದೆ.

ಸಂಸಾರದ ಜವಾಬ್ದಾರಿಯಿಂದ ತಪ್ಪಿಸಿಕೊಂಡು ಆಶ್ರಮದಲ್ಲಿ ಹೋಗಿ ಬದುಕುವ ಗಂಡ, ಮನೆಯಲ್ಲಿ ಎಲ್ಲಾ ಭಾರಗಳನ್ನೂ ಹೊತ್ತು ಒದ್ದಾಡುವ ಹೆಂಡತಿ – ಇವು ಮಕ್ಕಳಿಗೆ ಕೊಡುವ ಸಂದೇಶವೇನು? ಎಂಬ ಪ್ರಶ್ನೆ ಯಜಮಾನ ಸಂಸ್ಕೃತಿಯನ್ನು ಪ್ರಶ್ನಿಸುವ ರೀತಿಯಲ್ಲಿ ಇದೆ.

'ಬೇಡ ಅಂತ ಅಂದ್ರೂ ಕೇಳ್ಲಿಲ್ಲಾ' ಎಂಬ ಕಥೆಯು ವಿಧಿ ಬರಹವನ್ನು ಮೀರುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಮನವರಿಕೆ ಮಾಡುವ ಕಥೆಯಾಗಿ ಕಾಣುತ್ತದೆ. ಎಲ್ಲೋ ಆದ ಅಪಘಾತದ ಸುದ್ದಿ ಕೇಳಿದ ಸುಶೀಲೆ ತನ್ನ ಗಂಡನನ್ನು ಯಾವ ವಾಹನದಲ್ಲಿಯೂ ತಿರುಗಾಡುವುದಕ್ಕೆ ಬಿಡುತ್ತಿರಲಿಲ್ಲ. ಮುಂದೊಂದು ದಿನ ಆಕೆ ರಿಕ್ಷಾದಲ್ಲೆ, ಅಪಘಾತಕ್ಕೊಳಗಾಗಿ ಪ್ರಜ್ಞಾಹೀನ ಸ್ಥಿತಿಗೆ ತಲುಪುತ್ತಾಳೆ.

ಬಸ್ ಅಪಘಾತದಲ್ಲಿ ಪೆಟ್ಟಾಗಿ ಬಂದ ಪ್ರಾಣೇಶ ಹೆಂಡತಿಯೊಡನೆ ಏನಾದರೂ ಸುಳ್ಳು ಹೇಳಬೇಕೆಂದುಕೊಂಡು ಬಂದರೂ ಆತನಿಗೆ ಸಿಕ್ಕಿದ ಸುದ್ದಿ ತನ್ನ ಹೆಂಡತಿಗೆ ರಿಕ್ಷಾ ಅಪಘಾತದಲ್ಲಿ ಪ್ರಜ್ಞೆ ಕಳೆದುಕೊಂಡಿದ್ದಾಳೆ ಎಂಬುದಾಗಿರುತ್ತದೆ.

'ಆತಂಕ' ಕಥೆಯು ಗಂಡನ ಮನೆಯಲ್ಲಿ ಯಾರಿಗೂ ಬೇಡದವಳಾಗಿ ಬದುಕು ಸಾಗಿಸುವ ಗಂಗಮ್ಮನ ಕಥೆಯನ್ನು ಹೇಳುತ್ತದೆ. ಕೇವಲ ಗಂಡು ಮಗುವನ್ನು ಪಡೆಯುವ ಆಸೆಯಿಂದ ಇಪ್ಪತ್ತು ವರ್ಷ ದಾಟಿದ ತಂತ್ರಿಗಳು ಹತ್ತು ವರ್ಷದ ಗಂಗಮ್ಮನನ್ನು ಮದುವೆಯಾಗುತ್ತಾರೆ. ತಂತ್ರಿಗಳಿಗೆ ಮೊದಲ ಹೆಂಡತಿಯಿಂದ ಐದು ಮಂದಿ ಹೆಣ್ಣು ಮಕ್ಕಳಿದ್ದರು. ಮದುವೆಯಾಗಿ ಹೋದ ದಿನದಿಂದ ಏನೂ ಅರಿಯದ ಮುಗ್ಧೆ ಗಂಗಮ್ಮನಿಗೆ ಮನೆಯ ಎಲ್ಲ ಜವಾಬ್ದಾರಿಯು ತಲೆಯ ಮೇಲೆ ಬೀಳುತ್ತದೆ. ತಂತ್ರಿಯ ಹೆಣ್ಣು ಮಕ್ಕಳೆಲ್ಲ ಈಕೆಯನ್ನು ಕೆಲಸದಾಳಿನಂತೆ

ನೋಡಿಕೊಳ್ಳುತ್ತಾರೆ. ಮೊದಲ ಬಾರಿಗೆ ಹೆಣ್ಣು ಮಗು ಹೆತ್ತ ಗಂಗಮ್ಮ ಎರಡನೆ ಬಾರಿಗೆ ಗಂಡು ಮಗು ಹೆತ್ತದ್ದಕ್ಕಾಗಿ ಅವಳ ಜೀವ ಉಳಿಯಿತು.

ದಿನದಿಂದ ದಿನಕ್ಕೆ ಪೋಕರಿಯಾಗಿ ಬೆಳೆಯುತ್ತಿದ್ದ ಮಗನ ಬಗೆಗೆ ಆತಂಕ ಹೆಚ್ಚುತ್ತಿತ್ತಾದರೂ ಗಂಡು ಮಗುವನ್ನು ಹೆತ್ತ ಸಂತೋಷವೂ ಇತ್ತು. ಗಂಡು ಮಗು ಹುಟ್ಟಿದರೇನೇ ತಂದೆಗೆ ಸದ್ಗತಿ ಎಂದು ನಂಬಿದ ಸಮಾಜ ಅದಕ್ಕಾಗಿ ಹೆಣ್ಣು ಜೀವವನ್ನು ಹೇಗೆ ಬಲಿ ಕೊಡುತ್ತದೆ ಎಂಬುದರ ಚಿತ್ರಣ ಈ ಕಥೆಯಲ್ಲಿದೆ.

'ಆದಿ - ಅಂತ್ಯ' ಕಥೆಯು ಹೆಣ್ಣೊಬ್ಬಳ ಅತಿಯಾದ ಆಸೆ, ಲೆಕ್ಕಚಾರವಿಲ್ಲದ ಬದುಕು ಇಡೀ ಸಂಸಾರವನ್ನು ಹೇಗೆ ಮುಳುಗಿಸಿ ಬಿಡುತ್ತದೆ ಎಂಬುದರ ಚಿತ್ರಣವನ್ನು ನೀಡುತ್ತದೆ. ಮೋಹನನ ಹೆಂಡತಿ ಕಂಡದ್ದೆಲ್ಲಾ ಬೇಕು ಎಂದು ಹಠ ಹಿಡಿಯುವವಳು. ಆರಂಭದಲ್ಲಿ ಹೆಂಡತಿಯ ಮಾತಿಗೆ ಇದಿರಾಡಲಾಗದೆ ಹೇಳಿದ ಹಾಗೆ ಕೇಳುತ್ತಾನೆ. ಕೊನೆಗೆ ಮನೆಯ ಒಂದೊಂದು ಸೊತ್ತುಗಳನ್ನೇ ಮಾರಾಟ ಮಾಡಿ ಮನೆಬಿಟ್ಟು ಹೋಗುತ್ತಾನೆ.

ಗಂಡ - ಹೆಂಡಿರ ನಡುವಿನ ಬಿರುಕಿಗೆ ಕಾರಣವೇ ಹೆಂಡತಿಯಾದ ಶುಭಾಳ ಅತಿಯಾದ ಆಸೆ. ಇತರರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುತ್ತಾ ಕೊರತೆ ಹುಡುಕುವುದರಲ್ಲೇ ಕಾಲ ಕಳೆದ ಶುಭಾ ಗಂಡನ ನಿಜ ಸ್ಥಿತಿಯನ್ನು ಅರಿಯದೇ ಹೋದರೂ ಕೊನೆಗೆ ತಾನು ಮಾಡಿದ ತಪ್ಪಿಗಾಗಿ ವ್ಯಥೆ ಪಡುತ್ತಾಳೆ.

'ಗೀಳು' ಕಥೆಯು ಎಷ್ಟೋ ಸಂದರ್ಭದಲ್ಲಿ ಮನೆಯ ಸುವ್ಯವಸ್ಥೆ ಹಾಳಾಗುವಲ್ಲಿ ಗಂಡನಾದವನ ಪಾತ್ರವೇ ಇರುತ್ತದೆ ಎಂಬುದನ್ನು ನಿರೂಪಿಸುತ್ತದೆ. ತನ್ನ ಹೆಂಡತಿ ಹಳ್ಳಿಯ ಗುಗ್ಗು, ಅವಳಿಗೆ ಚೆನ್ನಾಗಿ ಅಲಂಕಾರ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ ಎನ್ನುತ್ತಿದ್ದ ವಾಸುದೇವ ಪಕ್ಕದ ಮನೆಯ ಮಂಜುವನ್ನು ನೋಡುವುದರಲ್ಲಿಯೇ ಸಮಯ ಕಳೆಯುತ್ತಾನೆ. ಇದನ್ನು ತಿಳಿದ ವಾಸುದೇವನ ಹೆಂಡತಿ ತನಗೆ ಇಷ್ಟವಿಲ್ಲದಿದ್ದರೂ ಗಂಡನನ್ನು ಮೆಚ್ಚಿಸುವುದಕ್ಕಾಗಿ ಫ್ಯಾಷನ್ ಮಾಡತೊಡಗುತ್ತಾಳೆ.

ಕೊನೆಗೆ ವಾಸುದೇವನ ಹೆಂಡತಿ ದಾರಿ ತಪ್ಪುತ್ತಾಳೆ. ಇರುವುದರಲ್ಲೇ ತೃಪ್ತಿ ಕಾಣದೆ ಇಲ್ಲದುದರ ಕಡೆಗಿನ ತುಡಿತದಿಂದ ಮನಸ್ಸಿನ ನೆಮ್ಮದಿಯನ್ನೇ ಹಾಳುಮಾಡಿಕೊಳ್ಳಬೇಕಾಗುತ್ತದೆ. ಗಂಡನನ್ನು ಒಲಿಸಿ ಬಾಳುವುದರಲ್ಲೇ ಸುಖವಿದೆ ಎಂದು ತಿಳಿದ ವರದಾ ತನ್ನನ್ನು ತಾನು ನಿಯಂತ್ರಣದಲ್ಲಿಟ್ಟುಕೊಳ್ಳಲಾಗದೆ ಹೋಗುತ್ತಾಳೆ.

'ಸುಖ ಎಲ್ಲಿದೆ' ಕಥೆಯು ಹೆಣ್ಣು ತನ್ನ ಮೇಲೆ ನಡೆಯುತ್ತಿರುವ ಪುರುಷನ ದಬ್ಬಾಳಿಕೆಯನ್ನು ಪ್ರಶ್ನಿಸದೆ ಸಹಿಸಿಕೊಳ್ಳುವವರೆಗೆ ಅವಳ ಶೋಷಣೆ ನಿರಂತರವಾಗಿ ನಡೆಯುತ್ತದೆ ಎಂಬುದನ್ನು ತಿಳಿಸುತ್ತದೆ. ಈ ಕಥೆಯ ವಾರಿಧಿ ಗಂಡನಾದ ರಾಘವನ ಭೋಗದ ವಸ್ತುವಾಗಿ ಅವನ ಬೈಗುಳ - ಹೊಡೆತಗಳನ್ನು ಅನುಭವಿಸಿ ಬದುಕಿದವಳು.

ವಾರಿಧಿಯ ಸ್ಥಿತಿಗತಿಯ ಬಗೆಗೆ ನೆರೆಯವರು ಅವಳ ತಾಯೊಡನೆ ಹೇಳುವ 'ಯಾಕೆ ಜಾನಕಮ್ಮಾ ಅವನಿಗೆ ಅಷ್ಟು ಅಂಜಬೇಕು. ಹುಡುಗಿಗೆ ವಿದ್ಯೆ ಇದೆ, ಒಂದು ಮಗು ಬೇರೆ ಇದೆ. ಸೀದಾ ಸಾದಾ ಅವನ ಹಂಗು ಏನು ಅಂತ ಬರೋದು ತಾನೆ' (ಕಥಾವರ್ಷ, ಪು. ೨೨೪, ೨೦೦೭) ಎಂಬ ಮಾತು ಹೆಣ್ಣು ಸ್ವತಂತ್ರ ಬದುಕನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹೇಳುತ್ತದೆ.

'ಅಪಹರಣ' ಕಥೆಯಲ್ಲಿ ಹೆಣ್ಣಿನ ವ್ಯಕ್ತಿತ್ವದ ಗಟ್ಟಿತನವಿದೆ. ತನಗೆ ಮಕ್ಕಳಾಗುವುದಿಲ್ಲವೆಂದು ಗಂಡ ಶ್ರೀಧರ ರಾಧಿಕಾಳನ್ನು ಮದುವೆಯಾಗುತ್ತಾನೆ. ಆದರೂ ಮಕ್ಕಳಾಗುವುದಿಲ್ಲ. ಶರ್ವಾಣಿ ಶ್ರೀಧರನಿಗೆ 'ನಿನ್ನಲ್ಲೇ ಕಣೋ ದೋಷ ಇರೋದು, ನಮ್ಮಿಬ್ಬರಲ್ಲೂ ಅಲ್ಲ. ಇನ್ನೊಬ್ಬ ಹುಡುಗಿಗೆ ಮೋಸ ಮಾಡಿ ತಾಳಿಗೀಳಿ ಕಟ್ಟೇಯ ಜೋಕೆ !' (ಪ್ರೇಮಾಭಟ್, ಕಥಾವರ್ಷ, ಪು. ೪೨೬, ೨೦೦೭) ಎಂದು ಹೇಳಬೇಕೆನಿಸಿದರೂ ಆಕೆಯ ಮನಸ್ಸು ಅದಕ್ಕೆ ಒಪ್ಪುವುದಿಲ್ಲ. ಇಲ್ಲಿ ಶರ್ವಾಣಿ ಇನ್ನೊಬ್ಬನಿಂದ ಮಗುವನ್ನು ಪಡೆಯುವ ನೀಚ ಕೃತ್ಯಕ್ಕೆ ಇಳಿಯದೆ ಗೋಪಾಲನನ್ನು ಸಾಕುಮಗನಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಹೆಣ್ಣಿನ ಬದುಕಿನ ಪಾವಿತ್ರ್ಯತೆಯ ಅನಾವರಣ ಇಲ್ಲಾಗಿದೆ.

'ಬದುಕು' ಕಥೆಯು ಅಸಹಾಯಕ ಹೆಣ್ಣಿನ ಮೇಲಿನ ಶೋಷಣೆಯನ್ನು ಚಿತ್ರಿಸುತ್ತದೆ. ಪದ್ದು ತನ್ನ ಗಂಡನಿಗೆ ಮೂರನೆಯ ಹೆಂಡತಿಯಾಗಿ ಬಂದ ಮರುವರ್ಷವೇ ಗಂಡನನ್ನು ಕಳೆದುಕೊಂಡು ವಿಧವೆಯಾದದ್ದಲ್ಲದೆ ಗಂಡನ ಹಿರಿ ಹೆಂಡತಿಯ ಮಗ ಗೋವಿಂದನಿಂದ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಕೆದಿಲಾಯರ ನಿಸ್ವಾರ್ಥ ಮನಸ್ಸಿನಿಂದ ಆಕೆ ಬದುಕುಳಿಯುತ್ತಾಳೆ ಮಾತ್ರವಲ್ಲ, ಅವರ ಮಕ್ಕಳಿಗೆ ತಾಯಿಯಾಗಿ ತನ್ನ ಬದುಕನ್ನು ಕಂಡುಕೊಳ್ಳುತ್ತಾಳೆ.

ಬದುಕೇ ಒಂದು ಪಂದ್ಯ ಎನ್ನುವುದನ್ನು ಮನದಟ್ಟು ಮಾಡಿಕೊಡುವ 'ಪಂದ್ಯ' ಕಥೆಯಲ್ಲಿ ಹೆಣ್ಣಿನ ಶೀಲಕ್ಕೆ ಸಂಚಕಾರ ಬಂದಾಗ ಅದನ್ನು ಸ್ವೀಕರಿಸುವ ಮನೋಧರ್ಮಗಳ ವಿವರಣೆಯಿದೆ. ಟೂರ್ನಮೆಂಟ್ ಒಂದಕ್ಕೆ ಹೋಗಿದ್ದ ಮಾಳವಿಕಾ ಅತ್ಯಾಚಾರಕ್ಕೆ ಒಳಗಾಗಿ ಆಡದೇ ಹಿಂದಕ್ಕೆ ಬಂದಾಗ ಅವಳ ತಾಯಿ ವತ್ಸಲಾ ಹೇಳುವ 'ಇದ್ನೆ ಮನಸ್ಸಿನಲ್ಲಿಟ್ಟುಕೊಂಡು ನೀ ಕೊರಗೋದೇನು ಬ್ಯಾಡ. ಇನ್ನು ಮುಂದೆ ಎಲ್ಲಿ ಹೋದ್ರು ಬಂದ್ರು ನೀ ಹ್ಯಾಗೆ ಜಾಗ್ರತೆಯಾಗಿರಬೇಕು ಅನ್ನೋದು ನಿಂಗೀಗ ಅರ್ಥ ಆಗಿದ್ದಾತು, ಅಲ್ವೇನ...' (ಕಥಾವರ್ಷ, ಪು. ೬೫೫, ೨೦೦೭)ಎನ್ನುವ

ಮಾತಾಗಲೀ, 'ನೀ ತಪ್ಪು ಮಾಡಿದ್ದಲ್ಲ ಇದು ... ನೀ ಟೂರ್ನಮೆಂಟ್ ಎಲ್ಲೆಲ್ಲಿ ನಡೆಯುತ್ತೋ ಅಲ್ಲೆಲ್ಲ ಹೋಗೋದು ನಿಲ್ಲಿಸೋದೇನು ಬ್ಯಾಡ್ದೆ. ಹೆಸರು ಇದ್ರೆ ಆತು. ಎಲ್ಲಾ ಮುಚ್ಚೋತು. ಕಾಂಬ ನಿನ್ನ ಅದೃಷ್ಟ ಹ್ಯಾಂಗಿತ್ತೊ ಹಂಗಾಗ್ಲಿ' (ಅದೇ... ಪು. ೬೬೧) ಎನ್ನುವ ಮಾತಾಗಲೀ ತಾಯಿ ಮಕ್ಕಳಲ್ಲಿ ತುಂಬಿಸಬೇಕಾದ ಪ್ರೀತಿ, ವಿಶ್ವಾಸ, ಧೈರ್ಯವನ್ನು ಹೇಳುತ್ತದೆ. ತನ್ನದಲ್ಲದ ತಪ್ಪಿಗೆ ಹೆಣ್ಣು ಕೊರಗಿ ಜೀವನ ಹಾಳುಮಾಡಿಕೊಳ್ಳಬೇಕಾಗಿಲ್ಲ ಎಂಬ ನಿಲುವು ಈ ಕಥೆಯಲ್ಲಿ ವ್ಯಕ್ತವಾಗುತ್ತದೆ.

ಪ್ರೇಮಾಭಟ್‌ರವರು ಕುಟುಂಬ ಜೀವನದ ಒಳಗಡೆ ವಿಭಿನ್ನ ಪಾತ್ರಗಳನ್ನು ಕಟ್ಟಿಕೊಡುವುದರ ಮೂಲಕ ಪಾತ್ರಗಳ ವೈವಿಧ್ಯತೆಯನ್ನು ಸೃಷ್ಟಿಸಿದ್ದರೂ ಅವು ಪ್ರತಿಪಾದಿಸುವ ಆಶಯ ಒಂದೇ ಆಗಿದೆ. ಬದಲಾಗಿರುತ್ತಿರುವ ಸಮಾಜದಲ್ಲಿ ಗಂಡು ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿರುವಾಗ ಹೆಣ್ಣು ಅದನ್ನು ಚಾಣಾಕ್ಷವಾಗಿ ನಿಭಾಯಿಸಬಲ್ಲಳು ಎಂಬ ಎಚ್ಚರ ಇದ್ದರೂ ಪುರುಷಾಧೀನತೆಯೆಡೆಗೆ ಸಾಗುವುದು ಅಂತಿಮ ನಿರ್ಣಯವಾಗುತ್ತದೆ. ಹೆಣ್ಣು ಮಕ್ಕಳು ಹೊರ ಪ್ರಪಂಚಕ್ಕೆ ತೆರೆದುಕೊಂಡ ತಕ್ಷಣ ದಾರಿ ತಪ್ಪುತ್ತಾರೆ. ಹಾಗಾಗಿ ವಿಧಿ - ನಿಷೇಧಗಳೊಂದಿಗೆ ಸಾಂಪ್ರದಾಯಿಕ ಚೌಕಟ್ಟಿನೊಳಗೆ ಇರಬೇಕೆಂಬ ಆಶಯ ಕಥೆಗಳಲ್ಲಿದೆ.

ಆಧುನಿಕತೆ, ಫ್ಯಾಶನ್ ಜಗತ್ತು ಹೆಣ್ಣಿನ ಬಾಳನ್ನು ಗೋಳು ಹೊಯ್ದುಕೊಳ್ಳುವುದಕ್ಕೆ ಎನ್ನುವ ಹುಂಬತನದ ವಿಚಾರಗಳು ಪ್ರೇಮಾ ಭಟ್‌ರವರ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಏನನ್ನು ತೊಡಬೇಕು ಮತ್ತು ಏನನ್ನು ತೊಡಬಾರದು ಎನ್ನುವುದರ ಮೂಲಕ ಹೆಣ್ಣಿನ ಪ್ರತಿ ಚಟುವಟಿಕೆಗೂ ಗಡಿ ರೇಖೆಗಳನ್ನು ಸ್ವತಃ ಲೇಖಕಿಯೇ ಗುರುತಿಸುತ್ತಾರೆ. 'ಗೀಳು' , 'ಆದಿ - ಅಂತ್ಯ' ಕಥೆಗಳಲ್ಲಿ ಈ ವಿಚಾರ ಸ್ಪಷ್ಟವಾಗುತ್ತದೆ. ಶಿಕ್ಷಣ ಹೆಣ್ಣಿನ ಬದುಕಿಗೆ ಸ್ವಾಯತ್ತತೆಯನ್ನು ತಂದು ಕೊಡುತ್ತದೆ ಎನ್ನುವ ಮನೋಧರ್ಮವಿದ್ದರೂ, ಅದನ್ನು ಪರಿಪೂರ್ಣವಾಗಿ ಕಾರ್‍ಯರೂಪಗೊಳಿಸಲು ಸಾಧ್ಯವಾಗಿಲ್ಲ . ಹಾಗಾಗಿ ಮತ್ತೆ ಪುರುಷಾಧೀನತೆಯ ಸಂಪ್ರದಾಯದ ಸಂಕೋಲೆಗಳಿಗೆ ಜೋತು ಬೀಳುತ್ತಾರೆ. ತಾಯ್ತನದ ನೋವುಗಳು , ಸೊಸೆಯ ಹತಾಶೆಗಳು, ಅನಾಥಳ ಅನಾಥ ಪ್ರಜ್ಞೆ, ಉದಾರ ಚಿಂತನೆಯ ಸ್ತ್ರೀ ಪಾತ್ರಗಳು - ಹೀಗೆ ವಿಭಿನ್ನ ಪಾತ್ರ ಸೃಷ್ಟಿಗಳೊಂದಿಗೆ ಮನುಷ್ಯ ಸಂಬಂಧಗಳ ವಿಶ್ಲೇಷಣೆಗಳು ನಡೆದರೂ ಹೆಣ್ಣಿನ ಕುರಿತಾದ ಚಿಂತನೆಯ ನೆಲೆಗಳು ಸಂಪ್ರದಾಯದ ಸೀಮಾ ರೇಖೆಯನ್ನು ದಾಟಲು ವಿಫಲವಾಗುತ್ತವೆ.

೫.೨.೩. ಧಾರ್ಮಿಕ ನೆಲೆ :

"ಧರ್ಮ ಎಂದರೆ ಮನುಷ್ಯನ ವಾಸ್ತವಿಕ ಬದುಕನ್ನು ಸುಧಾರಿಸುತ್ತಾ, ಅವನೊಳಗಿನ ಪರಮಾರ್ಥದ ಹಂಬಲವನ್ನು ಜಾಗೃತಗೊಳಿಸುತ್ತಾ, ಮಾನವ ಪ್ರೇಮವನ್ನು ವಿಸ್ತರಿಸುತ್ತಾ ಅವನನ್ನು ಸಹಜೀವಿಗಳ ಸೇವೆಯಲ್ಲಿ ತೊಡಗಿಸುವ ಒಂದು ಸತ್ವವೇ ಸರಿ"[1] ಎಂದು ಜಿ. ಎಸ್. ಶಿವರುದ್ರಪ್ಪನವರು ಅಭಿಪ್ರಾಯ ಪಡುತ್ತಾರೆ. ಧರ್ಮದ ಚಿಂತನೆಯನ್ನು ಈ ಅರ್ಥದಲ್ಲಿ ಗ್ರಹಿಸುವುದಾದರೆ ವಾಸ್ತವ ಮತ್ತು ಆ ವಾಸ್ತವ ಜಗತ್ತಿನ ಏಳಿಗೆಯನ್ನು ಬಯಸುವ ದಾರಿಯನ್ನು ತೋರಿಸುವ ಮಾನವೀಯತೆಯ ಚಿಂತನೆಯೇ ಬಹುಮುಖ್ಯವಾಗುತ್ತದೆ.

ಹಿಂದೂ ವೈದಿಕ ಧರ್ಮ ಮತ್ತು ಇಸ್ಲಾಂ ಧರ್ಮ (ಯಾಕೆಂದರೆ ಈ ಪ್ರಬಂಧದಲ್ಲಿ ಆಯ್ಕೆ ಮಾಡಿಕೊಂಡಿರುವ ಕಥೆಗಾರ್ತಿಯರು ಪ್ರತಿನಿಧಿಸುವ ಧರ್ಮ) ಹೆಣ್ಣಿಗೆ ಧಾರ್ಮಿಕವಾದ ಮಾನ್ಯತೆಯನ್ನಾಗಲೀ, ಸ್ವಾತಂತ್ರ್ಯವನ್ನಾಗಲೀ ನೀಡಿಲ್ಲ. ಧರ್ಮದ ಹೆಸರಿನಲ್ಲಿ ವಿಧವಾ ಹೆಣ್ಣು ಮಗಳೊಬ್ಬಳನ್ನು ಹೀಯಾಳಿಸುವ ಮತ್ತು ಅವಳ ಇಹದ ಬದುಕನ್ನೇ ಕಸಿಯುವ ಹುನ್ನಾರಗಳು ಬಹಳ ಅರ್ಥಪೂರ್ಣವಾಗಿ ನಡೆದಿವೆ. 'ಹಸಿದ ಹೊಟ್ಟೆಗೆ ಒಂದು ತುತ್ತು ಅನ್ನವನ್ನು ನೀಡಲಾರದ ಮತ್ತು ವಿಧವೆಯ ಕಣ್ಣೀರನ್ನು ಒರೆಸಲಾಗದ ಧರ್ಮದಲ್ಲಾಗಲೀ, ದೇವರಲ್ಲಾಗಲೀ ನನಗೆ ನಂಬಿಕೆಯಿಲ್ಲ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಸಾಮಾಜಿಕ ಕಟ್ಟುಪಾಡುಗಳು ಶುಭ – ಅಶುಭಗಳೆಂಬ ನಿಯಮಗಳಡಿ ಹೆಣ್ಣಿನ ಬದುಕನ್ನು ಕಸಿದಿವೆ. ಈ ದಾರುಣತೆಯನ್ನು ಕರಾವಳಿಯ ಕಥೆಗಾರ್ತಿಯರು ಮತ್ತೆ ಮತ್ತೆ ನಿರೂಪಿಸಿದ್ದಾರೆ.

ವಿಧವೆಯ ಹೊಟ್ಟೆಯ ಹಸಿವು ಮತ್ತು ಅವಳ ದೇಹದ ಹಸಿವು ಇವೆರಡನ್ನು ಆಕೆ ನಿಗ್ರಹಿಸಬೇಕು ಎನ್ನುವ ಮೂಲಕ ವೈಧವ್ಯವನ್ನು ಒಪ್ಪಿಕೊಳ್ಳುವ ಅತಿಶಯೋಕ್ತಿಯ ಕಥೆಗಳು ಒಪ್ಪಿತ ಮಾದರಿಗಳಲ್ಲಿ ದಾಖಲಾಗುತ್ತಾ ಹೋಗುತ್ತವೆ. ಧರ್ಮ ವ್ಯಕ್ತಿನಿಷ್ಠವಾದರೂ ಅದರ ಇನ್ನೊಂದು ತುದಿ ಸಮಷ್ಠಿ ನಿಷ್ಠವಾದ ಅಖಂಡತೆಯ ಪರಿಕಲ್ಪನೆಯನ್ನು ಹೊಂದಿದೆ. ಹಾಗಿದ್ದಾಗಲೂ ಈ ವೈರುಧ್ಯ ವ್ಯಕ್ತಿನಿಷ್ಠ ನೆಲೆಯನ್ನು ಹೊಂದಿಯೂ ಸಮಷ್ಠಿ ಪ್ರಜ್ಞೆಯ ಕಡೆಗೆ ಸಾಗುತ್ತದೆ. ಹಾಗಾಗಿ ಹೆಣ್ಣಿನ ಲೈಂಗಿಕತೆ, ನೈತಿಕತೆ, ಆರ್ಥಿಕತೆ, ಜಾತೀಯತೆ, ವೈಯುಕ್ತಿಕ ನೆಲೆಯನ್ನು ಹೊಂದಿಯೂ ಸಮಕಾಲೀನ ಸಮಾಜದ ಪ್ರತಿಬಿಂಬಗಳಾಗಿ ಗೋಚರಿಸುತ್ತವೆ. ತಮ್ಮ ಶೋಕದ ಪಾಡನ್ನು ಮರೆಯಲು ಹಾಡು ಕಟ್ಟಿ ವಿಜೃಂಭಿಸಲೂ ಆಗದೆ ಅದುಮಿಟ್ಟ ಭಾವಗಳು ಈ ಯಾತನೆಗಳು ಕಥೆಗಳ ಸ್ವರೂಪವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಈ ಕೆಳಗಿನ ಕಥೆಗಳಲ್ಲಿ ಈ ಅಂಶಗಳನ್ನು ಗಮನಿಸಬಹುದು.

ಪ್ರೇಮಾಭಟ್‌ರವರ,

ಸಂಕೋಲೆ (ಕಥಾ ವರ್ಷ, ೨೦೦೭)

'ಸಂಕೋಲೆ' ಕಥೆಯು ಧರ್ಮ ಸಾಮರಸ್ಯವನ್ನು ಚಿತ್ರಿಸುವ ಕಥೆ. ಗಾಯತ್ರಿ ಹಾಗೂ ಸಮೀನಾ ಪರಸ್ಪರ ಸ್ನೇಹದಿಂದ ಅಕ್ಕಪಕ್ಕದ ಮನೆಗಳಲ್ಲಿ ಬದುಕು ನಡೆಸುತ್ತಾರೆ. ತನ್ನ ಕಷ್ಟಗಳಿಗೆ ತನ್ನ ಧರ್ಮದವರೇ ಸ್ಪಂದಿಸುತ್ತಾರೆ ಎಂದು ತಿಳಿದ ಸಮೀನಾ ಸ್ವತಃ ಭಾವನಿಂದ ಅನ್ಯಾಯಕ್ಕೆ ಒಳಗಾಗುತ್ತಾಳೆ. ಗಾಯತ್ರಿಯಂತೆ ದೀಪಾವಳಿ ಆಚರಣೆಯ ಸಂಭ್ರಮದಲ್ಲಿದ್ದ ಸಮೀನಾಳನ್ನು ರಾತ್ರಿ ಭಾವ ಬಂದು ಕೊಲೆ ಮಾಡುತ್ತಾನೆ. ಸಮೀನಾಳ ಗಂಡ ಈಗಾಗಲೇ ಒಂದು ಆಪಾದನೆಯ ಮೇಲೆ ಜೈಲು ಸೇರಿರುತ್ತಾನೆ. ಸತ್ತ ಸಮೀನಾಳ ಮಗಳನ್ನು ಗಾಯತ್ರಿ ಮನೆಗೆ ಕರೆದುಕೊಂಡು ಬಂದು ತನ್ನ ಮಕ್ಕಳ ಜೊತೆ ಬೆಳೆಸಲು ನಿರ್ಧರಿಸುತ್ತಾಳೆ.

ಗಾಯತ್ರಿಯ ಗಂಡ ಹೇಳುವ, 'ನಿಜ ಈ ಹಸುಳೆ ಯಾವ ಜಾತಿ, ಯಾವ ಧರ್ಮ ಆದರೇನು? ಮುಖ್ಯವಾಗಿ ಮಾನವಮಾತ್ರರು ತಮಗೆ ತಾವೇ ನಿರ್ಮಿಸಿಕೊಂಡ ಸಂಕೋಲೆಯಿಂದ ಹೊರಗೆ ಬಂದು ಬದುಕಲಿ' (ಕಥಾವರ್ಷ, ಪು. ೧೦೩, ೨೦೦೭) ಎಂಬ ಮಾತು ಧರ್ಮ ಸ್ವಾಮರಸ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಹಿಂದೂ ಮತ್ತು ಮುಸ್ಲಿಂ ಧರ್ಮಗಳು, ಧರ್ಮದ ಚೌಕಟ್ಟಿನೊಳಗೆ ನಡೆಸುವ ಶೋಷಣೆಗೆ ಹೆಣ್ಣು ಬಲಿ ಪಶುವಾಗುತ್ತಾಳೆ ಎನ್ನುವುದು ವಾಸ್ತವ ಸತ್ಯವೇ ಆಗಿದೆ. ಅದನ್ನು ಅವಾಸ್ತವಗೊಳಿಸದೆ ಧರ್ಮದ ಚಿಂತನೆಯ ಪರಿಕಲ್ಪನೆಯನ್ನು ಮಾನವತೆಯ ವಿಶಾಲ ಅರ್ಥದಲ್ಲಿ ಪ್ರೇಮಾ ಭಟ್ ವಿಶ್ಲೇಷಿಸುತ್ತಾರೆ.

ವಸಹತ್ತೋತ್ತರ ಸಂದರ್ಭದ ಮಹಿಳೆ ಈ ರೀತಿಯಿಂದ ಕುಟುಂಬ, ಸಮಾಜ ಧರ್ಮ, ಈ ಎಲ್ಲದರ ಚೌಕಟ್ಟನ್ನು ದಾಟಿ ಹೊರಬರುವ ಪ್ರಯತ್ನಗಳನ್ನು ಮಾಡಿದಳು. ಹಾಗಾದಾಗ ಈ ವರೆಗೆ ಬದುಕಿದ ಹೆಣ್ಣಿನ ಬಾಳ್ವೆಯ ಒಪ್ಪಿತ ಮಾದರಿಗಳಲ್ಲೇ ಯಾಕೆ ಬರೆಯಲಾರಂಭಿಸಿದಳೆಂದರೆ, ಬರವಣಿಗೆಯ ಅವಕಾಶ ಆಕೆಗೆ ಮೊದಲು ಲಭ್ಯವಾದದ್ದೇ ಆ ಸಂದರ್ಭದಲ್ಲಿ. ತನ್ನ ಯಾತನೆಯನ್ನು ಭಕ್ತಿಯ ಸ್ವರೂಪದಲ್ಲೋ, ನೀತಿಯ ಸ್ವರೂಪದಲ್ಲೋ ಸಮಾಜಕ್ಕೆ ಬೋಧಿಸಲು ಮಾತ್ರ ಸಾಧ್ಯವಾಯಿತೇ ಹೊರತು ವೈಯಕ್ತಿಕವಾದ ವ್ಯಕ್ತಿಗತ ಅನುಭವಗಳ ನಿರ್ಭಿಡೆಯಿಂದ ಬರೆಯಲು ಸಾಧ್ಯವಾಗಲಿಲ್ಲ. ಅಲ್ಲದೆ ಅವಳಿಗೆ ಬರೆಯುವ ಅವಕಾಶವೂ ಇರಲಿಲ್ಲ. ತಾನು ಬರೆದದ್ದನ್ನು ಬಚ್ಚಿಟ್ಟು ಬರೆಯಬೇಕಾದ ಅನಿವಾರ್ಯತೆಯೂ ಅವಳಿಗಿತ್ತು ಮತ್ತು ತಾನೊಬ್ಬಳು ಕಥೆಗಾರ್ತಿಯೆಂದು ದಿನದ ಇಪ್ಪತ್ತನಾಲ್ಕು ಗಂಟೆಯನ್ನು ಲೋಕಾನುಭವದ ಗಳಿಕೆಗೆ ತೆರೆದಿಟ್ಟು ಬರೆಯಲು ಸಾಧ್ಯವಿರಲಿಲ್ಲ. ಏನಿದ್ದರೂ ಹೊತ್ತು ಹೊತ್ತಿಗೆ ಅನ್ನವನ್ನು ಉಣಿಸಿ ಕುಟುಂಬವನ್ನು ಸಂತುಷ್ಟಗೊಳಿಸುವ ಹೊಣೆಗಾರಿಕೆಯು ನೈತಿಕವಾಗಿ ಅವಳಿಗೆ ಸೇರಿದ್ದು ಎಂದು ನಿರ್ಧರಿಸಲಾಯಿತು.

ಹಾಗಾಗಿ ಆರಂಭದಲ್ಲಿ ಬರೆದ ಕಥೆಗಾರ್ತಿಯರೆಲ್ಲ ಒಪ್ಪಿತ ಮಾದರಿಯಲ್ಲಿಯೇ ವ್ಯಕ್ತಿಗತವಾಗಿ, ಕೌಟುಂಬಿಕವಾಗಿ ಮತ್ತು ಧಾರ್ಮಿಕವಾಗಿ ಬರೆದರು.

ಅಡಿ ಟಿಪ್ಪಣಿ

೧. ಜಿ. ಎಸ್. ಶಿವರುದ್ರಪ್ಪ : ವಿಜಯ ಕರ್ನಾಟಕ, ಸಪ್ಟೆಂಬರ್, ೨೧,

ಅಧ್ಯಾಯ – ೬

ಸ್ತ್ರೀವಾದಿತ್ವದ ನೆಲೆ

೬.೧ ವೈಯಕ್ತಿಕ ನೆಲೆ
೬.೨. ಕೌಟುಂಬಿಕ ನೆಲೆ
೬.೩. ಧಾರ್ಮಿಕ ನೆಲೆ
೬.೪. ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ

ಅಧ್ಯಾಯ-೬

ಸ್ತ್ರೀವಾದಿತ್ವದ ನೆಲೆ

ಗೃಹಿಣಿತ್ವ, ಕುಟುಂಬ ಇಷ್ಟಕ್ಕೆ ಸೀಮಿತವಾಗಿದ್ದ ಹೆಣ್ಣು ಸೃಜನಶೀಲ ಬರವಣಿಗೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಾಗಲೂ ಆಕೆಯದ್ದು 'ಅಡುಗೆ ಮನೆ ಸಾಹಿತ್ಯ' ಎಂಬ ತಿರಸ್ಕಾರಕ್ಕೆ ಗುರಿಯಾದದ್ದೂ ಇದೆ. ಯಾವಾಗ ಹೆಣ್ಣು ಮನೆಯ ಹೊಸ್ತಿಲಿಂದಾಚೆ ನೋಡುವುದಕ್ಕೆ ಆರಂಭಿಸಿದಳೋ ಅಗ ಅವಳಿಗೆ ಸಮಾಜದ ಸ್ಥಿತಿ ಅರ್ಥವಾಗುತ್ತಾ ಬಂತು. ತಾನು ಬಂಧಿಸಲ್ಪಟ್ಟ ಶೃಂಖಲೆಯಿಂದ ಹೊರಬರಬೇಕಾದ ಅನಿವಾರ್ಯತೆಯನ್ನೂ ಕಂಡುಕೊಂಡಳು. ಆದರೆ ಅದು ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ.

ಸಾಮಾಜಿಕ ವ್ಯವಸ್ಥೆಯೊಂದಿಗಿನ ಮುಖಾಮುಖಿಯಲ್ಲಿ ತನ್ನನ್ನು ಅರ್ಥೈಸಿಕೊಳ್ಳುವ, ತಿದ್ದಿಕೊಳ್ಳುವ ಕಡೆಗೆ ಅವಳ ಆಲೋಚನೆ ಹರಿಯಿತು. ಸಮಾಜದಲ್ಲಿ ನೆರೆಯೂರಿದ್ದ ಲಿಂಗತಾರತಮ್ಯದ ವಿವಿಧ ಮುಖಗಳ ಕಡೆಗೆ ಗಮನಹರಿಸಿದ ಆಕೆ ಇದನ್ನು ಗುರುತಿಸುವ ಪ್ರಶ್ನಿಸುವ, ಹಾಗೂ ವಿರೋಧಿಸುವ ನೆಲೆಯಲ್ಲಿ ಸಾಹಿತ್ಯ ರಚನೆಗೆ ತೊಡಗಿದಳು. ಈ ಪ್ರತಿಭಟನೆ ಕೇವಲ ಅಕ್ಷರ ರೂಪದಲ್ಲಿ ಉಳಿಯಿತೇ ವಿನಾಃ ತನ್ನ ವೈಯುಕ್ತಿಕ ಬದುಕಿನಲ್ಲಿ ಸಾಧ್ಯವಾಗಲಿಲ್ಲ. ಆದರೆ ಎಷ್ಟೋ ವರ್ಷಗಳಿಂದ ಅನುಭವಿಸಿಕೊಂಡು ಬಂದ ಬದುಕಿನ ದಾರುಣತೆಯ ಕಡೆಗೆ ತಿರುಗಿ ನೋಡುವ ಪ್ರಜ್ಞೆ ಆಕೆಯಲ್ಲಿ ಹುಟ್ಟಿಕೊಂಡದ್ದು ಮಹಿಳಾ ಪ್ರಗತಿಯ ಸೂಚನೆಯನ್ನು ನೀಡುತ್ತದೆ. ತನ್ನ ಬದುಕು ಕೇವಲ ಕುಟುಂಬಕ್ಕಷ್ಟೇ ಸೀಮಿತವಾದದ್ದಲ್ಲ. ಅದಕ್ಕಿಂತಲೂ ಆಚೆ ಇದೆ ಎನ್ನುವುದನ್ನು ಮಹಿಳೆ ಅರಿತುಕೊಂಡಳು.

ಹಾಗಾಗಿ ಸುಮಾರು ೬೦ – ೭೦ರ ದಶಕದ ಮಹಿಳಾ ಸಾಹಿತ್ಯ ಕೃತಿಗಳನ್ನು ಗಮನಿಸಿದರೆ ಈ ಮೇಲಿನ ಆಲೋಚನೆಗಳಿಗೆ ಪೂರಕವಾಗಿ ಸಾಹಿತ್ಯ ರಚನೆಯಾದದ್ದನ್ನು ಗಮನಿಸಬಹುದು. ಇದರಿಂದ ಸಮಾಜ ಪರಿವರ್ತನೆ ಸಾಧ್ಯವಾಗದೇ ಹೋದರೂ ಹೀಗೊಂದು ನಿಟ್ಟಿನಲ್ಲಿ ಮಹಿಳೆ ಯೋಚಿಸುತ್ತಾಳೆನ್ನುವುದು ಅವಳ ಬದುಕಿಗೊಂದು ಅರ್ಥವಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಕರಾವಳಿ ಲೇಖಕಿಯರ ಕತೆಗಳನ್ನು ಈ ನೆಲೆಯಲ್ಲಿ ಕಾಣುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಎಲ್ಲೋ ಒಂದು ಕಡೆ ವ್ಯವಸ್ಥೆಯನ್ನು ವಿರೋಧಿಸುತ್ತಲೇ ಮತ್ತೆ ಅನಿವಾರ್ಯವಾಗಿ ಅದನ್ನು ಒಪ್ಪಿಕೊಳ್ಳಬೇಕಾದ ಸ್ಥಿತಿಯೂ ನಿರ್ಮಾಣವಾದದ್ದನ್ನು ಗಮನಿಸಬಹುದು.

೬.೧. ವೈಯಕ್ತಿಕ ನೆಲೆ :

ಪರಂಪರೆಯನ್ನು ಪ್ರತಿಭಟಿಸುವ ಯಾವುದೇ ಹೆಣ್ಣು ತನಗೆ ಸಮಾಜವು ಕೊಟ್ಟ ಪಾತ್ರಗಳ ಗಡಿರೇಖೆಗಳನ್ನು ದಾಟಲು ಯತ್ನಿಸಿದಾಗ ಲಿಂಗತಾರತಮ್ಯದ ಪ್ರತಿಭಟನೆಯ ನೆಲೆಯೂ ಗೋಚರಿಸುತ್ತದೆ. ಲೈಂಗಿಕ ಸ್ವಾತಂತ್ರ್ಯದ ಬಗೆಗೆ ಹೆಣ್ಣೊಬ್ಬಳು ಮಾತನಾಡುತ್ತಾಳೆ ಎಂದಾದರೆ ಆ ಕಾಲಘಟ್ಟವು ಅವಳಿಗಿರುವ ಆಯ್ಕೆಯ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾವಲಂಬನೆಯ ಸಂಗತಿಗಳು ಒಪ್ಪಿತ ಮಾದರಿಯ ಬದುಕನ್ನು ಮೀರುವ ನೆಲೆಗಳೇ ಆಗಿರುತ್ತವೆ. ಸ್ತ್ರೀ ಸಮಾನತೆಯ ಬಗೆಗೆ ಚರ್ಚಿಸುವಾಗಲೆಲ್ಲ ಮಹಿಳಾ ದೌರ್ಜನ್ಯವನ್ನು, ಶೋಷಣೆಯನ್ನು ಮುಖ್ಯ ದನಿಯಾಗಿಸಿ ಕಥೆಗಾರ್ತಿಯರು ನಿರೂಪಿಸುವಾಗಲೂ ಅದಕ್ಕೆ ಕಾರಣವಾಗುವ ಅಂಶಗಳನ್ನು ವೈಯುಕ್ತಿಕ ನೆಲೆಯಲ್ಲಿಯೇ ಗುರುತಿಸುತ್ತಾರೆ. ಇದು ಹೆಣ್ಣಿನ ಬದಲಾದ ಯೋಚನಾ ಲಹರಿಯ ದಿಕ್ಕನ್ನು ನಿರೂಪಿಸುವುದರೊಂದಿಗೆ ಹೆಣ್ಣು ವ್ಯಕ್ತಿಗತವಾಗಿ ತನ್ನ ಬದುಕನ್ನು ಕಟ್ಟಿಕೊಳ್ಳುವ ಮತ್ತು ಆ ಮೂಲಕ ಅವಳು ಇಡೀ ಸಮುದಾಯಕ್ಕೆ ಮುಖಾಮುಖಿಯಾಗುವ ನೆಲೆಯೂ ವಿಭಿನ್ನವಾಗುತ್ತದೆ. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು

ಮಿತ್ರಾ ವೆಂಕಟ್ರಾಜ್ ರವರ,

ಬೊಳ್ಳದ ಸಂಕ (ಹಕ್ಕಿ ಮತ್ತು ಅವಳು, ೧೯೯೭)

'ಬೊಳ್ಳದ ಸಂಕ' ಕಥೆಯ ವೇದವತಿ 'ಪಾಲಿಗೆ ಬಂದದ್ದೇ ಪಂಚಾಮೃತ' ಎಂಬುದನ್ನು ಒಪ್ಪಿಕೊಂಡು ಬದುಕಿದ ಹೆಣ್ಣಾಗಿ ಕಾಣಿಸುತ್ತಾಳೆ. ಮುದುಕ ರಾಮಕೃಷ್ಣಯ್ಯನವರನ್ನು ಮದುವೆಯಾಗಿ ಅವನ ಮೊದಲ ಹೆಂಡತಿಯ ಮಕ್ಕಳನ್ನು ತನ್ನ ಸ್ವಂತ ಮಕ್ಕಳಂತೆ ನೋಡಿಕೊಂಡವಳು. ತನಗೆ ಬೇಕಾದಂತೆ ಅಲಂಕಾರ ಮಾಡಿಕೊಂಡಾಗ ಪತಿ ರಾಮಕೃಷ್ಣಯ್ಯನ ವ್ಯಂಗ್ಯದ ಬಾಣಕ್ಕೆ ತುತ್ತಾಗಬೇಕಾಗಿತ್ತು. ಮುದುಕನನ್ನು ಕೈ ಹಿಡಿದ ಮಾತ್ರಕ್ಕೆ ತನ್ನ ಯೌವ್ವನವನ್ನೂ ಮುದಿಯಾಗಿಸಿಕೊಳ್ಳಬೇಕಾದ ಅನಿವಾರ್ಯತೆ ವೇದಾವತಿಯ ಪಾಲಿಗೆ ಒದಗುತ್ತದೆ.

ರಶ್ಮಿಯೊಡನೆ ವೇದವತಿ ಹೇಳುವ 'ಅದೇ ನೋಡು. ನಿಮ್ಮ ಊರಲ್ಲಿ ಕೂದಲು ಬಿಳಿ ಮಾಡಲು ಏನಾದರೂ ಸಿಗುತ್ತದಾ ಹೇಳು. ಎಲ್ಲರಿಗೆ ಕೂದಲು ಬಿಳಿಯಾಗುವ ಚಿಂತೆಯಾದರೆ, ನನ್ನ ಸುರ್ಪಕ್ಕೆ ಕೂದಲು ಬಿಳಿಯಾಗಲಿಲ್ಲ ಎಂಬ ಚಿಂತೆ' (ಹಕ್ಕಿ ಮತ್ತು ಅವಳು, ಪು. ೧೧೮) ಈ ಮಾತುಗಳು, ಆಕೆಗೆ ವೃದ್ಧಾಪ್ಯದ ಅನಿವಾರ್ಯತೆಯನ್ನು ತಂದು ಕೊಡುತ್ತದೆ. 'ಆ ಗಾಂಧಾರಿ ಯಾಕೆ ಕಣ್ಣಿಗೆ ಕಟ್ಟಿಕೊಂಡಿದ್ದಳಂತ ನಂಗೆ ಈಗ ಸರೀ ಅರ್ಥ ಆಗ್ತದೆ ಜಾನ್ಕಿ. ಯಾರಿಗ್ಗೊತ್ತು, ಧೃತರಾಷ್ಟ್ರ ಇಡೀ ದಿನ 'ಇವರ' ಹಾಂಗೆ ಹಂಗಿಸಿಂಡಿಪ್ಪ – ತನಗೆ ಕಣ್ಣಿಲ್ಲ ಅಂತ. ಹೋಗಲಿ ಆ ರಗಳೆ

ಬೇಡ ಅಂತ ತಾನೂ ಕುರುಡರ ಹಾಂಗೆ ಜೀವನ ತೆಗೆದಳಲ್ಲ. ಪುಣ್ಯಾತ್ಮಳು' (ಅದೇ. . . ಪು. ೧೨೦) ಎಂದು ವೇದವತಿ ನಗುತ್ತಾಳೆ. ಈ ನಗುವಿನ ಹಿಂದೆ ದುಃಖವೆಂಬ ಮೋಡ ಮುಸುಕಿಕೊಂಡಿದೆ.

ಈ ಕಥೆಯ ವೇದಳಿಗೆ ತನ್ನ ಅನಿವಾರ್ಯತೆಗಾಗಿ ವೃದ್ಧನೊಬ್ಬನನ್ನು ವಿವಾಹವಾದಾಗ ಅನುಭವಿಸುವ ಅಸಹಾಯಕತೆ ಗಂಡನನ್ನು ಧಿಕ್ಕರಿಸುವ ಧೈರ್ಯವನ್ನು ನೀಡದೆ ಹೋದರೂ ತನ್ನ ಅವಸ್ಥೆಯ ಬಗೆಗೆ ಪ್ರಶ್ನೆಗಳು ಹುಟ್ಟುತ್ತವೆ. ಆ ಪ್ರಶ್ನೆಯನ್ನು ಪುರಾಣದ ಪ್ರತಿಮೆಯಾದ ಗಾಂಧಾರಿಯೊಂದಿಗೆ ಸಮೀಕರೀಸುತ್ತಾ ತನ್ನ ಪ್ರತಿಭಟನೆಯ ವೈಯಕ್ತಿಕ ನೆಲೆಯನ್ನು ಧ್ವನಿಪೂರ್ಣವಾಗಿ ನಿರೂಪಿಸುತ್ತಾಳೆ.

ಸಾರಾ ಅಬೂಬಕ್ಕರ್‌ರವರ,

ಪಯಣ (ಪಯಣ ಮತ್ತು ಇತರ ಕಥೆಗಳು, ೧೯೯೨)

ಧ್ವನಿಯಿಲ್ಲದ ನೋವುಗಳು (ಪಯಣ ಮತ್ತು ಇತರ ಕಥೆಗಳು, ೧೯೯೨)

ಸಂಸಾರ (ಪಯಣ ಮತ್ತು ಇತರ ಕಥೆಗಳು, ೧೯೯೨)

ಬೇಟೆ (ಗಗನಸಖಿ, ೨೦೦೭)

ನಿರ್ಧಾರ (ಗಗನಸಖಿ, ೨೦೦೭)

ಗಗನಸಖಿ (ಗಗನಸಖಿ, ೨೦೦೭)

'ಪಯಣ' ಒಂದು ಭಿನ್ನ ದೃಷ್ಟಿಕೋನವುಳ್ಳ ಕಥೆ. ಈ ಕಥೆಯ ಕಥಾನಾಯಕಿಗೆ ಇತಿಹಾಸದ ನೆನಪಿನೊಂದಿಗೆ ವರ್ತಮಾನದ ವಾಸ್ತವ ಪ್ರಜ್ಞೆಯ ಅರಿವಿದೆ. ಹೊಂದಾಣಿಕೆಯ ಬದುಕಿನಲ್ಲಿ ಜೀವನದ ಸುಖ - ಸಾಮರಸ್ಯ ಅಡಗಿದೆ ಎನ್ನುವ ಸತ್ಯವನ್ನು ಈ ಕಥೆ ಸೂಕ್ಷ್ಮವಾಗಿ ಬಿಚ್ಚಿಡುತ್ತದೆ. 'ಈ ಹಕ್ಕಿಗಳಿಗೆ ಈ ಬಂಧನವೆಂದರೆ ತುಂಬಾ ಇಷ್ಟ! ಅವು ಈ ಪಂಜರದೊಳಗೆ ಸುಖವಾಗಿವೆ'! (ಪಯಣ ಮತ್ತು ಇತರ ಕತೆಗಳು, ಪು. ೯, ೧೯೯೨) ಎನ್ನುವ ಈ ಕಥೆಯಲ್ಲಿನ ಪುರುಷನ ಒದರಿಕೊಳ್ಳುವಿಕೆ ಹೆಣ್ಣಿನ ಸ್ವಾತಂತ್ರ್ಯದ ಅಪಹರಣವನ್ನು ಸ್ಪಷ್ಟಪಡಿಸುತ್ತದೆ.

'ಧ್ವನಿಯಿಲ್ಲದ ನೋವುಗಳು' ಕಥೆಯಲ್ಲಿ ಅಮಾಯಕ ಹೆಣ್ಣು ಜರೀನಾಳ ನೂರಾರು ಆಸೆಗಳೆಂಬ ಗೋಪುರ ಕುಸಿದು ಬಿದ್ದ ಚಿತ್ರಣವಿದೆ. ಊರಿನಲ್ಲಿ ಉಂಡಾಡಿಯಾಗಿದ್ದ ಮುಸ್ತಾಫನನ್ನು ಜರೀನಾಳ ಅಣ್ಣ ಮಸೀದಿಯ ಮೌಲವಿ ಕೊಲ್ಲಿ ರಾಷ್ಟ್ರಕ್ಕೆ ಕಳುಹಿಸುವಾಗ ಅವರ ತಂಗಿಯ ಬದುಕು ನೆಟ್ಟಗಾಗಲಿ ಎಂಬ ಆಸೆಯಿತ್ತು. ಆರಂಭದಲ್ಲಿ ಊರಿಗೆ ಹಣ ಕಳುಹಿಸುತ್ತಿದ್ದ ಮುಸ್ತಾಫ, ಚಾತಕ ಪಕ್ಷಿಯಂತೆ ಗಂಡನ ಆಗಮನವನ್ನು ಕಾಯುತ್ತಿದ್ದ ಜರೀನಾಳಿಗೆ ಕಳುಹಿಸಿದ್ದು

ತಲಾಖ್ ಪತ್ರ. ಜರೀನಾಳಂತಹ ಹೆಣ್ಣಿನ ಪ್ರೀತಿ, ಭಾವನೆಗಳಿಗೆ ಬೆಲೆ ಸಿಗದೇ ಹೋಗುವುದು ಇಲ್ಲಿಯ ದುರಂತವಾಗಿದೆ.

'ಸಂಸಾರ'ವೆಂಬ ವ್ಯವಸ್ಥೆಯೊಳಗೆ ನೆಮ್ಮದಿ ಕಾಣಲಾರದೆ ಪರಿತಪಿಸುವ 'ಉರಿಬಿಸಿಲು' ಕಥೆಯ ಆಮೀನಾ ಅಸ್ತಿತ್ವ ಕಳೆದುಕೊಂಡವಳು. ತನಗಿಷ್ಟವಿಲ್ಲದಿದ್ದರೂ ಗಂಡನಿಗಾಗಿ ಮಕ್ಕಳನ್ನು ಹೆರುವ ಯಂತ್ರವಾಗಿ ಬಳಕೆಯಾಗುತ್ತಿರುವ ಆಕೆ ದೌರ್ಜನ್ಯವನ್ನು ಪ್ರತಿಭಟಿಸಬೇಕು ಎಂಬ ಮನಸಿದ್ದರೂ ಅಸಹಾಯಕಳಾಗಿ ಬದುಕಿನ ಉರಿಬಿಸಿಲಲ್ಲಿ ಕಮರಿ ಹೋಗುತ್ತಾಳೆ. 'ಈ ನಾಲ್ಕಕ್ಷರ ಕಲಿತ ಹುಡುಗಿಯನ್ನು ಮದುವೆಯಾಗಿ ನನ್ನ ಮಗ ಹಾಳಾದ' (ಪಯಣ ಮತ್ತು ಇತರ ಕತೆಗಳು. ಪು. ೭೬, ೧೯೯೨)ಎಂಬ ಆಮೀನಾಳ ಅತ್ತೆಯ ಮಾತಿನಲ್ಲಿ, ಅಕ್ಷರ ಸಂಸ್ಕೃತಿಗೆ ದಾಖಲಾದ ಹೆಣ್ಣು ಪ್ರತಿಭಟನೆಯ ಮುನ್ನುಡಿಯನ್ನು ಹೇಗೆ ಪಡೆಯುತ್ತಾಳೆ ಎನ್ನುವುದು ಗಮನಕ್ಕೆ ಬರುತ್ತದೆ.

'ಬೇಟೆ' ಕಥೆಯು 'ವಿವಾಹ'ದಂತಹ ಮಹತ್ತರ ಸಂದರ್ಭದಲ್ಲಿ ತನ್ನ ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳಲಾಗದೆ ಒದ್ದಾಡುವ ಹೆಣ್ಣಿನ ಬದುಕಿನ ದುರಂತದ ಚಿತ್ರಣವಿದೆ. ಆಕೆಗೆ ಇಷ್ಟವಿಲ್ಲದ ಬಲಾತ್ಕಾರದ ಮದುವೆ ಯಾರೋ ಮಾಡಿದ ತಪ್ಪಿಗೆ ತಾನು ಬಲಿಪಶುವಾಗಬೇಕಾದ ಸಂದಿಗ್ಧ ಪರಿಸ್ಥಿತಿಯನ್ನು ತಂದೊಡ್ಡುತ್ತದೆ. ಆದಷ್ಟು ಬೇಗ ಮಕ್ಕಳ ಮದುವೆ ಮಾಡಿ ಕೈತೊಳೆದುಕೊಳ್ಳುವ ಅವಸರದಲ್ಲಿರುವ ಹೆತ್ತವರಿಗೆ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಈ ಕಥೆ ಮೂಡಿಬಂದಿದೆ.

'ನಿರ್ಧಾರ' ಇದು ಮುಸ್ಲಿಂ ಹೆಣ್ಣು ಮಗಳೊಬ್ಬಳ ಮದುವೆಯ ನಿರ್ಧಾರದ ಕುರಿತ ಕಥೆಯಾಗಿದೆ. ಹೆಣ್ಣು ತನ್ನ ಬದುಕಿನ ಬಗೆಗೆ ತಾನು ತೆಗೆದುಕೊಳ್ಳುವ ನಿರ್ಧಾರ ಆಕೆಯ ಬದುಕನ್ನು ಆಕೆಯೇ ಕಟ್ಟಿಕೊಳ್ಳುವ ಪರಿ ಕಥೆಯ ಯಶಸ್ಸಿಗೆ ಕಾರಣವಾಗುತ್ತದೆ. 'ನಾನು ಸಮನಾದ ನಿರ್ಧಾರ ಕೈಗೊಂಡಿದ್ದೇನೆಂಬ ವಿಶ್ವಾಸ ನನ್ನದು. ನನ್ನನ್ನು ಮತ್ತೊಮ್ಮೆ ಆಶೀರ್ವದಿಸು' (ಗಗನ ಸಖಿ, ಪುಟ, ೧೪೦, ೧೯೯೯) ಎಂದು ಹಸೀನಾ ಬರೆದಿಟ್ಟು ಹೋದ ಪತ್ರದ ಸಾಲುಗಳು ಆಕೆಯ ಗಟ್ಟಿತನವನ್ನು ನಿರೂಪಿಸುತ್ತದೆ.

'ಗಗನಸಖಿ' ಕಥೆಯು ಹೆಣ್ಣೊಬ್ಬಳು ತನ್ನ ಬದುಕಿನ ಬಗೆಗೆ ತೆಗೆದುಕೊಳ್ಳುವ ಸ್ವತಂತ್ರ ನಿರ್ಧಾರವನ್ನು ಚಿತ್ರಿಸುತ್ತದೆ. ವಿದೇಶದಲ್ಲಿ ಉದ್ಯೋಗಸ್ಥನಾದ ಪತಿಯ ಸಂಶಯಕ್ಕೆ ಒಳಗಾದ ಹೆಣ್ಣು ರಚನಾ ಆತನಿಂದ ದೂರವಾದರೂ, ಸಾಕಷ್ಟು ನೋವು, ಅವಮಾನಗಳನ್ನು ಅನುಭವಿಸಿದರೂ ಛಲದಿಂದ ತನ್ನ ಬದುಕನ್ನು ಸರಿದೂಗಿಸುತ್ತಾಳೆ. ಹೆಣ್ಣನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡು ಅಧಿಕಾರ ಚಲಾಯಿಸುವ ಪುರುಷವರ್ಗದ ವಿರುದ್ಧ

ಸೆಟೆದು ನಿಲ್ಲುವ ರಚನಾ, ಶಿಕ್ಷಣ ಹಾಗೂ ಆರ್ಥಿಕ ಸ್ವಾತಂತ್ರ್ಯ ಪಡೆದಾಗ ಮಾತ್ರ ಹೆಣ್ಣಿಗೆ ಇಂಥಹ ನಿರ್ಧಾರ ಸಾಧ್ಯ ಎನ್ನುವುದನ್ನು ಮನವರಿಕೆ ಮಾಡುತ್ತಾಳೆ.

ಸಾರಾ ಅವರ ಕಥೆಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಬಗೆಗಿನ ಪ್ರತಿಭಟನೆ ಎರಡು ಸ್ವರೂಪದಲ್ಲಿ ಕಾಣಿಸುತ್ತದೆ. ಒಂದು, ಪಾತ್ರಗಳಿಗೆ ಪೂರಕವಾದ ಹೇಳಿಕೆಗಳ ಮೂಲಕ ಪ್ರತಿಭಟನೆಯ ಧ್ವನಿ ಗೋಚರಿಸಿದರೆ (ಉದಾ : ಪಯಣ), ಎರಡನೆಯದು ಕಥೆಯ ಒಳಗೆ ನಿರೂಪಿತಗೊಳ್ಳುವ ಘಟನೆಗಳೇ ಸ್ತ್ರೀಯರ ಪ್ರತಿಭಟನೆಯ ಧ್ವನಿಯಾಗಿ ಗೋಚರಿಸುತ್ತವೆ. ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ದಾಟಿ ಅದನ್ನು ಮೀರಿ ನಿಲ್ಲುವ ಧೈರ್ಯವನ್ನು ಇವರ ಕಥೆಗಳ ಪಾತ್ರಗಳು ತೋರುತ್ತವೆ. 'ನಿರ್ಧಾರ' , 'ಗಗನಸಖಿ' ಕಥೆಗಳಲ್ಲಿ ಇದು ಸ್ಪಷ್ಟವಾಗುತ್ತದೆ.

ಗಂಗಾ ಪಾದೇಕಲ್‌ರವರ,

ಹದ್ದುಗಳು (ಪುಲಪೇಡಿ ಮತ್ತು ಇತರ ಕಥೆಗಳು, ೧೯೮೭)

ಒಂದು ಪ್ರಕರಣದ ಕೊನೆ (ಪುಲಪೇಡಿ ಮತ್ತು ಇತರ ಕಥೆಗಳು, ೧೯೮೭)

ನಮ್ಮಲ್ಲಿ ಒಬ್ಬಳು ಅಕ್ಕಣಿ (ಹೆಜ್ಜೆ ಮೂಡದ ಹಾದಿಯಲ್ಲಿ, ೧೯೮೮)

ಕಳ್ಳ (ಹೆಜ್ಜೆ ಮೂಡದ ಹಾದಿಯಲ್ಲಿ, ೧೯೮೮)

ಬದುಕಿನ ಬೇರನ್ನರಸಿ (ಹೊಸ ಹೆಜ್ಜೆ, ೧೯೯೬)

ಒಂದೇ ಒಂದು ಅವಕಾಶ (ಹೊಸ ಹೆಜ್ಜೆ, ೧೯೯೬)

ಪರಿಹಾರ (ಹೊಸ ಹೆಜ್ಜೆ, ೧೯೯೬)

ಕಣ್ಣಾ ನೀರೆದ್ದು ಹೊಳೆಯದೂ (ಹೊಸ ಹೆಜ್ಜೆ, ೧೯೯೬)

ಇದು ಬರಿ ಬೆಳಗಲ್ಲೊ ಅಣ್ಣಾ (ಹೊಸ ಹೆಜ್ಜೆ, ೧೯೯೬)

ಹೊಸಹೆಜ್ಜೆ (ಹೊಸ ಹೆಜ್ಜೆ, ೧೯೯೬)

ಕ್ಷಮಯಾ ಧರಿತ್ರಿ (ಹೊಸ ಹೆಜ್ಜೆ, ೧೯೯೬)

ಎತ್ತಣ ಮಾಮರ (ಹೊಸ ಹೆಜ್ಜೆ, ೧೯೯೬)

ಒಂದಾನೊಂದು ಊರಲಿ (ವಾಸ್ತವ, ೧೯೯೬)

ರಮೆಯ ಮದುವೆ (ವಾಸ್ತವ, ೧೯೯೬)

ಉತ್ತರ ಕಾಣದ ಪ್ರಶ್ನೆಗಳು (ವಾಸ್ತವ, ೧೯೯೬)

ಅಂತ್ಯವಲ್ಲ, ಆರಂಭ... (ಈ ಪ್ರಜಾ ರಾಜ್ಯದೊಳಗೆ, ೨೦೦೬)

'ಹದ್ದುಗಳು' ಕಥೆ ಸರ್ಕಾರಿ ಆಸ್ಪತ್ರೆಯೊಳಗಿನ ಕರಾಳ ಮುಖಗಳ ಪರಿಚಯ ಮಾಡಿಕೊಡುತ್ತದೆ. ಬಡ ರೋಗಿಗಳ ಪಾಲಿಗೆ ದೇವರೇ ಆಗಿ ಕಾಣಬೇಕಾದ ವೈದ್ಯರು, ನರ್ಸ್‌ಗಳ ರಾಕ್ಷಸೀ ನಡವಳಿಕೆ ಮನಕರಗುವಂತೆ ಚಿತ್ರಿತವಾಗಿದೆ. ಈ ಕಥೆಯಲ್ಲಿ ಬರುವ 'ಆಕೆ' ಗಂಡನ ಜೀವ ಉಳಿಸಿಕೊಳ್ಳಲು ಹೋಗಿ ತರುಣ ವೈದ್ಯನೊಬ್ಬನ ಕಾಮ ಪಿಪಾಸೆಯನ್ನು ತಣಿಸುವ ವಸ್ತುವಾಗಬೇಕಾಗುತ್ತದೆ.

ಬಡವರ ಜೀವಗಳಿಗೆ ಬೆಲೆಯಿಲ್ಲ. ಆಸ್ಪತ್ರೆಯ ನರಕ ಸದೃಶ ಒದ್ದಾಟಕ್ಕಿಂತ ಸಾವೇ ಮೇಲು ಎಂಬುದನ್ನು ಈ ಕಥೆ ನಿರೂಪಿಸುತ್ತದೆ.

'ಒಂದು ಪ್ರಕರಣದ ಕೊನೆ' ಕಥೆಯಲ್ಲಿ ಬಡವಳಾದರೂ ಪ್ರತಿಭಾವಂತಳಾದ ಕಮಲಾಳಂತಹ ಹೆಣ್ಣು ಮಕ್ಕಳನ್ನು ಸಮಾಜ ನಡೆಸಿಕೊಳ್ಳುವ ರೀತಿಯು ಕ್ರೌರ್ಯದ ಒಂದು ಮುಖವಾಗಿ ಗೋಚರಿಸುತ್ತದೆ. ಎಷ್ಟೋ ಬಾರಿ ತನ್ನ ಮನಸ್ಸು ಕೆಟ್ಟ ಕೆಲಸಕ್ಕೆ ಒಪ್ಪದಿದ್ದರೂ ಬಡತನ ಎಂಬ ಶಾಪ ಅದನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ.

ಹಾಸ್ಟೆಲ್ ವಾರ್ಡನ್‌ನೊಬ್ಬರ ನೀತಿಗೆಟ್ಟ ನಡತೆ ಕಮಲಾಳಿಗೆ ಸಹಿಸುವುದಕ್ಕೆ ಸಾಧ್ಯವಾಗದೇ, ಅದನ್ನು ವಿರೋಧಿಸಲು ಹೋಗಿ ವಾರ್ಡನ್‌ಳ ಕೋಪಕ್ಕೆ ಗುರಿಯಾಗಬೇಕಾಗುತ್ತದೆ. ಇದರಿಂದ ಕಮಲಾ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಮಾಜದ ಎಷ್ಟೋ ಹೆಣ್ಣುಮಕ್ಕಳು ಅನ್ಯಾಯವನ್ನು ಎದುರಿಸುವ ಶಕ್ತಿಯಿಲ್ಲದೆ ಸಾವಿಗೆ ಶರಣಾಗಬೇಕಾಗುತ್ತದೆ.

'ನಮ್ಮಲ್ಲಿ ಒಬ್ಬಳು ಅಕ್ಕಣಿ' ಕಥೆಯು ಹೊಸ ತಲೆಮಾರಿಗೆ ಒಗ್ಗಿಕೊಂಡು ತಾಯಿಯ ಸಂಬಂಧದಿಂದಲೇ ದೂರ ಉಳಿದ ಮಾಧವ ಹಾಗೂ ಮಗನಿಗಾಗಿ ಸಿಕ್ಕ ಸುಖವನ್ನು ಬದಿಗೊತ್ತಿ ಬದುಕನ್ನೇ ನರಕಮಯ ಮಾಡಿಸಿಕೊಂಡ ಅಕ್ಕಣಿ ಇವರ ಬದುಕಿನ ಮುಖಾಮುಖಿಯಾಗಿದೆ. ಆಧುನಿಕತೆಗೆ ತೆರೆದುಕೊಂಡ ಮನಸ್ಸು ಮೂಲ ಬೇರುಗಳನ್ನೇ ಹೇಗೆ ಹೊಸಕಿ ಹಾಕುತ್ತದೆ ಎಂಬುದರ ಹೃದಯ ವಿದ್ರಾವಕ ಚಿತ್ರಣ ಈ ಕಥೆಯಲ್ಲಿದೆ.

ಕಥೆ ಹೆಣೆಯುವಲ್ಲಿನ ಕಥೆಗಾರ್ತಿಯ ಕೌಶಲ್ಯ, ವಾಸ್ತವವನ್ನು ಕಟ್ಟಿಕೊಡುವ ನೈಜ ಪ್ರಜ್ಞೆ ಈ ಕಥೆಯಲ್ಲಿ ಹಾಸು ಹೊಕ್ಕಾಗಿದೆ. ಪ್ರಾಯಶಃ ಮಕ್ಕಳಿಗೋಸ್ಕರ ತಮ್ಮ ಎಲ್ಲಾ ನೋವುಗಳನ್ನು ಬದಿಗೊತ್ತಿ ಆಸೆಯ ಕಣ್ಣುಗಳೊಂದಿಗೆ ಬದುಕುವ ಅಕ್ಕಣಿಯಂಥವರು ನಮ್ಮ ಸಮಾಜದಲ್ಲಿ ಬೇಕಾದಷ್ಟು ಮಂದಿ ಇದ್ದಾರೆ.

'ಕಳ್ಳ' ಕಥೆಯು ಬಡವರ ಹೆಣ್ಣುಮಕ್ಕಳನ್ನು ಶ್ರೀಮಂತರು ನಡೆಸಿಕೊಳ್ಳುವ ರೀತಿಯನ್ನು ಚಿತ್ರಿಸುತ್ತದೆ. ಬೀಡಿ ಬ್ರಾಂಚಿನ ಮಾಪಿಳ್ಳೆ ಕಾಳಿಯನ್ನು ತನ್ನ ಕಾಮದ ಹಸಿವೆಯನ್ನು ನೀಗಿಸಿಕೊಳ್ಳಲು ಹೊಂಚು ಹಾಕುತ್ತಾನೆ. ಇತ್ತ ಕಾಳಿ ಹಾಗೂ ಆಕೆಯ ಅಣ್ಣ ಕೊರಗ ಹೊಟ್ಟೆಯ ಹಸಿವೆಯಿಂದ ಬಳಲುತ್ತಿದ್ದಾರೆ. ಮೂರು ದಿನ ಉಪವಾಸವಿದ್ದು ಧನಿಯ ಮನೆಗೆ ಬೇಡಲು ಬಂದಾಗ ಧನಿ ಹಾಗೂ ಆತನ ಹೆಂಡತಿ ನಡೆದುಕೊಳ್ಳುವ ರೀತಿ ಶ್ರೀಮಂತರ ಕ್ರೌರ್ಯ ಮುಖದ ಪರಿಚಯ ಮಾಡಿಕೊಡುತ್ತದೆ.

ಮಾಪಿಳ್ಳೆಯ ವ್ಯಂಗ್ಯದ ಮಾತುಗಳ ಬಾಣದಿಂದ ಬಿಡುಗಡೆ ಪಡೆಯಲು ಬೀಡಿ ಕಟ್ಟುವುದನ್ನೇ ನಿಲ್ಲಿಸುವ ಸಂದರ್ಭ ಒದಗಿ ಬರುತ್ತದೆ. ಬಡ ಹೆಣ್ಣು ಮಕ್ಕಳ ಯೌವ್ವನ ಹಾಗೂ ಸೌಂದರ್ಯ ಹಣವಂತರ ಸುಖಕ್ಕಾಗಿ ಎಂಬುದು ಈ ಕಥೆಯಲ್ಲಿ ವ್ಯಕ್ತವಾಗುತ್ತದೆ. ಬೀಡಿ ಬ್ರಾಂಚಿಗೆ ಹೋಗುವುದನ್ನು ನಿಲ್ಲಿಸುವುದರ ಮೂಲಕ ತಣ್ಣನೆಯ ಪ್ರತಿಭಟನೆ ತೋರುತ್ತಾಳೆ.

'ಬದುಕಿನ ಬೇರನ್ನರಸಿ' ಕಥೆಯು ಸಣ್ಣ ವಯಸ್ಸಿನಲ್ಲೇ ತಂದೆ – ತಾಯಿಯರನ್ನು ಕಳೆದುಕೊಂಡು, ತನ್ನ ಒಡಹುಟ್ಟಿದವರಿಗಾಗಿ ಸಂಸಾರದ ಹೊಣೆ ಹೊತ್ತ ಶಶಿಯ ಬದುಕಿನ ಹುಡುಕಾಟದ ಕಥೆಯಾಗಿದೆ. ತಾನು ಮದುವೆಯಾಗದೇ ಉಳಿದು ತನ್ನ ತಮ್ಮ ತಂಗಿಯರ ಮದುವೆ ಮಾಡಿಸಿದ ಶಶಿ, ತಾಯಿಯನ್ನು ಕಳೆದುಕೊಂಡ ತಮ್ಮ ಮಗ ಮಧುವನ್ನು ತನ್ನ ಮಗನಂತೆ ಸಾಕುತ್ತಾಳೆ. ಆದರೆ ದೊಡ್ಡವನಾದ ಮೇಲೆ ಆತನನ್ನು ತಂದೆ ಕರೆದುಕೊಂಡು ಹೋಗುತ್ತಾನೆ.

ಎಲ್ಲರಿದ್ದೂ ಒಂಟಿಯಾದ ಶಶಿ ಕೊನೆಗೆ ವರ್ಷದಾಟಿದರೂ ತನಗೆ ಇಷ್ಟವಾದವನನ್ನು ಮದುವೆಯಾಗಿ, ತನ್ನ ಬದುಕಿನ ಬೇರನ್ನರಸಿ ಹೊನ್ನಳ್ಳಿಗೆ ಹೋಗುತ್ತಾಳೆ. ಹೆಣ್ಣಿನ ಬದುಕಿನ ಕಷ್ಟ ಕಾರ್ಪಣ್ಯಗಳು, ಇವುಗಳಿಂದ ಹೊರಬಂದು ಆಕೆ ಬದುಕಿನ ಅರ್ಥವನ್ನು ಕಂಡುಕೊಳ್ಳುವ ಪರಿ ಈ ಕಥೆಯಲ್ಲಿ ಚಿತ್ರಿತವಾಗಿದೆ.

'ಒಂದೇ ಒಂದು ಅವಕಾಶ' ಕಥೆಯ ವಸುಧಾ ಹಾಗೂ ಶ್ರೀಯ ಬದುಕು ಚೆನ್ನಾಗಿದ್ದರೂ ನಿಂಗಿ ಎಂಬ ಹೆಣ್ಣಿನೊಂದಿಗಿನ ಶ್ರೀಯ ಸಂಬಂಧ ಗಂಡ - ಹೆಂಡಿರ ವಿರಸಕ್ಕೆ ಕಾರಣವಾಗುತ್ತದೆ. 'ಗಂಡ - ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು' ಎನ್ನುವಂತೆ ಅವರ ಮಗ 'ಅನಿಲ್'ನ ಮನಸ್ಸಿಗೆ ಈ ವಿರಸ ತುಂಬಾ ನೋವನ್ನುಂಟುಮಾಡುತ್ತದೆ.

ಅನಿಲನ ಮುಗ್ಧ ಮನಸ್ಸು ಅಪ್ಪ – ಅಮ್ಮನನ್ನು ರಾಜಿ ಮಾಡಿಸಿ ಒಟ್ಟಿಗೆ ಬದುಕುವಂತೆ ಮಾಡುತ್ತದೆ. ಗಂಡನ ವ್ಯಭಿಚಾರ ವಸುಧಾಳಿಗೆ ಸಹಿಸುವುದಕ್ಕಾಗದೇ ತನ್ನ ಸ್ವತಂತ್ರ ಬದುಕನ್ನು ಕಂಡುಕೊಳ್ಳಲು ಹೊರಟಾಗಲೂ ಸಂಬಂಧದ ಕೊಂಡಿ ಕಳಚಿಕೊಳ್ಳುವುದಕ್ಕಾಗುವುದಿಲ್ಲ. ಹಾಗಾಗಿ ಸಂಬಂಧದ ಬಾಂಧವ್ಯವನ್ನು ಉಳಿಸಿಕೊಂಡರೂ ತನ್ನ ಸ್ವಂತಿಕೆಯನ್ನು ಕಾಯ್ದುಕೊಳ್ಳುವುದರೊಂದಿಗೆ ಹೆಣಗಾಡುತ್ತಾಳೆ.

'ಪರಿಹಾರ' ಕಥೆಯಲ್ಲಿ ಮಧುರ ಮದುವೆಯಾಗಿ ಹತ್ತು ವರ್ಷಗಳಾದರೂ ಮಕ್ಕಳಾಗದ್ದರಿಂದ ಆ ಚಿಂತೆಯಿಂದ ಪಾರಾಗಲು ಸಭೆ - ಸಮಾರಂಭಗಳಿಗೆ ಹೋಗುವುದನ್ನು ರೂಢಿಸಿಕೊಂಡಿದ್ದಳು. ಒಮ್ಮೆ ಕಲ್ಯಾಣ ಮಂಟಪದಲ್ಲಿ ಇಬ್ಬರು ಹೆಂಗಸರು ಇವಳ ಬಗೆಗೆ ನುಡಿದ ವ್ಯಂಗ್ಯ ಮಾತು, ತಾನು ಹುಟ್ಟಿರುವುದೇ ತಪ್ಪೇ ಎಂದು ಯೋಚಿಸುವಂತೆ ಮಾಡುತ್ತದೆ. 'ಅಲ್ಲ ಇಂಥ ಸಮಾರಂಭಕ್ಕೆಲ್ಲ ಬರಲು ಮನಸ್ಸಾದರೂ ಹೇಗಾಗುತ್ತದೋ ? ಆಕೆಗೆ ಲಗ್ನವಾಗಿ ಹತ್ತು ವರ್ಷಗಳೇ ದಾಟಿದುವಂತೆ' (ಹೊಸಹೆಜ್ಜೆ, ಪು. ೫೨ ೧೯೯೭) ಎಂಬ ಮಾತು ತಾಯ್ತತನವನ್ನು ಉತ್ಪ್ರೇಕ್ಷಿಸುವಂತಹ ಸವಾಲಿಗೆ ಮೌನ ಪ್ರತಿಕ್ರಿಯೆಯಾಗಿದೆ. ಈ ಮೌನ ಪ್ರತಿಕ್ರಿಯೆಯೇ ಪ್ರತಿಭಟನೆಯ ನೆಲೆಯಾಗಿ ಗೋಚರಿಸುತ್ತದೆ.

ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವು ಮಾತ್ರ ತನ್ನ ಮಗು ಎಂದು ಭಾವಿಸದೇ, ಅನಾಥಾಲಯದಲ್ಲಿರುವ ಮಕ್ಕಳನ್ನು ಪ್ರೀತಿಯಿಂದ ನೋಡಿಕೊಂಡು ಮನಸ್ಸಿನ ದುಃಖವನ್ನು ಕಳೆಯಬಹುದಲ್ಲವೇ ಎಂಬ ಯೋಚನೆ ಮಧುರಳಲ್ಲಿ ಮಾಡುವುದು ನಿಜವಾದ ತಾಯ್ತನವೇ ಆಗಿದೆ.

'ಕಣ್ಣಾ ನೀರೆದ್ದು ಹೊಳೆಯದೊ' ಕಥೆಯ ಗಿರಿಜಾ ವೃತ್ತಿಯಲ್ಲಿ ನರ್ಸ್ ಆದರೂ ಮಕ್ಕಳನ್ನೇ ಪಡೆಯದೇ ಇರುವ ಆಕೆ ಎಲ್ಲರ ದೃಷ್ಟಿಯಲ್ಲಿ ಬಂಜೆ ಎಂಬ ಪಟ್ಟ ಗಳಿಸಿಕೊಂಡರೂ ಅವಳ ತಾಯ್ತನದ ಮನಸ್ಸಿಗೆ ಬಂಜೆತನವಿರಲಿಲ್ಲ. ತನ್ನ ಒಡಹುಟ್ಟಿದವರನ್ನೆಲ್ಲಾ ಚೆನ್ನಾಗಿ ಸಾಕಿದರೂ ಯಾರಿಂದಲೂ ಆಕೆಗೆ ಒಂದು ಒಳ್ಳೆಯ ಮಾತು ಸಿಗದೇ ಹೋದಾಗ ಆಕೆಗೆ ಒಬ್ಬಂಟಿತನ ಕಾಡುತ್ತದೆ.

ಆಸ್ಪತ್ರೆಯಲ್ಲಿ ನೋಡಿದ ಅನಾಥ ಮಗುವೊಂದನ್ನು ತಾನು ಸಾಕುವುದರ ಮೂಲಕ ತಾಯ್ತನವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ಹಾತೊರೆದರೂ ಅವಳ ಇಚ್ಛೆ ನೆರವೇರುವುದಿಲ್ಲ. ಶ್ರೀಮಂತರ ಕೈಗೆ ಆ ಮಗುವನ್ನು ಕೊಡುವುದರ ಮೂಲಕ ಗಿರಿಜೆಯನ್ನು ವಂಚಿಸುತ್ತಾರೆ. ಆದರೆ ಮಗುವಿಗೆ ಬೇಕಾದದ್ದು ಹಣವೇ ? ಪ್ರೀತಿಯೇ ಎಂಬ ಪ್ರಶ್ನೆಗಳಷ್ಟೇ ಗಿರಿಜೆಯ ಪಾಲಿಗೆ ಉಳಿದು ಬಿಡುತ್ತವೆ.

'ಇದು ಬರಿ ಬೆಳಗಲ್ಲೋ ಅಣ್ಣಾ' ಕಥೆಯು ಹೆಣ್ಣಿನ ದುಡಿಮೆಗೆ ಬೆಲೆಯಿಲ್ಲ ಎನ್ನುವುದನ್ನು ಚಿತ್ರಿಸುತ್ತದೆ. ಮನೆಯ ಕಷ್ಟ-ಕಾರ್ಪಣ್ಯಗಳಿಂದ ಬೇಸತ್ತ ಗೌರಿ ದೂರದ ಊರಿಗೆ ಹೋಗಿ ದುಡಿದು ತನ್ನ ತಾಯಿಗೆ ಹಣ ಕಳುಹಿಸುತ್ತಿದ್ದರೂ ಅದನ್ನು ಊರಿನಲ್ಲಿದ್ದ ಅಣ್ಣಂದಿರು ಖರ್ಚು ಮಾಡುತ್ತಿದ್ದರು. ಮದುವೆಗಿದ್ದ ಅಕ್ಕ ಬಾಡಿಗೆ ಎತ್ತಿನ ಹಾಗೆ ಮನೆಯಲ್ಲಿ ದುಡಿಯುತ್ತಿದ್ದರೂ ಅಣ್ಣ-ಅತ್ತಿಗೆಯರ ವ್ಯಂಗ್ಯ ಮಾತುಗಳಿಗೆ ಗುರಿಯಾಗುತ್ತಿದ್ದಳೇ ಹೊರತು ಅವಳನ್ನು ಯಾರೂ ಪ್ರೀತಿಯಿಂದ ಮಾತನಾಡಿಸುತ್ತಿರಲಿಲ್ಲ.

ತಲೆತಲಾಂತರದಿಂದ ನಮ್ಮ ಸಮಾಜದಲ್ಲಿ ಬೆಳೆದು ಬಂದ ಭಾವನೆಗಳು ಅಷ್ಟು ಸುಲಭದಲ್ಲಿ ಬದಲಾಗುವುದು ಸಾಧ್ಯವಿಲ್ಲ. 'ಅವಾದ್ರೆ ಗಂಡುಡುಗ್ರು, ನಾಳಿಕೆ ನಂಗೆ ತಿಥಿ ಮಾಡ್ಬೇಕಾದ್ರು ಅವ್ರೇಯ', (ಹೊಸ ಹೆಜ್ಜೆ, ಪು. ೧೦೫, ೧೯೯೬) ಎಂಬ ತಾಯಿಯ ಮಾತು ಇದನ್ನೇ ಸ್ಪಷ್ಟ ಪಡಿಸುತ್ತದೆ.

'ಹೊಸ ಹೆಜ್ಜೆ' ಪರಂಪರಾಗತ ನಂಬಿಕೆಗಳಿಂದ ಹೊರಬಂದು ಬದುಕಿನ ದಾರಿಯನ್ನು ಕಂಡುಕೊಂಡ ಹೆಣ್ಣುಮಗಳೊಬ್ಬಳ ಕಥೆಯಾಗಿದೆ. ತಾಯಿಯನ್ನೂ, ಒಬ್ಬ ಸಹೋದರನನ್ನೂ ಕಳೆದುಕೊಂಡು ತಂದೆ ಹಾಗೂ ತಮ್ಮನೊಂದಿಗೆ ಕಾಲ ಕಳೆಯುತ್ತಿದ್ದ ಲಲಿತ ತನ್ನ ಜೀವನೋಪಾಯಕ್ಕಾಗಿ ಶೋಭಾ ಟೀಚರ್ ನೆರವಿನಿಂದ ಕೆಲಸವೊಂದನ್ನು ಪಡೆದಿದ್ದಳು. ಹೆಣ್ಣಿಗೆ ಜೀವನದಲ್ಲಿ ಮದುವೆ ಅನಿವಾರ್ಯ ಎಂದು ತಿಳಿದಿದ್ದ ತನ್ನ ತಂದೆಯನ್ನು ಕೊನೆಗೂ ಒಪ್ಪಿಸಿ, ತಮ್ಮನ ಮದುವೆಗೆ ಒಪ್ಪಿಗೆ ನೀಡಿ, ತನ್ನ ಇಷ್ಟದಂತೆ 'ಸಂಸ್ಕೃತ ಕ್ಲಾಸ್' ತೆಗೆಯುವುದಕ್ಕೆ ಮುಂದಾಗುತ್ತಾಳೆ.

ಸಮಾಜದ ಕಟ್ಟುಪಾಡು, ನಂಬಿಕೆಗಳ ಮಧ್ಯೆ ನಿಂತೇ ತನ್ನದೇ ಆದ ಬದುಕನ್ನು ರೂಪಿಸಿಕೊಳ್ಳ ಹೊರಟ ಲಲಿತಾ ಆಧುನಿಕ ಸ್ತ್ರೀ ಸಮುದಾಯದ ಪ್ರತಿನಿಧಿಯಾಗಿದ್ದಾಳೆ. ಮೂಲ ನಕ್ಷತ್ರದಲ್ಲಿ ಹುಟ್ಟಿದವಳು ಎನ್ನುವ ಕಾರಣಕ್ಕಾಗಿ ತಿರಸ್ಕರಿಸುತ್ತಿದ್ದ ಅದೆಷ್ಟೋ ಯುವಕರಿಗೆ ಸವಾಲು ಎನ್ನುವಂತೆ ಹೊಸ ಹೆಜ್ಜೆಯಿಟ್ಟ ಲಲಿತಾರಂತವರು ಈ ಸಮಾಜದಲ್ಲಿ ಸೃಷ್ಟಿಯಾದರೆ ಪ್ರಾಯಶಃ ಹೆಣ್ಣಿನ ಗೌರವ ಹೆಚ್ಚಬಹುದು ಎಂಬುದನ್ನು ಈ ಕಥೆ ನಿರೂಪಿಸುತ್ತದೆ.

'ಕ್ಷಮಯಾ ಧರಿತ್ರಿ' ಕಥೆಯಲ್ಲಿ ತನಗಿಲ್ಲದ ಸೌಭಾಗ್ಯ ಇನ್ನೊಂದು ಹೆಣ್ಣಿಗೂ ಸಿಗಬಾರದೆಂದು ಹಪಹಪಿಸುವ ಜಾನಕಿಯ ರಾಕ್ಷಸೀತನದ ಚಿತ್ರಣವಿದೆ. ಗಂಡನನ್ನು ಕಳೆದುಕೊಂಡು ತವರು ಮನೆಗೆ ಸೇರಿದ ಜಾನಕಿಯು ತನ್ನ ತಮ್ಮ ಹಾಗೂ ಅವನ ಹೆಂಡತಿ ಸೀತೆಯರ ಸುಮಧುರ ದಾಂಪತ್ಯಕ್ಕೆ ಬೆಂಕಿಯಾಗುತ್ತಾಳೆ.

ಪಾರೋತಿ ತಂದುಕೊಟ್ಟ ಸುರುಳಿ ಹೂವನ್ನು ನೋಡಿ ತಲೆಗಿಡಬೇಕೆಂಬ ಆಸೆ ಸೀತೆಯಲ್ಲಿ ಮೂಡಿದರೂ ಜಾನಕಿ ಅದಕ್ಕೆ ಅವಕಾಶ ಕೊಡದೆ ಕ್ರೂರವಾಗಿ ಬೈಯುತ್ತಾಳೆ. 'ಪೇಟೆಯಲ್ಲಿದ್ದವರ ನಡತೆಯೆ ಹೀಗೆ. ಬೆಳಿಗ್ಗೆ ತಲೆಬಾಚಿ, ಪೌಡರ್ ಬಳಿದು, ಹೂ ಮುಡಿದು ಸೂಳೆಯಂತೆ ಡ್ರೆಸ್ಸು ಧರಿಸಿ ತಿರುಗುವುದು' (ಹೊಸ ಹೆಜ್ಜೆ ಪು. ೮೪, ೧೯೯೬) ಎಂಬ ಸೀತೆಯ ಬಗೆಗಿನ ಜಾನಕಿಯ ಮಾತಿನಲ್ಲಿ ತನಗಿಲ್ಲದ್ದು ಇನ್ನೊಂದು ಹೆಣ್ಣಿಗೂ ಸಿಗಬಾರದೆಂಬ ಈರ್ಷ್ಯೆ ಎದ್ದು ಕಾಣುತ್ತದೆ. ಆದರೆ ಸೀತೆ ಇದನ್ನು ಪ್ರತಿಭಟಿಸುತ್ತಾಳಾದರೂ, ಅವಳ ಪ್ರತಿಭಟನೆಗೆ ಬೆಲೆ ಸಿಗದೇ ಹೋಗುತ್ತದೆ.

'ಎತ್ತಣ ಮಾಮರ' ಕಥೆಯ ಸರಸಮ್ಮ ಚಿನ್ನ ಕದ್ದ ಆರೋಪಕ್ಕೆ ಗುರಿಯಾಗುತ್ತಾಳೆ. ಅವಳ ಗಂಡನ ಮೇಲಿದ್ದ ಅನುಮಾನ ಅವಳ ಕಡೆಗೂ ತಿರುಗಿತು. ಆರಂಭದಲ್ಲಿ ಮನೆಯವರೆಲ್ಲರೂ ಅವಳ ಬಗೆಗೆ ವ್ಯಂಗ್ಯದ ಮಾತುಗಳನ್ನಾಡುತ್ತಾ ಅವಳನ್ನು ಚುಚ್ಚಿದರೂ ಕೊನೆಗೆ ಅವಳು ಚಿನ್ನ ಕದ್ದಿಲ್ಲವೆಂದು ತಿಳಿದ ಮೇಲೂ ಸತ್ಯವನ್ನು ಒಪ್ಪಿಕೊಳ್ಳದೆ ಮನೆ – ಮಂದಿಯೂ ಮೌನವಹಿಸುತ್ತಾರೆ.

ಆದರೆ ಸರಸಮ್ಮ ಅವರೆಲ್ಲರನ್ನು ತರಾಟೆಗೆ ತೆಗೆದುಕೊಂಡು ಚೆನ್ನಾಗಿ ಬೈಯುತ್ತಾಳೆ. ಯಜಮಾನನ ಮನೆಯಲ್ಲಿ ಕೆಲಸದಾಕೆಯಾಗಿ ಸೇವೆ ಮಾಡುವ ಸರಸಮ್ಮ ತೋರಿಸುವ ಧೈರ್ಯ ವಿಶೇಷವಾದದ್ದು.

'ಒಂದಾನೊಂದು ಊರಲಿ' ಎಂಬ ಕಥೆಯು ಬಡವರಲ್ಲಿರುವ ನಿಷ್ಠೆ, ಪ್ರಾಮಾಣಿಕತೆ ಶ್ರೀಮಂತರಲ್ಲಿರುವುದಿಲ್ಲ ಎಂಬುದನ್ನು ಚಿತ್ರಿಸುತ್ತದೆ. ಐತನ ಮಗ ರಘು ಹಾಗೂ ಅವನ ಹೆಂಡತಿ ಪುಷ್ಪಾಳನ್ನು ವಸುಧಾಗೆ ಹೋಲಿಸುತ್ತಾರೆ. ಮದುವೆಗೆ ಮೊದಲೇ ಗರ್ಭವತಿಯಾಗಿ ಮುಂದೆ ಆರೇ ತಿಂಗಳಲ್ಲಿ ಮಗುವಿಗೆ ಜನ್ಮಕೊಟ್ಟ ಪುಷ್ಪಳ ಬಗೆಗೆ ಅವಳ ತಾಯಿಯೇ ಕೆಟ್ಟದಾಗಿ ಮಾತನಾಡುತ್ತಾಳೆ. ಆದರೆ ತನ್ನ ಮಗ ಕುಮಾರ ಇಂಥದ್ದೇ ಕೆಟ್ಟ ಕೆಲಸ ಮಾಡಿದ್ದಾನೆ ಎಂದು ಗೊತ್ತಾದಾಗ ಅನಂತಯ್ಯ ಅದನ್ನು ಗುಟ್ಟಾಗಿ ಇಡುತ್ತಾನೆ.

ಅನಂತಯ್ಯನ ಪತ್ನಿ ಶಂಕರಿ ಹೇಳುವ 'ನೀವೆಷ್ಟಾದರೂ ಗಂಡಸರು ತಾನೆ? ನಿಮಗೆ ಹೆಣ್ಣಿನ ನೋವು ಹೇಗೆ ತಿಳಿಯಲು ಸಾಧ್ಯ? ತಪ್ಪು ಮಾಡುವುದು ಇಬ್ಬರೂ ಸೇರಿಯೇ ಆದರೂ ಶಿಕ್ಷೆ ಅನುಭವಿಸುವವಳು ಹೆಣ್ಣು ಮಾತ್ರವೇ' (ವಾಸ್ತವ, ಪು. ೨೨, ೧೯೯೬) ಎಂಬ ಮಾತು ಪುರುಷ ಪ್ರಧಾನ ಆಲೋಚನೆಯ ವಿರುದ್ಧದ ಪ್ರತಿಭಟನೆ ಆಗಿದೆ.

'ರಮೆಯ ಮದುವೆ' ಕಥೆಯಲ್ಲಿ ಹೆಣ್ಣಿನಿಂದಲೇ ಹೆಣ್ಣಿಗಾಗುವ ಅನ್ಯಾಯದ ಚಿತ್ರಣವಿದೆ. ಶ್ರೀಧರ ರಮೆಯನ್ನು ನೋಡಿ ಒಪ್ಪಿಕೊಂಡು ಹೋದರೂ ಮುಂದೆ ರಮೆ ಶ್ರೀಧರನ ಮೇಸ್ತ್ರೀ ಶಂಕರನನ್ನು

ಮದುವೆಯಾಗಬೇಕಾಗಿ ಬರುತ್ತದೆ. ಉಪನ್ಯಾಸಕನಾಗಿದ್ದ ಶ್ರೀಧರನನ್ನು ರಮೆಯ ಚಿಕ್ಕಪ್ಪನ ಮಗಳು ರಂಜಿನಿಗೆ ಮದುವೆ ಮಾಡಿಸುವ ಹುನ್ನಾರ ನಡೆಯುತ್ತದೆ. ಇದನ್ನು ತಿಳಿದ ರಮೆ ಯಾರಿಗೂ ಹೇಳದೆ ಮನೆಬಿಟ್ಟು ಹೋಗುತ್ತಾಳೆ.

ವ್ಯವಸ್ಥೆಯನ್ನು ಒಪ್ಪಿ ಮದುವೆಯಾಗುವ ನಿರ್ಧಾರ ಮಾಡದ ರಮೆ ಸಾವಿಗೆ ಶರಣಾದರೂ ಮನೆಬಿಟ್ಟು ಹೋಗುವುದು ಅವಳ ಪ್ರತಿಭಟನೆಯೇ ಎನ್ನಬಹುದು.

'ಉತ್ತರ ಕಾಣದ ಪ್ರಶ್ನೆಗಳು' ಕಥೆ ಸಮಾಜದಲ್ಲಿ ನಡೆಯುವ ಮುಷ್ಕರ, ಬಂದ್‌ಗಳು ಜನಸಾಮಾನ್ಯರ ಬದುಕಿಗೆ ಎಂಥಹ ತೊಂದರೆಯನ್ನು ನೀಡುತ್ತವೆ ಎಂಬುದರ ಚಿತ್ರಣವಿದೆ. ಏನೂ ತಪ್ಪು ಮಾಡದಿರುವ ಸುಮಾ ತನ್ನ ಗಂಡನನ್ನು ಕಳೆದುಕೊಳ್ಳುವುದು, ವಾಂತಿ - ಬೇಧಿಯಿಂದ ನರಳಿದ ಸುಜಾತ ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಸಾವನ್ನಪ್ಪುವುದು ಎಲ್ಲವು ಮುಷ್ಕರದ ಕಾರಣದಿಂದಲೇ ಎಂಬುದು ಸ್ಪಷ್ಟವಾಗುತ್ತದೆ.

ವಸುಧಾ ಹೇಳುವ 'ಆಳುವ ಪಕ್ಷಕ್ಕೂ, ವಿರೋಧ ಪಕ್ಷಕ್ಕೂ ನಡೆವ ಈ ತಿಕ್ಕಾಟದ ಯಜ್ಞಕ್ಕೆ ಎಷ್ಟು ಮಂದಿ ನಿರಪರಾಧಿಗಳು ಬಲಿಯಾಗಬೇಕೋ' (ವಾಸ್ತವ, ಪು, ೫೪, ೧೯೯೬) ಎಂಬ ಮಾತು ವ್ಯವಸ್ಥೆಯ ಕುರಿತಾದ ಅಸಮಾಧಾನವನ್ನು ಸೂಚಿಸುತ್ತದೆ.

'ಅಂತ್ಯವಲ್ಲ. . . . ಆರಂಭ' ಕಥೆಯಲ್ಲಿ ಹೆಣ್ಣು ಮಕ್ಕಳು ಸ್ವಾವಲಂಬನೆಯ ಬದುಕನ್ನು ಮಟ್ಟ ಹಾಕುವ ಪುರುಷ ದಬ್ಬಾಳಿಕೆಯ ಚಿತ್ರಣವಿದೆ. ಗಿರಿಜಮ್ಮ ತಾನೊಬ್ಬಳೇ ಹಳ್ಳಿಯಲ್ಲಿ ನಿಂತು ಅಲ್ಲಿನ ಮಹಿಳೆಯರಿಗಾಗಿ 'ವಿಕಾಸ ಕೇಂದ್ರ'ವನ್ನು ಸ್ಥಾಪಿಸಿದ್ದು ಆ ಊರಿನ ಗೋವಿಂದಪ್ಪನಿಗೆ ಸಹಿಲಾಗುವುದಿಲ್ಲ. ಗಿರಿಜಮ್ಮ ಇಲ್ಲದ ಹೊತ್ತಲ್ಲಿ ಆಕೆಯ ಮನೆಯನ್ನು ಸುಟ್ಟು ಬಿಡುತ್ತಾನೆ. ಅವನ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಬೇಕೆನ್ನುವ ಹುನ್ನಾರ ಗಿರಿಜಮ್ಮನದ್ದಾದರೂ ಸುಟ್ಟುಹೋದ ಮನೆಯ ಬದಲಿಗೆ ಇನ್ನೊಂದು ಮನೆ ಕಟ್ಟಿಸುವ ಮೂಲಕ ನಿಜವಾದ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಗಿರಿಜಮ್ಮನ ಊರಲ್ಲಿ ಹೆಣ್ಣು ಮಕ್ಕಳು ಬೇಕಾದಷ್ಟಿದ್ದರೂ ಗಿರಿಜಮ್ಮನ ಮನೋಭಾವದವರಾರೂ ಇಲ್ಲದ ಕಾರಣ ಆಕೆ ಒಂಟಿ ಹೆಣ್ಣಾಗಿಯೇ ಕಾಣಿಸಿಕೊಳ್ಳುತ್ತಾಳೆ. ಮನಸ್ಸಲ್ಲಿದ್ದ ದಿಟ್ಟತನವನ್ನು ತನ್ನ ಬದುಕನ್ನು ಅಂತ್ಯಗೊಳಿಸಲು ಹೊರಟವರ ಮುಂದೆ ಆರಂಭಗೊಳಿಸಿ ಅದೇ ಹಳ್ಳಿಯಲ್ಲಿ ಬಾಳಿ - ಬದುಕುವ ಸಾಹಸ ಮಾಡುತ್ತಾಳೆ.

ಗಂಗಾಪಾದೇಕಲ್‌ರವರು ತಮ್ಮ ಕಥೆಗಳಲ್ಲಿ ವ್ಯವಸ್ಥೆಯಲ್ಲಿರುವ ಸಾಮಾಜಿಕ ಅಸಮಾನತೆಯನ್ನು ಕಥೆಗಳ ಪಾತ್ರಗಳು ಪ್ರತಿಕ್ರಿಯಿಸುವುದರೊಂದಿಗೆ ಪ್ರತಿಭಟನೆಯ ಸ್ವರೂಪವನ್ನು ಸ್ಪಷ್ಟಪಡಿಸುತ್ತಾರೆ. ಅದು ಬಡವ ಮತ್ತು ಶ್ರೀಮಂತ ಎನ್ನುವ ಅಸಮಾನತೆ ಹಾಗೂ ಗಂಡು ಹಾಗೂ ಹೆಣ್ಣು ಎನ್ನುವ ಅಸಮಾನತೆ. ಈ ಅಸಮಾನತೆ ಇದ್ದರೂ

ಹೆಣ್ಣು ತನ್ನ ದೇಹವನ್ನು ಬಂಡವಾಳವಾಗಿಸಲು ಒಪ್ಪಿಕೊಳ್ಳದೆ ಅದನ್ನು ನಿರಾಕರಿಸುವುದರೊಂದಿಗೆ ಪ್ರತಿಭಟನೆಯ ಧ್ವನಿ ಗೋಚರವಾಗುತ್ತದೆ. 'ಕಳ್ಳ', 'ಒಂದು ಪ್ರಕರಣದ ಕೊನೆ', 'ಇದು ಬರಿ ಬೆಳಗಲ್ಲೊ ಅಣ್ಣಾ' ಮುಂತಾದ ಕಥೆಗಳಲ್ಲಿ ಈ ಅಂಶವನ್ನು ಗಮನಿಸಬಹುದು.

ಆಧುನಿಕತೆಗೆ ತೆರೆದುಕೊಂಡ ಹೆಣ್ಣುಮಗಳು ಪ್ರತಿಭಟನೆಯ ಧ್ವನಿಯನ್ನು ಎತ್ತುತ್ತಲೇ ತನ್ನ ಸ್ವಂತಿಕೆಯನ್ನು ರೂಪಿಸಿಕೊಳ್ಳುವ ಅಂಶಗಳು ಗೋಚರವಾಗುತ್ತವೆ. ಶಿಕ್ಷಣ ಪಡೆದ ಹೆಣ್ಣುಮಕ್ಕಳು ವಿವಾಹ ಸಂಸ್ಥೆಯನ್ನು ನಿರಾಕರಿಸಿ ಒಂಟಿಯಾಗಿ ಬಾಳುವ ಧೈರ್ಯವನ್ನು ತೋರುವ ಮೂಲಕ ಪುರುಷಾಧೀನ ವ್ಯವಸ್ಥೆಯನ್ನು ಪ್ರತಿಭಟಿಸುತ್ತಾಳೆ.

ಸಾಂಪ್ರದಾಯಿಕತೆಯ ಮಿತಿಗಳನ್ನು ಅರ್ಥಮಾಡಿಕೊಂಡು ಅದನ್ನು ದಾಟಬೇಕೆನ್ನುವ ಎಚ್ಚರವು ಗಂಗಾರವರ ಕಥೆಗಳಲ್ಲಿ ಇದೆ. ಪುರುಷನ ಯಜಮಾನ ಸಂಸ್ಕೃತಿಯನ್ನು ನಿರಾಕರಿಸುವ ಧೈರ್ಯವು ಇಲ್ಲಿ ಬರುವ ಸ್ತ್ರೀ ಪಾತ್ರಗಳಿಗೆ ಇದೆ. ದೇಹ ರಚನೆಯ ಕಾರಣಕ್ಕಾಗಿ ಅನ್ಯಾಯಕ್ಕೊಳಗಾಗುವ ಹೆಣ್ಣಿನ ಶೋಷಣೆಯನ್ನು ಪ್ರಶ್ನಿಸುವ ಧೈರ್ಯವು ಪ್ರಕಟಗೊಳ್ಳುವ ಮೂಲಕ ವ್ಯವಸ್ಥೆಯ ವಿರುದ್ಧದ ಧ್ವನಿ ಗೋಚರವಾಗುತ್ತದೆ.

ಸಾಮಾಜಿಕ ಪ್ರಜ್ಞೆಯ ಅಸಮಾನತೆಯ ಧ್ವನಿಗಳು ಇಲ್ಲಿ ಬರುವ ಸ್ತ್ರೀ ಪಾತ್ರಗಳ ಮೂಲಕ ಹೊರಹೊಮ್ಮುತ್ತವೆ. ಸಾಮಾನ್ಯ ಹೆಣ್ಣೊಬ್ಬಳು ವ್ಯವಸ್ಥೆಯನ್ನು ಧಿಕ್ಕಾರ ಕೂಗದೆಯೇ ಎದುರಿಸಿ ನಿಲ್ಲುವ ಮೂಲಕ ತಣ್ಣನೆಯ ಪ್ರತಿಭಟನೆ ತೋರುತ್ತಾಳೆ. 'ರಮೆಯ ಮದುವೆ' , 'ಉತ್ತರ ಕಾಣದ ಪ್ರಶ್ನೆಗಳು', 'ಅಂತ್ಯವಲ್ಲ ಆರಂಭ' ಕಥೆಗಳಲ್ಲಿ ಈ ಅಂಶಗಳು ಕಾಣಸಿಗುತ್ತವೆ.

ವೈದೇಹಿಯವರ,

ಅಕ್ಕು (ಅಲೆಗಳಲ್ಲಿ ಅಂತರಂಗ, ೨೦೦೬)

ಅಂತರಂಗದ ಪುಟಗಳು (ಅಲೆಗಳಲ್ಲಿ ಅಂತರಂಗ, ೨೦೦೬)

ಅವಲಂಬಿತರು (ಅಲೆಗಳಲ್ಲಿ ಅಂತರಂಗ, ೨೦೦೬)

ಅಮ್ಮಚ್ಚಿಯೆಂಬ ನೆನಪು (ಅಲೆಗಳಲ್ಲಿ ಅಂತರಂಗ, ೨೦೦೬)

ಮರಗಿಡ ಬಳ್ಳಿ (ಅಲೆಗಳಲ್ಲಿ ಅಂತರಂಗ, ೨೦೦೬)

'ಅಕ್ಕು' ಕಥೆಯಲ್ಲಿ ಪಿತೃಪ್ರಧಾನ ವ್ಯವಸ್ಥೆಯ ದಬ್ಬಾಳಿಕೆಯ ಅಡಿ ಸಿಲುಕಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಹೆಣ್ಣೊಬ್ಬಳ ಚಿತ್ರಣವಿದೆ. ಈ ಕಥೆಯ ಕೇಂದ್ರ ಪಾತ್ರವಾದ ಅಕ್ಕು ಗಂಡನಿಂದ ಯಾವ ಸುಖ ಕಾಣದೆ

ಹಣವ' (ಅಲೆಗಳಲ್ಲಿ ಅಂತರಂಗ, ಪು. ೫೭೯, ೨೦೦೬) ಎಂಬ ಮಾತಿನಲ್ಲಿ ಪ್ರತಿಭಟನೆಯ ಕಾವು ಇದೆ. 'ಅಮ್ಮಚ್ಚಿ ಅವುಡುಗಚ್ಚಿ ಮಡಲಿನಂಚನ್ನು ತಿಪ್ಪುತ್ತಿದ್ದಳು' (ಅದೇ. . .) ಎನ್ನುವುದು ವೆಂಕಪ್ಪಯ್ಯನ ಬಗೆಗೆ ವ್ಯಕ್ತಪಡಿಸುವ ಕೋಪವೇ ಆಗಿದೆ.

'ಮರಗಿಡಬಳ್ಳಿ' ಕಥೆಯಲ್ಲಿ ಮಂದಕ್ಕನೆಂಬ ವೃದ್ಧೆಯ ಅಸಹಾಯಕ ಸ್ಥಿತಿ ಕಾಣಿಸಿಕೊಳ್ಳುತ್ತದೆ. ಚಿಕ್ಕಂದಿನಲ್ಲಿ ಪ್ರೀತಿಯಿಂದ ಮಕ್ಕಳು ಈಕೆಯ ವೃದ್ಧಾಪ್ಯದಲ್ಲಿ ಕಡೆಗಣಿಸುವುದು, ಕೊನೆಗೆ ಆಕೆಯ ಸೇವೆಗೆ ದಾದಿಯೊಬ್ಬಳನ್ನು ನೇಮಿಸಲು ನಿರ್ಧರಿಸುವುದು ಅತೀವ ನೋವನ್ನುಂಟು ಮಾಡುತ್ತದೆ. ಸಾವು-ಬದುಕಿನ ಹೋರಾಟದಲ್ಲಿ ತೊಯ್ದಾಡುತ್ತಿರುವ ಮಂದಕ್ಕನಿಗೆ ಮಗಳು ಶಾರದಾ ಬರುತ್ತಾಳೆನ್ನುವ ಸುದ್ದಿಯಾಗಲೀ, ಮಗ ಸೂರ್ಯಮಣಿ ಬರುವ ಸುದ್ದಿಯಾಗಲೀ ಅತೀವ ಸಂತೋಷವನ್ನುಂಟುಮಾಡುವುದು ಹೆತ್ತ ಕರುಳಿನ ಮಿಡಿತವೇ ಆಗಿದೆ. ಒಳಗಡೆ ಶಾರದೆಯ ನಗು ಕೇಳಿಸಿಕೊಂಡ ಮಂದಕ್ಕ 'ಅಮ್ಮನೆಂದರೆ ಜೀವ ತೆರುವಂತಿದ್ದ ಶಾರದ ಅವಳ ಅಮ್ಮ ಇಲ್ಲಿ ಹೀಗೆ ನಿಶ್ಚೇಷ್ಟಿತಳಾಗಿ ಬಿದ್ದಿರುವಾಗ ನಗಬಲ್ಲಳೇ. . .' (ಅಲೆಗಳಲ್ಲಿ ಅಂತರಂಗ, ಪು. ೯೭, ೨೦೦೬) ಎಂಬ ಮಾತು ಹೆತ್ತೊಡಲಿಗೆ ಮಾತ್ರ ಅರ್ಥವಾಗಬಲ್ಲದು.

ವೈದೇಹಿಯವರ ಕಥೆಗಳಲ್ಲಿ ಪ್ರತಿಭಟನೆಯ ನೆಲೆ ಕಾಣಿಸಿಕೊಳ್ಳುವುದು ಪ್ರೇಮಾ ಭಟ್ ಹಾಗೂ ಗಂಗಾ ಪಾದೇಕಲ್‌ರವರ ಮುಂದುವರಿದ ಭಾಗವಾಗಿಯೇ ಎನ್ನುವುದು ಗಮನಾರ್ಹ ಅಂಶವಾಗಿದೆ. ಅದು ಎರಡು ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಒಂದು ವ್ಯವಸ್ಥೆಯನ್ನು ಮೊನಚಾದ ಮಾತುಗಳಿಂದ ಪ್ರಶ್ನಿಸುವುದರ ಮೂಲಕ ಪ್ರತಿಭಟನೆ ವ್ಯಕ್ತವಾಗುತ್ತದೆ. ಎರಡನೆಯದಾಗಿ ಗಂಡು - ಹೆಣ್ಣಿನ ಸಂಬಂಧಗಳನ್ನು ಪರಂಪರೆಯ ದೃಷ್ಟಿಕೋನಕ್ಕಿಂತ ಭಿನ್ನವಾದ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಾರೆ. ವಿವಾಹ ಸಂಸ್ಥೆಯೊಳಗೆ ದಾಖಲಾಗುವ ಹೆಣ್ಣೊಬ್ಬಳ ಆಯ್ಕೆ ಅವಳದೇ ಆಗಿರಬೇಕು ಎನ್ನುವುದರ ಮೂಲಕ ಪುರುಷಾಧೀನತೆಯನ್ನು ಧಿಕ್ಕರಿಸುತ್ತಾರೆ. 'ಅಂತರಂಗದ ಪುಟಗಳು' ಕಥೆಯಲ್ಲಿ ಈ ವಿಚಾರ ಗಮನಕ್ಕೆ ಬರುತ್ತದೆ.

ಇವರ ಕಥೆಗಳು ಹೆಚ್ಚು ಧ್ವನಿಪೂರ್ಣವಾಗುವುದಕ್ಕೆ ಕಾರಣವಾಗಿರುವುದು ಅಲ್ಲಿಯ ಮಾತಿನ ಮೊನಚು ಮತ್ತು ಒಳಕಿಂಡಿಗಳಿಂದ ಹೊರಜಗತ್ತನ್ನು ನೋಡಿದರೂ ಅದನ್ನು ಅರ್ಥೈಸಿಕೊಂಡ ಬಗೆ ಭಿನ್ನವಾಗಿರುವುದೇ ಆಗಿದೆ. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯ ಒಳಗೆ ಬಾಳಿದ ಲೇಖಕಿಗೆ ಹೆಣ್ಣಿನ ಲಿಂಗತಾರತಮ್ಯದ ಅಸಮಾನತೆ ಹೆಚ್ಚಾಗಿ ಕಾಣಲು ಸಾಧ್ಯವಾಗಿದೆ. ಆದ್ದರಿಂದ ಇಲ್ಲಿ ಬರುವ ಪಾತ್ರಗಳಲ್ಲಿ ಪ್ರಜ್ಞೆಯ ಆಳದ ಪ್ರಶ್ನೆಗಳು ಪ್ರತಿಭಟನೆಯ ಧ್ವನಿಯ ಸವಾಲುಗಳಾಗಿ ಗೋಚರಿಸುತ್ತವೆ. ಬದುಕನ್ನು ಹೊಸ ಅರ್ಥದಲ್ಲಿ ಕಟ್ಟುವ ಪ್ರಯತ್ನ ಮಾಡಿದ್ದಾರೆಯೇ ಹೊರತು

ಸಾವಿನ ವೈಭವೀಕರಣ ಇವರ ಕಥೆಗಳಲ್ಲಿ ಇಲ್ಲ ಎಂದು ಹೇಳಬಹುದು. ವೃದ್ಧ ಮಹಿಳೆಯರ ಯಾತನೆಗಳನ್ನು ಹೇಳುವಾಗಲೂ ಕೂಡ ಮನುಷ್ಯ ಪರವಾದ ಕಾಳಜಿಗಳನ್ನು ವ್ಯಕ್ತಪಡಿಸುತ್ತಾರೆ.

ವೈದೇಹಿಯವರು ತಮ್ಮ ಕಥೆಗಳ ಪಾತ್ರಗಳ ಮೂಲಕ ಪುರುಷಾಧೀನತೆಯನ್ನು ಧಿಕ್ಕರಿಸುವುದು ಸಿದ್ಧಾಂತ – ತರ್ಕಗಳ ಹಿನ್ನೆಲೆಯಲ್ಲಿ ಅಲ್ಲ . ಬದಲಾಗಿ ಬದುಕಿನ ಒಂದು ಗತಿಯಾಗಿ, ಜೀವನ ಕ್ರಮದ ಉಪಲಬ್ಧ ಸ್ವರೂಪದಲ್ಲಿಯೇ ಆಗಿದೆ. ಆದರೆ ಈ ಸ್ವರೂಪ ಇಲ್ಲಿಯವರೆಗೆ ಪುರುಷರಿಂದ ಎಲ್ಲಿಯೂ ದಾಖಲಾಗುವ ಪ್ರಯತ್ನ ನಡೆಯಲಿಲ್ಲ.

ಪ್ರೇಮಾಭಟ್‌ರವರ,

ಮಡಿ ಮುತ್ತೈದೆ (ಕಥಾವರ್ಷ, ೨೦೦೭)

ಫಲಿತಾಂಶ (ಕಥಾವರ್ಷ, ೨೦೦೭)

'ಮಡಿ ಮುತ್ತೈದೆ' ಕಥೆಯು ಹೆಂಡತಿಯನ್ನು ಕಳೆದು ಕೊಂಡ ಪುರುಷನೊಬ್ಬ ಇನ್ನೊಂದು ಹೆಣ್ಣಿನೊಂದಿಗೆ ಇಟ್ಟುಕೊಂಡ ಸಂಬಂಧವನ್ನು ಚಿತ್ರಿಸುವ ಕಥೆಯಾಗಿದೆ. ಪದ್ದಿ ಬಾಲ್ಯದಲ್ಲೆ ತಾಯಿಯನ್ನು ಕಳೆದುಕೊಂಡರೂ ತಾಯಿಯಿಂದ ಸಿಗುವ ಪ್ರೀತಿ ಜಲಜಕ್ಕನಿಂದ ಸಿಕ್ಕಿರುತ್ತದೆ. ತನ್ನ ತಂದೆಯೊಂದಿಗೆ ಜಲಜಕ್ಕನಿಗೆ ಸಂಬಂಧವಿದೆ ಎನ್ನುವುದು ಆಕೆಗೆ ತಿಳಿದಾಗ ಈ ಸಂಬಂಧಗಳ ಕುರಿತಾಗಿ ಯೋಚಿಸುತ್ತಾಳೆ.

ಮದುವೆ ಎಂಬ ಶಿಸ್ತಿಗೆ ಒಳಪಡದ ಸಂಬಂಧ ಅದು ಅನೈತಿಕ ಸಂಬಂಧವೇ? ಹಾಗಾದರೆ ಸಂಬಂಧದ ಅರ್ಥವೇನು? ಎಂಬ ಪ್ರಶ್ನೆಗಳು ಪದ್ದಿಯನ್ನು ಕಾಡುತ್ತವೆ.

'ಫಲಿತಾಂಶ' ಕಥೆಯಲ್ಲಿ ಗಂಡನ ಮನೆಯಲ್ಲಿ ಅಕ್ಕನು ಕಿರುಕುಳದಲ್ಲಿ ಒದ್ದಾಡುವ ಕಾವೇರಿಯ ಚಿತ್ರಣವಿದೆ. ಎಲ್ಲಾ ತಪ್ಪುಗಳಿಗೂ ಕಾವೇರಿಯನ್ನೇ ಗುರಿ ಮಾಡಿ ಬೈಯುವ ಅಕ್ಕ ತನ್ನಷ್ಟೇ ಹಕ್ಕು ಕಾವೇರಿಗೂ ಇದೆ ಎನ್ನುವುದನ್ನು ಮರೆತು ಬಿಡುತ್ತಾಳೆ. ಇಲ್ಲಿ ಕಾವೇರಿಗೆ ಅತ್ತೆಯ ಸಂಪೂರ್ಣ ಸಹಕಾರ ಸಿಗುವುದು ಕಥೆಗೆ ಒಂದು ಆಶಾವಾದದ ಛಾಯೆಯನ್ನು ಒದಗಿಸುತ್ತದೆ. ಅಕ್ಕನ ಹಿಂಸೆಯನ್ನು ಸಹಿಸಲಾರದೆ ದೂರದ ಊರಿನಲ್ಲಿರುವ ತನ್ನ ಗಂಡನ ಜೊತೆ ಹೋಗಿ ಬದುಕುವುದಾಗಿ ನಿರ್ಧರಿಸಿ ಹೋಗುತ್ತಾಳೆ.

ಇಲ್ಲಿ ಅತ್ತೆಯ ಪಾತ್ರ ಸಮಾಜದ ನಂಬಿಕೆಗೆ ವಿರುದ್ಧವಾಗಿ ಕಾಣುತ್ತದೆ. ಒಳ್ಳೆಯ ಅತ್ತೆಯರು ಸಮಾಜದಲ್ಲಿ ಇದ್ದಾರೆ ಎನ್ನುವುದನ್ನು ಈ ಕಥೆ ಸ್ಪಷ್ಟಪಡಿಸುತ್ತದೆ.

ವೈಯಕ್ತಿಕ ನೆಲೆಯನ್ನು ಹೇಳುವ ಪ್ರೇಮಾ ಭಟ್‌ರವರ ಕಥೆಗಳಲ್ಲಿ ಹೆಣ್ಣಿನ ಬದುಕಿನ ಬೇರೆ ಬೇರೆ ಪಾತ್ರಗಳು ಚಿತ್ರಿತವಾಗಿದ್ದರೂ, ಅವು ಸಂಪೂರ್ಣವಾಗಿ ಪುರುಷ ಪ್ರಧಾನ ವ್ಯವಸ್ಥೆಯನ್ನು ವಿರೋಧಿಸುವ ನಿಟ್ಟಿನಲ್ಲಿ ಗೋಚರಿಸುವುದಿಲ್ಲ. ಲೇಖಕಿಯ ಸಮಕಾಲೀನ ಬದುಕು ಇಲ್ಲಿ ಕೆಲಸ ಮಾಡುವುದು ಗೋಚರಿಸುತ್ತದೆ.

೬.೨. ಕೌಟುಂಬಿಕ ನೆಲೆ :

ಕುಟುಂಬದ ಒಳಗಡೆ ಒಂಟಿಯಾಗಿ, ವಿಧವೆಯಾಗಿ ಬದುಕುವ ಹೆಣ್ಣುಮಕ್ಕಳು ಪರಂಪರೆಯ ಕುರಿತಾದ ತಮ್ಮ ಚಿಂತನೆಯನ್ನು ಗ್ರಹಿಸುವ ಮತ್ತು ನಿರೂಪಿಸುವ ಅಂಶಗಳು ಮುಖ್ಯವಾಗುತ್ತವೆ. ಕುಟುಂಬದ ಒಳಗೆ ಬದುಕುವ ಹೆಣ್ಣಿಗೆ ಪರಂಪರೆಯನ್ನು ವೈಭವೀಕರಿಸುವುದಕ್ಕಿಂತ ಪರಂಪರೆಯೊಳಗಿನ ವೈರುಧ್ಯದ ಧ್ವನಿಗಳು ಮುಖ್ಯವಾಗುವುದರಿಂದ ಅದನ್ನು ಅನುಭವ ಕಥನಗಳಾಗಿ ನಿರೂಪಿಸುತ್ತಾರೆ. ವಿಭಕ್ತ ಕುಟುಂಬದ ಒಳಗಡೆ ಬದಲಾದ ಕಾಲಮಾನಕ್ಕೆ ಅನುಗುಣವಾಗಿ ಬದಲಾದ ಹೆಣ್ಣಿನ ಸ್ಥಾನಮಾನಗಳಂತೆ ಆಕೆಯ ಪಾತ್ರಗಳು, ಆಕೆಯ ವ್ಯಕ್ತಿತ್ವದ ನಿರೂಪಣೆಗಳು ವಿಭಿನ್ನವಾಗುತ್ತಾ ಹೋಗುತ್ತವೆ. ಬೌದ್ಧಿಕ ತರ್ಕದ ನೆಲೆಯಲ್ಲಿ ಸಾಮಾಜಿಕವಾಗಿ ಹೆಣ್ಣು ತನ್ನ ಬದುಕಿಗೆ ಸಾಮಾಜಿಕ ನ್ಯಾಯವನ್ನು ಹುಡುಕಾಡುವ ನೆಲೆ ಬಹಳ ಮುಖ್ಯವಾಯಿತು. ಆ ಧ್ವನಿ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯ ಧ್ವನಿಯೇ ಆದರೂ ಕುಟುಂಬ ವ್ಯವಸ್ಥೆಯನ್ನು ಇರುವ ಹಾಗೆಯೇ ನಿರೂಪಿಸಿ ಅದರ ಲೋಪ – ದೋಷಗಳನ್ನು ಗ್ರಹಿಸುವ ಮುಖ್ಯ ಚಿಂತನೆಯಾಯಿತು. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು.

ಮಿತ್ರಾ ವೆಂಕಟ್ರಾಜ್‌ರವರ,

ಒಂದು ಒಸಗೆ ಒಯ್ಯುವುದಿತ್ತು (ಹಕ್ಕಿ ಮತ್ತು ಅವಳು, ೧೯೯೭)

ಕತಿ ಹೇಳ್ ಪಾರಕ್ಕಾ ..... (ಹಕ್ಕಿ ಮತ್ತು ಅವಳು, ೧೯೯೭)

ಇಲ್ಲೊಬ್ಬಳು ಸೀತೆ (ಹಕ್ಕಿ ಮತ್ತು ಅವಳು, ೧೯೯೭)

ನಾಗಮ್ಮನ ಮನೆಯ ಸಣ್ಣಗೇಟು (ಹಕ್ಕಿ ಮತ್ತು ಅವಳು, ೧೯೯೭)

ಅಟ್ಟ ಮುಟ್ಟ ತನ್ನ ದೇವಿ.... (ಹಕ್ಕಿ ಮತ್ತು ಅವಳು, ೧೯೯೭)

'ಒಂದು ಒಸಗೆ ಒಯ್ಯುವುದಿತ್ತು' ಕಥೆಯ ಜಲಜ ಚಿಕ್ಕಿ ಹಾಗೂ ಅಪ್ಪಣ್ಣ ಚಿಕ್ಕಪ್ಪಯ್ಯರ ಸಂಬಂಧ ಸಮಾಜದ ವಕ್ರದೃಷ್ಟಿಗೆ ಕಾರಣವಾಗುತ್ತದೆ. ಕುಟುಂಬದ ಸದಸ್ಯರೆಲ್ಲರೂ ಆಕೆಯನ್ನು ವಿರೋಧಿಸುತ್ತಿದ್ದರು. ಆ ಕಥೆಯ

ದೊಡ್ಡತ್ತೆ ಹೇಳುವ 'ಅವಳ ಅವತಾರಕ್ಕಿಷ್ಟು ! ನಾಚ್ಕೆ ಮರ್ಯಾದೆ ಚೂರು ಕೇಣ್ ಬೇಡ' ! (ಹಕ್ಕಿ ಮತ್ತು ಅವಳು , ಪು. ೪, ೧೯೯೭) ಎಂಬ ಮಾತು ಅವಳ ಹಾಗೂ ಅಪ್ಪಣ್ಣ ಚಿಕ್ಕಪ್ಪಯ್ಯನ ಸಂಬಂಧದ ಕುರಿತದ್ದೇ ಆಗಿದೆ.

ಹೆಣ್ಣೊಬ್ಬಳು ತನಗೆ ಸರಿಕಂಡವನೊಡನೆ ಪ್ರೀತಿ – ವಿಶ್ವಾಸದಿಂದ ಜೀವನ ಸಾಗಿಸಿದಾಗ ಅದು ಸಮಾಜಬಾಹಿರವಾಗುತ್ತದೆ. ಸಮಾಜ ಒಪ್ಪಿದವನೊಡನೆ ಸಂಸಾರ ಸಾಗಿಸಿದರೆ ಅದು ನೈತಿಕತೆಯೆನಿಸುತ್ತದೆ ಎಂಬ ಪರಂಪರಾಗತ ಆಲೋಚನೆ ಈ ಕಥೆಯಲ್ಲಿ ಹಾಸುಹೊಕ್ಕಾಗಿದೆ. ಹೆಣ್ಣು ಎಂದರೆ ಹೀಗೇನೆ ಇರಬೇಕು ಎಂಬ ಸರಳ ರೇಖೆಯ ಆಲೋಚನೆ ಈ ಕಥೆಯಲ್ಲಿ ವ್ಯಕ್ತವಾಗುತ್ತದೆ. ನರ್ಮದೆ ಎಂಬ ಹೆಣ್ಣು ಮಗಳು ಉಪ್ಪರಿಗೆಯಿಂದ ವೇಗವಾಗಿ ಓಡಿಬರುವುದನ್ನು ನೋಡಿ 'ಏನೇ ದಿಗಡ್ ದಿಮ್ಮಿ ಓಡುತ್ತಲ್ಲಿಗೆ?'(ಅದೇ... ಪು. ೫) ಎಂಬ ಆಕೆಯ ತಾಯಿಯ ಮಾತು ಇದನ್ನೇ ಸಮರ್ಥಿಸುತ್ತದೆ.

'ಕತಿ ಹೇಳ್ ಪಾರಕ್ಕಾ' ಕಥೆಯ ಭೀಮಣ್ಣಯ್ಯ ಪುರುಷ ಪ್ರಧಾನ ಸಮಾಜದ ಗ್ರಹಿಕೆಗೆ ಸರಿಯಾಗಿ ಬದುಕಿದ ಪಾತ್ರ. ಒಂದು ಕಾಲಕ್ಕೆ ಪುರುಷನೊಬ್ಬನ ಯೋಗ್ಯತೆಯನ್ನು ಅಳೆಯುವುದರಲ್ಲಿ ಅವನ ಸಾಂಸಾರಿಕ ಬದುಕೂ ಮುಖ್ಯವಾಗುತ್ತಿತ್ತು. ಒಂದಕ್ಕಿಂತ ಹೆಚ್ಚು ಹೆಂಡತಿಯರನ್ನು ಪಡೆಯುವ ಅಥವಾ ಪಡೆದಿರುವ ವ್ಯಕ್ತಿ ಸಮಾಜದಲ್ಲಿ ಗೌರವಕ್ಕೆ ಪಾತ್ರನಾಗುತ್ತಿದ್ದ. ಭೀಮಣ್ಣಯ್ಯನ ತಾಕತ್ತಿನ ಬಗ್ಗೆ ಹೇಳುವಾಗ 'ಭೀಮಣ್ಣಯ್ಯ ಭಾಳ ನಿಯತ್ತಿನ ಮನುಷ್ಯ. ಮನೆಯಲ್ಲಿ ಹೆಂಡತಿಯನ್ ಬಿಟ್ರೆ, ಹೊರಗೆ ಕಾಶೀಬಾಯಿ ಒಬ್ಬಳೇ' (ಹಕ್ಕಿ ಮತ್ತು ಅವಳು, ಪು.೭, ೧೯೯೭) ಎಂಬ ಮಾತು ಆ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಸುತ್ತದೆ. ಪುರುಷನೊಬ್ಬ ಬೇರೆ ಹೆಣ್ಣಿನ ಸಹವಾಸ ಮಾಡಿದರೆ ಅದು ಅವನ ಯೋಗ್ಯತೆ, ಹೆಣ್ಣೊಬ್ಬಳು ಇಂಥ ಕೆಲಸ ಮಾಡಿದರೆ ಆಕೆ ವ್ಯಭಿಚಾರಿ ಎಂಬ ಪಟ್ಟ ಯಾವ ಕಾಲಕ್ಕೂ ತಪ್ಪಿದ್ದಲ್ಲ ಎಂಬ ವಾಸ್ತವವನ್ನು ನಿರೂಪಿಸುತ್ತದೆ.

'ಇಲ್ಲೊಬ್ಬಳು ಸೀತೆ' ಕಥೆಯು ಹೆಣ್ಣೊಬ್ಬಳು ಕೌಟುಂಬಿಕ ಬದುಕಿನೊಳಗೆ ಹೇಗೆ ಪಳಗಿಸಲ್ಪಟ್ಟಿದ್ದಳು ಎಂಬುದನ್ನು ಚಿತ್ರಿಸುತ್ತದೆ. ಪುರುಷ ನಿರ್ಮಿತ ಸಮಾಜ ಹೆಣ್ಣನ್ನು ಕಾಣುತ್ತಿದ್ದ ದೃಷ್ಟಿಕೋನ ಸೀತೆಯ ಬಗೆಗಿನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. 'ಆ ಕಾಲದಾಗೆ ಗಂಡನ್ನ ಬಿಟ್ಟ್ ಸಂನ್ಯಾಸಿ ಹಿಂದೆ ಓಡಿದ್ದಲ್ದ ಅವಳು ?' (ಹಕ್ಕಿ ಮತ್ತು ಅವಳು, ಪು. ೫೧, ೧೯೯೭) ಎಂದು ಸೀತಜ್ಜಿಯ ಬಗೆಗಿನ ಮಾತು ಹೆಣ್ಣೊಬ್ಬಳಿಗೆ ಸ್ವತಂತ್ರ ನಿರ್ಧಾರಗಳಿಲ್ಲ ಎಂಬುದನ್ನು ಮನದಟ್ಟು ಮಾಡುತ್ತದೆ.

ಹೆಣ್ಣಿನ ಬದುಕಿನ ಇನ್ನೊಂದು ಮುಖವೂ ಈ ಕಥೆಯಲ್ಲಿ ಕಾಣಸಿಗುತ್ತದೆ. 'ಹಾಂಗೆ ಕೇಂಡ್ರೆ ಅತ್ತೆ ಕಾಟ ಅಂದ್ರೆ ಒಂದು ದೊಡ್ಡ ಸಂಗ್ತಿಯ ಆಗ' ಎಂಬ ಮಾತಾಗಲಿ, 'ಅತ್ತೆ ಪಟ್ಟ ಇಪ್ಪುದೇ ಸೊಸೆನ್ನ ಹದ ಬರ್ಸೂಕಲ್ದ?' (ಹಕ್ಕಿ ಮತ್ತು ಅವಳು, ಪು. ೫೩, ೧೯೯೭) ಎಂಬ ಮಾತಾಗಲೀ ಒಂದು ಕಾಲದ ಅತ್ತೆ - ಸೊಸೆಯ ಸಂಬಂಧವನ್ನು ಕಟ್ಟಿಕೊಡುತ್ತದೆ. ಪ್ರೀತಿಯಿಲ್ಲದ ಮದುವೆ, ಅರ್ಥವಿಲ್ಲದ ಬದುಕು ದಾಂಪತ್ಯವಾಗುವುದಿಲ್ಲ. 'ಆಗೆಲ್ಲ ಗಂಡ ಅಂಬೋನು ಹೆಂಡ್ತಿ ಕೈಲಿ ಮಾತಾಡುದಾಯ್ಲಿ, ಕಾಂಬ್ದ್ ಕೇಂಬ್ದ್ ಆಯ್ಲಿ ಕ್ರಮ ಇಲ್ಲ' (ಅದೇ. ಪು.೫೪) ಎನ್ನುವ ಮಾತು ಆ ಕಾಲದ ಗಂಡ-ಹೆಂಡತಿಯ ವಿಚಿತ್ರ ಬದುಕನ್ನು ಕಟ್ಟಿಕೊಡುತ್ತದೆ.

'ನಾಗಮ್ಮನ ಮನೆಯ ಸಣ್ಣಗೇಟು' ಕಥೆಯಲ್ಲಿ ಗ್ರಾಮೀಣ ಪರಿಸರದ ಹೆಣ್ಣುಮಕ್ಕಳ ಬದುಕಿನ ಅನುಭವಗಳ ಕೊಡು – ಕೊಳ್ಳುವಿಕೆಯ ಚಿತ್ರಣವಿದೆ. ತಾವುಂಡ ನೋವು - ನಲಿವುಗಳನ್ನು ಯಾವುದೇ ಮುಖವಾಡವಿಲ್ಲದೆ ಧೈರ್ಯ ಹಾಗೂ ಪ್ರಾಮಾಣಿಕತೆಯಿಂದ ಹಂಚಿಕೊಳ್ಳುವ ಪರಿ ವಿಶಿಷ್ಟವಾಗಿದೆ. ಪುರುಷ ಪ್ರಧಾನ ಸಮಾಜದ ವಿರುದ್ಧದ ಪ್ರತಿಭಟನೆಯನ್ನು ಈ ಕಥೆ ಎತ್ತಿಕೊಟ್ಟರೂ ಕೊನೆಗೆ ಹೊಂದಾಣಿಕೆಯಲ್ಲಿಯೇ ಮುಕ್ತಾಯ ಕಾಣುತ್ತದೆ. ಈ ಕಥೆಯ ಪುರಾಣಮ್ಮ ಹೇಳುವ 'ಅದು ಸಮ ನಾಗಮ್ಮ. ಈಗಿನವ್ರ ರೀತಿ ಎಂತ ಅಂತ ಹೇಳುದ ? ತನ್ನ ಎತ್ತಿಗೆ ಮೂರೇ ಕಾಲು ಅಂತ ತಮ್ಮದೇ ಹಠ. ತಾಳ್ಮೆ ಬೇಕು ಮನುಷ್ಯನಿಗೆ, ಅದರಲ್ಲೂ ಹೆಣ್ಣಿಗೆ. ಸೀತಾಮಾತೆಯ ತಾಳ್ಮೆ ಕಾಣ್'(ಹಕ್ಕಿ ಮತ್ತು ಅವಳು, ಪು.೨೨, ೧೯೯೭) ಎಂಬ ಮಾತು ಸಮಾಜದ ಒಪ್ಪಿತ ಮಾದರಿಗಳ ತರವಾದ ಮಾತೇ ಆಗಿದೆ. 'ಬಸ್ರಿಯಂತಿಲ್ಲ, ಬಾಣಂತಿಯಂತಲ್ಲ, ಬೆಳಗಾತಿನಿಂದ ಸಾಯಂಕಾಲದವರೆಗೆ ಏಗಿದ್ದಕ್ಕೆ ಇಂಥ ಮಾತು ತಾನು ಕೇಳಬೇಕಾಗಿತ್ತು' (ಅದೇ..ಪು. ೭೮) ಎಂದು ಹೇಳುವ ನಾಗಮ್ಮನ ಮಾತುಗಳಲ್ಲಿ ಏನೂ ಮಾಡಲಾಗದ ಅಸಹಾಯಕತೆ ಎದ್ದು ಕಾಣುತ್ತದೆ.

'ಅಟ್ಟ ಮುಟ್ಟ ತನ್ನ ದೇವಿ...' ಕಥೆಯಲ್ಲಿ ಕನಸು ಹೊತ್ತ ಗಿರಿಜೆಯ ಬದುಕಿನ ದುರಂತವಿದೆ. ಅತ್ತೆಯ ಮಗ ಅನಂತ ತನ್ನನ್ನು ಮದುವೆಯಾಗುತ್ತಾನೆ ಎಂಬ ಆಶಾಭಾವದಿಂದ ಆತನ ಎಲ್ಲ ಕೆಲಸಗಳನ್ನು ಮಾಡಿಕೊಡುತ್ತಿದ್ದ ಗಿರಿಜಾಗೆ ಕೊನೆಗೆ ದೊರಕಿದ್ದು ದುಃಖ ಮಾತ್ರ. ಎಲ್ಲ ಹೆಣ್ಣು ಮಕ್ಕಳಿಗಿಂತ ಚಂದವಾಗಿ ಹೂವು ಕಟ್ಟುತ್ತಿದ್ದ ಗಿರಿಜೆಗೆ ತನ್ನ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

ಅನಂತನ ಮದುವೆಯ ವಿಚಾರ ಆಕೆಯಲ್ಲಿ ನೋವನ್ನುಂಟುಮಾಡುತ್ತದೆ. ಅವನ ಮದುವೆಯ ದಿನ ಆಕೆಯ ಅಲಂಕಾರವನ್ನು ಕಂಡು ತಂಗಿಯಂದಿರು ಹೇಳುತ್ತಿದ್ದ ಮಾತುಗಳೆಲ್ಲವೂ ಆಕೆಗೆ ದೂರದಿಂದ ಕೇಳಿಸುವಂತಿದ್ದವು. ಆದರೆ ವಿಪರೀತ ಜ್ವರದಿಂದಾಗಿ ಮದುವೆಗೆ ಹೋಗದ ಗಿರಿಜೆ ಆ ದಿನದಿಂದ ಮಾನಸಿಕ ರೋಗಿಯಾಗಿ ಮೂಲೆ

ಸೇರಿದಳು. ಎಲ್ಲರ ಕೆಲಸ ಕಾರ್ಯಗಳಲ್ಲಿ ಬಾಡಿಗೆ ಎತ್ತಿನಂತೆ ದುಡಿದ ಗಿರಿಜೆ ಕೊನೆಗೆ ಮನೆಯವರ ಪಾಲಿಗೆ 'ಪೀಡೆ' ಎಂದು ಕರೆಸಿಕೊಳ್ಳುತ್ತಾಳೆ. ಹೆಣ್ಣಿನ ಭಾವನೆಗಳಿಗೆ ಬೆಲೆ ಕೊಡದ ಹೃದಯಹೀನ ವ್ಯವಸ್ಥೆಯಲ್ಲಿ ಗಿರಿಜೆಯು ನಲುಗಿ ಹೋಗುತ್ತಾಳೆ.

ಕುಟುಂಬದ ಪರಿಕಲ್ಪನೆಯನ್ನು ಪ್ರಶ್ನಿಸುವ, ಆ ಮೂಲಕ ಗಂಡು-ಹೆಣ್ಣಿನ ಸಂಬಂಧಗಳಿಗೆ ಹೊಸ ಪರಿಕಲ್ಪನೆಯ ವ್ಯಾಖ್ಯೆಯನ್ನು ನೀಡುವ ಪಾತ್ರಗಳು ಇಲ್ಲಿ ಬರುತ್ತವೆ. ವಿವಾಹ ಮತ್ತು ವಿವಾಹೇತರ ಸಂಬಂಧಗಳಲ್ಲಿ ಹೆಣ್ಣಿಗೆ ಆಯ್ಕೆ ಇದೆಯೇ ಎಂಬ ಪ್ರಶ್ನೆಯೊಂದಿಗೆ ನೈತಿಕತೆ, ಅನೈತಿಕತೆಯ ವ್ಯತ್ಯಾಸಗಳು ಹುಟ್ಟಿಕೊಳ್ಳುತ್ತವೆ.

ಆದರ್ಶ ಕುಟುಂಬವೆಂದರೆ ಅಲ್ಲಿರುವ ಹೆಣ್ಣು ಎಲ್ಲಾ ಸುಖಗಳನ್ನು ತ್ಯಾಗ ಮಾಡುವವಳಾಗಿರಬೇಕೇ ಹೊರತು ಪ್ರಶ್ನೆ ಮಾಡಬಾರದು. ಹಾಗೆ ಪ್ರಶ್ನಿಸಿದರೆ ಆಕೆ ಬಜಾರಿ ಎನಿಸಿಕೊಳ್ಳುತ್ತಾಳೆ ಎನ್ನುವ ಸಾಮಾನ್ಯ ಗ್ರಹಿಕೆಗಳಿಗಿಂತ ಭಿನ್ನವಾಗಿ ಹೆಣ್ಣು ತನ್ನ ಮನಸ್ಸಿನ ಬೇಕು - ಬೇಡಗಳನ್ನು ಆಯ್ಕೆ ಮಾಡಿಕೊಳ್ಳುವ ಇಚ್ಛಾಶಕ್ತಿ ಇದ್ದಾಗಲೂ ಅದರಿಂದ ವಂಚಿತಳಾಗುತ್ತಾಳೆ ಎನ್ನುವ ವಿವರಣೆಯನ್ನು ಕಥೆಗಳ ಪಾತ್ರಗಳಲ್ಲಿ ನೀಡುವುದರ ಮೂಲಕ ಪ್ರತಿಭಟನೆಯ ನೆಲೆ ಗೋಚರವಾಗುತ್ತದೆ.

ಸನ್ಯಾಸಿ ಮದುವೆಯಾಗುವುದು ಧರ್ಮ ನಿಷಿದ್ಧವಾದರೂ, ಸನ್ಯಾಸಿಯ ತಪ್ಪಿಗಿಂತ ಆತನ ಹಿಂದೆ ಓಡಿದ ಹೆಣ್ಣೇ ಪಾಪಿಷ್ಠೆಯಾಗಿ ಸಮಾಜದ ಕಣ್ಣಿಗೆ ಕಾಣುವುದನ್ನು ಲೇಖಕಿ ಪ್ರಶ್ನೆ ಮಾಡುತ್ತಾರೆ. ಕುಟುಂಬ ವ್ಯವಸ್ಥೆಯನ್ನೇ ಮತ್ತೆ ಪ್ರಶ್ನಾರ್ಹಗೊಳಿಸುವ ಸ್ಥೈರ್ಯ ಮಿತ್ರಾ ವೆಂಕಟ್ರಾಜ್‌ರವರ ಕಥೆಗಳ ಪಾತ್ರಗಳಲ್ಲಿ ಕಾಣಸಿಗುತ್ತವೆ.

ಗೃಹಿಣಿ ಧರ್ಮವನ್ನು ನಿರ್ವಹಿಸುವ ಮಹಿಳೆಯ ಶ್ರಮವನ್ನು ನಿಕೃಷ್ಟಗೊಳಿಸಿದ ಬಗೆಗೆ ಅನಕ್ಷರಸ್ಥ ಮಹಿಳೆಯ ಪ್ರಜ್ಞೆಯ ಒಳಗೂ ಮೂಡುವ ಪ್ರಶ್ನೆಗಳು ವ್ಯಕ್ತಿ ಮೌಲ್ಯವನ್ನು ಪ್ರತಿಪಾದಿಸುತ್ತವೆ. 'ನಾಗಮ್ಮನ ಮನೆಯ ಸಣ್ಣ ಗೇಟು' ಕಥೆಯು ಇದಕ್ಕೆ ಉದಾಹರಣೆಯಾಗಿದೆ.

ಸಾರಾ ಅಬೂಬಕ್ಕರ್‌ರವರ,

ಬಂದಣಿಕೆ (ಪಯಣ ಮತ್ತು ಇತರ ಕಥೆಗಳು, ೧೯೯೨)

ಬಿತ್ತಿ ಬೆಳೆದವರು (ಪಯಣ ಮತ್ತು ಇತರ ಕಥೆಗಳು, ೧೯೯೨)

ಹೊಸದಿಕ್ಕು (ಗಗನಸಖಿ, ೨೦೦೭)

ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ (ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ೧೯೯೬)

'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಎಂಬ ಗಾದೆಯನ್ನು ನೆನಪಿಸುವ 'ಬಂದಣಿಕೆ' ಕಥೆಯು ಹಿರಿಯರಲ್ಲಿ ಇಲ್ಲದ ಸಭ್ಯತೆ, ಸಂಸ್ಕಾರ ಕಿರಿಯರಲ್ಲಿಯೂ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಮನದಟ್ಟು ಮಾಡುತ್ತದೆ. ಅಬ್ದುಲ್ ಖಾದರ್‌ನ ಮಗ ಅಬೀದ್ ಆಲಿಯ ಜೀವನ ಇದಕ್ಕೆ ಹೊರತಾಗಿಲ್ಲ. ನಾಗರಿಕ ಪ್ರಪಂಚದ ಪರಿಚಯವಾದ ಎಸ್. ಪಿ. ಗೂ, ಇನ್ನೂ ಅನಾಗರಿಕ ಕೂಪದೊಳಗೆ ಮುಳುಗಿರುವ ಅಬ್ದುಲ್ ಖಾದರ್‌ಗೂ ಅಜಗಜಾಂತರವಿದೆ. ಹೆಂಡತಿಯೆನಿಸಿಕೊಳ್ಳುವವಳು ಗಂಡನಿಗೆ ಬೇಕಾದದ್ದನ್ನು ಮಾಡಿ ಬಡಿಸುವ ಬಿಟ್ಟಿ ಚಾಕರಿಯವಳು ಎಂದು ತಿಳಿದಿರುವ ಅಬ್ದುಲ್, ಎಸ್. ಪಿ.ಯ ಎದುರು ನಿಕೃಷ್ಟವಾಗಿ ಕಾಣುತ್ತಾನೆ.

'ಬಿತ್ತಿ ಬೆಳೆದವರು' ಕಥೆಯು ಮರಿಯಮ್ಮ ಹಾಗೂ ಅವಳ ಮಗಳು ಜುಲೇಕಳ ಹೃದಯವಿದ್ರಾವಕ ಬದುಕನ್ನು ಚಿತ್ರಿಸುತ್ತದೆ. ದಳ್ಳಾಳಿಯೊಬ್ಬನ ಮೂಲಕ ಪರಿಚಯವಿಲ್ಲದ ಹುಡುಗನಿಗೆ ತನ್ನ ಮಗಳನ್ನು ಮದುವೆ ಮಾಡಿ ಕೊಟ್ಟ ಮರಿಯಮ್ಮ ದೊಡ್ಡ ಕನಸನ್ನೇ ಕಟ್ಟಿಕೊಂಡಿದ್ದಳು. ಅವಳು ಕೆಲಸಕ್ಕೆ ಹೋಗುವ ಧಣಿಯ ಹೆಂಡತಿಯ ಹತ್ತು ಪವನಿನ ಚಿನ್ನದ ಸರವನ್ನು ಕದ್ದೊಯ್ದ ಮರಿಯಮ್ಮನ ಅಳಿಯ ತಾಯಿ – ಮಗಳನ್ನು ಸಂಕಟದ ಗುಂಡಿಗೆ ತಳ್ಳುತ್ತಾನೆ. ಈಗಾಗಲೇ ಮಗಳ ಮದುವೆಗೆಂದು ಮಾಡಿದ ಸಾಲ, ಈಗ ಚಿನ್ನದ ಸರದ ಸಾಲ - ಈ ಸಾಲಗಳ ನಡುವೆ ತತ್ತರಿಸಿ ಹೋಗುತ್ತಾಳೆ ಮರಿಯಮ್ಮ. ಈಗಾಗಲೇ ಜಲೇಕಳ ಹೊಟ್ಟೆಯಲ್ಲಿ ಅವನ ವಂಶದ ಕುಡಿ ಬೆಳೆಯುತ್ತಿದ್ದು ಚಿನ್ನದ ಸರ ಹಿಡಿದುಕೊಂಡು ಹೋದವನು ಮತ್ತೆ ಹಿಂದಿರುಗಿ ಬರಲಿಲ್ಲ. ಪುರುಷನೊಬ್ಬನಿಂದ ಹೆಣ್ಣಿಗೆ ಒದಗುವ ದುರಂತವನ್ನು ಈ ಕಥೆ ಚಿತ್ರಿಸುತ್ತದೆ.

'ಹೊಸದಿಕ್ಕು' ಕಥೆಯು ಸಮಾಜವನ್ನು ಹೊಸದಿಕ್ಕಿನತ್ತ ಕೊಂಡೊಯ್ಯುವ ಕಥೆಯಾಗಿದೆ. ಕೊಲ್ಲಿಯಲ್ಲಿ ಉದ್ಯೋಗಸ್ಥನಾದ ಯುವಕನಿಗೆ ಗಗನಸಖಿಯಾದ ಮಗಳನ್ನು ಕೆಲಸ ಬಿಡಿಸಿ ಮದುವೆ ಮಾಡಿಸುವುದಕ್ಕೆ ಆಕೆಯ ಮನೆಯವರು ಮುಂದಾಗುತ್ತಾರೆ. ಆದರೆ ಆಕೆ 'ಸೋಶಿಯಲ್' ಅಲ್ಲ ಎನ್ನುವ ಕಾರಣಕ್ಕೆ ಆತನಿಂದ ನಿರಾಕರಣೆಗೆ ಒಳಗಾದಾಗ ಮನೆಯವರಿಂದ ಸಿಗುವ ನೈತಿಕ ಬೆಂಬಲ ಆಕೆಯನ್ನು ಆತ್ಮವಿಶ್ವಾಸದ ಕಡೆಗೆ ಕೊಂಡೊಯ್ಯುತ್ತದೆ. ತಾಯಿಯಾದ ಜಮೀಲಾ ತನ್ನ ಮಗಳಾದ ಶಾಹಿನಾ ಬಳಿ ಬಂದು 'ನೀನು ನಿನಗಿಷ್ಟವಾದ, ನಿನ್ನನ್ನರ್ಥ ಮಾಡಿಕೊಳ್ಳುವಂತಹ ಸುಸಂಸ್ಕೃತನಾದ ಗಂಡಸೊಬ್ಬನನ್ನ ಕರೆದುಕೊಂಡು ಬಾ. ಆತನಿಗೆ ನಿನ್ನನ್ನು ಸಂತೋಷದಿಂದ

ಮದುವೆ ಮಾಡಿ ಕೊಡುತ್ತೇವೆ' (ಗಗನಸಖಿ, ಪು. ೮೬, ೨೦೦೭) ಎಂಬ ಮಾತುಗಳು ಸಮಾಜದ ಕಣ್ಣು ತೆರೆಸುವ ಮಾತುಗಳಾಗಿವೆ.

'ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ' ಎಂಬ ಕಥೆ ಅಪ್ಪ – ಅಮ್ಮವನರು ಗಂಡು ಮಕ್ಕಳು ಹಾಗೂ ಹೆಣ್ಣುಮಕ್ಕಳ ನಡುವೆ ತೋರಿಸುವ ತಾರತಮ್ಯವನ್ನು ಸ್ಪಷ್ಟಪಡಿಸುತ್ತದೆ. ತಂದೆ ಗಂಡುಮಕ್ಕಳಿಗಷ್ಟೇ ಆಸ್ತಿ ಪಾಲು ಕೊಟ್ಟಾಗ ಮಗಳು ಅದರ ವಿರುದ್ಧ ಪ್ರತಿಭಟಿಸುತ್ತಾಳೆ. ಆದರೆ ಗಟ್ಟಿಯಾಗಿ ನೆಲೆಯೂರಿರುವ ಸಾಮಾಜಿಕ ವ್ಯವಸ್ಥೆಯ ಬೇರುಗಳನ್ನು ಅಲ್ಲಾಡಿಸಲು ಸಾಧ್ಯವಾಗದ್ದರಿಂದ ಮಗಳು ಅಪ್ಪನಿಗೆ ನೀತಿಯ ಮಾತನ್ನಷ್ಟೇ ಹೇಳಿ ಹೊರಟು ಹೋಗುತ್ತಾಳೆ. ಪ್ರಸ್ತುತ ಸಮಾಜಕ್ಕೆ ಒಪ್ಪಿತವಾಗುವ ಈ ಕಾಲದ ಹೆಣ್ಣು ಮಗಳೊಬ್ಬಳ ಮಾತಿನ ಮೂಲಕ ಸಾಮಾಜಿಕ ಬದಲಾವಣೆಯನ್ನು ಬಯಸುವ ಕಥೆ ಇದಾಗಿದೆ.

ಮುಸ್ಲಿಂ ಸಮುದಾಯದ ಸಂವೇದನೆಗಳೆಂದು ಪ್ರತ್ಯೇಕಗೊಳಿಸದ ಹಾಗೆ ಹುಟ್ಟುವ ಪ್ರಶ್ನೆಗಳು, ಕೇಳುವ ನ್ಯಾಯಗಳು ಇಡೀ ಸ್ತ್ರೀ ಸಮುದಾಯಕ್ಕೆ ಅನ್ವಯಿಸುವಂತೆ ಸಾರಾರವರ ಕಥೆಗಳ ಪಾತ್ರಗಳಲ್ಲಿ ಗೋಚರಿಸುತ್ತವೆ.

ಆಧುನಿಕ ಸಮಾಜದಲ್ಲಿ ಬದಲಾದ ಹೆಣ್ಣಿನ ಸ್ಥಾನ-ಮಾನಗಳೊಂದಿಗೆ ಶಿಕ್ಷಣ ಮತ್ತು ಆರ್ಥಿಕತೆ ಅವಳಿಗೆ ಬದುಕಿನ ಆಯ್ಕೆಗಳನ್ನು ಸೃಷ್ಟಿಸಿಕೊಳ್ಳಲು ಸಹಾಯವಾಗಬೇಕು ಎನ್ನುವ ಆಶಾವಾದ ಸಾರಾರವರ ಕಥೆಗಳಲ್ಲಿದೆ. ಕೇವಲ ಕರ್ತವ್ಯಗಳನ್ನು ಮಾತ್ರ ಪ್ರಸ್ತಾಪಿಸುವ ಸಮಾಜದ ಮುಂದೆ ತನ್ನ ಹಕ್ಕುಗಳನ್ನು ಪ್ರತಿಪಾದಿಸುವ ನೈತಿಕ ಸ್ಥೈರ್ಯವು ವರ್ತಮಾನದ ಸ್ತ್ರೀ ಸಂವೇದನೆಯಲ್ಲಿದೆ. ಸ್ತ್ರೀಯ ಪ್ರತಿಭಟನೆಯು ಪುರುಷ ನಿಷ್ಠವಾದ ಆಲೋಚನೆಗಳಿಗಿಂತ ಭಿನ್ನವಾಗಿ ಸ್ತ್ರೀ ಪರವಾದ ಕಾಳಜಿ, ಎಚ್ಚರಗಳು ಗೋಚರಿಸುವ ತಾತ್ವಿಕತೆ ಇಲ್ಲಿದೆ. 'ಹೊಸದಿಕ್ಕು', 'ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ' ಕಥೆಗಳಲ್ಲಿ ಈ ಅಂಶಗಳು ಸ್ಪಷ್ಟವಾಗುತ್ತವೆ.

ಗಂಗಾ ಪಾದೇಕಲ್‌ರವರ

ಒಂದು ದಿನ (ಪುಲಪೇಡಿ ಮತ್ತು ಇತರ ಕಥೆಗಳು, ೧೯೮೭)

ಅರಿವು (ಹೊಸ ಹೆಜ್ಜೆ, ೧೯೯೬)

ಸ್ಫೋಟ (ಹೊಸ ಹೆಜ್ಜೆ, ೧೯೯೬)

ದಿಕ್ಸೂಚಿ (ಹೊಸ ಹೆಜ್ಜೆ, ೧೯೯೬)

ಸಮಿತ್ತು (ಹೊಸ ಹೆಜ್ಜೆ, ೧೯೯೬)

ನೆನಸದೆ ಇದ್ದದ್ದು (ಹೊಸ ಹೆಜ್ಜೆ, ೧೯೯೬)

ಭೇದ (ಮನ್ನಣೆಯ ದಾಹ, ೨೦೦೫)

ಈ ಪ್ರಜಾ ರಾಜ್ಯದೊಳಗೆ (ಈ ಪ್ರಜಾ ರಾಜ್ಯದೊಳಗೆ, ೨೦೦೬)

ಕೋಶದೊಳಗೊಂದು ಬದುಕು (ಈ ಪ್ರಜಾ ರಾಜ್ಯದೊಳಗೆ, ೨೦೦೬)

'ಒಂದು ದಿನ' ಕಥೆಯಲ್ಲಿ ಮನೆಯವರಿಂದ ತನ್ನ ಪ್ರತಿಭೆಗೆ ಸರಿಯಾದ ಪ್ರೋತ್ಸಾಹ, ಸಹಕಾರ ಸಿಗದೆ ನಿರಾಶಳಾಗಿ ಬದುಕುವ ಹೆಣ್ಣಿನ ಚಿತ್ರಣವಿದೆ. ತನ್ನ ಬದುಕೇ ನಿರರ್ಥಕ ಎಂದು ಭಾವಿಸುವ ಸುಮಾ ಕೊನೆಗೊಂದು ದಿನ ಪತಿಯ ಮೆಚ್ಚುಗೆಯ ಮಾತುಗಳಿಗೆ ಒಳಗಾಗಿ ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಗುತ್ತಾಳೆ.

ಹೆಣ್ಣಿನ ಒಳಮನಸ್ಸಿನ ಸೂಕ್ಷ್ಮಗಳನ್ನು ಈ ಕಥೆ ತೆರೆದಿಡುತ್ತದೆ. ಪ್ರಾಯಶಃ ಹೆಣ್ಣಿಗೆ ತನ್ನ ಕೌಟುಂಬಿಕ ಬದುಕಿನಲ್ಲಿ ಮೆಚ್ಚುಗೆ ನೀಡುವುದು, ಮೆಚ್ಚುಗೆ ಪಡೆದುಕೊಳ್ಳುವುದು ಅನಿವಾರ್ಯವೂ ಹೌದು ಎಂಬ ವಾಸ್ತವದ ಕಡೆಗೆ ಈ ಕಥೆ ಮುಖ ಮಾಡುತ್ತದೆ.

'ಅರಿವು' ಕಥೆ ಶ್ರೀಧರ ಹಾಗೂ ಸುಜಾತರ ದಾಂಪತ್ಯದ ಬಿರುಕನ್ನು ಎತ್ತಿ ಹಿಡಿಯುವ ಕಥೆ. ವೈದ್ಯಕೀಯ ಓದಿದ ಸುಜಾತ, ಕೇವಲ ಸಾಮಾನ್ಯ ಪದವಿ ಪಡೆದ ಶ್ರೀಧರ ಇವರ ನಡುವೆ ವೃತ್ತಿ ಹೊಂದಾಣಿಕೆ ಇದ್ದರೂ ದಾಂಪತ್ಯದ ಹೊಂದಾಣಿಕೆ ಇಲ್ಲದಿದ್ದಾಗ ಬದುಕು ತನ್ನ ಅರ್ಥಕಳೆದುಕೊಳ್ಳುತ್ತದೆ ಎಂಬ ಸತ್ಯವನ್ನು ಶ್ರೀಧರ ಹಾಗೂ ಸುಜಾತರ ದಾಂಪತ್ಯ ತಿಳಿಸಿಕೊಡುತ್ತದೆ. ಪರಸ್ಪರ ತಿಳುವಳಿಕೆ, ವಿಶಾಲ ಮನಸ್ಸಿನ ಮೇಲೆ ದಾಂಪತ್ಯ ನಿಲ್ಲುತ್ತದೆಯೇ ಹೊರತು, ಹಣ, ಉದ್ಯೋಗ ಮುಖ್ಯವಾಗಲಾರದು ಎನ್ನುವುದನ್ನು ಈ ಕಥೆ ಸ್ಪಷ್ಟಪಡಿಸುತ್ತದೆ.

'ಸ್ಫೋಟ' ಕಥೆಯ ಲಚ್ಚಿ ತೀರಾ ಬಡತನವಿದ್ದಾಗ ಕಷ್ಟಪಟ್ಟು ದುಡಿಯುತ್ತಿದ್ದಳು. ತನ್ನ ಮಗಳ ಬಾಣಂತನಕ್ಕಾಗಿ ತಾನು ಕೂಡಿಸಿಟ್ಟ ಹಣವನ್ನು ಕುಡುಕ ಗಂಡ ಶುಕ್ರ ಅಪಹರಿಸಿದ್ದು, ಅವಳ ಮಗ ಮರದಿಂದ ಬಿದ್ದು ಪೆಟ್ಟಾದದ್ದು ಇವೆಲ್ಲಾ ಆಕೆಗೆ ತಡೆಯಲಾರದ ನೋವು ಕೊಟ್ಟರೂ ಸಮಾಧಾನ ಮಾಡಿಕೊಂಡು ಬದುಕು ಸವೆಯಿಸುತ್ತಾಳೆ. ಗಂಡನಿಗೆ ಒದೆ ಕೊಟ್ಟು ಮನೆಯಿಂದ ಓಡಿಸಿದ ಲಚ್ಚಿ ಒಬ್ಬ ಧೈರ್ಯವಂತೆ ಹೆಣ್ಣಾಗಿ ಕಂಡರೂ ಅದರ ಕುರಿತಾದ ನೋವು ಆಕೆಯನ್ನು ಆಗಾಗ ಕಾಡುತ್ತದೆ. ಪಾಯಶಃ ಹೆಣ್ಣೊಬ್ಬಳ ಕ್ಷಮಾಗುಣ, ಅನುಕಂಪ ಯಾವ ಕಾಲಕ್ಕೂ ಇರುವಂಥದ್ದೇ ಎಂಬುದನ್ನು ಈ ಕಥೆ ಸ್ಪಷ್ಟಪಡಿಸುತ್ತದೆ.

'ದಿಕ್ಸೂಚಿ' ಕಥೆಯ ಸರಸ ಮದುವೆಯಾಗಿ ಗಂಡನ ಸುಖ ಕಾಣದ ಹತಭಾಗಿನಿ. ಊರವರೆಲ್ಲ ಅವಳ ನಡತೆಯನ್ನು ಸಂಶಯದಿಂದ ಕಂಡು ಕಥೆ ಕಟ್ಟಿದವರು. ಪ್ರೈಮರಿ ಶಾಲೆಯಲ್ಲಿ ಮೇಷ್ಟ್ರಾಗಿದ್ದ ಸರಸಳ ಗಂಡ ದೇವರ ಭಕ್ತಿ ಹೆಚ್ಚಾಗಿ ಕೆಲಸವನ್ನೂ ಬಿಟ್ಟು ಬಂದಿದ್ದು ಸರಸಳ ಬದುಕಿಗೆ ಒಂದು ಕಂದಕವಾಯಿತು.

ತನ್ನ ಸಮಸ್ಯೆಗೆ ತಾನೇ ಪರಿಹಾರ ಕಂಡುಕೊಳ್ಳುವಂತೆ ರೋಗಿಷ್ಠ ಮಾವನನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಆರೈಕೆ ಮಾಡುತ್ತಾ ತಾನು ನರ್ಸಿಂಗ್ ಟ್ರೈನಿಂಗ್ ಮಾಡುವುದಾಗಿ ನಿರ್ಧರಿಸುತ್ತಾಳೆ. ತನ್ನ ಬದುಕಿನ ದಾರಿಯನ್ನು ತಾನೇ ಕಂಡುಕೊಳ್ಳುವ ಸರಸ ನಡೆವ ದಾರಿಯಲ್ಲಿ ಅನೇಕ ಕಲ್ಲು-ಮುಳ್ಳುಗಳ ನೋವನ್ನು ಅನುಭವಿಸಲೇ ಬೇಕಾಯಿತು. ಈ ಕಥೆಯ ಸರಸ ಪುರುಷಾಧಿಕಾರದ ಪ್ರತಿಭಟನೆಯೊಂದಿಗೆ ತನ್ನ ಬದುಕನ್ನು ಕಟ್ಟಿಕೊಂಡಳು.

'ಸಮಿತ್ತು' ಕಥೆಯ ಸಾವಿತ್ರಮ್ಮ ತನ್ನ ಸೊಸೆ ಭಾಗೀರಥಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋಲುತ್ತಾರೆ. ತನ್ನ ಉಳಿದ ಇಬ್ಬರು ಸೊಸೆಯಂದಿರ ಬಗೆಗೆ ಹೆಮ್ಮೆ ಪಡುವ ಸಾವಿತ್ರಮ್ಮ ಸೊಸೆ ಭಾಗೀರಥಿಯ ಎಲ್ಲಾ ರೀತಿಯ ನಡತೆ, ವರ್ತನೆಗಳನ್ನು ವಿರೋಧಿಸುತ್ತಾ ಆಕೆಯನ್ನು ತೀರಾ ಕೆಟ್ಟವಳು ಎಂದು ತಿಳಿದುಕೊಂಡು ತನ್ನ ಮಗಳ ಮನೆಗೆ ಹೋಗುತ್ತಾರೆ.

ಆದರೆ ಸಾವಿತ್ರಮ್ಮನ ಮಗಳು ಸುಮಾ ಭಾಗೀರಥಿಯ ಒಳ್ಳೆಯ ಗುಣಗಳನ್ನು ತನ್ನ ತಾಯಿಗೆ ಮನದಟ್ಟು ಮಾಡಿಕೊಡುತ್ತಾಳೆ. ಒಂದು ಹೆಣ್ಣು ಇನ್ನೊಂದು ಹೆಣ್ಣನ್ನು ಅರ್ಥಮಾಡಿಕೊಳ್ಳಲಾರಳು ಎನ್ನುವ ಸ್ಥಿತಿಯನ್ನು ಸಾವಿತ್ರಮ್ಮ ಪ್ರತಿನಿಧಿಸಿದರೆ ಒಂದು ಹೆಣ್ಣನ್ನು ಇನ್ನೊಬ್ಬಳು ಹೆಣ್ಣು ಅರ್ಥಮಾಡಿಕೊಡುತ್ತಾಳೆ ಎನ್ನುವುದನ್ನು ಸುಮಾ ಪ್ರತಿನಿಧಿಸುತ್ತಾಳೆ.

'ನೆನೆಸದೇ ಇದ್ದದ್ದು' ಕಥೆಯ ಸರಳ ತನಗೆ ಬೇಕಾದ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗದೇ ಒದ್ದಾಡುತ್ತಾಳೆ. ನೋಡಲು ಕಪ್ಪಗಿರುವ ಆಕೆ ಯಾವಾಗಲೂ ತಂದೆಯ ಕಟಕಿ ಮಾತುಗಳಿಗೆ ಗುರಿಯಾಗಿ ಮನಸ್ಸಿಗೆ ನೋವಾದರೂ, ಹೊಸ ಹೊಸ ಕನಸುಗಳ ಮೂಲಕ ತನ್ನದೇ ಲೋಕದಲ್ಲಿ ಮುಳುಗುತ್ತಾಳೆ. ಹೆಣ್ಣಿನ ಸ್ವತಂತ್ರ ನಿರ್ಧಾರಗಳಿಗೆ ಬೆಲೆ ಕೊಡದ ಸಮಾಜದ ಕುರಿತಾದ ಅಸಹನೆ ಇಲ್ಲಿ ವ್ಯಕ್ತವಾಗಿದೆ. ಆದರೆ ಮಾಲತಿಯನ್ನು ಯಾರೋ ಅಪಹರಿಸಿಕೊಂಡು ಹೋದ ಸುದ್ದಿಯನ್ನು ಕೇಳಿ ಶ್ರೀಧರನ ಮೋಹಕ್ಕೆ ಒಳಗಾಗಿ ಮದುವೆಯಾಗಲು ಸಾಧ್ಯವಾಗದೇ ಚಡಪಡಿಸುತ್ತಿದ್ದ ಸರಳಾಗೆ ಸ್ವಲ್ಪ ಸಮಾಧಾನವಾಗುತ್ತದೆ. ಪಾಲಿಗೆ ಬಂದದ್ದನ್ನು ಒಪ್ಪಿಕೊಂಡು ಬದುಕುವ ಹೆಣ್ಣು ತನ್ನ ಸ್ವತಂತ್ರ ನಿರ್ಧಾರಗಳಿಗೆ ಅವಕಾಶ ಸಿಗದಾಗ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸುತ್ತಾಳೆ.

'ಭೇದ' ಕಥೆಯು ಹೆಣ್ಣಿನ ದಿಟ್ಟತನವನ್ನು ತೋರಿಸುವ ಕಥೆಯಾಗಿದೆ. ಈ ಕಥೆಯ ರುಕ್ಕು ತನ್ನ ಮಗಳ ಮಾನಭಂಗ ಮಾಡಲು ಬಂದ ಜಮೀನ್ದಾರ ಶ್ರೀಮಂತ ಸಿವಣ್ಣನ ಗುಪ್ತಾಂಗವನ್ನು ಕತ್ತರಿಸುತ್ತಾಳೆ. ಅಧಿಕಾರಶಾಹಿಯ ವಿರುದ್ಧ ಹೆಣ್ಣೊಬ್ಬಳ ಈ ರೀತಿಯ ಪ್ರತಿಭಟನೆ ಸಮಾಜದ ಬೆಳವಣಿಗೆಯನ್ನು ಸೂಚಿಸುತ್ತದೆ. ರುಕ್ಕುವಿನ ಈ ಕಾರ್ಯ ಸಮಾಜದ ಕಣ್ಣು ತೆರೆಸುವ ಕೆಲಸವೂ ಹೌದು.

'ಈ ಪ್ರಜಾರಾಜ್ಯದೊಳಗೆ' ಕಥೆಯು ಆಧುನಿಕ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. ಸಂಸಾರ ನಿರ್ವಹಣೆಗಾಗಿ ತೊಳಲಾಡುತ್ತಿದ್ದ ರುಕ್ಕು ಹಾಗೂ ಗಿರಿಜೆ ಸಾಲಪತ್ರ ಹಿಡಿದು ದಿನಗಟ್ಟಲೆ ಕಾದರೂ ನಂತರ ಬಂದ ಅಧಿಕಾರಿ ವರ್ಗ ಇನ್ನು ಆರು ದಿನಗಳ ನಂತರ ಬನ್ನಿ ಎಂದು ಹೇಳಿದಾಗ, ಅಲ್ಲಿದ್ದ ಹೆಣ್ಣು ಮಕ್ಕಳಿಗೆ ಆದ ವೇದನೆಯು ಮನ ಕರಗುವಂತದ್ದು. ಹೊಟ್ಟೆಯ ಹಸಿವೆಗಿಂತ ದೊಡ್ಡದು ಯಾವುದು ಇಲ್ಲ ಎಂಬುದು ಈ ಕಥೆಯಿಂದ ಸ್ಪಷ್ಟವಾಗುತ್ತದೆ.

ಕಥೆಯ ಕೊನೆಯಲ್ಲಿ ಗಿರಿಜೆಯು ರುಕ್ಕುವಿಗೆ ಹೇಳುವ, 'ತಮ್ಮಂತವರ ಜೀವನದಲ್ಲಿ ಸುಖವೆಂದರೆ ಚಂದ್ರನ ಬೆಳಕಿನಂತೆಯೆ. ಇಂತಹ ಪ್ರಜೆ ರಾಜ್ಯದೊಳಗೆ ಸೂರ್ಯನ ಬೆಳಕು ಬಡವರಿಗೆ ಯಾವತ್ತೂ ಸಿಗಲಾರದು' (ಈ ಪ್ರಜಾರಾಜ್ಯದೊಳಗೆ, ಪು. ೧೪, ೨೦೦೬) ಎಂಬ ಮಾತು ಸಮಾಜದ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

'ಕೋಶದೊಳಗೊಂದು ಬದುಕು' ಕಥೆಯ ಮಂಗಳ ಪಾರ್ಶ್ವವಾಯು ಪೀಡಿತನಾದ ಗಂಡನ ಸೇವೆ ಮಾಡುತ್ತಾ ಜೀವ ಸವೆಸುತ್ತಾಳೆ. ಸಂಶಯ ಪಿಶಾಚಿಯಾದ ತನ್ನ ಗಂಡನ ಮಾತುಗಳನ್ನು ಕೇಳುತ್ತಿರುವಾಗೆಲ್ಲ ತಾನು ಯಾಕಾಗಿಯಾದರೂ ಬದುಕದ್ದೇನೆ ಎಂದು ಆಕೆಗೆ ಅನಿಸುತ್ತದೆ. ತನ್ನ ಸಹಾಯಕ್ಕಾಗಿ ಬಂದ ೧೪ ವರ್ಷದ ಕಿಟ್ಟುವಿನೊಂದಿಗೆ ಸಂಬಂಧವನ್ನು ಕಲ್ಪಿಸಿ ಗಂಡ ಹಿಂಸೆಯನ್ನು ನೀಡುತ್ತಿದ್ದ.

ತನ್ನ ದೈಹಿಕ ಸುಪ್ತ ಆಸೆಗಳನ್ನೆಲ್ಲಾ ಗುಪ್ತವಾಗಿ ಸಹಿಸಿಕೊಳ್ಳುತ್ತಾ ಮನಸ್ಸಿನಲ್ಲೇ ಗಂಡನ ಬಗ್ಗೆ ಅಸಮಧಾನವಿದ್ದರೂ ಹೊರಗೆ ವ್ಯಕ್ತಪಡಿಸಲಾರದೆ ಚಡಪಡಿಸುತ್ತಿದ್ದ ಆಕೆ ಸಮಾಜದ ವ್ಯವಸ್ಥೆಯನ್ನು ಪ್ರತಿಭಟಿಸುವ ಮನೋಭಾವವಿದ್ದರೂ ಸಹಿಸಿಕೊಂಡು ಹೋಗುತ್ತಿದ್ದಳು. 'ಹೆಣ್ಣಿನ ಬದುಕು ಇಷ್ಟೇನಾ!' ಎಂದು ಮನಸ್ಸಿನಲ್ಲಿಯೇ ಕೇಳಿಕೊಳ್ಳುತ್ತಿದ್ದಳಾದರೂ ಪರಿಸ್ಥಿತಿಯನ್ನು ಒಪ್ಪಿ ಬದುಕುತ್ತಾಳೆ.

ಗಂಗಾಪಾದೇಕಲ್‌ರವರು ಸಾಂಪ್ರದಾಯಿಕ ಚಿಂತನೆಯ ವಿವರಣೆಯನ್ನು ಕೊಡುತ್ತಲೇ ವ್ಯವಸ್ಥೆಯಲ್ಲಿ ಹೆಣ್ಣಿಗೆ ನಡೆಯುತ್ತಿರುವ ಶೋಷಣೆಗಳನ್ನು ನಿರೂಪಿಸುವ ಮೂಲಕವೇ ಪ್ರತಿಭಟನೆಯ ಧ್ವನಿಯನ್ನು ಎತ್ತುತ್ತಾರೆ. ಕುಟುಂಬ

ವ್ಯವಸ್ಥೆಯ ಸಂರಚನೆಯನ್ನು ಛೇದಿಸುವುದಕ್ಕಿಂತ ಕುಟುಂಬದ ಒಳಗಡೆ ಹೆಣ್ಣಿಗೆ ದಕ್ಕದೆ ಹೋಗುವ ತನ್ನತನಗಳ ಬಗೆಗೆ ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾರೆ. ಪ್ರತಿಭಟನೆ ಎನ್ನುವುದು ವ್ಯವಸ್ಥೆಯನ್ನು ಧಿಕ್ಕರಿಸುವ ಕೂಗಾಗದೆ ಇರುವ ವ್ಯವಸ್ಥೆಯನ್ನು ನಿರೂಪಿಸುವ ನೆಲೆಯೇ ಆಗಿದೆ.

ಕಥೆಗಳಲ್ಲಿ ಬರುವ ಘಟನೆಗಳು ಕ್ರಿಯಾತ್ಮಕ ನೆಲೆಯನ್ನು ಕೆಲವು ಸಂದರ್ಭಗಳಲ್ಲಿ ಮಾತ್ರ ಅತ್ಯಂತ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುತ್ತವೆ. ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಗಳು ಅದನ್ನು ಮುಚ್ಚಿಡದೆ, ಅದಕ್ಕೆ ಕಾರಣಕರ್ತನಾದ ಗಂಡಿನ ಗುಪ್ತಾಂಗವನ್ನು ಛೇಧಿಸುವ ಸ್ಥೈರ್ಯವೇ ಕ್ರಿಯಾತ್ಮಕ ಪ್ರತಿಭಟನೆಯ ಸ್ವರೂಪವನ್ನು ಪಡೆದುಕೊಳ್ಳುತ್ತದೆ.

ಲೈಂಗಿಕ ಸ್ವಾತಂತ್ರ್ಯದ ಬಗೆಗೆ ತಮ್ಮ ಇಷ್ಟಾನಿಷ್ಟಗಳನ್ನು ಹೇಳುವ, ವಿಶ್ಲೇಷಿಸುವ ಸ್ಥೈರ್ಯವೇ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯ ಧ್ವನಿಯಾಗಿ ಗೋಚರಿಸುತ್ತದೆ. ಸಾಮಾಜಿಕ ಅಸಮಾನತೆಯನ್ನು ಕಥೆಗಳಲ್ಲಿ ಹೇಳುವುದರ ಮೂಲಕ ಸಾಮಾಜಿಕ ನ್ಯಾಯದ ಬೇಡಿಕೆಯನ್ನು ಮುಂದಿಟ್ಟು ವಿರೋಧವನ್ನು ವ್ಯಕ್ತಪಡಿಸುತ್ತಾರೆ.

ಅತ್ತೆ - ಸೊಸೆಯರ ಬಗೆಗಿರುವ ಪಾರಂಪರಿಕ ಗ್ರಹಿಕೆಗಿಂತ ಭಿನ್ನವಾದ ತರ್ಕ ಗಂಗಾ ಪಾದೇಕಲ್‌ರವರ ಕಥೆಗಳಲ್ಲಿ ಇದೆ. ಪ್ರತಿಭಟನೆಯೆನ್ನುವುದು ಕೇವಲ ಉದ್ಘೋಷಣೆಯಾಗದೆ ಸಮಸ್ಯೆಗಳ, ಸಂವೇದನೆಗಳ ನಿರೂಪಣೆಯಾದರೂ ಪರ್ಯಾಯ ಒಂದನ್ನು ಸೃಷ್ಟಿಸಿಕೊಳ್ಳುವ ತಾತ್ವಿಕತೆ ಇವರದ್ದು.

ವೈದೇಹಿಯವರ,

ಒಂದು ಅಪರಾಧದ ತನಿಖೆ (ಅಲೆಗಳಲ್ಲಿ ಅಂತರಂಗ, ೨೦೦೬)

ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ (ಅಲೆಗಳಲ್ಲಿ ಅಂತರಂಗ, ೨೦೦೬)

ಕಾಣೆಯಾದವಳು (ಅಲೆಗಳಲ್ಲಿ ಅಂತರಂಗ, ೨೦೦೬)

ಕ್ರೌಂಚ ಪಕ್ಷಿಗಳು (ಅಲೆಗಳಲ್ಲಿ ಅಂತರಂಗ, ೨೦೦೬)

'ಒಂದು ಅಪರಾಧದ ತನಿಖೆ' ಕಥೆಯಲ್ಲಿ ಪರಂಪರಾಗತ ಕಟ್ಟುಪಾಡುಗಳನ್ನು ದಾಟಿ ಬರಲಾಗದ ಸ್ಥಿತಿವಂತರ ಮನೆಯ ಕುಸುಮ ಹಾಗೂ ಬಡವಳಾದರೂ ಸಮಸ್ಯೆಗಳನ್ನು ತನ್ನದೇ ರೀತಿಯಲ್ಲಿ ಪರಿಹರಿಸಿಕೊಳ್ಳುತ್ತಾ ಮುನ್ನುಗ್ಗುವ ಕೆಲಸದ ಹೆಣ್ಣು ಬಾಬಿ ಇವರಿಬ್ಬರ ಚಿತ್ರಣವಿದೆ. ಗಂಡನನ್ನು ಬಿಟ್ಟು ತವರು ಮನೆಗೆ ಬಂದ ಕುಸುಮ ಹಾಗೂ ಗಂಡನೊಡನೆ ರಾಜಿ ಮಾಡಿಕೊಂಡು ಬದುಕುವ ಬಾಬಿಯ ಜೀವನದ ಮುಖಾಮುಖಿಯಾಗಿ ಈ ಕಥೆ ಕಾಣಿಸುತ್ತದೆ.

ಬಾಬಿ ಹೇಳುವ, 'ಅದಕ್ಕೆ ಮತ್ತೇನಿಲ್ಲ. ಮಕ್ಕಳಾಗಲಿಲ್ಲವೆಂಬುದೊಂದೇ ಮರುಳು. ನನ್ನ ಮಗಳನ್ನು ತೋರಿಸಿ ಇದೇ ನಿಮ್ಮ ಮಗಳು ಎಂದೆ, ನಂಬಿತು. ಅಬ್ಬೆ ಮನೆಯಲ್ಲಿ ಇರುವುದು ಯಾಕೆ? ಬನ್ನಿ ನನ್ನೊಡನೆ ಎಂದೆ, ಬಂದಿತು. ಈಗ ಇದೇ ಮನೆಯಲ್ಲಿ ಕೆಲಸ ಮಾಡಿಕೊಂಡು, ನನಗೂ ಹಗೂರಾಯಿತು. ಅದಕ್ಕೂ ಒಂದು ನೆಲೆಯಾಯಿತು' (ಅಲೆಗಳಲ್ಲಿ ಅಂತರಂಗ, ಪು. ೧೨೦, ೨೦೦೬) ಎಂಬ ಮಾತು ಇದನ್ನು ಸ್ಪಷ್ಟ ಪಡಿಸುತ್ತದೆ. ಹೆಣ್ಣಿನ ಬದುಕಿನ ಸುಖವು ಅವರ ಧೈರ್ಯ ಹಾಗೂ ನಿರ್ಧಾರಗಳನ್ನೇ ಅವಲಂಭಿಸಿರುತ್ತದೆ ಎಂಬುದು ಈ ಕಥೆಯ ಆಶಯವಾಗಿದೆ.

'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆಯಲ್ಲಿ ವೈದೇಹಿಯವರು ಸ್ವಾವಲಂಬನೆಯ ಬದುಕಿನ ಬಗೆಗೆ ಬೆಳಕು ಚೆಲ್ಲುತ್ತಾರೆ. ಸಮಾಜ ಶಾಸ್ತ್ರಜ್ಞೆ ಹೆಣ್ಣು ಇದಕ್ಕೆ ನಿದರ್ಶನವಾಗಿದ್ದಾಳೆ. ಪರಂಪರಾಗತ ವ್ಯವಸ್ಥೆಯ ಒಳಗೆ ಹೆಣ್ಣನ್ನು ಬಂಧಿಯಾಗಿಸುವ ಹುನ್ನಾರವನ್ನು ಒಪ್ಪಿಕೊಳ್ಳುವ ಸ್ಥಿತಿಯು ಈ ಕಥೆಯ 'ವಾಗತ್ತೆ'ಯ ಮೂಲಕ ಸ್ಪಷ್ಟವಾಗುತ್ತದೆ. ಆಕೆ ಸಮಾಜ ಶಾಸ್ತ್ರಜ್ಞೆಗೆ ಹೇಳುವ, 'ಹೆಣ್ಣೇ ಏನಂತ ತಿಳಿದಿದ್ದಿ? ಮುಂಚಿನ ಕಾಲದ ಗಂಡಸರೇ ಹೀಗೆ. ಹೆಂಗಸರನ್ನು ಎಲ್ಲಿ ಇಡಬೇಕೋ ಅಲ್ಲೇ ಇಟ್ಟದ್ದಕ್ಕೆ ಬಚಾವಾದರು' (ಅಲೆಗಳಲ್ಲಿ ಅಂತರಂಗ, ಪು. ೩೬೨, ೨೦೦೬) ಎಂಬ ಮಾತಿನಲ್ಲಿ ವ್ಯವಸ್ಥೆಯ ಬಗೆಗಿನ ಪ್ರತಿಭಟನೆ ಇದೆ.

'ಕಾಣೆಯಾದವರು' ಕಥೆಯಲ್ಲಿ ಗಂಡನ ಬಗೆಗೆ ಕುಸುಮಾಳಿಗಿರುವ ಅತೃಪ್ತಿ ಭಾವನೆಯೇ ಅವಳನ್ನು ಉನ್ಮಾದದ ಕಡೆಗೆ ಕೊಂಡೊಯ್ಯುತ್ತದೆ. ಜೊತೆಗಿದ್ದ ಗಂಡನನ್ನು ತನ್ನ ಗಂಡನೆಂದು ಒಪ್ಪಿಕೊಳ್ಳದ ಕುಸುಮ ಅವನನ್ನು ಪರಪುರುಷನೆಂದು ಭ್ರಮಿಸಿಕೊಳ್ಳುತ್ತಾಳೆ. ಕಾಣೆಯಾದ ಪತಿ ಮನೆಗೆ ಬಂದಾಗ ಅವಳು ಲತಾಳಿಗೆ ಹೇಳುವ, 'ನಾನು ಕೇಳಲೇ ಇಲ್ಲ. ಮತ್ತೆ ಅಷ್ಟಕ್ಕೆ ಸಿಟ್ಟು ಬಂದು ಎದ್ದು ಹೊರಟರೂ ಹೊರಟರೇ' (ಅಲೆಗಳಲ್ಲಿ ಅಂತರಂಗ, ಪು. ೫೬೨, ೨೦೦೬) ಎಂಬ ಮಾತಿನಲ್ಲಿ ಅಸಮಾಧಾನದ ಛಾಯೆಯಿದೆ.

'ಕ್ರೌಂಚ ಪಕ್ಷಿಗಳು' ಕಥೆಯು ದೇಶದ ತುರ್ತು ಪರಿಸ್ಥಿತಿಯ ಕರಾಳ ಮುಖವನ್ನು ಅನಾವರಣಗೊಳಿಸುತ್ತದೆ. ಗಂಡ - ಹೆಂಡಿರ ಅಗಲುವಿಕೆ ಈ ಕಥೆಯ ಪ್ರಧಾನ ಅಂಶ. ಅಶ್ನಾರ್ಣ ಭಟ್ಟ ಹಾಗೂ ಲಕ್ಷ್ಮಮ್ಮನ ಅಗಲುವಿಕೆ ಕ್ರೌಂಚ ಪಕ್ಷಿಗಳ ಅಗಲುವಿಕೆಯಷ್ಟೇ ಸಹಜವಾದದ್ದು. ಪುರಾಣದೊಂದಿಗೆ ತಳುಕು ಹಾಕಿಕೊಂಡ ಈ ಕ್ರೌಂಚ ಪಕ್ಷಿಗಳ ಘಟನೆ ಮನುಷ್ಯ ಜೀವನದಲ್ಲಿಯೂ ಸಾಮಾನ್ಯ ಎನ್ನುವಷ್ಟರ ಮಟ್ಟಿಗೆ ವ್ಯಕ್ತವಾಗಿದೆ.

ನಿತ್ಯ ಕಾಡುವ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಅಡುಗೆ ವೃತ್ತಿಯ ಅರ್ಣ್ಣಾರ್ಣ ಭಟ್ಟರು, ಕೊನೆಗೂ ಆತ್ಮಹತ್ಯೆಗೆ ಶರಣಾಗುತ್ತಾರೆ. ದೇಶ ವಿಭಜನೆಯ ಸಂದರ್ಭದಲ್ಲಿ ಗಲಭೆಕೋರರಿಂದ ಕದ್ದೊಯ್ಯಲ್ಪಟ್ಟ ಮಡದಿ ಲಕ್ಷ್ಮಮ್ಮನನ್ನು ಗುರುತಿಸಿಯೂ ಮರಳಿ ಸ್ವೀಕರಿಸದ ಅಪರಾಧಿತನ ಈ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ.

'ಎಲ್ಲೋ ಇದ್ದ ಹೆಂಡತಿಯನ್ನು ಮತ್ತೆ ಕರೆದುಕೊಳ್ಳುವುದು, ಅಲ್ಲ, ಕಷ್ಟವೇ. ಭಟ್ಟರ ಅವಸ್ಥೆ ಬಾಯಲ್ಲಿ ಹೇಳಿದಷ್ಟು ಸರಳವಲ್ಲ' (ಅಲೆಗಳಲ್ಲಿ ಅಂತರಂಗ, ಪು. ೬೬೯, ೨೦೦೬) ಎಂಬ ಹೇಳಿಕೆ ಹಾಗೂ 'ಅದೇನು, ಆಯುಷ್ಯವೆಲ್ಲ ಎಲ್ಲೆಲ್ಲೊ ಬಳಿದು ಖಾಯಿಲೆ ಹತ್ತಿಸಿಕೊಂಡು ಬರುವ ಯಜಮಾನರ ಜೊತೆ ಸಂಸಾರ ಮಾಡುವ ಹೆಂಗಸರು ಎಷ್ಟು ಬೇಕು!' (ಅದೇ. . . ಪು. ೬೬೯) ಎಂಬ ಹೇಳಿಕೆಗಳ ಮುಖಾಮುಖಿ ಇಲ್ಲಿದೆ.

ವೈದೇಹಿಯವರ ಕಥೆಗಳು ಪಾರಂಪರಿಕ ಕುಟುಂಬ ವ್ಯವಸ್ಥೆಯ ಅವಿಭಕ್ತ ಕುಟುಂಬದೊಳಗಿನ ಹೆಣ್ಣಿನ ದೈನ್ಯ, ದಮನೀಯತೆಯನ್ನು ಹೇಳುವುದರೊಂದಿಗೆ ಆಧುನಿಕ ಜಗತ್ತಿನ ವಿಭಕ್ತ ಕುಟುಂಬದೊಳಗೂ ಹೆಣ್ಣಿಗೆ ದಕ್ಕದೇ ಹೋಗುವ ಸ್ಥಾನಮಾನಗಳ ವಿಶ್ಲೇಷಣೆಯನ್ನು ಮಾಡುತ್ತವೆ. ಕುಟುಂಬದೊಳಗಡೆ ತಾಯ್ತನದ ಸ್ವರೂಪವನ್ನು ವ್ಯಾಖ್ಯಾನಿಸುವ, ವಿಸ್ತರಿಸುವ ಚಿಂತನೆಯೊಂದಿಗೆ ಮಾತೃತ್ವದ ನೆಲೆಯ ವೈಭವೀಕರಣಗಳಿಲ್ಲದೆ ಬದುಕು ಕಟ್ಟಬೇಕಾದ ಅನಿವಾರ್ಯತೆಯನ್ನು ನಿರೂಪಿಸುತ್ತಾರೆ. ಪಾತ್ರಗಳಲ್ಲಿನ ವ್ಯಂಗ್ಯ ಮತ್ತು ಮೊನಚು ಮಾತುಗಳಿಂದಲೇ ವ್ಯವಸ್ಥೆಯ ಬಗೆಗಿನ ಧೋರಣೆಗಳು ಪ್ರಶ್ನಾರ್ಹಗೊಳ್ಳುವುದರ ಮೂಲಕ ವಿರೋಧದ ಧ್ವನಿ ಪ್ರತ್ಯಕ್ಷವಾಗುತ್ತದೆ. 'ಒಂದು ಅಪರಾಧದ ತನಿಖೆ' , 'ಕಾಣೆಯಾದವಳು' ಕಥೆಗಳಲ್ಲಿ ಇದಕ್ಕೆ ಪೂರಕವಾದ ಅಂಶಗಳು ಕಾಣಿಸುತ್ತವೆ.

ದಾಂಪತ್ಯದ ಬಾಂಧವ್ಯ ದೇಶ ವಿಭಜನೆಯೊಂದಿಗೆ ನಡೆಯುವ ವಿಘಟನೆಯ ಮೂಲಕ ಬದುಕಿನ ಭಾವಕೋಶಗಳ ವಿಸ್ತರಣೆಯಾಗದೆ, ಸಂಕೀರ್ಣತೆಯತ್ತ ಸಾಗುವುದರಲ್ಲಿಯೇ ಮನುಷ್ಯ ಸಂಬಂಧಗಳ ವಿಶ್ಲೇಷಣೆ ನಡೆಯುತ್ತದೆ. ಕುಟುಂಬದಲ್ಲಿ ಗಂಡಿಗೆ ಆಯ್ಕೆ ಅವಕಾಶಗಳಿರುವಂತೆ ಹೆಣ್ಣಿಗೆ ಇಲ್ಲದೆ ಹೋಗುವ ಅವಕಾಶಗಳ ಬಗೆಗೆ ಪರಿಣಾಮಕಾರಿಯಾದ ಸೂಕ್ಷ್ಮ ಗ್ರಹಿಕೆ ಇಲ್ಲಿದೆ. 'ಕ್ರೌಂಚಪಕ್ಷಿಗಳು' ಕಥೆಯು ಇದನ್ನು ನಿರೂಪಿಸುತ್ತದೆ.

ಒಟ್ಟಾರೆಯಾಗಿ ಕುಟುಂಬದಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಮರುವಿಶ್ಲೇಷಣೆಗೆ ಒಳಪಡಿಸುವ ತಾತ್ವಿಕತೆ ಕಥೆಗಾರ್ತಿಯದ್ದಾಗಿದೆ.

೬.೩. ಧಾರ್ಮಿಕ ನೆಲೆ :

ಧರ್ಮ ಹೆಣ್ಣನ್ನು ವೈಭವೀಕರಿಸಿದಷ್ಟೇ ಅವಳ ತುಳಿತವನ್ನು ಕೂಡಾ ನಡೆಸಿದೆ. ಹಾಗಾಗಿ ಎಲ್ಲಾ ಧರ್ಮಗಳಲ್ಲೂ ಹೆಣ್ಣು ಮೋಕ್ಷಕ್ಕೆ ಅರ್ಹಳಲ್ಲ ಎಂಬ ಪ್ರಶ್ನೆಯನ್ನೇ ಮಹಿಳಾ ಕಥೆಗಾರ್ತಿಯರು ಎತ್ತಿಕೊಳ್ಳುತ್ತಾ ಕುಟುಂಬದ ಒಳಗಿರುವ ಗಂಡಿನ ನೈತಿಕತೆಯನ್ನೇ ಪ್ರಶ್ನಿಸಿದ್ದಾರೆ.

ಧರ್ಮದ ವಿಚಾರಗಳನ್ನು ಪ್ರಶ್ನೆ ಮಾಡುವುದರೊಂದಿಗೆ ಅದನ್ನು ವಿಶ್ಲೇಷಿಸುವ ಕೆಲಸವು ಇಲ್ಲಿ ನಡೆಯುತ್ತದೆ. ಜೀವಪರವಾದ ಮಾನವ ಧರ್ಮವು ಇಲ್ಲವಾಗುವುದರ ಮೂಲಕ ಹೆಣ್ಣಿನ ಬದುಕನ್ನು ಕಸಿಯುವ ಹುನ್ನಾರಗಳನ್ನು ಕಥೆಗಾರ್ತಿಯರು ಸರಿಯಾಗಿ ಗ್ರಹಿಸಿದ್ದಾರೆ. ಧರ್ಮವು ಶೋಷಣೆಯ ಅಸ್ತ್ರವಾದಾಗ, ಪ್ರತಿಭಟನೆಯ ಶಸ್ತ್ರವನ್ನು ಎತ್ತಿಕೊಳ್ಳುವುದಕ್ಕೂ ಸಾಧ್ಯವಾಗಿದೆ.

ಧರ್ಮ ಸೂಕ್ಷ್ಮವಾದ ವಿಚಾರಗಳು ಮತ್ತೆ ಮತ್ತೆ ಮರು ವಿಮರ್ಶೆಗೆ ಒಳಗಾಗುತ್ತಾ ನಿಜವಾದ ಧರ್ಮ ಯಾವುದು ಎನ್ನುವ ಅನ್ವೇಷಣೆಯ ಮನೋಧರ್ಮ ಲೇಖಕಿಯರಲ್ಲಿ ಸ್ಪಷ್ಟಗೊಳ್ಳುತ್ತಾ ಸಾಗುತ್ತದೆ. ಈ ನೆಲೆಯ ಕಥೆಗಳು ಸಾರಾರವರಲ್ಲಿ ಮಾತ್ರ ಕಾಣಿಸುತ್ತವೆಯಾದ್ದರಿಂದ ಅವರ ಕಥೆಗಳನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಸಾರಾ ಅಬೂಬಕ್ಕರ್‌ರವರ

ಸಾರಾಂಶ (ಪಯಣ ಮತ್ತು ಇತರ ಕಥೆಗಳು, ೧೯೯೨)

ನೀಲಿಚಿತ್ರದ ಕೆಂಪುಬಣ್ಣ (ಖೆಡ್ಡಾ, ೧೯೯೯)

ಬೆನ್ನಟ್ಟುವ ಭೂತಗಳು (ಪಯಣ ಮತ್ತು ಇತರ ಕಥೆಗಳು, ೧೯೯೨)

ನಿಯಮ - ನಿಯಮಗಳ ನಡುವೆ (ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ೧೯೯೬)

'ಸಾರಾಂಶ' ಕಥೆಯಲ್ಲಿ ವಿದ್ಯಾವಂತ ಸಮಾಜದ ಅನಾಗರಿಕ ವರ್ತನೆಯ ಚಿತ್ರಣವಿದೆ. 'ಬಿತ್ತಿ ಬೆಳೆಯುವುದಕ್ಕೊಂದು ಹೊಲ, ಇನ್ನೊಂದು ಆಟದ ಮೈದಾನ..' (ಪಯಣ ಮತ್ತು ಇತರ ಕತೆಗಳು, ಪು. ೩೫ - ೩೬, ೧೯೯೨) ಎಂಬ ಕಥೆಯ ಸಾಲುಗಳಂತೆ ಮೊದಲ ಹೆಂಡತಿ ಇದ್ದಾಗ್ಯೂ ಎರಡನೆಯವಳನ್ನು ತಂದು ಮನೆಯಲ್ಲಿಟ್ಟುಕೊಂಡು ಆಕೆಯನ್ನು ನಡೆಸಿಕೊಳ್ಳುವ ರೀತಿ ಕ್ರೌರ್ಯದ ಒಂದು ಮುಖ. ಜಾತಿ, ಧರ್ಮಗಳೆಂಬ ಗೋಡೆಗಳ ಮಧ್ಯೆ ಹೆಣ್ಣಿನ ಬದುಕು ಛಿದ್ರಗೊಳ್ಳುವುದನ್ನು ಈ ಕಥೆ ನಿರೂಪಿಸುತ್ತದೆ.

'ನೀಲಿಚಿತ್ರದ ಕೆಂಪುಬಣ್ಣ' ಎಂಬ ಕಥೆ ಆಧುನಿಕತೆಗೆ ತೆರೆದುಕೊಳ್ಳುವ ಹೆಣ್ಣೊಬ್ಬಳ ಮಾನಸಿಕ ತುಮುಲವನ್ನು ಚಿತ್ರಿಸುತ್ತದೆ. ಭೂತ, ಪ್ರೇತಗಳೆಂಬ ಮೂಢನಂಬಿಕೆಗಳ ಕ್ರೌರ್ಯಕ್ಕೆ ಮನುಷ್ಯನ ದೇಹ, ಮನಸ್ಸು ಹೇಗೆ ದಂಡಿಸಲ್ಪಡುತ್ತದೆ ಎಂಬುದನ್ನು ಈ ಕಥೆ ಮನದಟ್ಟು ಮಾಡುತ್ತದೆ. ಮೂಢನಂಬಿಕೆಗಳಿಗೆ ಬಲಿಯಾಗಬಾರದು ಎಂಬ ಸಂದೇಶವೂ ಈ ಕಥೆಯ ಒಳಗೆ ಅಡಗಿದೆ.

'ಬೆನ್ನಟ್ಟುವ ಭೂತಗಳು' ಕಥೆಯು ಅರ್ಥವಿಲ್ಲದ ಪೂರ್ವಾಗ್ರಹಗಳು ಭಿನ್ನ ಕೋಮುಗಳ ಮನಸ್ಸು ಹೇಗೆ ಒಡೆದು ಛಿದ್ರಮಾಡುತ್ತವೆ ಎಂಬುದನ್ನು ನಿರೂಪಿಸುತ್ತದೆ. ಸೋಮನಾಥ ದೇವಾಲಯವನ್ನು ದರೋಡೆಕೋರರು ಹಾಳು ಮಾಡಿದರು ಎನ್ನುವುದರ ಬದಲು ಮುಸ್ಲಿಮರು ದಾಳಿ ಮಾಡಿದರು ಎಂದದ್ದು ಆಯಿಷಾಳಿಗೆ ತುಂಬಾ ನೋವನ್ನುಂಟುಮಾಡುತ್ತದೆ. ಜಾತಿ, ಧರ್ಮದ ನೆಲೆಯಲ್ಲಿ ಮನುಷ್ಯರನ್ನು ಗುರುತಿಸುವ ಸಮಾಜದ ಬಗೆಗಿನ ಆಯಿಷಾಳ ಆಕ್ರೋಶ ಇಲ್ಲಿ ಎದ್ದು ಕಾಣುತ್ತದೆ.

'ನಿಯಮ – ನಿಯಮಗಳ ನಡುವೆ' ಕಥೆಯಲ್ಲಿ ಧರ್ಮದ ಹೆಸರಿನಲ್ಲಿ ಅಮಾಯಕ ಹೆಣ್ಣು ಮಗಳ ಬದುಕಿನೊಂದಿಗೆ ನಾಟಕವಾಡುವ ಪುರುಷ ದಬ್ಬಾಳಿಕೆಯ ಕ್ರೂರ ಚಿತ್ರಣವಿದೆ. ಈಗಾಗಲೇ ಎರಡು ಮಕ್ಕಳ ತಾಯಿಯಾಗಿದ್ದು ಮೂರನೆಯ ಮಗುವನ್ನು ಗರ್ಭದಲ್ಲಿಟ್ಟುಕೊಂಡ ಜೋಹರಾ ಗಂಡನ ಕಷ್ಟಕ್ಕೆ ಚಿನ್ನ ಕೊಡಲಿಲ್ಲ ಎನ್ನುವ ಒಂದೇ ಕಾರಣಕ್ಕೆ ತವರಿಗೆ ಅಟ್ಟಲ್ಪಟ್ಟಳು. ಗಂಡನಾದ ಖಾದರ್ ಆಕೆಗೆ ತಲಾಖ್ ಕೊಟ್ಟಿದ್ದಲ್ಲದೆ ಮುಂದೆ 'ಒಜ್ಜತ್' ಮೂಲಕ ಮರುವಿವಾಹಕ್ಕೆ ಹೇಳಿಕಳುಹಿಸುತ್ತಾನೆ. ಧರ್ಮದ ನಿಯಮವನ್ನು ಪಾಲಿಸುವುದಕ್ಕಾಗಿ ಪ್ರಕೃತಿ ನಿಯಮದ ವಿರುದ್ಧ ಹೋರಾಡಿದ ಫಲವಾಗಿ ಜೋಹರಾ ಸಾವನ್ನಪ್ಪುತ್ತಾಳೆ. ಹೆಣ್ಣು ಮಗಳೊಬ್ಬಳ ಬದುಕು ಈ ರೀತಿಯಾದ ಸಾವಿನಲ್ಲಿ ಕೊನೆಯಾಗುವುದು ಸಮಾಜದ ದುರಂತ ಚಿತ್ರಣ.

ಜೋಹರಾಳ ತಾಯಿ ಆಮಿನಾ ಪರಂಪರೆಯನ್ನು ಒಪ್ಪುವ ಮಾದರಿಯವಳಾದರೆ, ಮಗಳು ಸಮಾಜದ ಪ್ರತಿಭಟನೆಯ ಮನೋಭಾವ ತಾಳುವವಳು. ಆದರೆ ಆಕೆಯ ಪ್ರತಿಭಟನೆಗೆ ಬೆಲೆಯಿಲ್ಲದಾಗುತ್ತದೆ. 'ತಪ್ಪು ಯಾರೇ ಮಾಡಲಿ, ಶಿಕ್ಷೆ ಅನುಭವಿಸಬೇಕಾದವರು ಹೆಂಗಸರು' (ಸಾರಾ ಪುಟ ೮೮, ೧೯೯೬) ಎಂಬ ಅಮಿನಾಳ ಮಾತಿನಲ್ಲಿ ವ್ಯವಸ್ಥೆಯನ್ನು ಒಪ್ಪಿ ಬದುಕುವ ಅನಿವಾರ್ಯತೆಯಿದೆ.

ಸಾರಾರವರ ಕಥೆಗಳಲ್ಲಿ ಧರ್ಮದ ಬಗೆಗಿನ ಪ್ರಶ್ನೆಗಳು ಮತ್ತೆ ಮತ್ತೆ ಹುಟ್ಟಿಕೊಳ್ಳುತ್ತವೆ. ಧರ್ಮದ ನಿಯಮಗಳನ್ನು ಮೀರಬೇಕೆನ್ನುವ ತುಡಿತಗಳೊಂದಿಗೆ ಧರ್ಮವು ಜೀವಪರವಾದ ಕಾಳಜಿಯನ್ನು ಹೊಂದಬೇಕು ಎನ್ನುವ ಆಶಯ ಇವರದ್ದಾಗಿದೆ.

ಆಧುನಿಕತೆಯ ಪರಿಕಲ್ಪನೆಯಲ್ಲಿ ವೈಚಾರಿಕತೆ ಬೆಳೆದಂತೆಲ್ಲ ಧರ್ಮದ ವಿಚಾರಗಳು ಪ್ರಶ್ನಾರ್ಹಗೊಳ್ಳುವುದು ಸರ್ವೇಸಾಮಾನ್ಯ. ಸಂಕುಚಿತ ಮನೋಧರ್ಮಕ್ಕಿಂತ ವಿಶಾಲವಾದ ಮನೋಭೂಮಿಕೆ ಅವಶ್ಯವೆಂದು ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ. ನಗಣ್ಯವೆನಿಸಲ್ಪಟ್ಟ ವಿಚಾರಗಳು ಧರ್ಮ ಸೂಕ್ಷ್ಮಗಳಾಗಿ ವಿಶ್ಲೇಷಣೆಗೆ ಒಳಗಾಗುತ್ತವೆ.

ಮುಸ್ಲಿಂ ಸಮುದಾಯದ ಒಳಗಿರುವ ವಿಧಿ-ನಿಷೇಧಗಳೇ ಅವರನ್ನು ಪುನಃ ಪುನಃ ಪ್ರಶ್ನಾರ್ಹಗೊಳಿಸಲು ಕಾರಣವಾಗಿವೆ. ಕೋಮುವಾದಿ ಚಿಂತನೆಗಳು ಮನುಷ್ಯ ಸಮಾಜವನ್ನು ಒಡೆದು ಛಿದ್ರ ಮಾಡುತ್ತಿರುವ ಕಾಲಘಟ್ಟದಲ್ಲಿ ವರ್ತಮಾನವನ್ನು ಹೊಸ ಆಸ್ಥೆಯಿಂದ ಕಟ್ಟಬೇಕೆನ್ನುವ ಎಚ್ಚರ ಇವರ ಕಥೆಗಳಲ್ಲಿದೆ.

೬.೪. ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ :

ಆಧುನಿಕತೆಯೊಂದಿಗೆ ಬೆಳೆದ ಆರ್ಥಿಕತೆ ಸಮಾಜಮುಖಿಯಾಗಿದ್ದ ಕುಟುಂಬ ಜೀವನವನ್ನು ಹೆಚ್ಚು ಹೆಚ್ಚು ಸ್ವಾರ್ಥಪರರನ್ನಾಗಿ ಮಾಡಿತು. ಪರಿಣಾಮ ಒಪ್ಪಿತ ಮಾದರಿಯ ವ್ಯಕ್ತಿ ಮೌಲ್ಯಗಳನ್ನು ಪ್ರಶ್ನಿಸುತ್ತಾ ಸಂಘರ್ಷದ ಹಾದಿಯನ್ನು ಹುಟ್ಟು ಹಾಕಿದರು. ವ್ಯಕ್ತಿ, ಕುಟುಂಬ, ಧರ್ಮ ಇಲ್ಲಿರುವ ಎಲ್ಲಾ ವಿಚಾರಗಳು ಪ್ರಶ್ನಾರ್ಹವಾಗುತ್ತಾ ಹೋದ ಹಾಗೆಯೇ, ಆಧುನಿಕ ಜಗತ್ತು ಸಂಕೀರ್ಣವಾದಂತೆಯೇ ಆ ಜಗತ್ತಿನ ಕಥೆಗಳೂ ಕೂಡಾ ಸಂಕೀರ್ಣವಾಗಲು ಸಾಧ್ಯವಾಯಿತು. ಎಲ್ಲವೂ ಕಪ್ಪು ಬಿಳುಪಿನ ಪಾತ್ರಗಳಾಗದೆ ಅರ್ಥವಾಗದ ಹಾಗೆ ಬರೆಯುವ ಪ್ರತಿಮೆ, ರೂಪಕಗಳೇ ಹೆಚ್ಚು ಹೆಚ್ಚು ಅರ್ಥ ಸಾಧ್ಯತೆಗಳನ್ನು ನೀಡುತ್ತಾ, ಹೆಣ್ಣಿನ ಮನಸ್ಸಿನ ಒಳತೋಟಿಗಳನ್ನು ಬಿಚ್ಚಿಡಲು ಸಾಧ್ಯವಾಯಿತು. ಹಾಗಾಗಿ ಒಪ್ಪಿತ ಮಾದರಿಯನ್ನು ದಾಟಿ ಲಿಂಗತಾರತಮ್ಯದ ವಿರುದ್ಧದ ಪ್ರತಿಭಟನೆಯ ಗಟ್ಟಿದನಿಯು ಆಧುನಿಕತೆಯ ಸಂಘರ್ಷದ ಕಾಲಘಟ್ಟದಲ್ಲಿ ಪ್ರಕಟಗೊಳ್ಳಲು ಸಾಧ್ಯವಾಯಿತು. ಹೆಣ್ಣೆನ್ನುವ ಚೌಕಟ್ಟನ್ನು ಮೀರುವ ಪ್ರಯತ್ನದೊಂದಿಗೆ ಹೆಣ್ತನಕ್ಕೆ ಹೊಸ ಭಾಷ್ಯದ ಪರಿಕಲ್ಪನೆಯನ್ನು ನಿರೂಪಿಸುವ ಬರವಣಿಗೆಗಳು ಕೂಡಾ ಹೆಚ್ಚು ಅರ್ಥಪೂರ್ಣವಾಗತೊಡಗಿದವು. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು.

ಸಾರಾ ಅಬೂಬಕ್ಕರ್‌ರವರ,

ಹಳೆಬೇರು ಹೊಸ ಚಿಗುರು (ಪಯಣ ಮತ್ತು ಇತರ ಕಥೆಗಳು, ೧೯೯೨)

ಚಪ್ಪಲಿಗಳು (ಚಪ್ಪಲಿಗಳು, ೧೯೮೯)

'ಹಳೆಬೇರು ಹೊಸ ಚಿಗುರು' ಕಥೆಯಲ್ಲಿ ಪರಂಪರೆ ಹಾಗೂ ಆಧುನಿಕತೆಗಳ ನಡುವಿನ ಸಂಘರ್ಷವಿದೆ. ಮನುಷ್ಯನ ಯೋಚನಾ ಲಹರಿ, ಉಡುಗೆ – ತೊಡುಗೆಗಳಲ್ಲಿ ತಲೆಮಾರುಗಳ ಅಂತರ ಬಿಂಬಿತವಾಗಿದೆ. 'ಅಂದರೆ ನಿಮ್ಮಮ್ಮ ಶೃಂಗರಿಸಿಕೊಳ್ಳುವುದಕ್ಕೆ ಅಂಗಡಿಗೆ ಹೋಗ್ತಿದ್ದಾಳೆಯೆ ? (ಪಯಣ ಮತ್ತು ಇತರ ಕಥೆಗಳು, ಪು. ೫೦, ೧೯೯೨) ಎನ್ನುವ ಸಾಬರ ಆಶ್ಚರ್ಯಚಕಿತವಾದ ಮಾತಾಗಲೀ, ಹುಸೈನ್ ಹೇಳುವ 'ಅಬ್ಬಾ, ಅವಳಿಗೆ ಹದಿನೆಂಟು ವರ್ಷವಾಗಿದೆ. ಅವಳಿಗೆ ಬೇಕಾದ ವರನನ್ನು ಅವಳೇ ವಿವಾಹವಾಗಲಿ' (ಅದೇ. . . ಪು. ೫೧,) ಎನ್ನುವ ಮಾತುಗಳು ಈ ಅಂತರವನ್ನು ವ್ಯಕ್ತಪಡಿಸುತ್ತವೆ.

'ಚಪ್ಪಲಿಗಳು' ಕಥೆಯಲ್ಲಿ ಪರಂಪರೆ ಹಾಗೂ ಆಧುನಿಕತೆಗಳ ಸಂಘರ್ಷವಿದೆ. ಸಮೀರಾ ಹಾಗೂ ಆಕೆಯ ಗಂಡ ಶಬೀರ ಹೊಸ ತಲೆಮಾರನ್ನು ಪ್ರತಿನಿಧಿಸಿದರೆ ಸಮೀರಾಳ ತಂದೆ ಹಳೆಯ ನಂಬಿಕೆಗಳಿಗೆ ಜೋತು ಬಿದ್ದವನು. ಮದುವೆಯಾದ ಹೆಣ್ಣು ಬುರ್ಕಾ ಇಲ್ಲದೆ ಮನೆಯಿಂದ ಹೊರಗೆ ಹೋಗುವುದಾಗಲೀ ಬೇರೆ ಗಂಡಸರೊಡನೆ ಮಾತನಾಡುವುದಾಗಲೀ, ಸಮೀರಾಳ ತಂದೆಗೆ ಇಷ್ಟವಿಲ್ಲದ್ದು. 'ಹೆಣ್ಣು ಮಕ್ಕಳನ್ನು ಚಪ್ಪಲಿಗಳಂತೆ ಬಳಸಿಕೊಳ್ಳಬೇಕು' (ಚಪ್ಪಲಿಗಳು, ಪುಟ ೧೭, ೧೯೮೯) ಎನ್ನುವ ಮಾತು ಅಳಿಯನನ್ನು ದಂಗುಬಡಿಸುತ್ತದೆ.

ಹೆಣ್ಣಿನ ಯಾವುದೇ ಆಸೆ – ಆಕಾಂಕ್ಷೆಗಳಿಗೆ ಬೆಲೆಯಿಲ್ಲ. ಗಂಡನು ಹೇಳಿದ ಹಾಗೆ ಕೇಳಿಕೊಂಡು ಬದುಕುವುದೇ ಅವರ ಮೇಲಿನ ಕರ್ತವ್ಯ ಎನ್ನುವುದು ಇಲ್ಲಿ ವ್ಯಕ್ತವಾಗುತ್ತದೆ. ತನ್ನ ತಾಯಿ ವರ್ಷ–ವರ್ಷವೂ ಮಕ್ಕಳನ್ನು ಹೆರುವುದರ ಕುರಿತಾದ ಸಿಟ್ಟು ಸಮೀರಾಳಲ್ಲಿದೆ.

ಚಪ್ಪಲಿಯನ್ನು ಹೆಣ್ಣಿನ ಬದುಕಿಗೆ ಪ್ರತಿಮೆಯಾಗಿಸುತ್ತಾ, ಸವಕಲಾದಾಗ ಕಿತ್ತೆಸೆಯಲು ಸಾಧ್ಯವಾಗುವಂತೆ ಬಹುಪತ್ನಿತ್ವದ ಇಸ್ಲಾಂನ ಒಳಗೂ ಪತ್ನೀ ಧರ್ಮಕ್ಕೆ ಮಾನ್ಯತೆ ಇಲ್ಲದೇ ಹೋದಾಗ ಅದನ್ನು ಪ್ರಶ್ನಿಸುವ ಹೊಸ ಪೀಳಿಗೆ ಆಧುನಿಕತೆಯನ್ನು ಪ್ರತಿನಿಧಿಸುತ್ತದೆ. ಪರಂಪರೆಯನ್ನು ನಿರಾಕರಿಸುವುದರೊಂದಿಗೆ ಯಾಜಮಾನ್ಯತೆಯ ಸಮಾನ ಮನಸ್ಕರ ಬಾಳುವೆ ಸಹ್ಯವಾದುದು ಎನ್ನುವ ಆಶಯ ಇಲ್ಲಿದೆ.

ಗಂಗಾ ಪಾದೇಕಲ್ ರವರ,

ಪಿಂಡ (ಹೆಜ್ಜೆ ಮೂಡದ ಹಾದಿಯಲ್ಲಿ, ೧೯೯೨)

ಅಮ್ಮಾ (ಹೊಸಹೆಜ್ಜೆ, ೧೯೯೬)

'ಪಿಂಡ' ಕಥೆಯು ಹಳೆಯ ನಂಬಿಕೆಗಳನ್ನು ಪ್ರಶ್ನಿಸುತ್ತಾ ಅದಕ್ಕೆ ಉತ್ತರ ಕಂಡುಕೊಳ್ಳಲಾರದೆ ದ್ವಂದ್ವದಲ್ಲಿ ಸಿಲುಕುವ ಮಕ್ಕಳ ಮನಸ್ಥಿತಿಯನ್ನು ಚಿತ್ರಿಸುತ್ತದೆ. 'ಎನ್ನ ಅರುಣ ಕೂಗುತ್ತೆ ಹೇಳಿ ಅಪ್ಪಂಗೆ ಬೇಜಾರಾವುತ್ತು ಮತ್ತೆ ಅಪ್ಪ ಇಲ್ಲಿಗೆ ಬಪ್ಪವೇ ಇಲ್ಲೆ' (ಹೆಜ್ಜೆ ಮೂಡುವ ಹಾದಿಯಲ್ಲಿ, ಪು. ೩೪, ೧೯೯೨) ಎನ್ನುವ ಅಕ್ಕನ ಮಾತು ತಂಗಿಯಲ್ಲಿ ಉಂಟುಮಾಡುವ ಆತಂಕ, ಹಾಗೂ ಮರುಕ್ಷಣಕ್ಕೆ ಕೇಳುವ 'ಸುಟ್ಟು ಹೋದ ಅಪ್ಪ ಹೇಗೆ ಬತ್ತಾವು' (ಅದೇ. . . ಪು. ೫೪)ಎಂಬ ಪ್ರಶ್ನೆ ಹುಟ್ಟು-ಸಾವುಗಳಾಚೆಗಿನ ಉತ್ತರ ಕಂಡುಕೊಳ್ಳಲಾಗದ ಪ್ರಶ್ನೆಯಾಗಿಯೇ ಉಳಿಯುತ್ತದೆ.

'ಅಮ್ಮಾ' ಕಥೆಯ ದೀಪಿಕಾ ತನ್ನ ತಾಯಿಯನ್ನು, ಮನೆಯ ಕಷ್ಟವನ್ನು ಅರ್ಥಮಾಡಿಕೊಳ್ಳಲಾರದ ಆಧುನಿಕ ಮನಸ್ಥಿತಿಯ ಹುಡುಗಿ. ತಿಂಡಿ ಸರಿಯಾಗಿಲ್ಲವೆಂದೋ, ಅಮ್ಮ ಕೇಳಿದಷ್ಟು ಹಣ ಕೊಟ್ಟಿಲ್ಲವೆಂದೋ ಅಮ್ಮನನ್ನು ಕೀಳಾಗಿ ಬೈಯುವ ದೀಪಿಕಾ ಶಾಲೆಯಲ್ಲಿ ಟೀಚರ್ ಹೇಳಿದ ಬೋಧನೆಯ ಮಾತುಗಳಿಂದ ಪ್ರಭಾವಿತಳಾಗಿ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಡುತ್ತಾಳೆ. ತಾಯಿಯ ಮಹತ್ವವನ್ನು ಮನಗಾಣುವ ದೀಪಿಕಾ ಪ್ರಜ್ಞಾವಂತ ಹೆಣ್ಣಾಗಿ ಈ ಕಥೆಯಲ್ಲಿ ಗೋಚರಿಸುತ್ತಾಳೆ. ಇಲ್ಲಿ ತಾಯಿ ಹಾಗೂ ಮಗಳ ಆಲೋಚನೆಗಳ ನಡುವೆ ಅಂತರವಿದೆ.

ಪರಂಪರೆಯ ವಿಚಾರಧಾರೆಗಳನ್ನು ಪ್ರಶ್ನೆ ಮಾಡುತ್ತಾ ಸಂಪ್ರದಾಯಗಳ ಹಿಂದಿರುವ ಅರ್ಥಗಳನ್ನು ಅನ್ವೇಷಿಸುವ ಪ್ರಯತ್ನಗಳು ನಡೆಯುತ್ತವೆ. ಕಂದಾಚಾರಗಳಿಗೆ ಬಲಿ ಬೀಳದೆ, ತಲೆಬಾಗದೆ ಹುಟ್ಟು -ಸಾವಿನ ಮಧ್ಯದ ಬದುಕಿನ ಅರ್ಥ ಗ್ರಹಿಕೆ ಮುಖ್ಯ ಆಶಯವಾಗಿ ಗೋಚರಿಸುತ್ತದೆ. ಆಧುನಿಕತೆಯ ಸ್ವರೂಪಗಳು ಬೇರೆ ಬೇರೆ ರೀತಿಯಲ್ಲಿ ಪ್ರತಿಫಲನಗೊಳ್ಳುವಾಗ ಸುಶಿಕ್ಷಿತ ಹೆಣ್ಣುಮಗಳೊಬ್ಬಳು ಪರಂಪರೆಯ ಜೊತೆಗೆ ಸಂಘರ್ಷ ನಡೆಸುತ್ತಲೇ ಬದುಕನ್ನು ಕಟ್ಟಿಕೊಳ್ಳಬೇಕಾದ ಎಚ್ಚರವೂ ಇಲ್ಲಿದೆ.

ವೈದೇಹಿಯವರ,

ಮನೆಯವರೆಗಿನ ಹಾದಿ (ಅಲೆಗಳಲ್ಲಿ ಅಂತರಂಗ, ೨೦೦೬)

'ಮನೆಯವರೆಗಿನ ಹಾದಿ' ಕಥೆಯಲ್ಲಿ ಪರಂಪರೆ ಹಾಗೂ ಆಧುನಿಕತೆಗಳ ಸಂಘರ್ಷವಿದೆ. ರಸ್ತೆ ಮಾಡುವುದಕ್ಕಾಗಿ ಮರ ಕಡಿದದ್ದು ಹಿರಿಯರಿಗೆ ಅಸಮಾಧಾನವನ್ನು ಉಂಟುಮಾಡಿದರೆ, ಉಳಿದವರು ಅದರಿಂದ ಅನೇಕ ರೀತಿಯ ಲಾಭವಾಯಿತು ಎಂದು ಹಿಗ್ಗುತ್ತಾರೆ.

ಒಂದು ದೊಡ್ಡ ಸಂಸಾರದ ಒಳಗಿನ ವ್ಯವಹಾರ, ಪರಸ್ಪರ ಕಿಚ್ಚು, ಅಸಮಾಧಾನಗಳು ಈ ಕಥೆಯಲ್ಲಿ ನಿರೂಪಿತವಾಗಿವೆ. ಮನೆಯ ಯಜಮಾನಿಕೆ ಕಿರಿಯರ ಕೈಗೆ ಬಂದಾಗ ಮನೆಯ ವ್ಯವಸ್ಥೆಯಲ್ಲಾಗುವ ಏರು - ಪೇರುಗಳು ಎಷ್ಟೆಂಬುದು ಅರ್ಥವಾಗುತ್ತದೆ. ಕಲ್ಯಾಣತ್ತೆಗೆ ವಾಸ್ತೇವಗಿದ್ದ ಸೌಕರ್ಯ ತನ್ನ ಮಗನಿಗಿಲ್ಲ ಎನ್ನುವ ಕೊರಗು, ರುಕ್ಮಿಣತ್ತೆ ಹಾಲು ಮಾರಿ ದುಡ್ಡು ಮಾಡುತ್ತಾಳೆ ಎಂಬ ಸಿಟ್ಟು – ಈ ಮುಂತಾದ ಅಂಶಗಳಿಂದ ಈ ಕಥೆ ಕೌಟುಂಬಿಕ ಸಾಮರಸ್ಯದ ಕೊರತೆಯಿಂದ ಬಳಲುತ್ತದೆ.

ಪರಂಪರೆಯ ಅವಿಭಕ್ತ ಕುಟುಂಬಗಳು ವಿಭಕ್ತವಾಗುತ್ತಾ ಹೋದ ಹಾಗೆ ಬದುಕಿನ ಧೋರಣೆಗಳು ಬದಲಾಗುತ್ತವೆ ; ಆ ಮೂಲಕ ಹಳೆ ತಲೆಮಾರು ಮತ್ತು ಹೊಸ ಪೀಳಿಗೆಯ ಮಧ್ಯೆ ಸಂಘರ್ಷವು ಅರ್ಥ ಪೂರ್ಣವಾಗಿ ಗೋಚರಿಸುತ್ತದೆ. ಆಧುನಿಕತೆಯ ಕೊಡುಗೆಯೇ ಬದುಕಿನ ಸುಖವನ್ನು ಸೂರೆಗೊಳ್ಳುವುದಾದರೆ, ಪರಂಪರೆಯ ಮೌಲ್ಯವೇ ಹೊಂದಾಣಿಕೆ, ಅನುಸರಣೆಯೇ ಮುಖ್ಯವೆಂದು ಸಾರಿ ಹೇಳುತ್ತಾ ಸಂಘರ್ಷದ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಅಧ್ಯಾಯ -೭

ಸ್ತ್ರೀಯಾತ್ಮಕತೆಯ ನೆಲೆ

೭.೧. ವೈಯಕ್ತಿಕ ನೆಲೆ
೭.೨. ಕೌಟುಂಬಿಕನೆಲೆ
೭.೩. ಧಾರ್ಮಿಕ ನೆಲೆ
೭.೪. ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ

ಅಧ್ಯಾಯ-೭

ಸ್ತ್ರೀಯಾತ್ಮಕತೆಯ ನೆಲೆ

೧೯೭೦ರ ಹೊತ್ತಿಗೆ ಭಾರತಕ್ಕೆ ಕಾಲಿರಿಸಿದ ಸ್ತ್ರೀವಾದವು ಇಲ್ಲಿ ಹೆಣ್ಣುಮಕ್ಕಳ ಆಲೋಚನಾ ರೀತಿಯನ್ನು ಹಾಗೂ ಬದುಕಿನ ಕ್ರಮವನ್ನೇ ಬದಲಾಯಿಸಿತು. ಇದು ೨೦ನೇ ಶತಮಾನದ ಬಹು ಮಹತ್ವದ ಬೆಳವಣಿಗೆ. ಹೆಣ್ಣು ತನ್ನನ್ನು ತಾನು ಅರ್ಥಮಾಡಿಕೊಂಡು ತನ್ನ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವ ಕಡೆಗೆ ಈ ವಾದ ಪ್ರೇರಣೆ ನೀಡಿತು ಎನ್ನಬಹುದು. ಮಹಿಳಾ ಸಾಹಿತ್ಯದ ಸ್ವರೂಪವೂ ಗಮನಾರ್ಹ ಬದಲಾವಣೆಯನ್ನು ಕಂಡಿತು. ಬೇರೆ ಬೇರೆ ಸಾಹಿತ್ಯ ಪಂಥಗಳ ಪ್ರಭಾವ ಈ ಕಾಲದ ಲೇಖಕಿಯರ ಮೇಲಿದ್ದರೂ ಅವರ ಸಾಹಿತ್ಯದ ವಸ್ತುವಿನ ಮೇಲೆ ಸ್ತ್ರೀವಾದದ ಪ್ರಭಾವವೇ ಕಾಣಿಸಿಕೊಂಡಿತು.

ಪಾಶ್ಚಾತ್ಯ ದೇಶಗಳಲ್ಲಿ ಲಿಂಗ, ಜಾತಿ, ಲಿಂಗ ತಾರತಮ್ಯ ಹಾಗೂ ಬಂಡವಾಳಶಾಹಿ ಸಮಾಜದ ವಿರುದ್ಧ ಒಂದು ರಾಜಕೀಯ ಅನಿವಾರ್ಯವಾಗಿ ಹುಟ್ಟಿಕೊಂಡ ಸ್ತ್ರೀವಾದವು ಒಂದು ಚಳುವಳಿಯಾಗಿ ರೂಪುಗೊಂಡಿತು, ಮಾತ್ರವಲ್ಲ ಜಗತ್ತಿನ ಎಲ್ಲಾ ದೇಶಗಳ ಹೆಣ್ಣುಮಕ್ಕಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಾನ – ಮಾನಗಳಲ್ಲಿ ಬದಲಾವಣೆಯನ್ನು ತಂದಿತು. ಮಹಿಳಾ ಸಾಹಿತ್ಯದ ಸ್ವರೂಪ, ಗೊತ್ತು – ಗುರಿಗಳು ಸ್ತ್ರೀವಾದ ದೃಷ್ಟಿಕೋನದ ಹಿನ್ನೆಲೆಯಲ್ಲಿ ರೂಪುಗೊಳ್ಳತೊಡಗಿತು. ನಿಜವಾಗಿ ಹೇಳಬೇಕೆಂದರೆ ಮಹಿಳಾ ಸಾಹಿತ್ಯದ ಕುರಿತಾದ ಗಂಭೀರವಾದ ಚರ್ಚೆ ಆರಂಭವಾದದ್ದೇ ೧೯೭೦ರ ನಂತರ.

ಈ ಕಾಲಘಟ್ಟದಲ್ಲಿ ಬರೆದ ಅನೇಕ ಲೇಖಕಿಯರು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಬದುಕಿನ ಹುಡುಕಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಮ್ಮ ಅಸ್ಮಿತೆಯ ನೆಲೆಗಳನ್ನು ಕಂಡುಕೊಂಡರು. ಕರಾವಳಿಯ ಲೇಖಕಿಯರ ಕಥೆಗಳನ್ನು ಗಮನಿಸಿದಾಗಲೂ ಈ ನೆಲೆ ಸ್ಪಷ್ಟವಾಗುತ್ತದೆ. ಈ ಕಾಲಘಟ್ಟದ ಮಹಿಳಾ ಸಾಹಿತ್ಯವನ್ನು ಮುಖ್ಯವಾದ ಮೂರು ನೆಲೆಗಳಲ್ಲಿ ಕಾಣಬಹುದು. ಅವುಗಳೆಂದರೆ,

೧. ಮಹಿಳೆಯರನ್ನು ಕೇಂದ್ರವಾಗುಳ್ಳ ಸಾಹಿತ್ಯ

೨. ಮಹಿಳೆಯರಿಂದ ರಚಿತವಾದ ಸಾಹಿತ್ಯ

೩. ಮಹಿಳಾವಾದಿಯಾದ ಸಾಹಿತ್ಯ

ಕನ್ನಡ ಸಾಹಿತ್ಯ ಆರಂಭದ ಪುಟಗಳಿಂದಲೂ ಸಾಹಿತ್ಯದಲ್ಲಿ ಮಹಿಳೆ ಕೇಂದ್ರವಾಗಿ ಕಾಣಿಸಿಕೊಂಡಿದ್ದಾಳೆ. ಇದು ಪುರುಷ ನಿರ್ಮಿತವಾಗಿದ್ದರೂ ಮಹಿಳೆಯನ್ನು ಮುಖ್ಯ ಪಾತ್ರಗಳಲ್ಲಿ ವಿಶ್ಲೇಷಿಸಿದೆ.

ಮಹಿಳೆಯರನ್ನೇ ಕೇಂದ್ರವಾಗಿರಿಸಿ ಬರೆದ ಮಹಿಳಾ ಬರಹಗಾರರೂ ಇದ್ದಾರೆ. ಕಥಾ ಸಾಹಿತ್ಯದ ದೃಷ್ಟಿಯಿಂದ ಗಮನಿಸಿದರೆ, ಮಹಿಳೆಯರಿಂದ ರಚಿತವಾದ ಸಾಹಿತ್ಯ ಕಾಣಿಸಿಕೊಳ್ಳುವುದೇ ಹತ್ತೊಂಬತ್ತನೆ ಶತಮಾನದ ಕೊನೆ ಹಾಗೂ ಇಪ್ಪತ್ತನೆ ಶತಮಾನದ ಆದಿಯಲ್ಲಿ . ಇವರೆಲ್ಲ ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡು ಬರೆದರೆಂದು ಸಾರಾ ಸಗಟಾಗಿ ಹೇಳುವಂತಿಲ್ಲ. ಬರೆಯುವ ಅವಕಾಶವನ್ನೇ ಮೊತ್ತ ಮೊದಲ ಬಾರಿಗೆ ಪಡೆದು ಹೊರ ಪ್ರಪಂಚಕ್ಕೆ ತೆರೆದುಕೊಂಡ ಮಹಿಳಾ ಸಾಹಿತ್ಯದ ಆರಂಭದ ದಿನಗಳಲ್ಲಿ ಭಕ್ತಿಯ ಪರಾಕಾಷ್ಠೆಯನ್ನಷ್ಟೇ ಕಾಣಲು ಸಾಧ್ಯವಾಗಿತ್ತೇ ಹೊರತು ಸಾಮಾಜಿಕ ಕಳಕಳಿಯನ್ನಲ್ಲ. ಚಾರಿತ್ರಿಕವಾಗಿ ಇಂತಹ ಬದಲಾವಣೆಗಳು ಬಹಳ ಮುಖ್ಯವಾದುವುಗಳು. ಆಧುನಿಕತೆಯ ಕೊಡುಗೆಯಾಗಿ ಪಡೆದ ಶಿಕ್ಷಣದಿಂದ ಹುಟ್ಟಿಕೊಂಡ ಪ್ರಜ್ಞೆ, ಅದರ ಆಳದಲ್ಲಿ ಹುಟ್ಟಿದ ಅರಿವು, ಹೆಣ್ಣುಮಕ್ಕಳು ತಮ್ಮನ್ನು ತಾವು ಅರ್ಥೈಸಿಕೊಳ್ಳಲು ಮಾಡಿದ ಪ್ರಯತ್ನಗಳಾದವು. ೧೯೭೫ ರಿಂದ ಈಚೆಗೆ ಮಹಿಳಾವಾದಿಯಾದ ಸಾಹಿತ್ಯವು ಹೆಚ್ಚು ಗಟ್ಟಿಗೊಳ್ಳಲು ಮತ್ತು ಅರ್ಥಪೂರ್ಣವಾಗಲು ಸಾಧ್ಯವಾಯಿತು.

ಪುರುಷನಿಗೆ ಹೋಲಿಸಿದರೆ ಮಹಿಳೆಯ ಅನುಭವ, ಅವಕಾಶಗಳು ಅಧಿಕ. ಒಂದು ವಿಷಯವನ್ನು ಮಹಿಳೆ ಗ್ರಹಿಸುವುದಕ್ಕೂ, ಪುರುಷ ಗ್ರಹಿಸುವುದಕ್ಕೂ ವ್ಯತ್ಯಾಸವಿದೆ. ಹಾಗಾಗಿ ಈ ವ್ಯತ್ಯಾಸ ಅಭಿವ್ಯಕ್ತಿಯಲ್ಲಿಯೂ ಕಾಣಿಸಿಕೊಳ್ಳುತ್ತದೆ. ಮಹಿಳೆಯ ಕನಸು, ಅವಳ ಅನುಭವಗಳು ಈ ಭಿನ್ನತೆಗೆ ಕಾರಣ. ಈ ಹಿನ್ನೆಲೆಯಲ್ಲಿ ಮಹಿಳಾ ಸಾಹಿತ್ಯವನ್ನು ನೋಡುವ ಅಗತ್ಯವಿದೆ.

೭.೧. **ವೈಯುಕ್ತಿಕ ನೆಲೆ :**

ಮಹಿಳಾ ಸ್ವಾತಂತ್ರ್ಯದ ಗಟ್ಟಿ ದನಿಗಳು ಗೋಚರಿಸಲು ಆರಂಭವಾದಂದಿನಿಂದ ಹೆಣ್ಣು ತನ್ನ ದೇಹರಚನೆಯ ಕಾರಣಕ್ಕೆ ಆಗುತ್ತಿರುವ ಅನ್ಯಾಯಗಳನ್ನು ಗುರುತಿಸುತ್ತಲೇ ತಾನು ಹೆಣ್ಣು ಎನ್ನುವ 'ಸತ್ಯ'ವನ್ನು ಹೀಯಾಳಿಸದೆ ಧಿಕ್ಕರಿಸದೆ, ಕೀಳರಿಮೆಗೊಳಿಸದೆ ಹೆಮ್ಮೆಯಿಂದ ಒಪ್ಪಿಕೊಳ್ಳುವ ಚಿಂತನೆಯ ಮಾದರಿಗಳು ವ್ಯಕ್ತಿಗತವಾಗಿಯೇ ರೂಪುಗೊಳ್ಳುತ್ತಾ ಬಂದಿವೆ. ಹಾಗಾಗಿ ಅಂತಹ ನೆಲೆಯ ವೈಯುಕ್ತಿಕ ಚಿಂತನೆಗಳು ಮಹಿಳಾ ಅಸ್ಮಿತೆಯ ದನಿಯನ್ನು ಬಹಳ ಗಟ್ಟಿಯಾಗಿ ದಾಖಲುಗೊಳಿಸುತ್ತವೆ. ಪರಂಪರೆಯಿಂದ ಮಹಿಳೆಯ ಬೌದ್ಧಿಕತೆಯ ಬಗೆಗೆ ಆಕೆಯ ತರ್ಕ, ಯೋಚನಾ ಲಹರಿಗಳ ಬಗೆಗೆ ಬಹಳ ಸಂದೇಹದಿಂದ ಮತ್ತು ಅಪನಂಬಿಕೆಯ ಮೈಲಿಗೆಯ ನೆಲೆಯಿಂದ ಗ್ರಹಿಸುತ್ತಿದ್ದವರಿಗೆ ವ್ಯಕ್ತಿನಿಷ್ಠತೆಯ ಜೊತೆಗೆ ವಸ್ತುನಿಷ್ಠತೆಯನ್ನು ನಿರೂಪಿಸುವ ಕಥನಗಳ ಶೈಲಿ ಇಲ್ಲಿದೆ. ಮಹಿಳಾ ಅಸ್ಮಿತೆ ಹೆಣ್ಣನ್ನು ವೈಭವೀಕರಿಸದೆ ಅಪಭ್ರಂಶಗೊಳಿಸದೆ ಹೆಣ್ಣನ್ನು ಹೆಣ್ಣಾಗಿಯೇ ನೋಡುವ, ಗಟ್ಟಿದನಿಯ ಚಿಂತನೆಗಳು ಬಹಳ ಮುಖ್ಯವಾಗುತ್ತವೆ. ಇಲ್ಲೆಲ್ಲೂ ಪುರುಷನಿಷ್ಠ ಯೋಚನೆಯ ಹೆಣ್ಣಿನ ಪರಿಕಲ್ಪನೆಯ ವೈಭವೀಕರಣಗಳಿಲ್ಲ.

ಬದಲಾಗಿ ಹೆಣ್ಣೆಂಬ ಸತ್ಯಕ್ಕೆ ಸಾಕ್ಷಾತ್ಕಾರಗೊಳ್ಳುವ ಚಿಂತನೆ ಮುಖ್ಯವಾಗುತ್ತದೆ. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು.

ಮಿತ್ರಾ ವೆಂಕಟ್ರಾಜ್‌ರವರ,

ಮಗಳು ಬಂದಳು (ರುಕುಮಾಯಿ, ೧೯೯೦)

ಹೊಂಡಗಳು (ರುಕುಮಾಯಿ, ೧೯೯೦)

ಕೊನೆಯ ದಿನ (ರುಕುಮಾಯಿ, ೧೯೯೦)

ಸೂಸನಳ ಪ್ರಬಂಧ (ರುಕುಮಾಯಿ, ೧೯೯೦)

ಮಾಯಕದ ಸತ್ಯ (ಮಾಯಕದ ಸತ್ಯ, ೨೦೧೦)

ಸೋಫಿ ಕಟ್ಟಿದ ಮನೆ (ಮಾಯಕದ ಸತ್ಯ, ೨೦೧೦)

ಹಾಡೊಂದರ ಗುಂಗು (ಮಾಯಕದ ಸತ್ಯ, ೨೦೧೦)

ಕೊಂಡಿ ಕಳಚಿದಾಗ (ಹಕ್ಕಿ ಮತ್ತು ಅವಳು, ೧೯೯೭)

ಸಮಯವನ್ನು ನೇಯ್ದ ಮಗ್ಗ (ಹಕ್ಕಿ ಮತ್ತು ಅವಳು, ೧೯೯೭)

ಅಲ್ಲೇ ಇರು... (ಹಕ್ಕಿ ಮತ್ತು ಅವಳು, ೧೯೯೭)

'ಮಗಳು ಬಂದಳು' ಕಥೆಯ ಲಕ್ಷ್ಮೀದೇವಿ ಸಣ್ಣ ವಯಸ್ಸಿಗೆ ಕೆಮ್ಮಾಡಿ ಮನೆಗೆ ಮದುವೆಯಾಗಿ ಬಂದವಳು. ತಾನು ಹುಟ್ಟಿ ಬೆಳೆದ ಮನೆಯ ಸ್ವಚ್ಛಂದ ಪರಿಸರಕ್ಕೂ, ಕೆಮ್ಮಾಡಿ ಮನೆಯ ಗಂಭೀರ ವಾತಾವರಣಕ್ಕೂ ಅಜಗಜಾಂತರ ಕಂಡವಳು. ತವರುಮನೆಯ ಬಗೆಗಿನ ತನ್ನ ತಂದೆ – ತಾಯಿಯರ ಬಗೆಗಿನ ಪ್ರೀತಿ ಎಲ್ಲಾ ಹೆಣ್ಣುಮಕ್ಕಳಂತೆ ಲಕ್ಷ್ಮೀಯಲ್ಲೂ ಸಹಜವಾದದ್ದು. 'ಬೊಂಡ ಅಂದ್ರೆ ಅಪ್ಪಂಗೆ ಪ್ರಾಣ' (ರುಕುಮಾಯಿ, ಪು.೨೬, ೧೯೯೦) ಎಂದು ಐತಾಳರ ಬಳಿ ಲಕ್ಷ್ಮೀದೇವಿ ಹೇಳುವ ಮಾತಿನಲ್ಲಿ ಇದು ಸ್ಪಷ್ಟವಾಗುತ್ತದೆ. ತವರಿಗೆ ಕಳುಹಿಸದೆ ಮುದ್ದಿನಿಂದ ನೋಡಿಕೊಳ್ಳುವ ಅತ್ತೆ ಇದ್ದಾಗಲೂ ಅದು ಸ್ವರ್ಗವಾಗುವುದಕ್ಕೆ ಸಾಧ್ಯವಿಲ್ಲ. ಮಗಳನ್ನು ಕಾಣುವುದಕ್ಕಾಗಿ ಲಕ್ಷ್ಮೀದೇವಿಯ ತಂದೆ ಆಡಿದ ನಾಟಕ, ಮಗಳ ಮೇಲಿನ ಪ್ರೀತಿಯ ದ್ಯೋತಕ. ಹೆಣ್ಣೊಬ್ಬಳಿಗೆ ತನ್ನದೇ ಆದ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವಿರುವ ಸ್ಥಿತಿ ಸೀತಮ್ಮನ ಸೊಸೆ ಲಕ್ಷ್ಮೀದೇವಿಯದು.

'ಹೊಂಡಗಳು' ಕಥೆಯ ಭಾರತಿಯು ತನ್ನ ಬಾಲ್ಯ, ಕಳೆದುಕೊಂಡ ತಂದೆ – ತಾಯಿಯರನ್ನು ನೆನಪು ಮಾಡಿಕೊಳ್ಳುತ್ತಾ ಬಾಲ್ಯವನ್ನೇ ಮರೆತುಬಿಡಲು ಪ್ರಯತ್ನಿಸುತ್ತಾಳೆ. ಅಮ್ಮನ ಒದ್ದಾಟದ ಬದುಕು ಭಾರತಿಯನ್ನು

ಇಂತಹ ಯೋಚನೆಗೆ ಎಡೆಕೊಡುತ್ತದೆ. ಬದಿಯ ಮನೆಯ ಮೆಹತಾರ ಸಾವು ಅವಳಿಗೆ ಬೇರೆಯಾರದ್ದೋ ಸಾವಾಗಿರದೇ ತನ್ನ ಹತ್ತಿರದವರ ಸಾವೇ ಆಗಿತ್ತು. ದುಃಖದಲ್ಲಿ ಒರಗಿ ಕೂತ ಭಾರತಿಯ ಅಸ್ತವ್ಯಸ್ತವಾದ ಕುಂಕುಮವನ್ನು ನೋಡಿ, 'ದೇವಿ ಬಂದಳೆಂದು ಕಾಣುತ್ತದೆ. ಮೆಹತಾಜಿ ದೇವಿಯ ಆರಾಧಕರಾಗಿದ್ದರಂತೆ' (ರುಕುಮಾಯಿ, ಪು. ೫೪, ೧೯೯೦) ಎಂಬ ಸಾವಿನ ಮನೆಯ ಮಾತುಗಳು ಭಾರತಿಗೆ ಮೆಹತಾಜಿಯವರ ಬಗೆಗಿದ್ದ ಪ್ರೀತಿ, ಗೌರವವನ್ನು ಸೂಚಿಸುತ್ತದೆ. ಮನುಷ್ಯ ಸಂಬಂಧದ ಶ್ರೇಷ್ಠತೆಯನ್ನು ಈ ಕಥೆ ಕಟ್ಟಿಕೊಡುತ್ತದೆ.

'ಕೊನೆಯ ದಿನ' ಕಥೆಯಲ್ಲಿ ಪ್ರೀತಿಯಿಂದ ಸಾಕಿ ಬೆಳೆಸಿದ ತಾಯಿಯ ಪಾಲಿಗೆ ಮಗನೇ ರಾಕ್ಷಸನಾದ ಪರಿಯ ಚಿತ್ರಣವಿದೆ. ಮೈಸುಟ್ಟುಕೊಂಡು ಸಾವು - ಬದುಕಿನ ನಡುವೆ ಒದ್ದಾಡುತ್ತಿರುವ ಮೋರಿಬಾಯಿಯ ಸೇವೆಗಾಗಿ ಬಂದು ನಿಂತ ರಾಜಿಗೆ ಕೊನೆಗೆ ಪೋಲಿಸಿನವರನ್ನು ಕಂಡಾಗ ತಾನು ಮಾಡಿದ ಪಾಪಕೃತ್ಯದ ಅರಿವಾಗುತ್ತದೆ. ತಾಯಿ – ಮಗನ ಸಂಬಂಧಕ್ಕೆ ತಾನು ಮುಳುವಾದೆನಲ್ಲಾ ಎಂಬ ನೋವು ಆಕೆಯನ್ನು ಬಾಧಿಸುತ್ತದೆ. ಇನ್ನೊಬ್ಬರ ಬದುಕಿಗೆ ಕೊಳ್ಳಿಯಿಟ್ಟ ಧೂರ್ತೆಯಾಗಿ ಇಲ್ಲಿನ ರಾಜಿ ಕಾಣಿಸುತ್ತಾಳೆ. ಮೋರಿಬಾಯಿಯ ಬಾಯಿಂದ ಬಂದ 'ತಾಟಕಿ, ನಿನಗಿಂತ ಎಷ್ಟೋ ಸಣ್ಣವನವ. ನಿನಗೆ ಮಗನ ಸಮಾನ. ಕಷ್ಟದಲ್ಲಿ ಇರುವವಳನ್ನು ತಂದು ಸಾಕಿದ್ದಕ್ಕೆ ಮಹದುಪಕಾರ ಮಾಡಿದೆಯಮ್ಮ. ಸಾಕೋಸಾಕು ನಿನ್ನ ಸಹವಾಸ', (ರುಕುಮಾಯಿ, ಪು. ೬೨, ೧೯೯೦) ಎಂಬ ಮಾತು ಮತ್ತೆ ರಾಜಿಯನ್ನು ವಾಸ್ತವ ಪ್ರಪಂಚಕ್ಕೆ ತಂದುಬಿಡುತ್ತದೆ.

'ಸೂಸನಳ ಪ್ರಬಂಧ' ಕಥೆಯಲ್ಲಿ ವಿದೇಶಿ ಹೆಣ್ಣು ಮಗಳೊಬ್ಬಳ ಸ್ವಚ್ಛಂದ ಬದುಕು ರಮೆಯನ್ನು ದಂಗುಬಡಿಸುತ್ತದೆ. ಆಚಾರ, ನಂಬಿಕೆಗಳಿಗೆ ಹೊಸ ಭಾಷ್ಯ ಬರೆದ ಸೂಸನಳ ಬದುಕು ರಮೆಗೆ ಕೊನೆಯವರೆಗೂ ಪ್ರಶ್ನೆಯಾಗಿಯೇ ಉಳಿಯಿತು. ಮದುವೆ, ವಿಚ್ಛೇದನ – ಇವೆಲ್ಲಾ ಅರ್ಥವಾಗದ ವಿಚಾರಗಳಾಗಿ ರಮೆಯನ್ನು ಕಾಡುತ್ತವೆ. ಸೂಸನಳ ಪ್ರಬಂಧ ಪೂರ್ತಿಯಾಗದೇ ಅರ್ಧದಲ್ಲಿ ನಿಂತು ಹೋದಂತಾಯಿತು ರಮೆಗೆ.

'ಮಾಯಕದ ಸತ್ಯ' ಕಥೆಯು ನಂಬಿದ ಸುಳ್ಳು ಸತ್ಯದಂತೆ ಭಾಸವಾಗುವ ಮಾಯಕದ ಕಥೆಯಾಗಿದೆ. ಸಾಧಾರಣವಾದ ಸಂಗತಿಯನ್ನು ಅಸಾಧಾರಣವಾಗಿಸಿ, ಕೇಳುಗನನ್ನು ಬೆರಗುಪಡಿಸುವ ಜಾನಪದ ಕಥೆಗಳ ವೈಖರಿಯ ಕಥೆ ಇದಾಗಿದೆ. 'ಸತ್ಯವಂತಿ' ಯ ಸೌಂದರ್ಯದ ವರ್ಣನೆ, ಆಕೆಯನ್ನು ಮಂಜಪ್ಪ ಮದುವೆ ಮಾಡಿಕೊಂಡದ್ದು, ಕೊನೆಗೆ ಸತ್ಯವಂತಿಯ ಕಡೆಗೆ ಶಂಕ್ರಣ್ಣನ ವಕ್ರದೃಷ್ಟಿ ಬಿದ್ದುದು, ಮಂಜಪ್ಪ ಅವನನ್ನು ಮುಗಿಸಿದ್ದು, ಇವೆಲ್ಲಾ ಈ ಕಥೆಯ ಪ್ರಮುಖ ಅಂಶಗಳು. 'ಗಂಡನನ್ನೂ, ಮಿಂಡನನ್ನೂ ಕಳೆದುಕೊಂಡ ಸತ್ಯವಂತಿ ಪಿಶಾಚಿಯಾಗಿ

ಗೋಳಿ ಮರದಲ್ಲಿ ವಾಸಿಸುವುದಕ್ಕೆ ಸುರು ಮಾಡಿದಳು' (ಮಾಯಕದ ಸತ್ಯ, ಪು. ೪, ೨೦೧೦) ಎಂದು ಕುಪ್ಪ ಗುಳ್ಳಿಗೆ ಹೇಳುವ ಮಾತಿನೊಂದಿಗೆ ಕಥೆ ಅಂತ್ಯ ಕಾಣುತ್ತದೆ.

ಸಮಾಜದ ಸಿದ್ಧ ಮಾದರಿಗಳನ್ನು ಮೀರಿದ ಹೆಣ್ಣು ಗಯ್ಯಾಳಿಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಾಳೆ ಮಾತ್ರವಲ್ಲ, ಆ ಕೆಲಸಕ್ಕೆ ಅವಳೊಬ್ಬಳೇ ಕಾರಣವಾಗುತ್ತಾಳೆ. ಹೆಣ್ಣಿನ ಶೀಲವನ್ನು ಶಂಕಿಸುವ ಕಥೆಗಳು ಸೀತೆಯ ಕಾಲದಿಂದಲೂ ಜನರನ್ನು ರಂಜಿಸುತ್ತಿದ್ದವು. ಇದರ ಕುರಿತಾಗಿ ಕಥೆಗಾರ್ತಿಗೆ ಮನಸ್ಸಿನ ಮೂಲೆಯಲ್ಲೆಲ್ಲೋ ಇದ್ದ ಅಸಮಧಾನ ಇಂತಹ ಕಥೆಗಳ ರಚನೆಗೆ ಕಾರಣವಾಗಿರಬಹುದು.

'ಸೋಫಿ ಕಟ್ಟಿದ ಮನೆ' ಕಥೆಯಲ್ಲಿ ಪರಂಪರೆ ಹಾಗೂ ಆಧುನೀಕತೆಗಳ ಸಂಘರ್ಷವಿದೆ. ಸೋಫಿ ಮುಂಬಯಿಯಂತಹ ನಗರದಲ್ಲಿ ಸುಂದರವಾದ ಒಂದು ಮನೆಯನ್ನು ಕಟ್ಟಿಸುವುದರೊಂದಿಗೆ ಸುಂದರವಾದ ಮನಸ್ಸನ್ನೂ ಕಟ್ಟಿಕೊಂಡಿದ್ದಳು. ಆದರೆ ಆಕೆಯ ಮಗ ಟೋನಿ ಆ ಮನೆಯನ್ನು ಕೆಡವಿ ಆ ಜಾಗದಲ್ಲಿ ತನಗೆ ಬೇಕಾದ ಇನ್ನೊಂದು ಮನೆಯನ್ನು ಕಟ್ಟಿಸುವ ತಯಾರಿ ನಡೆಸುತ್ತಾನೆ. ಅಂದರೆ ಭಾವನೆಗಳ ಸೌಧವನ್ನೇ ಕೆಡವಿ ಹಾಕುವ ಮಟ್ಟದಲ್ಲಿ ಟೋನಿಯಂತವರ ಆಧುನಿಕ ಮನಃಸ್ಥಿತಿ ಕೆಲಸ ಮಾಡುತ್ತದೆ.

ತನ್ನ ಭಾವನೆಗಳಿಗೆ, ತನ್ನ ಬದುಕಿಗೆ ಒಂದು ಮೂರ್ತ ರೂಪಕೊಟ್ಟ, ಅರ್ಥ ತುಂಬಿದ ಸೋಫಿ ಕೈ – ಕಾಲುಗಳ ಶಕ್ತಿಯನ್ನು ಕಳೆದುಕೊಂಡು ತನ್ನ ಮನೆಯಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಅರಿಯಲಾರದ ಸ್ಥಿತಿಯಲ್ಲಿದ್ದಾಳೆ. ಹೆಣ್ಣೊಬ್ಬಳ ಭಾವನೆಗಳಿಗೆ ಬೆಲೆ ಸಿಗಲಾರದ ಸಮಾಜದಲ್ಲಿ ಅವಳ ಬದುಕೂ ಅರ್ಥ ಕಳೆದುಕೊಳ್ಳುತ್ತದೆ. ಕಥೆಗಾರರು ಹೇಳುವ ಹಾಗೆ 'ಬದಲಾವಣೆಯೇ ಜೀವನವಂತೆ. ಆ ಮನೆ ಬದಲಾಗಿ ಈ ಕಟ್ಟಡ. ಆವತ್ತಿನ ನಿಷ್ಕಲ್ಮಷ ಬಾಲಕ ಹೋಗಿ ಈಗಿನ ಈ ಆಸೆಬುರುಕ ಮನುಷ್ಯ. ಬಿದ್ದ ಗಾಯಕ್ಕೆ ಅರಸಿನ ಬೆಲ್ಲ ಒತ್ತಿ, ರಕ್ತ ಇಂಗಿಸಿದ ಸೋಫಿ ಆಂಟಿ ಈಗ ಮನುಷ್ಯ ಬದುಕಿನ ಮೂಲವಾದ ನೆನಪನ್ನೇ ಕಳೆದುಕೊಂಡು ಬದುಕುವ ಜೀವಿ' (ಮಾಯಕದ ಸತ್ಯ , ಪು. ೧೨, ೨೦೧೦)

'ಹಾಡೊಂದರ ಗುಂಗು' ಕಥೆಯ ಹರ್ಷಿತಾ ಗತಕಾಲದ ನೆನಪುಗಳಲ್ಲೇ ಮುಳುಗಿ ಭ್ರಮಾಲೋಕವೊಂದನ್ನು ಸೃಷ್ಟಿಸುತ್ತಾಳೆ. ಹರ್ಷಿತಾಳ ಸೌಂದರ್ಯಕ್ಕೆ ಹಾಗೂ ಪ್ರತಿಭೆಗೆ ಮನಸೋತಿದ್ದ ಹುಡುಗನೊಬ್ಬನ ಕುರಿತಾದ ಯೋಚನೆಗಳು ಅವಳ ದಾಂಪತ್ಯ ಬದುಕಿನ ನೆಮ್ಮದಿಗೆ ಭಂಗವುಂಟುಮಾಡುತ್ತದೆ.

ಹೆಣ್ಣೊಬ್ಬಳಿಗೆ ಎಷ್ಟೋ ಬಾರಿ ಅವಳ ಸೌಂದರ್ಯವೇ ಬದುಕಿಗೆ ಮುಳುವಾಗುತ್ತದೆ ಎಂಬ ಸತ್ಯವನ್ನು ಈ ಕಥೆ ನಿರೂಪಿಸುತ್ತದೆ. ಸೌಂದರ್ಯ ತನ್ನ ಆಯ್ಕೆಯಲ್ಲ. ಆದರೂ ಹೆಣ್ಣು ತನಗೆ ಬೇಕಾದ ಹಾಗೆ ಬದುಕನ್ನು ಕಟ್ಟಿಕೊಳ್ಳುವ ಆನಂದ ಪಡುವ ಅವಕಾಶಕ್ಕೆ ಸಮಾಜ ತಡೆಯೊಡ್ಡುತ್ತದೆ. ದೇಹಕ್ಕೆ ತಡೆಯೊಡ್ಡಬಹುದೇ ಹೊರತು ಮನಸ್ಸಿಗೆ ತಡೆಯೊಡ್ಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಈ ಕಥೆ ಸೂಕ್ಷ್ಮವಾಗಿ ತೆರದಿಡುತ್ತದೆ.

'ಕೊಂಡಿ ಕಳಚಿದಾಗ' ಕಥೆಯ ಗಂಗಮ್ಮ ಊರಿನ ಸುದ್ದಿಯನ್ನೆಲ್ಲಾ ಕ್ರೋಢೀಕರಿಸಿ ಹೇಳುವುದರ ಮೂಲಕ ತನ್ನ ಬದುಕಿಗೊಂದು ಸಮಾಧಾನ ತಂದುಕೊಂಡವಳು. ವಾಚಾಳಿಯಂತೆ ಕಾಣಿಸಿಕೊಂಡರೂ ಅವಳು ಆಡುವ ಮಾತುಗಳಲ್ಲಿ ಸ್ವಾರ್ಥವಿಲ್ಲ. ತನ್ನ ವೈಯುಕ್ತಿಕ ಹಾಗೂ ಕೌಟುಂಬಿಕ ಜೀವನದಲ್ಲಿ ಸಿಗದೇ ಇರುವ ಸುಖವನ್ನು ಇನ್ನು ಯಾವುದರಿಂದಲೋ ಪಡೆಯುವುದಕ್ಕೆ ಹೆಣ್ಣಿನ ಮನಸ್ಸು ತವಕಿಸುವುದು ಸಹಜ.

ಗಂಗಮ್ಮನ ಮಾತುಗಳು ಹೊಸ ತಲೆಮಾರಿನ ಹೆಣ್ಣುಮಕ್ಕಳಿಗೆ ಕಿರಿಕಿರಿಯೆನಿಸುತ್ತಿತ್ತು. ಆದರೆ ತನ್ನ ಮನಸ್ಸಿನ ಮೂಲೆಯಲ್ಲಿದ್ದ ನೋವು ಇತರರೊಡನೆ ಹರಟೆ ಹೊಡೆಯುವುದರಲ್ಲಿ ಮರೆತು ಹೋಗುತ್ತದೆ, ಎನ್ನುವುದನ್ನು ಗಂಗಮ್ಮನ ಪಾತ್ರ ನಿರೂಪಿಸುತ್ತದೆ. 'ತನ್ನ ಮನೆಯ ಸಮಸ್ಯೆಗಳೇ ಬೇಕಾದಷ್ಟಿರುವಾಗ ಇತರರ ಮನೆಯ ಸುದ್ದಿಗಳು ಇವಳಿಗ್ಯಾಕೆ' ಎಂದು ಯೋಚಿಸುವವರೂ ಇದ್ದಾರೆ. 'ಅವಳಾದ್ದಕ್ಕೆ ಜೀವ ಇಟ್ಕೊಂಡು ತಿರುಗುತ್ತು. ಬೇರೆ ಯಾವಳಾದ್ರೂ ಆಗಿದ್ರೆ, ಕೆರೆಗೋ ಬಾವಿಗೋ ಹಾರ್ಕಣ್ತಿದ್ರು' (ಹಕ್ಕಿ ಮತ್ತು ಅವಳು, ಪು. ೪೫, ೧೯೯೭) ಎನ್ನುವ ಅವಳ ಬಗೆಗಿನ ಮಾತು ಬದುಕಿನ ಅನಿವಾರ್ಯತೆಯನ್ನು ಚಿತ್ರಿಸುತ್ತದೆ.

'ಸಮಯವನ್ನ ನೇಯ್ದ ಮಗ್ಗ' ಕಥೆಯಲ್ಲಿ ಹೆಣ್ಣೊಬ್ಬಳು ಭ್ರಮಾ ಲೋಕವೊಂದನ್ನು ಸೃಷ್ಟಿಸುತ್ತಾಳೆ. ಸಮಯವನ್ನು ನೇಯ್ದ ಮಗ್ಗಕ್ಕಾಗಿ ತನ್ನ ಮಗನೊಂದಿಗೆ ಹೊರಟ ಅಂಜಲಿ ಮಗ್ಗದ ಹುಡುಕಾಟವನ್ನು ದಾರಿಯುದ್ದಕ್ಕೂ ಮಾಡುತ್ತಾಳೆ. ತನ್ನ ಕನಸು, ತನ್ನ ವಾಸ್ತವ ಎಲ್ಲವನ್ನೂ ಆ ಮಗ್ಗದಲ್ಲಿಯೇ ಕಾಣುವ ಅಂಜಲಿ ಹುಡುಕುವುದು ಕೇವಲ ಸಮಯದ ನೇಯ್ಗೆಯನ್ನಷ್ಟೇ ಅಲ್ಲ, ಅದು ಬದುಕಿನ ನೇಯ್ಗೆಯೂ ಹೌದು.

ದಾರಿಯ ಮಧ್ಯದಲ್ಲಿ ಸಿಕ್ಕಿದವರಲ್ಲಿ ಸಮಯವನ್ನು ನೇಯ್ದ ಮಗ್ಗದ ಕುರಿತು ಕೇಳಿದಾಗ ಅವರು ಹೇಳುವ 'ನಿನಗೆ ಹುಚ್ಚು, ಅದು ಎಂದೂ ನಿಲ್ಲದ ಮಗ್ಗವಲ್ಲವೇ?' (ಹಕ್ಕಿ ಮತ್ತು ಅವಳು, ಪು. ೬೮, ೧೯೯೭) ಅನ್ನುವ ಮಾತು ಅವಳಿಗೆ ಸಮಾಧಾನ ತಂದುಕೊಡುತ್ತದೆ. ಅಂಗಡಿಯವನು ಅಂಜಲಿಯೊಡನೆ ಹೇಳುವ 'ಏನಾದ್ರು ಬದಲಾವಣೆ ಬೇಕಾದ್ರೆ

ಹೇಳಿ, ಏನಡ್ಡಿಯಿಲ್ಲ, ಮಾಡಿಕೊಡುವ' (ಅದೇ. . . ಪು. ೭೦) ಎಂಬ ಮಾತು ಬದಲಾಯಿಸಬಹುದಾದ ಯೋಚನೆಗಳ ಹಾಗೂ ಕನಸುಗಳ ಮಗ್ಗವನ್ನು ಸೃಷ್ಟಿಮಾಡುತ್ತದೆ.

'ಅಲ್ಲೇ ಇರು' ಕಥೆಯು ಮುಂಬಯಿಯಂಥ ನಗರದ ಮತೀಯ ಸಂಘರ್ಷವನ್ನು ಚಿತ್ರಿಸುವ ಕಥೆಯಾಗಿದೆ. ಜಾತಿ, ಮತ, ಪಂಥ – ಇವೆಲ್ಲವನ್ನೂ ಮೀರಿ ಬದುಕಲು ಸಾಧ್ಯವಿರುವ ಮನುಷ್ಯನಲ್ಲಿ ಎಲ್ಲೋ ಒಂದು ಕಡೆ ಅವನಿಗೆ ಗೊತ್ತಿಲ್ಲದ ಹಾಗೆ ಜಾತಿ, ಮತದ ಪ್ರಜ್ಞೆಯ ಕಿಡಿ ಕಾಡುತ್ತಿರುತ್ತದೆ. ಅದಕ್ಕೆ ಪೂರಕ ವಾತಾವರಣ ದೊರಕಿದಾಗ ಅದು ಭುಗಿಲೇಳುತ್ತದೆ' ಎಂಬ ಸತ್ಯವನ್ನು ಈ ಕಥೆ ಕಟ್ಟಿ ಕೊಡುತ್ತದೆ.

'ನೀವೇನೂ ಹೆದರಬೇಕಾಗಿಲ್ಲ. ನಾನಿಲ್ಲಿ ಕ್ಷೇಮ. ನಮ್ಮವರ ನಡುವೆಯೇ ಇದ್ದೇವಲ್ಲ. ಇನ್ನೇನು ಅಪಾಯವಿಲ್ಲ' (ಹಕ್ಕಿ ಮತ್ತು ಅವಳು, ಪು. ೯೪, ೧೯೯೭) ಎಂಬ ಝೋಬುನ್ನೀಸಳ ಮಾತು ನಿರೂಪಕಿಯ ಮನಸ್ಸಿಗೆ ಕಿರಿಕಿರಿಯನ್ನುಂಟುಮಾಡುತ್ತದೆ. 'ನಮ್ಮವರು ಎಂದರೆ ನಿಜವಾಗಿಯೂ ಯಾರು ಹಾಗಾದರೆ? ಎಂಬ ಯೋಚನೆಯನ್ನು ಮೂಡಿಸುತ್ತದೆ. ಹಿಂದೊಮ್ಮೆ ಮುಂಬಯಿಗೆ ಬಂದ ಹೊಸತರಲ್ಲಿ 'ಡರ್‌ನೇ ಕೀ ಕೋಯಿ ಬಾತ್ ನಹೀ, ಯೇ ಬಂಬೈ ಹೈ' (ಅದೇ. . . ಪು. ೮೮)ಎಂದು ಆತ್ಮೀಯತೆಯಿಂದ ವಿಶ್ವಾಸ ತುಂಬಿದ ಝೋಬುನ್ನೀಸಳ ಬಾಯಲ್ಲಿ ಇಂತಹ ಮಾತೇ? ನಿರೂಪಕಿ ದಂಗಾಗಿ ಹೋಗುತ್ತಾಳೆ. ಜಾತಿ, ಮತ, ಪಂಥಗಳ ನಡುವೆ ನಮ್ಮನ್ನು ನಾವು ಹುಡುಕಿಕೊಳ್ಳುವ ಅನಿವಾರ್ಯತೆಯ ಕಡೆಗೆ ಕಥೆ ಸಾಗುತ್ತದೆ.

ಕರಾವಳಿಯ ಪರಂಪರೆಯನ್ನು ಅರ್ಥೈಸಿಕೊಂಡು ಬದುಕಿದ ಲೇಖಕಿ ಮಿತ್ರಾ ವೆಂಕಟ್ರಾಜ್‌ರವರು ಮುಂಬೈಯ ನಗರ ಸಂಸ್ಕೃತಿಗೆ ಮುಖಾಮುಖಿಯಾದಾಗ ಆಧುನಿಕತೆಯ ಸ್ವರೂಪದ ಪ್ರತಿಮೆಗಳು ಅಸ್ಮಿತೆಯ ಧ್ವನಿಯಲ್ಲಿ ವಿಭಿನ್ನ ಪಾತ್ರಗಳು ಗೋಚರಿಸುತ್ತವೆ. ಕಥೆಗಳ ಶೀರ್ಷಿಕೆಗಳೇ ಸಾಂಕೇತಿಕವಾದ ಪ್ರತಿಮೆಗಳಾಗಿ ಕಥೆಯ ಅರ್ಥ ವಿಸ್ತಾರವನ್ನು ವಿಶಾಲಗೊಳಿಸುತ್ತವೆ. ಪಾತ್ರಗಳ ವೈವಿಧ್ಯತೆ ಮತ್ತು ಹೆಣ್ತನದ ಸ್ವರೂಪದ ವೈಶಿಷ್ಟ್ಯತೆ ಮಿತ್ರಾ ವೆಂಕಟ್ರಾಜ್‌ರವರ ಕಥೆಗಳಲ್ಲಿನ ಅಸ್ಮಿತೆಯ ತಾತ್ವಿಕ ಸ್ವರೂಪದ್ದಾಗಿವೆ.

ವಿದೇಶಿ ಮಹಿಳೆಯೊಬ್ಬಳನ್ನು ಕಥೆಯ ಪಾತ್ರವಾಗಿಸುತ್ತ ಪರ್ಯಾಯ ಸಮಾಜದ ಚಿತ್ರಣವನ್ನು ಕೊಡುವುದರೊಂದಿಗೆ ಭಾರತೀಯ ಸಮಾಜದ ಒಳಗಡೆ ಹೆಣ್ತನದ ನೆಲೆಗಳನ್ನು ಗುರುತಿಸುವ ಪ್ರಯತ್ನಗಳು ನಡೆಯುತ್ತವೆ.

ವೈಯಕ್ತಿಕವಾಗಿ ಹೆಣ್ಣು ತನ್ನ ದೇಹದ ಕುರಿತಾದ ಸತ್ಯ ಮತ್ತು ಲೋಕದ ಕುರಿತಾದ ಸತ್ಯಗಳನ್ನು ಅರ್ಥೈಸಿಕೊಳ್ಳುತ್ತಾ ಬುದ್ಧಿಯ ತರ್ಕಗಳೊಂದಿಗೆ ಭಾವಕೋಶದ ವಿಸ್ತೃತ ಸ್ವರೂಪವನ್ನು ಸರಿಯಾಗಿ ಮನದಟ್ಟು ಮಾಡಿಕೊಳ್ಳಬೇಕಾದ ವಿಚಾರಗಳನ್ನು ನಿರೂಪಿಸುತ್ತಾರೆ. ಮನುಷ್ಯ ಸಂಬಂಧಗಳಲ್ಲಿ ಬೌದ್ಧಿಕತೆ ಮತ್ತು ಭಾವುಕತೆಯ ವಿಸ್ತೃತ ನೆಲೆಗಳನ್ನು ಗುರುತಿಸುತ್ತಾ, ವೈಯಕ್ತಿಕವಾಗಿ ಹೆಣ್ಣಿನ ಅಸ್ತಿತ್ವದ ಹುಡುಕಾಟವೇ ಇವರ ಕಥೆಗಳಲ್ಲಿ ವಿಶ್ಲೇಷಣೆಗೆ ಒಳಗಾಗುತ್ತದೆ.

ಸಾರಾ ಅಬೂಬಕ್ಕರ್‌ರವರ ,

ಒಂದು ಕಥೆ, ಒಂದು ವ್ಯಥೆ (ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ೧೯೯೬)

ದೋಣಿ ಸಾಗಲಿ (ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ೧೯೯೬)

ನೀರು (ಪಯಣ ಮತ್ತು ಇತರ ಕಥೆಗಳು, ೧೯೯೨)

ಅರ್ಧ ರಾತಿಯಲ್ಲಿ ಹುಟ್ಟಿದ ಕೂಸು (ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ೧೯೯೬)

'ಒಂದು ಕಥೆ, ಒಂದು ವ್ಯಥೆ' ಕಥೆಯು ಗುಣಕ್ಕಿಂತ ಹಣವೇ ಮೇಲು ಎಂದು ಭಾವಿಸಿ ಬದುಕಿನ ನೆಮ್ಮದಿಯನ್ನು ಕಳೆದುಕೊಂಡ ಹೆಣ್ಣೊಬ್ಬಳ ಕತೆ. ಶ್ರೀಮಂತ ಸೊಸೆಗಾಗಿ ಹಂಬಲಿಸಿದ ಅತ್ತೆ ತನ್ನ ಮಗ ಸುಧೀರ ಗುಟ್ಟಾಗಿ ಪ್ರೀತಿಸುತ್ತಿದ್ದ ಹುಡುಗಿಯನ್ನು ನಿರಾಕರಿಸಿ ತನ್ನಿಷ್ಟದಂತೆ ಮದುವೆ ಮಾಡಿಸುತ್ತಾಳೆ. ಅನರ್ಘ್ಯ ರತ್ನವನ್ನು ತಿರಸ್ಕರಿಸಿ, ಹೊಳೆಯುವ ಗಾಜಿನ ಮಣಿಗಾಗಿ ಆಸೆಪಟ್ಟು ಪರಿತಪಿಸುವ ಅತ್ತೆ ಮಧ್ಯಮ ವರ್ಗದ ಹೆಣ್ಣನ್ನು ಪ್ರತಿನಿಧಿಸುತ್ತಾಳೆ. ಹಣದ ವ್ಯಾಮೋಹಕ್ಕೆ ಒಳಗಾದ ಅತ್ತೆಯ ಹೊಯ್ದಾಟವನ್ನು ಈ ಕಥೆ ಚಿತ್ರಿಸುತ್ತದೆ.

'ದೋಣಿ ಸಾಗಲಿ' ಕಥೆಯು ಸಮಾಜದ ಪುರುಷರ ಸ್ವೇಚ್ಛಾಚಾರದ ಬದುಕಿಗೆ ಆತಂಕಪಡುವ ಹೆಣ್ಣುಮಕ್ಕಳ ಸ್ಥಿತಿಯನ್ನು ನಿರೂಪಿಸುತ್ತದೆ. ಮಗಳ ಬಾಣಂತನಕ್ಕಾಗಿ ಊರಿನಿಂದ ಬಂದ ಗಿರಿಜಮ್ಮ ತನ್ನ ಗಂಡನ ಕಾಳಜಿಗಾಗಿ ಸಾವಿತ್ರಿಯನ್ನು ನೇಮಿಸಿ ಬಂದಿರುತ್ತಾಳೆ. ಆದರೆ ಮಗಳ ಮನೆಯ ಎದುರಿನ ಮನೆಯವನ ವ್ಯಭಿಚಾರವನ್ನು ನೋಡಿ ಗಂಡಸರೆಲ್ಲರೂ ಹೀಗೆ ಎಂದು ಅನುಮಾನಪಡುತ್ತಾ ಊರಿಗೆ ಮರಳುತ್ತಾಳೆ. ಗಂಡನೊಂದಿಗಿನ ಸೌಹಾರ್ದ ಬದುಕಿಗಾಗಿ ತುಡಿಯುವ ಹೆಣ್ಣುಮಕ್ಕಳ ಚಿತ್ರಣ ಈ ಕಥೆಯಲ್ಲಿದೆ.

'ನೀರು' ಕಥೆ ಬಡತನ ಹಾಗೂ ಶ್ರೀಮಂತಿಕೆಯ ಬದುಕನ್ನು ಸಂಕೇತಿಸುವ ಕತೆಯಾಗಿದೆ. ಕಥಾನಾಯಕಿ ಭಾರತಿ ನೀರಿಗೆ ಬರವಿಲ್ಲದ ಬಚ್ಚಲು ಮನೆಯನ್ನು ಹುಡುಕುವುದರೊಂದಿಗೆ ಬದುಕನ್ನು ಅರ್ಥಮಾಡಿಕೊಳ್ಳುತ್ತಾಳೆ. ತಾನು ಬಯಸಿದ್ದೆಲ್ಲಾ ಬದುಕಲ್ಲ, ತನಗೆ ದೊರಕಿದ್ದು ಬದುಕು ಎಂಬುದನ್ನು ಮನದಟ್ಟು ಮಾಡುವಲ್ಲಿ ಈ ಕಥೆ

ಯಶಸ್ವಿಯಾಗುತ್ತದೆ. ಈ ಕಥೆಯಲ್ಲಿ ಬಳಕೆಯಾಗಿರುವ ಹೊಗೆ, ನಾಗರಹಾವು ಇವೆಲ್ಲವೂ ಶ್ರೀಮಂತಿಕೆಯ ಕಠೋರ ಮುಖವನ್ನು ಪ್ರತಿಬಿಂಬಿಸುತ್ತವೆ. ಹೊರನೋಟಕ್ಕೆ ಶ್ರೀಮಂತಿಕೆ ಸುಂದರವಾಗಿ ಕಂಡರೂ ಅದರ ಒಳಹೊಕ್ಕು ನೋಡಿದಾಗ ನಿಜವಾದ ಕೊರತೆಗಳು ಗಮನಕ್ಕೆ ಬರುತ್ತವೆ ಎಂಬುದನ್ನು ನೈಜ ನಿರೂಪಣೆಯ ಮೂಲಕ ಕಥೆಗಾರ್ತಿ ಮನದಟ್ಟುಮಾಡುತ್ತಾರೆ.

'ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು' ಕಥೆಯು ಭಾರತ - ಪಾಕಿಸ್ತಾನ ವಿಭಜನೆಯನ್ನು, ಅದರೊಂದಿಗೆ ಕಾಣಿಸಿಕೊಂಡ ಕಾಶ್ಮೀರ ಸಮಸ್ಯೆಯನ್ನು ಅವಳಿ ಮಕ್ಕಳ ಜನನೊಂದಿಗೆ ತಳಕು ಹಾಕುವ ಕಥೆಯಾಗಿದೆ. ಇಲ್ಲಿ ಕತೆಗಾರ್ತಿ ಹುಟ್ಟುವ ಮಗು ಯಾರಿಗೆ? ಎಂಬ ಪ್ರಶ್ನೆಯೊಂದಿಗೆ ಅವಳಿ ಮಕ್ಕಳ ಅಂಟಿಕೊಂಡ ತಲೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ಬೇರ್ಪಡಿಸುವಂತೆ, ದೇಶ ವಿಭಜನೆಯು ಅದು ಕೇವಲ ಭೌಗೋಳಿಕ ವಿಭಜನೆಯಷ್ಟೇ ಆಗದೆ ನೆಲ, ಜಲ, ಭಾಷೆ, ಸಂಬಂಧಗಳ ವಿಭಜನೆಯೂ ಹೌದು ಎಂಬ ಇಂಗಿತ ಕಥೆಯಲ್ಲಿ ವ್ಯಕ್ತವಾಗುತ್ತದೆ. 'ಕೂಸಿಗೆ ಮಾನವೀಯತೆಯ ಗ್ಲುಕೋಸ್ ನೀರನ್ನು ಕುಡಿಸುತ್ತಾ ಇದನ್ನು ಬದುಕಿಸಲೆತ್ನಿಸುವವರಾದರೂ ಇದ್ದಾರೆಯೇ ? (ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ಪು.೬, ೧೯೯೬) ಎಂಬ ಕಥೆಗಾರ್ತಿಯ ಪ್ರಶ್ನೆ ದೇಶ ವಿಭಜನೆಯ ಬಗೆಗಿನ ಅಸಮಾಧಾನವನ್ನು ಸೂಚಿಸುತ್ತದೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದ ದೇಶ ವಿಭಜನೆಯನ್ನು ಹೆಣ್ಣಿನ ಬದುಕಿಗೆ ಅನ್ವಯಿಸಿ ನೋಡಲಾಗಿದೆ. ಪ್ರಸವದ ಯಾತನೆಯೊಂದಿಗೆ ಹುಟ್ಟುವ ಮಗು ಅವಳಿ - ಜವಳಿಗಳಾದಾಗ ಪರಸ್ಪರರಲ್ಲಿ ಇರಬೇಕಾದ ಸಾಮ್ಯತೆಗಳಿಗಿಂತ ವೈಷಮ್ಯಗಳ ವೈರುಧ್ಯಗಳೇ ಅತಿಶಯೋಕ್ತಿಗೊಳ್ಳುತ್ತವೆ. ಕುಟುಂಬದ ಒಳಗಿನ ಮನುಷ್ಯ ಸಂಬಂಧಗಳನ್ನು ಮತ್ತೆ ಹೆಣ್ತನದ ಭಾಷ್ಯದೊಂದಿಗೆ ವಿಶ್ಲೇಷಿಸುವ ಪ್ರಯತ್ನಗಳ ಮೂಲಕ ಸ್ತ್ರೀ ಪರವಾದ ನಿಲುವೇ ಅಸ್ಮಿತೆಯ ಸ್ವರೂಪದಲ್ಲಿ ಗೋಚರಿಸುತ್ತದೆ.

ಲೈಂಗಿಕ ಕಾರ್ಯಕರ್ತೆಯರ ಬಗೆಗೆ ಸಾಂಪ್ರಾದಾಯಿಕ ನೋಟಕ್ಕಿಂತ ಭಿನ್ನವಾದ ನಿಲುವುಗಳನ್ನು ವ್ಯಕ್ತಪಡಿಸುತ್ತಾ, ಬದುಕಿನಲ್ಲಿ ದೇಹದ ಹಸಿವಿನ ನಿರಾಕರಣೆಗಿಂತ ಅದರ ಹಿನ್ನೆಲೆಯ ಕಾರಣಗಳನ್ನು ಹುಡುಕುತ್ತಾರೆ. ಹೆಣ್ಣು ತನ್ನನ್ನು ಹೆಣ್ಣಾಗಿಯೇ ಗುರುತಿಸಿಕೊಳ್ಳುವುದು ಸಾರಾರವರ ಕಥೆಗಳಲ್ಲಿ ಅಸ್ಮಿತೆಯ ನೆಲೆಯಾಗಿ ಕಾಣಿಸಿಕೊಳ್ಳುತ್ತದೆ.

ಗಂಗಾ ಪಾದೇಕಲ್ ರವರ

ಈ ನಮ್ಮ ನಾಡಿನಲ್ಲಿ (ಹೆಜ್ಜೆ ಮೂಡದ ಹಾದಿಯಲ್ಲಿ, ೧೯೯೨)

ಚಕ್ರ (ಹೊಸಹೆಜ್ಜೆ, ೧೯೯೬)

ಸಂಧಿಕಾಲ (ಹೊಸಹೆಜ್ಜೆ, ೧೯೯೬)

ಮಾನವ ಜನ್ಮ ದೊಡ್ಡದು (ಹೊಸಹೆಜ್ಜೆ, ೧೯೯೬)

ಉಡುಗೊರೆ (ಹೊಸಹೆಜ್ಜೆ, ೧೯೯೬)

ವಾಸ್ತವ (ವಾಸ್ತವ, ೧೯೯೬)

ಸುಕನ್ಯಾಳ ಹುಟ್ಟುಹಬ್ಬ (ವಾಸ್ತವ, ೧೯೯೬)

ಅನಿರೀಕ್ಷಿತ (ನೆಲೆ ತಪ್ಪಿದ ಹಕ್ಕಿ, ೨೦೦೪)

ಅನಿವಾರ್ಯ (ಸಂಕ್ರಮಣ, ೨೦೦೬)

ಸಾವಿರಕ್ಕೊಂದು (ಈ ಪ್ರಜಾ ರಾಜ್ಯದೊಳಗೆ, ೨೦೦೬)

ವಿದಾಯ (ಈ ಪ್ರಜಾ ರಾಜ್ಯದೊಳಗೆ, ೨೦೦೬)

ಕೊನೆಯ ಅಧಾಯ (ಈ ಪ್ರಜಾ ರಾಜ್ಯದೊಳಗೆ, ೨೦೦೬)

'ಈ ನಮ್ಮ ನಾಡಿನಲ್ಲಿ' ಕಥೆಯು ಹೆಣ್ಣೊಬ್ಬಳ ಮೇಲೆ ನಡೆದ ಅತ್ಯಾಚಾರವನ್ನು ತಿಳಿಸುವ ಕಥೆಯಾಗಿದೆ. ತನ್ನ ಡ್ಯೂಟಿ ಸಮಯದಲ್ಲಿ ಹೇಳಿಕೊಳ್ಳುವಂಥದೇನೂ ಸಂಭವಿಸದ್ದರಿಂದ ತಲೆ ಕೆಡಿಸಿಕೊಂಡ ಧಫೇದಾರನಂತವರಾಗಲೀ, 'ಅವಳ ಮೇಲೆ ಅತ್ಯಾಚಾರ ನಡೆದದ್ದನ್ನು ಕಣ್ಣಾರೆ ಕಂಡ ಮೇಲೆ ಅವಳನ್ನು ಹೇಗೆ ಮದುವೆಯಾಗಲಿ ?'(ಹೆಜ್ಜೆ ಮೂಡದ ಹಾದಿಯಲ್ಲಿ, ಪು.೨೪ ೧೯೯೨) ಎಂದು ತಪ್ಪಿಸಿಕೊಳ್ಳುವ ಮಾಧವನಂತವರಿಗಾಗಲೀ, ನಮ್ಮ ಸಮಾಜದಲ್ಲಿ ಕೊರತೆಯಿಲ್ಲ. ಆದರೆ ಇಂತವರನ್ನು ಧಿಕ್ಕರಿಸಿ, ಹೊಸ ಪರಿಸರದಲ್ಲಿ ಹೊಸ ಬಾಳನ್ನು ಕಟ್ಟಿಕೊಳ್ಳಲು ನಿರ್ಧರಿಸಿದ ರಜನಿ ದಿಟ್ಟತನದ ಪ್ರತೀಕವಾಗಿ ಕಾಣಿಸುತ್ತಾಳೆ. ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿ ಉತ್ತರ ಕಂಡುಕೊಂಡಿದ್ದಾಳೆ.

'ಚಕ್ರ' ಕಥೆಯ ವಸುಧಾ ಗಟ್ಟಿ ಮನಸ್ಸಿನ ಹೆಣ್ಣು. ತನ್ನನ್ನು ಮದುವೆಯಾಗಿ ನ್ಯಾಯ ಒದಗಿಸದ ಪತಿ ಶ್ರೀಧರ ಎಷ್ಟೋ ವರ್ಷಗಳ ನಂತರ ಬಂದು ತನ್ನ ತಪ್ಪನ್ನು ಒಪ್ಪಿಕೊಂಡು ಪ್ರಣಯ ಭಿಕ್ಷೆ ಕೇಳಿದಾಗಲೂ ವಸುಧಾ ಮನಸ್ಸನ್ನು ಬದಲಾಯಿಸದೆ ಸ್ಥಿತಪ್ರಜ್ಞಳಾಗಿ ಉಳಿಯುತ್ತಾಳೆ.

ತನ್ನ ಬದುಕಿನ ನಿರ್ಣಯವನ್ನು ತಾನೇ ತೆಗೆದುಕೊಂಡ ವಸುಧಾ ನಿಜವಾದ ಅರ್ಥದಲ್ಲಿ ಪ್ರಜ್ಞಾವಂತ ಹೆಣ್ಣಾಗಿ ಕಾಣಿಸುತ್ತಾಳೆ. ತನ್ನ ಬದುಕಿನ ಅಸ್ತಿತ್ವವನ್ನು ಹುಡುಕುತ್ತಾಳೆ.

'ಸಂಧಿಕಾಲ' ಕಥೆಯಲ್ಲಿ ಸುನೀತಾಳ ತಾಯಿ ತನ್ನ ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ಸಂಸಾರ ನಿರ್ವಹಣೆಗಾಗಿ ಬಹಳ ಬವಣೆ ಪಟ್ಟವಳು. ತನ್ನ ಮಗಳಿಗೆ ಮದುವೆ ಮಾಡಿಸಿ ಒಂಟಿಯಾಗಿ ಉಳಿದ ತಾಯಿಗೆ ಸಂಗಾತಿಯ ಅವಶ್ಯಕತೆ ಕಾಡಿ ಮದುವೆಯಾಗುತ್ತಾಳೆ. ಈ ವಿಚಾರ ಮಗಳಾದ ಸುನೇತಳಲ್ಲಿ ಗೊಂದಲವನ್ನುಂಟುಮಾಡುತ್ತದೆ. ಸಮಾಜದ ನಿಂದನೆಯ ಮಾತುಗಳಿಗೆ ತಾಯಿ ಗುರಿಯಾಗಬೇಕಾಯಿತಲ್ಲ ಎಂಬ ಅವಳ ನೋವಿಗೆ ಪತಿ ಶ್ರೀ ಸಮಾಧಾನ ನೀಡುತ್ತಾನೆ.

ಹೆಣ್ಣಿನ ಮರುಮದುವೆಯನ್ನು ಹೆಣ್ಣು ವಿರೋಧಿಸಿದರೂ ಪುರುಷನೊಬ್ಬ ಪ್ರೋತ್ಸಾಹ ನೀಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿ ಕಾಣಿಸುತ್ತದೆ. ಸಮಾಜಕ್ಕಾಗಿ ನಾವು ಬದುಕುವುದಲ್ಲ. ನಮಗಾಗಿ ನಾವು ಬದುಕುವುದು ಎಂದು ಸುನೇತಾಳ ತಾಯಿ ಮದುವೆಯ ನಿರ್ಧಾರ ಮಾಡಿದ್ದು ಹೆಣ್ಣೊಬ್ಬಳ ಸ್ವತಂತ್ರ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ.

'ಮಾನವ ಜನ್ಮ ದೊಡ್ಡದು' ಎಂಬ ಕಥೆಯ ಜಲಜ ಪ್ರವಾಸದ ಸಂದರ್ಭದಲ್ಲಿ ಆದ ಅಪಘಾತದಲ್ಲಿ ಪೆಟ್ಟಾಗಿ ಆಸ್ಪತ್ರೆಗೆ ಸೇರುತ್ತಾಳೆ ಮಾತ್ರವಲ್ಲ ಆ ಅಪಘಾತದಲ್ಲಿ ತನ್ನ ಗಂಡ ಹಾಗೂ ಮಕ್ಕಳನ್ನು ಕಳೆದುಕೊಳ್ಳುತ್ತಾಳೆ. ಇನ್ನು ತಾನು ಬದುಕುಳಿಯುವುದು ಬೇಡವೆಂದು ಸಾವಿಗೆ ಶರಣಾಗಲು ನಿರ್ಧರಿಸುತ್ತಾಳೆ. ಆದರೆ ಅವಳ ಪಕ್ಕದ ಬೆಡ್ಡಿನಲ್ಲಿದ್ದ ಸಾವಿತ್ರಿಯ ಬದುಕು ಹಾಗೂ ಮಾತು ಇವಳ ಬದುಕಿಗೆ ಪ್ರೇರಣೆಯಾಗುತ್ತದೆ.

ಎಷ್ಟೋ ಬಾರಿ ಬದುಕಿನಲ್ಲಿ ಧೈರ್ಯ ಕಳೆದುಕೊಂಡ ಹೆಣ್ಣಿಗೆ ಅವರಂತೆ ಇರುವ ಇತರ ಹೆಣ್ಣುಮಕ್ಕಳೂ ಪ್ರೇರಣೆಯಾಗುತ್ತಾರೆ ಎನ್ನುವುದನ್ನು ಈ ಕಥೆ ಮನದಟ್ಟುಮಾಡುತ್ತದೆ. 'ಮಾನವ ಜನ್ಮ ದೊಡ್ಡದು' ಎಂಬ ಮಾತನ್ನು ಜಲಜ ಅರ್ಥ ಮಾಡಿಕೊಳ್ಳುತ್ತಾಳೆ.

'ಉಡುಗೊರೆ' ಕಥೆಯಲ್ಲಿ ಶ್ರೀಮಂತಿಕೆಯ ದರ್ಪ ಸ್ನೇಹವನ್ನು ದೂರಮಾಡುತ್ತದೆ ಎಂದು ಚಿತ್ರಿತವಾಗಿದೆ. ಶಾಂತಾ ತನ್ನ ಪ್ರೀತಿಯ ಗೆಳತಿ ಗೌತಮಿಯ ಮದುವೆಗೆ ಕೊಟ್ಟ ಉಡುಗೊರೆಯನ್ನು ಗೌತಮಿಯು ಬೇರೊಬ್ಬರಿಗೆ ಉಡುಗೊರೆಯಾಗಿ ನೀಡುತ್ತಾಳೆ. ಇದನ್ನು ಕಂಡ ಶಾಂತಾಳಿಗೆ ತುಂಬಾ ಬೇಸರವಾಗುತ್ತದೆ.

ಹಣದ ಎದುರು ಸ್ನೇಹಕ್ಕೆ ಬೆಲೆಯಿಲ್ಲ ಎಂಬುದು ಇಲ್ಲಿ ನಿರೂಪಿತವಾಗಿದೆ. ಸಹಜ ಸ್ನೇಹವನ್ನು ಬಯಸಿದ ಶಾಂತಾ ಒಂದು ಕಡೆಯಾದರೆ ಆ ಸ್ನೇಹಕ್ಕೆ ಬೆಲೆಕೊಡದ ಗೌತಮಿ ಇನ್ನೊಂದು ಕಡೆ. ಇವರಿಬ್ಬರ ನಡುವೆ ಭಾವನೆಗಳ ಅಂತರವಿದೆ.

'ವಾಸ್ತವ' ಕಥೆಯು ಸ್ವಾರ್ಥ, ಅಹಂಕಾರದಿಂದ ಕೂಡಿದ ವಸುಧಾಳ ಬದುಕು ಹಾಗೂ ಹೊಟ್ಟೆಯ ಹಸಿವು ತಾಳಲಾರದ ಒದ್ದಾಡುವ ಲಚ್ಚಿಯ ಬದುಕುಗಳ ಚಿತ್ರಣವನ್ನು ನೀಡುತ್ತದೆ. ಮಾನವೀಯತೆ, ಅನುಕಂಪವಿಲ್ಲದ ಮನುಷ್ಯನ ಬದುಕಿಗೆ ಅರ್ಥವಿಲ್ಲ ಎಂಬುದನ್ನು ಈ ಕಥೆ ನಿರೂಪಿಸುತ್ತದೆ.

ತನ್ನ ಮಗಳು ಕಮ್ಲಿಯನ್ನು ಪ್ರೀತಿಯಿಂದ ಸಾಕಿ ಬೆಳೆಸಿದರೂ ಕೊನೆಗೆ ಆಕೆಗೆ ತನ್ನ ತಾಯಿಯೇ ಹೊರೆಯಾಗುತ್ತಾಳೆ. ಲಚ್ಚಿ ಸತ್ತ ಸುದ್ದಿ ಕೇಳಿ ಕಮ್ಲಿಯ ಮೇಲೆ ಆರೋಪ ಹೊರಿಸುವ ವಸುಧಾ ಅದರಲ್ಲಿ ತನ್ನ ಪಾಲು ಇದೆ ಎನ್ನುವುದನ್ನು ಮರೆಯುತ್ತಾಳೆ. ಪ್ರಾಯಶಃ ಒಳ್ಳೆಯದಾದರೆ ತನ್ನಿಂದ, ಹಾಳಾದದ್ದೆಲ್ಲಾ ಇತರರಿಂದ ಎನ್ನುವ ಮನುಷ್ಯ ಸ್ವಭಾವದ ಪ್ರತೀಕವಾಗಿ ಈ ಕಥೆಯ ವಸುಧಾ ಕಾಣಿಸಿಕೊಳ್ಳುತ್ತಾಳೆ. ಬದುಕಿನ ಹುಡುಕಾಟದಲ್ಲಿರುವ ಕಥೆ ಇದಾಗಿದೆ.

'ಸುಕನ್ಯಳ ಹುಟ್ಟುಹಬ್ಬ' ಕಥೆಯ ಸುಕನ್ಯ ವರದಕ್ಷಿಣೆಯ ಕಾರಣಕ್ಕಾಗಿ ಬಂದ ಸಂಬಂಧವನ್ನು ನಿರಾಕರಿಸುತ್ತಾಳೆ. ಅಪ್ಪ ತೋಟ ಮಾರಿ ತನ್ನ ಮದುವೆ ಮಾಡಿಸುವುದರಿಂದ ಸಂಸಾರ ಹೊಂಡಕ್ಕೆ ಬೀಳುತ್ತದೆ, ತನ್ನ ತಮ್ಮಂದಿರ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಎಂದರಿತ ಸುಕನ್ಯ ತನ್ನ ತಂದೆಯನ್ನೇ ಸಮಾಧಾನ ಪಡಿಸುತ್ತಾಳೆ.

ಈ ಕಥೆಯ ಸುಕನ್ಯ ಆಧುನಿಕ ಪ್ರಜ್ಞೆಯ ಹೆಣ್ಣಾಗಿದ್ದು, ತಾನು ತನ್ನ ಬದುಕನ್ನು ಕಟ್ಟಿಕೊಳ್ಳಲು ಮುಂದಾಗುತ್ತಾಳೆ. ಅವಳ ಈ ನಿರ್ಧಾರ ಅವಳ ಹುಟ್ಟುಹಬ್ಬದ ಆಚರಣೆಗೂ ಒಂದು ಅರ್ಥವನ್ನು ಒದಗಿಸುತ್ತದೆ.

'ಅನಿರೀಕ್ಷಿತ' ಕಥೆಯಲ್ಲಿ ಹಿರಿಯರ ಅತಿಯಾದ ಶಿಸ್ತು ಮಕ್ಕಳ ಜೀವನದ ಮೇಲೆ ಯಾವ ರೀತಿಯ ದುಷ್ಪರಿಣಾಮ ಬೀರುತ್ತದೆ ಎಂಬುದರ ಚಿತ್ರಣವಿದೆ. ಪಕ್ಕದ ಮನೆಯ ಕಿರಣನ ಜೊತೆ ಆಟವಾಡಬಾರದು ಎಂದು ಮುನ್ನಿಗೆ ತಾಯಿ ತಾಕೀತು ಮಾಡಿದ್ದು ಕಿರಣನ ಸಾವಿಗೆ ಕಾರಣವಾಗುತ್ತದೆ. ತಾಯಿ ಕೆಲಸದಿಂದ ಬರುವ ತನಕ

ಜೊತೆಯಾಗಿ ಆಟವಾಡುತ್ತಿದ್ದು ತಾಯಿ ಬಂದದ್ದನ್ನು ಒಮ್ಮೆಗೆ ಗಮನಿಸಿದ ಮುನ್ನಿ ತನ್ನ ಮನೆಯೊಳಗಿದ್ದ ಕಿರಣನನ್ನು ಬೀರುವಿನ ಒಳಗೆ ಕೂರಿಸಿ ಬಾಗಿಲು ಹಾಕುತ್ತಾಳೆ. ತಾನು ಬರುವಾಗ ಮುನ್ನಿಗಾಗಿ ತಂದಿದ್ದ ಆಟಿಕೆಯನ್ನು ಬೀರುವಿನಲ್ಲಿ ಇಡುತ್ತೇನೆಂದು ಹೋದಾಗ ತಾಯಿಗೆ ವಿಚಾರ ತಿಳಿಯುತ್ತದೆ. ಮಕ್ಕಳ ಮುಗ್ಧ ಪ್ರಪಂಚವನ್ನು ಹಾಳು ಮಾಡುವ ಹೆತ್ತವರು ಅದರಿಂದಾಗುವ ಅನಾಹುತಗಳನ್ನು ಯೋಚಿಸುವುದಿಲ್ಲ ಎಂಬುದು ಈ ಕಥೆಯಿಂದ ಸ್ಪಷ್ಟವಾಗುತ್ತದೆ.

'ಅನಿವಾರ್ಯ' ಕಥೆಯಲ್ಲಿ ಸರಸಿ ಇದ್ದಕ್ಕಿದ್ದಂತೆ ತಾನು ಕೆಲಸ ಮಾಡುತ್ತಿದ್ದ ಮನೆಯಿಂದ ಕಣ್ಮರೆಯಾಗುತ್ತಾಳೆ. ಮನೆ ಮಂದಿಗೆ, ಅಕ್ಕ - ಪಕ್ಕದವರಿಗೆಲ್ಲ ಆತಂಕ, ತಲ್ಲಣಗಳನ್ನು ಮೂಡಿಸುವ ಸಂಗತಿ ಇದಾಗಿರುತ್ತದೆ. ಕೆಲವು ದಿನಗಳಲ್ಲಿ ತನ್ನ ತಾಯಿಯೊಂದಿಗೆ ಹಿಂದಿರುಗುತ್ತಾಳೆ.

ಈ ಕಥೆಯಲ್ಲಿ ಮಕ್ಕಳಿಗೆ ತಮ್ಮ ಮನೆ, ಪರಿಸರದ ಕುರಿತಾದ ಪ್ರೀತಿ, ಸೆಳೆತ ಸಹಜವೆಂಬುದು ಮನದಟ್ಟಾಗುತ್ತದೆ. ಹೆಣ್ಣೊಬ್ಬಳ ಮನೋವಿಶ್ಲೇಷಣೆಯ ಕಥೆ ಇದಾಗಿದೆ.

'ಸಾವಿರಕ್ಕೊಂದು' ಕಥೆಯು ಸಾವಿನ ಕುರಿತಾದ ಯೋಚನೆಗಳ ಸುತ್ತ ಹೆಣೆದ ಕಥೆಯಾಗಿದೆ. ವಯಸ್ಸಾಗಿ ಸಾವಿನ ಅಂಚಿನಲ್ಲಿದ್ದರೂ, ಸಾವಿಗಾಗಿ ಹೆದರುವ ಈ ಕಥೆಯ 'ಮಾವಯ್ಯ' ಹಾಗೂ ನಡುವಯಸ್ಸಿನಲ್ಲೇ ಸಾಯುತ್ತೇನೆಂದು ಗೊತ್ತಾಗಿಯೂ ಸಂತೋಷವಾಗಿರುವ ಗೋಪಾಲ ಇವರಿಬ್ಬರ ಆಲೋಚನೆಗಳ ಮುಖಾಮುಖಿಯಾಗಿ ಈ ಕಥೆ ಕಾಣಿಸುತ್ತದೆ. 'ಇನ್ನೊಬ್ಬರಿಗೆ ಬೋಧಿಸುವ ಉಪದೇಶವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಕಷ್ಟ' ಎಂಬ ಸತ್ಯವನ್ನು ಈ ಕಥೆ ತೆರೆದಿಡುತ್ತವೆ. ಹುಟ್ಟನ್ನು ಸಂತೋಷದಿಂದ ಸ್ವೀಕರಿಸುವಂತೆ, ಸಾವನ್ನೂ ಸಂತೋಷದಿಂದಲೇ ಎದುರುಗೊಳ್ಳಬೇಕು ಎಂಬ ವಾಸ್ತವ ಅಂಶವನ್ನು ಈ ಕಥೆ ಸುಂದರವಾಗಿ ನಿರೂಪಿಸುತ್ತದೆ.

'ವಿದಾಯ' ಕಥೆಯು ತಾಯಿ – ಮಗನ ಅಂತರಾತ್ಮದ ಮಾತುಗಳನ್ನು ಬೆಸೆಯುವ ಕಥೆಯಾಗಿದೆ. ತಂದೆ – ತಾಯಿಯನ್ನು ಕಳೆದುಕೊಂಡ ತಬ್ಬಲಿಯಾಗಿದ್ದ ಹುಡುಗನನ್ನು ಕಲ್ಯಾಣಿ ಎನ್ನುವವಳು ತಾಯಿಯ ಪ್ರೀತಿ ತೋರಿಸಿ ಬೆಳೆಸುತ್ತಾಳೆ. ಸಂಗೀತ ಕಲಿಸಿಕೊಡುತ್ತಾಳೆ. ಮುಂದೆ ಮಗ ತಾಯಿಯನ್ನೇ ಮರೆತುಬಿಡುತ್ತಾನೆ. ಆದರೆ ಒಮ್ಮೆ ತನ್ನ ಊರಿಗೆ ಹೋಗಿ ಸಂಗೀತ ಕಛೇರಿ ನೀಡಿ ಕೆಳಗಿಳಿಯುವಾಗ ಆತನನ್ನು ಬರಮಾಡಿಕೊಂಡ ಮುದುಕಿಯೇ ತನ್ನ ಸಾಕುತಾಯಿ ಎಂದು ತಿಳಿದು ನೊಂದುಕೊಳ್ಳುತ್ತಾನೆ.

ಯಾರ ಬಳಿಯೂ ಹೇಳಿಕೊಳ್ಳಲಾರದೆ ಚಡಪಡಿಸುವ ಆತನಿಗೆ ಅಲ್ಲಿ ಸೇರಿದ್ದ ಜನ, 'ಅವಳೊಬ್ಬ ಹುಚ್ಚಿ ಯಾವ ಕಲಾವಿದ ಬಂದರೂ ಅವಳದ್ದಿದೇ ಗಲಾಟೆ' (ಈ ಪ್ರಜಾರಾಜ್ಯದೊಳಗೆ, ಪು. ೯೦, ೨೦೦೬) ಎನ್ನುವ ಮಾತು ಮತ್ತೆ ಮತ್ತೆ ಅವನನ್ನು ತಿವಿಯುತ್ತದೆ. ಇದು ಗಲಾಟೆಯಲ್ಲ, ಹುಡುಕುವಿಕೆ ಎಂಬುದು ಅವನಿಗೆ ಅರ್ಥವಾಗುತ್ತದೆ. ತಾಯಿಯೊಬ್ಬಳ ಅಂತರಾತ್ಮವನ್ನು ತೆರೆದಿಡುವ ಕಥೆ ಇದಾಗಿದೆ.

'ಕೊನೆಯ ಅಧ್ಯಾಯ' ಕಥೆಯ ಶಾರದಮ್ಮ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿದವಳು. ಮಗ - ಸೊಸೆಯ ಹಂಗಿನಲ್ಲಿ ಎಲ್ಲರಿಗೂ ಹೊರೆಯಾಗಿ, ಸೊಸೆಯ ಕಟಕಿ ಮಾತುಗಳನ್ನು ಸಹಿಸಿಕೊಳ್ಳುತ್ತಾ ಕಾಲ ನೂಕುವ ಶಾರದಮ್ಮ ತನ್ನ ಮಗಳ ಮನೆಗೆ ಹೋದರೆ ಅಲ್ಲಿಯೂ ಅವಳಿಗೆ ನೆಮ್ಮದಿ ಸಿಗುವುದಿಲ್ಲ. ಮಗಳ ಅತ್ತೆ ವ್ಯಂಗ್ಯದ ಮಾತುಗಳಿಂದ ಈಕೆಯನ್ನು ಕುಟುಕುತ್ತಾಳೆ. ಗಂಡನನ್ನು ಕಳೆದುಕೊಂಡ ಶಾರದಮ್ಮ ಕೊನೆಗೆ ಅನಾಥಾಶ್ರಮಕ್ಕೆ ಸೇರುವುದೆಂದು ನಿರ್ಧರಿಸುತ್ತಾಳೆ. ಆಧುನಿಕ ಬದುಕಿನ ಬಿರುಕು ಬಿಡುವ ಕೌಟುಂಬಿಕ ಸಂಬಂಧಗಳನ್ನು ಚಿತ್ರಿಸುವ ಕಥೆ ಇದಾಗಿದೆ.

ಪರಂಪರೆಯ ದೃಷ್ಟಿಕೋನಗಳಿಗಿಂತ ಭಿನ್ನವಾಗಿ ಆಧುನಿಕ ಜಗತ್ತಿನ ಒಳಗಡೆ ಸವಾಲುಗಳು ಎದುರಾದಾಗ ಕಂಡುಕೊಳ್ಳುವ ತಾತ್ವಿಕ ಕೊನೆ ಹೆಣ್ಣಿನ ಅಸ್ಮಿತೆಯ ಪ್ರತಿರೂಪಗಳಾಗುತ್ತವೆ. ಬದಲಾಗುವ ಸ್ವರೂಪಗಳೊಂದಿಗೆ ಕುಟುಂಬ ಮತ್ತು ಸಮಾಜದಲ್ಲಿ ಬದಲಾಗುತ್ತಿರುವ ಹೆಣ್ಣಿನ ಪಾತ್ರಗಳು ಅವಳ ವ್ಯಕ್ತಿತ್ವಕ್ಕೊಂದು ಅರ್ಥವಂತಿಕೆಯನ್ನು ನೀಡುತ್ತವೆ. ಪರಂಪರೆಯ ಹೆಣ್ತನದ ರೂಪ ಸಾದೃಶಗಳಿಗಿಂತ ಭಿನ್ನವಾಗಿ ಆಕೆ ತನ್ನನ್ನು ತಾನು ಗುರುತಿಸಿಕೊಂಡು ಬೆಳೆಯುತ್ತಾಳೆ ಮತ್ತು ತನ್ನತನವನ್ನು ಉಳಿಸಿಕೊಳ್ಳುತ್ತಾಳೆ. ಸಮಸ್ಯೆಗಳಿಗೆ ಪರಿಹಾರದ ದಿಕ್ಕಿನ ಉತ್ತರ ದಾಯಿತ್ವವನ್ನು ತಾನೇ ಕಂಡು ಕೊಳ್ಳಲು ಸಮರ್ಥಳಾಗುತ್ತಾಳೆ.

ಬದಲಾವಣೆ ಎನ್ನುವುದು ಕೇವಲ ಬೌದ್ಧಿಕತೆಯಲ್ಲಾಗದೆ, ಬೌದ್ಧಿಕ ಚಿಂತನೆಯ ಸ್ವರೂಪಗಳಲ್ಲೂ ಆಗಬೇಕಾದ ಎಚ್ಚರವನ್ನು ಪಾದೇಕಲ್ ರವರ ಕಥೆಗಳು ತಿಳಿಸಿ ಹೇಳುತ್ತವೆ. ವೈಯಕ್ತಿಕವಾಗಿ ಕುಟುಂಬದ ಒಳಗಡೆ ಮತ್ತು ಸಾರ್ವಜನಿಕವಾಗಿ ತಮ್ಮನ್ನು ಗುರುತಿಸಿಕೊಳ್ಳುವ ಸರಿಯಾದ ದಿಕ್ಕಿನತ್ತ ಸ್ಪಷ್ಟ ಹೆಜ್ಜೆಗಳು ಗೋಚರಿಸಲು ಸಾಧ್ಯವಾಗುತ್ತದೆ. ಅದು ಗೊಂದಲದ, ಅಭದ್ರತೆಯ ತಾಣಗಳಾಗದೆ ತಳ ಸ್ಪರ್ಶಿ ಜಲದಂತೆ ಸುಸ್ಥಿರವಾಗುವ ತಾತ್ವಿಕತೆ ಗೋಚರಿಸುತ್ತದೆ.

ಪ್ರೇಮಾಭಟ್‌ರವರ,

ನಿರೀಕ್ಷೆ (ಕಥಾವರ್ಷ, ೨೦೦೭)

ಮಾರ್ಪಾಡು (ಕಥಾವರ್ಷ, ೨೦೦೭)

ಲಿಪ್‌ಸ್ಟಿಕ್ ಹುಡುಗಿ (ಕಥಾವರ್ಷ, ೨೦೦೭)

'ನಿರೀಕ್ಷೆ' ಕಥೆಯಲ್ಲಿ ಹೆಣ್ಣಿನ ಬದುಕಿನ ಹುಡುಕಾಟವಿದೆ. ತಾಯಿಯನ್ನು ಕಳೆದುಕೊಂಡು ಮದುವೆಯಾಗದೆ ಉಳಿದ ಲತಾ ಉದ್ಯೋಗವನ್ನು ಹುಡುಕಿಕೊಂಡು ಪಟ್ಟಣಕ್ಕೆ ಬರುತ್ತಾಳೆ. ಒಮ್ಮೆ ಅನಿರೀಕ್ಷಿತವಾಗಿ ರೈಲಿನಲ್ಲಿ ಸಿಕ್ಕಿ ಮಾತನಾಡಿದ ಆನಂದನನ್ನು ಕಂಡಾಗ ಹಳೆಯ ನೆನಪುಗಳು ಮೆಲುಕು ಹಾಕುತ್ತವೆ. ಒಂದು ಕಾಲಕ್ಕೆ ತಾನು ಬೇಡವೆಂದು ತಿರಸ್ಕರಿಸಿದ್ದ ಆನಂದ ಇಂದು ಚೆಲುವೆಯಾದ ಹೆಂಡತಿಯನ್ನು ಪಡೆದು ಸುಖವಾಗಿದ್ದಾನೆ. ತಾನು ಅತನನ್ನು ಮದುವೆಯಾಗಬೇಕಿತ್ತು ಅಂದು ಎಂಬುದಾಗಿ ಯೋಚಿಸುತ್ತಾಳೆ. ಆದರೆ ಆತನ ಬಗೆಗೆ ಒಳ್ಳೆಯ ಅಭಿಪಾಯವನ್ನು ನೀಡುವುದಿಲ್ಲ.

ಏನೂ ಇಲ್ಲದ ಲತಾಳಿಗೆ ಒಂಟಿತನ ಕಾಡುತ್ತದೆ. ಅಕ್ಕನ ಮಗ ರವಿಯನ್ನಾದರೂ ಇಲ್ಲಿಗೆ ಕರೆಸಿ ವಿದ್ಯಾಭ್ಯಾಸ ಕೊಡಿಸುತ್ತೇನೆ. ಅವನು ಜೊತೆಗಿದ್ದರೆ ಒಂಟಿತನವೂ ದೂರವಾಗಬಹುದು ಎಂದು ನಿರೀಕ್ಷಿಸುತ್ತಾಳೆ. ಆದರೆ ಕೆಲವೇ ದಿನಗಳಲ್ಲಿ ಅಕ್ಕ ತೀರಿಹೋಗಿ ಅವಳ ಎಲ್ಲಾ ಮಕ್ಕಳು ಇವಳಲ್ಲಿ ಆಸರೆಗಾಗಿ ಬರುತ್ತಾರೆ. ಯಾವುದೂ ನಾವು ಎಣಿಸಿದಂತೆ ಆಗುವುದಿಲ್ಲ ಎಂಬ ಸತ್ಯದ ಅರಿವು ಲತಾಳಿಗೆ ಆಗುತ್ತದೆ.

'ಮಾರ್ಪಾಡು' ಕಥೆ ಸಂಪ್ರದಾಯದೊಳಗಡೆ ಹೆಣ್ಣೊಬ್ಬಳನ್ನು ಬಂಧಿಸಿಡುವ ಕಥೆ. ಲಲಿತಳ ಡ್ರೆಸ್ಸಿನಲ್ಲಾದ ಮಾರ್ಪಾಡು ಪುರುಷ ವರ್ಗವನ್ನು ಮಾತ್ರವಲ್ಲ, ಅದನ್ನೇ ಒಪ್ಪಿಕೊಂಡು ಬಂದ ಸ್ತ್ರೀ ವರ್ಗವನ್ನು ಅಸಮಾಧಾನಕ್ಕೆ ಗುರಿಯಾಗಿಸುತ್ತದೆ.

ಹೆಣ್ಣು ಬದುಕುವುದೇ ಗಂಡಿನ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಎಂಬ ಪರಂಪರಾಗತ ಆಲೋಚನೆಯನ್ನು ಮೀರುವ ಪ್ರಯತ್ನವನ್ನು ಲಲಿತಾ ಮಾಡುತ್ತಾಳೆ. ಇದು ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯೇ ಆಗಿದೆ.

'ಲಿಪ್‌ಸ್ಟಿಕ್ ಹುಡುಗಿ' ಕಥೆಯು ನಗರದ ಹೆಣ್ಣು ಮಗಳೊಬ್ಬಳು ಹಳ್ಳಿಯ ಬದುಕಿಗೆ ತನ್ನನ್ನು ಒಡ್ಡಿಕೊಳ್ಳುವ ಪರಿಯನ್ನು ಚಿತ್ರಿಸುತ್ತದೆ. ಹೊಳ್ಳನು ಪೇಟೆಯ ಹುಡುಗಿ ಮನೋರಮಾಳನ್ನು ಮದುವೆಯಾಗಿ ತನ್ನ ಊರಿಗೆ

ಕರೆದುಕೊಂಡು ಬರುತ್ತಾನೆ. ಹಳ್ಳಿಯ ಜನರೆಲ್ಲ ಅವಳನ್ನು ನೋಡುವ ದೃಷ್ಟಿಕೋನವೇ ಬೇರೆ. ಅವಳ ಉಡುಪು, ಅಲಂಕಾರ ಇವೆಲ್ಲವೂ ವಿಚಿತ್ರವಾಗಿ ಕಾಣುತ್ತಿದ್ದ ಆ ಹಳ್ಳಿಯವರಿಗೆ ಅವಳ ಅಂತರ್ಯವನ್ನು ಅರ್ಥಮಾಡಿಕೊಳ್ಳುವುದಕ್ಕೆ ಬಹಳಷ್ಟು ಸಮಯ ಹಿಡಿಯುತ್ತದೆ.

ಈ ಸಮಾಜ ಹೆಣ್ಣನ್ನು ಕೇವಲ ಬಾಹ್ಯ ವೇಷಭೂಷಣಗಳಿಂದಷ್ಟೇ ಅಳೆಯುತ್ತಾರೆಯೇ ವಿನಃ ಅವಳ ಗುಣವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸೋಲುತ್ತಾರೆ ಎಂಬ ಚಿತ್ರಣ ಇಲ್ಲಿ ಬಂದರೂ ಕೊನೆಗೆ ಇಡೀ ಸಮಾಜಕ್ಕೆ ಬೇಕಾದವಳಾಗಿ ಮನೋರಮಾ ಕಾಣಿಸಿಕೊಳ್ಳುತ್ತಾಳೆ. ಹೆಣ್ಣೊಬ್ಬಳ ವ್ಯಕ್ತಿತ್ವದ ಗಟ್ಟಿತನ ಅವಳ ಉಡುಗೆಯಲ್ಲಿ ಇಲ್ಲ ಎನ್ನುವುದು ಗಮನಾರ್ಹ ವಿಚಾರ.

ಪ್ರೇಮಾ ಭಟ್ ನಗರ ಸಂಸ್ಕೃತಿಯ ದಾಖಲಾತಿಯ ಬರವಣಿಗೆಗಳನ್ನು ಮಾಡಿದರೂ, ಹೆಣ್ಣಿನ ಅಸ್ಮಿತೆಯ ಪ್ರತಿ ಸ್ವರೂಪಕ್ಕೆ ಹಳ್ಳಿ - ಪಟ್ಟಣಗಳೆಂಬ ವ್ಯತ್ಯಾಸವಿಲ್ಲ ಎಂಬ ಸ್ಪಷ್ಟತೆಯನ್ನು ದಾಖಲಿಸುತ್ತಾರೆ. ಹೆಣ್ಣಿನ ಭಾವ ಜಗತ್ತನ್ನು ಅನಾವರಣಗೊಳಿಸುವ ಲೇಖಕಿ ಚೆಲುವು – ಒಲವು, ನಿರೀಕ್ಷೆ - ಹತಾಶೆ, ಸ್ಥಿರತೆ – ಮಾರ್ಪಾಡು ಈ ದ್ವಂದ್ವಗಳಿಲ್ಲದೆಯೇ ಹೆಣ್ತನದ ನೆಲೆಯಲ್ಲಿಯೇ ಇದನ್ನು ದಾಖಲಿಸುವ ಪ್ರಯತ್ನ ವಿಶಿಷ್ಟವಾದುದು.

ವೈದೇಹಿಯವರ,

ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು (ಅಲೆಗಳಲ್ಲಿ ಅಂತರಂಗ, ೨೦೦೬)

ಶಕುಂತಲೆಯೊಂದಿಗೆ ಕಳೆದ ಅಪರಾಹ್ನ (ಅಲೆಗಳಲ್ಲಿ ಅಂತರಂಗ, ೨೦೦೬)

ಭೂತ (ಅಲೆಗಳಲ್ಲಿ ಅಂತರಂಗ, ೨೦೦೬)

ದಾಳಿ (ಅಲೆಗಳಲ್ಲಿ ಅಂತರಂಗ, ೨೦೦೬)

ನಟಿ (ಅಲೆಗಳಲ್ಲಿ ಅಂತರಂಗ, ೨೦೦೬)

'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯು ಸ್ವಾವಲಂಬಿಯಾಗಿ ಬದುಕುವ ಹೆಣ್ಣಿನ ಚಿತ್ರಣವನ್ನು ನೀಡುತ್ತದೆ. ಈ ಕಥೆಯ ಗುಲಾಬಿ ಹಳ್ಳಿಗೆ ನಾಗರೀಕತೆ ಪ್ರವೇಶಿಸುವುದಕ್ಕೆ ಕಾರಣಳಾದರೆ, ಲಿಲ್ಲೀಬಾಯಿ ಟಾಕೀಸಿನಲ್ಲಿ ಗೇಟ್ ಕೀಪರ್ ಆಗಿ ಕೆಲಸ ಮಾಡುತ್ತಾಳೆ. ಬಾಂಬೆಗೆ ಓಡಿ ಹೋದ ಗಂಡನ ಬಗ್ಗೆ ಚಿಂತಿಸದೆ ಸ್ವತಂತ್ರಳಾಗಿ ಜಗತ್ತನ್ನು ನೋಡುತ್ತಾಳೆ ಮಾತ್ರವಲ್ಲ, ಇತರ ಹೆಣ್ಣುಮಕ್ಕಳಿಗೂ ಅದನ್ನು ಕಾಣಿಸುತ್ತಾಳೆ. ಆರ್ಥಿಕ ಸ್ವಾವಲಂಬನೆಯ ಲಿಲ್ಲೀಬಾಯಿ ಧೈರ್ಯದಿಂದ ಬದುಕುವ ಧೀರ ಹೆಣ್ಣಾಗಿ ಚಿತ್ರಿತವಾಗಿದ್ದಾಳೆ.

'ಶಕುಂತಳೆಯೊಂದಿಗೆ ಕಳೆದ ಅಪರಾಹ್ನ' ಕಥೆಯು ಹೆಣ್ಣಿನ ಕುರಿತಾದ ಹೊಸ ದೃಷ್ಟಿಕೋನದತ್ತ ಮುಖ ಮಾಡುತ್ತದೆ. ಈ ಕಥೆಯಲ್ಲಿ ಶಕುಂತಳೆ ಎತ್ತುವ ಕೆಲವು ಪ್ರಶ್ನೆಗಳು ಕೇವಲ ಅವಳ ವೈಯಕ್ತಿಕ ಪ್ರಶ್ನೆಗಳಾಗಿರದೆ, ಆ ಸಂದರ್ಭದ ಸ್ತ್ರೀ ಸಮೂಹ ಕೇಳಿಕೊಳ್ಳುವ ಪ್ರಶ್ನೆಯಾಗಿದೆ. 'ದುಷ್ಯಂತನ ವರ್ತನೆಗೆ ವ್ಯಾಖ್ಯಾನ ನೀಡಬಹುದು. ಆದರೆ ಶಕುಂತಳೆಯ ಹೃದಯಕ್ಕೆ. . . ?' (ಅಲೆಗಳಲ್ಲಿ ಅಂತರಂಗ, ಪು. ೨೮೧, ೨೦೦೬) ಈ ಮಾತು ಹೆಣ್ಣಿನ ಮನಸ್ಸನ್ನು, ಭಾವನೆಗಳನ್ನು ಅರ್ಥ ಮಾಡಿಕೊಳ್ಳದ ಪುರುಷನೊಬ್ಬ ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿ ಕಾಣುತ್ತದೆ. 'ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು. . . ?' (ಅದೇ. . . ೨೮೧) ಎಂಬುದು ಶಕುಂತಳೆಯ ಸ್ವಾಭಿಮಾನವನ್ನು ಪವಿತ್ರವಾದ ಪ್ರೀತಿಯನ್ನು ತೋರಿಸುತ್ತದೆ. ಈ ಕಥೆಯು ಪುರುಷ ನಿರ್ಮಿತ ಸಾಹಿತ್ಯದಲ್ಲಿನ ಸ್ತ್ರೀಪರ ಧೋರಣೆಗಳನ್ನು ಬಿಂಬಿಸುತ್ತದೆ.

'ಭೂತ' ಕಥೆಯ ಪಾರ್ವತಿ ಗಂಡನಿಂದ ತ್ಯಜಿಸಲ್ಪಟ್ಟು ಎರಡು ಮಕ್ಕಳ ತಾಯಿಯಾಗಿದ್ದು, ಸಂಗಾತಿಯಿಲ್ಲದೆ ಒಂಟಿತನ ಕಾಡಿದರೂ ಎರಡು ಮಕ್ಕಳೊಂದಿಗೆ ದಿನ ದೂಡುತ್ತಾಳೆ. ಮದುವೆಗೆ ಮೊದಲು ದೇವಸ್ಥಾನಕ್ಕೆ ಹೋಗುತ್ತಿದ್ದವಳು ದೇವರಿಗೆ ಕೈಮುಗಿದು ನಿಂತರೆ ನಿಂತೇ ಬಿಡುತ್ತಿದ್ದಳು. 'ಯಾಕೆ ಅಳುತ್ತಿ ಪಾರ್ವತಿ? ಎಂದರೆ ಸುಮ್ಮನೆ ಉಂಡ್‌ದ್ ಜಾಸ್ತಿಯಾಯಿತು ಅದಕ್ಕೇ!' (ಅಲೆಗಳಲ್ಲಿ ಅಂತರಂಗ, ಪು. ೧೪೬, ೨೦೦೬) ಎನ್ನುವ ಮಾತಿನಲ್ಲಿ ಹೇಳಿಕೊಳ್ಳಲಾಗದ ಮನಸ್ಸಿನ ವೇದನೆಯಿದೆ. ವ್ಯವಸ್ಥೆಯೆಂಬ ಭೂತದಿಂದ ಬಿಡುಗಡೆ ಪಡೆಯಲಾಗದೆ ಪಾರ್ವತಿ ಚಡಪಡಿಸುತ್ತಾಳೆ.

'ದಾಳಿ' ಕಥೆಯಲ್ಲಿ ಅಸಹಾಯಕ ಹೆಣ್ಣಿನ ಮೇಲೆ ಪುರುಷನೊಬ್ಬನ ಅಸಭ್ಯತೆಯ ಮಾತುಗಳು ದಾಳಿ ಮಾಡಿದಾಗ ಆಕೆ ಅದನ್ನು ಮೌನವಾಗಿ ಎದುರಿಸುವ ಚಿತ್ರಣವಿದೆ. ಬಸ್‌ನಲ್ಲಿ ಸೀಟು ಕೇಳಿದ್ದಕ್ಕಾಗಿ ಸಿಡಿಲಿನ ಆರ್ಭಟವಿರುವ ಮಾತಿನ ಮಳೆ ಸುರಿಸಿದ ಕಂಡಕ್ಟರ್‌ನ ಬಾಯಿ ಮುಚ್ಚಿಸುವ ಕೆಲಸಕ್ಕೆ ಯಾರೂ ಹೋಗದೆ ಎಲ್ಲರೂ ಕೈಕಟ್ಟಿ ಕುಳಿತು ಬೈಗುಳವನ್ನು ಆಲಿಸುವುದರಲ್ಲೇ ಈ ಕಥೆಯ ದುರಂತವಿದೆ. ಎಲ್ಲರ ನಡುವೆಯೇ ಇದ್ದು ಅನಾಥೆಯಾಗುವ ಹೆಣ್ಣೊಬ್ಬಳ ಶೋಚನೀಯ ಸ್ಥಿತಿ ಈ ಕಥೆಯಲ್ಲಿ ಚಿತ್ರಿತವಾಗಿದೆ. ಎಷ್ಟೋ ಬಾರಿ ಇಂತಹ ಮೌನವೇ ಹೆಣ್ಣಿನ ಪಾಲಿಗೆ ಉಳಿಯುವ ಏಕೈಕ ಅಸ್ತ್ರವಾಗುತ್ತದೆ.

'ನಟಿ' ಕಥೆಯ ರತ್ನ ಎಲ್ಲರ ಅನುಕರಣೆ ಮಾಡುವುದರ ಮೂಲಕ ಇತರರನ್ನು ಸಂತೋಷದಲ್ಲಿಡುವುದಕ್ಕೆ ಪ್ರಯತ್ನಿಸುತ್ತಾಳೆ. ತನ್ನ ವೈಯಕ್ತಿಕ ಬದುಕಿನಲ್ಲ ಯಾವ ಸುಖವೂ ಇಲ್ಲದಾಗ, ಅದನ್ನು ಮರೆಯುವುದಕ್ಕಾಗಿ

ನಟನೆಯನ್ನೇ ಮುಖ್ಯವಾಗಿ ಇಟ್ಟುಕೊಳ್ಳುವ ರತ್ನ ಎಲ್ಲರ ದೃಷ್ಟಿಯಲ್ಲಿ 'ಪಿರ್ಕಿ'ಯೆಂದು ಹೇಳಿಸಿಕೊಳ್ಳುತ್ತಾಳೆ. ರತ್ನಳ ಬದುಕಿನ ಹುಡುಕಾಟವೇ ಈ ನಟನೆಯಲ್ಲಿ ನಿಂತಿದೆ.

ಪರಂಪರೆ ಮತ್ತು ಆಧುನಿಕತೆಗಳ ಮಧ್ಯೆ ಕಳೆದುಹೋದ ಹೆಣ್ಣಿನ ಅಸ್ತಿತ್ವದ ಹುಡುಕಾಟಗಳು ಇವರ ಕಥೆಗಳ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತವೆ. ದೀರ್ಘ ಮೌನ, ಬಚ್ಚಿಟ್ಟ ನೋವು, ಮುಚ್ಚಿಟ್ಟ ಹತಾಶೆ, ನಿರೀಕ್ಷೆಗಳು ಬೇರೆ ಬೇರೆ ಸ್ವರೂಪಗಳಲ್ಲಿ ಪ್ರತಿನಿಧೀಕರಣಗೊಳ್ಳುತ್ತಾ ಹೆಣ್ತನದ ಆಯಾಮಗಳನ್ನು ಅರ್ಥೈಸಲು ಸಾಧ್ಯವಾಗುತ್ತದೆ. ಹೆಣ್ಣನ್ನು ಒಬ್ಬ ವ್ಯಕ್ತಿಯಾಗಿ ಗ್ರಹಿಸಿ ವಿಶ್ಲೇಷಿಸುವ ಮೂಲಕ ಅಸ್ಮಿತೆಯ ಸ್ವರೂಪವನ್ನು ನಿರೂಪಗೊಳಿಸುತ್ತಾರೆ. ಶೋಷಿತಳು, ವಂಚಿತಳೂ ಆದರೂ, ವರ್ಗ ವ್ಯತ್ಯಾಸಗಳಿದ್ದರೂ ಹೆಣ್ಣಿನ ನೋವಿನ ಸ್ವರೂಪದ ನಾಡಿಮಿಡಿತವನ್ನು ಹೇಳುವಲ್ಲಿ ವೈದೇಹಿ ಯಶಸ್ವಿಯಾಗಿದ್ದಾರೆ. ಪರಿತ್ಯಕ್ತರು ಬದುಕನ್ನು ನಿರಾಕರಿಸದೆ ಎದುರಿಸುವ ಸ್ಥೈರ್ಯಗಳೊಂದಿಗೆ ಹೆಣ್ಣೆನ್ನುವ ಪರಿಕಲ್ಪನೆಗೆ ಸರಳ ನಿರೂಪಣೆಯಾಗುತ್ತಾರೆ.

ಗಂಡು - ಹೆಣ್ಣಿನ ಪ್ರೇಮವನ್ನು ತರ್ಕ ಸಿದ್ಧಾಂತಗಳ ನೆಲೆಯಿಂದ ವಿಶ್ಲೇಷಿಸುವುದಕ್ಕಿಂತ, ಭಾವ ಜಗತ್ತಿನ ವ್ಯಕ್ತಿಗತವಾದ ಹಿನ್ನೆಲೆಯಲ್ಲಿ ಅರ್ಥೈಸುವುದು ಹೆಣ್ತನದ ಅಸ್ಮಿತೆಗೆ ಹೆಚ್ಚು ಸ್ಪಷ್ಟತೆಯನ್ನು ನೀಡುತ್ತದೆ.

೭.೨. ಕೌಟುಂಬಿಕ ನೆಲೆ :

ಕೂಡಿ ಉಂಬ ಕುಟುಂಬದಲ್ಲಿ ಕೂಡುವುದು ಮತ್ತು ಉಣ್ಣುವುದು ದೇಹ ಮತ್ತು ಮನಸ್ಸುಗಳನ್ನು ಆರೋಗ್ಯಪೂರ್ಣವಾಗಿರಿಸುವುದು ಬಹಳ ಮುಖ್ಯವಾದ ಪರಿಕಲ್ಪನೆ. ಸಾಮಾಜಿಕ ಸ್ವಾಸ್ಥ್ಯಕ್ಕೆ ಆರೋಗ್ಯಕರ ಕುಟುಂಬ ಬಹಳ ಮುಖ್ಯ. ಕುಟುಂಬ ಎಂದಾಗ ಅಲ್ಲಿ ಗಂಡು, ಹೆಣ್ಣು ಮತ್ತು ಮಕ್ಕಳು ಬಹಳ ಮುಖ್ಯವಾಗುತ್ತಾರೆ. ಸ್ವಾತಂತ್ರ್ಯಪೂರ್ವದ ಅವಿಭಕ್ತ ಕುಟುಂಬಗಳೆಲ್ಲ ಇಂದು ವಿಭಕ್ತವಾಗಿವೆ.

ಅವಿಭಕ್ತ ಕುಟುಂಬದ ಒಳಗಡೆಯೂ ಹೆಣ್ಣಿಗೆ ರಕ್ಷಣೆ, ಭದ್ರತೆ ಮಾನ್ಯತೆಗಳು ದಕ್ಕದೆ ಹೋಗುವಾಗ ಆಕೆಯ ವ್ಯಕಿಗತವಾದ ಅನುಭವಗಳೇ ಸಾರ್ವಕಾಲಿಕವಾದ ಸತ್ಯಗಳಾಗಿ ಕಣ್ಣೆದುರು ರಾಚುತ್ತವೆ. ಆಧುನಿಕತೆಯ ಕೊಡುಗೆಯಾಗಿ ಹುಟ್ಟಿಕೊಂಡ ವಿಭಕ್ತ ಕುಟುಂಬಗಳು ಹೆಣ್ಣಿನ ಜವಾಬ್ದಾರಿಗಳನ್ನು ಮತ್ತಷ್ಟು ಹೆಚ್ಚಿಸಿವೆ. ಹೆಣ್ಣು ಕುಟುಂಬದ ಕೇಂದ್ರವಾದರೂ ಯಜಮಾನಿಕೆಯ, ಅಧಿಕಾರದ ನೆಲೆ ಇರುವುದು ಪುರುಷರ ಅಧೀನದಲ್ಲಿ. ಕರಾವಳಿಯ ಮಹಿಳೆಗೆ ವ್ಯಕ್ತಿಗತವಾಗಿ ಕುಟುಂಬದ ಒಳಗಡೆ ಅಧಿಕಾರಗಳು ಇದ್ದರೂ ಆ ಅಧಿಕಾರವನ್ನು ಚಲಾವಣೆ ಮಾಡಲು ಸಾಧ್ಯವಾಗಿದೆಯೇ ಎನ್ನುವುದು ಪ್ರಮುಖ ಪ್ರಶ್ನೆಯಾಗುತ್ತದೆ.

ಹೆಣ್ಣಿನ ಮನೆಯ ಒಳಗಿನ ಬದುಕಿನಲ್ಲಿ ಅವಳಿಗೆ ಸಿಗುವ ಅಧಿಕಾರ, ಸ್ವಾತಂತ್ರ್ಯ, ಮಾನ್ಯತೆಗಳು ಮತ್ತು ಕುಟುಂಬದ ಪರಿಮಿತಿಯನ್ನು ದಾಟಿ ಮನೆಯ ಹೊಸ್ತಿಲಿನಾಚೆಗೆ ಕಾಲಿಟ್ಟಾಗ ಅವಳನ್ನು ನೋಡುವ ದೃಷ್ಟಿಕೋನ ಹೇಗೆ ಪ್ರಮುಖವಾಗುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ವಿವಾಹ, ವರದಕ್ಷಿಣೆ, ವೃದ್ಧಾಪ್ಯ, ಇವೆಲ್ಲವೂ ವೈಯಕ್ತಿಕ ನೆಲೆಯನ್ನು ದಾಟಿ ಕೌಟುಂಬಿಕ ನೆಲೆಯಾಚೆಗೆ ಚಾಚಿಕೊಳ್ಳುತ್ತವೆ. ತಾಯ್ತನವನ್ನು ವೈಭವೀಕರಿಸಿ ಬಂಜೆತನವನ್ನು, ವಿಧವೆಯನ್ನು ತುಚ್ಛೀಕರಿಸಿ ನಡೆಸುವ ಆಚರಣೆ, ಸಂಪ್ರದಾಯಗಳು ಸ್ತ್ರೀ ಸ್ವಾತಂತ್ರ್ಯದ ತುಚ್ಛೀಕರಣವನ್ನು ನಿರೂಪಿಸುತ್ತವೆ. ಇದಕ್ಕೆ ಜಾತಿ ಮತ್ತು ಧರ್ಮಗಳ ಗಡಿರೇಖೆ (ಸೀಮಾ) ಗಳನ್ನು ಹಾಕಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು.

ಗಂಗಾ ಪಾದೇಕಲ್ ರವರ,

ಸೆಳೆತ (ಸಂಕ್ರಮಣ, ೨೦೦೬)

ಇರುಳ ಹಿಂದಿನ ಬೆಳಗು (ವಾಸ್ತವ, ೧೯೯೬)

ನೆಲೆ (ವಾಸ್ತವ, ೧೯೯೬)

ಹೀಗೊಂದು ಲೋಕವುಂಟು (ವಾಸ್ತವ, ೧೯೯೬)

ಕಳೆದು ಹೋದ ದಿನಗಳು (ನೆಲೆ ತಪ್ಪಿದ ಹಕ್ಕಿ, ೨೦೦೩)

ಒಂದೇ ನಾವೆಯ ಪಯಣಿಗರು (ನೆಲೆ ತಪ್ಪಿದ ಹಕ್ಕಿ, ೨೦೦೩)

ಮುಖಾಮುಖಿ (ಮನ್ನಣೆಯ ದಾಹ, ೨೦೦೫)

ರಮೆಯ ಒಂದಿರುಳು (ಮನ್ನಣೆಯ ದಾಹ, ೨೦೦೫)

ಬೇವು ಬಿತ್ತಿ ಮಾವು ಬಯಸೆ (ಮನ್ನಣೆಯ ದಾಹ, ೨೦೦೫)

ತೌರೂರ ಹಾದಿಯಲಿ (ಈ ಪ್ರಜಾರಾಜ್ಯದೊಳಗೆ, ೨೦೦೬)

'ಸೆಳೆತ' ಕಥೆಯ 'ರತ್ನತ್ತೆ' ಗಂಡನನ್ನು ಕಳೆದುಕೊಂಡು ಸಮಾಜದ ಸಂಪ್ರದಾಯವನ್ನು ಮೀರಲಾರದೆ 'ವೈಧವ್ಯ' ಎಂಬ ಹಣೆಪಟ್ಟಿಯಿಂದ ವಿರೂಪಕ್ಕೊಳಗಾಗುತ್ತಾಳೆ. ಈ ಸ್ಥಿತಿಯನ್ನು ಮನಸ್ಸಿನಲ್ಲೇ ವಿರೋಧಿಸುವ ಕಿಟ್ಟಿ ಆಧುನಿಕ ಮನೋಭಾವದ ನಿಜವಾದ ವಿದ್ಯಾವಂತ. ರತ್ನತ್ತೆಗೂ ಒಂದು ಬದುಕಿದೆ, ಜೀವವಿದೆ ಎಂದು ಭಾವಿಸಿಕೊಂಡವನು. ಅದೇ ರತ್ನತ್ತೆ ಮುಂದೊಂದು ದಿನ ಗಂಡನ ಮನೆಯನ್ನು ತ್ಯಜಿಸಿ ತನ್ನದೇ ಬದುಕನ್ನು ಕಟ್ಟಿಕೊಳ್ಳುವ ಪರಿ ಕಿಟ್ಟಿಯನ್ನು ತಬ್ಬಿಬ್ಬಾಗಿಸಿದರೂ, ತನ್ನ ಅಸ್ತಿತ್ವದ ಹುಡುಕಾಟದಲ್ಲಿ ಆಕೆ ಗೆಲ್ಲುತ್ತಾಳೆ. ಸಮಾಜದ ಸಿದ್ಧ

ಮಾದರಿಯನ್ನು ಮೀರಿ ಬದುಕಿದ ರತ್ನತ್ತೆ ನಿಜವಾಗಿಯೂ ವಿದ್ಯಾವಂತೆ ಎನಿಸಿಕೊಳ್ಳುತ್ತಾಳೆ. ಆದರೆ ಅವಳ ನೆನಪಿನ ಸೆಳೆತದಿಂದ ಬಿಡಿಸಿಕೊಳ್ಳುವುದಕ್ಕೆ ಕಿಟ್ಟಿಗೆ ಸಾಧ್ಯವಾಗುವುದಿಲ್ಲ.

'ಇರುಳ ಹಿಂದಿನ ಬೆಳಗು' ಕಥೆಯು ಮನುಷ್ಯನ ಅತಿಯಾದ ಆಶೆ ಜೀವನದ ನೆಮ್ಮದಿಯನ್ನು ಹಾಳು ಮಾಡುತ್ತದೆ ಎಂಬುದನ್ನು ನಿರೂಪಿಸುತ್ತದೆ. ಸರ್ಕಾರಿ ಉದ್ಯೋಗಿಯಾಗಿದ್ದ ಶ್ರೀಧರ್ ಹೆಂಡತಿಯ ಪ್ರೇರಣೆಯಿಂದ ಲಂಚ ಸ್ವೀಕರಿಸಿ ಕೆಲಸ ಕಳೆದುಕೊಳ್ಳುವ ಸ್ಥಿತಿ ಬರುತ್ತದೆ. ದಾರಿ ಕಾಣದೆ ಕೊನೆಗೆ ತಮಗೆ ತಾವೇ ಸಮಧಾನ ತಂದುಕೊಳ್ಳುತ್ತಾರೆ.

ತಮ್ಮ ಹಿರಿಯರು ಬಾಳಿ ಬದುಕಿದ ರೀತಿಯಲ್ಲಿ ತಾವು ಬದುಕುವುದಕ್ಕೆ ಮನಸ್ಸು ಮಾಡಿಲ್ಲ ಎನ್ನುವ ನೋವಿನೊಂದಿಗೆ ನಿರ್ಮಲಳಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಸಂಸಾರವನ್ನು ಸರಿದೂಗಿಸಿಕೊಂಡು ಹೋಗಬೇಕಾದಲ್ಲಿ ತಮ್ಮ ಆಸೆಗಳಿಗೆ ತಕ್ಕ ಮಟ್ಟಿಗೆ ಕಡಿವಾಣ ಹಾಕಿ ಬದುಕುವ ಅಗತ್ಯವಿದೆ ಎನ್ನುವುದನ್ನು ಈ ಕಥೆ ಧ್ವನಿಸುತ್ತದೆ.

'ನೆಲ' ಕಥೆಯಲ್ಲಿ ಮನುಷ್ಯನ ಇಬ್ಬಂಗಿತನದ ಚಿತ್ರಣವಿದೆ. ಕೆಂಪಿಯ ಬಗೆಗೆ ಕರುಣೆ ವ್ಯಕ್ತಪಡಿಸುವ ಈ ಕಥೆಯ ಹೆಣ್ಣಿಗೆ ಹಣ ಕೊಡುವುದರಲ್ಲಿಯೂ ದ್ವಂದ್ವ ಕಾಡುತ್ತದೆ. ದ್ವಿಮುಖ ವ್ಯಕ್ತಿತ್ವವುಳ್ಳವರು ತಮ್ಮ ಸ್ವಾರ್ಥವನ್ನು ಸಾಧಿಸುತ್ತಾ ಅದಕ್ಕಾಗಿ ಬೇರೆ ಬೇರೆ ಉಪಾಯಗಳನ್ನು ಹುಡುಕುತ್ತಿರುತ್ತಾರೆ ಎನ್ನುವುದು ಈ ಕಥೆಯ ಮೂರ್ತಿ, ಸಾವುಕಾರ, ಹಾಗೂ ಕಥೆಯ 'ಆಕೆ' ಎಲ್ಲರ ಮೂಲಕ ಮನದಟ್ಟಾಗುತ್ತದೆ.

'ಹೀಗೊಂದು ಲೋಕವುಂಟು' ಕಥೆಯ ಮಾಧವ ಹಾಗೂ ಪದ್ಮರ ನಡುವೆ ಹೊಂದಾಣಿಕೆಯ ಕೊರತೆಯಿದೆ, ಅಭಿರುಚಿಯ ಅಂತರವಿದೆ. ಮಾಧವ ಸದಾ ತನ್ನ ತೋಟ, ಭೂಮಿಯೆಂದು ಅದರಲ್ಲೆ ಸಮಯ ಕಳೆದರೆ ಪದ್ಮಾ ಅದನ್ನು ತಿರಸ್ಕರಿಸಿ ಪೇಟೆಯ ಬದುಕನ್ನು, ಆರಾಮದ ಉದ್ಯೋಗವನ್ನು ನಿರೀಕ್ಷಿಸುವಳು.

ಭಾವನೆಗಳಲ್ಲೇ ಬದುಕುವ ಪದ್ಮಾ, ವಾಸ್ತವತೆಯ ಅರಿವಿರುವ ಮಾಧವ ಇವರಿಬ್ಬರ ನಡುವಿನ ಮಾತಿನ ಹೊಯ್ದಾಟಗಳು ಪರಸ್ಪರ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವಲ್ಲಿ ಸೋಲುತ್ತಿದ್ದಾರೆ ಎನ್ನುವುದನ್ನು ಕಥೆಯು ಸೂಕ್ಷ್ಮವಾಗಿ ತೆರೆದಿಡುತ್ತದೆ.

'ಕಳೆದು ಹೋದ ದಿನಗಳು' ಕಥೆಯಲ್ಲಿ ತನ್ನ ತಾಯಿಯ ಬಗೆಗೆ ಬೇರೆಯವರು ಹೇಳಿದ ಮಾತನ್ನು ಕೇಳಿ ಶ್ರೀಕಾಂತ ಸಂಶಯ ಪಡುತ್ತಾನೆ. ಅದನ್ನು ತಿಳಿದ ತಾಯಿ ದುಃಖಪಡುತ್ತಾಳೆ. ವಿಚಾರವನ್ನು ನೇರವಾಗಿ

ತಾಯಿಯೊಡನೆ ಕೇಳಲಾರದೆ ಚಡಪಡಿಸುವ ಮಗ ಒಂದು ಕಡೆಯಾದರೆ, ತನ್ನ ಬಗ್ಗೆ ಮಗ ಸಂಶಯ ಪಟ್ಟುಕೊಂಡನಲ್ಲಾ ಎಂದು ಚಿಂತಿಸುವ ತಾಯಿ ಇನ್ನೊಂದು ಕಡೆ. ಯಾರದೋ ಚಾಡಿ ಮಾತುಗಳು ಕೌಟುಂಬಿಕ ಸಾಮರಸ್ಯವನ್ನು ಮುರಿದು ಹಾಕುವಲ್ಲಿ ಹೇಗೆ ಸಹಕಾರಿಯಾಗುತ್ತವೆ ಎಂಬುದು ಈ ಕಥೆಯಲ್ಲಿ ನಿರೂಪಿತವಾಗಿದೆ.

'ಒಂದೇ ನಾವೆಯ ಪಯಣಿಗರು' ಕಥೆಯ ಸರಳ ತನಗೆ ಗಂಡನಿಂದ ಆದ ಅನ್ಯಾಯಕ್ಕೆ ಪ್ರತಿಕಾರವನ್ನು ಕಿರಣನಲ್ಲಿ ತೋರಿಸುವುದಕ್ಕೆ ಹೋಗುತ್ತಾನೆ. ಮೊದಲ ಹೆಂಡತಿಯನ್ನು ಕಳೆದುಕೊಂಡ ಶ್ರೀಧರನಿಗೆ ಒಬ್ಬ ಮಗನಿದ್ದು ಸರಳನನ್ನು ಎರಡನೇ ವಿವಾಹವಾಗುತ್ತಾನೆ. ತಾಯಿಯಾಗುವ ನಿರೀಕ್ಷೆ ಹೊತ್ತ ಸರಳಗೆ ಅದು ಸಾಧ್ಯವಿಲ್ಲ ಎಂದಾದಾಗ ಆ ಸಿಟ್ಟು ಕಿರಣನ ಮೇಲೆ ತಿರುಗತೊಡಗುತ್ತದೆ.

ಕಿರಣನನ್ನು ವಿಷ ನೀಡಿ ಕೊಲ್ಲಬೇಕೆಂದು ಹೊರಟ ಸರಳನಲ್ಲಿ ಮಾತೃ ಹೃದಯ ಎಚ್ಚರವಾಗುತ್ತದೆ. ಸ್ವಂತ ಮಗುವಿಲ್ಲದಿದ್ದರೆ ಏನಾಯ್ತು? ಕಿರಣ ಮಗನಲ್ಲವೇ? ಎಂದು ಭಾವಿಸುವ ಸರಳ ತನ್ನ ಯೋಚನೆಗಾಗಿ ತಾನೇ ಹಳಿದುಕೊಳ್ಳುತ್ತಾಳೆ.

ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗೆ ತಾಯಿಯಾಗುವುದು ಹೇಗೆ ಸಹಜವೋ, ಇನ್ನೊಂದು ಹೆಣ್ಣಿನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗೂ ತಾಯಿಯಾಗುವುದು ಬದುಕಿನ ಶ್ರೇಷ್ಠತೆಯೆಂಬುದನ್ನು ಈ ಕಥೆ ನಿರೂಪಿಸುತ್ತದೆ.

'ಮುಖಾಮುಖಿ' ಕಥೆಯು ಗಂಡನ ಬೆಂಬಲವಿಲ್ಲದೆ ಧೈರ್ಯವಾಗಿ ಬದುಕನ್ನು ಎದುರಿಸುವ ಹೆಣ್ಣೊಬ್ಬಳ ಕಥೆಯಾಗಿದೆ. ಪಾರ್ತಕ್ಕನ ಗಂಡ ಅವಳನ್ನು ಬಿಟ್ಟು ದೇವಾಲಯವೊಂದರಲ್ಲಿ ಕೆಲಸಕ್ಕೆ ಸೆರಿದ್ದ. ತನ್ನ ತಾಯಿಯ ಮಾತಿನಂತೆ ಮಾಬಲ ಆತನ್ನು ಕರೆದುಕೊಂಡು ಬರಲು ಹೋದಾಗ ಆತ ಪರಿಚಯವಿಲ್ಲದವರಂತೆ ನಟಿಸಿ ತಾನು ಪಾರ್ತಕ್ಕನ ಗಂಡ ಶಂಕರ ಅಲ್ಲವೆಂದು ಬಿಡುತ್ತಾನೆ.

ಪಾರ್ತಕ್ಕನಂತಹ ಹೆಣ್ಣು ತನ್ನ ಬದುಕನ್ನು ತಾನೆ ರೂಪಿಸಿಕೊಳ್ಳುತ್ತಾಳೆ ಎನ್ನುವ ಧನಾತ್ಮಕ ಅಂಶವನ್ನು ಈ ಕಥೆ ನಿರೂಪಿಸುತ್ತದೆ.

'ರಮೆಯ ಒಂದಿರುಳು' ಕಥೆಯಲ್ಲಿ ಹೆಣ್ಣೊಬ್ಬಳ ಗಂಡನ ಮನೆಯಲ್ಲಿ ನಡೆಯುವ ಶೋಷಣೆಯ ಚಿತ್ರಣವಿದೆ. ವಿಧವೆ ರಮೆಯನ್ನು ವಿಧುರನಾದ ಮಾಧವ ಮದುವೆಯಾಗುತ್ತಾನೆ. ಅವನ ತಾಯಿ ರಮೆಗೆ ಕಷ್ಟಕೊಡುತ್ತಾಳೆ. ಅತ್ತೆ ಮನೆಯಲ್ಲಿ ದಿನ ಕಳೆಯುವುದಕ್ಕೆ ಒದ್ದಾಡುವ ರಮೆಯ ಚಿತ್ರಣ ಇಲ್ಲಿ ಮೂಡಿಬಂದಿದೆ.

'ಅಪ್ಪ' ಕಥೆಯಲ್ಲಿ ಮಕ್ಕಳು ಹಿರಿಯರಿಗೆ ಕೃತಘ್ನರಾಗಿರುವುದು ಕಂಡುಬರುತ್ತದೆ. ಈ ಕಥೆಯಲ್ಲಿ ಸೋಮುವಿನ ಅಪ್ಪನು ಮಗ ಹಾಗೂ ಸೊಸೆಯ ಹಂಗಿನಲ್ಲಿರಲಾಗದೆ ಮನೆಬಿಟ್ಟು ಹೋಗುತ್ತಾನೆ. ಟಿ.ವಿ. ಕಾರ್ಯಕ್ರಮವೊಂದರಲ್ಲಿ ತನ್ನ ತಂದೆ 'ಆನಂದಾಶ್ರಮ'ವನ್ನು ಸೇರಿದ್ದಾನೆಂದು ಟಿ.ವಿ. ಕಾರ್ಯಕ್ರಮ ವೀಕ್ಷಣೆಯಿಂದ ತಿಳಿಯುತ್ತದೆ. ಇದರಿಂದ ಪಶ್ಚತ್ತಾಪಗೊಂಡ ಮಗ ಹೋಗಿ ಅಪ್ಪನನ್ನು ಕರೆದುಕೊಂಡು ಬರುವ ಯೋಚನೆ ಮಾಡುತ್ತಾನೆ. ಈ ಕಥೆಯ ಕೇಂದ್ರ ಪಾತ್ರ ಗಂಡಾದರೂ ಮಾವನ ಆ ಸ್ಥಿತಿಯಲ್ಲಿ ಸೊಸೆಯ ಪಾಲೂ ಇದೆ ಎನ್ನುವುದು ಗಮನಾರ್ಹ.

'ಬೇವು ಬಿತ್ತಿ ಮಾವು ಬಯಸೆ' ಕಥೆಯು ಕ್ರೂರಿಗಳೂ ಬದಲಾಗುತ್ತಾರೆ ಎನ್ನುವುದನ್ನು ತಿಳಿಸಿಕೊಡುವ ಕಥೆಯಾಗಿದೆ. ಈ ಕಥೆಯಲ್ಲಿ ನಾಗಭಟ್ಟರು ಹಾಗೂ ಅವರ ಮಗ ಸದಾನಂದ ಪಕ್ಕದ ಜಮೀನುದಾರರನ್ನು ಹಾಗೂ ಅವರ ಮನೆಯವರನ್ನು ದ್ವೇಷಿಸುತ್ತಿದ್ದರು. ಇವರಿಗೆ ಕಿರುಕುಳ ಕೊಡುತ್ತಿದ್ದ ಅವರ ಮಗ ಶ್ರೀಕಾಂತ ಸತ್ತು ಹೋದಾಗ ಇವರಿಬ್ಬರೂ ಹಾಲು ಕುಡಿಯುತ್ತಾರೆ. ಇದು ಭಟ್ಟರ ಪತ್ನಿ ಕಾವೇರಮ್ಮನಿಗೆ ತುಂಬಾ ನೋವುಂಟುಮಾಡುತ್ತದೆ.

ಹೆಣ್ಣಿನ ವಿವೇಕ ಹಾಗೂ ತಾಯ್ತನದ ಉದಾತ್ತೆಯನ್ನು ಸೂಕ್ಮವಾಗಿ ತೆರೆದಿಡುವುದರ ಮೂಲಕ ಯಶಸ್ವಿ ಕಥೆಯೆನಿಸುತ್ತದೆ.

'ತೌರೂರ ಹಾದಿಯಲಿ' ಕಥೆಯು ಹೆಣ್ಣಿಗೆ ತೌರುಮನೆಯ ಬಗೆಗಿನ ಅವಿನಾಭಾವ ಸಂಬಂಧವನ್ನು ಕಟ್ಟಿಕೊಡುತ್ತದೆ. ತನ್ನ ಗಂಡ, ಮಕ್ಕಳೊಂದಿಗೆ ತವರು ಮನೆಗೆ ಹೋದ ಸುಮತಿಯನ್ನು ಅಲ್ಲಿ ಮಾತನಾಡಿಸುವವರಿರುವುದಿಲ್ಲ. ತನ್ನ ತಂದೆ ತೀರಿಹೋಗಿದ್ದಾನೆ ಎನ್ನುವ ವಿಚಾರವೂ ಆಕೆಗೆ ತಿಳಿದದ್ದು ಅಲ್ಲಿಗೆ ಹೋದ ಮೆಲೆಯೇ. ಪ್ರೀತಿಯಿಂದ ಮಾತಾನಾಡಿಸದ ಅಣ್ಣ ಅವಳ ಪಾಲಿಗೆ ಅಣ್ಣನಾಗಿ ಕಾಣಿಸಲೇ ಇಲ್ಲ. ಅಲ್ಲಿ ನಿಲ್ಲುವುದಕ್ಕೆ ಮನಸ್ಸಾಗದೆ ಹಿಂದಿರುಗುತ್ತಾಳೆ. ತಾಯಿಯ ಸುಳಿವೂ ಸಿಗದೆ ಆತಂಕಕ್ಕೊಳಗಾಗುತ್ತಾಳೆ.

ಹಿಂದಿರುಗಿ ಬರುವಾಗ ದಾರಿ ಮಧ್ಯದಲ್ಲಿ ಸಿಕ್ಕಿದ ತಿಮ್ಮಕ್ಕನ ಮಗ ಬಾಬು ಕರೆಯುತ್ತಾ ಮನೆಗೆ ಕರೆದುಕೊಂಡು ಹೋಗುತ್ತಾನೆ ಅವನು ಹೇಳುವ 'ಮಾತೆರ್ಲಾ ಬಲೆ, ನಮಾ ಇಲ್ಲಗ್ ಪೋಯ್, ಔಲ್ ಏತ್ಲಾ ಪಾತೆರೊಲಿ' (ಈ ಪ್ರಜಾರಾಜ್ಯದೊಳಗೆ, ಪು. ೧೧೪, ೨೦೦೬) ಎನ್ನುವ ಮಾತು ಕೇಳಿದಾಗ ಸುಮತಿ ತನ್ನ ಗಂಡನ ಮುಖ ನೋಡುತ್ತಾಳೆ. ಆತ ಒಪ್ಪಿಗೆ ಸೂಚಿಸುತ್ತಾನೆ. 'ಇನ್ನೆಲ್ಲಿಗೂ ಬೇಡಮ್ಮ , ಒಮ್ಮೆ ಬೈಗುಳು ಕೇಳಿದ್ದೇ ಸಾಕು' (ಅದೇ.... ಪು. ೧೧೪,) ಎಂದ ಮಗನ ಮಾತಿಗೆ ಸುಧಾಕರ 'ಇಲ್ಲ ಪುಟ್ಟ ನಾವು ಹೋಗಬೇಕಾಗಿದ್ದುದು ಈ ಮನೆಗೇ. ಆಗ ತಪ್ಪಿ ಅಲ್ಲಿಗೆ ಹೋದೆವಷ್ಟೆ

ಇಲ್ಲಿ ನಿನ್ನಮ್ಮನ ಸಾಕು ತಾಯಿಯನ್ನು ನೋಡುವಿರಂತೆ' (ಅದೇ. . .ಪು. ೧೧೪,) ಎನ್ನುವ ಮಾತು ನಿಜವಾಗಿ ಇರಬೇಕಾದ ಸಂಬಂಧವನ್ನು ಅದು ಹೊರಟು ಹೋದುದರ ನೋವನ್ನು ಕಟ್ಟಿಕೊಡುತ್ತದೆ.

ಕುಟುಂಬ ಜೀವನದೊಳಗೆ ಮನುಷ್ಯ ಸಂಬಂಧಗಳ ಕ್ಲೀಷೆಗಳಿಗೆ ಹೊಸ ಅರ್ಥ ಸಾಧ್ಯತೆಯ ಹೆಣ್ಣಿನ ಅಸ್ಮಿತೆಯ ಪಾತ್ರಗಳನ್ನು ಗಂಗಾ ಪಾದೇಕಲ್‌ರವರು ಸೃಷ್ಟಿಸುತ್ತಾರೆ. ಭಾರತೀಯ ಸಮಾಜದ ಒಳಗಡೆ ಕುಟುಂಬದಲ್ಲಿ ಹೆಣ್ಣು ಕಂಡುಕೊಳ್ಳುವ ನೆಲೆ, ಸ್ಥಾನ-ಮಾನಗಳಿಗೆ, ಹೊಸ ಅರ್ಥ ಛಾಯೆಯ ವಿಶ್ಲೇಷಣೆಗಳು ದಕ್ಕುತ್ತವೆ. ತವರು ಮತ್ತು ಕುಟುಂಬ ಇವೆರಡರ ಮಧ್ಯೆ ಬದಲಾಗುತ್ತಿರುವ ಜಗತ್ತಿನಲ್ಲಿ ಹೆಣ್ಣಿನ ಬದಲಾಗುವ ಸ್ವರೂಪವು ಮುಖ್ಯವಾಗುತ್ತದೆ. ತಾಯ್ತನಕ್ಕೆ ಹೊಸ ಅರ್ಥವನ್ನು ನೀಡಿ ಆ ಮೂಲಕ ಅಸ್ಮಿತೆಯ ದನಿಯನ್ನು ವಿಸ್ತಾರಗೊಳಿಸಿರುವುದು ಇವರ ವೈಶಿಷ್ಟ್ಯ.

ಪಕ್ವವಾದ ಜೀವನ ಅನುಭವಗಳು, ಮನುಷ್ಯನ ಲೋಲುಪತೆಯ ವಾಂಛೆಯ ಆಚೆಗೆ ಹೇಗೆ ಸ್ಫುಟವಾಗಿ ನಿಲ್ಲುತ್ತವೆ ಎನ್ನುವುದು ಪ್ರಮುಖವಾದ ಅಂಶವಾಗಿದೆ.

ಮಿತ್ರಾವೆಂಕಟ್ರಾಜ್‌ರವರ,

ಹೂವಿನ ಪೂಜೆ (ಮಾಯಕದ ಸತ್ಯ, ೨೦೧೦)

ಹಕ್ಕಿ ಮತ್ತು ಅವಳು (ಹಕ್ಕಿ ಮತ್ತು ಅವಳು, ೧೯೯೭)

ಕರೆ (ರುಕುಮಾಯಿ, ೧೯೯೦)

'ಹೂವಿನ ಪೂಜೆ' ಕಥೆಯಲ್ಲಿ ಬರುವ 'ರಾಜಿ' ಕಥೆಯ ಕೇಂದ್ರ ಪಾತ್ರವಾಗಿದೆ. ರಾಜಿ ಹಾಗೂ ಶ್ಯಾಮಲಿಯ ಸಾವು ಸಮಾಜದಲ್ಲಿ ಅನೇಕ ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ರಾಜಿ ಎಲ್ಲರಿಗೂ ಬೇಕಾದವಳಾಗಿ ಬೆಳೆದವಳು. ಗೋಡೆಯ ಮೇಲಿನ ಮೊಳೆಗೆ ಸಿಕ್ಕಿಸಿದ್ದ ರಾಜಿ ಮತ್ತು ಶ್ಯಾಮಲಿ ಒಟ್ಟಿಗಿದ್ದ ಫೋಟೋದಲ್ಲಿನ ಅವರ ಮುಗುಳ್ನಗೆಯನ್ನು ನೋಡುತ್ತಿದ್ದಂತೆ ಮಾಧವಣ್ಣನು 'ಅವರ ಹುಚ್ಚುಕನಸು ಮುಗಿದ ಮೇಲಿನ ವಾಸ್ತವದ ಅರಿವು ಅವರಿಗಿನ್ನೂ ಆಗಿಯೇ ಇಲ್ಲವೇನೋ' ಎಂದು ತಿಳಿದುಕೊಳ್ಳುತ್ತಾನೆ.

ಹೆಣ್ಣೊಬ್ಬಳ ಮನಸ್ಸಿನ ಒಳಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳುವ ಗೊಡವೆಗೆ ಸಮಾಜ ಹೋಗುವುದಿಲ್ಲ. ಅವಳ ಸಾವು ಅನೇಕರ ಅನುಮಾನಗಳಿಗೆ ಎಡೆಮಾಡಿಕೊಡುತ್ತದೆಯೇ ವಿನಃ ಸತ್ಯವನ್ನು ಅರಿಯುವ ಪ್ರಯತ್ನ ನಡೆಸುವುದಿಲ್ಲ.

'ಹಕ್ಕಿ ಮತ್ತು ಅವಳು' ಕಥೆಯ ಹೆಣ್ಣು ಅಸ್ಮಿತೆಯ ಹುಡುಕಾಟದಲ್ಲಿ ತೊಡಗಿದವಳು. ಆರಂಭದಲ್ಲಿ ಅಡುಗೆ ಮನೆಯ ಕಿಟಕಿಯಲ್ಲಿ ಕುಳಿತು ಹೊರಗೆ ಕರೆಯುತ್ತಿದ್ದ ಆ ಹಕ್ಕಿಯ ಮಾತುಗಳು ಆಕೆಗೆ ಕೋಪ ತರಿಸುತ್ತಿತ್ತು. 'ಮನೆಯೆಂಬ ಪಂಜರ'ದೊಳಗೆ ತಾನು ಸುಖವಾಗಿದ್ದೇನೆ ಎಂದು ಅನಿಸುತ್ತಿತ್ತು. 'ನಿನ್ನ ಮನೆಯ ಬೆಚ್ಚಗಿನ ವಾತಾವರಣ ನನ್ನ ಮಟ್ಟಿಗೆ ಗರ್ಮಿಯಾದೀತು. ಬೇಡ ನಾನಿಲ್ಲೇ ಇರುವೆ' (ಹಕ್ಕಿ ಮತ್ತು ಅವಳು, ಪು. ೩೩, ೧೯೯೭) ಎಂಬ ಹಕ್ಕಿಯ ಮಾತು ಆಕೆಯನ್ನು ಬಂಧನದಿಂದ ಹೊರಗೆ ಬರುವಂತೆ ಪ್ರೇರೇಪಿಸುತ್ತದೆ.

ಒಂದು ಮುಂಜಾನೆ ಅಡುಗೆ ಮನೆಯಲ್ಲಿ ಚಪಾತಿ ಕಾಯಿಸುತ್ತಿದ್ದ ಅವಳು ಇದ್ದಕ್ಕಿದ್ದಂತೆ ಕಾಣೆಸದಿರುವುದು ಆಕೆಯ ಗಂಡನಿಗೆ ಆತಂಕವನ್ನುಂಟು ಮಾಡುತ್ತದೆ. ರಮಾನಂದ ಅಡುಗೆ ಮನೆಗೆ ಬಂದು ಚಪಾತಿ ಲಟ್ಟಿಸುತ್ತಿದ್ದಂತೆ ಅತ್ತ ಕಾವಲಿಯ ಮೇಲಿನ ಚಪಾತಿಯ ಗುಳ್ಳೆಗಳು ಒಡೆದು ಕರಟಿ ಬಿಡುತ್ತಿದ್ದವು. ಇಲ್ಲಿ ಕರಟಿದ್ದು ಕೇವಲ ಚಪಾತಿಯಲ್ಲ, ಸಾಂಸಾರಿಕ ಬದುಕು ಕೂಡಾ ಕರಟಿ ಹೋಗುತ್ತದೆ. ಕಿಟಕಿಯಾಚೆ ಗೆಲ್ಲಿಗಾನಿಸಿ ಕುಳಿತ ಹಕ್ಕಿಯ ಕಣ್ಣುಗಳನ್ನು ನೋಡಿದಾಗ ರಮಾನಂದನಿಗೆ ಸಂಶಯ ಉಳಿಯುವುದಿಲ್ಲ. ಪ್ರಾಯಶಃ ಮನೆಯೆಂಬ ಬಂಧನದಿಂದ ಹೊರಗೆ ಕಾಲಿಡದ ಹೊರತು ಹೆಣ್ಣಿಗೆ ಸ್ವಾತಂತ್ರ್ಯ ಎಂಬುದು ಕನಸಿನ ಮಾತು ಎಂಬುದನ್ನು ಈ ಕಥೆ ಸ್ಪಷ್ಟಪಡಿಸುತ್ತದೆ.

ಮಿತ್ರಾ ವೆಂಕಟ್ರಾಜರವರ 'ಕರೆ' ಕಥೆಯು ಕೌಟುಂಬಿಕ ಸಂಘರ್ಷವೊಂದರಲ್ಲಿ ಸಿಲುಕಿ ನಲುಗುವ ಹೆಣ್ಣಿನ ಕಥೆಯಾಗಿದೆ. ಕಥೆಯ ಕೇಂದ್ರ ಪಾತ್ರ ಸರಸೋತಿಯಲ್ಲಿ ತಾಯಿಯೊಬ್ಬಳ ಆತಂಕ, ವೇದನೆ, ಸಂಬಂಧ ಸರಿಪಡಿಸುವುದಕ್ಕಾಗಿ ನಡೆಸುವ ಹೋರಾಟ ಎಲ್ಲವೂ ಇದೆ. 'ಎದುರು ತಿಂಡಿ ನೋಡಿದರೆ ಎಳೆಯ ಮನಸ್ಸು ಸುಮ್ಮನಿರುತ್ತದೆಯೇ ? ಪೆಟ್ಟು ಕೊಡುವಷ್ಟು.....' (ರುಕುಮಾಯಿ, ಪು. ೧೮, ೧೯೯೦) ಎಂಬ ಆಕೆಯ ಮಾತಿನಲ್ಲಿ ಮಾತೃಹೃದಯದ ಪ್ರೀತಿ ಇದೆ. ಒಂದಾಗಿದ್ದ ಮನೆ ಎರಡಾದದ್ದು, ಆಚೆ ಮನೆಯ ಮಗುವಿನ ಬಿಡುವಿಲ್ಲದ ಅಳು ಎಲ್ಲವೂ ಆಕೆಯನ್ನು ಚಿಂತೆಗೀಡುಮಾಡುತ್ತದೆ. ಆದರೆ ತನ್ನದೇನೂ ಈ ಮನೆಯಲ್ಲಿ ನಡೆಯುವುದಿಲ್ಲ ಎಂಬ ನೋವಿನ ನಡುವೆಯೂ ಶ್ರೀನಿವಾಸನ ಅಳುತ್ತಿರುವ ಮಗುವನ್ನು ಹೋಗಿ ಸಮಾಧಾನ ಪಡಿಸಿ ಬರುವಷ್ಟು ಮಾತೃ ಹೃದಯ ಸರಸೋತಿಯದ್ದು.

ಮಿತ್ರಾವೆಂಕಟ್ರಾಜ್‌ರವರು ಹೆಣ್ಣಿನ ವ್ಯಕ್ತಿ ಸ್ವಾತಂತ್ರ್ಯದ ಬಗೆಗೆ ಸ್ಪಷ್ಟತೆ ಮತ್ತು ಖಚಿತತೆಯನ್ನು ತಮ್ಮ ಕಥೆಗಳಲ್ಲಿ ಹೇಳುತ್ತಾರೆ. ವ್ಯಕ್ತಿ ಮೌಲ್ಯಗಳ ಪ್ರತಿಪಾದಕಿಯಾಗಿ ಮತ್ತೆ ಮತ್ತೆ ಇದನ್ನು ನಿರೂಪಿಸುವ ಮೂಲಕ ಹೆಣ್ಣಿನ ಸ್ವಾಯತ್ತತೆಯನ್ನು ಮತ್ತು ಸ್ವಾವಲಂಬನೆಯನ್ನು ಅಸ್ಮಿತೆಯ ಪ್ರತಿಧ್ವನಿಯನ್ನಾಗಿಸುತ್ತಾರೆ.

ಮನೆಯ ಒಳಗಿನ ಮತ್ತು ಮನೆಯ ಹೊರಗಿನ ಬದುಕಿನಲ್ಲಿ ಹೆಣ್ಣು ತನ್ನ ಸ್ಥಾನವನ್ನು ಕಲ್ಪಿಸಿಕೊಳ್ಳಬೇಕಾದ ದೃಢತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಕೌಟುಂಬಿಕ ಸಂಘರ್ಷ ಹೆಣ್ಣಿನ ವ್ಯಕ್ತಿತ್ವಕ್ಕೆ ಮಸಿ ಬಳಿಯುವಂತಾದಾಗ ತನ್ನತನವನ್ನು ಹೇಗೆ ದೃಢವಾಗಿ ಉಳಿಸಿಕೊಳ್ಳಬೇಕೆಂದು ಸಿದ್ಧ ಮಾದರಿಯ ರೂಪಗಳಲ್ಲಿ ಅಲ್ಲದೆ ತನ್ನ ಅಸ್ತಿತ್ವದ ಹುಡುಕಾಟದಲ್ಲಿಯೇ ನಿಜವಾದ ಅಸ್ತಿತ್ವವಿದೆ ಎಂದು ಪ್ರತಿಪಾದಿಸುತ್ತಾಳೆ.

ವೈದೇಹಿಯವರ,

ಆತ (ಅಲೆಗಳಲ್ಲಿ ಅಂತರಂಗ, ೨೦೦೬)

ಸೌಗಂಧಿಯ ಸ್ವಗತಗಳು (ಅಲೆಗಳಲ್ಲಿ ಅಂತರಂಗ, ೨೦೦೬)

ಕೊಳ (ಅಲೆಗಳಲ್ಲಿ ಅಂತರಂಗ, ೨೦೦೬)

ಪದವೀಧರ (ಅಲೆಗಳಲ್ಲಿ ಅಂತರಂಗ, ೨೦೦೬)

ತೆರೆಯದ ಪುಟಗಳು (ಅಲೆಗಳಲ್ಲಿ ಅಂತರಂಗ, ೨೦೦೬)

'ಆತ' ಕಥೆಯಲ್ಲಿ ಸುಮನಳಿಗೆ ತನ್ನ ಗಂಡನಾದ ಮನಿಷನ ಬಗೆಗಿರುವ ಅತೃಪ್ತಿಯೇ ಆತನಂತೆ ಇರುವ ಇತರ ವ್ಯಕ್ತಿಗಳನ್ನು ಭ್ರಮಿಸುವಂತೆ ಮಾಡುತ್ತದೆ. ತನ್ನ ಕಣ್ಣಿಗೆ ಸುಂದರವಾಗಿ ಕಾಣದ ಮನಿಷನ ಜೊತೆ ತನಗೆ ಪರಿಚಯವಿರುವ ಅನೇಕ ಪುರುಷರನ್ನು ಹೋಲಿಸಿ ನೋಡುತ್ತಾಳೆ. 'ಅಂದ ಹಾಗೆ ಮನಿಷನನ್ನು ನೆನೆಸಿಕೊಂಡರೆ ಯಾಕೆ ನನಗೆ ರೋಮಾಂಚನವಾಗುವುದಿಲ್ಲ? ದೇಹ ಕಂಪಿಸುವುದಿಲ್ಲ? ಮುಖದಲ್ಲಿ ರಕ್ತ ಉಕ್ಕುವುದಿಲ್ಲ? ಎರಡು ಮೂರು ದಿನಗಳಿಂದ ಒಟ್ಟಿಗಿದ್ದರೂ ಅವನ ಮುಖವೇಕೆ ನೆನೆಸಿಕೊಂಡರೂ ಕಣ್ಣಮುಂದೆ ಸ್ಪಷ್ಟವಾಗಿ ಬರುವುದಿಲ್ಲ? ಮನಿಷನಿಂದ ನಾನು ಪೂರ್ಣನಾದೆನೆ'? (ಅಲೆಗಳಲ್ಲಿ ಅಂತರಂಗ, ಪು. ೨೦೦೬) ಎಂದು ತನ್ನಲ್ಲೇ ಹುಟ್ಟಿಕೊಳ್ಳುವ ಪ್ರಶ್ನೆಗಳಿಗೆ ಮನಿಷನ ಬಗೆಗಿನ ಅತೃಪ್ತಿಯೆ ಉತ್ತರವಾಗಿದೆ. ಅಂದರೆ ತನಗೆ ಮನಸ್ಸಿಲ್ಲದವನ ಜೊತೆ ಬದುಕಲೇಬೇಕಾದ ಅನಿವಾರ್ಯತೆ ಸುಮನಳನ್ನು ಕಾಡುತ್ತದೆ.

'ಸೌಗಂಧಿಯ ಸ್ವಗತಗಳು' ಕಥೆಯ ಸೌಗಂಧಿ ಲೈಂಗಿಕ ಸ್ವಾತಂತ್ರ್ಯಕ್ಕಾಗಿ ಹಾತೊರೆಯುವ ಹೆಣ್ಣಾಗಿ ಕಾಣುತ್ತಾಳೆ. ಆದರೆ ಅದುಮಿಟ್ಟುಕೊಂಡ ತನ್ನ ಒಳಗಿನ ಆಸೆಗಳನ್ನು ಯಾರ ಮುಂದೆಯೂ ಹೇಳಿಕೊಳ್ಳಲಾಗದೆ ಚಡಪಡಿಸುತ್ತಾಳೆ. 'ತಾನೀಗ ಏಳು ಕೋಟೆಯಾಚೆಗಿನ ಅರಮನೆಯಿಂದ ತಪ್ಪಿ ಹಾರಿ ಬಂದ ಹಕ್ಕಿ'.. (ಅಲೆಗಳಲ್ಲಿ ಅಂತರಂಗ, ಪು. ೩೩೬, ೨೦೦೬) ಎಂದುಕೊಳ್ಳುವ ಸೌಗಂಧಿಯ ಸ್ವಾತಂತ್ರ್ಯವನ್ನು ಅಪಹರಿಸುವ ಅಪಹರಣಕಾರಿಯಂತೆ ಮನೆಯೊಡತಿ ಕಾಣುತ್ತಾಳೆ. ತನ್ನ ಕನಸುಗಳಿಗೆ ಅರ್ಥ ಹುಡುಕುವ ಸೌಗಂಧಿ ಸಾಂಪ್ರದಾಯ

ಎಂಬ ಬೇಲಿಯನ್ನು ಮುರಿದು ಹೊರಬರಲಾರದೆ ಚಡಪಡಿಸುತ್ತಾಳೆ. ಹೆಣ್ಣೊಬ್ಬಳ ಸಹಜ ಭಾವನೆ, ಹೊಯ್ದಾಟದ ಸ್ಥಿತಿಯನ್ನು ವೈದೇಹಿಯವರು ಒಬ್ಬ ಮನಃಶಾಸ್ತ್ರಜ್ಞೆಯಾಗಿ ವಿಶ್ಲೇಷಿಸುತ್ತಾರೆ.

'ಕೊಳ' ಕಥೆಯು ಅದೆಷ್ಟೋ ಬಾರಿ ವಾಸ್ತವಕ್ಕಿಂತ ಕನಸಿನ ಪ್ರಪಂಚವೇ ಹಿತವಾದದ್ದು ಎನ್ನುವುದನ್ನು ನಿರೂಪಿಸುತ್ತದೆ. ಕಹಿಯಾದ ವಾಸ್ತವಕ್ಕಿಂತ ಸಿಹಿಯಾದ ಕಲ್ಪನೆ ಮನುಷ್ಯನಿಗೆ ಎಷ್ಟೋ ಸಲ ಆಪ್ಯಾಯಮಾನವಾಗುತ್ತದೆ. ಪಟ್ಟಣದ ಬದುಕಿಗೆ ಬೇಸತ್ತ ನಿರೂಪಕಿ ದೂರ ಹೋಗಿ ತಂಪಾದ ಗಾಳಿ ಸೇವಿಸುತ್ತಾ ಬದುಕಬೇಕೆಂದು ಬಯಸುತ್ತಾಳೆ. ಅಪಘಾತದಿಂದ ಜೀವ ಉಳಿಸಿಕೊಂಡು ಬಂದ ಗಂಡನನ್ನು ಕಂಡಾಗ ಮತ್ತೆ ವಾಸ್ತವ ಪ್ರಪಂಚಕ್ಕೆ ಮುಖ ಮಾಡುತ್ತಾಳೆ. ಈ ಕಥೆಯು ವಾಸ್ತವ-ಕಾಲ್ಪನಿಕಗಳ ಮೂಲಕ ಬದುಕಿನ ಸತ್ಯ – ಅಸತ್ಯಗಳ ಕಡೆಗೆ ದೃಷ್ಟಿ ಹಾಯಿಸುತ್ತದೆ.

'ಪದವೀಧರ' ಕಥೆಯಲ್ಲಿನ ಸೋಮು ತನ್ನ ವಿದ್ಯಾರ್ಥಿ ಜೀವನವನ್ನು ಬೇಕಾಬಿಟ್ಟಿ ಕಳೆದು ಪದವಿ ಪಡೆಯುತ್ತಾನೆ. ಆದರೆ ಮದುವೆಯಾಗಿ ಬಂದ ಹೆಂಡತಿ ಆತನ ಪದವಿಯನ್ನು, ಅಂಕ ಪಟ್ಟಿಯನ್ನೂ ನೋಡಿ ಸಂತೋಷಪಡುತ್ತಾಳೆ. ಇಂಥ ವಿದ್ಯಾವಂತನ್ನು ಪಡೆದ ನಾನು ಅದೃಷ್ಟವಂತೆ ಎಂದು ಭಾವಿಸುತ್ತಾಳೆ. ಯಾರಿಂದಲೂ ಹೊಗಳಿಸಿಕೊಳ್ಳದ ಸೋಮುವಿಗೆ ಒಳಗೊಳಗೆ ತಾನು ಮಾಡಿದ ತಪ್ಪಿನ ಅರಿವಾದರೂ ಹೆಂಡತಿಯ ನಂಬಿಕೆಯ ಬಗೆಗೆ ಅತೀವ ಹರ್ಷಪಡುತ್ತಾನೆ. ಹೆರಿಗೆಗಾಗಿ ತವರು ಮನೆ ಸೇರಿದ ಹೆಂಡತಿಗೆ ಸೋಮು ಪತ್ರ ಬರೆಯುತ್ತಾನೆ. ಪತ್ರದಲ್ಲಿದ್ದ ತಪ್ಪುಗಳನ್ನು ನೋಡಿದ ಆಕೆ ತಮಾಷೆಗಾಗಿಯೇ ಬರೆದ ತಪ್ಪುಗಳು ಎಂದು ಭಾವಿಸುತ್ತಾಳೆ. 'ಏನು ತಮಾಷೆ ! ಎಷ್ಟು ಚೆನ್ನಾಗಿ ಬರೆದಿದ್ದೀರಿ ! ನನಗೆ ಪ್ರಯತ್ನಿಸಿದರೂ ಅಷ್ಟು ತಪ್ಪು ತಪ್ಪಾಗಿ ಅಸಂಬದ್ಧವಾಗಿ ಬರೆಯಲು ಅಸಾಧ್ಯ ಇದೆಲ್ಲ ನನ್ನ ಅಗಲಿಕೆಯ ನೋವು ಮಾಡಿದ ಕೆಲಸವೆಂತ ನಂಬಲೇ? ಇಲ್ಲವಾದರೆ ಅಷ್ಟು ತಪ್ಪುಗಳನ್ನು ನಿಮ್ಮಂಥವರು ಮಾಡುವುದಾದರೂ ಹೇಗೆ?...' (ಅಲೆಗಳಲ್ಲಿ ಅಂತರಂಗ, ಪು. ೪೪, ೨೦೦೬) ಎಂಬ ಮಾತುಗಳು ಆಕೆಗೆ ಗಂಡನ ಬಗೆಗಿರುವ ವಿಶ್ವಾಸವನ್ನು ತೋರಿಸುತ್ತದೆ.

'ತೆರೆಯದ ಪುಟಗಳು' ಕಥೆಯ ರಾಜತ್ತೆಯು ಅನೇಕ ಮಂದಿಗೆ ಆಸರೆ ಕೊಟ್ಟವಳು. ಆಕೆಯ ಬದುಕಿನ ಪುಟಗಳನ್ನು ತೆರೆದು ನೋಡುವ ಆಸೆ ಉಳಿದವರಿಗಾದರೂ ಆಕೆ ಪೂರ್ತಿ ತೆರೆಯುವುದೇ ಇಲ್ಲ. ಆಕೆಯ ಬದುಕಿನ ಪುಟಗಳನ್ನು ಒಂದೊಂದಾಗಿ ಬಿಚ್ಚ ಹೊರಡುವವರಿಗೆ ಎಲ್ಲವೂ ದೊರೆಯುವುದಿಲ್ಲ. ಬದುಕಿನ ಪುಟಗಳನ್ನು ಪೂರ್ತಿ ತೆರೆಯದೆ ಉಳಿಸಿಕೊಂಡ ರಾಜತ್ತೆಯಲ್ಲಿ ಅಸ್ತಿತ್ವದ ಹುಡುಕಾಟವಿದೆ.

ಕುಟುಂಬವನ್ನು ಒಪ್ಪಿಕೊಳ್ಳುವ ಒಂದು ಮಾದರಿ, ಮಹಿಳಾ ಅಸ್ಮಿತೆಯ ದನಿಯಾಗಿ ಕಾಣಿಸಿಕೊಂಡರೂ ಆ ಚೌಕಟ್ಟಿನ ಒಳಗಡೆಯೇ ಹೆಣ್ಣು ತನ್ನ ಅನನ್ಯತೆಯನ್ನು ಹೇಗೆ ಕಾಯ್ದುಕೊಳ್ಳಬಹುದು ಎನ್ನುವುದು ಮುಖ್ಯವಾಗುತ್ತದೆ. ದೇಹ – ಮನಸ್ಸುಗಳ ಸ್ವಸ್ಥತೆಗೆ ಕುಟುಂಬದ ಒಳಗಡೆಯೇ ಪೂರ್ಣವಿರಾಮವನ್ನು ಹಾಕಿಕೊಳ್ಳಬೇಕಾದ ಮಿತಿಗಳನ್ನು ಮೀರಿ ಅದನ್ನು ಪ್ರಶ್ನಿಸುವ ಕುಟುಂಬ ಜೀವನವನ್ನು ಧಿಕ್ಕರಿಸಿ ಮುನ್ನಡೆಯುವ ನೆಲೆಯೂ ಮಹಿಳಾ ಅಸ್ಮಿತೆಯ ಇನ್ನೊಂದು ದನಿಯಾಗಿ ಗೋಚರಿಸುತ್ತದೆ. ಕುಟುಂಬವೆನ್ನುವುದು ಸಾಮಾಜಿಕ ಬಂಧನವೆಂದು ಪರಿಗ್ರಹಿಸುತ್ತ ವಿವಾಹ ಸಂಸ್ಥೆಯ ಒಳಗಡೆ ದಾಖಲಾಗದೆ ವ್ಯವಸ್ಥೆಯನ್ನೇ ಧಿಕ್ಕರಿಸುವ ಪ್ರತಿರೋಧದ ಧ್ವನಿಯೊಂದಿಗೆ ಮಹಿಳೆ ಮಹಿಳಾ ಅಸ್ಮಿತೆಯ ಧ್ವನಿ ಗೋಚರಿಸುತ್ತದೆ. ಕುಟುಂಬವಿದ್ದೂ ಒಂಟಿಯಾಗುವವಳು, ಕುಟುಂಬ ಇಲ್ಲದೆಯೂ ಒಂಟಿಯಾಗುವವಳು ಎಂಬ ಎರಡೂ ನೆಲೆಗಳು ಗೋಚರಿಸುತ್ತವೆ. ಆ ಮೂಲಕ ಮಹಿಳಾ ಅಸ್ಮಿತೆಯ ಧ್ವನಿ ಗೋಚರಿಸುತ್ತದೆ.

ಹೆಣ್ಣು ತನ್ನನ್ನು ತಾನು ಕುಟುಂಬದ ಒಳಗೆ ಮತ್ತು ಹೊರಗೆ ಕಂಡುಕೊಳ್ಳುವ ಪಾತ್ರಗಳಿಂದ ಅವಳ ಸ್ಥಾನಮಾನವನ್ನು ನಿರೂಪಿಸಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ತಾನೊಬ್ಬಳು ವ್ಯಕ್ತಿಯಾಗಿ ಗುರುತಿಸಿಕೊಳ್ಳುವಾಗ ವ್ಯಕ್ತಿ ಸ್ವಾತಂತ್ರ್ಯದ ಕಡೆಗೆ ಗಮನ ಹರಿಸುತ್ತಾಳೆ. ಸಹನೆ, ತಾಳ್ಮೆ, ಕ್ಷಮೆಗಳೇ ಹೆಣ್ಣಿನ ಪ್ರತಿರೂಪಗಳಾಗದೆ, ವೈಯಕ್ತಿಕ ಆಸೆ, ಆಕಾಂಕ್ಷೆ ಅಭಿಪ್ರಾಯಗಳ ಜೊತೆಗೆ ಖಚಿತವಾದ ನಿಲುವುಗಳು ಮುಖ್ಯವಾಗುತ್ತವೆ. ಯಾವ ವಿಚಾರವಾಗಿಯೂ ತಾನು ಯೋಚಿಸಲು ಸಾಧ್ಯವಿಲ್ಲ ಎನ್ನುವ ಕಾಲಘಟ್ಟಕ್ಕಿಂತ ಭಿನ್ನವಾಗಿ ಅಸ್ಮಿತೆಯನ್ನು ಪ್ರತಿನಿಧಿಸುವ ಸ್ತ್ರೀ ಪಾತ್ರಗಳು ಲೈಂಗಿಕ ಸ್ವಾತಂತ್ರ್ಯದ ಬಗೆಗೂ ಮನಬಿಚ್ಚಿ ಮಾತನಾಡಲು ಸಾಧ್ಯವಾಗುತ್ತದೆ. ಬದುಕಿನ ಬಾಳಸಂಗಾತಿಯ ಆಯ್ಕೆಯಲ್ಲಿ ಸರಿ ತಪ್ಪುಗಳ ನಿರ್ದೇಶನಗಳೊಂದಿಗೆ ತೃಪ್ತಿ, ಅತೃಪ್ತಿಗಳು ಮುಖ್ಯವಾಗುತ್ತವೆ. ಹಾಗಾದಾಗ, ಅದನ್ನು ಅವಾಸ್ತವವೆಂದು ನಿರಾಕರಿಸಲು ಹೆಣಗದೆ ವಾಸ್ತವಿಕತೆಯ ತಳಪಾಯದಲ್ಲಿ, ಬದುಕು ಕಟ್ಟಲು ಹೆಣಗಾಡುವ ಹೆಣ್ಣು ಮಕ್ಕಳ ಚಿತ್ರಣಗಳಿವೆ. ಸಂಸಾರದ ಸ್ವಾರಸ್ಯವನ್ನು ವೃದ್ಧಿಸುವ ಹೆಣ್ಣಿನ ಮುಷ್ಠಿಯೊಳಗಿನ 'ಮಾಯಾಜಾಲ' ವಾಗದೆ ಬದುಕನ್ನು ಸ್ವೀಕರಿಸುವ ಮನೋಧರ್ಮವೇ ಮುಖ್ಯವೆನಿಸುತ್ತದೆ.

ವರ್ತಮಾನದಲ್ಲಿ ಬದುಕುವ ಹೆಣ್ಣು 'ಭೂತ'ವನ್ನು ಮರೆಯದೆ ತನ್ನನ್ನು ತಾನು ಅರಗಿಸಿಕೊಳ್ಳುವ ನೆಲೆಯಲ್ಲಿ, 'ಹೆಣ್ಣೆಂದರೆ ಹೀಗೆಯೇ. . .' ಎನ್ನುವ ರೂಢಿಗತ ಚೌಕಟ್ಟನ್ನು ದಾಟಿ ಹೊರಬರಲು ಸಾಧ್ಯವಾಗುತ್ತದೆ. 'ಪದವೀಧರ' , 'ಆತ', 'ಕೊಳ' ಮುಂತಾದ ಕಥೆಗಳಲ್ಲಿ ಈ ಮೇಲಿನ ಅಂಶಗಳು ಸ್ಪಷ್ಟವಾಗುತ್ತವೆ.

೭.೩. ಧಾರ್ಮಿಕ ನೆಲೆ :

ಧರ್ಮದ ಕಟ್ಟುಪಾಡುಗಳು ಏನಿದ್ದರೂ ಸಾಮಾಜಿಕ ಜೀವನದ ನಿರ್ವಹಣೆಗೆ ಆಗಿದ್ದಾಗಲೂ ಹೆಣ್ಣಾಗಿ ಅವಳ ದೇಹ ಪ್ರಕೃತಿಯ ಧರ್ಮ ಅವಳ ಅಸ್ಮಿತೆಯ ದನಿಯಾಗಿ ಪ್ರಕಟಗೊಳ್ಳುತ್ತದೆ. ಕಂದಾಚಾರದ, ಬೂಟಾಟಿಕೆಯ ಧಾರ್ಮಿಕ ಆಚರಣೆಗಳಿಗಿಂತ ಜೀವಪರವಾದ ಜೀವನ್ಮುಖಿ ಚಿಂತನೆಗಳು ಮಹಿಳಾ ಅಸ್ಮಿತೆಯ ದನಿಗಳಾಗಿ ಗೋಚರಿಸುತ್ತವೆ. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು.

ವೈದೇಹಿಯವರ,

ಅವರವರ ಭಾವಕ್ಕೆ (ಅಲೆಗಳಲ್ಲಿ ಅಂತರಂಗ, ೨೦೦೬)

'ಅವರವರ ಭಾವ' ಕ್ಕೆ ಕಥೆಯು ದೇವರ ಬಗೆಗಿನ ಜಿಜ್ಞಾಸೆಯನ್ನು ಸಮಾಜದ ಮುಂದಿಡುತ್ತದೆ. ಶಿವನ ಚಿತ್ರವನ್ನು ಪೂಜಿಸುವವರಿಗೆ ಶಿವನೇ ದೇವರಾದರೇ, ಪುಸ್ತಕವನ್ನು ಪೂಜಿಸುವವರಿಗೆ ಪುಸ್ತಕವೇ ದೇವರು. ಆ ಜಾಗದಲ್ಲಿ ಮಗುವನ್ನು ಕೂರಿಸಿ ಅಡುಗೆ ಮಾಡುವ ತಾಯಿಗೆ ಆ ಮಗುವೇ ದೇವರು. ಹಾಗಾಗಿ ಭಕ್ತಿ ಎನ್ನುವುದು ಅವರವರ ಭಾವಕ್ಕೆ ಎನ್ನುವುದು ಸ್ಪಷ್ಟವಾಗುತ್ತದೆ. ಮಗು ಜೀವಂತಿಕೆಯ ಸಂಕೇತ. ಇಲ್ಲಿ ಸಮಿತಾ ದೇವರ ಕೋಣೆಯನ್ನು ನೋಡುವ ಕುತೂಹಲದಲ್ಲಿ ಬದುಕಿನ ಒಳನೋಟದ ದರ್ಶನ ಪಡೆಯುವ ಕುತೂಹಲವೂ ಇದೆ.

ಭಗವಂತ ಮತ್ತು ಭಕ್ತಿಗೆ ಹೆಣ್ತನದ ಅಸ್ಮಿತೆಯ ನೆಲೆಯಲ್ಲಿ ಹೊಸ ಅರ್ಥ ಸಾಧ್ಯತೆಗಳನ್ನು ಸೃಷ್ಟಿಸಿ ದೇವರ ಪರಿಕಲ್ಪನೆಯನ್ನು ಲೇಖಕಿ ವಿಸ್ತರಿಸಿದ್ದಾರೆ. ಧರ್ಮದ ಚೌಕಟ್ಟಿನೊಳಗಡೆ 'ಹೆಣ್ಣು' ಎನ್ನುವ ಕಾರಣಕ್ಕೆ ಭಗವಂತನ ಪೂಜೆಗೆ ಬಹಿಷ್ಕೃತಳಾಗುವ ಸ್ತ್ರೀಗೆ ಅಡುಗೆ ಮನೆಯೇ ದೇವರ ಕೋಣೆಯಾಗುತ್ತದೆ. ಹೊಸ ಜೀವಕ್ಕೆ ಜನ್ಮ ನೀಡುವ ಕಾರ್ಯ ಹೆಣ್ಣಿಗೆ ಮಾತ್ರ ಸಾಧ್ಯವಾಗುವುದರಿಂದ ಆಕೆ ಆ ಕಾರಣಕ್ಕಾಗಿಯೇ ತನ್ನ ಅಸ್ಮಿತೆಯ ಭಾವ ಸ್ವರೂಪವನ್ನು ಕಂಡುಕೊಳ್ಳುತ್ತಾಳೆ.

ದೇವರ ಮನೆಯಲ್ಲಿ ಪುರುಷನ ಪ್ರಾತಿನಿಧ್ಯ ಇದ್ದರೂ ಅಡುಗೆ ಕೋಣೆಯನ್ನು ಸ್ತ್ರೀ ಪ್ರತಿನಿಧಿಸುತ್ತಾಳೆ. ಇಷ್ಟಾರ್ಥಗಳನ್ನು ಸಿದ್ಧಿಸುವ, ದೇಹ - ಮನಸ್ಸುಗಳಿಗೆ ತಂಪನ್ನು ನೀಡುವ ಭಗವಂತ ದೇವರ ಮನೆಯಲ್ಲಿ ಕಲ್ಲಾದರೆ, ಅಡುಗೆ ಮನೆಯೊಳಗೆ ಜೀವಂತ ಮಗುವಾಗುತ್ತಾನೆ. ಕುಟುಂಬದ ಹೊಟ್ಟೆ ಮತ್ತು ನೆತ್ತಿಯನ್ನು ಕಾಯ್ದು, ದೇಹ – ಮನಸ್ಸುಗಳನ್ನು ತಂಪಾಗಿರಿಸುವ ಹೆಣ್ಣಿಗೆ ತನ್ನ ಹೆಣ್ತನದ ಸವಿಯಲ್ಲಿಯೇ ದೈವತ್ವದ ಖುಷಿ ಗೋಚರಿಸುತ್ತದೆ. ಅದು

ಮೂರ್ತ ಸ್ವರೂಪವನ್ನು ಪಡೆದಾಗ ಭಗವಂತನ ಅಮೂರ್ತ ಕಲ್ಪನೆಯ ಕರುಳ ಕುಡಿಯ ಮಗುವಾಗಿ ಕಾಣುವ ಭಾವವು ಬಹಳ ಉದಾತ್ತ ಚಿಂತನೆಯನ್ನು ಹೊಂದಿದೆ.

೭.೪. ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ :

ಪರಂಪರೆಯಲ್ಲಿ ಇರುವ ಮಹಿಳೆಯ ದೃಷ್ಟಿಕೋನ ಪುರುಷಾಧೀನದ ನೆಲೆ. ನಮ್ಮ ಕುಟುಂಬ, ಧರ್ಮ, ಸಮಾಜ ಹೆಣ್ಣಿಗೆ ಒಂದು ಚೌಕಟ್ಟನ್ನು ಹಾಕಿದೆ. ಮನೆಯ ಹೊಸಿಲೊಳಗಿರುವ ಹೆಣ್ಣು ಪರಿಶುದ್ಧಳೂ ಮತ್ತು ಸಂಭಾವಿತಳೂ, ಗೌರವಕ್ಕೆ ಅರ್ಹಳಾದವಳೂ ಆಗಿರುತ್ತಾಳೆ. ಸ್ತ್ರೀಯ ಸ್ವಾತಂತ್ರ್ಯದ ಹಕ್ಕನ್ನು ಕಸಿದು ಪುರುಷಾಧೀನತೆಯನ್ನು ಒಪ್ಪಿಕೊಂಡು ಬದುಕಿದಾಗಲೇ ಅವಳ ಬಾಳಿನ ಸಾರ್ಥಕ್ಯ. ಸಹನೆ, ತಾಳ್ಮೆ, ಕ್ಷಮೆ, ಅವಳ ಘನತೆಗೆ ಸಂಕೇತ. ಆಕೆಯ ದೇಹದ ಉಬ್ಬು ತಗ್ಗುಗಳ ಲಾವಣ್ಯಗಳೊಂದಿಗೆ ಗುಣದ ಹಿರಿಮೆ ಬೆಸೆದಾಗ ಅವಳು ಒಳ್ಳೆಯ ಮಗಳೂ, ತಾಯಿ, ಪತ್ನಿ, ಸೊಸೆ, ಸಹೋದರಿ, ಸವತಿ, ಅತ್ತಿಗೆ, ನಾದಿನಿ, ಸ್ನೇಹಿತೆ, ನೆಂಟಳಾಗಿ ಯಶಸ್ವಿಯಾಗುತ್ತಾಳೆ. ಅಲ್ಲಿ ಅವಳ ವೈಯಕ್ತಿಕ ಬದುಕಿನ ಆಯ್ಕೆ, ಇಷ್ಟ – ಅನಿಷ್ಟಗಳು, ಬೇಕು - ಬೇಡಗಳು ಮಾನ್ಯವಾಗುವುದಿಲ್ಲ. ವ್ಯಕ್ತಿ ನಿಷ್ಠೆಗಿಂತ ಕುಟುಂಬ ನಿಷ್ಠೆಯೇ ಮುಖ್ಯವಾಗುತ್ತದೆ.

ನಮ್ಮಲ್ಲಿ ಹುಟ್ಟಿಕೊಂಡ ವಸಾಹತುಶಾಹಿ ಆಡಳಿತದಿಂದಾಗಿ ಹೆಣ್ಣಿಗೆ ಸಿಕ್ಕಿದ ಇಂಗ್ಲಿಷ್ ಶಿಕ್ಷಣ ಆಧುನಿಕತೆಯ ಜಗತ್ತನ್ನು ಕಟ್ಟಿಕೊಡಲು ಸಾಧ್ಯವಾಯಿತು. ವಸಹತ್ತೋತ್ತರ ಸಂದರ್ಭದ ಮಹಿಳೆಯ ಆಧುನಿಕ ಚಿಂತನೆಗಳಿಂದ ಸ್ತ್ರೀಶಿಕ್ಷಣ, ಸ್ತ್ರೀಸಮಾನತೆ, ಸ್ತ್ರೀಯರ ಹಕ್ಕುಗಳು ಮತ್ತು ಸ್ತ್ರೀ ಸ್ವಾವಲಂಬನೆ, ಹೆಣ್ಣಿನ ಸಬಲೀಕರಣದ ಚಿಂತನೆಗಳು ಹುಟ್ಟಿಕೊಂಡವು. ಒಂದು ಕಾಲಕ್ಕೆ ಎಲ್ಲವನ್ನೂ ಸಹಿಸಿಕೊಳ್ಳಬೇಕಾಗಿದ್ದ ಹೆಣ್ಣು ಮಗಳು ಹೊಸ್ತಿಲು ದಾಟಿ ಅಂಗಳಕ್ಕಿಳಿದು ಸಮಾಜ ಮುಖಿಯಾಗಿ ಬೆಳೆಯಲು, ಚಿಂತಿಸಲು, ಜೊತೆಗೆ ತನ್ನನ್ನು ತಾನು ಅರ್ಥೈಸಿಕೊಳ್ಳಲು ಸಾಧ್ಯವಾಯಿತು. ಗಂಡಿನ ಚಿಂತನೆಗಳನ್ನು ಅಥವಾ ಯೋಚನೆಗಳನ್ನು ಮೀರಿ ತನ್ನ ಸ್ವಂತಿಕೆಯ ಹುಡುಕಾಟದ ನೆಲೆ ಆರಂಭವಾಯಿತು. ಈ ಕೆಳಗಿನ ಕಥೆಗಳಲ್ಲಿ ಈ ನೆಲೆಯನ್ನು ಗಮನಿಸಬಹುದು.

ವೈದೇಹಿಯವರ,

ಚಂದಲೆ (ಅಲೆಗಳಲ್ಲಿ ಅಂತರಂಗ, ೨೦೦೬)

ವಾಣಿಮಾಯಿ (ಅಲೆಗಳಲ್ಲಿ ಅಂತರಂಗ, ೨೦೦೬)

'ಚಂದಲೆ' ಕಥೆಯಲ್ಲಿ ಹೆಣ್ಣಿನ ಸ್ವಾತಂತ್ರ್ಯ ಹಾಗೂ ಸ್ವಚ್ಛಂದತೆಯ ಬಗೆಗಿನ ಭಯ ಕಾಣಿಸಿಕೊಳ್ಳುತ್ತದೆ. 'ಮಾತ್ರ ಬೇಡ ಮನೆಗೆ ಹೋಗುವ ಬೇಗ, ಸತೀಶ ಒಬ್ಬನೇ ಇದ್ದಾನೆ' (ಅಲೆಗಳಲ್ಲಿ ಅಂತರಂಗ, ಪು. ೧೬೮, ೨೦೦೬)

ಎನ್ನುವ ರಮಿಯ ಮಾತು ಇದನ್ನು ಹೇಳುತ್ತದೆ. ಸದಾ ಕುಲುಕುಲು ನಗುತ್ತಾ ಮನೆಯಿಂದ ಮನೆಗೆ ತಿರುಗುವ ಬೀನಾಳನ್ನು ರಮಿ ತನ್ನ ಬಾಲ್ಯದಲ್ಲಿ ನೋಡಿದ ವೇಶ್ಯೆ ಚಂದಲೆಗೆ ಹೋಲಿಸಿಕೊಂಡು ಗಾಬರಿಯಾಗುತ್ತಾಳೆ. ಈ ಕಥೆಯಲ್ಲಿ ಸಾಂಪ್ರದಾಯಿಕ ಮೌಲ್ಯ ಹಾಗೂ ಸ್ತ್ರೀ ವಿಮೋಚನೆಯ ನಡುವೆ ಕಥೆಗುರ್ತಿಗಿರುವ ದ್ವಂದ್ವ ಮನಸ್ಸು ಕಾಣಿಸುತ್ತದೆ.

'ವಾಣಿಮಾಯಿ' ಕಥೆ ಹಳ್ಳಿಯ ಪರಿಸರವೊಂದರ ಕೌಟುಂಬಿಕ ಚಿತ್ರಣ ನೀಡುವ ಕಥೆ. ಪುರುಷ ಪ್ರದಾನ ದಬ್ಬಾಳಿಕೆಯನ್ನು ಒಪ್ಪಿಕೊಂಡು ಬದುಕುವ ದೊಡ್ಡಮ್ಮ, ಆ ವ್ಯವಸ್ಥೆಯಿಂದ ಹೊರಬರುವುದಕ್ಕೆ ಚಡಪಡಿಸುವ ವಾಣಿಮಾಯಿ ಇವರಿಬ್ಬರ ಬದುಕಿನಲ್ಲಿ ವೈರುಧ್ಯವಿದೆ. ಪಿತೃಪ್ರಧಾನ ವ್ಯವಸ್ಥೆಯ ಉಗ್ರಾವತಾರಿಯಾಗಿ ನರಸಿಂಹ ಕಾಣಿಸಿಕೊಳ್ಳುತ್ತಾನೆ. 'ಯಂತ ಹೆಣ್ಣೆ ವಾಣಿ, ಮೆಟ್ಟಿಲ್ಲದ್ರೆ ಅಲ್ಲಿ ಯಮನ ಲೋಕಲೆ ಒಳಗೆ ಬಿಡ್ತಲ್ಲೇ...' (ಅಲೆಗಳಲ್ಲಿ ಅಂತರಂಗ, ಪು. ೪೫೦, ೨೦೦೬) ಎಂಬ ದೊಡ್ಡಪ್ಪನ ವ್ಯಂಗ್ಯದ ಮಾತು ಹೆಣ್ಣು ನಾಗರೀಕತೆಗೆ ಸ್ಪಂದಿಸುವ ಬಗೆಗಿನ ವಿರೋಧವನ್ನು ಸೂಚಿಸುತ್ತದೆ.

ಆಧುನಿಕತೆಯನ್ನು ಸ್ವೀಕಾರ ಮಾಡುವಾಗ ಹೆಣ್ಣಿನ ಚಿಂತನೆಯ ಸ್ವರೂಪಗಳಲ್ಲಿ ಬದಲಾವಣೆ ಬೇಕೇ? ಎನ್ನುವುದು ಮುಖ್ಯವಾದ ಪ್ರಶ್ನೆಯಾಗುತ್ತದೆ. ಪರಂಪರೆಯಿಂದ ಮಹಿಳೆಗೆ ಇರುವ ಕಟ್ಟುಪಾಡುಗಳು, ವಿಧಿ - ನಿಷೇಧಗಳು ಹೆಣ್ಣನ್ನು ಸಾಂಪ್ರದಾಯಿಕ ಚೌಕಟ್ಟಿನೊಳಗೆ ಬಂಧಿಸುತ್ತವೆ. ಇಂತಹ ಪೂರ್ವ ನಿಯೋಜಿತ ಧೋರಣೆಗಳಿಗೆ ಬದ್ಧವಾಗಿ ಬದುಕುವ ಸ್ತ್ರೀಯರು ಪರಂಪರೆಯನ್ನು ಪ್ರತಿನಿಧಿಸುತ್ತಾರೆ.

ಆಧುನಿಕತೆ ಎಂದ ತಕ್ಷಣ ಸಮಾನತೆಯ ಹೆಸರಿನಲ್ಲಿ ನಡೆಸುವ ಸ್ವಚ್ಛಂದತೆ, ಸ್ವೇಚ್ಛಾಚಾರಗಳು ಮತ್ತೆ ಪ್ರಶ್ನಾರ್ಹಗೊಳ್ಳುತ್ತವೆ. ಈ ಸರಿ ತಪ್ಪುಗಳ ಪರಾಮರ್ಶೆಯಲ್ಲಿ ಮತ್ತೆ ಮತ್ತೆ ಹೆಣ್ತನದ ಅಸ್ಮಿತೆಯ ದ್ವಂದ್ವ ಕಾಡುತ್ತದೆ. ಈ ದ್ವಂದ್ವವೇ ಸಂಘರ್ಷದ ಸ್ವರೂಪವಾಗಿ ನಿರೂಪಣೆಗೊಳ್ಳುತ್ತದೆ. ಆಧುನಿಕತಗೆ ಹೆಣ್ಣು ತರೆದುಕೊಳ್ಳುವಾಗ ಎದುರಾಗುವ ಗಂಡಿನ ಪ್ರತಿರೋಧ, ದಬ್ಬಾಳಿಕೆಗಳು ಅವಳನ್ನು ಸಂಪ್ರದಾಯದ ಸಂಕೋಲೆಯೊಳಗೆ ಬಂಧಿಸುತ್ತದೆ.

ಹೆಣ್ಣು ಚಪ್ಪಲಿ ತೊಡುವುದು ಅವಳ ಯೋಗ್ಯತೆಗೆ ಅರ್ಹವಾದುದಲ್ಲ ಎನ್ನುವ ಮಾತುಗಳನ್ನು ಹೇಳುವಾಗಲೂ ಹೆಣ್ಣಿಗೆ ಸ್ವರ್ಗದಲ್ಲಿ ಸ್ಥಾನವಿಲ್ಲ ಎಂಬ ಪರಂಪರೆಯ ಘೋಷ ವಾಕ್ಯಗಳು ಕಾಣಿಸಿಕೊಳ್ಳುತ್ತವೆ. ವಿರೋಧಿಸುವ ಪ್ರತಿಧ್ವನಿಯಾಗಿ ಹಳ್ಳಿಯ ಪರಿಸರವಾದರೂ ತನ್ನ ವ್ಯಕ್ತಿತ್ವವನ್ನು ತಾನು ದಕ್ಕಿಸಿಕೊಂಡು ಪರಂಪರೆಗೆ ಮುಖಾಮುಖಿಯಾಗುವ ಹೆಣ್ಣು ತನ್ನ ಅಸ್ಮಿತೆಯ ಸ್ವರೂಪವನ್ನು ಸ್ಪಷ್ಟವಾಗಿ ಕಂಡುಕೊಳ್ಳುತ್ತಾಳೆ.

ಮಹಿಳಾ ಅಸ್ಮಿತೆಯ ದನಿಯು ಆಧುನಿಕ ಕಾಲಘಟ್ಟದ ಬಗೆಹಗಳಲ್ಲಿ ಗಟ್ಟಿಯಾಗಿ ಕಾಣಿಸಿಕೊಳ್ಳುತ್ತದೆ. ಶರೀರದ ಉಬ್ಬು – ತಗ್ಗುಗಳೇ ಹೆಣ್ಣಲ್ಲ, ಆ ಹೆಣ್ತನದ ಶರೀರದ ಹೆಗಲ ಮೇಲಿರುವ ತಲೆ, ಅದರೊಳಗಿರುವ ಮೆದುಳು ಮತ್ತು ಅವಳ ಆಲೋಚನಾ ಕ್ರಮ ಬೌದ್ಧಿಕತೆಯ ನೆಲೆಗಟ್ಟು, ಬಹಳ ಮುಖ್ಯವಾಗಿ ಮಹಿಳಾ ಅಸ್ಮಿತೆಯ ದನಿಯಾಗಿ ಗೋಚರಿಸುತ್ತದೆ. ಸ್ತ್ರೀನಿಷ್ಠ ಸಮಾಜ ಇಂದು ಪುರುಷದ್ವೇಷದ ಧ್ವನಿಯಲ್ಲ, ಸ್ತ್ರೀ - ಪುರುಷರ ಸಮನ್ವಯದ ಕಾಣ್ಕೆಯಾಗಿ ಗೋಚರಿಸುತ್ತದೆ. ಪುರುಷನ ಯೋಚನೆಯ ಲಹರಿಗಿಂತ ಭಿನ್ನವಾಗಿ ಹೆಣ್ಣಿನ ಯೋಚನೆಯ ಲಹರಿಯೇ ವ್ಯಕ್ತಿಗತವಾಗಿ, ಕೌಟುಂಬಿಕವಾಗಿ, ಧಾರ್ಮಿಕವಾಗಿ ಪ್ರತಿಬಿಂಬಿಸಲು ಸಾಧ್ಯವಾಗುತ್ತದೆ.

ಹೆಣ್ಣು ಧರ್ಮವನ್ನು ಮೀರುವ ಪ್ರಯತ್ನ ಹಾಗೂ ಪ್ರಶ್ನಿಸುವ ಮನೋಸ್ಥೈರ್ಯ ಕರಾವಳಿ ಲೇಖಕಿಯರ ಕಥೆಗಳಲ್ಲಿ ಗೋಚರಿಸುತ್ತವೆ. ಹೆಣ್ಣು ಧರ್ಮವನ್ನು ಪರಿಗ್ರಹಿಸುವ ನೆಲೆ ಜೀವಪರವಾದುದ್ದು. ಆಕೆಯ ಅನ್ವೇಷಣಾ ಮನೋಭಾವ ಕಥೆಗಳಲ್ಲಿ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಗಂಗಾ ಪಾದೇಕಲ್ ರವರ 'ಭಗ್ನ' ಕಥೆಯನ್ನು ಈ ಹಿನ್ನಲೆಯಲ್ಲಿ ಕಾಣಬಹುದು.

ನಗರ ಹಾಗೂ ಹಳ್ಳಿಯ ಬದುಕಿನ ಹೆಣ್ಣಿನ ಚಿತ್ರಣ ಎಲ್ಲಾ ಕಥೆಗಾರ್ತಿಯರ ಕಥೆಗಳಲ್ಲೂ ಗೋಚರಿಸುತ್ತದೆ. ಹಲವು ಕಥೆಗಳು ಸಂಕೀರ್ಣವಾಗುತ್ತಾ ಹಲವು ಅರ್ಥ ಸಾಧ್ಯತೆಗಳನ್ನು ಪಡೆದುಕೊಳ್ಳುತ್ತವೆ. ಮತ್ತೆ ಮತ್ತೆ ಓದುವ ಇಲ್ಲವೆ ಮರು ವಿಮರ್ಶೆಯನ್ನು ಬಯಸುವ ಕಥೆಗಳೂ ಸಾಕಷ್ಟಿವೆ. ಗಂಗಾ ಪಾದೇಕಲ್ ಹಾಗೂ ವೈದೇಹಿಯವರ ಕಥೆಗಳಲ್ಲಿ ಇದಕ್ಕೆ ಪೂರಕವಾದ ಕಥೆಗಳು ಸಿಗುತ್ತವೆ. ಇವರ ಕಥೆಗಳು ಆಲಯದಲ್ಲಿ ಬಯಲನ್ನು ಬಿಂಬಿಸುವ ಕಥೆಗಳೇ ಹೊರತು ಬಯಲಿನಲ್ಲಿ ಆಲಯವನ್ನು ಕಾಣುವ ಕಥೆಗಳಲ್ಲ.

ಕರಾವಳಿ ಲೇಖಕಿಯರ ಮೇಲಿನ ಎಲ್ಲಾ ಕಥೆಗಳನ್ನು ಗಮನಿಸಿದಾಗ ಮಾತೃವ್ಯಸ್ಥೆಯ ಧ್ವನಿಗಳು ಎಲ್ಲೂ ಕಾಣಿಸಿಕೊಳ್ಳುವುದಿಲ್ಲ. ಪಿತೃ ಪ್ರಾಧಾನ ಕುಟುಂಬ ವ್ಯವಸ್ಥೆಯೇ ಎದ್ದು ಕಾಣುತ್ತದೆ. ಇಲ್ಲಿ ಬರುವ ಕಥೆಗಾರ್ತಿಯರು ಸಮಾಜದ ಮೇಲ್ವರ್ಗವನ್ನು ಪ್ರತಿನಿಧಿಸುವವರು ಎಂಬುದೇ ಇದಕ್ಕೆ ಮುಖ್ಯವಾದ ಕಾರಣವಾಗಿದೆ.

ಹಸಿವು ಎನ್ನುವುದು ದೇಹ ಮತ್ತು ಮನಸ್ಸಿನ ಹಸಿವಾಗಿದ್ದು ಅದು ಒಂದು ಸಾಮಾಜಿಕ ಸಮಸ್ಯೆಯಾಗಿದೆ. ಆ ಹಸಿವಿನ ಚಿಂತನೆ ಕಥೆಗಳಲ್ಲಿ ವ್ಯಕ್ತವಾಗುತ್ತದೆ. ಶಿಕ್ಷಣದ ಹಸಿವು, ಅರಿವಿನ ಹಸಿವು, ಸಮಾನತೆಯ ಹಸಿವು, ಆರ್ಥಿಕತೆಯ ಹಸಿವು, ಸ್ವಾವಲಂಬನೆಯ ಹಸಿವು, ಲೈಂಗಿಕತೆಯ ಹಸಿವು - ಹೀಗೆ ಹಸಿವಿನ ಬೆರೆ ಬೇರೆ ಮುಖಗಳು ಕರಾವಳಿ ಲೇಖಕಿಯರ ಕಥೆಗಳಲ್ಲಿ ಅನಾವರಣಗೊಂಡಿವೆ. ಈ ಎಲ್ಲದರ ಜೊತೆಗೆ ಹೆಣ್ಣನ್ನು ವ್ಯಕ್ತಿಯಾಗಿ ನೋಡಬೇಕು ಎನ್ನುವ ಆಶಯವೇ ಪ್ರಧಾನವಾಗಿದೆ.

ಅಧ್ಯಾಯ -೮

ಕರಾವಳಿ ಕಥೆಗಳಲ್ಲಿ ಮಹಿಳಾ ಸಂವೇದನೆಯ ಸಂಕೀರ್ಣತೆಗಳು

೮.೧. ಲೈಂಗಿಕ ಶೋಷಣೆ

೮.೨. ಅಸಹಾಯಕತೆ

೮.೩. ಒಂಟಿತನ

೮.೪. ತಾಯ್ತನ

೮.೫. ದಾಂಪತ್ಯ ವಿರಸ

೮.೬. ಸಮಾನ ಮನೋಧರ್ಮ

೮.೭. ಬಂಜೆತನ

೮.೮. ಹೊಂದಾಣಿಕೆ

೮.೯. ಲೈಂಗಿಕತೆ ಮತ್ತು ನೈತಿಕತೆ

೮.೧೦. ವೈವಾಹಿಕ ಬಿಕ್ಕಟ್ಟು

೮.೧೧. ಲಿಂಗ ತಾರತಮ್ಯ

೮.೧೨. ಸ್ತ್ರೀ -ಶಿಕ್ಷಣ

೮.೧೩. ಸ್ತ್ರೀ ಸ್ವಾತಂತ್ರ್ಯ

೮.೧೪. ಜಾತಿಯ ಪರಿಕಲ್ಪನೆ

ಅಧ್ಯಾಯ- ೮

ಕರಾವಳಿ ಕಥೆಗಳಲ್ಲಿ ಮಹಿಳಾ ಸಂವೇದನೆಯ ಸಂಕೀರ್ಣತೆಗಳು

ಮನುಷ್ಯ ತನ್ನ ಅನುಭವಗಳನ್ನು ಸಂವೇದನೆಯ ರೂಪದಲ್ಲಿ ಹಿಡಿದಿಡುವುದಕ್ಕೆ ಮುಖ್ಯ ಸಾಧನವಾದದ್ದು ಸಾಹಿತ್ಯ. 'ಸಂವೇದನೆ' ಎನ್ನುವುದು ಒಂದರ್ಥದಲ್ಲಿ 'ಮೌಲ್ಯ ವಿವೇಚನೆ'. ಬದುಕಿನ ನೋಟಗಳು ಹೊರ ಕಣ್ಣುಗಳಿಗೆ ಒಂದು ತರನಾಗಿ ಕಂಡರೆ, ಒಳಕಣ್ಣುಗಳಿಗೆ ಕಾಣುವ ರೀತಿಯೇ ಬೇರೆ. ಹೊರನೋಟಕ್ಕೆ ಎಲ್ಲವೂ ಸುಂದರವಾಗಿದ್ದರೂ, ಅದರ ಒಳಹೊಕ್ಕು ನೋಡಿದರೆ ಆಳವಾದ ಅನುಭವವನ್ನು ಪರಿಚಯಮಾಡಿಸುತ್ತದೆ. ಈ ಅನುಭವ ನಮ್ಮ ಜೀವನದೊಂದಿಗೆ ನಡೆಯುವ ನಿರಂತರ ಹೋರಾಟವೂ ಹೌದು. ಇದು ಬದುಕಿನೊಂದಿಗೆ ಇರಬೇಕಾದ ಸಾಮರಸ್ಯವನ್ನೂ, ಹೊಂದಾಣಿಕೆಯ ಪ್ರವೃತ್ತಿಯನ್ನು ನಮ್ಮಲ್ಲಿ ಜಾಗ್ರತಗೊಳಿಸುತ್ತದೆ. ಅಂತರಂಗದಲ್ಲಿ ಹುಟ್ಟುವ ವಿಚಾರವು ಸಂವೇದನೆಯ ರೂಪದಲ್ಲಿ ತನ್ನದೇ ಆದ ವೈಚಾರಿಕ ವಲಯವೊಂದನ್ನು ಸ್ಥಾಪಿಸಿಕೊಳ್ಳುತ್ತದೆ. ವ್ಯಕ್ತಿ ವಿಚಾರಶೀಲನಾಗುತ್ತಾ ಹೋದಂತೆ, ಪ್ರಬುದ್ಧತೆಯನ್ನು ಬೆಳೆಸಿಕೊಂಡಂತೆ ಈ ವೈಚಾರಿಕ ಗುಣ ಅಥವಾ ಶಕ್ತಿ ಅವನಲ್ಲಿ ಮೂಡುವುದಕ್ಕೆ ಸಾಧ್ಯವಾಗುತ್ತದೆ. ಅದು ಮುಸ್ಲಿಂ ಸ್ತ್ರೀ ಸಂಸ್ಕೃತಿ ಇರಬಹುದು, ದಲಿತ ಸ್ತ್ರೀ ಸಂಸ್ಕೃತಿ ಇರಬಹುದು, ವಿದ್ಯಾವಂತ ಸ್ತ್ರೀ ಸಂಸ್ಕೃತಿ ಇರಬಹುದು ಇಲ್ಲವೆ, ಉದ್ಯೋಗಸ್ಥ ಸ್ತ್ರೀ ಸಂಸ್ಕೃತಿಯು ಆಗಿರಬಹುದು. ಸ್ತ್ರೀಯ ಭಿನ್ನ ಭಿನ್ನ ಸ್ತರದಲ್ಲಿ ನಿಂತು ವೈಚಾರಿಕತೆಯ ನಮ್ಮ ಮೌಲ್ಯಗಳನ್ನು ವೈಚಾರಿಕ ನಿಕಷಕ್ಕೊಡ್ಡುವುದೇ ಸ್ತ್ರೀಸಂಸ್ಕೃತಿಯಾಗಿದೆ.

ಕರಾವಳಿ ಲೇಖಕಿಯರ ಅಂತಃಪ್ರಜ್ಞೆಯಲ್ಲಿ ಕೇಂದ್ರೀಕೃತವಾದ ಮೌಲ್ಯ ವಿವೇಚನೆ ಅವರ ಕಥೆಗಳಲ್ಲಿ ಎಷ್ಟರಮಟ್ಟಿಗೆ ಬಂದಿದೆ ಎನ್ನುವುದರ ಮೇಲೆ ಸ್ತ್ರೀ ಸಂಸ್ಕೃತಿಯ ನೆಲೆಗಳನ್ನು ಅರಿಯುವುದಕ್ಕೆ ಸಾಧ್ಯವಾಗುತ್ತದೆ. "ತನ್ನ ಬದುಕಿಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ಹೆಣ್ಣಿನಲ್ಲೂ ಒಂದು ರೀತಿಯ ಮೌಲ್ಯ ವಿವೇಚನೆ ಇದ್ದೇ ಇರುತ್ತದೆ. ಅದನ್ನು ಅಭಿವ್ಯಕ್ತಗೊಳಿಸುವುದರಲ್ಲಿ ಆಕೆ ತೋರುವ ಪ್ರಾಮಾಣಿಕತೆ ಮತ್ತು ಆ ಪ್ರಾಮಾಣಿಕತೆಯ ತೀವ್ರತೆ ಆಕೆಯ ವ್ಯಕ್ತಿಗತ ಅನುಭವ ಎಷ್ಟು ಆಳವಾಗಿ ಅಂತಃ ಪ್ರಜ್ಞೆಯಲ್ಲಿ ಜಾಗೃತವಾಗಿದೆ ಎನ್ನುವುದನ್ನು ಹೊಂದಿಕೊಂಡಿರುತ್ತದೆ"[1] ಸ್ತ್ರೀಗೆ ಇಂದು ಬೇಕಾಗಿರುವುದು ಪುರುಷನ ಸಹಭಾಗಿತ್ವದ ಅಗತ್ಯತೆಯೇ ಹೊರತು ಅನುಕಂಪವಲ್ಲ. ಈ ಪ್ರಜ್ಞೆಯಿಂದಲೇ ಸ್ತ್ರೀ ಸಂಸ್ಕೃತಿಯ ಅರ್ಥ ಚರ್ಚೆ ಪ್ರಾರಂಭವಾಗುತ್ತದೆ. ಸ್ತ್ರೀವಾದವೂ ಕೂಡಾ ಹೇಳುವುದು ಇದನ್ನೇ ಆಗಿದೆ.

ಈ ಹಿನ್ನೆಲೆಯಲ್ಲಿ ಕರಾವಳಿ ಲೇಖಕಿಯರ ಕಥೆಗಳಲ್ಲಿ ಸ್ತ್ರೀಸಂಸ್ಕೃತಿಯ ವಿಭಿನ್ನ ನೆಲೆಗಳನ್ನು ಹುಡುಕುವ ಪ್ರಯತ್ನವನ್ನು ಈ ಅಧ್ಯಯನ ಮಾಡುತ್ತದೆ. ಅಧ್ಯಯನಕ್ಕೆ ಒಂದು ಚೌಕಟ್ಟನ್ನು ಒದಗಿಸುವ ಕಾರಣಕ್ಕಾಗಿ ೧೯೫೦ ರ ನಂತರದ ಪ್ರಮುಖ ಲೇಖಕಿಯರ ಪ್ರಾತಿನಿಧಿಕ ಕಥೆಗಳನ್ನಷ್ಟೇ ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಲೇಖಕಿಯರೆಂದರೆ,

ಗಂಗಾಪಾದೇಕಲ್

ಪ್ರೇಮಾಭಟ್

ಮಿತ್ರಾ ವೆಂಕಟ್ರಾಜ್

ವೈದೇಹಿ

ಸಾರ ಅಬೂಬಕ್ಕರ್

ಈ ಲೇಖಕಿಯರ ಬದುಕಿನ ವಿವರಗಳನ್ನು ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ.

ಈ ನಿಬಂಧದ ಆರಂಭದಲ್ಲಿ ಪ್ರಸ್ತಾಪಿಸಿರುವಂತೆ ಕರಾವಳಿಯ ಮೊದಲ ಬಮಹಿಳಾ ಬರಹಗಾರರಲ್ಲಿ ಹೆಚ್ಚಿನವರು ಮೇಲ್ವರ್ಗದವರು ಮತ್ತು ಮೇಲ್ಜಾತಿಯವರು ಎಂಬುದು ಸತ್ಯ. ಕರಾವಳಿಯಲ್ಲಿ ಮೊದಲು ಸುಶಿಕ್ಷಿತರಾದವರು ಶೂದ್ರ ಸಮುದಾಯದವರಾದರೂ ಬರವಣಿಗೆಯಲ್ಲಿ ಕಾಣಿಸಿಕೊಂಡವರು ಮೇಲ್ವರ್ಗದವರಾಗಿದ್ದರು. ಬಾಸೆಲ್ ಮಿಷನರಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿಯೇ ಪ್ರತ್ಯೇಕವಾಗಿ 'ಬ್ರಾಹ್ಮಿನ್ ಗರ್ಲ್ಸ್ ಹೈಸ್ಕೂಲ'ನ್ನು ಸ್ಥಾಪಿಸಿತು. ಸ್ವಾತಂತ್ರ್ಯ ಪೂರ್ವಮಹಿಳಾ ಶಿಕ್ಷಣ ಕೇವಲ ಬೆರಳೆಣಿಕೆಯ ಮಂದಿಗೆ ಮಾತ್ರ ದಕ್ಕಿತು. ಹೀಗೆ ಸುಶಿಕ್ಷಿತರಾದವರೆಲ್ಲ ಬರಹಗಾರರಾಗಲಿಲ್ಲ. ವೈಯಕ್ತಿಕ ಬದುಕಿನ ಕೆಲವು ಒತ್ತಡಗಳಿಂದ ಅನುಭವಿಸುತ್ತಿದ್ದ ಖಾಲಿ ತನವನ್ನು ತುಂಬುವುದಕ್ಕಾಗಿ ಬರವಣಿಗೆಯನ್ನು ಆರಂಭಿಸಿದರು.

ಹೀಗೆ ಬರವಣಿಗೆಯಲ್ಲಿ ತೊಡಗಿಕೊಂಡ ಲೇಖಕಿಯರು ತಮ್ಮ ಸಂವೇದನೆಯ ಸಂಕೀರ್ಣತೆಗಳನ್ನು ಕಥೆಗಳ ಮೂಲಕ ವ್ಯಕ್ತಪಡಿಸುವ ಪ್ರಯತ್ನ ಮಾಡಿದರು. ಲೈಂಗಿಕ ಶೋಷಣೆ , ಬಂಜೆತನ, ವಿಧವಾ ಸ್ಥಿತಿ-ಗತಿ, ಸ್ತ್ರೀ ಶಿಕ್ಷಣ, ಸ್ತ್ರೀ ಸ್ವಾತಂತ್ರ್ಯ, ಲಿಂಗತಾರತಮ್ಯ, ಹೀಗೆ ಅನೇಕ ಸಂಕೀರ್ಣತೆಗಳು ಕರಾವಳಿ ಲೇಖಕಿಯರ ಕತೆಗಳಲ್ಲಿ ಗೋಚರಿಸುತ್ತವೆ. ಅವುಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೮.೧. ಲೈಂಗಿಕ ಶೋಷಣೆ

ಕರಾವಳಿ ಲೇಖಕಿಯರ ಕಥೆಗಳಲ್ಲಿ ಕಾಣಿಸಿಕೊಳ್ಳುವ ಶೋಷಣೆಯ ಸ್ವರೂಪ ಸಂಕೀರ್ಣ ಹಾಗೂ ಸೂಕ್ಷ್ಮವಾದುದು. ಅದು ಪುರುಷನೊಬ್ಬನಿಂದ ಹೆಣ್ಣಿನ ಮೇಲಾಗುವ ಶೋಷಣೆ ಇರಬಹುದು. ಅಥವಾ ಹೆಣ್ಣಿನಿಂದ ಹೆಣ್ಣಿಗಾಗುವ ಶೋಷಣೆ ಇರಬಹುದು. ಕೆಲವೊಮ್ಮೆ ಸ್ವಯಂಕೃತ ಅಪರಾಧದಿಂದ ಹೆಣ್ಣೊಬ್ಬಳು ಶೋಷಣೆಗೆ ಒಳಗಾದರೆ, ಉಳಿದ ಸಂದರ್ಭವಲ್ಲಿ ಆಕೆ ಹೆಣ್ಣಾಗಿ ಹುಟ್ಟಿರುವುದೇ ಶೋಷಣೆಗೆ ಒಳಪಡುವುದಕ್ಕೆ ಎನ್ನುವಷ್ಟರಮಟ್ಟಿಗೆ ಹಿಂಸೆಗೆ ಗುರಿಯಾಗುತ್ತಾಳೆ.

ನಂಬಿಕೆ, ಸಂಪ್ರದಾಯಗಳು, ಮನುಷ್ಯನ ದೌರ್ಬಲ್ಯಗಳು, ಬದುಕಿನ ಒತ್ತಡಗಳು, ತಾಳ್ಮೆ , ಅಸಹಾಯಕತೆ, ಹಿರಿಯರ ಬೇಜವಾಬ್ದಾರಿತನ ಇವು ಶೋಷಣೆಗೆ ಮುಖ್ಯ ಕಾರಣಗಳಾಗುತ್ತವೆ.

ಮಿತ್ರಾ ವೆಂಕಟ್ರಾಜ್‌ರವರ 'ರುಕುಮಾಯಿ' (ರುಕುಮಾಯಿ, ೧೯೯೦) ಕಥೆಯಲ್ಲಿ ಮುಗ್ಧ ಹೆಣ್ಣೊಬ್ಬಳ ಬಗೆಗೆ ಪುರುಷನೊಬ್ಬ ಹೊಂದಿದ್ದ ಪ್ರೀತಿಯು ಸಾವಿನೊಂದಿಗೆ ಕೊನೆಯಾಗುವ ದುರಂತ ಚಿತ್ರಣವಿದೆ. ಶ್ರೀಮಂತರ ದರ್ಪ, ಅಹಂಕಾರಗಳು ಬಡವರ ಬದುಕಿಗೆ ಹೇಗೆ ಮುಳುವಾಗುತ್ತದೆ ಎನ್ನುವುದು ಈ ಕಥೆಯಲ್ಲಿ ಸ್ಪಷ್ಟವಾಗುತ್ತದೆ. ಅಮಾಯಕ ಹೆಣ್ಣು ಮಕ್ಕಳು ಶ್ರೀಮಂತರ ಕಾಮ ಪಿಪಾಸೆಯನ್ನು ನೀಗಿಸುವ ವಸ್ತುಗಳಾಗಿ ಬದುಕು ಸಾಗಿಸಬೇಕಾಗುವ ದುರಂತವನ್ನು ಈ ಕಥೆ ನಿರೂಪಿಸುತ್ತದೆ.

ಈ ಕಥೆಯ ಕಾಡ್ಯ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಗಟ್ಟಿತನ ಹೊಂದಿದವನು. ನಿಷ್ಕಲ್ಮಶ ಪ್ರೀತಿಯ ಸಹೃದಯ ವ್ಯಕ್ತಿಯಾಗಿ ರುಕುಮಾಯಿಯನ್ನು ಕೊನೆಯವರೆಗೂ ರಕ್ಷಿಸಿಕೊಂಡು ಬಂದವನು. ಹೆಣ್ಣೊಬ್ಬಳ ಬದುಕು ಶ್ರೀಮಂತರ ಕಾಲಡಿಯ ಧೂಳಾಗುವ ಹೃದಯವಿದ್ರಾವಕ ಸ್ಥಿತಿ ಈ ಕಥೆಯಲ್ಲಿದೆ. ಅನ್ಯಾಯಕ್ಕೆ ಪ್ರತಿಭಟಿಸಲಾರದ ರುಕುಮಾಯಿಯ ಪಾಲಿಗೆ ಬಂದದ್ದು ಸಾವು ಮಾತ್ರ.

ಗಂಗಾ ಪಾದೇಕಲ್‌ರವರ 'ಪುಲಪೇಡಿ' (ಪುಲಪೇಡಿ ಮತ್ತು ಇತರ ಕಥೆಗಳು, ೧೯೮೭) ಕಥೆಯು ಸಮಾಜದ 'ಪುಲಪೇಡಿ' ಕತೆಯು ಸಮಾಜದ ವಿಚಿತ್ರ ಪದ್ಧತಿಯೊಂದು ಹೆಣ್ಣಿನ ಬದುಕಿನೊಂದಿಗೆ ಆಟವಾಡುವ ಪರಿಯನ್ನು ಚಿತ್ರಿಸುವ ಕಥೆಯಾಗಿದೆ. ಭಗವತಿಯ ದರ್ಶನಕ್ಕೆಂದು ಹೋದ ಲಲಿತೆ ಪರಯನ ಕಣ್ಣಿಗೆ ಬಿದ್ದು ಆತನ ಹೆಂಡತಿಯಾಗುವ ಅನಿವಾರ್ಯ ಸಂದರ್ಭ ಒದಗಿ ಬಂದರೂ ಗರ್ಭಿಣಿಯಾಗಿದ್ದ ಲಲಿತೆ ಗಂಡು ಮಗುವಿಗೆ ಜನ್ಮ ನೀಡುವುದರ ಮೂಲಕ ಪರಯನಿಂದ ಪಾರಾಗುತ್ತಾಳೆ.

ಮದುವೆಯಾಗಿ ಪ್ರೀತಿಸದೆ ಇರುವ ಗಂಡ ನಂಬೂದಿರಿಗಿಂತ ಇನ್ನೂ ಮದುವೆಯಾಗದೆ ಪ್ರೀತಿ ತೋರಿಸಿದ ಪರಯನೇ ಲಲಿತಳಿಗೆ ಶ್ರೇಷ್ಠನಾಗಿ ಕಾಣುತ್ತಾನೆ. ತನ್ನನ್ನು ಪ್ರೀತಿಸಿದವರಿಗೆ ಹೆಣ್ಣು ಹೃದಯದಲ್ಲಿ ಜಾಗ ಕೊಡುತ್ತಾಳೆ ಎನ್ನುವುದು ಈ ಕಥೆಯ ಆಶಯ. ಪುರುಷ ಪ್ರಧಾನ ಸಮಾಜ ಹೆಣ್ಣನ್ನು ತನ್ನ ಆಟದ ದಾಳಗಳನ್ನಾಗಿ ಬಳಸುವ ಹೃದಯ ವಿದ್ರಾವಕ ಚಿತ್ರಣ ಈ ಕಥೆಯಲ್ಲಿದೆ. ಆದರೆ 'ತಾನೊಂದು ಬಗೆದರೆ ದೈವವೊಂದು ಬಗೆವುದು' ಎಂಬ ಮಾತಿಗೆ ಸರಿಯಾಗಿ ಪರಯನ ಬದುಕು ನಿಲ್ಲುತ್ತದೆ.

'ಒಂದು ಸಾವಿನ ಕಥೆ' (ಹೊಸ ಹೆಜ್ಜೆ, ೧೯೯೬)ಯ ಸಾವಿತ್ರಿ ಪ್ರತಿಭಾವಂತ ಹುಡುಗಿಯಾಗಿದ್ದರೂ ತನ್ನ ಭಾವನ ದುರ್ವರ್ತನೆಯಿಂದಾಗಿ ಅವಳ ಬದುಕು ಮುರುಟಿ ಹೋಯಿತು. ಕಾಯಿಲೆ ಬಿದ್ದ ತನ್ನ ಅಕ್ಕ, ಮನೆ-ಹೋಟೆಲಿನ ಕೆಲಸಗಳು, ಇವೆಲ್ಲವುಗಳಿಂದಾಗಿ ಓದುವುದಕ್ಕೆ ಸಾಧ್ಯವಾಗದೇ ಒದ್ದಾಡುತ್ತಿದ್ದ ಸಾವಿತ್ರಿ ಕೊನೆಗೆ ಸಮಾಜದ ತುಚ್ಛ ಮಾತುಗಳನ್ನು ಕೇಳಿಸಿಕೊಂಡೇ ಭಾವ ಎಂದು ಕರೆಯಬೇಕಾದವನಿಗೆ ಹೆಂಡತಿಯಾಗಬೇಕಾಯಿತು.

ಹೆಣ್ಣೊಬ್ಬಳು ದಾರಿ ತಪ್ಪಿದಾಗ ಎಲ್ಲರೂ ಆಕೆಯನ್ನು ದೂರ ಮಾಡುತ್ತಾರೆಯೇ ವಿನಃ ಆಕೆಗೆ ಸಮಾಧಾನ ಹೇಳಿ ಸರಿದಾರಿಗೆ ತರಲು ಯಾರೂ ಇರುವುದಿಲ್ಲ. ಹಾಗಾಗಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲಾರದ ಹೆಣ್ಣು ಪಾಲಿಗೆ ಬಂದದ್ದನ್ನೇ ಪಂಚಾಮೃತ ಎಂದು ಒಪ್ಪಿಕೊಂಡು ಬದುಕು ಸವೆಸಬೇಕಾಗುತ್ತದೆ. ಈ ಕಥೆಯ ಸಾವಿತ್ರಿಯ ಬದುಕೂ ಆದಕ್ಕಿಂತ ಹೊರತಾಗಲಿಲ್ಲ.

'ಭಾವನೆ, ವಾಸ್ತವ ಇತ್ಯಾದಿ. . .' (ನೆಲೆ ತಪ್ಪಿದ ಹಕ್ಕಿ, ೨೦೦೩) ಎಂಬ ಕಥೆಯ ಸರೋಜ ಕಾಮುಕ ಪುರುಷರ ಕಾಮಕೇಳಿಗೆ ಬಲಿಯಾಗಿ ಜೀವ ಕಳೆದುಕೊಂಡವಳು. ತನ್ನ ಗರ್ಭಕ್ಕೆ ಕಾರಣನಾದವನ ಬಳಿಗೆ ಬಂದು ನೆಲೆಸಿದರೂ ಕಾಲ ಕಸಕ್ಕಿಂತ ಕಡೆಯಾಗಿ ನರಕ ಯಾತನೆ ಅನುಭವಿಸಿದವಳು. ಕೊನೆಗೊಂದು ದಿನ ಬಾವಿಯಲ್ಲಿ ಕಾಣಿಸಿಕೊಂಡ ಅವಳ ಮೃತದೇಹ ಆತ್ಮಹತ್ಯೆಯಾಗಿರದೆ ಕೊಲೆಯಾಗಿತ್ತು. ತನಗೆ ಅನ್ಯಾಯ ಮಾಡಿದವರ ವಿರುದ್ಧ ಸೇಡು ತೀರಿಸಿಕೊಳ್ಳಲಾಗದೆ, ತನ್ನ ದಾರಿಯನ್ನು ತಾನು ಕಂಡುಕೊಳ್ಳಲಾರದೆ ಸರೋಜ ಶ್ರೀಮಂತರ ಚೆಲ್ಲಾಟದ ಇಲಿಯಾಗುತ್ತಾಳೆ.

ಪ್ರೇಮಾಭಟ್‌ರವರ 'ಬಾಡಿಗೆ ಮನೆ' (ಕಥಾವರ್ಷ, ೨೦೦೭) ಕಥೆಯು ಪುರುಷನೊಬ್ಬನ ಕಾಮುಕ ದೃಷ್ಟಿಯಿಂದ ತಪ್ಪಿಸಿ ಕೊಳ್ಳುವುದಕ್ಕಾಗಿ ಚಡಪಡಿಸುವ ಹೆಣ್ಣಿನ ಕಥೆಯಾಗಿದೆ. ತಂದೆ-ತಾಯಿಯರನ್ನು ಕಳೆದುಕೊಂಡು ಇಬ್ಬರು ಚಿಕ್ಕ ತಮ್ಮಂದಿರೊಂದಿಗೆ ಕೆಲಸಕ್ಕಾಗಿ ಬೆಂಗಳೂರಿಗೆ ಬಂದ ವೇದಾ, ತನ್ನ ಚಿಕ್ಕಪ್ಪನ ಸಹಾಯದಿಂದ ಬಾಡಿಗೆ

ಮನೆಯೊಂದನ್ನು ಪಡೆಯುತ್ತಾಳೆ. ಆದರೆ ಮನೆ ಮಾಲೀಕನ ಕಾಮಭಿಕ್ಷೆಯನ್ನು ಸ್ವೀಕರಿಸಲಾಗದೆ ಬೇರೆ ಮನೆ ಹುಡುಕುವುದಕ್ಕಾಗಿ ಪರಿತಪಿಸುತ್ತಾಳೆ. ಕೊನೆಗೆ ತನ್ನ ಗೆಳತಿಯೊಬ್ಬಳ ಸಹಾಯದಿಂದ ಬೇರೆ ಮನೆಗೆ ಹೋಗುತ್ತಾಳೆ.

ಹೆಣ್ಣೊಬ್ಬಳು ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಈ ಸಮಾಜ ಎಷ್ಟೊಂದು ಅಡ್ಡಿಯನ್ನುಂಟುಮಾಡುತ್ತದೆ ಎಂಬ ಚಿತ್ರಣ ಇಲ್ಲಿದೆ. ಹೆಣ್ಣನ್ನು ಕೇವಲ ಭೋಗದ ವಸ್ತುವಾಗಿಯೇ ಕಾಣುವ ಈ ಸಮಾಜದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನಡೆಸುವ ಹೋರಾಟದ ಚಿತ್ರಣ ಈ ಕಥೆಯಲ್ಲಿದೆ.

ಗಂಗಾ ಪಾದೇಕಲ್‌ರವರ 'ಮೂರಾಬಟ್ಟೆ' (ಹೊಸಹೆಜ್ಜೆ, ೧೯೯೬) ಕಥೆಯಲ್ಲಿ ಶ್ರೀಮಂತ ಪುರುಷರ ಕಾಮಪಿಪಾಸೆಗೆ ಬಡ ಹೆಣ್ಣುಮಕ್ಕಳು ಹೇಗೆ ಬಲಿಯಾಗುತ್ತಾರೆ ಎಂಬುದರ ಚಿತ್ರಣವಿದೆ. ತನ್ನ ಚಿಕ್ಕ ಮಗುವನ್ನು ಇನ್ನೊಬ್ಬರ ಬಳಿ ಬಿಟ್ಟು ಸಾಹೇಬರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದ ಗೋಪಾಲನ ಹೆಂಡತಿ ಗೌರಿಯನ್ನು ಸಾಹೇಬನು 'ನೆಕ್ಲೆಸ್ ಕಳವಿನ' ನೆಪವೊಡ್ಡಿ, ಆಕೆಯನ್ನು ಬೆದರಿಸಿ, ಏನೇನೋ ಆರೋಪಗಳನ್ನೆಸಗಿ ಆಕೆಯೊಡನೆ ತನ್ನ ಕಾಮದಾಹವನ್ನು ತೀರಿಸಿಕೊಳ್ಳುತ್ತಾನೆ. ಇದರಿಂದ ನೊಂದುಕೊಂಡ ಗೌರಿ ಹುಚ್ಚಿಯಾಗುತ್ತಾಳೆ. ಮಾನ – ಮರ್ಯಾದೆಗಳಿಗೆ ಹೆದರಿ ಜೀವನ ನಡೆಸುವ ಬಡವರ ಬದುಕನ್ನೇ ನುಚ್ಚುನೂರು ಮಾಡುವ ಸಾಹೇಬನ ಅಮಾನವೀಯ ವರ್ತನೆ ಇಲ್ಲಿ ಚಿತ್ರಿತವಾಗಿದೆ. ಗೋಪಾಲನ ಸಂಸಾರ ದುಃಖದ ಸಂಸಾರವಾಗುತ್ತದೆ.

ಶ್ರೀಮಂತ ಸಾಹೇಬನ ವಿರುದ್ಧ ಹಟ ತೀರಿಸಿಕೊಳ್ಳಲಾಗದ ಗೌರಿ ಹುಚ್ಚಿಯಾಗುತ್ತಾಳೆ. ಸಮಾಜದ ವಾಸ್ತವ ಸತ್ಯವನ್ನು ಈ ಕಥೆ ಮನವರಿಕೆ ಮಾಡುತ್ತದೆ.

ಪ್ರೇಮಾಭಟ್‌ರವರ 'ಸುಖ ಎಲ್ಲಿದೆ' (ಕಥಾವರ್ಷ, ೨೦೦೭) ಕಥೆಯು ಹೆಣ್ಣು ತನ್ನ ಮೇಲೆ ನಡೆಯುತ್ತಿರುವ ಪುರುಷನ ದಬ್ಬಾಳಿಕೆಯನ್ನು ಪ್ರಶ್ನಿಸದೆ ಸಹಿಸಿಕೊಳ್ಳುವವರೆಗೆ ಅವಳ ಶೋಷಣೆ ನಿರಂತರವಾಗಿ ನಡೆಯುತ್ತದೆ ಎಂಬುದನ್ನು ತಿಳಿಸುತ್ತದೆ. ಈ ಕಥೆಯ ವಾರಿಧಿ ಗಂಡನಾದ ರಾಘವನ ಭೋಗದ ವಸ್ತುವಾಗಿ ಅವನ ಬೈಗುಳ - ಹೊಡೆತಗಳನ್ನು ಅನುಭವಿಸಿ ಬದುಕಿದವಳು.

ವಾರಿಧಿಯ ಸ್ಥಿತಿಗತಿಯ ಬಗೆಗೆ ನೆರೆಯವರು ಅವಳ ತಾಯೊಡನೆ ಹೇಳುವ 'ಯಾಕೆ ಜಾನಕಮ್ಮಾ ಅವನಿಗೆ ಅಷ್ಟು ಅಂಜಬೇಕು. ಹುಡುಗಿಗೆ ವಿದ್ಯೆ ಇದೆ, ಒಂದು ಮಗು ಬೇರೆ ಇದೆ. ಸೀದಾ ಸಾದಾ ಅವನ ಹಂಗು ಏನು ಅಂತ ಬರೋದು ತಾನೆ' (ಕಥಾವರ್ಷ, ಪು. ೨೨೪, ೨೦೦೭) ಎಂಬ ಮಾತು ಹೆಣ್ಣು ಸ್ವತಂತ್ರ ಬದುಕನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹೇಳುತ್ತದೆ.

'ಬದುಕು' ಕಥೆಯು ಅಸಹಾಯಕ ಹೆಣ್ಣಿನ ಮೇಲಿನ ಶೋಷಣೆಯನ್ನು ಚಿತ್ರಿಸುತ್ತದೆ. ಪದ್ದು ತನ್ನ ಗಂಡನಿಗೆ ಮೂರನೆಯ ಹೆಂಡತಿಯಾಗಿ ಬಂದ ಮರುವರ್ಷವೇ ಗಂಡನನ್ನು ಕಳೆದುಕೊಂಡು ವಿಧವೆಯಾದದ್ದಲ್ಲದೆ ಗಂಡನ ಹಿರಿ ಹೆಂಡತಿಯ ಮಗ ಗೋವಿಂದನಿಂದ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಕೆದಿಲಾಯರ ನಿಸ್ವಾರ್ಥ ಮನಸ್ಸಿನಿಂದ ಆಕೆ ಬದುಕುಳಿಯುತ್ತಾಳೆ ಮಾತ್ರವಲ್ಲ, ಅವರ ಮಕ್ಕಳಿಗೆ ತಾಯಿಯಾಗಿ ತನ್ನ ಬದುಕನ್ನು ಕಂಡುಕೊಳ್ಳುತ್ತಾಳೆ.

ಈ ಮೇಲಿನ ಕತೆಗಳನ್ನು ಗಮನಿಸಿದಾಗ ಹೆಣ್ಣು ಮಕ್ಕಳು ಅನುಭವಿಸುವ ಲೈಂಗಿಕ ಶೋಷಣೆಯ ವಿವಿಧ ಮಗ್ಗುಲುಗಳು ಸ್ಪಷ್ಟವಾಗುತ್ತವೆ. ಹೆಚ್ಚಿನ ಕತೆಗಳಲ್ಲಿ ಅನ್ಯಾಯವನ್ನು ಪ್ರತಿಭಟಿಸಲಾರದೆ ಬಾಯಿ ಮುಚ್ಚಿ ಒಪ್ಪಿಕೊಳ್ಳುವ ಹೆಣ್ಣು ಮಕ್ಕಳೇ ಕಾಣಿಸಿಕೊಳ್ಳುತ್ತಾರೆ. ಶೋಷಣೆಯ ಮುಖಗಳು ಬೇರೆಬೇರೆಯಾದರೂ ಅವು ಉಂಟು ಮಾಡುವ ಪರಿಣಾಮ ಮಾತ್ರ ಒಂದೇ.

ಪುರುಷ ಪ್ರಧಾನ ವ್ಯವಸ್ಥೆಯ ಒಪ್ಪಿತ ನೆಲೆಯಲ್ಲಿ ಕಾಣಿಸಿಕೊಳ್ಳುವ ಕತೆಗಳಲ್ಲಿ ಆಂತರ್ಯದಲ್ಲಿ ಪ್ರತಿರೋಧದ ಛಾಯೆಯಿದೆ. 'ಬಾಡಿಗೆ ಮನೆ' ಕತೆಯ ವೇದ ಮನೆ ಮಾಲಿಕನ ಕಾಮಭಿಕ್ಷೆಯನ್ನು ಸ್ವೀಕರಿಸಲು ಮನಸ್ಸಾಗದೆ ಬೇರೆ ಮನೆ ಹುಡುಕುವುದು ತನ್ನ ಒಳಗಿನ ಪ್ರತಿಭಟನೆಯೇ ಆಗಿದೆ. ಉಳಿದಂತೆ ಎಲ್ಲಾ ಕತೆಗಳಲ್ಲಿಯೂ ಸಾವಿನ ಮೂಲಕವೋ, ಮೌನದ ಮೂಲಕವೋ ಅಥವಾ ಹುಚ್ಚಿಯಾಗಿಯೋ ತನ್ನ ದಾರಿಯನ್ನು ಕಂಡುಕೊಳ್ಳುವ ಪರಿ ವ್ಯಕ್ತವಾಗುತ್ತವೆ. 'ಮೂರಾಬಟ್ಟೆ', 'ಸುಖ ಎಲ್ಲಿದೆ' ಕತೆಗಳು ಇದನ್ನು ಸ್ಪಷ್ಟಪಡಿಸುತ್ತವೆ.

೮.೨. ಅಸಹಾಯಕತೆ

ವಿವಾಹದ ಮುನ್ನ ಹಾಗೂ ವಿವಾಹದ ನಂತರದ ಸಂದರ್ಭಗಳಲ್ಲಿಯೂ ಎಷ್ಟೋ ಹೆಣ್ಣು ಮಕ್ಕಳು ತನ್ನ ವೈಯಕ್ತಿಕ ನೆಲೆಯಲ್ಲಾಗಲಿ ಅಥವಾ ಕೌಟುಂಬಿಕವಾಗಿಯಾಗಲಿ ಅಸಾಹಯಕ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಮಗಳಾಗಿ, ಹೆಂಡತಿಯಾಗಿ, ಸೊಸೆಯಾಗಿ, ತಾಯಿಯಾಗಿ, ಅತ್ತೆಯಾಗಿ- ಹೀಗೆ ಹೆಣ್ಣಿನ ಬದುಕಿನ ವಿವಿಧ ಅವಸ್ಥಾಂತರಗಳಲ್ಲಿ ಆಕೆಯನ್ನು ಈ ಅಸಹಾಯಕ ಸ್ಥಿತಿ ಕಾಡುತ್ತದೆ. ಕೆಲವೊಮ್ಮೆ ಆಕೆಯ ಅಸಹಾಯಕ ಸ್ಥಿತಿಗೆ ಅವಳೇ ಸಮಾಧಾನವನ್ನು ಕಂಡುಕೊಂಡು, ಇನ್ನೆಷ್ಟೋ ಸಂದರ್ಭಗಳಲ್ಲಿ ಅಸಹಾಯಕತೆಯ ನಡುವೆ ಒದ್ದಾಡುತ್ತ ಕಾಲಕಳೆಯುವುದೂ ಇದೆ. ಈ ಎಲ್ಲಾ ಅಂಶಗಳು ಕರಾವಳಿ ಲೇಖಕಿಯರ ಕತೆಗಳಲ್ಲಿ ಬಿಂಬಿತವಾಗುತ್ತವೆ.

ಗಂಗಾಪಾದೇಕಲ್‌ರವರ 'ಹಕ್ಕು' (ಹೊಸಹೆಜ್ಜೆ, ೧೯೮೬) ಕತೆಯ ಕಮಲಮ್ಮ ತನ್ನ ತಂಗಿಯ ಮಗಳು ಕಿರಣಳನ್ನು ಬಹಳ ಪ್ರೀತಿಯಿಂದ ಸಾಕಿದಳು. ಹೆತ್ತ ತಾಯಿ – ತಂದೆಗೆ ಹೊರೆಯಾದ ಆ ಮಗುವನ್ನು ತನ್ನ

ಸ್ವಂತ ಮಗುವಿನಂತೆ ಬೆಳೆಸಿದರೂ ಆ ಹುಡುಗಿಯ ತಂದೆ ಅವಳ ಮದುವೆಯ ಕುರಿತಾಗಿ ತಾನೇ ನಿರ್ಧಾರ ತೆಗೆದುಕೊಳ್ಳುತ್ತಾನೆ. ಮಾತ್ರವಲ್ಲ, ಮಗಳನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಈ ದುಃಖದಿಂದ ಹೊರಬರುವುದಕ್ಕೆ ಕಮಲಮ್ಮನಿಗಾಗಲೀ, ಅವಳ ಮಗ ಮೋಹನನಿಗಾಗಲೀ ಸಾಧ್ಯವಾಗದೇ ಚಡಪಡಿಸುತ್ತಾರೆ.

ಸಾಕಿ ಬೆಳೆಸುವುದಕ್ಕೊಬ್ಬರು, ಮುಂದೆ ಹೆಸರು ಪಡೆಯುವುದಕ್ಕೆ ಇನ್ನೊಬ್ಬರು ಎನ್ನುವ ಸ್ಥಿತಿಯನ್ನು ಮನದಟ್ಟು ಮಾಡುವ ಈ ಕಥೆಯಲ್ಲಿ ಹೆಣ್ಣಿಗೆ ತಾನು ಸಾಕಿದ ಮಕ್ಕಳ ಬಗೆಗೆ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಹಕ್ಕಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಪ್ರೇಮಾಭಟ್‌ರವರ 'ಬಳ್ಳಿಗೊಂದು ಆಸರೆ'(ಕಥಾವರ್ಷ, ೨೦೦೭) ಕಥೆಯು ಎಲ್ಲೋ ತೊಟ್ಟಿಯಲ್ಲಿ ಸಿಕ್ಕಿದ ಮಗುವಿಗೆ ಆಸರೆಯಾದ ಹೆಣ್ಣೊಬ್ಬಳ ಕಥೆಯಾಗಿದೆ. ಮಕ್ಕಳಿಲ್ಲದ ಶ್ಯಾಮರಾಯ-ಸುಭದ್ರ ದಂಪತಿಗಳಿಗೆ ಸಿಕ್ಕಿದ ಮಗುವನ್ನು ಬೆಳೆಸುವುದೇ ಕಷ್ಟವಾಗುತ್ತಿತ್ತು. ಶ್ಯಾಮರಾಯರು ತೀರಿ ಸುಭದ್ರ ಹಾಗೂ ಮಗು ಇಬ್ಬರೇ ಆ ಮನೆಯಲ್ಲಿ ಉಳಿಯುವಂತಾಯಿತು.

ತನಗೆ ಕೆಲಸಕೊಟ್ಟ ಮನೆಯಾಕೆ ರಾಣಿ ಮುಂದೊಂದು ದಿನ ಮಗು ಹಾಗೂ ಸುಭದ್ರೆಗೆ ಆಸರೆ ನೀಡುತ್ತಾಳೆ. ಈ ಮಧ್ಯೆ ಆಗಾಗ ಕೆಲಸದ ಮನೆಗಳನ್ನು ಬದಲಾಯಿಸುತ್ತಾ ಹೋಗುವ ಸುಭದ್ರೆಗೆ ಪ್ರತಿಯೊಬ್ಬರಲ್ಲೂ ಒಂದೊಂದು ದೋಷ ಕಾಣುತ್ತದೆ. ಪ್ರಾಯಶಃ ಬಾಳಸಂಗಾತಿಯನ್ನು ಕಳೆದುಕೊಂಡು ಒಬ್ಬಂಟಿಯಾಗಿ ಉಳಿದ ಹೆಣ್ಣಿಗೆ ಸಹಜವಾಗಿ ಕಾಡುವ ಅಭದ್ರತೆ, ಭಯ, ಆತಂಕಗಳು ಇಲ್ಲೂ ಇವೆ.

'ಮುಳ್ಳುಗಳು' ಕಥೆಯು ಪ್ರೀತಿಸಿದವಳನ್ನು ಮದುವೆಯಾಗುವುದಕ್ಕಾಗದೆ ವ್ಯಥೆಪಟ್ಟ ಪೇದ್ರುವಿನ ಕಥೆಯನ್ನು ಹೇಳುತ್ತದೆ. ಪೇದ್ರು ರುಕ್ಕುವನ್ನು ಪ್ರೀತಿಸುತ್ತಿದ್ದರೂ ಆಕೆ ಮೇಲ್ವರ್ಗದವಳು ಎನ್ನುವ ಕಾರಣಕ್ಕಾಗಿ ಅವಳನ್ನು ಮದುವೆಯಾಗುವುದಕ್ಕೆ ಆಗುವುದಿಲ್ಲ. ರುಕ್ಕುವಿಗೆ ಅವಳ ತಂದೆ ಬೇರೆ ಮದುವೆ ಮಾಡಿಸುತ್ತಾರೆ, ಪೇದ್ರುವೂ ಬೇರೆ ಹೆಣ್ಣನ್ನು ಮದುವೆಯಾದರೂ ಸಾಂಸಾರಿಕ ಸುಖವನ್ನು ಕಾಣುವುದಿಲ್ಲ.

ಸಮಾಜದಲ್ಲಿ ಮುಳ್ಳುಗಳನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬರುವ ಪೇದ್ರುವಿನ ಮನಸ್ಸಿನ ದುರ್ಬಲತೆಯೇ ಇದಕ್ಕೆ ಕಾರಣ ಎನ್ನುತ್ತಾನೆ. ಮನೋದೌರ್ಬಲ್ಯವನ್ನು ಮೀರದ ಹೊರತು ಸಮಾಜದ ಮುಳ್ಳುಗಳನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲ ಎಂಬ ಸತ್ಯ ಈ ಕಥೆಯಲ್ಲಿದೆ.

'ಒಂದು ಮುಸ್ಸಂಜೆ' ಕಥೆಯು ಹೆಣ್ಣಿನ ಮನಸ್ಸಿನ ತಳಮಳವನ್ನು ಬಿಡಿಸಿಡುವ ಕಥೆಯಾಗಿದೆ. 'ದೂರದ ಬೆಟ್ಟ ನುಣ್ಣಗೆ' ಎನ್ನುವಂತೆ ವೃದ್ಧ ದಂಪತಿಗಳನ್ನು ನೋಡಿ ಅವರೆಷ್ಟು ಸುಖಿಗಳು, ತನಗೆ ಆ ಸುಖವಿಲ್ಲ ಎಂದು ಭಾವಿಸಿದ್ದ ಮಂಜುಳಾ ಬದುಕಿನ ಅರ್ಥಗಳನ್ನು ಬಗೆಯುವುದಕ್ಕೆ ಮುಂದಾಗುತ್ತಾಳೆ. 'ಅನಾಯಾಸೇನ ಮರಣಂ ಕೊಡು' (ಕಥಾವರ್ಷ, ಪು. ೨೭, ೨೦೦೭) ಎಂದು ದಿನಾಲೂ ಶಾರದಾಂಬೆಯ ಎದುರಿನಲ್ಲಿ ಬೇಡಿಕೊಳ್ಳುತ್ತಿದ್ದ ಡಾ। ಸರ್ವಮಂಗಳಾರನ್ನು ನೋಡಿದಾಗಲ್ಲ ಇಷ್ಟೊಂದು ಸುಖ ಸಂಪತ್ತಿನಲ್ಲಿ ಇರುವವರು ಹೀಗೇಕೆ ಕೇಳಿಕೊಳ್ಳುತ್ತಾರೆ, ತನ್ನ ಕಷ್ಟದ ಎದುರು ಇವರದೇನು? ಎಂದು ಭಾವಿಸುತ್ತಿದ್ದ ಮಂಜುಳಾಗೆ ನಿಜ ವಿಷಯ ತಿಳಿದಾಗ ಎಲ್ಲವೂ ಅರ್ಥವಾಗುತ್ತದೆ. ಕೇವಲ ಹಣವೇ ಶ್ರೀಮಂತಿಕೆಯಲ್ಲ ಎಂಬ ಸತ್ಯವನ್ನು ಮಂಜುಳಾ ಅರ್ಥಮಾಡಿಕೊಳ್ಳುತ್ತಾಳೆ.

ಇಲ್ಲಿ ಅಸಹಾಯಕತೆಯ ಬೇರೆ ಬೇರೆ ಮುಖಗಳ ಪರಿಚಯವಾಗುತ್ತದೆ. ತಂದೆ ತಾಯಂದಿರಿಂದ ಮಕ್ಕಳು ಅಸಹಾಯಕ ಸ್ಥಿತಿಗೆ ತಲುಪುವ ಸಂದರ್ಭಗಳು ಒಂದೆಡೆಯಾದರೆ, ಮಕ್ಕಳಿಗಾಗಿ ತಂದೆ ತಾಯಂದಿರೇ ಅಸಹಾಯಕರಾಗಿ ಉಳಿಯ ಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಗಂಗಾ ಪಾದೇಕಲ್‌ರವರ 'ಹಕ್ಕು' ಎನ್ನುವ ಕತೆ ಈ ಅಂಶವನ್ನು ಧ್ವನಿಸುತ್ತದೆ.

ಪ್ರೀತಿಸಿದ ಹೆಣ್ಣನ್ನು ಮದುವೆಯಾಗುವುದಕ್ಕಾಗದೇ ಪರಿತಪಿಸುವ 'ಮುಳ್ಳುಗಳು' ಕತೆಯ ಪೇದ್ರು, ಬೇರೆಯವರನ್ನು ನೋಡಿ ತನಗೆ ಆ ಸುಖವಿಲ್ಲ ಎಂದು ಕೊರಗುವ 'ಒಂದು ಮುಸ್ಸಂಜೆ' ಕತೆಯ ಮಂಜುಳಾ ಇಬ್ಬರೂ ಅಸಹಾಯಕ ಪಾತ್ರಗಳೇ ಆಗಿ ಕಾಣುತ್ತಾರೆ. ಇವೆಲ್ಲಾಕ್ಕಿಂತ ಭಿನ್ನವಾಗಿ ಮಿತ್ರಾ ವೆಂಕಾಟ್ರಾಜ್‌ರವರ 'ಇನ್ನಿಲ್ಲದ ನಿರೀಕ್ಷೆ' ಕತೆಯ ಅಕ್ಕಯ್ಯ ಗೋಚರಿಸುತ್ತಾಳೆ. ತನ್ನ ನೋವನ್ನು ಯಾರೊಡನೆಯೂ ಹೇಳಿಕೊಳ್ಳದೆ ನೋವನ್ನೆಲ್ಲಾ ಒಳಗಿಟ್ಟುಕೊಂಡು ನಗುವ ಅಕ್ಕಯ್ಯ ಅಷ್ಟರಲ್ಲೇ ಬದುಕನ್ನು ಸಹ್ಯವಾಗಿಸಿಕೊಳ್ಳುತ್ತಾಳೆ.

'ದೆಹಲಿಯಲ್ಲಿ ಒಂದು ಸಂಜೆ' ಕಥೆಯು ಗಂಡನಾದವನ ತಪ್ಪನ್ನು ಹೆಂಡತಿಯಾದವಳು ಪ್ರಶ್ನಿಸುವ ಹಾಗಿಲ್ಲ ಎನ್ನುವ ಪುರುಷ ಪ್ರಧಾನ ವ್ಯವಸ್ಥೆಯನ್ನು ಚಿತ್ರಿಸುತ್ತದೆ. ಗಂಡನ ಅನೈತಿಕ ವ್ಯವಹಾರವನ್ನು ತಿಳಿದೂ ಕಣ್ಣುಮುಚ್ಚಿ ಸಹಿಸಿಕೊಳ್ಳುವ ಹೆಣ್ಣು 'ಪತಿವ್ರತೆ' ಎನಿಸಿಕೊಳ್ಳುತ್ತಾಳೆ. ಗಂಡನ ತಪ್ಪನ್ನು ಪ್ರಶ್ನಿಸುವ ಹೆಣ್ಣು 'ಬಜಾರಿ'ಯೆನಿಸಿಕೊಳ್ಳುತ್ತಾಳೆ ಎಂಬ ಪುರುಷ ಪ್ರಧಾನ ನಿಲುವನ್ನು ಈ ಕಥೆ ನಿರೂಪಿಸುತ್ತದೆ.

'ಹುಟ್ಟು ಸಾವಿನ ನಡುವಿನ ಬದುಕು' ಕಥೆಯಲ್ಲಿ ಹುಟ್ಟು ಸಾವುಗಳ ನಡುವಿನ ಹೆಣ್ಣಿನ ಆತಂಕವನ್ನು ಚಿತ್ರಿಸಲಾಗಿದೆ. ತನ್ನ ಗಂಡ ಉದ್ಯೋಗ ನಿಮಿತ್ತ ಹೋದಾಗ ವಯಸ್ಸಾದ ಮಾವನ ಆರೈಕೆ ಮಾಡುತ್ತಾ ಗರ್ಭಿಣಿ ದಿನಕಳೆಯುತ್ತಿರುತ್ತಾಳೆ. ತನ್ನ ಹೊಟ್ಟೆಯಿಂದ ಮಗು ಹೊರಬರುವುದಕ್ಕೂ, ಮಾವನ ಪ್ರಾಣಪಕ್ಷಿ ಹಾರಿಹೋಗುವುದಕ್ಕೂ ಸಮವಾಗುತ್ತದೆ. ತನ್ನ ಮಗುವನ್ನು ಮಾವನಿಗೆ ತೋರಿಸಬೇಕು ಎಂದು ಕಾತರಪಡುತ್ತಿದ್ದ

ನೀತುವಿಗೆ ಅದು ಸಾಧ್ಯವಾಗದೇ ಹೋಗುತ್ತದೆ. ತನ್ನವರೆಂಬುವವರು ಯಾರೂ ಇಲ್ಲದ ಹೊತ್ತಲ್ಲಿ ಎರಡೂ ರೀತಿಯ ವೇದನೆಗಳ ಮಧ್ಯೆ ತೊಳಲಾಡುವ ಹೆಣ್ಣಿನ ಅಸಹಾಯಕ ಸ್ಥಿತಿ ಇಲ್ಲಿ ನಿರೂಪಿತವಾಗಿದೆ. ಹುಟ್ಟು ಸಾವು ಎರಡೂ ನಾವು ಎಣಿಸಿದಂತಿಲ್ಲ ಎಂಬ ಸತ್ಯವನ್ನು ಈ ಕಥೆ ಹೃದಯಂಗಮವಾಗಿ ಚಿತ್ರಿಸಿದೆ.

'ಅಕ್ಕಯ್ಯ' ಕಥೆಯಲ್ಲಿ ತುಂಬು ಬದುಕನ್ನು ಕಂಡ ಹೆಣ್ಣೊಬ್ಬಳ ಬದುಕಿನ ಪುಟಗಳು ಎಳೆಎಳೆಯಾಗಿ ತೆರೆದುಕೊಳ್ಳುತ್ತವೆ. ಅಕ್ಕಯ್ಯನು ತನ್ನ ಕಾಲದ ಪರಿಸ್ಥಿತಿಯನ್ನು ವಿವರಿಸುವುದರೊಂದಿಗೆ ಆಧುನಿಕ ಜಗತ್ತಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾಳೆ. ಆಗಿನ ಕಾಲದ ಹೆಣ್ಣು ಮಕ್ಕಳ ನಿಯತ್ತು, ನಂಬಿಕೆ, ಜವಾಬ್ದಾರಿ, ಅವಿರತ ಶ್ರಮ ಇವೆಲ್ಲ ಈಗಿನವರಿಗಿಲ್ಲ ಎಂಬ ನಿಲುವು ಕಥೆಯಲ್ಲಿ ವ್ಯಕ್ತವಾಗುತ್ತದೆ. ಪುರುಷ ಪ್ರಧಾನ ಸಮಾಜದ ರೀತಿ ನೀತಿಗಳನ್ನೇ ಒಪ್ಪುವ ಅಕ್ಕಯ್ಯ 'ದೇಶಕ್ಕೆ ಬಂದ ಸ್ವಾತಂತ್ರ ಬದುಕನ್ನು ಕೆಡಿಸಿಬಿಟ್ಟಿದೆ. ವ್ಯಕ್ತಿವ್ಯಕ್ತಿಗಳೂ ಸ್ವಾತಂತ್ರಕ್ಕಾಗಿ ಚಡಪಡಿಸುತ್ತ ಬದುಕಿಗೆ ಬೆಲೆ ಕೊಡದೆ ಹೋಗುತ್ತಿದ್ದಾರೆ' (ಕಥಾವರ್ಷ ಪು. ೮೨, ೨೦೦೭) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾಳೆ.

'ತೇರು ಬಂತು ತೌರಿಗೆ' ಕಥೆಯು ದುಃಖದಿಂದ ಊರಿನ ತೇರನ್ನು ನಿರೀಕ್ಷಿಸುವ ಹೆಣ್ಣೊಬ್ಬಳ ಚಿತ್ರಣವನ್ನು ನೀಡುತ್ತದೆ. ಬೇಜವಾಬ್ದಾರಿ ಗಂಡನಿಂದಾಗಿ ತವರಿಗೆ ಬಂದ ಸುಮತಿ ಕೆಲವೇ ದಿನಗಳಲ್ಲಿ ಬರುವ ತೇರಿನಲ್ಲಿ ಪಾಲ್ಗೊಳ್ಳುವ ಬಯಕೆ ಇದ್ದರೂ ಹೋಗುವ ಸ್ಥಿತಿಯಲ್ಲಿಲ್ಲ. ಎಲ್ಲಾ ರೀತಿಯ ಅನುಕೂಲಗಳಿರುವ ತನ್ನ ತಂಗಿ ಪಾರ್ವತಿಯ ಬದುಕಿಗೂ, ತನ್ನ ಬದುಕಿಗೂ ಎಷ್ಟೊಂದು ವ್ಯತ್ಯಾಸ? ಎಂದು ಕೊಳ್ಳುತ್ತಾಳೆ. ತಂಗಿ ಹೊಸ ಸೀರೆ ಕೊಟ್ಟರೂ ಅದನ್ನು ಸ್ವೀಕರಿಸುವ ಸ್ಥಿತಿ ಸುಮತಿಯಲ್ಲಿರಲಿಲ್ಲ. ತೇರಿಗಾಗಿ ಬರುವ ನೆಂಟರಿಷ್ಟರಿಗೆಲ್ಲ ತನ್ನ ಪರಿಸ್ಥಿತಿ ತಿಳಿಯುತ್ತದಲ್ಲ ಎಂಬ ಆತಂಕ ಒಂದು ಕಡೆಯಾದರೆ, ನಡುನಡುವೆ ಮಗ ಮುರಳಿ ಎತ್ತುವ ಪ್ರಶ್ನೆಗಳು ಇನ್ನೊಂದೆಡೆ. ಇವೆಲ್ಲವುಗಳಿಂದ ಬೇಸರಗೊಂಡ ಸುಮತಿ ಹೆತ್ತ ಮನೆಗೂ ತಾನು ಹೊರೆಯಾಗಿ ಬದುಕಬೇಕಾಯಿತಲ್ಲ ಎಂದು ವ್ಯಥೆ ಪಡುತ್ತಾಳೆ. ಆದರೆ ತೇರಿನ ದಿನ ಮುಂಜಾನೆ ಗಂಡ ದಿಢೀರ್ ಪ್ರತ್ಯಕ್ಷವಾದಾಗ ತನ್ನನ್ನೇ ತಾನು ನಂಬಲಾರದ ಸ್ಥಿತಿಗೆ ಹೋಗುತ್ತಾಳೆ ಸುಮತಿ. ಹೆಣ್ಣಿನ ಮನಸ್ಸಿನ ಒಳಸೂಕ್ಷ್ಮಗಳು ಈ ಕಥೆಯಲ್ಲಿ ಮನಮುಟ್ಟುವಂತೆ ಚಿತ್ರಿತವಾಗಿವೆ.

ಮಿತ್ರಾ ವೆಂಕಟ್ರಾಜ್‌ರವರ 'ಇನ್ನಿಲ್ಲದ ನಿರೀಕ್ಷೆ' (ರುಕುಮಾಯಿ, ೧೯೯೦) ಕಥೆಯ ಅಕ್ಕಯ್ಯ ತನ್ನ ನೋವನ್ನೆಲ್ಲಾ ಒಳಗಿಟ್ಟುಕೊಂಡು ನಗುವ ಹೆಣ್ಣಾಗಿದ್ದಾಳೆ. ಬೆಳಿಗ್ಗೆ ಎದ್ದಲ್ಲಿಂದ ರಾತ್ರಿ ಮಲಗುವ ತನಕ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ದುಡಿಯುತ್ತಾಳೆ. ಅವಳ ಗಂಡ ಘಟ್ಟದ ಮೇಲಿರುವವನು. ತಿಂಗಳಿಗೋ, ಎರಡು ತಿಂಗಳಿಗೋ

ಒಮ್ಮೆ ಊರಿಗೆ ಬರುತ್ತಿದ್ದವನು ಎಷ್ಟೋ ಸಮಯ ಬಾರದೇ ಹೋದಾಗಲೂ ಅವಳು ತನ್ನ ಗಂಡನ ಬಗೆಗೆ ಆದರ – ಅಭಿಮಾನಗಳನ್ನು ವ್ಯಕ್ತಪಡಿಸುತ್ತಾ ಬದುಕಿದವಳು. ವೈಯಕ್ತಿಕ ನೆಲೆಯಲ್ಲಿ ಬದುಕನ್ನು ಸಹ್ಯವಾಗಿಸಿಕೊಂಡವಳು.

ಇದೇ ಕಥೆಯ ಗೀತ ಹಾಗೂ ಅವಳ ತಾಯಿಯ ಬದುಕು ಇದಕ್ಕೆ ವಿರುದ್ಧವಾದುದು. ಲೋಕದ ಗೊಡವೆಯಿಲ್ಲದ ಹಾಗೆ ವರ್ತಿಸುವ ಗೀತಾಳ ತಂದೆಯ ಬರುವಿಕೆಗಾಗಿ ಕಾದು ಕಾದು ಸುಸ್ತಾಗಿ ಊಟ ಮಾಡಿ ಮಲಗಿಕೊಳ್ಳುವ ಸ್ಥಿತಿ ತಾಯಿ– ಮಗಳದ್ದು. ತಂದೆಯನ್ನು ಬಿಟ್ಟು ಊಟ ಮಾಡಲಾರದ ಸ್ಥಿತಿಯ ಗೀತಾ, ಗಂಡ ದೂರದಲ್ಲಿದ್ದಾಗ ಅವನ ನೆನಪಿನೊಂದಿಗೆ ಬದುಕುವ ಅಕ್ಕಯ್ಯು ಈ ಕಥೆಗಳ ವಿರುದ್ಧ ಮನಸ್ಥಿತಿಯ ಪಾತ್ರಗಳು. ಅಕ್ಕಯ್ಯುವಿನ ಗಟ್ಟಿ ಮನಸ್ಸಿನ ಎದುರು ಗೀತಾ ಹಾಗೂ ಆಕೆಯ ತಾಯಿ ಸೋಲುತ್ತಾರೆ. ಅಕ್ಕಯ್ಯು ವ್ಯವಸ್ಥೆಯನ್ನು ಒಪ್ಪಿಕೊಂಡವಳು.

ಸಾರಾ ಅಬೂಬಕ್ಕರ್‌ರವರ 'ಮೂಲೆ ಮುಟ್ಟಿದ ಹುಳು' (ಪಯಣ ಮತ್ತು ಇತರ ಕಥೆಗಳು, ೧೯೯೨) ಕಥೆಯಲ್ಲಿ ಮಗನೇ ಸರ್ವಸ್ವ ಎಂದು ತಿಳಿದು ಆತನಿಗಾಗಿ ತನ್ನ ಆಯುಷ್ಯವನ್ನೇ ಸವೆಸಿಕೊಂಡ ತಾಯಿಯ ಬದುಕಿನ ದುರಂತವಿದೆ. ಓದಿದವನು ಎಂಬ ಅಹಂಕಾರದೊಂದಿಗೆ ತಾಯಿಗೆ ಕೆಲಸದಲ್ಲಿ ನೆರವಾಗದೆ, ಇದ್ದುದನ್ನೆಲ್ಲಾ ಮಾರಿ ಅಡ್ಡದಾರಿ ಹಿಡಿದ ಮಗನಿಂದಾಗಿ ಮೂಲೆ ಮುಟ್ಟಿದ ಹುಳುವಾಗುತ್ತಾಳೆ ಸರಸಮ್ಮ. 'ಅಯ್ಯೋ ಮಗಾ, ನನ್ನನ್ನು ಕೊಂದೇ ಬಿಟ್ಟೆಯಲ್ಲಾ? ತೊಟ್ಟಿಲಿನಿಂದ ಇನ್ನೂ ಕಾಲು ಹೊರಗಿಟ್ಟಿಲ್ಲ; ಆಗಲೇ ಇದನ್ನು ಪ್ರಾರಂಭಿಸಿದೆಯಾ ?' (ಪಯಣ ಮತ್ತು ಇತರ ಕಥೆಗಳು, ಪುಟ. ೧೧೬, ೧೯೯೨) ಎಂಬ ಸರಸಮ್ಮನ ಮಾತು ಮಗನನ್ನು ಹಿಡಿತದಲ್ಲಿಟ್ಟುಕೊಳ್ಳಲಾಗದ ಅಸಹಾಯುಕ ಸ್ಥಿತಿ ಹಾಗೂ ಇದ್ದ ಒಂದೇ ಒಂದು ಆಸೆಯ ಕುಡಿ ಕೊಳಚೆ ಗುಂಡಿಯ ಬಳಿ ಸಾರುತ್ತಿರುವುದರ ಬಗೆಗಿನ ನೋವನ್ನು ಮನವರಿಕೆ ಮಾಡಿಕೊಡುತ್ತದೆ.

'ಹುಟ್ಟು' (ಪಯಣ ಮತ್ತು ಇತರ ಕಥೆಗಳು, ೧೯೯೨) ಕಥೆಯಲ್ಲಿ ಮಕ್ಕಳನ್ನು ಹೆರುವುದೇ ಬದುಕಿನ ಸಾರ್ಥಕ್ಯ ಎಂದು ಭಾವಿಸುವ ಸಮಾಜದ ಅಂಧಕಾರದಲ್ಲಿ ಒದ್ದಾಡುವ ಹೆಣ್ಣಿನ ಚಿತ್ರಣವಿದೆ. ದಾಂಪತ್ಯದ ಸುಖ, ಸಂತೋಷ, ಭಾವನೆಗಳಿಗೆ ಎಡೆಗೊಡದೆ ಖದೀಜಳ ಗಂಡ ಇನ್ನೊಬ್ಬಳನ್ನು ಮದುವೆಯಾಗುವುದರೊಂದಿಗೆ ಮಕರಂದವನ್ನು ಹೀರುವ ದುಂಬಿಯಾಗುತ್ತಾನೆ. ತವರಿನ ಸಂಬಂಧದಿಂದ ದೂರವಾದ ಖದೀಜ ಗಾಣದೆತ್ತಾಗಿ ಗಂಡನ ಮನೆಯಲ್ಲಿ ದುಡಿದು, ಬದುಕು ಸವೆಯಿಸಿ ಅಲ್ಲೇ ಅಂತ್ಯ ಕಾಣುತ್ತಾಳೆ.

ಗಂಗಾಪಾದೇಕಲ್‌ರವರ 'ನಮ್ಮಲ್ಲೊಬ್ಬಳು ಆಲೀಮ' (ಹಜ್ಜೆ ಮೂಡದ ಹಾದಿಯಲ್ಲಿ, ೧೯೮೮) ಕಥೆಯಲ್ಲಿ ಖತೀಜ ತನ್ನ ಸ್ವಂತ ಮಕ್ಕಳನ್ನು ಕಾಣುವ ಭಾಗ್ಯವಿಲ್ಲದಿದ್ದರೂ, ತಾಯಿಯನ್ನು ಕಳೆದುಕೊಂಡ ಅಲೀಮಳನ್ನು ಬೆಳೆಸಿ ದೊಡ್ಡವಳನ್ನಾಗಿ ಮಾಡುತ್ತಾಳೆ. ಮುಂದೆ ಖತೀಜಳಿಗೆ ತಿಳಿಯದ ಹಾಗೆ ಅಲೀಮಳ ತಂದೆ ಆಕೆಗೆ ಹುಡುಗ ಹುಡುಕಿ ಮದುವೆಗೆ ಏರ್ಪಾಡು ಮಾಡುತ್ತಾನೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಭಾವನೆಗಳಿಗೆ ಬೆಲೆಯಿಲ್ಲ ಎಂಬುದನ್ನು ಖತೀಜಳ ಪಾತ್ರ ಸ್ಪಷ್ಟಪಡಿಸುತ್ತದೆ. ಕಷ್ಟಪಡಬೇಕಾದವಳು ಹೆಣ್ಣು. ಆದರೆ ನಿರ್ಧಾರ ತೆಗೆದುಕೊಳ್ಳುವ ಯಾವ ಅಧಿಕಾರವೂ ಆಕೆಗಿಲ್ಲದೆ ನೋವೊಂದೇ ಅವಳ ಪಾಲಿಗೆ ಉಳಿಯುತ್ತದೆ.

'ಕಲ್ಲರಳಿ ಹೂವಾಗಿ' (ವಾಸ್ತವ, ೧೯೯೬) ಕಥೆಯು ನಮ್ಮ ಒಳ್ಳೆತನ ಎಂಥ ಕಲ್ಲುಹೃದಯಗಳ ಮನಸ್ಸನ್ನೂ ಅರಳಿಸುತ್ತದೆ ಎನ್ನುವುದನ್ನು ನಿರೂಪಿಸುವ ಕಥೆಯಾಗಿದೆ. ಗಂಡನನ್ನು ಕಳೆದುಕೊಂಡ ಗಂಡನ ಮನೆಯವರ ಎಳ್ಳಷ್ಟೂ ಪ್ರೀತಿ ಸಿಗದ ಈ ಕಥೆಯ ಹೆಣ್ಣಿಗೆ ಗಂಡನ ಮನೆಯ ಬಗೆಗಿನ ಪ್ರೀತಿ ಹೋಗಿರುವುದಿಲ್ಲ. ತನ್ನ ಅತ್ತೆ ಸತ್ತಾಗ ಮಗನೊಂದಿಗೆ ಅಲ್ಲಿಗೆ ಹೋದರೂ ಯಾರೂ ಮಾತನಾಡಿಸದೆ ಒಂಟಿಯಾಗಿ ಉಳಿದ ಆಕೆಗೆ ಕೊನೆಗೆ ಮಾವನ ಪ್ರೀತಿಯ ಮಾತುಗಳು ಬೆರಗನ್ನುಂಟುಮಾಡುತ್ತದೆ.

ಅಜ್ಜಿಯನ್ನು ಕಳೆದುಕೊಂಡು ಇನ್ನಾರೂ ನಮ್ಮ ಪಾಲಿಗಿಲ್ಲ ಎಂದುಕೊಳ್ಳುತ್ತಿರುವಾಗ ಅಜ್ಜನ ಪ್ರೀತಿಯ ಮಾತುಗಳು ಅಶೋಕನಲ್ಲಿ ಹೊಸ ಭರವಸೆಯನ್ನು ತುಂಬುತ್ತವೆ. ಅಜ್ಜಿಯ ವಾತ್ಸಲ್ಯ ಈ ಮನೆಯಲ್ಲಿ ಮರೆಯಾಗಿಲ್ಲ ಎಂಬ ಭಾವನೆಯೊಂದಿಗೆ ಆಕೆ ತನ್ನ ಮಗನೊಂದಿಗೆ ಹೊರಟು ಬರುತ್ತಾಳೆ.

'ಕರ್ಮಣ್ಯೇವಾಧಿಕಾರಸ್ತೇ' (ಈ ಪ್ರಜಾರಾಜ್ಯದೊಳಗೆ, ೨೦೦೬) ಕಥೆಯು ಸಾಕಮಗನೊಬ್ಬ ತನ್ನನ್ನು ಸಾಕಿದವರಿಗೆ ನೀಡಿದ ಪ್ರತಿಫಲವನ್ನು ನಿರೂಪಿಸುವ ಕಥೆಯಾಗಿದೆ. ಹೆಂಡತಿಯ ದೈಹಿಕ ಸಮಸ್ಯೆಯಿಂದಾಗಿ ಮಕ್ಕಳಾಗದ ದಂಪತಿಗಳು ಅನಾಥಾಶ್ರಮದ ಮಗುವೊಂದನ್ನು ತಂದು ಮುದ್ದಿನಿಂದ ಸಾಕಿ ದೊಡ್ಡವವನ್ನಾಗಿ ಮಾಡಿದರು. ಕೊನೆಗೆ ನಿಜ ವಿಷಯ ತಿಳಿದ ಆತ ತಂದೆ – ತಾಯಿಯರನ್ನು ನಿಂದಿಸಲು ಆರಂಭಿಸುತ್ತಾನೆ. ಅದೇ ಬೇಸರದಲ್ಲಿ ತಾಯಿ ತೀರಿಹೋಗುತ್ತಾಳೆ. ಮುಂದೆ ಮದುವೆಯಾದ ಮಗ ಹಾಗೂ ಅವನ ಹೆಂಡತಿ ಮುದುಕನನ್ನು ಕಾಲ ಕಸವಾಗಿ ಕಾಣುತ್ತಾರೆ. ತನ್ನ ಹಿಂದಣ ನೆನಪುಗಳನ್ನೆಲ್ಲಾ ಮೆಲುಕು ಹಾಕುವ ಮುದುಕ ತನಗೆ ಸಿಕ್ಕ ಭಗವದ್ಗೀತೆಯ ಒಂದು ಶ್ಲೋಕವನ್ನು ಓದುತ್ತಾ ಸಮಾಧಾನ ತಂದುಕೊಳ್ಳುತ್ತಾರೆ. ಶ್ಲೋಕವೇ ಹೇಳುವಂತೆ 'ನಿನ್ನ ಕರ್ಮವನ್ನು ನೀನು

ಮಾಡು' ಎನ್ನುವ ಹಾಗೆ ಅನಾಥ ಮಗುವೊಂದಕ್ಕೆ ಬದುಕು ನೀಡಿದರು. ದೂರವಾಗುತ್ತಿರುವ ಸಂಬಂಧಗಳ ಚಿತ್ರಣ ಈ ಕಥೆಯಲ್ಲಿ ಮನಕರಗುವಂತೆ ಮೂಡಿಬಂದಿದೆ.

ಪ್ರೇಮಾಭಟ್‌ರವರ 'ಪಾರಿವಾಳ' (ಕಥಾವರ್ಷ, ೨೦೦೭) ಕಥೆಯು ಒಂದು ಪಕ್ಷಿಯ ಜೊತೆಯಲ್ಲಿ ಹೆಣ್ಣೊಬ್ಬಳ ಸಂಬಂಧವನ್ನು ಹೊಸರೀತಿಯಲ್ಲಿ ಚಿತ್ರಿಸುತ್ತದೆ. ತನ್ನ ಪ್ರಾಣವೇ ಆಗಿದ್ದ ಪಾರಿವಾಳವನ್ನು ಗೌರಿ ಮದುವೆಯಾಗಿ ಗಂಡನ ಮನೆಗೆ ಹೋಗುವಾಗಲೂ ಕರೆದುಕೊಂಡು ಹೋಗುತ್ತಾಳೆ. ಗೌರಿಯನ್ನು ಒಂದು ನಿಮಿಷವೂ ಬಿಟ್ಟಿರಲಾರದ ಪಾರಿವಾಳ ಕೊನೆಗೆ ಗೌರಿಯ ಮನೆಯಲ್ಲಿ ಪ್ರಾಣತ್ಯಾಗ ಮಾಡುತ್ತದೆ.

ಗೌರಿಯ ತಂದೆ ಪಾರ್ಶ್ವವಾಯು ಪೀಡಿತರಾದಾಗ ಪಾರಿವಾಳದ ಬಿಸಿರಕ್ತ ಕುಡಿಸುವುದಕ್ಕಾಗಿ ಅದನ್ನು ಕೊಂದು ಬಿಡುತ್ತಾರೆ. ಆ ವಿಚಾರ ಗೌರಿಗೆ ಮರುದಿನ ತಿಳಿಯುತ್ತದೆ. ಹಕ್ಕಿಯ ದುರಂತ ಜೊತೆಗೆ ಅಪ್ಪನ ಕಾಯಿಲೆ ಇವೆರಡೂ ಗೌರಿಯನ್ನು ಮೌನವಹಿಸುವಂತೆ ಮಾಡುತ್ತದೆ.

'ಬೇಡ ಅಂತ ಅಂದ್ರೂ ಕೇಳ್ಲಿಲ್ಲಾ' (ಕಥಾವರ್ಷ, ೨೦೦೭) ಎಂಬ ಕಥೆಯು ವಿಧಿ ಬರಹವನ್ನು ಮೀರುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಮನವರಿಕೆ ಮಾಡುವ ಕಥೆಯಾಗಿ ಕಾಣುತ್ತದೆ. ಎಲ್ಲೋ ಆದ ಅಪಘಾತದ ಸುದ್ದಿ ಕೇಳಿದ ಸುಶೀಲೆ ತನ್ನ ಗಂಡನನ್ನು ಯಾವ ವಾಹನದಲ್ಲಿಯೂ ತಿರುಗಾಡುವುದಕ್ಕೆ ಬಿಡುತ್ತಿರಲಿಲ್ಲ. ಮುಂದೊಂದು ದಿನ ಆಕೆ ರಿಕ್ಷಾದಲ್ಲೆ ಅಪಘಾತಕ್ಕೊಳಗಾಗಿ ಪ್ರಜ್ಞಾಹೀನ ಸ್ಥಿತಿಗೆ ತಲುಪುತ್ತಾಳೆ.

ಬಸ್ ಅಪಘಾತದಲ್ಲಿ ಪೆಟ್ಟಾಗಿ ಬಂದ ಪ್ರಾಣೇಶ ಹೆಂಡತಿಯೊಡನೆ ಏನಾದರೂ ಸುಳ್ಳು ಹೇಳಬೇಕೆಂದುಕೊಂಡು ಬಂದರೂ ಆತನಿಗೆ ಸಿಕ್ಕಿದ ಸುದ್ದಿ ತನ್ನ ಹೆಂಡತಿಗೆ ರಿಕ್ಷಾ ಅಪಘಾತದಲ್ಲಿ ಪ್ರಜ್ಞೆ ಕಳೆದುಕೊಂಡಿದ್ದಾಳೆ ಎಂಬುದಾಗಿರುತ್ತದೆ.

'ಆತಂಕ' (ಕಥಾವರ್ಷ, ೨೦೦೭) ಕಥೆಯು ಗಂಡನ ಮನೆಯಲ್ಲಿ ಯಾರಿಗೂ ಬೇಡದವಳಾಗಿ ಬದುಕು ಸಾಗಿಸುವ ಗಂಗಮ್ಮನ ಕಥೆಯನ್ನು ಹೇಳುತ್ತದೆ. ಕೇವಲ ಗಂಡು ಮಗುವನ್ನು ಪಡೆಯುವ ಆಸೆಯಿಂದ ಇಪ್ಪತ್ತು ವರ್ಷ ದಾಟಿದ ತಂತ್ರಿಗಳು ಹತ್ತು ವರ್ಷದ ಗಂಗಮ್ಮನನ್ನು ಮದುವೆಯಾಗುತ್ತಾರೆ. ತಂತ್ರಿಗಳಿಗೆ ಮೊದಲ ಹೆಂಡತಿಯಿಂದ ಐದು ಮಂದಿ ಹೆಣ್ಣು ಮಕ್ಕಳಿದ್ದರು. ಮದುವೆಯಾಗಿ ಹೋದ ದಿನದಿಂದ ಏನೂ ಅರಿಯದ ಮುಗ್ಧ ಗಂಗಮ್ಮನಿಗೆ ಮನೆಯ ಎಲ್ಲ ಜವಾಬ್ದಾರಿಯು ತಲೆಯ ಮೇಲೆ ಬೀಳುತ್ತದೆ. ತಂತ್ರಿಯ ಹೆಣ್ಣು ಮಕ್ಕಳೆಲ್ಲ ಈಕೆಯನ್ನು ಕೆಲಸದಾಳಿನಂತೆ

ನೋಡಿಕೊಳ್ಳುತ್ತಾರೆ. ಮೊದಲ ಬಾರಿಗೆ ಹೆಣ್ಣು ಮಗು ಹೆತ್ತ ಗಂಗಮ್ಮ ಎರಡನೆ ಬಾರಿಗೆ ಗಂಡು ಮಗು ಹೆತ್ತದ್ದಕ್ಕಾಗಿ ಅವಳ ಜೀವ ಉಳಿಯಿತು.

ದಿನದಿಂದ ದಿನಕ್ಕೆ ಪೋಕರಿಯಾಗಿ ಬೆಳೆಯುತ್ತಿದ್ದ ಮಗನ ಬಗೆಗೆ ಆತಂಕ ಹೆಚ್ಚುತ್ತಿತ್ತಾದರೂ ಗಂಡು ಮಗುವನ್ನು ಹೆತ್ತ ಸಂತೋಷವೂ ಇತ್ತು. ಗಂಡು ಮಗು ಹುಟ್ಟಿದರೇನೇ ತಂದೆಗೆ ಸದ್ಗತಿ ಎಂದು ನಂಬಿದ ಸಮಾಜ ಅದಕ್ಕಾಗಿ ಹೆಣ್ಣು ಜೀವವನ್ನು ಹೇಗೆ ಬಲಿ ಕೊಡುತ್ತದೆ ಎಂಬುದರ ಚಿತ್ರಣ ಈ ಕಥೆಯಲ್ಲಿದೆ.

'ದೆಹಲಿಯಲ್ಲಿ ಒಂದು ಸಂಜೆ' ಹಾಗೂ 'ಅಕ್ಕಯ್ಯ' ಕತೆಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪಿ ಬದುಕುವ ಹೆಣ್ಣು ಪತಿವ್ರತೆಯಾಗಿಯೂ, ಪ್ರಶ್ನಿಸುವ ಹೆಣ್ಣು ಬಜಾರಿಯಾಗಿಯೂ ಕಾಣಿಸಿಕೊಳ್ಳುತ್ತಾಳೆ. 'ಹುಟ್ಟು-ಸಾವಿನ ನಡುವಿನ ಬದುಕು' ಕತೆಯ ನೀತುವಿನ ವೇದನೆ ವಿಶಿಷ್ಟವಾದುದು. ಯಾರೊಡನೆಯೂ ಹೇಳಿಕೊಳ್ಳುವುದಕ್ಕೆ ಅವಕಾಶವೇ ಇಲ್ಲದೆ ನಲುಗುವ ಆಕೆ ಹುಟ್ಟು-ಸಾವು ನಮ್ಮ ಕೈಯಲಿಲ್ಲ ಎಂಬ ಸತ್ಯಕ್ಕೆ ಬದ್ಧಳಾಗಿ ಕೈ ಚೆಲ್ಲಿ ಕೂರಬೇಕಾಗುತ್ತದೆ. ' ಆತಂಕ' ಕತೆಯ ಗಂಗಮ್ಮ, ತಂತ್ರಿಗಳ ಎರಡನೆಯ ಹೆಂಡತಿಯಾಗಿ ತಂತ್ರಿಗಳ ಮೊದಲ ಹೆಂಡತಿಯ ಐವರು ಮಕ್ಕಳನ್ನು ನೋಡಿಕೊಳ್ಳುವುದರಲ್ಲೇ ತನ್ನ ತಾಯ್ತನದ ಸಾರ್ಥಕ್ಯವನ್ನು ಕಂಡುಕೊಳ್ಳಬೇಕಾಗುವುದು ದುರಂತ. ಪ್ರಾಯಶಃ ಇಂಥಹ ಪರಿಸ್ಥಿತಿಯಲ್ಲಿ ನಮ್ಮ ಸಮಾಜದ ಹೆಣ್ಣು ಮಕ್ಕಳು ಬದುಕಬೇಕಾಗಿರುವ ಅನಿವಾರ್ಯತೆಯನ್ನು ಕತೆ ಹೇಳುತ್ತದೆ.

ಸಾರಾ ಅಬೂಬಕ್ಕರ್‌ರವರ 'ಧ್ವನಿಯಿಲ್ಲದ ನೋವುಗಳು' (ಪಯಣ ಮತ್ತು ಇತರ ಕಥೆಗಳು, ೧೯೯೨) ಕಥೆಯಲ್ಲಿ ಅಮಾಯಕ ಹೆಣ್ಣು ಜರೀನಾಳ ನೂರಾರು ಆಸೆಗಳೆಂಬ ಗೋಪುರ ಕುಸಿದು ಬಿದ್ದ ಚಿತ್ರಣವಿದೆ. ಊರಿನಲ್ಲಿ ಉಂಡಾಡಿಯಾಗಿದ್ದ ಮುಸ್ತಾಫನನ್ನು ಜರೀನಾಳ ಅಣ್ಣ ಮಸೀದಿಯ ಮೌಲವಿ ಕೊಲ್ಲಿ ರಾಷ್ಟ್ರಕ್ಕೆ ಕಳುಹಿಸುವಾಗ ಅವರ ತಂಗಿಯ ಬದುಕು ನೆಟ್ಟಗಾಗಲಿ ಎಂಬ ಆಸೆಯಿತ್ತು. ಆರಂಭದಲ್ಲಿ ಊರಿಗೆ ಹಣ ಕಳುಹಿಸುತ್ತಿದ್ದ ಮುಸ್ತಾಫ, ಚಾತಕ ಪಕ್ಷಿಯಂತೆ ಗಂಡನ ಆಗಮನವನ್ನು ಕಾಯುತ್ತಿದ್ದ ಜರೀನಾಳಿಗೆ ಕಳುಹಿಸಿದ್ದು ತಲಾಖ್ ಪತ್ರ. ಜರೀನಾಳಂತಹ ಹೆಣ್ಣಿನ ಪ್ರೀತಿ, ಭಾವನೆಗಳಿಗೆ ಬೆಲೆ ಸಿಗದೇ ಹೋಗುವುದು ಇಲ್ಲಿಯ ದುರಂತವಾಗಿದೆ.

ಸಾರಾ ಅಬೂಬಕ್ಕರ್‌ರವರ 'ಸಂಸಾರ' (ಪಯಣ ಮತ್ತು ಇತರ ಕಥೆಗಳು, ೧೯೯೨) ವೆಂಬ ವ್ಯವಸ್ಥೆಯೊಳಗೆ ನೆಮ್ಮದಿ ಕಾಣಲಾರದೆ ಪರಿತಪಿಸುವ 'ಉರಿಬಿಸಿಲು' ಕಥೆಯ ಆಮೀನಾ ಅಸ್ತಿತ್ವ ಕಳೆದುಕೊಂಡವಳು. ತನಗಿಷ್ಟವಿಲ್ಲದಿದ್ದರೂ ಗಂಡನಿಗಾಗಿ ಮಕ್ಕಳನ್ನು ಹೆರುವ ಯಂತ್ರವಾಗಿ ಬಳಕೆಯಾಗುತ್ತಿರುವ ಆಕೆ ದೌರ್ಜನ್ಯವನ್ನು

ಪ್ರತಿಭಟಿಸಬೇಕು ಎಂಬ ಮನಸಿದ್ದರೂ ಅಸಹಾಯಕಳಾಗಿ ಬದುಕಿನ ಉರಿಬಿಸಿಲಲ್ಲಿ ಕಮರಿ ಹೋಗುತ್ತಾಳೆ. 'ಈ ನಾಲ್ಕಕ್ಷರ ಕಲಿತ ಹುಡುಗಿಯನ್ನು ಮದುವೆಯಾಗಿ ನನ್ನ ಮಗ ಹಾಳಾದ' (ಪಯಣ ಮತ್ತು ಇತರ ಕತೆಗಳು. ಪು. ೭೬, ೧೯೯೨)ಎಂಬ ಆಮೀನಾಳ ಅತ್ತೆಯ ಮಾತಿನಲ್ಲಿ, ಅಕ್ಷರ ಸಂಸ್ಕೃತಿಗೆ ದಾಖಲಾದ ಹೆಣ್ಣು ಪ್ರತಿಭಟನೆಯ ಮುನ್ನುಡಿಯನ್ನು ಹೇಗೆ ಪಡೆಯುತ್ತಾಳೆ ಎನ್ನುವುದು ಗಮನಕ್ಕೆ ಬರುತ್ತದೆ.

ಸಾರಾ ಅಬೂಬಕ್ಕರ್‌ರವರ 'ಬೇಟೆ' (ಗಗನಸಖಿ, ೨೦೦೭) ಕಥೆಯು 'ವಿವಾಹ'ದಂತಹ ಮಹತ್ತರ ಸಂದರ್ಭದಲ್ಲಿ ತನ್ನ ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳಲಾಗದೆ ಒದ್ದಾಡುವ ಹೆಣ್ಣಿನ ಬದುಕಿನ ದುರಂತದ ಚಿತ್ರಣವಿದೆ. ಆಕೆಗೆ ಇಷ್ಟವಿಲ್ಲದ ಬಲಾತ್ಕಾರದ ಮದುವೆ ಯಾರೋ ಮಾಡಿದ ತಪ್ಪಿಗೆ ತಾನು ಬಲಿಪಶುವಾಗಬೇಕಾದ ಸಂದಿಗ್ಧ ಪರಿಸ್ಥಿತಿಯನ್ನು ತಂದೊಡ್ಡುತ್ತದೆ. ಆದಷ್ಟು ಬೇಗ ಮಕ್ಕಳ ಮದುವೆ ಮಾಡಿ ಕೈತೊಳೆದುಕೊಳ್ಳುವ ಅವಸರದಲ್ಲಿರುವ ಹೆತ್ತವರಿಗೆ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಈ ಕಥೆ ಮೂಡಿಬಂದಿದೆ.

ಗಂಗಾ ಪಾದೇಕಲ್‌ರವರ 'ಒಂದು ಪ್ರಕರಣದ ಕೊನೆ' (ಪುಲಪೇಡಿ ಮತ್ತು ಇತರ ಕಥೆಗಳು, ೧೯೮೭) ಕಥೆಯಲ್ಲಿ ಬಡವಳಾದರೂ ಪ್ರತಿಭಾವಂತಳಾದ ಕಮಲಾಳಂತಹ ಹೆಣ್ಣು ಮಕ್ಕಳನ್ನು ಸಮಾಜ ನಡೆಸಿಕೊಳ್ಳುವ ರೀತಿಯು ಕ್ರೌರ್ಯದ ಒಂದು ಮುಖವಾಗಿ ಗೋಚರಿಸುತ್ತದೆ. ಎಷ್ಟೋ ಬಾರಿ ತನ್ನ ಮನಸ್ಸು ಕೆಟ್ಟ ಕೆಲಸಕ್ಕೆ ಒಪ್ಪದಿದ್ದರೂ ಬಡತನ ಎಂಬ ಶಾಪ ಅದನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ.

ಹಾಸ್ಟೆಲ್ ವಾರ್ಡನ್‌ನೊಬ್ಬರ ನೀತಿಗೆಟ್ಟ ನಡತೆ ಕಮಲಾಳಿಗೆ ಸಹಿಸುವುದಕ್ಕೆ ಸಾಧ್ಯವಾಗದೇ, ಅದನ್ನು ವಿರೋಧಿಸಲು ಹೋಗಿ ವಾರ್ಡನ್‌ಳ ಕೋಪಕ್ಕೆ ಗುರಿಯಾಗಬೇಕಾಗುತ್ತದೆ. ಇದರಿಂದ ಕಮಲಾ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಮಾಜದ ಎಷ್ಟೋ ಹೆಣ್ಣುಮಕ್ಕಳು ಅನ್ಯಾಯವನ್ನು ಎದುರಿಸುವ ಶಕ್ತಿಯಿಲ್ಲದೆ ಸಾವಿಗೆ ಶರಣಾಗಬೇಕಾಗುತ್ತದೆ.

ಗಂಗಾ ಪಾದೇಕಲ್‌ರವರ 'ಬದುಕಿನ ಬೇರನ್ನರಸಿ' (ಹೊಸ ಹೆಜ್ಜೆ, ೧೯೯೬) ಕಥೆಯು ಸಣ್ಣ ವಯಸ್ಸಿನಲ್ಲೇ ತಂದೆ – ತಾಯಿಯರನ್ನು ಕಳೆದುಕೊಂಡು, ತನ್ನ ಒಡಹುಟ್ಟಿದವರಿಗಾಗಿ ಸಂಸಾರದ ಹೊಣೆ ಹೊತ್ತ ಶಶಿಯ ಬದುಕಿನ ಹುಡುಕಾಟದ ಕಥೆಯಾಗಿದೆ. ತಾನು ಮದುವೆಯಾಗದೇ ಉಳಿದು ತನ್ನ ತಮ್ಮ ತಂಗಿಯರ ಮದುವೆ ಮಾಡಿಸಿದ ಶಶಿ, ತಾಯಿಯನ್ನು ಕಳೆದುಕೊಂಡ ತಮ್ಮ ಮಗ ಮಧುವನ್ನು ತನ್ನ ಮಗನಂತೆ ಸಾಕುತ್ತಾಳೆ. ಆದರೆ ದೊಡ್ಡವನಾದ ಮೇಲೆ ಆತನನ್ನು ತಂದೆ ಕರೆದುಕೊಂಡು ಹೋಗುತ್ತಾನೆ.

ಎಲ್ಲರಿದ್ದೂ ಒಂಟಿಯಾದ ಶಶಿ ಕೊನೆಗೆ ವರ್ಷದಾಟಿದರೂ ತನಗೆ ಇಷ್ಟವಾದವನನ್ನು ಮದುವೆಯಾಗಿ, ತನ್ನ ಬದುಕಿನ ಬೇರನ್ನರಸಿ ಹೊಸ್ತಿಳಿಗೆ ಹೋಗುತ್ತಾಳೆ. ಹೆಣ್ಣಿನ ಬದುಕಿನ ಕಷ್ಟ ಕಾರ್ಪಣ್ಯಗಳು, ಇವುಗಳಿಂದ ಹೊರಬಂದು ಆಕೆ ಬದುಕಿನ ಅರ್ಥವನ್ನು ಕಂಡುಕೊಳ್ಳುವ ಪರಿ ಈ ಕಥೆಯಲ್ಲಿ ಚಿತ್ರಿತವಾಗಿದೆ.

ಗಂಗಾ ಪಾದೇಕಲ್‌ರವರ 'ರಮೆಯ ಮದುವೆ' (ವಾಸ್ತವ, ೧೯೯೬)ಕಥೆಯಲ್ಲಿ ಹೆಣ್ಣಿನಿಂದಲೇ ಹೆಣ್ಣಿಗಾಗುವ ಅನ್ಯಾಯದ ಚಿತ್ರಣವಿದೆ. ಶ್ರೀಧರ ರಮೆಯನ್ನು ನೋಡಿ ಒಪ್ಪಿಕೊಂಡು ಹೋದರೂ ಮುಂದೆ ರಮೆ ಶ್ರೀಧರನ ಮೇಸ್ತ್ರೀ ಶಂಕರನನ್ನು ಮದುವೆಯಾಗಬೇಕಾಗಿ ಬರುತ್ತದೆ. ಉಪನ್ಯಾಸಕನಾಗಿದ್ದ ಶ್ರೀಧರನನ್ನು ರಮೆಯ ಚಿಕ್ಕಪ್ಪನ ಮಗಳು ರಂಜನಿಗೆ ಮದುವೆ ಮಾಡಿಸುವ ಹುನ್ನಾರ ನಡೆಯುತ್ತದೆ. ಇದನ್ನು ತಿಳಿದ ರಮೆ ಯಾರಿಗೂ ಹೇಳದೆ ಮನೆಬಿಟ್ಟು ಹೋಗುತ್ತಾಳೆ.

ವ್ಯವಸ್ಥೆಯನ್ನು ಒಪ್ಪಿ ಮದುವೆಯಾಗುವ ನಿರ್ಧಾರ ಮಾಡದ ರಮೆ ಸಾವಿಗೆ ಶರಣಾದರೂ ಮನೆಬಿಟ್ಟು ಹೋಗುವುದು ಅವಳ ಪ್ರತಿಭಟನೆಯೇ ಎನ್ನಬಹುದು.

'ಧ್ವನಿಯಿಲ್ಲದ ನೋವುಗಳು' ಕತೆಯ ಜರೀನಾ ಕೊಲ್ಲಿ ರಾಷ್ಟ್ರದಿಂದ ಬರುವ ಗಂಡನಿಗಾಗಿ ಕಾಯುತ್ತಾ ಕುಳಿತಿದ್ದರೂ ಅವಳಿಗೆ ಸಿಗುವುದು ಆತನ ತಲಾಖ್ ಪತ್ರ ಮಾತ್ರ. ಇಲ್ಲಿ ಗಂಡನ ವಿರುದ್ಧ ಅಥವಾ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲಾರದೆ ಜರೀನಾ ಚಡಪಡಿಸುತ್ತಾಳೆ. ತನಗಿಷ್ಟವಿಲ್ಲದಿದ್ದರೂ ಗಂಡನಿಗಾಗಿ ಮಕ್ಕಳನ್ನು ಹೆರುವ 'ಉರಿಬಿಸಿಲು' ಕತೆಯ ಅಮೀನಾಳ ಸ್ಥಿತಿ ಇನ್ನೊಂದು ತೆರನಾದದ್ದು. ಪ್ರತಿಭಟಿಸಬೇಕೆನ್ನುವ ಮನಸ್ಸಿದ್ದರೂ ಅದು ಈಡೇರುವುದಕ್ಕೆ ಸಾಧ್ಯವಾಗದೇ ಹೋಗುತ್ತದೆ. 'ಬೇಟೆ' ಕತೆಯಲ್ಲಿ ಬಲಾತ್ಕಾರದ ಮದುವೆಯೂ ಹೆಣ್ಣಿನ ಪಾಲಿಗೆ ಇತ್ತು ಎಂಬ ದುರಂತ ಸ್ಥಿತಿಯನ್ನು ಹೇಳುತ್ತದೆ. ಇಲ್ಲೆಲ್ಲಾ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲಾಗದೆ ವ್ಯವಸ್ಥೆಗೆ ಬಲಿಪಶುಗಳಾಗಬೇಕಾದ ಹೆಣ್ಣುಮಕ್ಕಳ ಚಿತ್ರಣವಿದೆ.

ಹಾಸ್ಟೇಲ್ ವಾರ್ಡನ್‌ನೊಬ್ಬನ ನೀತಿಗೆಟ್ಟ ನಡತೆಗೆ ಬಲಿಯಾದ 'ಒಂದು ಪ್ರಕರಣದ ಕೊನೆ' ಕತೆಯ ಕಮಲ ಆತ್ಮಹತ್ಯೆಯಲ್ಲಿಯೇ ಪರಿಹಾರವನ್ನು ಕಂಡುಕೊಳ್ಳುತ್ತಾಳೆ. 'ಬದುಕಿನ ಬೇರನ್ನರಸಿ' ಕತೆಯ ಶಶಿ ಇಡೀ ಸಂಸಾರದ ಹೊಣೆ ಹೊತ್ತು ತನ್ನ ತಮ್ಮ ಹಾಗೂ ತಂಗಿಯಂದಿರಿಗೆ ಮದುವೆ ಮಾಡಿಸಿ ಅವರ ಬದುಕಿಗೆ ದಾರಿದೀಪವಾಗುತ್ತಾಳೆ. ಗಂಗಾ ಪಾದೇಕಲ್‌ರವರ ಈ ಕತೆ ಹೆಣ್ಣಿನ ಮನೋಸ್ಥೈರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಮಿತ್ರಾ ವೆಂಕಟ್ರಾಜ್‌ರವರ 'ನಾಗಮ್ಮನ ಮನೆಯ ಸಣ್ಣಗೇಟು' (ಹಕ್ಕಿ ಮತ್ತು ಅವಳು, ೧೯೯೭) ಕಥೆಯಲ್ಲಿ ಗ್ರಾಮೀಣ ಪರಿಸರದ ಹೆಣ್ಣುಮಕ್ಕಳ ಬದುಕಿನ ಅನುಭವಗಳ ಕೊಡು – ಕೊಳ್ಳುವಿಕೆಯ ಚಿತ್ರಣವಿದೆ. ತಾವುಂಡ ನೋವು - ನಲಿವುಗಳನ್ನು ಯಾವುದೇ ಮುಖವಾಡವಿಲ್ಲದೆ ಧೈರ್ಯ ಹಾಗೂ ಪ್ರಾಮಾಣಿಕತೆಯಿಂದ ಹಂಚಿಕೊಳ್ಳುವ

ಪರಿ ವಿಶಿಷ್ಟವಾಗಿದೆ. ಪುರುಷ ಪ್ರಧಾನ ಸಮಾಜದ ವಿರುದ್ಧದ ಪ್ರತಿಭಟನೆಯನ್ನು ಈ ಕಥೆ ಎತ್ತಿಕೊಟ್ಟರೂ ಕೊನೆಗೆ ಹೊಂದಾಣಿಕೆಯಲ್ಲಿಯೇ ಮುಕ್ತಾಯ ಕಾಣುತ್ತದೆ. ಈ ಕಥೆಯ ಪುರಾಣಮ್ಮ ಹೇಳುವ 'ಅದು ಸಮ ನಾಗಮ್ಮ. ಈಗಿನವ್ರು ರೀತಿ ಎಂತ ಅಂತ ಹೇಳುದ? ತನ್ನ ಎತ್ತಿಗೆ ಮೂರೇ ಕಾಲು ಅಂತ ತಮ್ಮದೇ ಹಠ. ತಾಳ್ಮೆ ಬೇಕು ಮನುಷ್ಯನಿಗೆ, ಅದರಲ್ಲೂ ಹೆಣ್ಣಿಗೆ. ಸೀತಾಮಾತೆಯ ತಾಳ್ಮೆ ಕಾಣಿ'(ಹಕ್ಕಿ ಮತ್ತು ಅವಳು, ಪು.೨೨, ೧೯೯೭) ಎಂಬ ಮಾತು ಸಮಾಜದ ಒಪ್ಪಿತ ಮಾದರಿಗಳ ತರವಾದ ಮಾತೇ ಆಗಿದೆ. 'ಬಸ್ರಿಯಂತಿಲ್ಲ, ಬಾಣಂತಿಯಂತಲ್ಲ, ಬೆಳಗಾತಿನಿಂದ ಸಾಯಂಕಾಲದವರೆಗೆ ಏಗಿದ್ದಕ್ಕೆ ಇಂಥ ಮಾತು ತಾನು ಕೇಳಬೇಕಾಗಿತ್ತು' (ಅದೇ.. ಪು. ೭೮,) ಎಂದು ಹೇಳುವ ನಾಗಮ್ಮನ ಮಾತುಗಳಲ್ಲಿ ಏನೂ ಮಾಡಲಾಗದ ಅಸಹಾಯಕತೆ ಎದ್ದು ಕಾಣುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ಅಟ್ಟ ಮುಟ್ಟ ತನ್ನ ದೇವಿ...' (ಹಕ್ಕಿ ಮತ್ತು ಅವಳು, ೧೯೯೭)ಕಥೆಯಲ್ಲಿ ಕನಸು ಹೊತ್ತ ಗಿರಿಜೆಯ ಬದುಕಿನ ದುರಂತವಿದೆ. ಅತ್ತೆಯ ಮಗ ಅನಂತ ತನ್ನನ್ನು ಮದುವೆಯಾಗುತ್ತಾನೆ ಎಂಬ ಆಶಾಭಾವದಿಂದ ಆತನ ಎಲ್ಲ ಕೆಲಸಗಳನ್ನು ಮಾಡಿಕೊಡುತ್ತಿದ್ದ ಗಿರಿಜಾಗೆ ಕೊನೆಗೆ ದೊರಕಿದ್ದು ದುಃಖ ಮಾತ್ರ. ಎಲ್ಲ ಹೆಣ್ಣು ಮಕ್ಕಳಿಗಿಂತ ಚಂದವಾಗಿ ಹೂವು ಕಟ್ಟುತ್ತಿದ್ದ ಗಿರಿಜೆಗೆ ತನ್ನ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

ಅನಂತನ ಮದುವೆಯ ವಿಚಾರ ಆಕೆಯಲ್ಲಿ ನೋವನ್ನುಂಟುಮಾಡುತ್ತದೆ. ಅವನ ಮದುವೆಯ ದಿನ ಆಕೆಯ ಅಲಂಕಾರವನ್ನು ಕಂಡು ತಂಗಿಯಂದಿರು ಹೇಳುತ್ತಿದ್ದ ಮಾತುಗಳೆಲ್ಲವೂ ಆಕೆಗೆ ದೂರದಿಂದ ಕೇಳಿಸುವಂತಿದ್ದವು. ಆದರೆ ವಿಪರೀತ ಜ್ವರದಿಂದಾಗಿ ಮದುವೆಗೆ ಹೋಗದ ಗಿರಿಜೆ ಆ ದಿನದಿಂದ ಮಾನಸಿಕ ರೋಗಿಯಾಗಿ ಮೂಲೆ ಸೇರಿದಳು. ಎಲ್ಲರ ಕೆಲಸ ಕಾರ್ಯಗಳಲ್ಲಿ ಬಾಡಿಗೆ ಎತ್ತಿನಂತೆ ದುಡಿದ ಗಿರಿಜೆ ಕೊನೆಗೆ ಮನೆಯವರ ಪಾಲಿಗೆ 'ಪೀಡೆ' ಎಂದು ಕರೆಸಿಕೊಳ್ಳುತ್ತಾಳೆ. ಹೆಣ್ಣಿನ ಭಾವನೆಗಳಿಗೆ ಬೆಲೆ ಕೊಡದ ಹೃದಯಹೀನ ವ್ಯವಸ್ಥೆಯಲ್ಲಿ ಗಿರಿಜೆಯು ನಲುಗಿ ಹೋಗುತ್ತಾಳೆ.

ಗಂಗಾ ಪಾದೇಕಲ್‌ರವರ 'ನೆನೆಸದೇ ಇದ್ದದ್ದು' (ಹೊಸ ಹೆಜ್ಜೆ, ೧೯೯೬) ಕಥೆಯ ಸರಳ ತನಗೆ ಬೇಕಾದ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗದೇ ಒದ್ದಾಡುತ್ತಾಳೆ. ನೋಡಲು ಕಪ್ಪಗಿರುವ ಆಕೆ ಯಾವಾಗಲೂ ತಂದೆಯ ಕಟಕಿ ಮಾತುಗಳಿಗೆ ಗುರಿಯಾಗಿ ಮನಸ್ಸಿಗೆ ನೋವಾದರೂ, ಹೊಸ ಹೊಸ ಕನಸುಗಳ ಮೂಲಕ ತನ್ನದೇ ಲೋಕದಲ್ಲಿ ಮುಳುಗುತ್ತಾಳೆ. ಹೆಣ್ಣಿನ ಸ್ವತಂತ್ರ ನಿರ್ಧಾರಗಳಿಗೆ ಬೆಲೆ ಕೊಡದ ಸಮಾಜದ ಕುರಿತಾದ ಅಸಹನೆ ಇಲ್ಲಿ ವ್ಯಕ್ತವಾಗಿದೆ. ಆದರೆ ಮಾಲತಿಯನ್ನು ಯಾರೋ ಅಪಹರಿಸಿಕೊಂಡು ಹೋದ ಸುದ್ದಿಯನ್ನು ಕೇಳಿ ಶ್ರೀಧರನ ಮೋಹಕ್ಕೆ ಒಳಗಾಗಿ ಮದುವೆಯಾಗಲು ಸಾಧ್ಯವಾಗದೇ ಚಡಪಡಿಸುತ್ತಿದ್ದ ಸರಳಾಗೆ ಸ್ವಲ್ಪ

ಸಮಾಧಾನವಾಗುತ್ತದೆ. ಪಾಲಿಗೆ ಬಂದದ್ದನ್ನು ಒಪ್ಪಿಕೊಂಡು ಬದುಕುವ ಹೆಣ್ಣು ತನ್ನ ಸ್ವತಂತ್ರ ನಿರ್ಧಾರಗಳಿಗೆ ಅವಕಾಶ ಸಿಗದಾಗ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸುತ್ತಾಳೆ.

ಗಂಗಾ ಪಾದೇಕಲ್‌ರವರ 'ಕೋಶದೊಳಗೊಂದು ಬದುಕು' (ಈ ಪ್ರಜಾ ರಾಜ್ಯದೊಳಗೆ, ೨೦೦೬) ಕಥೆಯ ಮಂಗಳ ಪಾರ್ಶ್ವವಾಯು ಪೀಡಿತನಾದ ಗಂಡನ ಸೇವೆ ಮಾಡುತ್ತಾ ಜೀವ ಸವೆಸುತ್ತಾಳೆ. ಸಂಶಯ ಪಿಶಾಚಿಯಾದ ತನ್ನ ಗಂಡನ ಮಾತುಗಳನ್ನು ಕೇಳುತ್ತಿರುವಾಗೆಲ್ಲ ತಾನು ಯಾಕಾಗಿಯಾದರೂ ಬದುಕದ್ದೇನೆ ಎಂದು ಆಕೆಗೆ ಅನಿಸುತ್ತದೆ. ತನ್ನ ಸಹಾಯಕ್ಕಾಗಿ ಬಂದ ೧೪ ವರ್ಷದ ಕಿಟ್ಟುವಿನೊಂದಿಗೆ ಸಂಬಂಧವನ್ನು ಕಲ್ಪಿಸಿ ಗಂಡ ಹಿಂಸೆಯನ್ನು ನೀಡುತ್ತಿದ್ದ.

ತನ್ನ ದೈಹಿಕ ಸುಪ್ತ ಆಸೆಗಳನ್ನೆಲ್ಲಾ ಗುಪ್ತವಾಗಿ ಸಹಿಸಿಕೊಳ್ಳುತ್ತಾ ಮನಸ್ಸಿನಲ್ಲೇ ಗಂಡನ ಬಗ್ಗೆ ಅಸಮಧಾನವಿದ್ದರೂ ಹೊರಗೆ ವ್ಯಕ್ತಪಡಿಸಲಾರದೆ ಚಡಪಡಿಸುತ್ತಿದ್ದ ಆಕೆ ಸಮಾಜದ ವ್ಯವಸ್ಥೆಯನ್ನು ಪ್ರತಿಭಟಿಸುವ ಮನೋಭಾವವಿದ್ದರೂ ಸಹಿಸಿಕೊಂಡು ಹೋಗುತ್ತಿದ್ದಳು. 'ಹೆಣ್ಣಿನ ಬದುಕು ಇಷ್ಟೇನಾ!' ಎಂದು ಮನಸ್ಸಿನಲ್ಲಿಯೇ ಕೇಳಿಕೊಳ್ಳುತ್ತಿದ್ದಳಾದರೂ ಪರಿಸ್ಥಿತಿಯನ್ನು ಒಪ್ಪಿ ಬದುಕುತ್ತಾಳೆ.

'ನಾಗಮ್ಮನ ಮನೆಯ ಸಣ್ಣಗೇಟು' ಕತೆಯ ಪುರಾಣಮ್ಮನ ಪಾತ್ರ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುವುದಕ್ಕಾಗದೇ ಅಸಹಾಯಕ ಸ್ಥಿತಿಯಲ್ಲಿ ನಿಂತುಬಿಡುತ್ತದೆ. 'ಅಟ್ಟ ಮುಟ್ಟ ತನ್ನ ದೇವಿ....' ಕತೆಯ ಗಿರಿಜಾಳು ಹೊತ್ತ ಆಶೆಯ ಸೌಧ ಮೌನದಲ್ಲಿ ಬಿದ್ದುಹೋಗುತ್ತದೆ. ಇಲ್ಲೆಲ್ಲೂ ಹೆಣ್ಣಿಗೆ ತನ್ನತನವನ್ನುಕಂಡುಕೊಳ್ಳಲಾಗದೇ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕಾಗದೇ ಒದ್ದಾಡುತ್ತದೆ. ತನ್ನ ದೈಹಿಕ ಸುಪ್ತ ಆಸೆಗಳನ್ನೆಲ್ಲಾ ಗುಪ್ತವಾಗಿ ಸಹಿಸಿಕೊಂಡು ರೋಗಿಷ್ಟ ಗಂಡನ ಸೇವೆ ಮಾಡುವುದರಲ್ಲೇ ಹೆಣಗುವ 'ಕೋಶದೊಳಗೊಂದು ಬದುಕು' ಕತೆಯ ಮಂಗಳಾ ಎಲ್ಲೂ ಅಸಮಾಧಾನವನ್ನು ತೋರ್ಪಡಿಸದೆ ಬದುಕನ್ನು ಒಪ್ಪಿಕೊಂಡು ಬಿಡುತ್ತಾಳೆ.

ವೈದೇಹಿಯವರ 'ಕಾಣೆಯಾದವರು' (ಅಲೆಗಳಲ್ಲಿ ಅಂತರಂಗ, ೨೦೦೬) ಕಥೆಯಲ್ಲಿ ಗಂಡನ ಬಗೆಗೆ ಕುಸುಮಾಳಿಗಿರುವ ಅತೃಪ್ತಿ ಭಾವನೆಯೇ ಅವಳನ್ನು ಉನ್ಮಾದದ ಕಡೆಗೆ ಕೊಂಡೊಯ್ಯುತ್ತದೆ. ಜೊತೆಗಿದ್ದ ಗಂಡನನ್ನು ತನ್ನ ಗಂಡನೆಂದು ಒಪ್ಪಿಕೊಳ್ಳದ ಕುಸುಮ ಅವನನ್ನು ಪರಪುರುಷನೆಂದು ಭ್ರಮಿಸಿಕೊಳ್ಳುತ್ತಾಳೆ. ಕಾಣೆಯಾದ ಪತಿ ಮನೆಗೆ ಬಂದಾಗ ಅವಳು ಲತಾಳಿಗೆ ಹೇಳುವ, 'ನಾನು ಕೇಳಲೇ ಇಲ್ಲ. ಮತ್ತೆ ಅಷ್ಟಕ್ಕೆ ಸಿಟ್ಟು ಬಂದು ಎದ್ದು ಹೊರಟರೂ ಹೊರಟರೇ' (ಅಲೆಗಳಲ್ಲಿ ಅಂತರಂಗ, ಪು. ೫೬೨, ೨೦೦೬) ಎಂಬ ಮಾತಿನಲ್ಲಿ ಅಸಮಾಧಾನದ ಛಾಯೆಯಿದೆ.

ವೈದೇಹಿಯವರ 'ಕ್ರೌಂಚ ಪಕ್ಷಿಗಳು' (ಅಲೆಗಳಲ್ಲಿ ಅಂತರಂಗ, ೨೦೦೬)ಕಥೆಯು ದೇಶದ ತುರ್ತು ಪರಿಸ್ಥಿತಿಯ ಕರಾಳ ಮುಖವನ್ನು ಅನಾವರಣಗೊಳಿಸುತ್ತದೆ. ಗಂಡ - ಹೆಂಡಿರ ಅಗಲುವಿಕೆ ಈ ಕಥೆಯ ಪ್ರಧಾನ ಅಂಶ. ಅಶ್ವರ್ಣ ಭಟ್ಟ ಹಾಗೂ ಲಕ್ಷ್ಮಮ್ಮನ ಅಗಲುವಿಕೆ ಕ್ರೌಂಚ ಪಕ್ಷಿಗಳ ಅಗಲುವಿಕೆಯಷ್ಟೇ ಸಹಜವಾದದ್ದು. ಪುರಾಣದೊಂದಿಗೆ ತಳುಕು ಹಾಕಿಕೊಂಡ ಈ ಕ್ರೌಂಚ ಪಕ್ಷಿಗಳ ಘಟನೆ ಮನುಷ್ಯ ಜೀವನದಲ್ಲಿಯೂ ಸಾಮಾನ್ಯ ಎನ್ನುವಷ್ಟರ ಮಟ್ಟಿಗೆ ವ್ಯಕ್ತವಾಗಿದೆ.

ನಿತ್ಯ ಕಾಡುವ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಅಡುಗೆ ವೃತ್ತಿಯ ಅಶ್ವರ್ಣ ಭಟ್ಟರು, ಕೊನೆಗೂ ಆತ್ಮಹತ್ಯೆಗೆ ಶರಣಾಗುತ್ತಾರೆ. ದೇಶ ವಿಭಜನೆಯ ಸಂದರ್ಭದಲ್ಲಿ ಗಲಭೆಕೋರರಿಂದ ಕದ್ದೊಯ್ಯಲ್ಪಟ್ಟ ಮಡದಿ ಲಕ್ಷ್ಮಮ್ಮನನ್ನು ಗುರುತಿಸಿಯೂ ಮರಳಿ ಸ್ವೀಕರಿಸದ ಅಪರಾಧಿತನ ಈ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ.

'ಎಲ್ಲೋ ಇದ್ದ ಹೆಂಡತಿಯನ್ನು ಮತ್ತೆ ಕರೆದುಕೊಳ್ಳುವುದು, ಅಲ್ಲ, ಕಷ್ಟವೇ. ಭಟ್ಟರ ಅವಸ್ಥೆ ಬಾಯಲ್ಲಿ ಹೇಳಿದಷ್ಟು ಸರಳವಲ್ಲ' (ಅಲೆಗಳಲ್ಲಿ ಅಂತರಂಗ, ಪು. ೬೬೯, ೨೦೦೬) ಎಂಬ ಹೇಳಿಕೆ ಹಾಗೂ 'ಅದೇನು, ಆಯುಷ್ಯವೆಲ್ಲ ಎಲ್ಲೆಲ್ಲೊ ಬಳಿದು ಖಾಯಿಲೆ ಹತ್ತಿಸಿಕೊಂಡು ಬರುವ ಯಜಮಾನರ ಜೊತೆ ಸಂಸಾರ ಮಾಡುವ ಹೆಂಗಸರು ಎಷ್ಟು ಬೇಕು!' (ಅದೇ. . . ಪು. ೬೬೯) ಎಂಬ ಹೇಳಿಕೆಗಳ ಮುಖಾಮುಖಿ ಇಲ್ಲಿದೆ.

'ಕಾಣೆಯಾದವರು' ಕತೆಯ ಕುಸುಮಾ ಗಂಡನ ಜೊತೆ ಬದುಕುವುದಕ್ಕೆ ಇಷ್ಟವಿಲ್ಲದಿದ್ದರೂ ಮೌನವಾಗಿ ದಿನದೂಡುತ್ತಾಳೆ. ಕಾಣೆಯಾದ ಪತಿ ಎಷ್ಟೋ ದಿನಗಳ ನಂತರ ಮನೆಗೆ ಬಂದರೂ ಆತನನ್ನು ಪ್ರಶ್ನಿಸುವ ಧೈರ್ಯ ಆಕೆಗಿಲ್ಲ. ಇಲ್ಲಿಯ ಕುಸುಮಾಳ ಸ್ಥಿತಿ ಸಮಾಜದ ಎಷ್ಟೋ ಹೆಣ್ಣು ಮಕ್ಕಳ ಸ್ಥಿತಿಯೂ ಹೌದು ಎನ್ನುವುದನ್ನು ಒಪ್ಪಬೇಕಾಗುತ್ತದೆ. 'ಕ್ರೌಂಚ ಪಕ್ಷಿಗಳು' ಕತೆಯ ಲಕ್ಷ್ಮಮ್ಮನ ಸ್ಥಿತಿ ಇದಕ್ಕಿಂತ ಹೊರತಾಗಿಲ್ಲ. ಇಲ್ಲಿಯ ವೈರುದ್ಯವನ್ನು ಗಮನಿಸಿದರೆ ಕುಸುಮಾ ಎಷ್ಟೋ ದಿನಗಳ ನಂತರ ಮನೆಗೆ ಬಂದ ಗಂಡನನ್ನು ಸ್ವೀಕರಿಸಿದರೆ, ಲಕ್ಷ್ಮಮ್ಮ ಎಷ್ಟೋ ದಿನಗಳ ನಂತರ ಮನೆಗೆ ಬಂದದ್ದರಿಂದ ಗಂಡನಿಂದ ತಿರಸ್ಕೃತಳಾಗುತ್ತಾಳೆ. ಅಂದರೆ ಎಲ್ಲಾ ಸಂದರ್ಭಗಳಲ್ಲಿಯೂ ಕೂಡಾ ಶಿಕ್ಷೆ ಅನುಭವಿಸುವವಳು ಹಾಗೂ ನೋವು ಉಣ್ಣುವವಳು ಹೆಣ್ಣೇ ಆಗಿರುತ್ತಾಳೆ ಎನ್ನುವುದು ಸ್ಪಷ್ಟವಾಗುತ್ತದೆ.

೮.೩. ಒಂಟಿತನ

ಒಂಟಿಮಹಿಳೆಯರ ಚಿತ್ರಣ ಕರಾವಳಿ ಲೇಖಕಿಯರ ಕತೆಗಳಲ್ಲಿ ಕಾಣಿಸಿಕೋಳ್ಳುವ ಸಾಮಾನ್ಯ ಅಂಶ ಒಂಟಿ ಮಹಿಳೆ ಎಂದಾಗ ಆಕೆಗೆ ಗಂಡನನ್ನು ಕಳೆದುಕೊಂಡು ಒಂಟಿ ಎನಿಸಿಕೊಂಡವಳಿರಬಹುದು. ಈ ಒಂಟಿ ಮಹಿಳೆಯರು ಹೆಚ್ಚಾಗಿ ಕಾಣಿಸಿಕೋಳ್ಳುವುದು ಗಂಗಾ ಪಾದೇಕಲ್‌ರರವರ ಕತೆಗಳಲ್ಲಿ ಹೆಣ್ಣಿನ ಬದುಕಿನ ವಿವಿಧ ಅವಸ್ಥಾಂತರಗಳಲ್ಲಿ ಆಕೆ ಅನುಭವಿಸುವ ನೋವು ದು:ಖ ಚಡಪಡಿಕೆಗಳು ವಿಶಿಷ್ಟ ರೀತಿಯಲ್ಲಿ ಕಥೆಗಳಲ್ಲಿ

ಕಾಣಿಸಿಕೊಳ್ಳುತ್ತವೆ. ಆದರೆ ಈ ಒಂಟಿ ಮಹಿಳೆಯರ ಚಿತ್ರಣ ಹೆಚ್ಚಾಗಿ ಕಾಣಿಸುವುದು ಗಂಗಾ ಪಾದೇಕಲ್‌ರವರ ಕಥೆಗಳಲ್ಲಿ ಪ್ರೇಮಾಭಟ್ ರವರಕಥೆಗಳಲ್ಲೂ ಸ್ವಲ್ಪ ಮಟ್ಟಿಗೆ ಒಂಟಿ ಮಹಿಳೆಯರು ಕಾಣಿಸಿಕೊಳ್ಳುತ್ತಾರೆ.

ಪ್ರೇಮಾಭಟ್‌ರವರ 'ಕಳೆದುಹೋದವಳು' (ಕಥಾವರ್ಷ, ೨೦೦೭) ಕಥೆಯು ಹುಟ್ಟಿದ ಮಗಳೇ ತಾಯಿಯನ್ನು ಮರೆತುಬಿಟ್ಟ ಪ್ರಸಂಗವನ್ನು ಚಿತ್ರಿಸುತ್ತದೆ. ಗಂಡನನ್ನು ಕಳೆದುಕೊಂಡ ಮಾರಿಯಮ್ಮಳ ಒಬ್ಬಳೇ ಮಗಳು ಚೆಲುವಿ ಹೆಸರಿಗೆ ತಕ್ಕಂತೆ ಇದ್ದಳು. ಬಹಳ ಕಷ್ಟದಿಂದ ಆಕೆಯನ್ನು ಓದಿಸಿದರೂ ಸಿನಿಮಾದಲ್ಲಿ ನಟಿಸುವುದಕ್ಕೆ ಅವಕಾಶ ಸಿಕ್ಕಿ ಮನೆಯಿಂದ ಹೋದವಳು ತಿರುಗಿ ಬರುವುದೇ ಇಲ್ಲ. ಒಂಟಿಯಾಗಿ ಬದುಕು ಕಳೆಯಲು ಆಗದ ಮಾರಿಯಮ್ಮ ನಿರ್ಗತಿಕ ಬಾಲಕ ಶಿವನನ್ನು ತಂದು ಸಾಕುತ್ತಾಳೆ. ನಾಯಿಮರಿ ಬೇಕು ಎನ್ನುವ ನೆಪವೊಡ್ಡಿ ಈಕೆಯ ಬಳಿ ಇದ್ದ ದುಡ್ಡನ್ನೆಲ್ಲಾ ಅಪಹರಿಸಿ ಮನೆಬಿಟ್ಟು ಹೋಗುತ್ತಾನೆ.

ಇತ್ತ ಸ್ವಂತ ಮಗಳೂ ತನ್ನನ್ನು ಮರೆತುಬಿಡುತ್ತಾಳೆ, ಅತ್ತ ಸಾಕಿದ ಮಗನೂ ಮೋಸ ಮಾಡುತ್ತಾನೆ. ಜವಾಬ್ದಾರಿಯುತ ಮಕ್ಕಳನ್ನು ನಿರ್ಮಾಣ ಮಾಡುವಲ್ಲಿ ಸಮಾಜ ಸೋಲುತ್ತಿದೆ ಎಂಬ ಸತ್ಯವನ್ನು ಈ ಕಥೆ ನಿರೂಪಿಸುತ್ತದೆ.

'ಅಮ್ಮನಿಲ್ಲದ ತೌರು' (ಕಥಾವರ್ಷ, ೨೦೦೭) ಕಥೆಯಲ್ಲಿ ಕಳೆದುಕೊಂಡ ತಾಯಿಯನ್ನು ನೆನಪು ಮಾಡಿಕೊಳ್ಳುವ ಹೆಣ್ಣಿನ ಚಿತ್ರಣವಿದೆ. ತಾಯಿಯ ನಿಜವಾದ ವ್ಯಕ್ತಿತ್ವದ ಅರಿವಾಗುವುದು ಆಕೆ ಸತ್ತ ಮೇಲೆಯೇ ಎಂಬ ಸತ್ಯವನ್ನು ಈ ಕಥೆ ಬಿಚ್ಚಿಡುತ್ತದೆ. ಗಂಡನ ಪ್ರೀತಿಯ ಹೆಂಡತಿಯಾಗಿ ಅತ್ತೆ ಮನೆಯಲ್ಲಿ ಕಾಲಕಳೆಯುವ ಭಾವನಾಳಿಗೆ ತೌರಿನ ನೆನಪು ಕಾಡುತ್ತದೆ. ಬಾಣಂತನಕ್ಕಾಗಿ ತವರಿಗೆ ಬಂದಾಗ ತಮ್ಮನ ಹೆಂಡತಿ ತನ್ನೊಡನೆ ನಡೆದುಕೊಂಡ ರೀತಿಯನ್ನೆಲ್ಲಾ ನೆನಪು ಮಾಡಿಕೊಳ್ಳುತ್ತಾ ಭಾವನಾ, ಯಾವ ಹೆಣ್ಣಿಗಾದರೂ ತಾಯಿಯಿಲ್ಲದ ತವರು ಶೂನ್ಯ ಎನ್ನುತ್ತಾಳೆ. ಈ ಶೂನ್ಯತೆಯಲ್ಲಿಯೇ ಬದುಕಿನ ಸುಖವನ್ನು ಕಾಣಲಾರದೆ ಒದ್ದಾಡುತ್ತಾಳೆ.

ಪ್ರೇಮಾ ಭಟ್‌ರವರ 'ಕಳೆದು ಹೋದವಳು' ಕತೆಯ ಮಾರಿಯಮ್ಮನಿಗೆ ಒಂದೆಡೆ ಗಂಡ ತೀರಿ ಹೋದನೆಂಬ ದುಃಖವಾದರೆ ಇನ್ನೊಂದೆಡೆ ಬೆಳೆದ ಮಗಳು ಸಿನಿಮಾದಲ್ಲಿ ನಟಿಸುವ ನೆಪವೊಡ್ಡಿ ಮನೆಬಿಟ್ಟು ಹೋದಳು ಎಂಬ ನೋವು ಕಾಡುತ್ತದೆ. ಇದರಿಂದ ಮಾರಿಯಮ್ಮ ಒಂಟಿ ಹೆಣ್ಣಾಗಿ ಉಳಿಯಬೇಕಾಗುತ್ತದೆ. ವಿಧಿಯ ಕೈವಾಡ ಒಂದೆಡೆಯಾದರೆ ಆಧುನಿಕ ಜಗತ್ತಿಗೆ ತುಡಿಯುವ ಯುವ ಮನಸ್ಸು ಹೆಣ್ಣೊಬ್ಬಳನ್ನು ಅನಾಥೆಯನ್ನಾಗಿಸುತ್ತದೆ. 'ಅಮ್ಮನ್ನಿಲ್ಲದ ತೌರು' ಕತೆಯ ಭಾವನಾ ಸತ್ತ ತಾಯಿಗಾಗಿ ಹಂಬಲಿಸುತ್ತಾಳೆ. ಆ ಮೂಲಕ ಬದುಕೇ ಶೂನ್ಯ ಎನ್ನುವ

ತೀರ್ಮಾನಕ್ಕೆ ಬರುತ್ತಾಳೆ. ಹೆಣ್ಣಾದವಳಿಗೆ ಒಂದೋ ತಾಯಿಮನೆಯ ಪ್ರೀತಿ ಇಲ್ಲವೇ ಗಂಡನ ಮನೆಯ ಪ್ರೀತಿ ಅಗತ್ಯವಾಗಿ ಇದೆ. ಇಲ್ಲಿ ಇವೆರಡೂ ಸಿಗದೇ ಭಾವನಾ ಒಂಟಿ ಮಹಿಳೆಯಾಗಿ ಉಳಿಯಬೇಕಾಗುತ್ತದೆ.

ಗಂಗಾ ಪಾದೇಕಲ್‌ರವರ 'ಕಲ್ಲರಳಿ ಹೂವಾಗಿ'(ವಾಸ್ತವ, ೧೯೯೬) ಕತೆಯ ಹೆಣ್ಣು ಗಂಡನನ್ನು ಕಳೆದುಕೊಂಡು, ಗಂಡನ ಮನೆಯವರ ಎಳ್ಳಷ್ಟೂ ಪ್ರೀತಿ ಸಿಗದೇ ಒಂಟಿಯಾಗಿ ಪರಿತಪಿಸುತ್ತಾಳೆ. ತನ್ನ ಅತ್ತೆ ಸತ್ತಾಗ ಮಗನೊಂದಿಗೆ ಅಲ್ಲಿಗೆ ಹೋದರೂ ಯಾರೂ ಅವಳನ್ನು ಮಾತಾನಾಡಿಸುವುದಿಲ್ಲ. ಪ್ರಾಯಶಃ 'ಅನಿಷ್ಟಕ್ಕೆಲ್ಲಾ ಶನಿರಾಯನೇ ಹೊಣೆ' ಎನ್ನುವಂತೆ ಗಂಡ ಸಾಯುವುದಕ್ಕೆ ಹೆಂಡತಿಯೇ ಕಾರಣ ಎಂದು ಯೋಚಿಸುವ ಸಾಂಪ್ರದಾಯಿಕ ಸಮಾಜದ ಮನಸ್ಥಿತಿ ಇಲ್ಲಿ ಗೋಚರಿಸುತ್ತದೆ.

'ಪರಿಹಾರ' (ಹೊಸ ಹೆಜ್ಜೆ, ೧೯೯೭) ಕತೆಯಲ್ಲಿನ ಮಧುರ ಮದುವೆಯಾಗಿ ಹತ್ತು ವರುಷಗಳಾದರೂ ಮಕ್ಕಳಾಗದ್ದರಿಂದ ಆ ಚಿಂತೆಯಿಂದ ಪಾರಾಗಲು ಸಭೆ-ಸಮಾರಂಭಗಳಿಗೆ ಹೋಗುವುದನ್ನು ರೂಢಿಸಿಕೊಳ್ಳುತ್ತಾಳೆ. ಒಮ್ಮೆ ಕಲ್ಯಾಣ ಮಂಟಪದಲ್ಲಿ ಇಬ್ಬರು ಹೆಂಗಸರು ಇವಳ ಬಗೆಗೆ ನುಡಿದ ವ್ಯಂಗ್ಯ ಮಾತು, 'ತಾನು ಹುಟ್ಟಿರುವುದೇ ತಪ್ಪು' ಎಂದು ಯೋಚಿಸುವಂತೆ ಮಾಡುತ್ತದೆ. 'ಅಲ್ಲ, ಇಂತಹ ಸಮಾರಂಭಕ್ಕೆಲ್ಲಾ ಬರಲು ಮನಸ್ಸಾದರೂ ಹೇಗಾಗುತ್ತದೋ? ಆಕೆಗೆ ಲಗ್ನವಾಗಿ ಹತ್ತು ವರ್ಷಗಳೇ ದಾಟಿದುವಂತೆ' (ಪು. ೫೨) ಎಂಬ ಮಾತು ತಾಯ್ತನವನ್ನು ಉತ್ಪ್ರೇಕ್ಷಿಸುವಂತಹ ಸವಾಲಿಗೆ ಮೌನ ಪ್ರತಿಕ್ರಿಯೆಯಾಗಿದೆ. ಈ ಮೌನ ಪ್ರತಿಕ್ರಿಯೆಯೇ ಪ್ರತಿಭಟನೆಯ ನೆಲೆಯಾಗಿ ಗೋಚರಿಸುತ್ತದೆ.

ಗಂಡನಿರುವಾಗ, ಆತನ ಮನೆಯವರ ಪ್ರೀತಿ ಸಿಗದೆ ಒದ್ದಾಡುವ ಹೆಣ್ಣು ಗಂಡನನ್ನು ಕಳೆದುಕೊಂಡ ಮೇಲೆ ಗಂಡನ ಮನೆಯವರ ಪಾಲಿಗೆ ಕಾಲ ಕಸವಾಗುತ್ತಾಳೆ. ತನ್ನದಲ್ಲದ ತಪ್ಪಿಗೆ ತಾನು ಶಿಕ್ಷೆ ಅನುಭವಿಸಬೇಕಾಗುತ್ತದೆ. ಗಂಗಾ ಪಾದೇಕಲ್‌ರವರ 'ಕಲ್ಲರಳಿ ಹೂವಾಗಿ' ಕತೆಯು ಇದನ್ನು ಸ್ಪಷ್ಟ ಪಡಿಸುತ್ತದೆ. ವಿಧವೆ, ಬಂಜೆ ಹೆಣ್ಣು ಮಕ್ಕಳ ಸ್ಥಿತಿ ಒಂದು ಕಾಲಕ್ಕೆ ತೀರಾ ಒದ್ದಾಟದ ಬದುಕಾಗಿತ್ತು. ಬಂಜೆ ಹೆಣ್ಣು ಮಗಳನ್ನು ಸಂಶಯದಿಂದಲೇ ನೋಡುತ್ತಿದ್ದ ಸಮಾಜ ಅವಳ ಆಸೆ ಆಕಾಂಕ್ಷೆಗಳಿಗೆ ಕಡಿವಾಣ ಹಾಕುತ್ತಿತ್ತು. ಸಭೆ-ಸಮಾರಂಭಗಳು ಆಕೆಗೆ ಸಂತೋಷ್ ಬಾಗಿಲು ತೆರೆಯುತ್ತಿರಲಿಲ್ಲ. 'ಪರಿಹಾರ' ಕತೆಯ ಮಧುರಾಳ ಬದುಕು ಇದೇ ಸ್ಥಿತಿಯದ್ದಾಗಿತ್ತು. ಇಲ್ಲೆಲ್ಲಾ ಒಂಟಿತನದಿಂದ ಕೊರಗುತ್ತಿದ್ದ ಹೆಣ್ಣು ಮಕ್ಕಳು ವ್ಯವಸ್ಥೆಯನ್ನು ಒಪ್ಪಿಕೊಂಡೇ ಬದುಕಿದವರಾಗಿ ಕಾಣುತ್ತಾರೆ.

'ರಮೇಯ ಮದುವೆ' (ವಾಸ್ತವ, ೧೯೯೬) ಕತೆಯ ರಮೇ ತಾನು ಬಯಸಿದ್ದ ಹುಡುಗನನ್ನು ಮದುವೆಯಾಗುವುದಕ್ಕೆ ಸಾಧ್ಯವಾಗದೇ ಹೋದಾಗ ಮನೆ ಬಿಟ್ಟು ಹೋಗುತ್ತಾಳೆ. ವ್ಯವಸ್ಥೆಯನ್ನು ಒಪ್ಪಿ ಮದುವೆಯಾಗುವ ನಿರ್ಧಾರ ಮಾಡದ ರಮೇ ಸಾವಿಗೆ ಶರಣಾದರೂ, ಮನೆ ಬಿಟ್ಟು ಹೋಗುವುದು ಅವಳ ಪ್ರತಿಭಟನೆಯೇ ಆಗಿದೆ.

'ಒಂದು ದಿನ' (ಪುಲಪೇಡಿ ಮತ್ತು ಇತರ ಕತೆಗಳು, ೧೯೮೭) ಕತೆಯಲ್ಲಿ ಮನೆಯವರಿಂದ ತನ್ನ ಪ್ರತಿಭೆಗೆ ಸರಿಯಾದ ಪ್ರೋತ್ಸಾಹ, ಸಹಕಾರ ಸಿಗದೇ ನಿರಾಶಳಾಗಿ ಬದುಕುವ ಹೆಣ್ಣಿನ ಚಿತ್ರಣವಿದೆ. ತನ್ನ ಬದುಕೇ ನಿರರ್ಥಕ ಎಂದು ಭಾವಿಸುವ ಸುಮಾ ಕೊನೆಗೊಂದು ದಿನ ಪತಿಯ ಮೆಚ್ಚುಗೆಯ ಮಾತುಗಳಿಗೆ ಒಳಗಾಗಿ 'ಸ್ವರ್ಗಕ್ಕೆ ಮೂರೇ ಗೇಣು' ಎಂಬಂತ್ತಾಗುತ್ತಾಳೆ.

'ಸ್ಫೋಟ' (ಹೊಸ ಹೆಜ್ಜೆ, ೧೯೯೬) ಕತೆಯ ಲಚ್ಚಿ ತೀರಾ ಬಡತನವಿದ್ದಾಗ ಕಷ್ಟಪಟ್ಟು ದುಡಿದು ತನ್ನ ಮಗಳ ಬಾಣಂತನಕ್ಕಾಗಿ ತಾನು ಕೂಡಿಟ್ಟ ಹಣವನ್ನು ಕುಡುಕ ಗಂಡನಾದ ಶುಕ್ರ ಅಪಹರಿಸುತ್ತಾನೆ. ಗಂಡನಿಗೆ ಒದೆ ಕೊಟ್ಟು ಮನೆಯಿಂದ ಓಡಿಸಿದ ಲಚ್ಚಿ ಒಬ್ಬ ಧೈರ್ಯವಂತೆ ಹೆಣ್ಣಾಗಿ ಕಂಡರೂ ಅದರ ಕುರಿತಾದ ನೋವು ಆಕೆಯನ್ನು ಆಗಾಗ ಕಾಡುತ್ತದೆ.

'ಚಕ್ರ' (ಹೊಸ ಹೆಜ್ಜೆ, ೧೯೯೬) ಕತೆಯ ವಸುಧಾ ತನ್ನನ್ನು ಮದುವೆಯಾಗಿ ನ್ಯಾಯ ಒದಗಿಸದ ಪತಿ ಶ್ರೀಧರನನ್ನು ತಿರಸ್ಕರಿಸುತ್ತಾಳೆ. ಎಷ್ಟೋ ವರ್ಷಗಳ ನಂತರ ಆತ ಬಂದು ತನ್ನ ತಪ್ಪನ್ನು ಒಪ್ಪಿಕೊಂಡು ಪ್ರಣಯ ಭಿಕ್ಷೆ ಕೇಳಿದಾಗಲೂ ವಸುಧಾ ಮನಸ್ಸನ್ನು ಬದಲಾಯಿಸದೇ ಸ್ಥಿತ ಪ್ರಜ್ಞಳಾಗಿ ಉಳಿಯುತ್ತಾಳೆ. ತನ್ನ ಬದುಕಿನ ನಿರ್ಣಯಗಳನ್ನು ತಾನೇ ತೆಗೆದುಕೊಂಡ ವಸುಧಾ ನಿಜವಾದ ಅರ್ಥದಲ್ಲಿ ಪ್ರಜ್ಞಾವಂತ ಹೆಣ್ಣಾಗಿ ಕಾಣಿಸುತ್ತಾಳೆ.

'ಕೊನೆಯ ಅಧ್ಯಾಯ' (ಈ ಪ್ರಜಾರಾಜ್ಯದೊಳಗೆ, ೨೦೦೬) ಕತೆಯ ಶಾರದಮ್ಮ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿದವಳು. ಮಗ - ಸೊಸೆಯ ಹಂಗಿನಲ್ಲಿ ಎಲ್ಲರಿಗೂ ಹೊರೆಯಾಗಿ, ಸೊಸೆಯ ಕಟಕಿ ಮಾತುಗಳನ್ನು ಸಹಿಸಿಕೊಳ್ಳುತ್ತಾ ಕಾಲ ನೂಕುವ ಶಾರದಮ್ಮ ತನ್ನ ಮಗಳ ಮನೆಯಲ್ಲಿಯೂ ನೆಮ್ಮದಿಯನ್ನು ಕಾಣುವುದಿಲ್ಲ. ಮಗಳ ಅತ್ತೆ ವ್ಯಂಗ್ಯದ ಮಾತುಗಳಿಂದ ಈಕೆಯನ್ನು ಜರಿಯುತ್ತಾಳೆ. ಗಂಡನನ್ನು ಕಳೆದುಕೊಂಡ ಈಕೆ ಕೊನೆಗೆ ಅನಾಥಶ್ರಮಕ್ಕೆ ಸೇರುವುದೆಂದು ನಿರ್ಧರಿಸುತ್ತಾಳೆ.

ಗಂಗಾಪಾದೇಕಲ್‌ರವರ 'ಯಾತ್ರೆ' (ನೆಲೆತಪ್ಪಿದ ಹಕ್ಕಿ, ೨೦೦೩) ಕಥೆಯು ಗಂಡನನ್ನು ಕಳೆದುಕೊಂಡು ಮೂವರು ಮಕ್ಕಳಿಗಾಗಿ ಪಡಬಾರದ ಕಷ್ಟವನ್ನೆಲ್ಲಾ ಪಟ್ಟ ಶಾರದಮ್ಮರ ದುರಂತ ಬದುಕಿನ ಚಿತ್ರಣವನ್ನು ನೀಡುತ್ತದೆ. ಅಪ್ಪ ಸತ್ತ ನಂತರ ಸಹೋದರಿಯ ಮದುವೆಗಾಗಿ ಮನೆ ಮಾರಿ ತಮ್ಮ ತಮ್ಮ ಹೆಂಡತಿ – ಮಕ್ಕಳೊಂದಿಗೆ ಸುಖವಾಗಿ ಬದುಕಿದ್ದ ಮಕ್ಕಳು ಕೊನೆಗೆ ತಾಯಿ ಶಾರದಮ್ಮನನ್ನು ಬೀದಿಗೆ ತಳ್ಳುತ್ತಾರೆ. ಸತ್ತ ಗಂಡನ ಅಸ್ಥಿಯನ್ನು ಪವಿತ್ರ ಜಾಗಕ್ಕೆ ಹಾಕಿ ಸತ್ತ ಗಂಡನಿಗೆ ಸದ್ಗತಿ ದೊರಕಬೇಕೆಂದು ಹಾರೈಸುತ್ತಿದ್ದ ಶಾರದಮ್ಮನಿಗೆ ಅದಕ್ಕೆ ಅವಕಾಶವೇ ಸಿಗಲಿಲ್ಲ.

ಗಂಡು ಮಕ್ಕಳಿಂದ ಹಿರಿಯರಿಗೆ ಸದ್ಗತಿ ಎಂದು ಶಾರದಮ್ಮ ನಂಬಿದ್ದರು. ಆದರೆ ತನ್ನ ಮಕ್ಕಳು ತಂದೆಗೆ ಸದ್ಗತಿ ದೊರಕಿಸಿಕೊಡಲಿಲ್ಲ ಮಾತ್ರವಲ್ಲ ತನ್ನ ಸಾವಿಗೂ ಕಾರಣರಾಗುತ್ತಾರೆ. ಮಕ್ಕಳಿದ್ದೂ ಇಲ್ಲದ ಪರಿಸ್ಥಿತಿ ಶಾರದಮ್ಮನದು.

'ಅಪ್ಪರವರೆಗೆ' (ಈ ಪ್ರಜಾರಾಜ್ಯದೊಳಗೆ, ೨೦೦೬) ಕಥೆ ತಾಯಿಯೊಬ್ಬಳ ಮನಸ್ಸಿನ ಬೇಗುದಿಯನ್ನು ತೆರೆದಿಡುವ ಕಥೆಯಾಗಿದೆ. ಮಗನಿಗೆ ಮೈಸೂರಿಗೆ ವರ್ಗವಾಯಿತು ಎಂಬ ಸುದ್ದಿ ಕೇಳಿ ಮೈಸೂರಿಗೆ ಹೋಗಲು ಅವಕಾಶ ಸಿಕ್ಕಿತಲ್ಲ ಎಂದು ಕಮಲಮ್ಮ ಬೇಸರದ ನಡುವೆಯೂ ಸಂತೋಷಪಡುತ್ತಾರೆ. ಅದಕ್ಕಾಗಿ ತನ್ನ ಸ್ವಂತ ಮನೆಯನ್ನೂ ಬಿಟ್ಟು ಹೋಗುವುದಕ್ಕೆ ಅವರು ಸಿದ್ಧರಿದ್ದರು. ಆದರೆ ಮಗ ತನ್ನ ಹೆಂಡತಿಯನ್ನು ಮಾತ್ರ ಕರೆದುಕೊಂಡು ಹೋಗುವುದಾಗಿ ಹೇಳಿದಾಗ ಕಮಲಮ್ಮನಿಗೆ ಹೇಳಿಕೊಳ್ಳಲಾರದ ದುಃಖವಾಗುತ್ತದೆ. ಮಗ ಶೇಖರ ಹೇಳುವ 'ಲಲಿತೆಯನ್ನು ಬಿಟ್ಟು ಹೋಗುವುದೆಂತಲೇ ಇದ್ದೆ. ಆದರೆ ಮೈಸೂರು ನೋಡಲು ತುದಿಗಾಲಲ್ಲಿ ನಿಂತಿದ್ದಾಳೆ. ಇನ್ನೂ ಚಿಕ್ಕ ವಯಸ್ಸು, ಆಸೆ ಪಡುವುದು ಸಹಜವೇ. ಅದೂ ಅಲ್ಲದೆ ಈಗಲ್ಲದೆ ಇನ್ನಾವಾಗ ನೋಡುತ್ತಾಳೆ'? (ಈ ಪ್ರಜಾರಾಜ್ಯದೊಳಗೆ, ಪು. ೪೦, ೨೦೦೬) ಎನ್ನುವ ಮಾತಿನ ಕೊನೆಯ ಸಾಲು ಕಮಲಮ್ಮನ ಕಿವಿಗಳಲ್ಲಿ ಮಾರ್ದನಿಗೊಳ್ಳುತ್ತವೆ.

ತಾಯಿಯನ್ನು ಅರ್ಥಮಾಡಿಕೊಳ್ಳಲಾರದ ಮೂರ್ಖ ಮಗನೊಬ್ಬನ ಚಿತ್ರಣ ಈ ಕಥೆಯಲ್ಲಿ ಅನಾವರಣಗೊಂಡಿದೆ.

'ರಮೆಯ ಮದುವೆ' ಕತೆಯ ರಮೆಯು ತೆಗೆದುಕೊಳ್ಳುವ ನಿರ್ಧಾರ ಪ್ರತಿಭಟನೆಯ ಸ್ವರೂಪವನ್ನು ತಾಳುತ್ತದೆ. 'ಒಂದು ದಿನ' ಕತೆಯ ಸುಮಾ ಕುಟುಂಬದವರನ್ನು ಮೆಚ್ಚಿಸುವ ಮೂಲಕವೇ ತನ್ನ ಒಂಟಿತನದ ನೋವಿನಿಂದ ಹೊರಗೆ ಬರುವ ಪ್ರಯತ್ನ ಮಾಡುತ್ತಾಳೆ. ಅಂದರೆ ಒಂದು ಕಾಲಕ್ಕೆ ಈ ಮೆಚ್ಚಿಸುವಿಕೆಯೂ ಹೆಣ್ಣಿನ ಪಾಲಿಗೆ ಅನಿವಾರ್ಯವಾಗಿತ್ತು. ಅದನ್ನು ಬಿಟ್ಟರೆ ಆಕೆಗ ಉಳಿಗಾಲವಿರಲಿಲ್ಲ. ಗಂಡ ತಪ್ಪು ಮಾಡಿದಾಗ

ಕ್ಷಮಾಗುಣವನ್ನು ಮರೆಯುತ್ತಿದ್ದ ಹೆಣ್ಣು, ಆ ತಪ್ಪನ್ನು ಆಕೆ ಮಾಡಿದಾಗ ಯಾರಿಂದಲೂ ಅದನ್ನು ನಿರೀಕ್ಷಿಸುವಂತಿರಲಿಲ್ಲ. ಅಂದರೆ ಎಷ್ಟೋ ಬಾರಿ ಆಕೆಯ ಒಳ್ಳೆಯ ತನವೇ ಆಕೆಗೆ ಮುಳುವಾದದ್ದೂ ಇದೆ. 'ಸ್ಫೋಟ' ಕತೆ ಇದಕ್ಕೆ ಉದಾಹರಣೆಯಾಗಿದೆ. 'ಚಕ್ರ' ಕತೆಯ ವಸುಧಾ ಹಾಗೂ 'ಕೊನೆಯ ಅಧ್ಯಾಯ' ಕತೆಯ ಶಾರದಮ್ಮ ಮಾತ್ರ ಹೊಸ ಚಿಂತನೆಯ ಪಾತ್ರಗಳಾಗಿ ಮೂಡಿ ಬರುತ್ತಾರೆ. ಅವರು ಒಂಟಿ ಮಹಿಳೆಯರಾಗಿದ್ದರೂ ಪ್ರಜ್ಞಾವಂತ ಮಹಿಳೆಯರಾಗಿ ಗುರುತಿಸಿಕೊಳ್ಳುತ್ತಾರೆ.

೮.೪. ತಾಯ್ತನ

ತಾಯ್ತನ ಎನ್ನುವುದು ಹೆಣ್ಣಿನ ಬದುಕಿನ ಅವಿಭಾಜ್ಯ ಅಂಗ. ತಾಯ್ತನವನ್ನು ಅನುಭವಿಸುವುದಕ್ಕೆ ಪುರುಷ ಪ್ರಧಾನ ಮೌಲ್ಯಗಳು ಅವಕಾಶ ನೀಡದಿರುವುದು. ಕರಾವಳಿ ಲೇಖಕಿಯರ ಕತೆಗಳಲ್ಲಿ ವ್ಯಕ್ತವಾಗುತ್ತದೆ. ಮೊದಲ ಪತ್ನಿಗೆ ಮಕ್ಕಳಿದ್ದಾಗ ಎರಡನೆಯವಳಿಗೆ ತಾಯ್ತನದ ಅವಕಾಶ ತಪ್ಪಿಹೋಗಬಹುದು. ತಾಯ್ತನದಿಂದಾಗಿ ಪತ್ನಿ ತನ್ನನ್ನು ನಿರ್ಲಕ್ಷಿಸುತ್ತಾಳೆ. ಎಂಬ ಪತಿಯಭಾವನೆ ಇರಬಹುದು. ಹೆಣ್ಣು ಕೇವಲ ಭೋಗ ವಸ್ತುವಾಗಿಯೇ ಉಳಿಯಬೇಕು ಎಂಬ ಪುರುಷನ ಆಲೋಚನೆಯಿರಬಹುದು. ಇವೆಲ್ಲವೂ ಹೆಣ್ಣನ್ನು ತಾಯ್ತನದ ಅವಕಾಶದಿಂದ ವಂಚಿತಗೊಳಿಸಿವೆ.

ಪ್ರೇಮಾಭಟ್‌ರವರ 'ಅನುಭವಕ್ಕೊಂದು ಕೊಂಡಿ' (ಕಥಾವರ್ಷ, ೨೦೦೭) ಕಥೆಯಲ್ಲಿ ತನ್ನ ತಾಯಿಯೇ ಕಥಾ ನಿರೂಪಕರಿಗೆ ಪ್ರೇರಣೆ ಎಂಬ ಚಿತ್ರಣವಿದೆ. ಎಲ್ಲಾ ಕಷ್ಟಗಳನ್ನು ಹೊತ್ತ ತಾಯಿ ಮಕ್ಕಳನ್ನು ಕರೆದುಕೊಂಡು ಗಂಡನ ಜೊತೆ ಬದುಕಲು ಬೆಂಗಳೂರಿಗೆ ಹೋಗುತ್ತಾಳೆ. ಸದಾ ಸಿಡುಕುವ ಗಂಡನೊಂದಿಗೆ ಮಕ್ಕಳ ವಿದ್ಯಾಭ್ಯಾಸದ ಹೊಣೆ ಹೊತ್ತ ತಾಯಿ ಎಂದೂ ಮಕ್ಕಳೊಡನೆ ಅಪ್ಪನನ್ನು ಬೈದು ಮಾತನಾಡುತ್ತಿರಲಿಲ್ಲ. ಗಂಡ ಸತ್ತ ಮೇಲೆ ತನ್ನೂರಿಗೆ ಮರಳಿ ಮತ್ತೆ ಬದುಕು ಮುಂದುವರಿಸಿದ ತಾಯಿಯ ಕಷ್ಟ ಕಾರ್ಪಣ್ಯಗಳೆಲ್ಲವೂ ಮಕ್ಕಳಿಗೆ ಅರ್ಥವಾದದ್ದು ತಾಯಿ ತೀರಿಕೊಂಡ ಮೇಲೆಯೇ.

ಕಥೆಯ ಕೊನೆಯಲ್ಲಿ ನಿರೂಪಕರು ಹೇಳುವ, 'ಮುಂದೆ ಇವೆಲ್ಲ ನಾನು ಕಥೆಗಾರನಾಗಲು ಪ್ರೇರಕ ಶಕ್ತಿಯಾಗುತ್ತವೆಂದು ನಾನಾಗ ಅಂದು ಕೊಂಡಿರಲಿಲ್ಲ, ನನ್ನ ಅನುಭವಕ್ಕೊಂದು ಕೊಂಡಿಯಾಗಿ ನಿಂತು ಅಮ್ಮ ಈ ಕಥೆ ಬರೆಸಿರಬಹುದೇ' (ಕಥಾವರ್ಷ, ಪು. ೯೩, ೨೦೦೭) ಎಂಬ ಮಾತು, ಬರವಣಿಗೆಗೆ ಪ್ರೇರಣೆಯಾದದ್ದು ನೋವೇ ಹೊರತು ನಲಿವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

'ಮಹಾಪಾತ್ರ' (ಕಥಾವರ್ಷ, ೨೦೦೭) ಕಥೆಯಲ್ಲಿ ಪುರಾಣ ಹಾಗೂ ವರ್ತಮಾನಗಳ ನಡುವೆ ಹೆಣ್ಣಿನ ಪಾತ್ರವೊಂದರ ಬೆಸೆಯುವಿಕೆಯ ಚಿತ್ರಣವಿದೆ. ಐವರು ಮಕ್ಕಳನ್ನು ಪಡೆದ ಕುಂತಿಗೆ ತಾನು ಮೊದಲ ಬಾರಿಗೆ ಪಡೆದ ಕರ್ಣನ ನೆನಪಾಗುತ್ತದೆ. ತಾಯಿಯ ಜವಾಬ್ದಾರಿಯನ್ನು ತಾನು ಸಂಪೂರ್ಣ ನಿಭಾಯಿಸಿಲ್ಲ ಎಂಬ ಅಪರಾಧಿ ಭಾವ ಕಾಡುತ್ತದೆ.

ಈ ಕಥೆಯಲ್ಲಿ ಕುಂತಿ ಕೇವಲ ಪುರಾಣದ ಒಂದು ಪಾತ್ರವಾಗಿ ಕಾಣದೆ ವರ್ತಮಾನದ ಹೆಣ್ಣುಗಳ ನಡುವೆ ಸೇರಿ ಹೋಗುತ್ತಾಳೆ.

'ಗೊಂಬೆ' (ಕಥಾವರ್ಷ, ೨೦೦೭) ಕಥೆಯು ನಿರ್ಜೀವ ಗೊಂಬೆಯೊಂದರ ಆಸೆಯಿಂದ ಸಜೀವ ಗೊಂಬೆಯನ್ನು ಕಳೆದುಕೊಂಡ ತಾಯಿಯೊಬ್ಬಳ ದುರಂತ ಸ್ಥಿತಿಯನ್ನು ಹೇಳುತ್ತದೆ. ಬೇರೆ ಹೆಣ್ಣು ಮಕ್ಕಳ ಮನ ನೋಯಿಸುವುದರಲ್ಲೇ ಖುಷಿ ಕಾಣುತ್ತಿದ್ದ ಸರಸ್ವತಿ ಹೊಟ್ಟೆಕಿಚ್ಚಿನ ಗೂಡಾಗಿದ್ದಳು. ಬೇರೆಯವರ ಮನೆಯಲ್ಲಿ ನೋಡಿದ್ದ ಗೊಂಬೆಯನ್ನು ತನ್ನ ಮನೆಗೂ ತರುವುದಕ್ಕಾಗಿ ಮಗ ಮುಕುಂದನೊಂದಿಗೆ ಹೋಗಿದ್ದಳು ಸರಸ್ವತಿ. ಮಳೆಯಲ್ಲಿ ನೆನೆದು ಜ್ವರ ಹಿಡಿಸಿಕೊಂಡ ಮುಕುಂದ ಇಹಲೋಕ ತ್ಯಜಿಸುತ್ತಾನೆ. ಜೀವಂತ ಗೊಂಬೆಯಾಗಿದ್ದ ಮುಕುಂದನನ್ನು ಕಳೆದುಕೊಂಡ ಸರಸ್ವತಿ ನಿರ್ಜೀವ ಗೊಂಬೆಯೊಂದಿಗೆ ಬದುಕುವಂತಾಯ್ತು. ಈ ಗೊಂಬೆಯೆ, ಅವಳಿಗೆ ಬದುಕಿನ ಅರ್ಥವನ್ನು ತಿಳಿಸುತ್ತದೆ.

ಪ್ರೇಮಾಭಟ್‌ರವರ 'ಅನುಭವಕ್ಕೊಂದು ಕೊಂಡಿ' ಕತೆಯ ತಾಯಿ ತನ್ನ ಪತಿಯನ್ನು ಕಳೆದುಕೊಂಡರೂ ಮಕ್ಕಳನ್ನು ಜತನದಿಂದ ಕಾಪಾಡುತ್ತಾಳೆ. ಅದರಲ್ಲೇ ತನ್ನ ತಾಯ್ತನದ ಸಾರ್ಥಕ್ಯವನ್ನು ಕಾಣುತ್ತಾಳೆ. 'ಮಹಾಪಾತ್ರ' ಕತೆಯಲ್ಲಿ ಐವರು ಮಕ್ಕಳನ್ನು ಪಡೆದ ಕುಂತಿಗೆ ಮೊದಲ ಭರಿಗೆ ಕರ್ಣನ ನೆನಪಾಗುವುದು ನಿಜವಾದ ತಾಯ್ತನದ ಮೌಲ್ಯವಾಗಿ ಕಾಣುತ್ತದೆ. 'ಗೊಂಬೆ' ಕತೆಯ ತಾಯಿ ನಿರ್ಜೀವ ಗೊಂಬೆಯೊಂದರ ಆಸೆಯಿಂದ ಸಜೀವ ಗೊಂಬೆಯೊಂದನ್ನು ಕಳೆದುಕೊಂಡರೂ ಅಪ್ಪರಲೇ ಸಮಾಧಾನವನ್ನು ತಂದುಕೊಂಡು ಬದುಕುತ್ತಾಳೆ.

'ಕಾಣಿಕೆ' (ಕಥಾವರ್ಷ, ೨೦೦೭) ಕಥೆಯು 'ಹೆತ್ತ ತಾಯಿಗೆ ಹೆಗ್ಗಣ ಮುದ್ದು' ಎನ್ನುವ ಗಾದೆಯನ್ನು ನೆನಪಿಸುವ ಕಥೆಯಾಗಿದೆ. ಮಕ್ಕಳೆಲ್ಲಾ ತುಂಬಾ ದೊಡ್ಡವರಾದ ಮೇಲೆ ಗರ್ಭವತಿಯಾದ ಸರೋಜ ಆ ಮಗುವನ್ನು ಶಾರದಳಿಗೆ ಕೊಡುವುದೆಂದು ನಿರ್ಧಾರ ಮಾಡಿದರೂ ಕ್ರಮೇಣ ಅವಳಿಗೆ ಅದರ ಮೇಲೆ ಪ್ರೀತಿ ಹುಟ್ಟುತ್ತದೆ. ಸರೋಜಳ ಮಗಳು ಕಲ್ಪನಾ ಆ ಮಗುವನ್ನು ಯಾರಿಗೂ ಕೊಡುವುದಕ್ಕೆ ಬಿಡದೆ ತಾನೇ ಮನೆಗೊಯ್ಯುತ್ತಾಳೆ.

ಸರೋಜಳ ಗಂಡ ವೆಂಕಟೇಶ ಇದರಲ್ಲಿ ತನ್ನ ತಪ್ಪು ಏನೂ ಇಲ್ಲ ಎನ್ನುವಂತೆ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವವನಾಗಿ ಹೆಂಡತಿಯನ್ನಾಗಲಿ ಮಗುವನ್ನಾಗಲೀ ನೋಡಲು ಬರುವುದಿಲ್ಲ. ಸರೋಜ ಎಲ್ಲವೂ ತನ್ನದೇ ತಪ್ಪು ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

'ಕರುಳಿನ ಕರೆ' (ಕಥಾವರ್ಷ, ೨೦೦೭) ಕಥೆಯು ತಾಯಿಯ ವಿಶಾಲ ಮನಸ್ಸನ್ನು ತೆರೆದಿಡುವ ಕಥೆಯಾಗಿದೆ. ಇಡೀ ಸಂಸಾರವನ್ನು ಸರಿದೂಗಿಸಿಕೊಂಡು ಹೋಗುವ ತನ್ನ ತಾಯಿಯ ವ್ಯಕ್ತಿತ್ವವನ್ನು ಈ ಕಥೆಯ ನಳಿನಿ ತೆರೆದಿಡುತ್ತಾಳೆ. ಅವಳು ಆರಂಭದಲ್ಲೇ ಹೇಳುವ ಹಾಗೆ 'ಅಮ್ಮ ಅರ್ಥಕ್ಕೆ ಸಿಗದ ಅದ್ಭುತ ಪದ' (ಕಥಾವರ್ಷ, ಪು. ೫೨, ೨೦೦೭) ಎನ್ನುವ ಮಾತು ಕೇವಲ ನಳಿನಿಯ ತಾಯಿಗಷ್ಟೇ ಸೀಮಿತವಾಗದೇ ಲೋಕದ ಅದೆಷ್ಟೋ ತಾಯಂದಿರಿಗೆ ಅನ್ವಯವಾಗುತ್ತದೆ.

ತನ್ನ ಗಂಡ, ಮಕ್ಕಳು, ಬಂಧುಗಳು, ಸಮಾಜ ಹೀಗೆ ಲೋಕಕ್ಕೆಲ್ಲಾ ಒಳಿತು ಹಾರೈಸುವ ಅಮ್ಮಾ ಯಾವತ್ತೂ ನಿಸ್ವಾರ್ಥಿ. ಈ ಲೋಕದಲ್ಲಿ ಬೆಲೆ ಕಟ್ಟಲಾರದ, ಬೆಲೆ ಕಾಟ್ಟಬಾರದ ಒಂದು ಮೌಲ್ಯವೆಂದರೆ ತುಂಬ ಎಂಬ ವಿಚಾರ ಈ ಕಥೆಯಲ್ಲಿ ನಿರೂಪಿತವಾಗುತ್ತದೆ. 'ಅಮ್ಮ ನಿನ್ನಂತೆ ನಾನು ಕೂಡ ವಾಣಿಯ ಒಡವೆಗಳನ್ನು ಅವಳಿಗೆ ಹಿಂದಿರುಗಿಸಿ ಋಣಮುಕ್ತಳಾಗಿದ್ದೇನೆ'. (ಅದೇ ಪು. ೫೫) ಎನ್ನುವ ಮಾತು ತಾಯಿಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಗಂಗಾ ಪಾದೇಕಲ್‌ರವರ 'ಒಂದೇ ನಾವೆಯ ಪಯಣಿಗರು' (ನೆಲೆ ತಪ್ಪಿದ ಹಕ್ಕಿ, ೨೦೦೩) ಕಥೆಯ ಸರಳ ತನಗೆ ಗಂಡನಿಂದ ಆದ ಅನ್ಯಾಯಕ್ಕೆ ಪ್ರತಿಕಾರವನ್ನು ಕಿರಣನಲ್ಲಿ ತೋರಿಸುವುದಕ್ಕೆ ಹೋಗುತ್ತಾನೆ. ಮೊದಲ ಹೆಂಡತಿಯನ್ನು ಕಳೆದುಕೊಂಡ ಶ್ರೀಧರನಿಗೆ ಒಬ್ಬ ಮಗನಿದ್ದು ಸರಳನನ್ನು ಎರಡನೇ ವಿವಾಹವಾಗುತ್ತಾನೆ. ತಾಯಿಯಾಗುವ ನಿರೀಕ್ಷೆ ಹೊತ್ತ ಸರಳಗೆ ಅದು ಸಾಧ್ಯವಿಲ್ಲ ಎಂದಾದಾಗ ಆ ಸಿಟ್ಟು ಕಿರಣನ ಮೇಲೆ ತಿರುಗತೊಡಗುತ್ತದೆ.

ಕಿರಣನನ್ನು ವಿಷ ನೀಡಿ ಕೊಲ್ಲಬೇಕೆಂದು ಹೊರಟ ಸರಳನಲ್ಲಿ ಮಾತೃ ಹೃದಯ ಎಚ್ಚರವಾಗುತ್ತದೆ. ಸ್ವಂತ ಮಗುವಿಲ್ಲದಿದ್ದರೆ ಏನಾಯ್ತು? ಕಿರಣ ಮಗನಲ್ಲವೇ? ಎಂದು ಭಾವಿಸುವ ಸರಳ ತನ್ನ ಯೋಚನೆಗಾಗಿ ತಾನೇ ಹಳಿದುಕೊಳ್ಳುತ್ತಾಳೆ.

ಗಂಗಾ ಪಾದೇಕಲ್‌ರವರ 'ಬೇವು ಬಿತ್ತಿ ಮಾವು ಬಯಸೆ' (ಮನ್ನಣೆಯ ದಾಹ, ೨೦೦೫) ಕಥೆಯು ಕ್ರೂರಿಗಳೂ ಬದಲಾಗುತ್ತಾರೆ ಎನ್ನುವುದನ್ನು ತಿಳಿಸಿಕೊಡುವ ಕಥೆಯಾಗಿದೆ. ಈ ಕಥೆಯಲ್ಲಿ ನಾಗಭಟ್ಟರು ಹಾಗೂ ಅವರ ಮಗ ಸದಾನಂದ ಪಕ್ಕದ ಜಮೀನುದಾರರನ್ನು ಹಾಗೂ ಅವರ ಮನೆಯವರನ್ನು ದ್ವೇಷಿಸುತ್ತಿದ್ದರು. ಇವರಿಗೆ

ಕಿರುಕುಳ ಕೊಡುತ್ತಿದ್ದ ಅವರ ಮಗ ಶ್ರೀಕಾಂತ ಸತ್ತು ಹೋದಾಗ ಇವರಿಬ್ಬರೂ ಹಾಲು ಕುಡಿಯುತ್ತಾರೆ. ಇದು ಭಟ್ಟರ ಪತ್ನಿ ಕಾವೇರಮ್ಮನಿಗೆ ತುಂಬಾ ನೋವುಂಟುಮಾಡುತ್ತದೆ.

ಹೆಣ್ಣಿನ ವಿವೇಕ ಹಾಗೂ ತಾಯ್ತನದ ಉದಾತ್ತೆಯನ್ನು ಸೂಕ್ಷ್ಮವಾಗಿ ತೆರೆದಿಡುವುದರ ಮೂಲಕ ಯಶಸ್ವಿ ಕಥೆಯೆನಿಸುತ್ತದೆ.

ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗು ಮಾತ್ರ ತನ್ನದು, ಬೇರೆ ತಾಯಿಯ ಮಗು ತನ್ನದಲ್ಲ ಎಂದು ಭಾವಿಸದ ಗಂಗಾ ಪಾದೇಕಲ್‌ರವರ 'ಒಂದೇ ನಾವೆಯ ಪಯಣಿಗರು' ಕತೆಯ ಸರಳ ಆದರ್ಶ ತಾಯ್ತನಕ್ಕೆ ಮಾದರಿಯಾಗಿದ್ದಾಳೆ. ಹಾಗೇಯೇ 'ಬೇವು ಬಿತ್ತಿ ಮಾವು ಬಯಸಿ' ಕತೆಯ ಕಾವೇರಮ್ಮ ಕೂಡಾ ತಾಯ್ತನದ ಉದಾತ್ತತೆಗೆ ಹೆಸರಾದವಳು.

ಕರಾವಳಿ ಲೇಖಕಿಯರ ಕತೆಗಳಲ್ಲಿ ಹೆಣ್ಣಿನ ವ್ಯಕ್ತಿತ್ವದ ಗಟ್ಟಿತನವನ್ನು ಎತ್ತಿ ಹಿಡಿಯುವ ಅನೇಕ ಕತೆಗಳಿವೆ. ಅಂದರೆ ಮತ್ತೆ ಮತ್ತೆ ಹೆಣ್ಣಿನ ತ್ಯಾಗ, ದುಡಿಮೆ, ಅವಳ ಶಕ್ತಿಯನ್ನು ಸಮಾಜದ ಮುಂದೆ ನಿರೂಪಿಸುವ ಪ್ರಯತ್ನ ಈ ಕತೆಗಳಲ್ಲಿದೆ. ಪ್ರೇಮಾಭಟ್‌ರವರು ಚಿತ್ರಿಸಿರುವ ತಾಯಿಯ ಮೌಲ್ಯದ ಮುಂದುವರೆದ ಭಾಗ ಗಂಗಾ ಪಾದೇಕಲ್‌ರವರ ಕತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಗಂಗಾಪಾದೇಕಲ್‌ರವರಲ್ಲಿ ತಾಯ್ತನದ ಸಾರ್ಥಕ್ಯ ಕಾಣಿಸಿಕೊಳ್ಳುವ ಪರಿ ಬೇರೆಯೇ ತೆರನಾದದ್ದು. ಯಾರದ್ದೋ ಮಗುವಿನ ಉಳಿಯುವಿಕೆಗಾಗಿ ಒದ್ದಾಡುವ ಹೆಣ್ಣು ತಾಯ್ತನಕ್ಕೆ ಅರ್ಥ ನೀಡುವಲ್ಲಿ ಸಫಲಳಾಗುತ್ತಾಳೆ. 'ಒಂದೇ ನಾವೆಯ ಪಯಣಿಗರು' ಕತೆಯ ಸರಳ ಈ ಮೇಲಿನ ಮಾತಿಗೆ ಪೂರಕ ಪಾತ್ರವಾಗಿ ಮೂಡಿ ಬಂದಿದ್ದಾಳೆ. ಲೋಕದಲ್ಲಿ ಹೆಣ್ಣಿನ ಶ್ರೇಷ್ಠತನವನ್ನು ಎತ್ತಿ ಹಿಡಿಯುವುದರೊಂದಿಗೆ, ಪುರುಷನಲ್ಲಿ ಇಲ್ಲದ ದಯೆ, ಕರುಣೆ, ಹೆಣ್ಣಾದವಳಿಗೆ ಹುಟ್ಟಿನೊಂದಿಗೆ ಬಂದು ಬಿಡುತ್ತವೆ ಎಂಬ ಸತ್ಯವನ್ನು ಈ ಕತೆಗಳು ದೃಢಪಡಿಸುತ್ತವೆ.

೮.೫. ದಾಂಪತ್ಯ ವಿರಸ

ಗಂಡ -ಹೆಂಡತಿಯರ ನಡುವಿನ ಬಿಕ್ಕಟ್ಟುಗಳು ಕರಾವಳಿ ಲೇಖಕಿಯರ ಕಥೆಗಳಲ್ಲಿ ಧಾರಾಳವಾಗಿ ಕಾಣಸಿಗುತ್ತವೆ, ವಿವಾಹದಲ್ಲಿಯೇ ಹೆಣ್ಣಿನ ಸಾರ್ಥಕತೆಯಿದೆ ಎಂಬನಿಲುವು ಒಂದೆಡೆಯಾದರೆ ಮದುವೆಯಾಗುವ ಹುಡುಗನ ಬಗೆಗಿನ ಹೆಣ್ಣಿನ ಕಲ್ಪನೆ, ಬಯಕೆಗಳು, ಹೆಣ್ಣಿನ ಶಿಕ್ಷಣ, ಹೆಣ್ಣಿಗೆ ತನ್ನ ಸೌಂದರ್ಯದ ಬಗ್ಗೆ ಇರುವ ಅತಿರೇಕವಾದ ಕಲ್ಪನೆ, ಸಂಪ್ರದಾಯ ನಂಬಿಕೆಗಳು ಹೆಣ್ಣನ್ನು ಅವಿವಾಹಿತಳನ್ನಾಗಿಯೇ ಉಳಿಯುವಂತೆ ಮಾಡುತ್ತವೆ.

ಪ್ರೇಮಾಭಟ್‌ರವರ 'ಏಕಾಕಿ' (ಕಥಾವರ್ಷ, ೨೦೦೭) ಕಥೆಯು ಅಪ್ಪ-ಅಮ್ಮರ ನಡುವಿನ ಮೌನದ ಕಾರಣವನ್ನು ಹುಡುಕುತ್ತಾ ಹೋಗುವ ಮಗನ ಪರಿಸ್ಥಿತಿಯನ್ನು ವಿವರಿಸುತ್ತದೆ. ಅಪ್ಪ ತೀರಿದ ಮೇಲೆ ತಾಯಿಯೊಂದಿಗೆ ವಿಶ್ವ ಈ ಮೌನದ ಕಾರಣವನ್ನುಕೇಳುತ್ತಾನೆ. ಬೇರೊಬ್ಬ ಹೆಂಗಸಿನೊಂದಿಗೆ ಸಂಬಂಧವಿಟ್ಟುಕೊಂಡ ಅಪ್ಪನನ್ನು ಪ್ರಶ್ನಿಸಲಾಗದೆ ಮೌನವಾಗಿಯೇ ತಾಯಿ ಬದುಕು ದೂಡುತ್ತಿದ್ದಳು. ತಾನು ಆ ಗಂಗವ್ವನ ಮಗ ಎಂಬುದು ವಿಶ್ವನಿಗೆ ಖಾತ್ರಿಯಾದಾಗ ಆಕೆಯನ್ನು ನೋಡಿ ಮಾತನಾಡಿಸುವುದಕ್ಕಾಗಿ ಹೋಗುತ್ತಾನೆ. ಆದರೆ ಆಗಲೇ ಆಕೆ ಸಾವನ್ನಪ್ಪಿರುತ್ತಾಳೆ. ಅತ್ತ ಹೆತ್ತ ತಾಯಿಯ ಪ್ರೀತಿಯನ್ನು ಕಾಣದೇ ಇತ್ತ ಈ ತಾಯಿಯ ಪ್ರೀತಿಯೂ ಸಿಗದೆ ಕೊನೆಗೂ ವಿಶ್ವ ಏಕಾಕಿಯಾಗಿ ಉಳಿಯುತ್ತಾನೆ.

'ಉಯ್ಯಾಲೆ' (ಕಥಾವರ್ಷ,೨೦೦೭) ಕಥೆಯು ಹೆಣ್ಣಿನ ಭಾವನೆಗಳು ಉಯ್ಯಾಲೆಯಾಡುವುದನ್ನೂ ಹೇಳುತ್ತದೆ. ತುಂಬಾ ಒಳ್ಳೆಯವನಾಗಿ ಕಾಣುವ ಎದುರು ಮನೆಯ ಯಶವಂತ, ಸದಾ ಸೋಮಾರಿಯಂತೆ ಇರುವ ತನ್ನ ಗಂಡ ಸುಧಾಕರ ಇವರಿಬ್ಬರನ್ನೂ ಸದಾ ಹೋಲಿಸುತ್ತಿರುವ ಶ್ಯಾಮಲೆಗೆ ಯಶವಂತನ ಬಗೆಗೆ ಗೌರವ ಮೂಡುತ್ತದೆ. ಆತನ ಹೆಂಡತಿಯಾದ ಪುಷ್ಪಾ ಪುಣ್ಯವಂತೆ ಎನ್ನುತ್ತಾಳೆ. ಆದರೆ ಯಶವಂತನ ಹುಳುಕುಗಳೆಲ್ಲ ಅರ್ಥವಾದ ಮೇಲೆ ತನ್ನ ಗಂಡ ಸುಧಾಕರನ ಒಳ್ಳೆಯತನವನ್ನು ಅರಿತು ಖುಷಿಪಡುತ್ತಾಳೆ. ಕಣ್ಣಿಗೆ ಕಂಡದ್ದೆಲ್ಲಾ ಸುಂದರವಾಗಿ ಇರುವುದಿಲ್ಲ ಎನ್ನುವ ಸತ್ಯವನ್ನು ಶ್ಯಾಮಲೆ ಅರಿತುಕೊಳ್ಳುತ್ತಾಳೆ.

'ಆದಿ - ಅಂತ್ಯ' (ಕಥಾವರ್ಷ, ೨೦೦೭) ಕಥೆಯು ಹೆಣ್ಣೊಬ್ಬಳ ಅತಿಯಾದ ಆಸೆ, ಲೆಕ್ಕಾಚಾರವಿಲ್ಲದ ಬದುಕು ಇಡೀ ಸಂಸಾರವನ್ನು ಹೇಗೆ ಮುಳುಗಿಸಿ ಬಿಡುತ್ತದೆ ಎಂಬುದರ ಚಿತ್ರಣವನ್ನು ನೀಡುತ್ತದೆ. ಮೋಹನನ ಹೆಂಡತಿ ಕಂಡದ್ದೆಲ್ಲಾ ಬೇಕು ಎಂದು ಹಠ ಹಿಡಿಯುವವಳು. ಆರಂಭದಲ್ಲಿ ಹೆಂಡತಿಯ ಮಾತಿಗೆ ಇದಿರಾಡಲಾಗದೆ ಹೇಳಿದ ಹಾಗೆ ಕೇಳುತ್ತಾನೆ. ಕೊನೆಗೆ ಮನೆಯ ಒಂದೊಂದು ಸೊತ್ತುಗಳನ್ನೇ ಮಾರಾಟ ಮಾಡಿ ಮನೆಬಿಟ್ಟು ಹೋಗುತ್ತಾನೆ.

ಗಂಡ - ಹೆಂಡಿರ ನಡುವಿನ ಬಿರುಕಿಗೆ ಕಾರಣವೇ ಹೆಂಡತಿಯಾದ ಶುಭಾಳ ಅತಿಯಾದ ಆಸೆ. ಇತರರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುತ್ತಾ ಕೊರತೆ ಹುಡುಕುವುದರಲ್ಲೇ ಕಾಲ ಕಳೆದ ಶುಭಾ ಗಂಡನ ನಿಜ ಸ್ಥಿತಿಯನ್ನು ಅರಿಯದೇ ಹೋದರೂ ಕೊನೆಗೆ ತಾನು ಮಾಡಿದ ತಪ್ಪಿಗಾಗಿ ವ್ಯಥೆ ಪಡುತ್ತಾಳೆ.

ಪತಿ-ಪತ್ನಿಯರ ನಡುವಿನ ಮನಸ್ತಾಪಕ್ಕೆ ಬೇರೆ ಬೇರೆ ಕಾರಣಗಳನ್ನು ಇಲ್ಲಿನ ಕತೆಗಳು ನೀಡುತ್ತವೆ. ಗಂಡನೊಬ್ಬ ಬೇರೆ ಹೆಣ್ಣಿನೊಂದಿಗೆ ಇಟ್ಟುಕೊಂಡಿರುವ ಸಂಬಂಧವಿರಬಹುದು, ಹೆಣ್ಣೊಬ್ಬಳ ಅತಿಯಾದ ಆಸೆ

ಇರಬಹುದದು ಅಥವಾ ಗಂಡ-ಹೆಂಡತಿ ಒಬ್ಬರನ್ನೊಬ್ಬರು ಬೇರೆಯವರೊಂದಿಗೆ ಹೋಲಿಸುವುದರಲ್ಲಿರಬಹುದು ದಾಂಪತ್ಯದ ಬಿರುಕು ಕಾಣಿಸಿಕೊಳ್ಳುತ್ತದೆ.

ಪ್ರೇಮಾಭಟ್‌ರವರ 'ಏಕಾಕಿ', 'ಉಯ್ಯಾಲೆ' ಹಾಗೂ 'ಆದಿ-ಅಂತ್ಯ' ಕತೆಗಳಲ್ಲಿ ಈ ಅಂಶಗಳನ್ನು ಗಮನಿಸಬಹುದು. ದಾಂಪತ್ಯ ವಿರಸವನ್ನು ಹೇಳುವ ಕತೆಗಳು ನಮಗೆ ಹೆಚ್ಚಾಗಿ ಕಾಣ ಸಿಗುವುದು ಪ್ರೇಮಾಭಟ್‌ರವರ ಕತೆಗಳಲ್ಲಿ. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಕುಟುಂಬದ ಒಳಗಡೆ ಕಾಣಿಸಿಕೊಳ್ಳುವ ಈ ತೆರನಾದ ಸಮಸ್ಯೆಗಳು ಪ್ರಧಾನವಾಗಿಯಲ್ಲವಾದರೂ ಅಲ್ಲಲ್ಲಿ ಹುಟ್ಟಿಕೊಳ್ಳುತ್ತಿದ್ದವು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

೮.೬. ಸಮಾನ ಮನೋಧರ್ಮ

ಪ್ರೇಮಾಭಟ್‌ರವರ 'ಸಂದಾಯ' (ಕಥಾವರ್ಷ, ೨೦೦೭) ಕಥೆಯು ಹೆಣ್ಣಿನ ಒಳ್ಳೆಯತನವನ್ನು ಎತ್ತಿ ಹಿಡಿಯುವ ಕಥೆಯಾಗಿದೆ. ಬಸ್ಸಿನಲ್ಲಿ ಸಿಕ್ಕಿದ ಮಾಂಗಲ್ಯವನ್ನು ಗಂಡ ತಂದು ಹೆಂಡತಿಯ ಕೈಗೆ ನೀಡಿದಾಗ ಆಕೆ ತನಗಾಯಿತು ಎಂದು ಇಟ್ಟುಕೊಳ್ಳದೆ ತಾನು ನಡೆಸುತ್ತಿದ್ದ ಸಾಮೂಹಿಕ ವಿವಾಹಕ್ಕಾಗಿ ಬಳಸಿಕೊಳ್ಳುತ್ತಾಳೆ.

ಸ್ವಾರ್ಥಿಗಳೆ ತುಂಬಿರುವ ಈ ಸಮಾಜದಲ್ಲಿ ಇಂಥ ನಿಷ್ಕಲ್ಮಷ ಮನಸ್ಸಿನ ಹೆಣ್ಣು ಮಕ್ಕಳೂ ಇರುತ್ತಾರೆ ಎನ್ನುವುದನ್ನು ಈ ಕಥೆ ನಿರೂಪಿಸುತ್ತದೆ.

ಬದುಕೇ ಒಂದು ಪಂದ್ಯ ಎನ್ನುವುದನ್ನು ಮನದಟ್ಟು ಮಾಡಿಕೊಡುವ 'ಪಂದ್ಯ' (ಕಥಾವರ್ಷ, ೨೦೦೭) ಕಥೆಯಲ್ಲಿ ಹೆಣ್ಣಿನ ಶೀಲಕ್ಕೆ ಸಂಚಕಾರ ಬಂದಾಗ ಅದನ್ನು ಸ್ವೀಕರಿಸುವ ಮನೋಧರ್ಮಗಳ ವಿವರಣೆಯಿದೆ. ಟೂರ್ನಮೆಂಟ್ ಒಂದಕ್ಕೆ ಹೋಗಿದ್ದ ಮಾಳವಿಕಾ ಅತ್ಯಾಚಾರಕ್ಕೆ ಒಳಗಾಗಿ ಆಡದೇ ಹಿಂದಕ್ಕೆ ಬಂದಾಗ ಅವಳ ತಾಯಿ ವತ್ಸಲಾ ಹೇಳುವ 'ಇದ್ನ ಮನಸ್ಸಿನಲ್ಲಿಟ್ಟುಕೊಂಡು ನೀ ಕೊರಗೋದೇನು ಬ್ಯಾಡ. ಇನ್ನು ಮುಂದೆ ಎಲ್ಲಿ ಹೋದ್ರು ಬಂದ್ರು ನೀ ಹ್ಯಾಗೆ ಜಾಗ್ರತೆಯಾಗಿರಬೇಕು ಅನ್ನೋದು ನಿಂಗೀಗ ಅರ್ಥ ಆಗಿದ್ದಾತು, ಅಲ್ವೇನ...' (ಕಥಾವರ್ಷ, ಪು. ೬೫೯, ೨೦೦೭)ಎನ್ನುವ ಮಾತಾಗಲೀ, 'ನೀ ತಪ್ಪು ಮಾಡಿದ್ದಲ್ಲ ಇದು ... ನೀ ಟೂರ್ನಮೆಂಟ್ ಎಲ್ಲೆಲ್ಲಿ ನಡೆಯುತ್ತೋ ಅಲ್ಲೆಲ್ಲ ಹೋಗೋದು ನಿಲ್ಲಿಸೋದೇನು ಬ್ಯಾಡ್ದೆ. ಹೆಸರು ಇದ್ರೆ ಆತು. ಎಲ್ಲಾ ಮುಚ್ಚೋತು. ಕಾಂಬ ನಿನ್ನ ಅದೃಷ್ಟ ಹ್ಯಾಂಗಿತ್ತೊ ಹಂಗಾಗ್ಲಿ' (ಅದೇ... ಪು. ೬೬೧) ಎನ್ನುವ ಮಾತಾಗಲೀ ತಾಯಿ ಮಕ್ಕಳಲ್ಲಿ ತುಂಬಿಸಬೇಕಾದ ಪ್ರೀತಿ, ವಿಶ್ವಾಸ, ಧೈರ್ಯವನ್ನು ಹೇಳುತ್ತದೆ. ತನ್ನದಲ್ಲದ ತಪ್ಪಿಗೆ ಹೆಣ್ಣು ಕೊರಗಿ ಜೀವನ ಹಾಳುಮಾಡಿಕೊಳ್ಳಬೇಕಾಗಿಲ್ಲ ಎಂಬ ನಿಲುವು ಈ ಕಥೆಯಲ್ಲಿ ವ್ಯಕ್ತವಾಗುತ್ತದೆ.

ಒಂದು ಸ್ವಾಸ್ಥ್ಯ ಸಮಾಜವನ್ನು ಕಟ್ಟುವಲ್ಲಿ ಸಮಾನ ಮನೋಧರ್ಮಗಳು ಪ್ರಧಾನ ಪಾತ್ರವಹಿಸುತ್ತವೆ ಎಂಬುವುದನ್ನು ಕರಾವಳೀ ಲೇಖಕಿಯರ ಕತೆಗಳು ಮನದಟ್ಟು ಮಾಡುತ್ತವೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಕಾಣಿಸಿಕೊಳ್ಳುವ ಈ ಮನೋಭಾವನೆಯೇ ಮುಂದೆ ಸಮಾಜದಲ್ಲಿ ಬೇರೂರುವುದಕ್ಕೆ ಕಾರಣವಾಗುತ್ತದೆ. ಇನ್ನೊಬ್ಬರ ಸ್ವತ್ತಿಗೆ ಆಸೆ ಪಡದೇ, ಇನ್ನೊಬ್ಬರ ಮನಸ್ಸನ್ನು ಅರ್ಥಮಾಡಿಕೊಂಡು ಬದುಕುವುದೇ ಶ್ರೇಷ್ಠವಾದ ಬದುಕಾಗುತ್ತದ ಎನ್ನುವುದನ್ನು ಪ್ರೇಮಾಭಟ್‌ರವರ 'ಸಂದಾಯ' ಕತೆಯು ತಿಳಿಸುತ್ತದೆ. ಅತ್ಯಾಚಾರಕ್ಕೆ ಒಳಗಾದ ಹೆಣ್ಣನ್ನು ತಿರಸ್ಕಾರ ಮಾಡದೇ ಆಕೆಯ ಮನಸ್ಸನ್ನು ಅರ್ಥ ಮಾಡಿಕೊಂಡು ಸಮಾಧಾನ ಹೇಳುವ 'ಪಂದ್ಯ' ಕತೆಯ ವತ್ಸಲಾ ಸಮಾಜಕ್ಕೆ ಮಾದರಿಯಾಗಿದ್ದಾಳೆ.

ಗಂಗಾಪಾದೇಕಲ್‌ರವರ 'ಉತ್ತರಾರ್ಧ' (ವಾಸ್ತವ, ೧೯೯೬) ಕಥೆಯಲ್ಲಿ ಹೆಣ್ಣೊಬ್ಬಳ ಹೃದಯ ವೈಶಾಲ್ಯದ ಚಿತ್ರಣವಿದೆ. ಬೇಜವಾಬ್ದಾರಿಯ ಗಂಡನನ್ನು ಪಡೆದ ಸರಳ ಹೆರಿಗೆ ನೋವು ಕಾಣಿಸಿಕೊಂಡಾಗ ತನಗೆ ಬಾಡಿಗೆ ನೀಡಿದ ಮನೆಯ ದೊಡ್ಡಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾಳೆ. ತಾಯಿಯ ಸ್ಥಾನದಲ್ಲಿ ನಿಂತು ಸರಳೆಯ ಕಷ್ಟ - ಸುಖ ಹಂಚಿಕೊಂಡ ದೊಡ್ಡಮ್ಮನಿಗೆ ತನ್ನ ಮಗ ಅರವಿಂದನ ಬೇಜವಾಬ್ದಾರಿಯ ಬಗೆಗೆ ಬೇಸರ ಮೂಡುತ್ತದೆ. ತಾನೇ ಸಾಕಿದ ಮಗ ಅವನಿಷ್ಟದಂತೆ ಮದುವೆಯಾಗಿದ್ದ. ಆದರೆ ತಾಯಿಯೆಂಬ ಪ್ರೀತಿಯಲ್ಲದೆ ಆಕೆಯನ್ನು ದೂರವಿಟ್ಟಿದ್ದ.

ಇಲ್ಲಿ ದೊಡ್ಡಮ್ಮ ಸಮಾಜದ ವ್ಯವಸ್ಥೆಯನ್ನು ಪ್ರಶ್ನಿಸುತ್ತಾಳೆ. ದೂರವಾಗುವ ಮನುಷ್ಯ ಸಂಬಂಧದ ಕುರಿತಾದ ಅಸಹನೆ ಆಕೆಯಲ್ಲಿರುವುದು ಈ ಕಥೆಯಿಂದ ತಿಳಿಯುತ್ತದೆ.

'ಕುಬ್ಜ' (ನೆಲ ತಪ್ಪಿದ ಹಕ್ಕಿ, ೨೦೦೩) ಕಥೆಯು ಶ್ರೀಧರ ಹಾಗೂ ಆತನ ಹೆಂಡತಿ ಸುಜಾತರ ಕುಬ್ಜ ಮನಸ್ಥಿತಿಯನ್ನು ಚಿತ್ರಿಸುತ್ತದೆ. ಎಷ್ಟೋ ವರ್ಷಗಳಿಂದ ಮನೆಯಲ್ಲಿ ಎಲ್ಲರಿಗೂ ಬೇಕಾದವನಾಗಿ ಬದುಕಿದ ಕಿಟ್ಟಣ್ಣನನ್ನು ಕೊನೆಗೆ ಶ್ರೀಧರ ತನ್ನ ಹೆಂಡತಿಯ ಮಾತಿನಂತೆ ದೂರಮಾಡುತ್ತಾನೆ. 'ಸಂಬಂಧಕ್ಕೆ ಬೆಲೆಯಿಲ್ಲ' ಎಂಬುದನ್ನು ಶ್ರೀಧರ ಹಾಗೂ ಸುಜಾತರ ಪಾತ್ರಗಳು ನಿರೂಪಿಸುತ್ತವೆ.

ಹಳ್ಳಿಯಲ್ಲಿ ಹುಟ್ಟಿ ಆಧುನಿಕತೆಗೆ ತೆರೆದುಕೊಳ್ಳುವ ವಿದ್ಯಾವಂತನೊಬ್ಬ ಅನಾರಿಕನಾಗಿ ಯೋಚಿಸುತ್ತಾನೆಂಬುದಕ್ಕೆ ಈ ಕಥೆಯ ಶ್ರೀಧರನೇ ಸಾಕ್ಷಿ. ಸಣ್ಣ ಆಪಾದನೆ ತನ್ನ ಮೇಲೆ ಬಂದಾಗ ಸಾವಿಗೆ ಶರಣಾಗುವ ಕಿಟ್ಟಣ್ಣನ ಪತ್ನಿ ಶಾರದೆ ಹಾಗೂ ಮನುಷ್ಯ ಸಂಬಂಧವೇ ಬೇಕಾಗಿಲ್ಲದ ಶ್ರೀಧರನ ಹೆಂಡತಿ ಸುಜಾತ ಇವರಿಬ್ಬರ ಮನೋಭಾವನೆಯಲ್ಲಿ ಅಜಗಜಾಂತರವಿದೆ.

ಸಾರಾ ಅಬೂಬಕ್ಕರ್‌ರವರ 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಎಂಬ ಗಾದೆಯನ್ನು ನೆನಪಿಸುವ 'ಬಂದಣಿಕೆ' (ಪಯಣ ಮತ್ತು ಇತರ ಕಥೆಗಳು, ೧೯೯೨)ಕಥೆಯು ಹಿರಿಯರಲ್ಲಿ ಇಲ್ಲದ ಸಭ್ಯತೆ, ಸಂಸ್ಕಾರ ಕಿರಿಯರಲ್ಲಿಯೂ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಮನದಟ್ಟು ಮಾಡುತ್ತದೆ. ಅಬ್ದುಲ್ ಖಾದರ್‌ನ ಮಗ ಅಬೀದ್ ಆಲಿಯ ಜೀವನ ಇದಕ್ಕೆ ಹೊರತಾಗಿಲ್ಲ. ನಾಗರಿಕ ಪ್ರಪಂಚದ ಪರಿಚಯವಾದ ಎಸ್. ಪಿ. ಗೂ, ಇನ್ನೂ ಅನಾಗರಿಕ ಕೂಪದೊಳಗೆ ಮುಳುಗಿರುವ ಅಬ್ದುಲ್ ಖಾದರ್‌ಗೂ ಅಜಗಜಾಂತರವಿದೆ. ಹೆಂಡತಿಯೆನಿಸಿಕೊಳ್ಳುವವಳು ಗಂಡನಿಗೆ ಬೇಕಾದದ್ದನ್ನು ಮಾಡಿ ಬಡಿಸುವ ಬಿಟ್ಟಿ ಚಾಕರಿಯವಳು ಎಂದು ತಿಳಿದಿರುವ ಅಬ್ದುಲ್, ಎಸ್. ಪಿ.ಯ ಎದುರು ನಿಕೃಷ್ಟವಾಗಿ ಕಾಣುತ್ತಾನೆ.

ಗಂಗಾ ಪಾದೇಕಲ್‌ರವರ 'ಒಂದು ದಿನ' (ಪುಲಪೇಡಿ ಮತ್ತು ಇತರ ಕಥೆಗಳು, ೧೯೮೭) ಕಥೆಯಲ್ಲಿ ಮನೆಯವರಿಂದ ತನ್ನ ಪ್ರತಿಭೆಗೆ ಸರಿಯಾದ ಪ್ರೋತ್ಸಾಹ, ಸಹಕಾರ ಸಿಗದೆ ನಿರಾಶಳಾಗಿ ಬದುಕುವ ಹೆಣ್ಣಿನ ಚಿತ್ರಣವಿದೆ. ತನ್ನ ಬದುಕೇ ನಿರರ್ಥಕ ಎಂದು ಭಾವಿಸುವ ಸುಮಾ ಕೊನೆಗೊಂದು ದಿನ ಪತಿಯ ಮೆಚ್ಚುಗೆಯ ಮಾತುಗಳಿಗೆ ಒಳಗಾಗಿ ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಗುತ್ತಾಳೆ.

ಹೆಣ್ಣಿನ ಒಳಮನಸ್ಸಿನ ಸೂಕ್ಷ್ಮಗಳನ್ನು ಈ ಕಥೆ ತೆರೆದಿಡುತ್ತದೆ. ಪ್ರಾಯಶಃ ಹೆಣ್ಣಿಗೆ ತನ್ನ ಕೌಟುಂಬಿಕ ಬದುಕಿನಲ್ಲಿ ಮೆಚ್ಚುಗೆ ನೀಡುವುದು, ಮೆಚ್ಚುಗೆ ಪಡೆದುಕೊಳ್ಳುವುದು ಅನಿವಾರ್ಯವೂ ಹೌದು ಎಂಬ ವಾಸ್ತವದ ಕಡೆಗೆ ಈ ಕಥೆ ಮುಖ ಮಾಡುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ಹೊಂಡಗಳು' (ರುಕುಮಾಯಿ, ೧೯೯೦) ಕಥೆಯ ಭಾರತಿಯು ತನ್ನ ಬಾಲ್ಯ, ಕಳೆದುಕೊಂಡ ತಂದೆ – ತಾಯಿಯರನ್ನು ನೆನಪು ಮಾಡಿಕೊಳ್ಳುತ್ತಾ ಬಾಲ್ಯವನ್ನೇ ಮರೆತುಬಿಡಲು ಪ್ರಯತ್ನಿಸುತ್ತಾಳೆ. ಅಮ್ಮನ ಒದ್ದಾಟದ ಬದುಕು ಭಾರತಿಯನ್ನು ಇಂತಹ ಯೋಚನೆಗೆ ಎಡೆಕೊಡುತ್ತದೆ. ಬದಿಯ ಮನೆಯ ಮೆಹತಾರ ಸಾವು ಅವಳಿಗೆ ಬೇರೆಯಾರದ್ದೋ ಸಾವಾಗಿರದೇ ತನ್ನ ಹತ್ತಿರದವರ ಸಾವೇ ಆಗಿತ್ತು. ದುಃಖದಲ್ಲಿ ಒರಗಿ ಕೂತ ಭಾರತಿಯ ಅಸ್ತವ್ಯಸ್ತವಾದ ಕುಂಕುಮವನ್ನು ನೋಡಿ, 'ದೇವಿ ಬಂದಳೆಂದು ಕಾಣುತ್ತದೆ. ಮೆಹತಾಜಿ ದೇವಿಯ ಆರಾಧಕರಾಗಿದ್ದರಂತೆ' (ರುಕುಮಾಯಿ, ಪು. ೫೪, ೧೯೯೦) ಎಂಬ ಸಾವಿನ ಮನೆಯ ಮಾತುಗಳು ಭಾರತಿಗೆ ಮೆಹತಾಜಿಯವರ ಬಗೆಗಿದ್ದ ಪ್ರೀತಿ, ಗೌರವವನ್ನು ಸೂಚಿಸುತ್ತದೆ. ಮನುಷ್ಯ ಸಂಬಂಧದ ಶ್ರೇಷ್ಠತೆಯನ್ನು ಈ ಕಥೆ ಕಟ್ಟಿಕೊಡುತ್ತದೆ.

ತನ್ನ ಕಷ್ಟದಲ್ಲಿ ಭಾಗಿಯಾಗುವ ಯಾವಳೋ ಹೆಣ್ಣನ್ನು ತನ್ನ ತಾಯಿಯೆಂದು ಪರಿಗಣಿಸುವ ಮನೋಧರ್ಮ ಹೆಣ್ಣಿನಲ್ಲಿದೆ ಎನ್ನುವುದಕ್ಕೆ ಗಂಗಾ ಪಾದೇಕಲ್‌ರವರ 'ಉತ್ತರಾರ್ಧ' ಕತೆಯು ಸಾಕ್ಷಿಯಾಗಿದೆ. ಇಂತಹ ಮನೋಭಾವನೆಯನ್ನು ಕಿರಿಯರಲ್ಲಿ ಬೆಳೆಸಬೇಕಾದುದು ಹಿರಿಯರ ಕರ್ತವ್ಯ ಎನ್ನುವುದನ್ನು ಸಾರಾ ಅಬೂಬಕ್ಕರ್‌ರವರ 'ಬಂದಣಿಕೆ' ಕತೆಯು ಸ್ಪಷ್ಟಪಡಿಸುತ್ತದೆ. ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಅದಕ್ಕೆ ಸ್ಪಂದಿಸಿದಾಗ ಮಾತ್ರ ಮಕ್ಕಳ ಪ್ರತಿಭೆ ಅರಳುವುದಕ್ಕೆ ಸಾಧ್ಯವಾಗುತ್ತದೆ. ಎಂಬುವುದನ್ನು ಗಂಗಾ ಪಾದೇಕಲ್‌ರವರ ' ಒಂದು ದಿನ' ಕತೆಯು ತಿಳಿಸುತ್ತದೆ.

ಇಂತಹ ಸಮಸ್ಯೆಗಳನ್ನು ಮತ್ತೆ ಮತ್ತೆ ಎತ್ತಿಕೊಳ್ಳುವುದರ ಮೂಲಕ ಕರಾವಳೀ ಕತೆಗಾರ್ತಿಯರು ಸಮಾಜದ ಕಣ್ಣು ತೆರೆಸುವ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಒಪ್ಪಬೇಕಾಗಿರುವ ವಿಚಾರ. ಸಮಾನ ಮನೋಧರ್ಮಕ್ಕೆ ಯಾವುದೇ ಜಾತಿ-ಧರ್ಮಗಳ ಕಟ್ಟುಪಾಡುಗಳು ಬೇಕಾಗಿಲ್ಲ ಎನ್ನುವುದನ್ನು ಮಿತ್ರಾ ವೆಂಕಟ್ರಾಜ್‌ರವರ 'ಹೊಂಡಗಳು' ಕತೆಯು ತೋರಿಸಿಕೊಡುತ್ತದೆ. ಮನುಷ್ಯ ಸಂಬಂಧದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಕತೆ ಇದಾಗಿದೆ.

೮.೭. ಬಂಜೆತನ

ಹೆಣ್ಣಿನ ಬಂಜೆತನಕ್ಕೆ ಕಾರಣಗಳೇನೇ ಇದ್ದರೂ ಬಂಜೆ ಎನಿಸಿಕೊಂಡ ಹೆಣ್ಣನ್ನು ಸಮಾಜ ನೋಡುವ ದೃಷ್ಟಿಕೋನವೇ ಬೇರೆ. ಅನಿಷ್ಟಕ್ಕೆಲ್ಲಾ ಶನಿರಾಯನೇ ಹೊಣೆ ಎಂಬಂತೆ ಈ ಬಂಜೆತನಕ್ಕೂ ಕೇವಲ ಹೆಣ್ಣನ್ನೇ ಗುರಿಯಾಗಿಸಿರುವ ಪುರುಷ ಪ್ರಧಾನ ಸಮಾಜದ ಆಲೋಚನೆ ಆಕೆಗೆ ಬದುಕುವ ಸ್ವಾತಂತ್ರ್ಯವಿಲ್ಲದ ಹಾಗೆ ಮಾಡಿದ್ದನ್ನು ಗಮನಿಸಬಹುದು. ಕರಾವಳಿ ಲೇಖಕಿಯರ ಕತೆಗಳಲ್ಲಿ ಬಂಜೆ ಹೆಣ್ಣಿನ ನೋವು, ಹತಾಶೆ, ದುಃಖ;-ದುಮ್ಮಾನ ಅಸಹಾಯಕತೆಗಳು ಮೂಡಿಬಂದಿವೆ. ಕೆಲವು ಹೆಣ್ಣುಗಳ ವೈಯುಕ್ತಿಕ ನೆಲೆಯಲ್ಲಿ ತನ್ನ ನೋವಿಗೆ ತಾನೇ ಸಾಂತ್ವಾನ ಹೇಳಿ ಬದುಕುವ ಧೈರ್ಯ ಮೂಡಿದರೆ , ಇನ್ನೇಷ್ಟೋ ಹೆಣ್ಣುಮಕ್ಕಳ ಬದುಕು ಸಾವಿನಲ್ಲಿ ಪರ್ಯಾವಸಾನ ಆಗುವುದು ಇದೆ.

ಪ್ರೇಮಾಭಟ್‌ರವರ 'ಮೇಡಂ' (ಕಥಾವರ್ಷ, ೨೦೦೭) ಕಥೆಯು ಬಂಜೆಯೊಬ್ಬಳ ದಿಟ್ಟತನದ ಬದುಕನ್ನು ಹೇಳುತ್ತದೆ. ತಾನು ಬಂಜೆ ಎನ್ನುವ ಕಾರಣಕ್ಕಾಗಿ ಗಂಡ ತನ್ನನ್ನು ಬಿಟ್ಟು ಬೇರೊಬ್ಬಳನ್ನು ಮದುವೆಯಾದರೂ ಕೆಟ್ಟ ಯೋಚನೆ ಮಾಡದೆ ಬದುಕಿದವಳು. ಅವಳು ಗಂಡ ಶಶಿಧರನಿಗೆ ಹೇಳುವ, 'ನೋಡಿ ಶಶಿಧರ ನಿಮಗೆ ಮಗುವನ್ನು

ಕೊಡೋಕೆ ನನ್ನಿಂದ ಸಾಧ್ಯವಿಲ್ಲ ಎಂದಮೇಲೆ, ನನ್ನೊಡನೆ ನಿಮಗೆ ಸಂಸಾರ ಮಾಡೋಕು ಸಾಧ್ಯವಿಲ್ಲ ಎನ್ನಿ. ಹಾಗಿದ್ದ ಮೇಲೆ ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ. ನೀವಿನ್ನೊಂದು ಮದುವೆಯಾಗಿ ಸುಖವಾಗಿರಿ' (ಕಥಾವರ್ಷ ಪು. ೪೨೭, ೨೦೦೭) ಎನ್ನುವ ಮಾತು ಆಕೆಯ ದಿಟ್ಟತನಕ್ಕೆ ಸಾಕ್ಷಿಯಾಗಿದೆ.

'ಅಪಹರಣ' (ಕಥಾವರ್ಷ, ೨೦೦೭) ಕಥೆಯಲ್ಲಿ ಹೆಣ್ಣಿನ ವ್ಯಕ್ತಿತ್ವದ ಗಟ್ಟಿತನವಿದೆ. ತನಗೆ ಮಕ್ಕಳಾಗುವುದಿಲ್ಲವೆಂದು ಗಂಡ ಶ್ರೀಧರ ರಾಧಿಕಾಳನ್ನು ಮದುವೆಯಾಗುತ್ತಾನೆ. ಆದರೂ ಮಕ್ಕಳಾಗುವುದಿಲ್ಲ. ಶರ್ವಾಣಿ ಶ್ರೀಧರನಿಗೆ 'ನಿನ್ನಲ್ಲೇ ಕಣೋ ದೋಷ ಇರೋದು, ನಮ್ಮಿಬ್ಬರಲ್ಲೂ ಅಲ್ಲ. ಇನ್ನೊಬ್ಬ ಹುಡುಗಿಗೆ ಮೋಸ ಮಾಡಿ ತಾಳಿಗೀಳಿ ಕಟ್ಟೀಯ ಜೋಕೆ !' (ಪ್ರೇಮಾಭಟ್, ಕಥಾವರ್ಷ, ಪು. ೪೨೬, ೨೦೦೭) ಎಂದು ಹೇಳಬೇಕೆನಿಸಿದರೂ ಆಕೆಯ ಮನಸ್ಸು ಅದಕ್ಕೆ ಒಪ್ಪುವುದಿಲ್ಲ. ಇಲ್ಲಿ ಶರ್ವಾಣಿ ಇನ್ನೊಬ್ಬನಿಂದ ಮಗುವನ್ನು ಪಡೆಯುವ ನೀಚ ಕೃತ್ಯಕ್ಕೆ ಇಳಿಯದೆ ಗೋಪಾಲನನ್ನು ಸಾಕುಮಗನಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಹೆಣ್ಣಿನ ಬದುಕಿನ ಪಾವಿತ್ರ್ಯತೆಯ ಅನಾವರಣ ಇಲ್ಲಾಗಿದೆ.

ಬಂಜೆ ಎನಿಸಿಕೊಂಡ ಹೆಣ್ಣು ಮಕ್ಕಳ ಬವಣೆ ಹಲವು ತೆರನಾದಂತೆ ಅದನ್ನು ಸ್ವೀಕರಿಸಿದ ಹೆಣ್ಣು ಮಕ್ಕಳ ಮನೋಭಾವನೆಯೂ ವಿಭಿನ್ನವಾದುದು. ಹೆಂಡತಿಯಾದವಳು ಬಂಜೆ ಎಂದು ತಿಳಿದೊಡನೆ ಗಂಡನಾದವನು ಇನ್ನೊಂದು ಮದುವೆಯಾಗುವುದು ಒಂದು ಕಾಲದ ಸಾಮಾನ್ಯ ವಿಚಾರವಾಗಿತ್ತು. ಎಷ್ಟೋ ಸಂಸಾರಗಳಲ್ಲಿ ಹೆಂಡತಿಯಾದವಳೇ ಅದಕ್ಕೆ ಒಪ್ಪಿಗೆ ನೀಡುತ್ತಿದ್ದಳು. ಪ್ರೇಮಾಭಟ್‌ರವರ 'ಮೇಡಂ' ಎಂಬ ಕತೆ ಇದನ್ನೇ ತಿಳಿಸುತ್ತದೆ. ಬಂಜೆ ಎನ್ನುವ ನೆಪವೊಡ್ಡಿ ಹೆಣ್ಣುಗಳನ್ನು ಬದಲಾಯಿಸುವ ಪುರುಷರ ಈ ಮನೋಭಾವನೆಯನ್ನು ಒಪ್ಪದ ಹೆಣ್ಣು ಮಕ್ಕಳೂ ಇದ್ದರು. ಆದರೆ ಪ್ರತಿಭಟಿಸುವ ಧೈರ್ಯವನ್ನು ಮಾಡಿದ್ದು ಕಡಿಮೆಯೆಂದೇ ಹೇಳಬಹುದು. 'ಅಪಹರಣ' ಕತೆಯ ಶರ್ವಾಣಿ ಇದಕ್ಕೆ ಉದಾಹರಣೆಯಾಗಿದ್ದಾಳೆ, ಮಾತ್ರವಲ್ಲ ಒಬ್ಬ ಸಾಕು ಮಗನನ್ನು ಪಡೆದು ಸಮಾಧಾನ ತಂದುಕೊಳ್ಳುತ್ತಾಳೆ.

ಗಂಗಾ ಪಾದೇಕಲ್‌ರವರ 'ಪರಿಹಾರ' (ಹೊಸ ಹೆಜ್ಜೆ, ೧೯೯೭)ಕಥೆಯಲ್ಲಿ ಮಧುರ ಮದುವೆಯಾಗಿ ಹತ್ತು ವರ್ಷಗಳಾದರೂ ಮಕ್ಕಳಾಗದ್ದರಿಂದ ಆ ಚಿಂತೆಯಿಂದ ಪಾರಾಗಲು ಸಭೆ - ಸಮಾರಂಭಗಳಿಗೆ ಹೋಗುವುದನ್ನು ರೂಢಿಸಿಕೊಂಡಿದ್ದಳು. ಒಮ್ಮೆ ಕಲ್ಯಾಣ ಮಂಟಪದಲ್ಲಿ ಇಬ್ಬರು ಹೆಂಗಸರು ಇವಳ ಬಗೆಗೆ ನುಡಿದ ವ್ಯಂಗ್ಯ ಮಾತು, ತಾನು ಹುಟ್ಟಿರುವುದೇ ತಪ್ಪೇ ಎಂದು ಯೋಚಿಸುವಂತೆ ಮಾಡುತ್ತದೆ. 'ಅಲ್ಲ ಇಂಥ ಸಮಾರಂಭಕ್ಕೆಲ್ಲ ಬರಲು ಮನಸ್ಸಾದರೂ ಹೇಗಾಗುತ್ತದೋ ? ಆಕೆಗೆ ಲಗ್ನವಾಗಿ ಹತ್ತು ವರ್ಷಗಳೇ ದಾಟಿದುವಂತೆ' (ಹೊಸಹೆಜ್ಜೆ, ಪು. ೫೨

೧೯೯೭) ಎಂಬ ಮಾತು ತಾಯ್ತತನವನ್ನು ಉತ್ಪ್ರೇಕ್ಷಿಸುವಂತಹ ಸವಾಲಿಗೆ ಮೌನ ಪ್ರತಿಕ್ರಿಯಯಾಗಿದೆ. ಈ ಮೌನ ಪ್ರತಿಕ್ರಿಯೆಯೇ ಪ್ರತಿಭಟನೆಯ ನೆಲೆಯಾಗಿ ಗೋಚರಿಸುತ್ತದೆ.

ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವು ಮಾತ್ರ ತನ್ನ ಮಗು ಎಂದು ಭಾವಿಸದೇ, ಅನಾಥಾಲಯದಲ್ಲಿರುವ ಮಕ್ಕಳನ್ನು ಪ್ರೀತಿಯಿಂದ ನೋಡಿಕೊಂಡು ಮನಸ್ಸಿನ ದುಃಖವನ್ನು ಕಳೆಯಬಹುದಲ್ಲವೇ ಎಂಬ ಯೋಚನೆ ಮಧುರಳಲ್ಲಿ ಮಾಡುವುದು ನಿಜವಾದ ತಾಯ್ತನವೇ ಆಗಿದೆ.

ಗಂಗಾ ಪಾದೇಕಲ್‌ರವರ 'ಕಣ್ಣಾ ನೀರೆದ್ದು ಹೊಳೆಯದೊ' (ಹೊಸ ಹೆಜ್ಜೆ, ೧೯೯೬)ಕಥೆಯ ಗಿರಿಜಾ ವೃತ್ತಿಯಲ್ಲಿ ನರ್ಸ್ ಆದರೂ ಮಕ್ಕಳನ್ನೇ ಪಡೆಯದೇ ಇರುವ ಆಕೆ ಎಲ್ಲರ ದೃಷ್ಟಿಯಲ್ಲಿ ಬಂಜೆ ಎಂಬ ಪಟ್ಟ ಗಳಿಸಿಕೊಂಡರೂ ಅವಳ ತಾಯ್ತನದ ಮನಸ್ಸಿಗೆ ಬಂಜೆತನವಿರಲಿಲ್ಲ. ತನ್ನ ಒಡಹುಟ್ಟಿದವರನ್ನೆಲ್ಲಾ ಚೆನ್ನಾಗಿ ಸಾಕಿದರೂ ಯಾರಿಂದಲೂ ಆಕೆಗೆ ಒಂದು ಒಳ್ಳೆಯ ಮಾತು ಸಿಗದೇ ಹೋದಾಗ ಆಕೆಗೆ ಒಬ್ಬಂಟಿತನ ಕಾಡುತ್ತದೆ.

ಆಸ್ಪತ್ರೆಯಲ್ಲಿ ನೋಡಿದ ಅನಾಥ ಮಗುವೊಂದನ್ನು ತಾನು ಸಾಕುವುದರ ಮೂಲಕ ತಾಯ್ತನವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ಹಾತೊರೆದರೂ ಅವಳ ಇಚ್ಛೆ ನೆರವೇರುವುದಿಲ್ಲ. ಶ್ರೀಮಂತರ ಕೈಗೆ ಆ ಮಗುವನ್ನು ಕೊಡುವುದರ ಮೂಲಕ ಗಿರಿಜೆಯನ್ನು ವಂಚಿಸುತ್ತಾರೆ. ಆದರೆ ಮಗುವಿಗೆ ಬೇಕಾದದ್ದು ಹಣವೇ ? ಪ್ರೀತಿಯೇ ಎಂಬ ಪ್ರಶ್ನೆಗಳಷ್ಟೇ ಗಿರಿಜೆಯ ಪಾಲಿಗೆ ಉಳಿದು ಬಿಡುತ್ತವೆ.

ತನಗೆ ಮಕ್ಕಳಾಗುವುದಿಲ್ಲ ಎಂದು ತಿಳಿದಾಗ ಅನಾಥಾಲಯದ ಮಕ್ಕಳಿಗೆ ತಾನು ತಾಯಿಯಾಗಬಾರದೇಕೇ ಎಂದು ಯೋಚಿಸುವ ವಿಶಾಲ ಮನಸ್ಸಿನ ಹೆಣ್ಣು ಮಕ್ಕಳು ಕರಾವಳಿ ಲೇಖಕಿಯರ ಕತೆಗಳಲ್ಲಿ ಕಾಣಸಿಗುತ್ತಾರೆ. ದತ್ತು ಮಕ್ಕಳನ್ನು ಪಡೆಯುವ ಮೂಲಕ ತಾಯ್ತನದ ಸಾರ್ಥಕ್ಯವನ್ನು ಕಂಡುಕೊಂಡ ಹೆಣ್ಣು ಮಕ್ಕಳು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗು ಮಾತ್ರ ತನ್ನದಲ್ಲ, ಇನ್ನೊಂದು ತಾಯಿಯ ಮಗುವೂ ತನ್ನದೇ ಎಂದು ಯೋಚಿಸುವ ಮಾನವೀಯ ಅಂತಃಕರಣದ ಹೆಣ್ಣು ಮಕ್ಕಳಿದ್ದಾರೆ. ಗಂಗಾ ಪಾದೇಕಲ್‌ರವರ 'ಪರಿಹಾರ' ಹಾಗೂ 'ಕಣ್ಣಾ ನೀರೆದ್ದು ಹೊಳೆಯಾದೊ' ಎಂಬ ಕತೆಗಳು ಇದನ್ನು ಸ್ಪಷ್ಟಪಡಿಸುತ್ತವೆ. ಈ ಎಲ್ಲಾ ಕತೆಗಳನ್ನು ಗಮನಿಸಿದಾಗ ಒಂದು ಸಮಾಜದ ಆಲೋಚನಾ ಕ್ರಮಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತವೆ ಎನ್ನುವುದು ಸ್ಪಷ್ಟವಾಗುತ್ತದೆ.

೮.೮. ಹೊಂದಾಣಿಕೆ

ಹೊಂದಾಣಿಕೆಯ ಕೊರತೆ ಹಾಗೂ ಮಹತ್ವಗಳನ್ನು ಎತ್ತಿ ಹೇಳುವ ಎಷ್ಟೋ ವಿಚಾರಗಳು ಕರಾವಳಿ ಲೇಖಕಿಯರ ಕಥೆಗಳಲ್ಲಿ ಮೂಡಿಬಂದಿದೆ. ಅದು ತಂದೆ ಮಕ್ಕಳ ನಡುವಿನ ಹೊಂದಾಣಿಕೆ ಇರಬಹುದು, ಗಂಡ ಹೆಂಡತಿಯರ ನಡುವಿನ ಹೊಂದಾಣಿಕೆಯಿರಬಹುದು, ಅತ್ತೆ-ಸೊಸೆಯರ ನಡುವಿನ ಹೊಂದಾಣಿಕೆಯಿರಬಹುದು. ಅವಿದ್ಯಾವಂತ ಕುಟುಂಬದಲ್ಲಿ ಈ ಹೊಂದಾಣೀಕೆಯ ಸಮಸ್ಯೆ ಒಂದು ತೆರನಾದರೆ ವಿದ್ಯಾವಂತ ಕುಟುಂಬಗಳ ಸಮಸ್ಯೆಯೇ ಬೇರೆ ತೆರನಾದದ್ದು.

ಪ್ರೇಮಾಭಟ್‌ರವರ 'ತುತ್ತು' (ಕಥಾವರ್ಷ, ೨೦೦೭) ಕಥೆಯಲ್ಲಿ ಮಕ್ಕಳ ಸುಖವೇ ನಮ್ಮ ಸುಖ ಎಂದು ತಿಳಿದ ತಂದೆ- ತಾಯಿ ಹೃದಯ ವೈಶಾಲ್ಯತೆಯ ಚಿತ್ರಣವಿದೆ. ಮಗ ದಯಾನಂದನ ಹೆಂಡತಿ ಮನೆಯವರ ಆಜ್ಞೆಯಂತೆ ದಯಾನಂದನ ಅಪ್ಪ-ಅಮ್ಮ ಆಶ್ರಮದಲ್ಲಿ ಹೋಗಿ ಬದುಕುತ್ತಾರೆ. ತಾವು ಕಷ್ಟ ಅನುಭವಿಸಿದರೂ ಮಗನ ಸಂಸಾರ ಚೆನ್ನಾಗಿರಲಿ ಎಂದು ಹಾರೈಸುವ ತಂದೆ-ತಾಯಿಗಳಿಗೆ ಒಳಗಿಂದೊಳಗೆ ತಮಗೆ ಹೆಣ್ಣು ಮಗಳಿರುತ್ತಿದ್ದರೆ ... ಎಂದು ಅನಿಸುತ್ತದೆ.

ಪತ್ರದಲ್ಲಿ ತಾಯಿ ತಿಳಿಸುವ 'ಗಂಡು ಮಕ್ಕಳಿಗಿಂತ ಹೆಣ್ಣು ಮಗಳಿದ್ದರೆ ಸುಖ ಕಾಣೋ, ಅಳಿಯ ಒಳ್ಳೆಯನಾಗಿದ್ದರೆ ತುತ್ತುಕೊಟ್ಟವಳನ್ನು ಸಾಯೋಕಾಲದಲ್ಲಿ ನೋಡೋದು ಮಗಳೇ' (ಕಥಾವರ್ಷ ಪು. ೫, ೨೦೦೭) ಎಂಬ ಮಾತು ದಯಾನಂದನಿಗೆ ಛಾಟಿಯ ಏಟಿನಂತೆ ತಾಗುತ್ತದೆ. ಈ ಕಥೆ ಪ್ರಸ್ತುತ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ.

'ಗೀಳು' (ಕಥಾವರ್ಷ, ೨೦೦೭) ಕಥೆಯು ಎಷ್ಟೋ ಸಂದರ್ಭದಲ್ಲಿ ಮನೆಯ ಸುವ್ಯವಸ್ಥೆ ಹಾಳಾಗುವಲ್ಲಿ ಗಂಡನಾದವನ ಪಾತ್ರವೇ ಇರುತ್ತದೆ ಎಂಬುದನ್ನು ನಿರೂಪಿಸುತ್ತದೆ. ತನ್ನ ಹೆಂಡತಿ ಹಳ್ಳಿಯ ಗುಗ್ಗು. ಅವಳಿಗೆ ಚೆನ್ನಾಗಿ ಅಲಂಕಾರ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ ಎನ್ನುತ್ತಿದ್ದ ವಾಸುದೇವ ಪಕ್ಕದ ಮನೆಯ ಮಂಜುವನ್ನು ನೋಡುವುದರಲ್ಲಿಯೇ ಸಮಯ ಕಳೆಯುತ್ತಾನೆ. ಇದನ್ನು ತಿಳಿದ ವಾಸುದೇವನ ಹೆಂಡತಿ ತನಗೆ ಇಷ್ಟವಿಲ್ಲದಿದ್ದರೂ ಗಂಡನನ್ನು ಮೆಚ್ಚಿಸುವುದಕ್ಕಾಗಿ ಫ್ಯಾಷನ್ ಮಾಡತೊಡಗುತ್ತಾಳೆ.

ಕೊನೆಗೆ ವಾಸುದೇವನ ಹೆಂಡತಿ ದಾರಿ ತಪ್ಪುತ್ತಾಳೆ. ಇರುವುದರಲ್ಲೇ ತೃಪ್ತಿ ಕಾಣದೆ ಇಲ್ಲದುದರ ಕಡೆಗಿನ ತುಡಿತದಿಂದ ಮನಸ್ಸಿನ ನೆಮ್ಮದಿಯನ್ನೇ ಹಾಳುಮಾಡಿಕೊಳ್ಳಬೇಕಾಗುತ್ತದೆ. ಗಂಡನನ್ನು ಒಲಿಸಿ ಬಾಳುವುದರಲ್ಲೇ ಸುಖವಿದೆ ಎಂದು ತಿಳಿದ ವರದಾ ತನ್ನನ್ನು ತಾನು ನಿಯಂತ್ರಣದಲ್ಲಿಟ್ಟುಕೊಳ್ಳಲಾಗದೆ ಹೋಗುತ್ತಾಳೆ.

ತಮ್ಮ ಮಕ್ಕಳ ಸುಖಕ್ಕಾಗಿ ತಾವು ಅನಾತಾಶ್ರಮವನ್ನು ಸೇರುವುದಕ್ಕೂ ಸಿದ್ದರಿರುವ ತಂದೆ ತಾಯಿಗಳು ಸಮಾಜದಲ್ಲಿ ಸಿಗುವಂತೆ ಅದನ್ನು ಒಪ್ಪುವ ಮಕ್ಕಳು ಸಮಾಜದಲ್ಲಿ ಇದ್ದಾರೆ ಎನ್ನುವುದು ದುರಂತ. ಪ್ರೇಮಾಭಟ್‌ರವರ 'ತುತ್ತು' ಕತೆಯು ಇದನ್ನೇ ಹೇಳುತ್ತದೆ. ಎಷ್ಟೋ ಭಾರಿ ತನ್ನ ಗಂಡನಿಗೆ ಬೇರೆ ಹೆಣ್ಣುಗಳ ಕಡೆಗೆ ಮನಸ್ಸು ಹೋದಾಗ ಹೆಂಡತಿಯಾದವಳು ಬಲಾತ್ಕಾರವಾಗಿ ಗಂಡನನ್ನು ಒಲಿಸಿ ಬದುಕಲು ಪ್ರಯತ್ನಿಸುತ್ತಾಳೆ. 'ಗೀಳು' ಕತೆಯ ವರದಾ ಇದಕ್ಕೆ ಒಂದು ಒಳ್ಳೆ ಉದಾಹರಣೆಯಾಗಿ ಸಿಗುತ್ತಾಳೆ. ಅಂದರೆ ಎಲ್ಲಾ ಸಂದರ್ಭಗಳಲ್ಲೂ ಈ ಹೊಂದಾಣಿಕೆಗೆ ಒಪ್ಪುವವಳು ಹೆಣ್ಣೇ ಆಗಿರುತ್ತಾಳೆ.

ಬದುಕಿನ ಯಾವುದೋ ಒಂದು ಸಂದರ್ಭದಲ್ಲಿ ದಾರಿ ತಪ್ಪಿದ ಜನರು ಮತ್ತೆ ತಮ್ಮ ತಪ್ಪಿನ ಅರಿವಾದಾಗ ಅದನ್ನು ತಿದ್ದಿಕೊಂಡು ಬದುಕುವವರು ಇರುತ್ತಾರೆ. ಗಂಗಾ ಪಾದೇಕಲ್‌ರವರ 'ಇರುಳ ಹಿಂದಿನ ಬೆಳಗು' ಕತೆಯಲ್ಲಿ ಈ ವಿಚಾರ ಸ್ಪಷ್ಟವಾಗುತ್ತದೆ. ಒಂದು ಕತೆಯಿಂದ ಇನ್ನೊಂದು ಕತೆಗೆ, ಒಬ್ಬ ಲೇಖಕಿಯಿಂದ ಇನ್ನೊಬ್ಬ ಲೇಖಕಿಗೆ ಈ ಹೊಂದಾಣಿಕೆಯ ಪಾತ್ರಗಳು ಭಿನ್ನವಾಗುತ್ತಾ ಹೋಗುವುದನ್ನು ಗುರುತಿಸಬಹುದು.

೪.೯ ಲೈಂಗಿಕತೆ ಮತ್ತು ನೈತಿಕತೆ

ಲೈಂಗಿಕ ವಿಚಾರ ನಮ್ಮ ಸಮಾಜದ ಮಡಿವಂತಿಕೆಯ ಅಂಗ ವೈವಾಹಿಕ ಚೌಕಟ್ಟಿನಲ್ಲಿ ಅದಕ್ಕೆ ಬೆಲೆಯಿದೆ. ಅದರಾಚೆಗೆ ಲೈಂಗಿಕ ಸಂಬಂಧಗಳು ಅನೈತಿಕ ವಿಚಾರಗಳಾಗಿ ಬಿಡುತ್ತದೆ. ಇಂಥ ಕ್ಲಿಷ್ಟ ಹಾಗೂ ಸಂಕೀರ್ಣವಾದ ವಿಚಾರಗಳು ಕರಾವಳಿ ಲೇಖಕಿಯರ ಕಥೆಗಳಲ್ಲಿ ಚಿತ್ರಿತವಾಗಿವೆ, ಮಾತ್ರವಲ್ಲ ಈ ಲೇಖಕಿಯರು ಇಂಥ ವಿಷಯಗಳನ್ನು ಚರ್ಚೆಗೆ ಒಳಪಡಿಸುವ ರೀತಿ ಭಿನ್ನವಾಗಿದೆ. ಅವುಗಳೆಂದರೆ

- ❖ ವಿಧವೆಯೊಬ್ಬಳ ಲೈಂಗಿಕ ತುಡಿತಗಳ ಸರಿ-ತಪ್ಪ ವಿವೇಚನೆ
- ❖ ಸಮಾನ ಮನೋಧರ್ಮಗಳ ಸ್ತ್ರೀ-ಪುರುಷರ ಮುಕ್ತ ಲೈಂಗಿಕತೆಯ ವಿವೇಚನೆ
- ❖ ವಿಧವೆ- ವಿದುರರ ಲೈಂಗಿಕತೆಯ ಔಚಿತ್ಯ
- ❖ ಪುರುಷನ ಮನೋಲೈಂಗಿಕತೆಯ ಪರಿಣಾಮವಾಗಿ ಉಂಟಾಗುವ ಲೈಂಗಿಕ ಸಂಬಂಧಗಳ ಚರ್ಚೆ

❖ ಪುರುಷರ ಅಸಾಹಯಕತೆಯಿಂದ ಹೆಣ್ಣೊಬ್ಬಳು ಹೊಂದುವ ಲೈಂಗಿಕ ಸಂಬಂಧಗಳ ವಿವೇಚನೆ

ಈ ವಿಚಾರಗಳ ಕುರಿತಾದ ವಿವರಗಳು ಕಥೆಗಳಲ್ಲಿ ಕಾಣಸಿಕೊಳ್ಳುತ್ತವೆ.

ಗಂಗಾ ಪಾದೇಕಲ್‌ರವರ 'ಹದ್ದುಗಳು' (ಪುಲಪೇಡಿ ಮತ್ತು ಇತರ ಕಥೆಗಳು, ೧೯೮೭) ಕಥೆ ಸರ್ಕಾರಿ ಆಸ್ಪತ್ರೆಯೊಳಗಿನ ಕರಾಳ ಮುಖಗಳ ಪರಿಚಯ ಮಾಡಿಕೊಡುತ್ತದೆ. ಬಡ ರೋಗಿಗಳ ಪಾಲಿಗೆ ದೇವರೇ ಆಗಿ ಕಾಣಬೇಕಾದ ವೈದ್ಯರು, ನರ್ಸ್‌ಗಳ ರಾಕ್ಷಸೀ ನಡವಳಿಕೆ ಮನಕರಗುವಂತೆ ಚಿತ್ರಿತವಾಗಿದೆ. ಈ ಕಥೆಯಲ್ಲಿ ಬರುವ 'ಆಕೆ' ಗಂಡನ ಜೀವ ಉಳಿಸಿಕೊಳ್ಳಲು ಹೋಗಿ ತರುಣ ವೈದ್ಯನೊಬ್ಬನ ಕಾಮ ಪಿಪಾಸೆಯನ್ನು ತಣಿಸುವ ವಸ್ತುವಾಗಬೇಕಾಗುತ್ತದೆ.

ಬಡವರ ಜೀವಗಳಿಗೆ ಬೆಲೆಯಿಲ್ಲ, ಆಸ್ಪತ್ರೆಯ ನರಕ ಸದೃಶ ಒದ್ದಾಟಕ್ಕಿಂತ ಸಾವೇ ಮೇಲು ಎಂಬುದನ್ನು ಈ ಕಥೆ ನಿರೂಪಿಸುತ್ತದೆ.

ಗಂಗಾ ಪಾದೇಕಲ್‌ರವರ 'ಕಳ್ಳ' (ಹೆಜ್ಜೆ ಮೂಡದ ಹಾದಿಯಲ್ಲಿ , ೧೯೮೮) ಕಥೆಯು ಬಡವರ ಹೆಣ್ಣುಮಕ್ಕಳನ್ನು ಶ್ರೀಮಂತರು ನಡೆಸಿಕೊಳ್ಳುವ ರೀತಿಯನ್ನು ಚಿತ್ರಿಸುತ್ತದೆ. ಬೀಡಿ ಬ್ರಾಂಚಿನ ಮಾಪಿಳ್ಳೆ ಕಾಳಿಯನ್ನು ತನ್ನ ಕಾಮದ ಹಸಿವೆಯನ್ನು ನೀಗಿಸಿಕೊಳ್ಳಲು ಹೊಂಚು ಹಾಕುತ್ತಾನೆ. ಇತ್ತ ಕಾಳಿ ಹಾಗೂ ಆಕೆಯ ಅಣ್ಣ ಕೊರಗ ಹೊಟ್ಟೆಯ ಹಸಿವೆಯಿಂದ ಬಳಲುತ್ತಿದ್ದಾರೆ. ಮೂರು ದಿನ ಉಪವಾಸವಿದ್ದು ಧನಿಯ ಮನೆಗೆ ಬೇಡಲು ಬಂದಾಗ ಧನಿ ಹಾಗೂ ಆತನ ಹೆಂಡತಿ ನಡೆದುಕೊಳ್ಳುವ ರೀತಿ ಶ್ರೀಮಂತರ ಕ್ರೌರ್ಯ ಮುಖದ ಪರಿಚಯ ಮಾಡಿಕೊಡುತ್ತದೆ.

ಮಾಪಿಳ್ಳೆಯ ವ್ಯಂಗ್ಯದ ಮಾತುಗಳ ಬಾಣದಿಂದ ಬಿಡುಗಡೆ ಪಡೆಯಲು ಬೀಡಿ ಕಟ್ಟುವುದನ್ನೇ ನಿಲ್ಲಿಸುವ ಸಂದರ್ಭ ಒದಗಿ ಬರುತ್ತದೆ. ಬಡ ಹೆಣ್ಣು ಮಕ್ಕಳ ಯೌವ್ವನ ಹಾಗೂ ಸೌಂದರ್ಯ ಹಣವಂತರ ಸುಖಕ್ಕಾಗಿ ಎಂಬುದು ಈ ಕಥೆಯಲ್ಲಿ ವ್ಯಕ್ತವಾಗುತ್ತದೆ. ಬೀಡಿ ಬ್ರಾಂಚಿಗೆ ಹೋಗುವುದನ್ನು ನಿಲ್ಲಿಸುವುದರ ಮೂಲಕ ತಣ್ಣನೆಯ ಪ್ರತಿಭಟನೆ ತೋರುತ್ತಾಳೆ.

ವೈದೇಹಿಯವರ 'ಅವಲಂಬಿತರು' (ಅಲೆಗಳಲ್ಲಿ ಅಂತರಂಗ, ೨೦೦೬) ಕಥೆಯಲ್ಲಿ ತನ್ನ ಕಿತ್ತು ತಿನ್ನುವ ಬಡತನದಿಂದಾಗಿ ಸೂಚಮ್ಮ ಮಗಳಾದ ಅಹಲ್ಯಳನ್ನು ಶಾರದಳ ಮನೆಗೆ ಮಗು ಆಡಿಸುದಕ್ಕಾಗಿ ಕಳುಹಿಸುತ್ತಾಳೆ. ಆದರೆ ಮಗುವಾಡಿಸುವುದರ ಜೊತೆಗೆ ಮನೆಯ ಇತರ ಕೆಲಸಗಳನ್ನೂ ಆಕೆಯಿಂದ ಮಾಡಿಸುವ ಶಾರದ ಅಹಲ್ಯೆಯ ಪಾಲಿಗೆ ದೆವ್ವವಾಗುತ್ತಾಳೆ. ಆಕೆಯ ಸಹಜ ಆಶೆಗಳಿಗೆ ಕಡಿವಾಣ ಹಾಕುತ್ತಾಳೆ. 'ಹೌದು ನಿಂಗೆ ಫ್ಯಾನ್ ಬೇರೆ

ಹಾಕುತ್ತಾರೆ. ಮತ್ತೆ ಅಲ್ಲ ಹೆಣ್ಣೇ, ನೀನೆನಂತ ತಿಳಿದೆ? ಅವೆಲ್ಲ ಪುಗಸಟ್ಟೆ ಬರುತ್ತದೆ ಎಂತಲೆ?' (ಅಲೆಗಳಲ್ಲಿ ಅಂತರಂಗ. ಪು. ೧೪೯, ೨೦೦೬)[1] ಎನ್ನುವ ಶಾರದಳ ಮಾತು ಆಕೆಯ ಕ್ರೌರ್ಯ ಮನೋಭಾವನೆಯನ್ನು ಬಿಂಬಿಸುತ್ತದೆ. ಆದರೆ ಆಕೆಗೆ ಅಹಲ್ಯೆ ನೀಡುವ ತಿರುಗೇಟಿನಲ್ಲಿ ಶೋಷಣೆಯನ್ನು ವಿರೋಧಿಸುವ ಧ್ವನಿಯಿದೆ.

ಪ್ರೇಮಾಭಟ್‌ರವರ 'ಮಡಿ ಮುತ್ತೈದೆ' (ಕಥಾವರ್ಷ, ೨೦೦೭) ಕಥೆಯು ಹೆಂಡತಿಯನ್ನು ಕಳೆದು ಕೊಂಡ ಪುರುಷನೊಬ್ಬ ಇನ್ನೊಂದು ಹೆಣ್ಣಿನೊಂದಿಗೆ ಇಟ್ಟುಕೊಂಡ ಸಂಬಂಧವನ್ನು ಚಿತ್ರಿಸುವ ಕಥೆಯಾಗಿದೆ. ಪದ್ದಿ ಬಾಲ್ಯದಲ್ಲೆ ತಾಯಿಯನ್ನು ಕಳೆದುಕೊಂಡರೂ ತಾಯಿಯಿಂದ ಸಿಗುವ ಪ್ರೀತಿ ಜಲಜಕ್ಕನಿಂದ ಸಿಕ್ಕಿರುತ್ತದೆ. ತನ್ನ ತಂದೆಯೊಂದಿಗೆ ಜಲಜಕ್ಕನಿಗೆ ಸಂಬಂಧವಿದೆ ಎನ್ನುವುದು ಆಕೆಗೆ ತಿಳಿದಾಗ ಈ ಸಂಬಂಧಗಳ ಕುರಿತಾಗಿ ಯೋಚಿಸುತ್ತಾಳೆ.

ಮದುವೆ ಎಂಬ ಶಿಸ್ತಿಗೆ ಒಳಪಡದ ಸಂಬಂಧ ಅದು ಅನೈತಿಕ ಸಂಬಂಧವೇ? ಹಾಗಾದರೆ ಸಂಬಂಧದ ಅರ್ಥವೇನು? ಎಂಬ ಪ್ರಶ್ನೆಗಳು ಪದ್ದಿಯನ್ನು ಕಾಡುತ್ತವೆ.

ಹೆಣ್ಣು ಗಂಡಿನ ಲೈಂಗಿಕ ಸಂಬಂಧ ನೈತಿಕತೆಯ ಪರಿಧಿಯೊಳಗೆ ಉಳಿಯುವ ಹಾಗೂ ಕೆಲವೊಮ್ಮೆ ಅನೈತಿಕ ಎನಿಸಬಹುದಾದ ಸಂಗತಿಗಳನ್ನು ಕರಾವಳಿ ಕತೆಗಳು ಕಟ್ಟಿಕೊಡುತ್ತವೆ. ಗಂಗಾ ಪಾದೇಕಲ್‌ರವರ 'ಹದ್ದುಗಳು' ಕತೆಯಲ್ಲಿನ ಹೆಣ್ಣು, ಗಂಡನ ಜೀವ ಉಳಿಸಿಕೊಳ್ಳಲು ತರುಣ ವೈದ್ಯನೊಬ್ಬನ ಜೊತೆಗೆ ಹೊಂದುವ ಲೈಂಗಿಕ ಸಂಬಂಧ ಅದು ನೈತಿಕತೆಯ ಎಲ್ಲೆಯನ್ನು ದಾಟುವುದಿಲ್ಲ. ಪುರುಷನೊಬ್ಬನ ಕಾಮ ತೃಷೆ ಬಡ ಹೆಣ್ಣು ಮಕ್ಕಳ ಬದುಕನ್ನೇ ಹಾಳು ಮಾಡಿದಾಗ ಆತನನ್ನು ಕಾಡದ ನೈತಿಕ ಪ್ರಜ್ಞೆ ಹೆಣ್ಣನ್ನು ಕಾಡುತ್ತವೆ. ಅಂದರೆ ನೈತಿಕತೆ ಎನ್ನುವುದು ಸಮಾಜದಲ್ಲಿ ಯಾವ ಕಾಲಕ್ಕೂ ಹೆಣ್ಣಿಗೆ ಮಾತ್ರ ಆರೋಪಿಸುವ ವಿಚಾರವಾಗುತ್ತವೆ. ಅನೈತಿಕ ವ್ಯವಹಾರಕ್ಕೆ ಕಾರಣನಾದ ಪುರುಷ ದೋಷದಿಂದ ಮುಕ್ತಿ ಹೊಂದುತ್ತಾನೆ. ಪ್ರೇಮಾಭಟ್‌ರವರ 'ಮಡಿ ಮುತ್ತೈದೆ' ಕತೆಯು ಇದಕ್ಕೆ ಒಂದು ಉದಾಹರಣೆಯಾಗಿದೆ.

ಮಿತ್ರಾ ವೆಂಕಟ್ರಾಜ್‌ರವರ 'ಒಂದು ಒಸಗೆ ಒಯ್ಯುವುದಿತ್ತು' (ಹಕ್ಕಿ ಮತ್ತು ಅವಳು, ೧೯೯೭) ಕಥೆಯ ಜಲಜ ಚಿಕ್ಕಿ ಹಾಗೂ ಅಪ್ಪಣ್ಣ ಚಿಕ್ಕಪ್ಪಯ್ಯರ ಸಂಬಂಧ ಸಮಾಜದ ವಕ್ರದೃಷ್ಟಿಗೆ ಕಾರಣವಾಗುತ್ತದೆ. ಕುಟುಂಬದ ಸದಸ್ಯರೆಲ್ಲರೂ ಆಕೆಯನ್ನು ವಿರೋಧಿಸುತ್ತಿದ್ದರು. ಆ ಕಥೆಯ ದೊಡ್ಡತ್ತೆ ಹೇಳುವ 'ಅವಳ ಅವತಾರಕ್ಕಿಷ್ಟು! ನಾಚಿಕೆ ಮರ್ಯಾದೆ ಚೂರು ಕೇಣ್ ಬೇಡ' ! (ಹಕ್ಕಿ ಮತ್ತು ಅವಳು , ಪು. ೪, ೧೯೯೭) ಎಂಬ ಮಾತು ಅವಳ ಹಾಗೂ ಅಪ್ಪಣ್ಣ ಚಿಕ್ಕಪ್ಪಯ್ಯನ ಸಂಬಂಧದ ಕುರಿತದ್ದೇ ಆಗಿದೆ.

ಹೆಣ್ಣೊಬ್ಬಳು ತನಗೆ ಸರಿಕಂಡವನೊಡನೆ ಪ್ರೀತಿ – ವಿಶ್ವಾಸದಿಂದ ಜೀವನ ಸಾಗಿಸಿದಾಗ ಅದು ಸಮಾಜಬಾಹಿರವಾಗುತ್ತದೆ. ಸಮಾಜ ಒಪ್ಪಿದವನೊಡನೆ ಸಂಸಾರ ಸಾಗಿಸಿದರೆ ಅದು ನೈತಿಕತೆಯೆನಿಸುತ್ತದೆ ಎಂಬ ಪರಂಪರಾಗತ ಆಲೋಚನೆ ಈ ಕಥೆಯಲ್ಲಿ ಹಾಸುಹೊಕ್ಕಾಗಿದೆ. ಹೆಣ್ಣು ಎಂದರೆ ಹೀಗೇನೆ ಇರಬೇಕು ಎಂಬ ಸರಳ ರೇಖೆಯ ಆಲೋಚನೆ ಈ ಕಥೆಯಲ್ಲಿ ವ್ಯಕ್ತವಾಗುತ್ತದೆ. ನರ್ಮದೆ ಎಂಬ ಹೆಣ್ಣುಮಗಳು ಉಪ್ಪರಿಗೆಯಿಂದ ವೇಗವಾಗಿ ಓಡಿಬರುವುದನ್ನು ನೋಡಿ 'ಏನೇ ದಿಗಡ್ ದಿಮ್ಮಿ ಓಡುತ್ತೆಲ್ಲಿಗೆ?'(ಅದೇ... ಪು. ೫) ಎಂಬ ಆಕೆಯ ತಾಯಿಯ ಮಾತು ಇದನ್ನೇ ಸಮರ್ಥಿಸುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ಕತಿ ಹೇಳ್ ಪಾರಕ್ಕಾ' (ಹಕ್ಕಿ ಮತ್ತು ಅವಳು, ೧೯೯೭)
ಕಥೆಯ ಭೀಮಣ್ಣಯ್ಯ ಪುರುಷ ಪ್ರಧಾನ ಸಮಾಜದ ಗ್ರಹಿಕೆಗೆ ಸರಿಯಾಗಿ ಬದುಕಿದ ಪಾತ್ರ. ಒಂದು ಕಾಲಕ್ಕೆ ಪುರುಷನೊಬ್ಬನ ಯೋಗ್ಯತೆಯನ್ನು ಅಳೆಯುವುದರಲ್ಲಿ ಅವನ ಸಾಂಸಾರಿಕ ಬದುಕೂ ಮುಖ್ಯವಾಗುತ್ತಿತ್ತು. ಒಂದಕ್ಕಿಂತ ಹೆಚ್ಚು ಹೆಂಡತಿಯರನ್ನು ಪಡೆಯುವ ಅಥವಾ ಪಡೆದಿರುವ ವ್ಯಕ್ತಿ ಸಮಾಜದಲ್ಲಿ ಗೌರವಕ್ಕೆ ಪಾತ್ರನಾಗುತ್ತಿದ್ದ. ಭೀಮಣ್ಣಯ್ಯನ ತಾಕತ್ತಿನ ಬಗ್ಗೆ ಹೇಳುವಾಗ 'ಭೀಮಣ್ಣಯ್ಯ ಭಾಳ ನಿಯತ್ತಿನ ಮನುಷ್ಯ. ಮನೆಯಲ್ಲಿ ಹೆಂಡತಿಯನ್ ಬಿಟ್ರೆ, ಹೊರಗೆ ಕಾಶೀಬಾಯಿ ಒಬ್ಬಳೇ' (ಹಕ್ಕಿ ಮತ್ತು ಅವಳು, ಪು.೭, ೧೯೯೭) ಎಂಬ ಮಾತು ಆ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಸುತ್ತದೆ. ಪುರುಷನೊಬ್ಬ ಬೇರೆ ಹೆಣ್ಣಿನ ಸಹವಾಸ ಮಾಡಿದರೆ ಅದು ಅವನ ಯೋಗ್ಯತೆ, ಹೆಣ್ಣೊಬ್ಬಳು ಇಂಥ ಕೆಲಸ ಮಾಡಿದರೆ ಆಕೆ ವ್ಯಭಿಚಾರಿ ಎಂಬ ಪಟ್ಟ ಯಾವ ಕಾಲಕ್ಕೂ ತಪ್ಪಿದ್ದಲ್ಲ ಎಂಬ ವಾಸ್ತವವನ್ನು ನಿರೂಪಿಸುತ್ತದೆ.

ಹೆಣ್ಣೊಬ್ಬಳು ತನಗೆ ಸರಿ ಕಂಡವನ ಜೊತೆ ಸಂಬಂಧವಿರಿಸಿಕೊಂಡಾಗ ಅದು 'ಅನೈತಿಕತೆ' ಎಂಬ ಹೆಸರು ಪಡೆಯುತ್ತದೆ. ಸಮಾಜ ಇಷ್ಟ ಪಟ್ಟವನೊಡನೆ ಬದುಕು ಸಾಗಿಸುವುದು 'ನೈತಿಕತೆ'ಯಗುತ್ತದೆ. ಹೆಣ್ಣೊಬ್ಬಳು ಸ್ವಂತ ನಿರ್ಧಾರಗಳಿಗೆ ಬೆಲೆ ಕೊಡದೆ ಆಕೆಯ ಬದುಕನ್ನು ಸಮಾಜವೇ ನಿರ್ಧರಿಸುವುದು ದುರಂತ ವಿಚಾರವಾಗಿದೆ. ಮಿತ್ರಾ ವೆಂಕಟ್ರಾಜ್‌ರವರ 'ಒಂದು ಒಸಗೆ ಒಯ್ಯುವುದಿತ್ತು' ಎಂಬ ಕತೆಯು ಇದನ್ನೇ ಸ್ಪಷ್ಟಪಡಿಸುತ್ತದೆ.

ಒಂದು ಕಾಲದ ಸಾಮಾಜಿಕ ವ್ಯವಸ್ಥೆ ಪುರುಷನ ನಿಯತ್ತನ್ನು ನಿರ್ಧರಿಸುತ್ತಿದ್ದದು ಅವನು ಇಟ್ಟು ಕೊಂಡಿರುವ ಹೆಣ್ಣು ಮಕ್ಕಳ ಸಂಬಂಧದ ಮೇಲೇಯೇ ಆಗಿರುತ್ತಿತ್ತು. ಹೆಣ್ಣು ಆ ಕೆಲಸ ಮಾಡಿದಾಗ ವ್ಯಭಿಚಾರಿ

ಆಗುತ್ತಾಳೆ, ಅದೇ ಕೆಲಸವನ್ನು ಪುರುಷ ಮಾಡಿದಾಗ ಸುಭಗನೆನಿಸಿಕೊಳ್ಳುತ್ತಾನೆ. ಮಿತ್ರಾ ವೆಂಕಟ್ರಾಜ್‌ರವರ 'ಕತಿ ಹೇಳ್ ಪಾರಕ್ಕಾ...' ಕತೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

೫.೧೦. ವೈವಾಹಿಕ ಬಿಕ್ಕಟ್ಟು

ಗಂಗಾಪಾದೇಕಲ್‌ರವರ 'ಕಂದ ನಿಮ್ಮವಳೆಂದು ಕಾಣಿರಿ' (ವಾಸ್ತವ, ೧೯೯೬) ಕಥೆಯು ಕೌಟುಂಬಿಕ ಬಿರುಕಿನೊಂದಿಗೆ ನಲುಗಿಹೋಗುವ ಹೆಣ್ಣು ಜೀವನೊಂದರ ಬದುಕಿನ ಅಸ್ಥಿರತೆಯನ್ನು ಹೇಳುತ್ತದೆ. ತಾಯಿಯನ್ನು ಕಳೆದುಕೊಂಡ ಸರಸಿ ಅಜ್ಜಿ ಮನೆಯಲ್ಲಿ ಬೆಳೆಯುತ್ತಾಳೆ. ಎರಡನೇ ಮದುವೆಯಾದ ಅವಳಪ್ಪ ಮಗಳನ್ನು ಇಣುಕಿ ನೋಡುವುದಕ್ಕೂ ಬರುವುದಿಲ್ಲ. ಅತ್ತೆ – ಮಾವಂದಿರು, ಅವರ ಮಕ್ಕಳ ವ್ಯಂಗ್ಯದ ಮಾತುಗಳಿಗೆ ತುತ್ತಾಗಿ ಬದುಕುವ ಸರಸಿಯು ತಾಯಿಯನ್ನು ಕಳೆದುಕೊಂಡ ದನದ ಕರು ಬೆಳ್ಳಿಯೊಂದಿಗೆ ತನ್ನ ನೋವನ್ನು ಹಂಚಿಕೊಳ್ಳುತ್ತಾಳೆ.

ಜವಾಬ್ದಾರಿಯಿಲ್ಲದ, ಸಂಸಾರದಲ್ಲಿ ತಾಯಿಯನ್ನು ಕಳೆದುಕೊಂಡ ತಬ್ಬಲಿಯಾಗುವ ಮಕ್ಕಳ ಬದುಕಿನ ಬಗೆಗೆ ಈ ಕಥೆ ನೀಡುವ ಚಿತ್ರಣ ಹೃದಯ ವಿದ್ರಾವಕವಾದುದು. ಹೆಣ್ಣಿನ ಮನಸ್ಸು ಹೆಣ್ಣಿಗೆ ಅರ್ಥವಾಗದೆ ಎಲ್ಲರೂ ಜವಾಬ್ದಾರಿಯಿಂದ ಪಾರಾಗುವುದಕ್ಕೆ ಹೆಣಗುತ್ತಿರುವ ಈ ಸಮಾಜ ಹೀಗೆಯೇ? ಎಂಬ ಪ್ರಶ್ನೆ ಮನಸ್ಸನ್ನು ಕಾಡುತ್ತದೆ. ಗೋವಿನ ಹಾಡನ್ನು ನೆನಪಿಸುವ ಸ್ಥಿತಿಯಾಗಿದೆ ಸರಸಿಯದ್ದು.

ಪ್ರೇಮಾಭಟ್‌ರವರ 'ಹಂಗು' (ಕಥಾವರ್ಷ, ೨೦೦೭) ಕಥೆಯು ಮಕ್ಕಳು ದಾರಿ ತಪ್ಪುವಲ್ಲಿ ತಂದೆ – ತಾಯಿಯರ ಪಾತ್ರ ಇದೆ ಎನ್ನುವುದನ್ನು ಸ್ಪಷ್ಟಪಡಿಸುವ ಕಥೆ. ಭಾರ್ಗವಿಗೆ ತನ್ನ ಮಗ ಹಾಗೂ ಮಗಳು ವರ್ತಿಸುವ ರೀತಿ ತುಂಬಾ ಅಸಮಾಧಾನವನ್ನುಂಟು ಮಾಡುತ್ತದೆ. ಬುದ್ಧಿ ಹೇಳಿ ಸರಿ ದಾರಿಗೆ ತರುವುದಕ್ಕೆ ಹೋದಾಗ ಜಗಳವೇರ್ಪಡುತ್ತದೆ. ಬುದ್ಧಿ ಹೇಳಲು ಹೋದ ತಾಯಿಗೆ ದೇವಕಿ ಹೇಳುವ 'ನೀನೀಗ ಮೊದಲು ಅಪ್ಪ ಮತ್ತು ನಿನ್ನ ಸಂಬಂಧದ ಬಗ್ಗೆ ಯೋಚಿಸು, ಮತ್ತೆ ನನಗೆ ಉಪದೇಶ ಕೊಡಲು ಬಾ' (ಕಥಾವರ್ಷ, ಪು. ೮೬, ೨೦೦೭) ಎಂಬ ಮಾತು ಭಾರ್ಗವಿಯನ್ನು ಆಲೋಚಿಸುವಂತೆ ಮಾಡುತ್ತದೆ.

ಸಂಸಾರದ ಜವಾಬ್ದಾರಿಯಿಂದ ತಪ್ಪಿಸಿಕೊಂಡು ಆಶ್ರಮದಲ್ಲಿ ಹೋಗಿ ಬದುಕುವ ಗಂಡ, ಮನೆಯಲ್ಲಿ ಎಲ್ಲಾ ಭಾರಗಳನ್ನೂ ಹೊತ್ತು ಒದ್ದಾಡುವ ಹೆಂಡತಿ – ಇವು ಮಕ್ಕಳಿಗೆ ಕೊಡುವ ಸಂದೇಶವೇನು? ಎಂಬ ಪ್ರಶ್ನೆ ಯಜಮಾನ ಸಂಸ್ಕೃತಿಯನ್ನು ಪ್ರಶ್ನಿಸುವ ರೀತಿಯಲ್ಲಿ ಇದೆ.

೮.೧೧ ಲಿಂಗ ತಾರತಮ್ಯ

ಜೈವಿಕವಾಗಿ ಗಂಡು-ಹೆಣ್ಣಿನಲ್ಲಿ ವ್ಯತ್ಯಾಸವಿಲ್ಲದಿದ್ದರೂ ಈ ಸಮಾಜದಲ್ಲಿ ಮೊದಲಿನಿಂದಲೂ ಗಂಡು ಶ್ರೇಷ್ಠ, ಹೆಣ್ಣು ನಿಕೃಷ್ಟ ಎಂಬ ಭಾವನೆಯೇ ಬೆಳೆದು ಬಂದಿದೆ. ಹಾಗಾಗಿ ಹಿಂದಿನಿಂದಲೂ ಮಹಿಳೆ ಶೋಷಣೆಯನ್ನು ಅನುಭವಿಸಿಕೊಂಡೇ ಬಂದಿದ್ದಾಳೆ. ಇದರಿಂದ ಅವಳ ಶಕ್ತಿ-ಸಾಮರ್ಥ್ಯಗಳಿಗೆ ಬೆಲೆ ಇಲ್ಲದೆ ಹೋಗುವಂತಾಯಿತು. ಈ ಲಿಂಗ ತಾರತಮ್ಯ ಧೋರಣೆಯಿಂದಾಗಿ ಎಲ್ಲಾ ಯೋಗ್ಯತೆಗಳಿದ್ದಾಗ್ಯೂ ಮಹಿಳೆ ಎಷ್ಟೋ ಅವಕಾಶಗಳಿಂದ ವಂಚಿತಳಾಗಿದ್ದಾಳೆ. ಕರಾವಳಿ ಲೇಖಕಿಯರ ಕತೆಗಳಲ್ಲಿ ಈ ಲಿಂಗ ತಾರತಮ್ಯವನ್ನು ಹೇಳುವ ಎಷ್ಟೋ ಕತೆಗಳಿವೆ.

ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪಿದ ಹೆಣ್ಣು ಮಕ್ಕಳು ಅನಿವಾರ್ಯವಾಗಿ ಈ ಧೋರಣೆಯನ್ನು ಸ್ವೀಕರಿಸಿಕೊಂಡು ಬದುಕಿದರು. ಪುರುಷ ಪ್ರಧಾನ ವ್ಯವಸ್ಥೆಯನ್ನು ವಿರೋಧಿಸುವ ಹೆಣ್ಣು ಮಕ್ಕಳು ಅದನ್ನು ವಿರೋಧಿಸುತ್ತಲೇ ಮತ್ತೆ ಒಪ್ಪಿಕೊಳ್ಳಬೇಕಾದ ಸ್ಥಿತಿ ಉಂಟಾಯಿತು. ತಮ್ಮ ಅಸ್ಮಿತೆಯ ಹುಡುಕಾಟದಲ್ಲಿ ತೊಡಗಿದ ಹೆಣ್ಣುಮಕ್ಕಳು ಇದನ್ನು ವಿರೋಧಿಸಿದರು. ಈ ಮೂರೂ ನೆಲೆಗಳನ್ನು ಪ್ರತಿನಿಧಿಸುವ ಕತೆಗಳಲ್ಲಿ ಇದು ಸ್ಪಷ್ಟವಾಗುತ್ತದೆ.

ಗಂಗಾ ಪಾದೇಕಲ್‌ರವರ 'ಇದು ಬರಿ ಬೆಳಗಲ್ಲೋ ಅಣ್ಣಾ'(ಹೊಸ ಹೆಜ್ಜೆ, ೧೯೯೬)ಕಥೆಯು ಹೆಣ್ಣಿನ ದುಡಿಮೆಗೆ ಬೆಲೆಯಿಲ್ಲ ಎನ್ನುವುದನ್ನು ಚಿತ್ರಿಸುತ್ತದೆ. ಮನೆಯ ಕಷ್ಟ-ಕಾರ್ಪಣ್ಯಗಳಿಂದ ಬೇಸತ್ತ ಗೌರಿ ದೂರದ ಊರಿಗೆ ಹೋಗಿ ದುಡಿದು ತನ್ನ ತಾಯಿಗೆ ಹಣ ಕಳುಹಿಸುತ್ತಿದ್ದರೂ ಅದನ್ನು ಊರಿನಲ್ಲಿದ್ದ ಅಣ್ಣಂದಿರು ಖರ್ಚು ಮಾಡುತ್ತಿದ್ದರು. ಮದುವೆಗಿದ್ದ ಅಕ್ಕ ಬಾಡಿಗೆ ಎತ್ತಿನ ಹಾಗೆ ಮನೆಯಲ್ಲಿ ದುಡಿಯುತ್ತಿದ್ದರೂ ಅಣ್ಣ-ಅತ್ತಿಗೆಯರ ವ್ಯಂಗ್ಯ ಮಾತುಗಳಿಗೆ ಗುರಿಯಾಗುತ್ತಿದ್ದಳೇ ಹೊರತು ಅವಳನ್ನು ಯಾರೂ ಪ್ರೀತಿಯಿಂದ ಮಾತನಾಡಿಸುತ್ತಿರಲಿಲ್ಲ.

ತಲೆತಲಾಂತರದಿಂದ ನಮ್ಮ ಸಮಾಜದಲ್ಲಿ ಬೆಳೆದು ಬಂದ ಭಾವನೆಗಳು ಅಷ್ಟು ಸುಲಭದಲ್ಲಿ ಬದಲಾಗುವುದು ಸಾಧ್ಯವಿಲ್ಲ. 'ಅವಾದ್ರೆ ಗಂಡುಡುಗ್ರು, ನಾಳಿಕೆ ನಂಗೆ ತಿಥಿ ಮಾಡ್ಬೇಕಾದ್ರು ಅವ್ರೇಯ', (ಹೊಸ ಹೆಜ್ಜೆ, ಪು. ೧೦೫, ೧೯೯೬) ಎಂಬ ತಾಯಿಯ ಮಾತು ಇದನ್ನೇ ಸ್ಪಷ್ಟ ಪಡಿಸುತ್ತದೆ.

ಗಂಗಾ ಪಾದೇಕಲ್‌ರವರ 'ಒಂದಾನೊಂದು ಊರಲಿ' (ವಾಸ್ತವ, ೧೯೯೬ ಎಂಬ ಕಥೆಯು ಬಡವರಲ್ಲಿರುವ ನಿಷ್ಠೆ, ಪ್ರಾಮಾಣಿಕತೆ ಶ್ರೀಮಂತರಲ್ಲಿರುವುದಿಲ್ಲ ಎಂಬುದನ್ನು ಚಿತ್ರಿಸುತ್ತದೆ. ಐತನ ಮಗ ರಘು ಹಾಗೂ ಅವನ ಹೆಂಡತಿ ಪುಷ್ಪಾಳನ್ನು ವಸುಧಾಗೆ ಹೋಲಿಸುತ್ತಾರೆ. ಮದುವೆಗೆ ಮೊದಲೇ ಗರ್ಭವತಿಯಾಗಿ ಮುಂದೆ ಆರೇ

ತಿಂಗಳಲ್ಲಿ ಮಗುವಿಗೆ ಜನ್ಮಕೊಟ್ಟ ಪುಷ್ಪಳ ಬಗೆಗೆ ಅವಳ ತಾಯಿಯೇ ಕೆಟ್ಟದಾಗಿ ಮಾತನಾಡುತ್ತಾಳೆ. ಆದರೆ ತನ್ನ ಮಗ ಕುಮಾರ ಇಂಥದ್ದೇ ಕೆಟ್ಟ ಕೆಲಸ ಮಾಡಿದ್ದಾನೆ ಎಂದು ಗೊತ್ತಾದಾಗ ಅನಂತಯ್ಯ ಅದನ್ನು ಗುಟ್ಟಾಗಿ ಇಡುತ್ತಾನೆ.

ಅನಂತಯ್ಯನ ಪತ್ನಿ ಶಂಕರಿ ಹೇಳುವ 'ನೀವೆಷ್ಟಾದರೂ ಗಂಡಸರು ತಾನೆ? ನಿಮಗೆ ಹೆಣ್ಣಿನ ನೋವು ಹೇಗೆ ತಿಳಿಯಲು ಸಾಧ್ಯ? ತಪ್ಪು ಮಾಡುವುದು ಇಬ್ಬರೂ ಸೇರಿಯೇ ಆದರೂ ಶಿಕ್ಷೆ ಅನುಭವಿಸುವವಳು ಹೆಣ್ಣು ಮಾತ್ರವೇ' (ವಾಸ್ತವ, ಪು. ೨೨, ೧೯೯೬) ಎಂಬ ಮಾತು ಪುರುಷ ಪ್ರಧಾನ ಆಲೋಚನೆಯ ವಿರುದ್ಧದ ಪ್ರತಿಭಟನೆ ಆಗಿದೆ.

ಮಿತ್ರಾ ವೆಂಕಟ್ರಾಜ್‌ರವರ 'ಇಲ್ಲೊಬ್ಬಳು ಸೀತೆ' (ಹಕ್ಕಿ ಮತ್ತು ಅವಳು, ೧೯೯೭)ಕಥೆಯು ಹೆಣ್ಣೊಬ್ಬಳು ಕೌಟುಂಬಿಕ ಬದುಕಿನೊಳಗೆ ಹೇಗೆ ಪಳಗಿಸಲ್ಪಟ್ಟಿದ್ದಳು ಎಂಬುದನ್ನು ಚಿತ್ರಿಸುತ್ತದೆ. ಪುರುಷ ನಿರ್ಮಿತ ಸಮಾಜ ಹೆಣ್ಣನ್ನು ಕಾಣುತ್ತಿದ್ದ ದೃಷ್ಟಿಕೋನ ಸೀತೆಯ ಬಗೆಗಿನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. 'ಆ ಕಾಲದಾಗೆ ಗಂಡನ್ನ ಬಿಟ್ಟ್ ಸಂನ್ಯಾಸಿ ಹಿಂದೆ ಓಡಿದ್ದಲ್ದ ಅವಳು ?' (ಹಕ್ಕಿ ಮತ್ತು ಅವಳು, ಪು. ೫೧, ೧೯೯೭) ಎಂದು ಸೀತಜ್ಜಿಯ ಬಗೆಗಿನ ಮಾತು ಹೆಣ್ಣೊಬ್ಬಳಿಗೆ ಸ್ವತಂತ್ರ ನಿರ್ಧಾರಗಳಿಲ್ಲ ಎಂಬುದನ್ನು ಮನದಟ್ಟು ಮಾಡುತ್ತದೆ.

ಹೆಣ್ಣಿನ ಬದುಕಿನ ಇನ್ನೊಂದು ಮುಖವೂ ಈ ಕಥೆಯಲ್ಲಿ ಕಾಣಸಿಗುತ್ತದೆ. 'ಹಾಂಗೆ ಕೇಂಡ್ರೆ ಅತ್ತೆ ಕಾಟ ಅಂದ್ರೆ ಒಂದು ದೊಡ್ಡ ಸಂಗ್ತಿಯ ಆಗ' ಎಂಬ ಮಾತಾಗಲಿ, 'ಅತ್ತೆ ಪಟ್ಟ ಇಪ್ಪುದೇ ಸೊಸೆನ್ನ ಹದ ಬರ್ಸೂಕಲ್ದ?' (ಹಕ್ಕಿ ಮತ್ತು ಅವಳು, ಪು. ೫೩, ೧೯೯೭) ಎಂಬ ಮಾತಾಗಲೀ ಒಂದು ಕಾಲದ ಅತ್ತೆ - ಸೊಸೆಯ ಸಂಬಂಧವನ್ನು ಕಟ್ಟಿಕೊಡುತ್ತದೆ. ಪ್ರೀತಿಯಿಲ್ಲದ ಮದುವೆ, ಅರ್ಥವಿಲ್ಲದ ಬದುಕು ದಾಂಪತ್ಯವಾಗುವುದಿಲ್ಲ. 'ಆಗೆಲ್ಲ ಗಂಡ ಅಂಬೋನು ಹೆಂಡ್ತಿ ಕೈಲಿ ಮಾತಾಡುದಾಯ್ಲ್ಲಿ, ಕಾಂಬ್ದ್ ಕೇಂಬ್ದ್ ಆಯ್ಲಿ ಕ್ರಮ ಇಲ್ಲ' (ಅದೇ. ಪು.೫೪) ಎನ್ನುವ ಮಾತು ಆ ಕಾಲದ ಗಂಡ-ಹೆಂಡತಿಯ ವಿಚಿತ್ರ ಬದುಕನ್ನು ಕಟ್ಟಿಕೊಡುತ್ತದೆ.

ಸಾರಾ ಅಬೂಬಕ್ಕರ್‌ರವರ 'ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ' (ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ೧೯೯೬)ಎಂಬ ಕಥೆ ಅಪ್ಪ – ಅಮ್ಮವನರು ಗಂಡು ಮಕ್ಕಳು ಹಾಗೂ ಹೆಣ್ಣುಮಕ್ಕಳ ನಡುವೆ ತೋರಿಸುವ ತಾರತಮ್ಯವನ್ನು ಸ್ಪಷ್ಟಪಡಿಸುತ್ತದೆ. ತಂದೆ ಗಂಡುಮಕ್ಕಳಿಗಷ್ಟೇ ಆಸ್ತಿ ಪಾಲು ಕೊಟ್ಟಾಗ ಮಗಳು ಅದರ ವಿರುದ್ಧ ಪ್ರತಿಭಟಿಸುತ್ತಾಳೆ. ಆದರೆ ಗಟ್ಟಿಯಾಗಿ ನೆಲೆಯೂರಿರುವ ಸಾಮಾಜಿಕ ವ್ಯವಸ್ಥೆಯ ಬೇರುಗಳನ್ನು ಅಲ್ಲಾಡಿಸಲು ಸಾಧ್ಯವಾಗದ್ದರಿಂದ ಮಗಳು ಅಪ್ಪನಿಗೆ ನೀತಿಯ ಮಾತನ್ನಷ್ಟೇ ಹೇಳಿ ಹೊರಟು ಹೋಗುತ್ತಾಳೆ. ಪ್ರಸ್ತುತ ಸಮಾಜಕ್ಕೆ

ಒಪ್ಪಿತವಾಗುವ ಈ ಕಾಲದ ಹೆಣ್ಣು ಮಗಳೊಬ್ಬಳ ಮಾತಿನ ಮೂಲಕ ಸಾಮಾಜಿಕ ಬದಲಾವಣೆಯನ್ನು ಬಯಸುವ ಕಥೆ ಇದಾಗಿದೆ.

ಮುಸ್ಲಿಂ ಸಮುದಾಯದ ಸಂವೇದನೆಗಳೆಂದು ಪ್ರತ್ಯೇಕಗೊಳಿಸದ ಹಾಗೆ ಹುಟ್ಟುವ ಪ್ರಶ್ನೆಗಳು, ಕೇಳುವ ನ್ಯಾಯಗಳು ಇಡೀ ಸ್ತ್ರೀ ಸಮುದಾಯಕ್ಕೆ ಅನ್ವಯಿಸುವಂತೆ ಸಾರಾರವರ ಕಥೆಗಳ ಪಾತ್ರಗಳಲ್ಲಿ ಗೋಚರಿಸುತ್ತವೆ.

ಗಂಗಾ ಪಾದೇಕಲ್‌ರವರ 'ಇದು ಬರಿ ಬೆಳಗಲ್ಲೋ ಅಣ್ಣಾ' ಕತೆಯ ಗೌರಿ ದೂರದ ಊರಿಗೆ ಹೋಗಿ ದುಡಿದು ಮನೆಗೆ ಹಣ ಕಳುಹಿಸುತ್ತಿದ್ದರೂ ಮನೆಯವರು ಅದನ್ನು ಖರ್ಚು ಮಾಡುವುದಲ್ಲದೇ ಅವಳ ಬಗೆಗೆ ತಾಳುವ ನಿರ್ಲಕ್ಷ್ಯ ಭಾವನೆಯು ಹೆಣ್ಣಿನ ದುಡಿಮೆಗೆ ಬೆಲೆ ಇಲ್ಲ ಎನ್ನುವುದನ್ನು ಮನದಟ್ಟು ಮಾಡುತ್ತದೆ. ಹೆಣ್ಣು ಎಷ್ಟೂ ದುಡಿದರೂ ಬೇರೆಯವರ ವ್ಯಂಗ್ಯ-ತಿರಸ್ಕಾರಗಳಿಗೆ ಗುರಿಯಾಗುತ್ತಾಳೆಂದು, ಗಂಡಸರ ದುಡಿಮೆ ಮಾತ್ರ ದುಡಿಮೆ ಎಂದು ಅನಿಸಿಕೊಳ್ಳುವ ಸಮಾಜ ಇಲ್ಲಿ ತಾಳುವುದು ಲಿಂಗತಾರತಮ್ಯ ಧೋರಣೆಯೇ ಆಗಿದೆ.

ಮಾನ-ಅವಮಾನದ ಪ್ರಶ್ನೆ ಬಂದಾಗ ಸಮಾಜ ಬೆರಳು ಮಾಡಿ ತೋರಿಸುವುದು ಹೆಣ್ಣನ್ನು. ಆಕೆ ತಪ್ಪು ಮಾಡಿದಾಗ ಸಿಗುವ 'ನೀತಿಗೆಟ್ಟವಳು' ಎಂಬ ಬಿರುದು ಗಂಡಿನ ಪಾಲಿಗೆ ಸಿಗುವುದೇ ಇಲ್ಲ. 'ಒಂದಾನೊಂದು ಊರಲಿ' ಕತೆ ಇದನ್ನೇ ಹೇಳುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ನಮ್ಮಲ್ಲೊಬ್ಬಳು ಸೀತೆ' ಕತೆಯಲ್ಲಿ ಹೆಣ್ಣಿನ ಬಗೆಗಿನ ತುಚ್ಛ ಭಾವನೆ ಎದ್ದು ಕಾಣುತ್ತದೆ. ಗಂಡನನ್ನು ಬಿಟ್ಟು ಸಂನ್ಯಾಸಿಯ ಹಿಂದೆ ಓಡಿದವಳು ಎಂದು ಹೆಣ್ಣನ್ನು ಹೀಗಳೆಯುತ್ತದೆ ಹೊರತು ಅದಕ್ಕೆ ಕಾರಣಗಳನ್ನು ಹುಡುಕುವ ಪರಯತ್ನ ಮಾಡುವುದಿಲ್ಲ. ಇಂದು ಹಿರಿಯರ ಆಸ್ತಿಯಲ್ಲಿ ಹೆಣ್ಣು ಪಾಲುದಾರಳೂ ಎಂದಾದರೂ ಒಂದು ಕಾಲಕ್ಕೆ ಗಂಡು ಮಗನೇ ಅದರಲ್ಲಿ ಪ್ರಧಾನ ಪಾಲುದಾರನಾಗಿರುತ್ತಿದ್ದ.

ಸಾರಾ ಅಬೂಬಕ್ಕರ್‌ರವರ 'ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ' ಎಂಬ ಕತೆಯೂ ಇದನ್ನೇ ಹೇಳುತ್ತದೆ. ಆದರೆ ಈ ಕತೆಯ ಹೆಣ್ಣು ಮಗಳು ಅದನ್ನು ಪ್ರಶ್ನಿಸಿ ಮನೆ ಬಿಟ್ಟು ಹೊರಟು ಹೋಗುತ್ತಾಳೆ. ಇಲ್ಲಿ ಆಕೆ ಮನೆ ಬಿಟ್ಟು ಹೋಗುವುದು ಆಕೆಯ ಅಸಹಾಯಕ ಸ್ಥಿತಿಯಾದರೂ ಕೂಡಾ ಪ್ರಶ್ನಿಸುವ ಧೈರ್ಯ ತಂದುಕೊಂಡದ್ದು ಮಾತ್ರ ಸಮಾಜದ ಕಣ್ಣು ತೆರೆಸುವ ಸಂಗತಿಯೇ ಆಗಿದೆ. ಅಂದರೆ ಸಾರಾರವರ ಈ ಕತೆ ಸಮಾಜದಲ್ಲಿ ಒಂದು ರೀತಿಯ ಎಚ್ಚರ ಮೂಡಿಸುವ ಕತೆಯಾಗಿ ಕಾಣುತ್ತದೆ.

೮.೧೨. ಸ್ತ್ರೀ-ಶಿಕ್ಷಣ

ಶಿಕ್ಷಣ ಪಡೆಯುವ ಹಕ್ಕು ಪುರುಷನಷ್ಟೇ ಸ್ತ್ರೀಗೂ ಇದ್ದಾಗ ನಮ್ಮ ಪರಂಪರೆಯಲ್ಲಿ ಹೆಣ್ಣು ಅದರಿಂದ ವಂಚಿತಳಾದದ್ದು ನಮ್ಮ ತಗಮನಕ್ಕೆ ಬರುತ್ತದೆ. ನಮ್ಮ ಸಮಾಜವು ನಾನಾ ಕಾರಣಗಳನ್ನು ಹೆಣ್ಣಿನ ಮೇಲೆ ಆರೋಪಿಸಿ ಆಕೆಯನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಿತ್ತು. ಆ ಕಾರಣಗಳೆಂದರೆ,

- ಹೆಣ್ಣು ವಿವಾಹವಾಗಿ ಹೋಗುವವಳಾದ್ದರಿಂದ ಆಕೆಗೆ ಶಿಕ್ಷಣದ ಅಗತ್ಯವಿಲ್ಲ.
- ಸಂಸಾರ ನಿರ್ವಹಣೆಯೇ ಹೆಣ್ಣಿನ ಬದುಕಿನ ಸಾರ್ಥಕತೆಯಾಗಿರುವುದುರಿಂದ ಶಿಕ್ಷಣದ ಅಗತ್ಯವಿಲ್ಲ.
- ಹೆಣ್ಣಿನ ಬಗೆಗಿನ ತಾತ್ಸಾರ ಹಾಗೂ ಲಿಂಗಭೇದದೃಷ್ಟಿ.
- ಹೆಣ್ಣು ಹೆಚ್ಚು ಓದಿದರೆ ಅವಳ ಮದುವೆಗೆ ತೊಂದರೆಯಾಗುತ್ತದೆ ಎನ್ನುವ ಮನೋಭಾವ.
- ಹೆಚ್ಚು ವಿಧೇಯನ್ನು ಸಂಪಾದಿಸಿದ ಹೆಣ್ಣು ಮಗಳೂ ಸಂಸಾರ ನಿಭಾಯಿಸಲಾರಳು ಎಂಬ ಪೂರ್ವಾಗ್ರಹ.

ಗಂಗಾ ಪಾದೇಕಲ್‌ರವರ 'ಅಂತ್ಯವಲ್ಲ. . . ಆರಂಭ' (ಈ ಪ್ರಜಾ ರಾಜ್ಯದೊಳಗೆ, ೨೦೦೬) ಕಥೆಯಲ್ಲಿ ಹೆಣ್ಣು ಮಕ್ಕಳು ಸ್ವಾವಲಂಬನೆಯ ಬದುಕನ್ನು ಮಟ್ಟ ಹಾಕುವ ಪುರುಷ ದಬ್ಬಾಳಿಕೆಯ ಚಿತ್ರಣವಿದೆ. ಗಿರಿಜಮ್ಮ ತಾನೊಬ್ಬಳೇ ಹಳ್ಳಿಯಲ್ಲಿ ನಿಂತು ಅಲ್ಲಿನ ಮಹಿಳೆಯರಿಗಾಗಿ 'ವಿಕಾಸ ಕೇಂದ್ರ'ವನ್ನು ಸ್ಥಾಪಿಸಿದ್ದು ಆ ಊರಿನ ಗೋವಿಂದಪ್ಪನಿಗೆ ಸಹಿಲಾಗುವುದಿಲ್ಲ. ಗಿರಿಜಮ್ಮ ಇಲ್ಲದ ಹೊತ್ತಲ್ಲಿ ಆಕೆಯ ಮನೆಯನ್ನು ಸುಟ್ಟು ಬಿಡುತ್ತಾನೆ. ಅವನ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಬೇಕೆನ್ನುವ ಹುನ್ನಾರ ಗಿರಿಜಮ್ಮನದ್ದಾದರೂ ಸುಟ್ಟುಹೋದ ಮನೆಯ ಬದಲಿಗೆ ಇನ್ನೊಂದು ಮನೆ ಕಟ್ಟಿಸುವ ಮೂಲಕ ನಿಜವಾದ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಗಿರಿಜಮ್ಮನ ಊರಲ್ಲಿ ಹೆಣ್ಣು ಮಕ್ಕಳು ಬೇಕಾದಷ್ಟಿದ್ದರೂ ಗಿರಿಜಮ್ಮನ ಮನೋಭಾವದವರಾರೂ ಇಲ್ಲದ ಕಾರಣ ಆಕೆ ಒಂಟಿ ಹೆಣ್ಣಾಗಿಯೇ ಕಾಣಿಸಿಕೊಳ್ಳುತ್ತಾಳೆ. ಮನಸ್ಸಲ್ಲಿದ್ದ ದಿಟ್ಟತನವನ್ನು ತನ್ನ ಬದುಕನ್ನು ಅಂತ್ಯಗೊಳಿಸಲು ಹೊರಟವರ ಮುಂದೆ ಆರಂಭಗೊಳಿಸಿ ಅದೇ ಹಳ್ಳಿಯಲ್ಲಿ ಬಾಳಿ - ಬದುಕುವ ಸಾಹಸ ಮಾಡುತ್ತಾಳೆ.

ವೈದೇಹಿಯವರ 'ಅಂತರಂಗದ ಪುಟಗಳು' (ಅಲೆಗಳಲ್ಲಿ ಅಂತರಂಗ, ೨೦೦೬) ಕಥೆಯ ಅಚಲ ತನಗೆ ಸರಿಯೆನಿಸುವ ಹುಡುಗನನ್ನು ಮದುವೆಯಾಗಬೇಕು ಎನ್ನುವ ಕಾರಣಕ್ಕಾಗಿ ನೋಡಲು ಬಂದ ಹುಡುಗರನ್ನೆಲ್ಲಾ ತಿರಸ್ಕರಿಸುತ್ತಾಳೆ. ಇಲ್ಲಿ ಆಕೆ ಸೂಕ್ಷ್ಮಗ್ರಾಹಿಯಾದ ದಿಟ್ಟ ಹೆಣ್ಣಾಗಿ ಕಾಣುತ್ತಾಳೆ. ಆಕೆ ತೆರೆದಿಡುವ ಅಂತರಂಗದ

ಪುಟಗಳು ಮನಸ್ಸೆಂಬ ಪ್ರಪಂಚದ ಕುತೂಹಲಕರ ಅಂಶಗಳನ್ನು ಒಳಗೊಂಡಿದೆ. 'ಯಾರ ಕಣ್ಣಲ್ಲಿಯೂ ದೀಪದ ಕಾಂತಿಯನ್ನು ನಾ ಕಾಣಲಿಲ್ಲ, ಇವನ ಮಗುವನ್ನು ನಾನು ಧರಿಸಬೇಕು ಎಂಬ ಅದಮ್ಯ ಇಚ್ಛೆ ಉಂಟಾಗಲಿಲ್ಲ' (ಅಲೆಗಳಲ್ಲಿ ಅಂತರಂಗ, ಪು. ೨೨೩, ೨೦೦೬) ಎಂಬ ಆಕೆಯ ಮಾತುಗಳಲ್ಲಿ ಒತ್ತಾಯದ ಸಂಸಾರ ನರಕ ಸದೃಶ ಎಂಬ ಭಾವನೆಯಿಂದ. 'ಇನ್ನೆಂತದು? ಅಪ್ಪ ಅಮ್ಮ ಇರುವವರೆಗೆ ಸೈ. ಆಮೇಲೆ ನಿನ್ನನ್ನು ಯಾರು ನೋಡಿಕೊಳ್ಳುತ್ತಾರೆ? ಎಂಬ ಪುಟ್ಟತ್ತೆಯ ಮಾತುಗಳಲ್ಲಿ ಪರಂಪರಾಗತ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಯಿದೆ.

ಗಂಗಾ ಪಾದೇಕಲ್‌ರವರ 'ದಿಕ್ಸೂಚಿ' (ಹೊಸ ಹೆಜ್ಜೆ, ೧೯೯೬) ಕಥೆಯ ಸರಸ ಮದುವೆಯಾಗಿ ಗಂಡನ ಸುಖ ಕಾಣದ ಹತಭಾಗಿನಿ. ಊರವರೆಲ್ಲ ಅವಳ ನಡತೆಯನ್ನು ಸಂಶಯದಿಂದ ಕಂಡು ಕಥೆ ಕಟ್ಟಿದವರು. ಪ್ರೈಮರಿ ಶಾಲೆಯಲ್ಲಿ ಮೇಷ್ಟ್ರಾಗಿದ್ದ ಸರಸಳ ಗಂಡ ದೇವರ ಭಕ್ತಿ ಹೆಚ್ಚಾಗಿ ಕೆಲಸವನ್ನೂ ಬಿಟ್ಟು ಬಂದಿದ್ದು ಸರಸಳ ಬದುಕಿಗೆ ಒಂದು ಕಂದಕವಾಯಿತು.

ತನ್ನ ಸಮಸ್ಯೆಗೆ ತಾನೇ ಪರಿಹಾರ ಕಂಡುಕೊಳ್ಳುವಂತೆ ರೋಗಿಷ್ಠ ಮಾವನನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಆರೈಕೆ ಮಾಡುತ್ತಾ ತಾನು ನರ್ಸಿಂಗ್ ಟ್ರೈನಿಂಗ್ ಮಾಡುವುದಾಗಿ ನಿರ್ಧರಿಸುತ್ತಾಳೆ. ತನ್ನ ಬದುಕಿನ ದಾರಿಯನ್ನು ತಾನೇ ಕಂಡುಕೊಳ್ಳುವ ಸರಸ ನಡೆವ ದಾರಿಯಲ್ಲಿ ಅನೇಕ ಕಲ್ಲು-ಮುಳ್ಳುಗಳ ನೋವನ್ನು ಅನುಭವಿಸಲೇ ಬೇಕಾಯಿತು. ಈ ಕತೆಯ ಸರಸ ಪುರುಷಾಧಿಕಾರದ ಪ್ರತಿಭಟನೆಯೊಂದಿಗೆ ತನ್ನ ಬದುಕನ್ನು ಕಟ್ಟಿಕೊಂಡಳು.

ವೈದೇಹಿಯವರ 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ' (ಅಲೆಗಳಲ್ಲಿ ಅಂತರಂಗ, ೨೦೦೬) ಕಥೆಯಲ್ಲಿ ವೈದೇಹಿಯವರು ಸ್ವಾವಲಂಬನೆಯ ಬದುಕಿನ ಬಗೆಗೆ ಬೆಳಕು ಚೆಲ್ಲುತ್ತಾರೆ. ಸಮಾಜ ಶಾಸ್ತ್ರಜ್ಞೆ ಹೆಣ್ಣು ಇದಕ್ಕೆ ನಿದರ್ಶನವಾಗಿದ್ದಾಳೆ. ಪರಂಪರಾಗತ ವ್ಯವಸ್ಥೆಯ ಒಳಗೆ ಹೆಣ್ಣನ್ನು ಬಂಧಿಯಾಗಿಸುವ ಹುನ್ನಾರವನ್ನು ಒಪ್ಪಿಕೊಳ್ಳುವ ಸ್ಥಿತಿಯು ಈ ಕಥೆಯ 'ವಾಗತ್ತೆ'ಯ ಮೂಲಕ ಸ್ಪಷ್ಟವಾಗುತ್ತದೆ. ಆಕೆ ಸಮಾಜ ಶಾಸ್ತ್ರಜ್ಞೆಗೆ ಹೇಳುವ, 'ಹೆಣ್ಣೇ ಏನಂತ ತಿಳಿದಿದ್ದಿ? ಮುಂಚಿನ ಕಾಲದ ಗಂಡಸರೇ ಹೀಗೆ. ಹೆಂಗಸರನ್ನು ಎಲ್ಲಿ ಇಡಬೇಕೋ ಅಲ್ಲೇ ಇಟ್ಟದ್ದಕ್ಕೆ ಬಚಾವಾದರು' (ಅಲೆಗಳಲ್ಲಿ ಅಂತರಂಗ, ಪು. ೩೬೨, ೨೦೦೬) ಎಂಬ ಮಾತಿನಲ್ಲಿ ವ್ಯವಸ್ಥೆಯ ಬಗೆಗಿನ ಪ್ರತಿಭಟನೆ ಇದೆ.

ಗಂಗಾ ಪಾದೇಕಲ್‌ರವರ 'ಅಂತ್ಯವಲ್ಲ..... ಆರಂಭ' ಕತೆಯ ಗಿರಿಜಮ್ಮ ಊರಿನ ಮುಖಂಡ ಗೋವಿಂದಪ್ಪ ಮಾಡಿದ ಅನ್ಯಾಯಕ್ಕೆ ಪ್ರತೀಕಾರವಾಗಿ ಹೊಸಮನೆಯನ್ನು ಕಟ್ಟಿಸುವುದಕ್ಕೆ ಧೈರ್ಯ ಬಂದದ್ದೇ ಆಕೆ ಪಡೆದ

ಶಿಕ್ಷಣದಿಂದಾಗಿಯೇ. ಹೆಣ್ಣು ವಿದ್ಯಾವಂತಳಾದರೆ ಇಡೀ ಕುಟುಂಬವೇ ಶಿಕ್ಷಣ ಪಡೆದಂತೆ ಎಂಬ ಮಾತಿಗೆ ಪೂರಕವಾಗಿ ಗಿರಿಜಮ್ಮನ ಪಾತ್ರ ಮೂಡಿ ಬಂದಿದೆ. 'ದಿಕ್ಸೂಚಿ' ಕತೆಯ ಸರಳ ತೆಗೆದುಕೊಳ್ಳುವ ಸ್ವತಂತ್ರ ನಿರ್ಧಾರವೂ ಆಕೆ ಪಡೆದ ಶಿಕ್ಷಣದಿಂದಾಗಿ ಮಾತ್ರ ಸಾಧ್ಯವಾಯಿತು ಎನ್ನುವುದನ್ನು ಒಪ್ಪಿಕೊಳ್ಳಬೇಕು.

ವೈದೇಹಿಯವರ 'ಅಂತರಂಗದ ಪುಟಗಳು' ಕತೆಯ ಅಚಲ ತನಗೆ ಬೇಕಾದ ವರನನ್ನು ತಾನೇ ಹುಡುಕಿಕೊಳ್ಳುತ್ತೇನೆ ಎನ್ನುತ್ತಾ ನೋಡಲು ಬಂದ ಹುಡುಗರನ್ನೆಲ್ಲಾ ತಿರಸ್ಕಾರ ಮಾಡುವುದಕ್ಕೆ ಸಾಧ್ಯವಾಗುವುದು ಆಕೆ ಪಡೆದ ಶಿಕ್ಷಣದಿಂದಾಗಿ ಎನ್ನುವುದು ಮನದಟ್ಟಾಗುತ್ತದೆ. ಹೆಣ್ಣು ಶಿಕ್ಷಣ ಪಡೆದು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ಧೈರ್ಯ ತಂದುಕೊಂಡಾಗಲೂ ಅದಕ್ಕೆ ಕುಟುಂಬದಿಂದ, ಸಮಾಜದಿಂದ ವಿರೋಧ ಬಂದೇ ಬರುತ್ತದೆ. ಆಕೆ ಎಲ್ಲರ ಎದುರು 'ಗಂಡುಭೀರಿ' ಎಂಬ ಪಟ್ಟವನ್ನು ಗಿಟ್ಟಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಗಂಗಾ ಪಾದೇಕಲ್ ಹಾಗೂ ಮಿತ್ರಾ ವೆಂಕಟ್ರಾಜ್‌ರವರ ಈ ಮೇಲಿನ ಕತೆಗಳು ಹೆಣ್ಣಿನ ಅಸ್ಮಿತೆಯ ಕುರುಹುಗಳಾಗಿ ಕಾಣಿಸಿಕೊಳ್ಳುತ್ತವೆ.

೮.೧೩. ಸ್ತ್ರೀ-ಸ್ವಾತಂತ್ರ್ಯ

ಸ್ವಾತಂತ್ರ್ಯ ಎನ್ನುವುದು ಹೆಣ್ಣಿಗೆ ಬೇರೆಯವರು ಕೊಡುವಂತದ್ದಲ್ಲ. ಆಕೆಯೇ ಪಡೆದುಕೊಳ್ಳುವಂತದ್ದು. ಅದು ಅವಳ ಹಕ್ಕು. ನಾನಾ ಕಾರಣಗಳಿಂದ ಸ್ತ್ರೀ-ಸ್ವಾತಂತ್ರ್ಯ ಹರಣವಾಗುತ್ತದೆ. ಅವಳ ಸ್ವಾತಂತ್ರ್ಯಕ್ಕೆ ಬೇರೆಯವರು ಧಕ್ಕೆ ತಂದಾಗ ಅದನ್ನು ದಿಟ್ಟತನದಿಂದ ಪ್ರಶ್ನಿಸಿ ತನ್ನದೇ ಆದ ಸ್ವತಂತ್ರ ಬದುಕನ್ನು ರೂಪಿಸಿಕೊಳ್ಳುವಲ್ಲಿ ಹೆಣ್ಣು ಕೆಲವೊಮ್ಮೆ ಸೋಲುತ್ತಾಳೆ. ಅದಕ್ಕೆ ಅನೇಕ ಕಾರಣಗಳಿವೆ.

- ಸಾಂಪ್ರದಾಯಕ ನಂಬಿಕೆಗಳು
- ನಿರ್ಲಕ್ಷ್ಯ ಧೋರಣೆ
- ಪ್ರಶ್ನಿಸದ ದೌರ್ಬಲ್ಯಗಳು

ಮಾನಸಿಕವಾದ ಭೀತಿ... ಮುಂತಾದವು ಹೆಣ್ಣನ್ನು ಮತ್ತೆ ಮತ್ತೆ ಬಂಧಿಸಿಡುವ ಪ್ರಯತ್ನ ಮಾಡುತ್ತದೆ. ಕರಾವಳಿ ಲೇಖಕಿಯರ ಕಥೆಗಳಲ್ಲಿ ಈ ಅಂಶಗಳು ಸ್ಪಷ್ಟವಾಗುತ್ತದೆ. ಸ್ತ್ರೀ ಸ್ವಾತಂತ್ರ್ಯ ಮಹರ್ತಿ ಎಂಬ ಮಾತನ್ನು ಒಂದು ಕಾಲಕ್ಕೆ ನಮ್ಮ ಸಮಾಜ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದ ಹಾಗೆ ಕಾಣುತ್ತದೆ.

ವೈದೇಹಿಯವರ 'ಅಕ್ಕು' ಕಥೆಯಲ್ಲಿ (ಅಲೆಗಳಲ್ಲಿ ಅಂತರಂಗ, ೨೦೦೬) ಪಿತೃಪ್ರಧಾನ ವ್ಯವಸ್ಥೆಯ ದಬ್ಬಾಳಿಕೆಯ ಅಡಿ ಸಿಲುಕಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಹೆಣ್ಣೊಬ್ಬಳ ಚಿತ್ರಣವಿದೆ. ಈ ಕಥೆಯ ಕೇಂದ್ರ ಪಾತ್ರವಾದ ಅಕ್ಕು ಗಂಡನಿಂದ ಯಾವ ಸುಖ ಕಾಣದೆ ಹೋದರೂ ಸ್ವಾಭಿಮಾನಿ ಹೆಣ್ಣು, 'ನೀನ್ಸ್ಹಾಂಗೆ ನಾನೇನ್ ಗಂಡ ಸತ್ತ ಮುಂಡೆ ಅಲ್ಲ, ನನ್ ಗಂಡ ಬಾಸಾಯಿ ತಿಂಬುಕೆ ದೇಶಾಂತರ ಹೋದ ಅಂತೇಳಿ ನಾ ಪಾಪ್ಪ! ಮೈಮೇಲೆ ಬಂದ್ ಅಡ್ಡದ್ಮನೆ ತಿಮ್ಮಪ್ಪಯ್ಯನ್ ಹೊಂಡಕ್ಕ್ ದೂಡಿ ಹಾಕ್ದವ್ಳ್ ನಾನ್' (ಅಲೆಗಳಲ್ಲಿ ಅಂತರಂಗ, ಪು. ೧೫೫, ೨೦೦೬) ಎಂಬ ಅಕ್ಕುವಿನ ಮಾತು ಆಕೆಯ ವ್ಯಕ್ತಿತ್ವದ ಗಟ್ಟಿತನವನ್ನು ತೋರಿಸುತ್ತದೆ. ಆದರೂ ಆಕೆ ವ್ಯವಸ್ಥೆಯ ಸಾಧನವಾಗಿ ಕಾಣುತ್ತಾಳೆ.

ವೈದೇಹಿಯವರ 'ಅಮ್ಮಚ್ಚಿಯೆಂಬ ನೆನಪು, (ಅಲೆಗಳಲ್ಲಿ ಅಂತರಂಗ, ೨೦೦೬) ಕತೆಯ ಅಮ್ಮಚ್ಚಿ ಪುರುಷ ದಬ್ಬಾಳಿಕೆಯನ್ನು ಪ್ರತಿಭಟಿಸಿದ ಹೆಣ್ಣು. ತನಗೆ ಸರಿಯೆನಿಸಿದಾಗ ಬದುಕುವ ಸ್ವಾತಂತ್ರ್ಯಕ್ಕಾಗಿ ಹಾತೊರೆದವಳು. ಅಧಿಕಾರ ತೋರಿಸುವ ವೆಂಕಪ್ಪಯ್ಯನ ನಿಲುವಿನ ಬಗೆಗೆ ಕಿಡಿಕಾರುವ ಅಮ್ಮಚ್ಚಿ ಆಧುನಿಕತೆಗೆ ತುಡಿಯುವವಳು. ಆಕೆಯ ಉಡುಗೆಯನ್ನೂ ನಿರ್ಧರಿಸುವ ವೆಂಕಪ್ಪಯ್ಯನಿಂದ ಕೊನೆಗೂ ಬಿಡುಗಡೆ ಪಡೆಯುತ್ತಾಳೆ. ಆಕೆ ಗೆಳತಿಯೊಂದಿಗೆ ಹೇಳುವ 'ಬಾ ನಾವು ಮಡಲು ಹೆಣೆವ' (ಅಲೆಗಳಲ್ಲಿ ಅಂತರಂಗ, ಪು. ೫೭೯, ೨೦೦೬) ಎಂಬ ಮಾತಿನಲ್ಲಿ ಪ್ರತಿಭಟನೆಯ ಕಾವು ಇದೆ. 'ಅಮ್ಮಚ್ಚಿ ಅವುಡುಗಚ್ಚಿ ಮಡಲಿನಂಚನ್ನು ತಿಪ್ಪುತ್ತಿದ್ದಳು' (ಅದೇ. . .) ಎನ್ನುವುದು ವೆಂಕಪ್ಪಯ್ಯನ ಬಗೆಗೆ ವ್ಯಕ್ತಪಡಿಸುವ ಕೋಪವೇ ಆಗಿದೆ.

ವೈದೇಹಿಯವರ 'ಅಕ್ಕು' ಕತೆಯ ಅಕ್ಕು ಎಂಬ ಹೆಣ್ಣು ತನ್ನ ಗಂಡನಿಂದ ಯಾವುದೇ ಸುಖ ಸಿಗದೇ ಹೋದಾಗ ಅದಕ್ಕಾಗಿ ಕೊರಗುತ್ತಾ ಕುಳಿತುಕೊಳ್ಳುವುದಿಲ್ಲ. ಸ್ವಾಭಿಮಾನಿ ಹೆಣ್ಣಾಗಿ ಬದುಕು ಸಾಗಿಸುವ ಸ್ವಾತಂತ್ರ್ಯ ಅವಳಿಗಿದೆ ಎನ್ನುವುದನ್ನು ತೋರಿಸಿಕೊಡುತ್ತಾಳೆ. ಆದರೂ ಆಕೆ ವ್ಯವಸ್ಥೆಯ ಸಾಧನವಾಗಿಯೇ ಉಳಿಯುತ್ತಾಳೆ. 'ಅಮ್ಮಚ್ಚಿಯೆಂಬ ನೆನಪು' ಕತೆಯ ಅಮ್ಮಚ್ಚಿಗೆ ಪುರುಷ ಪ್ರಧಾನ ವ್ಯವಸ್ಥೆಯ ಬಗೆಗೆ ಇರುವ ಸಿಟ್ಟು ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವಲ್ಲಿ ಸೋಲುತ್ತವೆ. ಪ್ರತಿಭಟನೆಯ ಹಂತ ತಲುಪುವ ಇಂತಹ ಪಾತ್ರಗಳು ಎಲ್ಲೋ ಒಂದು ಕಡೆ ಮೌನವಹಿಸಬೇಕಾದ ಸ್ಥಿತಿ ಬಂದುಬಿಡುತ್ತದೆ. ಅಂದರೆ ಸಹನೆ ಎನ್ನುವುದು ಹೆಣ್ಣಿನ ಸಹಜ ಗುಣವೇನೋ ಅನ್ನುವಷ್ಟರ ಮಟ್ಟಿಗೆ ಅಮ್ಮಚ್ಚಿಯಲ್ಲಿ ಕಾಣಿಸುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ಮಗಳು ಬಂದಳು' (ರುಕುಮಾಯಿ, ೧೯೯೦) ಕಥೆಯ ಲಕ್ಷ್ಮೀದೇವಿ ಸಣ್ಣವಯಸ್ಸಿಗೆ ಕೆಮ್ಮಾಡಿ ಮನೆಗೆ ಮದುವೆಯಾಗಿ ಬಂದವಳು. ತಾನು ಹುಟ್ಟಿ ಬೆಳೆದ ಮನೆಯ ಸ್ವಚ್ಛಂದ ಪರಿಸರಕ್ಕೂ, ಕೆಮ್ಮಾಡಿ

ಮನೆಯ ಗಂಭೀರ ವಾತಾವರಣಕ್ಕೂ ಅಜಗಜಾಂತರ ಕಂಡವಳು. ತವರುಮನೆಯ ಬಗೆಗಿನ ತನ್ನ ತಂದೆ – ತಾಯಿಯರ ಬಗೆಗಿನ ಪ್ರೀತಿ ಎಲ್ಲಾ ಹೆಣ್ಣುಮಕ್ಕಳಂತೆ ಲಕ್ಷ್ಮೀಯಲ್ಲೂ ಸಹಜವಾದದ್ದು. 'ಬೊಂಡ ಅಂದ್ರೆ ಅಪ್ಪಂಗೆ ಪ್ರಾಣ' (ರುಕುಮಾಯಿ, ಪು.೨೬, ೧೯೯೦) ಎಂದು ಐತಾಳರ ಬಳಿ ಲಕ್ಷ್ಮೀದೇವಿ ಹೇಳುವ ಮಾತಿನಲ್ಲಿ ಇದು ಸ್ಪಷ್ಟವಾಗುತ್ತದೆ. ತವರಿಗೆ ಕಳುಹಿಸದೆ ಮುದ್ದಿನಿಂದ ನೋಡಿಕೊಳ್ಳುವ ಅತ್ತೆ ಇದ್ದಾಗಲೂ ಅದು ಸ್ವರ್ಗವಾಗುವುದಕ್ಕೆ ಸಾಧ್ಯವಿಲ್ಲ. ಮಗಳನ್ನು ಕಾಣುವುದಕ್ಕಾಗಿ ಲಕ್ಷ್ಮೀದೇವಿಯ ತಂದೆ ಆಡಿದ ನಾಟಕ, ಮಗಳ ಮೇಲಿನ ಪ್ರೀತಿಯ ದ್ಯೋತಕ. ಹೆಣ್ಣೊಬ್ಬಳಿಗೆ ತನ್ನದೇ ಆದ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವಿರುವ ಸ್ಥಿತಿ ಸೀತಮ್ಮನ ಸೊಸೆ ಲಕ್ಷ್ಮೀದೇವಿಯದು.

ಗಂಗಾ ಪಾದೇಕಲ್‌ರವರ 'ಸುಕನ್ಯಳ ಹುಟ್ಟುಹಬ್ಬ' (ವಾಸ್ತವ, ೧೯೯೬)ಕಥೆಯ ಸುಕನ್ಯ ವರದಕ್ಷಿಣೆಯ ಕಾರಣಕ್ಕಾಗಿ ಬಂದ ಸಂಬಂಧವನ್ನು ನಿರಾಕರಿಸುತ್ತಾಳೆ. ಅಪ್ಪ ತೋಟ ಮಾರಿ ತನ್ನ ಮದುವೆ ಮಾಡಿಸುವುದರಿಂದ ಸಂಸಾರ ಹೊಂಡಕ್ಕೆ ಬೀಳುತ್ತದೆ, ತನ್ನ ತಮ್ಮಂದಿರ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಎಂದರಿತ ಸುಕನ್ಯ ತನ್ನ ತಂದೆಯನ್ನೇ ಸಮಾಧಾನ ಪಡಿಸುತ್ತಾಳೆ.

ಈ ಕಥೆಯ ಸುಕನ್ಯ ಆಧುನಿಕ ಪ್ರಜ್ಞೆಯ ಹೆಣ್ಣಾಗಿದ್ದು, ತಾನು ತನ್ನ ಬದುಕನ್ನು ಕಟ್ಟಿಕೊಳ್ಳಲು ಮುಂದಾಗುತ್ತಾಳೆ. ಅವಳ ಈ ನಿರ್ಧಾರ ಅವಳ ಹುಟ್ಟುಹಬ್ಬದ ಆಚರಣೆಗೂ ಒಂದು ಅರ್ಥವನ್ನು ಒದಗಿಸುತ್ತದೆ.

ವೈದೇಹಿಯವರ 'ಶಕುಂತಳೆಯೊಂದಿಗೆ ಕಳೆದ ಅಪರಾಹ್ನ' (ಅಲೆಗಳಲ್ಲಿ ಅಂತರಂಗ, ೨೦೦೬ ಕಥೆಯು ಹೆಣ್ಣಿನ ಕುರಿತಾದ ಹೊಸ ದೃಷ್ಟಿಕೋನದತ್ತ ಮುಖ ಮಾಡುತ್ತದೆ. ಈ ಕಥೆಯಲ್ಲಿ ಶಕುಂತಳೆ ಎತ್ತುವ ಕೆಲವು ಪ್ರಶ್ನೆಗಳು ಕೇವಲ ಅವಳ ವೈಯಕ್ತಿಕ ಪ್ರಶ್ನೆಗಳಾಗಿರದೆ, ಆ ಸಂದರ್ಭದ ಸ್ತ್ರೀ ಸಮೂಹ ಕೇಳಿಕೊಳ್ಳುವ ಪ್ರಶ್ನೆಯಾಗಿದೆ. 'ದುಷ್ಯಂತನ ವರ್ತನೆಗೆ ವ್ಯಾಖ್ಯಾನ ನೀಡಬಹುದು. ಆದರೆ ಶಕುಂತಳೆಯ ಹೃದಯಕ್ಕೆ. . . ?' (ಅಲೆಗಳಲ್ಲಿ ಅಂತರಂಗ, ಪು. ೨೮೧, ೨೦೦೬) ಈ ಮಾತು ಹೆಣ್ಣಿನ ಮನಸ್ಸನ್ನು, ಭಾವನೆಗಳನ್ನು ಅರ್ಥ ಮಾಡಿಕೊಳ್ಳದ ಪುರುಷನೊಬ್ಬ ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿ ಕಾಣುತ್ತದೆ. 'ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು. . . ?' (ಅದೇ. . . ೨೮೧) ಎಂಬುದು ಶಕುಂತಳೆಯ ಸ್ವಾಭಿಮಾನವನ್ನು ಪವಿತ್ರವಾದ ಪ್ರೀತಿಯನ್ನು ತೋರಿಸುತ್ತದೆ. ಈ ಕಥೆಯು ಪುರುಷ ನಿರ್ಮಿತ ಸಾಹಿತ್ಯದಲ್ಲಿನ ಸ್ತ್ರೀಪರ ಧೋರಣೆಗಳನ್ನು ಬಿಂಬಿಸುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ಹಕ್ಕಿ ಮತ್ತು ಅವಳು' ಹಕ್ಕಿ ಮತ್ತು ಅವಳು, ೧೯೯೭) ಕಥೆಯ ಹೆಣ್ಣು ಅಸ್ಮಿತೆಯ ಹುಡುಕಾಟದಲ್ಲಿ ತೊಡಗಿದವಳು. ಆರಂಭದಲ್ಲಿ ಅಡುಗೆ ಮನೆಯ ಕಿಟಕಿಯಲ್ಲಿ ಕುಳಿತು ಹೊರಗೆ ಕರೆಯುತ್ತಿದ್ದ ಆ

ಹಕ್ಕಿಯ ಮಾತುಗಳು ಆಕೆಗೆ ಕೋಪ ತರಿಸುತ್ತಿತ್ತು. 'ಮನೆಯೆಂಬ ಪಂಜರ'ದೊಳಗೆ ತಾನು ಸುಖವಾಗಿದ್ದೇನೆ ಎಂದು ಅನಿಸುತ್ತಿತ್ತು... 'ನಿನ್ನ ಮನೆಯ ಬೆಚ್ಚಗಿನ ವಾತಾವರಣ ನನ್ನ ಮಟ್ಟಿಗೆ ಗರ್ಮಿಯಾದೀತು. ಬೇಡ ನಾನಿಲ್ಲೇ ಇರುವೆ' (ಹಕ್ಕಿ ಮತ್ತು ಅವಳು, ಪು. ೩೩, ೧೯೯೭) ಎಂಬ ಹಕ್ಕಿಯ ಮಾತು ಆಕೆಯನ್ನು ಬಂಧನದಿಂದ ಹೊರಗೆ ಬರುವಂತೆ ಪ್ರೇರೇಪಿಸುತ್ತದೆ.

ಒಂದು ಮುಂಜಾನೆ ಅಡುಗೆ ಮನೆಯಲ್ಲಿ ಚಪಾತಿ ಕಾಯಿಸುತ್ತಿದ್ದ ಅವಳು ಇದ್ದಕ್ಕಿದ್ದಂತೆ ಕಾಣೆಸದಿರುವುದು ಆಕೆಯ ಗಂಡನಿಗೆ ಆತಂಕವನ್ನುಂಟು ಮಾಡುತ್ತದೆ. ರಮಾನಂದ ಅಡುಗೆ ಮನೆಗೆ ಬಂದು ಚಪಾತಿ ಲಟ್ಟಿಸುತ್ತಿದ್ದಂತೆ ಅತ್ತ ಕಾವಲಿಯ ಮೇಲಿನ ಚಪಾತಿಯ ಗುಳ್ಳೆಗಳು ಒಡೆದು ಕರಟಿ ಬಿಡುತ್ತಿದ್ದವು. ಇಲ್ಲಿ ಕರಟಿದ್ದು ಕೇವಲ ಚಪಾತಿಯಲ್ಲ, ಸಾಂಸಾರಿಕ ಬದುಕು ಕೂಡಾ ಕರಟಿ ಹೋಗುತ್ತದೆ. ಕಿಟಕಿಯಾಚೆ ಗೆಲ್ಲಿಗಾನಿಸಿ ಕುಳಿತ ಹಕ್ಕಿಯ ಕಣ್ಣುಗಳನ್ನು ನೋಡಿದಾಗ ರಮಾನಂದನಿಗೆ ಸಂಶಯ ಉಳಿಯುವುದಿಲ್ಲ. ಪ್ರಾಯಶಃ ಮನೆಯೆಂಬ ಬಂಧನದಿಂದ ಹೊರಗೆ ಕಾಲಿಡದ ಹೊರತು ಹೆಣ್ಣಿಗೆ ಸ್ವಾತಂತ್ರ್ಯ ಎಂಬುದು ಕನಸಿನ ಮಾತು ಎಂಬುದನ್ನು ಈ ಕಥೆ ಸ್ಪಷ್ಟಪಡಿಸುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ಮಗಳು ಬಂದಳು' ಕತೆಯ ಲಕ್ಷ್ಮೀದೇವಿ ತನ್ನ ತಂದೆಗಾಗಿ ಗಂಡನ ಮನೆಯಿಂದ ಬೊಂಡ ತೆಗೆದುಕೊಂಡು ಹೋಗುವ ನಿರ್ಧಾರ ಮಾಡುವುದು ಅವಳಿಗಿದ್ದ ಸ್ವಾತಂತ್ರ್ಯವನ್ನು ದೃಢಪಡಿಸುತ್ತದೆ. ವೈದೇಹಿಯವರ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಹಾಗೂ ಮಿತ್ರಾ ವೆಂಕಟ್ರಾಜ್‌ರವರ 'ಹಕ್ಕಿ ಮತ್ತು ಅವಳು' ಕತೆಯ ಸ್ತ್ರೀ ಪಾತ್ರಗಳು ಸ್ತ್ರೀ ಸ್ವಾತಂತ್ರ್ಯದ ಪ್ರತೀಕಗಳಾಗಿ ಕಾಣಿಸಿಕೊಳ್ಳುತ್ತವೆ. ಪುರುಷ ಪ್ರಧಾನ ಸಮಾಜಕ್ಕೆ ಅವು ಎತ್ತುವ ಪ್ರಶ್ನೆಗಳು ಸಮಾಜದ ಕಣ್ಣು ತೆರೆಸುವ ಪ್ರಶ್ನೆಗಳಾಗಿ ಕಾಣುತ್ತವೆ. ಭಾರತಕ್ಕೆ ಪ್ರವೇಶಿಸಿದ ಸ್ತ್ರೀವಾದವು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಲೇಖಕಿಯರ ಆಲೋಚನೆಯ ದಿಕ್ಕನ್ನು ಬದಲಾಯಿಸಿತು. ಈ ತಲೆ ಮಾರಿನ ಲೇಖಕಿಯರಿಗೆ ವ್ಯಕ್ತಿ ಮೌಲ್ಯಗಳನ್ನು ತಮ್ಮ ಕತೆಗಳ ಮೂಲಕ ಕಂಡುಕೊಳ್ಳುವುದಕ್ಕೆ ಸಾಧ್ಯವಾಯಿತು. ಗಂಗಾ ಪಾದೇಕಲ್‌ರವರ 'ಸುಕನ್ಯಾಳ ಹುಟ್ಟು ಹಬ್ಬ' ಎಂಬ ಕತೆಯು ಇದೇ ನಿಟ್ಟಿನಲ್ಲಿ ಸಾಗುತ್ತದೆ.

೮.೧೪. ಜಾತಿಯ ಪರಿಕಲ್ಪನೆ:

ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ 'ಜಾತಿ ವ್ಯವಸ್ಥೆ" ಎಂಬ ಪಿಡುಗನ್ನು ಅನೇಕ ವೈವಾಹಿಕ ಬಿಕ್ಕಟ್ಟುಗಳಿಗೆ ಅಮಾನವೀಯ ಕೃತ್ಯಗಳಿಗೆ ದಾರಿ ಮಾಡಿಕೊಟ್ಟಿದೆ. ಜಾತಿಯನ್ನು ಆವರಿಸಿರುವ ಮನಸ್ಸಿನ ಕಲ್ಮಶಗಳನ್ನು

ಬಿಂಬಿತವಾಗುವ ಬಗೆಗಳು ಕರಾವಳಿ ಲೇಖಕಿಯರ ಕಥೆಗಳಲ್ಲಿ ಕಾಣ ಸಿಗುತ್ತವೆ. ಜಾತಿಗಿಂತ ಪ್ರೀತಿ ಮುಖ್ಯ ಎಂಬ ವಿಚಾರಗಳನ್ನು ತಿಳಿಯಪಡಿಸುವ ಕತೆಗಳು ಇಲ್ಲಿವೆ.

ಸಾರಾ ಅಬೂಬಕ್ಕರ್‌ರವರ 'ನಿರ್ಧಾರ' (ಗಗನಸಖಿ, ೨೦೦೭) ಇದು ಮುಸ್ಲಿಂ ಹೆಣ್ಣು ಮಗಳೊಬ್ಬಳ ಮದುವೆಯ ನಿರ್ಧಾರದ ಕುರಿತ ಕಥೆಯಾಗಿದೆ. ಹೆಣ್ಣು ತನ್ನ ಬದುಕಿನ ಬಗೆಗೆ ತಾನು ತೆಗೆದುಕೊಳ್ಳುವ ನಿರ್ಧಾರ ಆಕೆಯ ಬದುಕನ್ನು ಆಕೆಯೇ ಕಟ್ಟಿಕೊಳ್ಳುವ ಪರಿ ಕಥೆಯ ಯಶಸ್ಸಿಗೆ ಕಾರಣವಾಗುತ್ತದೆ. 'ನಾನು ಸಮನಾದ ನಿರ್ಧಾರ ಕೈಗೊಂಡಿದ್ದೇನೆಂಬ ವಿಶ್ವಾಸ ನನ್ನದು. ನನ್ನನ್ನು ಮತ್ತೊಮ್ಮೆ ಆಶೀರ್ವದಿಸು' (ಗಗನ ಸಖಿ, ಪುಟ, ೧೪೦, ೧೯೯೯) ಎಂದು ಹಸೀನಾ ಬರೆದಿಟ್ಟು ಹೋದ ಪತ್ರದ ಸಾಲುಗಳು ಆಕೆಯ ಗಟ್ಟಿತನವನ್ನು ನಿರೂಪಿಸುತ್ತದೆ.

ಸಾರಾ ಅಬೂಬಕ್ಕರ್‌ರವರ 'ಸಾರಾಂಶ' (ಪಯಣ ಮತ್ತು ಇತರ ಕಥೆಗಳು, ೧೯೯೨) ಕಥೆಯಲ್ಲಿ ವಿದ್ಯಾವಂತ ಸಮಾಜದ ಅನಾಗರಿಕ ವರ್ತನೆಯ ಚಿತ್ರಣವಿದೆ. 'ಬಿತ್ತಿ ಬೆಳೆಯುವುದಕ್ಕೊಂದು ಹೊಲ, ಇನ್ನೊಂದು ಆಟದ ಮೈದಾನ..' (ಪಯಣ ಮತ್ತು ಇತರ ಕತೆಗಳು, ಪು. ೩೫ - ೩೬, ೧೯೯೨) ಎಂಬ ಕಥೆಯ ಸಾಲುಗಳಂತೆ ಮೊದಲ ಹೆಂಡತಿ ಇದ್ದಾಗ್ಯೂ ಎರಡನೆಯವಳನ್ನು ತಂದು ಮನೆಯಲ್ಲಿಟ್ಟುಕೊಂಡು ಆಕೆಯನ್ನು ನಡೆಸಿಕೊಳ್ಳುವ ರೀತಿ ಕ್ರೌರ್ಯದ ಒಂದು ಮುಖ. ಜಾತಿ, ಧರ್ಮಗಳೆಂಬ ಗೋಡೆಗಳ ಮಧ್ಯೆ ಹೆಣ್ಣಿನ ಬದುಕು ಛಿದ್ರಗೊಳ್ಳುವುದನ್ನು ಈ ಕಥೆ ನಿರೂಪಿಸುತ್ತದೆ.

ಸಾರಾ ಅಬೂಬಕ್ಕರ್‌ರವರ 'ಬೆನ್ನಟ್ಟುವ ಭೂತಗಳು' (ಪಯಣ ಮತ್ತು ಇತರ ಕಥೆಗಳು, ೧೯೯೨)ಕಥೆಯು ಅರ್ಥವಿಲ್ಲದ ಪೂರ್ವಾಗ್ರಹಗಳು ಭಿನ್ನ ಕೋಮುಗಳ ಮನಸ್ಸು ಹೇಗೆ ಒಡೆದು ಛಿದ್ರಮಾಡುತ್ತವೆ ಎಂಬುದನ್ನು ನಿರೂಪಿಸುತ್ತದೆ. ಸೋಮನಾಥ ದೇವಾಲಯವನ್ನು ದರೋಡೆಕೋರರು ಹಾಳು ಮಾಡಿದರು ಎನ್ನುವುದರ ಬದಲು ಮುಸ್ಲಿಮರು ದಾಳಿ ಮಾಡಿದರು ಎಂದದ್ದು ಆಯಿಷಾಳಿಗೆ ತುಂಬಾ ನೋವನ್ನುಂಟುಮಾಡುತ್ತದೆ. ಜಾತಿ, ಧರ್ಮದ ನೆಲೆಯಲ್ಲಿ ಮನುಷ್ಯರನ್ನು ಗುರುತಿಸುವ ಸಮಾಜದ ಬಗೆಗಿನ ಆಯಿಷಾಳ ಆಕ್ರೋಶ ಇಲ್ಲಿ ಎದ್ದು ಕಾಣುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ಅಲ್ಲೇ ಇರು' (ಹಕ್ಕಿ ಮತ್ತು ಅವಳು, ೧೯೯೭)ಕಥೆಯು ಮುಂಬಯಿಯಂಥ ನಗರದ ಮತೀಯ ಸಂಘರ್ಷವನ್ನು ಚಿತ್ರಿಸುವ ಕಥೆಯಾಗಿದೆ. ಜಾತಿ, ಮತ, ಪಂಥ – ಇವೆಲ್ಲವನ್ನೂ ಮೀರಿ ಬದುಕಲು ಸಾಧ್ಯವಿರುವ ಮನುಷ್ಯನಲ್ಲಿ ಎಲ್ಲೋ ಒಂದು ಕಡೆ ಅವನಿಗೆ ಗೊತ್ತಿಲ್ಲದ ಹಾಗೆ ಜಾತಿ, ಮತದ ಪ್ರಜ್ಞೆಯ ಕಿಡಿ ಕಾಡುತ್ತಿರುತ್ತದೆ. ಅದಕ್ಕೆ ಪೂರಕ ವಾತಾವರಣ ದೊರಕಿದಾಗ ಅದು ಭುಗಿಲೇಳುತ್ತದೆ' ಎಂಬ ಸತ್ಯವನ್ನು ಈ ಕಥೆ ಕಟ್ಟಿ ಕೊಡುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ ‘ನೀವೇನೂ ಹೆದರಬೇಕಾಗಿಲ್ಲ. ನಾನಿಲ್ಲಿ ಕ್ಷೇಮ. ನಮ್ಮವರ ನಡುವೆಯೇ ಇದ್ದೇವಲ್ಲ. ಇನ್ನೇನು ಅಪಾಯವಿಲ್ಲ’ (ಹಕ್ಕಿ ಮತ್ತು ಅವಳು, ಪು. ೯೪, ೧೯೯೭) ಎಂಬ ಝೀಬುನ್ನೀಸಳ ಮಾತು ನಿರೂಪಕಿಯ ಮನಸ್ಸಿಗೆ ಕಿರಿಕಿರಿಯನ್ನುಂಟುಮಾಡುತ್ತದೆ. ‘ನಮ್ಮವರು ಎಂದರೆ ನಿಜವಾಗಿಯೂ ಯಾರು ಹಾಗಾದರೆ ? ಎಂಬ ಯೋಚನೆಯನ್ನು ಮೂಡಿಸುತ್ತದೆ. ಹಿಂದೊಮ್ಮೆ ಮುಂಬಯಿಗೆ ಬಂದ ಹೊಸತರಲ್ಲಿ ‘ಡರ್‌ನೇ ಕೀ ಕೋಯಿ ಬಾತ್ ನಹೀ, ಯೇ ಬಂಬೈ ಹೈ’ (ಅದೇ. . . ಪು. ೮೮)ಎಂದು ಆತ್ಮೀಯತೆಯಿಂದ ವಿಶ್ವಾಸ ತುಂಬಿದ ಝೀಬುನ್ನೀಸಳ ಬಾಯಲ್ಲಿ ಇಂತಹ ಮಾತೇ ? ನಿರೂಪಕಿ ದಂಗಾಗಿ ಹೋಗುತ್ತಾಳೆ. ಜಾತಿ, ಮತ, ಪಂಥಗಳ ನಡುವೆ ನಮ್ಮನ್ನು ನಾವು ಹುಡುಕಿಕೊಳ್ಳುವ ಅನಿವಾರ್ಯತೆಯ ಕಡೆಗೆ ಕಥೆ ಸಾಗುತ್ತದೆ.

ಜಾತಿ ಎಂಬ ಅಡ್ಡ ಗೋಡೆಯನ್ನು ದಾಟಿ ಹೊರಬರುವುದಕ್ಕಾಗದೇ ಒದ್ದಾಡಿದ ಎಷ್ಟೋ ಹೆಣ್ಣು ಮಕ್ಕಳ ಚಿತ್ರಣ ಕರಾವಳಿ ಲೇಖಕಿಯರ ಕತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಮೊದಲಿನಿಂದಲೂ ಜಾತಿಯ ಕುರಿತಾದ ಮೂಢನಂಬಿಕೆಗಳು ಜನರ ಮನಸ್ಸನ್ನು ಸಂಕುಚಿತ ಮಟ್ಟದಲ್ಲಿಯೇ ಉಳಿಸಿ ಬಿಟ್ಟಿರುವುದು ನಮ್ಮ ಮುಂದಿರುವ ಸತ್ಯ. ಅದರಲ್ಲೂ ಜಾತಿ ಸಮಸ್ಯೆಗಳು ಹುಟ್ಟಿಕೊಳ್ಳುವುದು ಹೆಚ್ಚಾಗಿ ವಿವಾಹದ ಸಂದರ್ಭಗಳಲ್ಲಿ ಹಾಗಾಗಿ ಇದನ್ನು ಮೀರುವುದಕ್ಕಾಗದೆ ತಮ್ಮ ಬದುಕನ್ನು ದುರಂತ ಮಾಡಿಕೊಂಡ ಹೆಣ್ಣು ಮಕ್ಕಳು ಕೆಲವರಾದರೆ, ಇನ್ನು ಕೆಲವು ಸಂದರ್ಭಗಳಲ್ಲಿ ಹೆಣ್ಣು ತನ್ನ ನಿರ್ಧಾರಕ್ಕೆ ಬದ್ಧಳಾಗಿ ಬದುಕಿದ್ದೂ ಇದೆ. ಆದರೆ ಹಾಗಾದಾಗ ಆಕೆ ತನ್ನ ಮನೆಯಿಂದ ಅಥವಾ ಊರಿನಿಂದಲೇ ಬಹಿಷ್ಕಾರಕ್ಕೆ ಒಳಗಾದ ಘಟನೆಗಳು ನಡೆದದ್ದೂ ಇದೆ.

ಸಾರಾ ಅಬೂಬಕ್ಕರ್‌ರವರ ‘ನಿರ್ಧಾರ’ ಕತೆಯ ಹೆಣ್ಣು ಮಗಳೊಬ್ಬಳು ಸ್ವತಂತ್ರ ನಿರ್ಧಾರದ ಮೂಲಕ ತನ್ನ ಬದುಕನ್ನು ತಾನೇ ಕಟ್ಟಿಕೊಳ್ಳುವುದಕ್ಕಾಗಿ ಜಾತಿ ಎಂಬ ಗೋಡೆಯನ್ನು ಮುರಿಯುವ ಪ್ರಯತ್ನ ಮಾಡುತ್ತಾಳೆ. ‘ಬಿತ್ತಿ ಬೆಳೆಯುವುದಕ್ಕೊಂದು ಹೊಲ, ಇನ್ನೊಂದು ಆಟದ ಮೈದಾನ’ ಎಂಬ ಕತೆಯಲ್ಲಿ ಹೆಣ್ಣೊಬ್ಬಳು ಜಾತಿ-ಧರ್ಮದ ಮಧ್ಯದ ಗೋಡೆಯಲ್ಲಿ ಸಿಲುಕಿ ಒದ್ದಾಡುತ್ತಾಳೆ. ಅಂದರೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುವ ಧೈರ್ಯವಿಲ್ಲದ ಹೆಣ್ಣು ಆ ವ್ಯವಸ್ಥೆಯ ಕೂಪದೊಳಗೇ ಉಳಿದು ಬಿಟ್ಟರೆ, ಧೈರ್ಯ ಮಾಡಿದ ಹೆಣ್ಣು ಮಕ್ಕಳು ಕೂಪದಿಂದ ಹೊರಗೆ ಬಂದು ಬದುಕುತ್ತಾರೆ.

ವಿವಾಹೇತರ ವಿಚಾರಗಳಲ್ಲಿ ನೋಡಿದಾಗಲೂ ಕೂಡಾ ಈ ಜಾತಿ ಎಂಬ ಪೆಡಂಭೂತ ಮನುಷ್ಯ ಸಂಬಂಧಗಳನ್ನು ದೂರ ಮಾಡುವುದು ಗಮನಕ್ಕೆ ಬರುತ್ತದೆ. ಮನುಷ್ಯ ಮಾಡುವ ಸರಿ-ತಪ್ಪುಗಳನ್ನು ಜಾತಿಯಿಂದ ಅಳೆಯುತ್ತಾರೆಯೇ ಹೊರತು ಮನುಷ್ಯನ ಮೂಲಕ ಅಲ್ಲ ಎಂಬುದನ್ನು ಕರಾವಳಿ ಲೇಖಕಿಯರ ಕತೆಗಳು

ನಿರೂಪಿಸುತ್ತದೆ. ಸಾರಾರವರ 'ಬೆನ್ನಟ್ಟುವ ಭೂತಗಳು' ಕತೆಯಿರಬಹುದು, ಅಥವಾ ಮಿತ್ರಾ ವೆಂಕಟ್ರಾಜ್‌ರವರ 'ಅಲ್ಲೇ ಇರು' ಎಂಬ ಕತೆಯಿರಬಹುದು, ಇವು ಕಟ್ಟಿಕೊಡುವ ವಿಚಾರಗಳು ಏನೆಂದರೆ ಎಷ್ಟೇ ವಿದ್ಯಾವಂತನಾದ ಮನುಷ್ಯ ಜಾತಿಯ ಬಲೆಯಿಂದ ಹೊರಬರಲಾರ ಎಂಬ ಸತ್ಯವನ್ನಲ್ಲದೆ ಬೇರೆ ಏನನ್ನೂ ಅಲ್ಲ. ಇಂತಹ ವಿಚಾರಗಳು ಭಾವನೆಗಳನ್ನು ಅರಳಿಸುವ ಬದಲಾಗಿ ಕೆರಳಿಸುತ್ತವೆ. ಹಾಗಾಗಿ ಎಲ್ಲಿಯವರೆಗೆ 'ಜಾತಿ'ಯ ಕೊಳಚೆಯಿಂದ ದೂರ ಸರಿಯುವುದಿಲ್ಲವೋ ಅಲ್ಲಿಯ ತನಕ ಮಾನವ ಸಂಬಂಧ ಬಲಿಯಲಾರದು ಎಂಬ ವಾಸ್ತವ ಅಂಶವನ್ನು ಈ ಕತೆಗಳು ಮನದಟ್ಟು ಮಾಡುತ್ತವೆ.

ಒಟ್ಟಿನಲ್ಲಿ ಈ ಮೇಲಿನ ಎಲ್ಲಾ ಸಮಸ್ಯೆಗಳ ಮೂಲಕ ಕರಾವಳಿ ಕತೆಗಳಲ್ಲಿನ ಮಹಿಳಾ ಸಂವೇದನೆಯ ಸಂಕೀರ್ಣತೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಇದಾಗಿದೆ. ಹೆಣ್ಣು ತನ್ನ ಹುಟ್ಟಿನಿಂದ ಚಟ್ಟದವರೆಗಿನ ಎಲ್ಲಾ ಹಂತಗಳಲ್ಲಿ ಅನುಭವಿಸುವ ನೋವು, ಯಾತನೆ, ಹತಾಶೆ, ನಿರೀಕ್ಷೆಗಳು ವೈಯಕ್ತಿಕ, ಕೌಟುಂಬಿಕ ಅಥವಾ ಧಾರ್ಮಿಕ ನೆಲೆಗಳಲ್ಲಿ ಹೇಗೆ ಒಂದಕ್ಕಿಂತ ಇನ್ನೊಂದು ಭಿನ್ನವಾಗಿವೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತವೆ. ಈ ಸಂಕೀರ್ಣತೆಗಳು ಕರಾವಳಿಯ ಹೆಣ್ಣು ಮಕ್ಕಳ ಒಟ್ಟು ಜೀವನ ಕ್ರಮದ ಬಗೆಗೆ ಬೆಳಕು ಚೆಲ್ಲುತ್ತವೆ. ಅದರಲ್ಲಿಯೂ ಸ್ವಾತಂತ್ರ್ಯೋತ್ತರ ಕಾಲಘಟ್ಟದ ಮಹಿಳಾ ಸಂವೇದನೆಯನ್ನು ನಿರೂಪಿಸುವಲ್ಲಿ ಈ ಅಧ್ಯಾಯ ಪ್ರಯತ್ನಿಸುತ್ತದೆ.

ಅಡಿ ಟಿಪ್ಪಣಿ

1. ಡಾ. ಎಚ್. ಎಸ್. ಪಾರ್ವತಿ (ಸಂ) – ಮಹಿಳಾ ಸಾಹಿತ್ಯಚರಿತ್ರೆ, ಪು. ೪೦೨,ಪ್ರಸಾರಾಂಗ ಕನ್ನಡ ವಿ.ವಿ. ೨೦೦೬.

ಸಮಾರೋಪ

೬.೧. ಫಲಿತಗಳು

೬.೨. ಅಧ್ಯಯನದ ಮುಂದಿನ ಸಾಧ್ಯತೆಗಳು

ಅಧ್ಯಾಯ ೬

ಸಮಾರೋಪ

ಕರಾವಳಿ ಲೇಖಕಿಯರ ಕಥೆಗಳನ್ನು ಸ್ತ್ರೀ ವಿಶಿಷ್ಟ ದೃಷ್ಟಿಕೋನದಿಂದ ಕಂಡಾಗ ಅಸ್ತಿತ್ವವಾದಿ, ವಾಸ್ತವವಾದಿ, ವ್ಯಕ್ತಿ ಪಾರಮ್ಯವಾದಿ ನೆಲೆಗಳಲ್ಲಿ ಅರ್ಥಮಾಡಿಕೊಳ್ಳುವುದರೊಂದಿಗೆ 'ಮಾನವತಾವಾದ'ವನ್ನು ಸಾರುವ ಸಾಹಿತ್ಯ ಕೃತಿಗಳೆಂದು ಪರಿಗಣಿಸಬಹುದು. ಮಾನವತಾವಾದವು ಕೇವಲ ಸಾಹಿತ್ಯಕ್ಕಷ್ಟೇ ಸೀಮಿತವಾಗದೆ ಸಮಾಜದ ಪ್ರತಿಯೊಬ್ಬ ಮನುಷ್ಯನ ಜೀವನಾಸಕ್ತಿಯೊಂದಿಗೆ ಸಮನೆಯಗೊಳ್ಳುತ್ತದೆ. ಸಮಾಜ ಎಂದಾಗ ಅಲ್ಲಿ ಸ್ತ್ರೀ-ಪುರುಷರಿಬ್ಬರೂ ಇರುತ್ತಾರೆ. ಅವರ 'ಸಮಾನತಾವಾದ'ದಲ್ಲಿ ಸ್ತ್ರೀವಾದಿ ಆಶಯಗಳೂ ವ್ಯಕ್ತವಾಗುವುದರಿಂದ ಕರಾವಳಿ ಲೇಖಕಿಯರ ಕಥೆಗಳು 'ಮಾನವತಾವಾದ'ವನ್ನು ಸಾರುವ ಕಥೆಗಳೆಂದು ಹೇಳಬಹುದು. ಏಕೆಂದರೆ ಇವರ ಕಥೆಗಳನ್ನು ಸ್ತ್ರೀಕೇಂದ್ರಿತ ಕಥೆಗಳು, ಪುರುಷಕೇಂದ್ರಿತ ಕಥೆಗಳು ಎಂಬ ವಿಭಾಗವನ್ನು ಮಾಡುವುದಕ್ಕೆ ಹೋಗದೆ 'ಮನುಷ್ಯ ಕೇಂದ್ರಿತ' ಕಥೆಗಳಾಗಿಯೇ ಕಾಣುವುದು ಉಚಿತವೆನಿಸುತ್ತದೆ. ಈ ಮನುಷ್ಯತ್ವದ ನೆಲೆಯನ್ನು ಹುಡುಕುವ ತುಡಿತ ಕೇವಲ ಕಥಾ ಸಾಹಿತ್ಯದಲ್ಲಿ ಮಾತ್ರ ಗೋಚರಿಸುವುದಿಲ್ಲ, ಬದಲಾಗಿ ಕರಾವಳಿ ಲೇಖಕಿಯರ ಯಾವ ಸಾಹಿತ್ಯ ಪ್ರಕಾರಗಳಲ್ಲೂ ಮುಖ್ಯವಾಗಿ ಇರುವುದು ಮನುಷ್ಯ ಕಾಳಜಿಯೆ. ಹಾಗಾಗಿ ಸ್ತ್ರೀವಾದಿ ಸಾಹಿತ್ಯದ ಹಿನ್ನೆಲೆಯಲ್ಲಿ ಇಲ್ಲಿನ ಕಥೆಗಳನ್ನು ಕಂಡಾಗ ಅವು ಹೋಗಿ ನಿಲ್ಲುವುದು ಮಾನವತಾವದದಲ್ಲಿಯೇ.

ಎರಡನೆಯ ಅಧ್ಯಾಯವು ಸ್ತ್ರೀವಾದಿ ಚಳುವಳಿಯ ಸ್ವರೂಪ, ಅದರ ತತ್ವಚಿಂತನೆಗಳು ಕರಾವಳಿ ಲೇಖಕಿಯರ ಕಥೆಗಳ ಸ್ತ್ರೀವಾದಿ ಅಧ್ಯಯನಕ್ಕೆ ಪೂರ್ವಪೀಠಿಕೆ ಎಂದು ಭಾವಿಸಿ ಅದನ್ನು ಸಮರ್ಥಿಸಿಕೊಂಡಿದೆ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತೀಯ ಸ್ತ್ರೀಪರ ಹೋರಾಟಗಳ ಪ್ರೇರಣೆಯೂ ಕರಾವಳಿ ಲೇಖಕಿಯರ ಮೇಲಾಗಿದೆಯಾದರೂ ಭಾರತೀಯರ ಕಣ್ಣು ತೆರೆಸಿದ್ದು ಪಾಶ್ಚಾತ್ಯ ವಿಚಾರ ಕ್ರಾಂತಿಗಳು ಎನ್ನುವ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತವೆ. ಫ್ರೆಂಚ್ ಮಹಾಕ್ರಾಂತಿಯ ಮತ್ತು ಆಂಗ್ಲೋ–ಅಮೆರಿಕನ್ ಮತಾಧಿಕಾರದ ಹೋರಾಟದಲ್ಲೇ 'ಸ್ತ್ರೀವಾದ' ಹುಟ್ಟಿತು. ಈ ಪ್ರಬಂಧದಲ್ಲಿ ಆಯ್ಕೆಮಾಡಿಕೊಂಡಿರುವ ಪ್ರಾತಿನಿಧಿಕ ಕಥೆಗಳಲ್ಲಿ ಎಲ್ಲಾ ಲೇಖಕಿಯರ ಕಥೆಗಳನ್ನು ಸ್ತ್ರೀವಾದ ಸಿದ್ಧಾಂತದ ಚೌಕಟ್ಟಿಗೆ ಸೇರಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಆದರೆ ಎಲ್ಲಾ ಕಥೆಗಳು ಈ ಮೊದಲೇ ಹೇಳಿರುವಂತೆ 'ಮಾನವತಾವಾದ'ವನ್ನು ಪ್ರತಿಪಾದಿಸುತ್ತವೆ. ಕೆಲವು ಕಥೆಗಳು ಉದಾರವಾದಿ ಭಾರತೀಯ ಸಾಂಸ್ಕೃತಿ ಸ್ತ್ರೀವಾದಕ್ಕೆ ಹೆಚ್ಚು ಹತ್ತಿರವಿದೆ ಎನಿಸುತ್ತದೆ. 'ಸ್ತ್ರೀವಾದವು ಪಾಶ್ಚಾತ್ಯರಿಂದ ಬಂದ ಬಳುವಳಿ' ಎನ್ನುವುದನ್ನು ಅಲ್ಲಗಳೆಯಲು ಪಾಶ್ಚಾತ್ಯ ಚಿಂತಕರಿಂದ ಪಡೆದ ಎಷ್ಟೋ ಚಿಂತನೆಗಳಿಂದ

ಭಾರತೀಯ ಸಮಾಜ ಸುಧಾರಕರು ಜಾಗೃತರಾಗಿದ್ದರು. ಸ್ತ್ರೀ ಸುಧಾರಣೆಯೂ ಅದರಲ್ಲಿ ಒಂದು. ಹೆಣ್ಣಿನ ಅಸ್ಮಿತೆಯನ್ನು ಗುರುತಿಸುವಲ್ಲಿ ನಮ್ಮಲ್ಲೂ ಅಂತಹ ಚಿಂತನೆಗಳು ನಡೆದಿವೆ. ರಾಜಕೀಯ ಸ್ಥಾನಮಾನ, ಸಾಮಾಜಿಕ ಹಕ್ಕು, ಬಾಧ್ಯತೆಗಳಿಗಾಗಿ ನಮ್ಮಲ್ಲೂ ಹೋರಾಟಗಳು ನಡೆದಿವೆ ಎನ್ನುವುದನ್ನು ಭಾರತೀಯ ಮಹಿಳಾ ಚಳುವಳಿಯ ಐತಿಹಾಸಿಕ ಸಮೀಕ್ಷೆ ಶ್ರುತಪಡಿಸುತ್ತದೆ. ಹೆಣ್ಣಿನ ಪೌರಾಣಿಕ ಸ್ತ್ರೀ ಪ್ರತಿಮೆಗಳನ್ನು ಒಡೆದು ಹಾಗೂ ನಮ್ಮ ಸಂಸ್ಕೃತಿ, ಆಚಾರ, ಸಂಪ್ರದಾಯಗಳ ಒಳಗನ್ನು ತೆರೆದು ನೋಡುವಲ್ಲಿ ಪ್ರಸ್ತುತ ನಿರಚನವಾದಿ ಸ್ತ್ರೀವಾದಿ ಸಿದ್ಧಾಂತ ಹೆಚ್ಚು ಮುಖ್ಯವಾಗುತ್ತದೆ.

ಮೂರನೆಯ ಅಧ್ಯಾಯದಲ್ಲಿ 'ಕಥೆ' ಪದ ನಿಷ್ಪತ್ತಿಯ ಕುರಿತಾದ ಚರ್ಚೆಯ ಜೊತೆಗೆ 'ಕಥಾಸಾಹಿತ್ಯ' ಬೆಳೆದುಬಂದ ಬಗೆಯನ್ನು ವಿವರಿಸಲಾಗಿದೆ. ಒಟ್ಟು ಸಾಹಿತ್ಯದ ಹಿನ್ನೆಲೆಯಲ್ಲಿ ಗಮನಿಸಿದಾಗ 'ಕಥೆ' ಹೆಣ್ಣಿನ ಪ್ರಮುಖ ಅಭಿವ್ಯಕ್ತಿ ಪ್ರಕಾರವಾಗಿ ಮೂಡಿಬಂದದ್ದನ್ನು ನೋಡಬಹುದು. ಕಥೆ ಹೇಳುವ ಕಲೆ ಮಹಿಳೆಗೆ ಸಹಜವಾಗಿ ಒದಗಿ ಬಂದಷ್ಟು ಪುರುಷನಿಗೆ ಬರಲಿಲ್ಲ. ನಮ್ಮ ಮೌಖಿಕ ಸಾಹಿತ್ಯವನ್ನು ಗಮನಿಸಿದಾಗಲೂ ಇದು ಸ್ಪಷ್ಟವಾಗುತ್ತದೆ. ಪ್ರತಿಯೊಬ್ಬ ಹೆಣ್ಣಿನ ಬದುಕೂ ಒಂದು ಕಥೆಯೇ. ಕರಾವಳಿ ಲೇಖಕಿಯರೂ ಇದರಿಂದ ಹೊರತಾಗಿಲ್ಲ. ಹೆಣ್ಣಿನ ಸುತ್ತ ಸುತ್ತಲ್ಪಟ್ಟ ಸಂಪ್ರದಾಯ, ಸಂಸ್ಕೃತಿಗಳ ಅನಗತ್ಯ ಬೇಲಿ ಸರಿದುಕೊಳ್ಳುವುದಕ್ಕೆ, ಅವಳ ಮಾನಸಿಕ ಜಗತ್ತನ್ನು ಆವರಿಸಿದ ಕತ್ತಲನ್ನು ಹೋಗಲಾಡಿಸುವುದಕ್ಕೆ, ಸಾಮಾಜಿಕ ಅಸ್ತಿತ್ವ ಗುರುತಿಸಿಕೊಳ್ಳುವುದಕ್ಕೆ ಪೌರಾತ್ಯ, ಪಾಶ್ಚಾತ್ಯ ಸಾಂಸ್ಕೃತಿಕ ಮುಖಾಮುಖಿ ದೊಡ್ಡ ಕೊಡುಗೆಯನ್ನು ನೀಡಿದೆಯಾದ್ದರಿಂದ ಕಥಾಸಾಹಿತ್ಯವನ್ನು ಅದೇ ನಿಟ್ಟಿನಲ್ಲಿ ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಸಂಸ್ಕೃತಿಯ ಅಭಿವ್ಯಕ್ತಿಗೆ ಪ್ರಾದೇಶಿಕ ಪರಿಸರವೇ ಮುಖ್ಯ ಸಾಧನವಾಗಿದೆ. ಕರಾವಳಿಯ ಲೇಖಕಿಯರ ಕಥೆಗಳಲ್ಲಿನ ಸ್ತ್ರೀಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವುದರಲ್ಲಿ ಕರಾವಳಿಯ ಭೌಗೋಳಿಕ ಹಿನ್ನೆಲೆ, ಇಲ್ಲಿನ ಸಾಮಾಜಿಕ, ರಾಜಕೀಯ ಆರ್ಥಿಕ ಹಾಗೂ ಸಾಂಸ್ಕೃತಿಕ ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಂಸ್ಕೃತಿ ಎನ್ನುವುದು ಒಟ್ಟು ಜೀವನಕ್ರಮ ಆಗಿರುವುದರಿಂದ ಈ ಪ್ರಬಂಧದಲ್ಲಿ ಆಯ್ಕೆಮಾಡಿಕೊಂಡಿರುವ ಪ್ರಾತಿನಿಧಿಕ ಲೇಖಕಿಯರ ಕೃತಿಗಳೊಂದಿಗೆ ಈ ಪ್ರದೇಶದ ಇತರ ಲೇಖಕ-ಲೇಖಕಿಯರ ಮಾತ್ರವಲ್ಲ ಒಟ್ಟು ಕರ್ನಾಟಕದ ಸಂದರ್ಭದಲ್ಲಿ ಕನ್ನಡ ಕಥಾ ಸಾಹಿತ್ಯ ಬೆಳೆದುಬಂದ ಬಗೆಯನ್ನೂ, ಗಮನಿಸಲಾಗಿದೆ. ಇದನ್ನು ಅಧ್ಯಾಯ ನಾಲ್ಕರಲ್ಲಿ ವಿವರಿಸಲಾಗಿದೆ.

ಐದು, ಆರು, ಹಾಗೂ ಏಳನೇ ಅಧ್ಯಾಯಗಳು 'ಕರಾವಳಿ ಲೇಖಕಿಯರ ಕಥೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರೀ ಸಂಸ್ಕೃತಿಯ ಆಯಾಮಗಳನ್ನು' ಮೂರು ಪ್ರತ್ಯೇಕ ನೆಲೆಗಳಲ್ಲಿ ಕಟ್ಟಿಕೊಡುತ್ತವೆ. ಸ್ತ್ರೀತ್ವದ ನೆಲೆ, ಸ್ತ್ರೀವಾದಿತ್ವದ ನೆಲೆ

ಹಾಗೂ ಸ್ತ್ರೀಯಾತ್ಮಕತೆಯ ನೆಲೆ ಎಂಬ ಮೂರು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ತಿಳಿಸಿರುವಂತೆ ಕರಾವಳಿಯ ಮಹಿಳಾ ಸಾಹಿತ್ಯಕ್ಕೆ ದೀರ್ಘವಾದ ಇತಿಹಾಸವಿದ್ದರೂ ಪ್ರಬಂಧವನ್ನು ಒಂದು ಚೌಕಟ್ಟಿಗೆ ಅಳವಡಿಸುವ ಕಾರಣಕ್ಕಾಗಿ ೧೯೫೦ರಿಂದ ೨೦೧೦ ರವರೆಗೆ ಕೇವಲ ಐವರು ಲೇಖಕಿಯರ ಪ್ರಾತಿನಿಧಿಕ ಕಥೆಗಳನ್ನಷ್ಟೇ ಇಲ್ಲಿ ಗಮನಿಸಲಾಗಿದೆ. ಗಂಗಾಪಾದೇಕಲ್, ಪ್ರೇಮಾಭಟ್, ಮಿತ್ರಾ ವೆಂಕಟ್ರಾಜ್, ವೈದೇಹಿ ಹಾಗೂ ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ಸ್ತ್ರೀಸಂಸ್ಕೃತಿಯ ಆಯಾಮಗಳನ್ನು ಹುಡುಕುವ ಪ್ರಯತ್ನ ಇದಾಗಿದೆ.

ವೈಯುಕ್ತಿಕ ನೆಲೆ, ಕೌಟುಂಬಿಕ ನೆಲೆ, ಧಾರ್ಮಿಕ ನೆಲೆ ಹಾಗೂ ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷದ ನೆಲೆಗಳನ್ನು ಮೇಲಿನ ಮೂರು ಅಧ್ಯಾಯಗಳಲ್ಲಿ ಕಂಡುಕೊಳ್ಳಲಾಗಿದೆ.

ಕಥೆಗಾರರಾಗಿ, ಕಾದಂಬರಿಕಾರರಾಗಿ ನಾಡಿಗೆ ಪರಿಚಿತರಾಗಿರುವ ಗಂಗಾ ಪಾದೇಕಲ್ ಜೀವನದ ಅನುಭವವನ್ನು ಅದರ ಎಲ್ಲಾ ಆಯಾಮಗಳಲ್ಲಿ ಸೂಕ್ಷ್ಮವಾಗಿ ಗ್ರಹಿಸಿ, ಅದನ್ನು ಕಲಾತ್ಮಕವಾಗಿ ಪುನರ್ ಸೃಷ್ಟಿಸುವ ಕೌಶಲ್ಯ ಹೊಂದಿದವರು. ವಿಸ್ತಾರವಾದ ಅನುಭವ ಪ್ರಪಂಚವನ್ನು ಹೊಂದಿರುವ ಗಂಗಾಪಾದೇಕಲ್ ಸಮಾಜದ ಎಲ್ಲಾ ಸ್ತರಗಳ ಜನರನ್ನು ತನ್ನ ಕಥೆಗಳಿಗೆ ಆಯ್ದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ 'ಹೆಜ್ಜೆ ಮೂಡದ ಹಾದಿಯಲ್ಲಿ', 'ಪ್ರೇತಭಟ್ಟ', 'ಕಳ್ಳ', 'ಪಿಂಡ', 'ಕಲ್ಲರಳಿ ಹೂವಾಗಿ', ಬದುಕಿನ ಬೇರನ್ನರಸಿ' ಮುಂತಾದ ಕಥೆಗಳು ಬೆಳಕು ಚೆಲ್ಲುತ್ತದೆ.

"ಪಾದೇಕಲ್‌ರವರ ಕತೆಯ ಪಾತ್ರಗಳು ಕಪ್ಪು - ಬಿಳುಪು ಪಾತ್ರಗಳಲ್ಲ. ರಕ್ತ ಮಾಂಸ ತುಂಬಿದ ಜೀವಂತ ದನಿಗಳು"[೧] ಎಂದು ಅನುಪಮಾ ನಿರಂಜನಾರವರು 'ಹೆಜ್ಜೆ ಮೂಡದ ಹಾದಿಯಲ್ಲಿ' ಕಥಾಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಮನುಷ್ಯನ ಒಳ್ಳೆಯತನ ಹಾಗೂ ದೌರ್ಬಲ್ಯ ಇವೆರಡನ್ನೂ ಪಾತ್ರಗಳಲ್ಲಿ ತುಂಬುವ ಗಂಗಾರವರು ಇತರ ಲೇಖಕಿಯರಿಗಿಂತ ಭಿನ್ನರಾಗಿ ಕಾಣುತ್ತಾರೆ. ಅನುಕಂಪ ಹಾಗೂ ಮಾನವೀಯತೆಯನ್ನೇ ತನ್ನ ಕಥೆಗಳ ಮೂಲ ಸೆಲೆಯಾಗಿಸಿಕೊಂಡ ಗಂಗಾ ಪಾದೇಕಲ್ ಶೋಷಣೆ ರಹಿತ ಸಮಾಜವನ್ನು ಕಾಣುವ ಹಂಬಲವುಳ್ಳವರು. ಅವರ 'ದಿಕ್ಸೂಚಿ', 'ಪರೀಕ್ಷೆ', 'ಒಂದು ಸಾವಿನ ಕಥೆ', 'ಆ ಸಂಜೆ' ಮುಂತಾದ ಕಥೆಗಳಲ್ಲಿ ಈ ಮೇಲಿನ ಅಂಶಗಳು ತೆರೆದುಕೊಳ್ಳುತ್ತವೆ.

ಗಂಡು - ಹೆಣ್ಣಿನ ಸಂಬಂಧ, ದಾಂಪತ್ಯದ ಬಿಕ್ಕಟ್ಟುಗಳು, ವೈಧವ್ಯ ಮುಂತಾದ ಸೂಕ್ಷ್ಮ ವಿಚಾರಗಳನ್ನು ಮನುಷ್ಯತ್ವದ ನೆಲೆಯಲ್ಲಿ ಕಾಣುತ್ತಾರೆ. 'ಒಂದೇ ಒಂದು ಅವಕಾಶ', 'ಸ್ಫೋಟ', 'ಚಕ್ರ' 'ಬದುಕಿನ ಬೇರನ್ನರಸಿ' 'ಪುಲಪೇಡಿ ಮತ್ತು ಇತರ ಕತೆಗಳು' ಮುಂತಾದವು ಇದಕ್ಕೆ ಸಾಕ್ಷಿಯನ್ನೊದಗಿಸುತ್ತವೆ.

ಮಹಿಳೆಯರ ಸಮಸ್ಯೆ, ಸಮಾಜದ ಸಮಸ್ಯೆ, ಬಡತನ ಇವುಗಳ ಬಗೆಗೂ ಗಂಗಾ ಪಾದೇಕಲ್‌ರವರ ಕಥೆಗಳಲ್ಲಿ ಉತ್ತರವಿದೆ. 'ಪರಿಹಾರ', 'ಹಸಿವು', ನೆಲೆತಪ್ಪಿದ ಹಕ್ಕಿ', 'ಯಾತ್ರೆ' ಮುಂತಾದ ಕಥೆಗಳಲ್ಲಿ ಇವುಗಳ ಚಿತ್ರಣವಿದೆ.

ಕರಾವಳಿಯ ವೈಶಿಷ್ಟ್ಯದ ಜೊತೆಗೆ ಮನುಷ್ಯನ ಸಂಕಟ ಹಾಗೂ ಸಂತೋಷ ಇವೆರಡನ್ನೂ ಗಂಗಾರವರು ತಮ್ಮ ಕಥೆಗಳಲ್ಲಿ ವಿಶ್ಲೇಷಿಸುತ್ತಾರೆ. ಮನುಷ್ಯ ಸಂಬಂಧ, ಸ್ವಭಾವದ ಸೂಕ್ಷ್ಮವಾದ ವಿವರಣೆ, ವ್ಯಕ್ತಿತ್ವದ ಹಿಂದಿನ ಮಾರ್ಧವತೆ, ಮಾರ್ಧವತೆಯಲ್ಲೂ ಕಾಣುವ ಕ್ರೌರ್ಯದ ಚಿತ್ರಣ ಗಂಗಾ ಪಾದೇಕಲ್‌ರವರ ಕಥೆಗಳಲ್ಲಿವೆ.

ಕನ್ನಡ ಕಥಾಲೋಕದಲ್ಲಿ ವಿಶಿಷ್ಟ ಸಾಧನೆಗೈದ ಪ್ರೇಮಾಭಟ್ ಮುನ್ನೂರೈವತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದವರು. ಅಪಾರ ಲೋಕಾನುಭವವನ್ನು ಮೈಗೂಡಿಸಿಕೊಂಡಿರುವ ಇವರ ಕಥೆಗಳ ವಸ್ತುವಿನಲ್ಲಿ ವೈವಿಧ್ಯತೆ, ಅನುಭವದ ವ್ಯಾಪಕತೆ, ರಚನಾ ವಿನ್ಯಾಸ, ಭಾಷಾ ಶೈಲಿ ಎಲ್ಲ ವಿಧದಲಿಯೂ ಪಕ್ವತೆಯನ್ನು ಕಂಡುಕೊಂಡವರು. ಮನೋಜ್ಞವಾದ ಶೈಲಿಯ ಮೂಲಕ ಮಾನವ ಜೀವನದ ನಗ್ನ ಸತ್ಯಗಳಿಗೆ ತನ್ನ ಕಥೆಗಳಲ್ಲಿ ರೂಪ ಕೊಟ್ಟಿದ್ದಾರೆ. ಸಂಖ್ಯೆ ಹಾಗೂ ಸತ್ವದ ದೃಷ್ಟಿಯಿಂದ ಅವರ ಕಥೆಗಳು ಯಶಸ್ವಿಯಾಗುತ್ತವೆ.

ಕೌಟುಂಬಿಕ ಸಮಸ್ಯೆ, ಕೌಟುಂಬಿಕ ಸಾಮರಸ್ಯ, ಸಾಮಾಜಿಕ ಕಾಳಜಿಗಳಿಗೆ ಇವರ ಕಥೆಗಳಲ್ಲಿ ಹೆಚ್ಚಿನ ಸ್ಥಾನ ದೊರಕಿದೆ. ಸ್ತ್ರೀ ಶಿಕ್ಷಣ, ಸ್ವಾತಂತ್ರ್ಯ, ಶೋಷಣೆ, ವಿಧವೆ, ತಾಯ್ತನ, ಬಂಜೆ, ವರದಕ್ಷಿಣೆ, ವೃದ್ಧಾಪ್ಯ ವೇಶ್ಯಾ ಸಮಸ್ಯೆ, ಬಡತನ, ಜಾತಿ, ಸಮಾನತೆ, ಪರಿಸರ ಕಾಳಜಿ ಮುಂತಾದ ವಿಷಯಗಳು ಇವರ ಕಥೆಗಳಿಗೆ ವಸ್ತುವಾಗಿವೆ.

'ಸುಖ ಎಲ್ಲಿದೆ', 'ಅತಂತ್ರರು', 'ಬದುಕು', ಹೀಗೂ ಉಂಟೇ?' 'ಆಟ', 'ಒಡೆದ ಕನಸು', 'ಅಪಹರಣ', 'ಅತಂತ್ರರು', 'ಪಂದ್ಯ', 'ಅಮ್ಮಾ ಬಂದಳು', 'ಜವಾಬ್ದಾರಿ', 'ತಲೆ ತಿರುಕರು', 'ಮೇಡಂ', 'ಆಶ್ವಾಸನೆ', 'ಪಂಚಾಮೃತ', 'ಸೆಳೆತ', 'ಸಾಕುಮಗ', 'ಕಾಲ್ಗುಣ', 'ಸ್ನೇಹಕ್ಕೆ ಬೆಲೆಯಿಲ್ಲ', 'ನಿರೀಕ್ಷೆ', 'ಅಂಕೆ ತಪ್ಪಿದ ಜಾಡು', 'ಉಪಸಂಹಾರ', 'ಕೋಲುಕೋಲೆನ್ನ ಕೋಲೆ', 'ಅದೃಷ್ಟ', 'ಸಿಡಿಮದ್ದು', 'ಹಗರಣ', 'ಹೆಣ' 'ಗೂಡು', 'ಕೊರಡುಜೀವದ ಮನಸ್ಸು' ಮುಂತಾದ ಕಥೆಗಳಲ್ಲಿ ಮೇಲಿನ ಎಲ್ಲಾ ಅಂಶಗಳು ಚಿತ್ರಿತವಾಗಿವೆ.

ವಿಶಿಷ್ಟವಾದ ಕಥಾಲೋಕವನ್ನು ಕಟ್ಟಿಕೊಡುವ ಮಿತ್ರಾ ವೆಂಕಟ್ರಾಜ್ ಹೆಣ್ಣಿನ ನೋವು, ನಲಿವು, ಒಂಟಿತನ, ಹೆಣ್ಣಿನ ಬದುಕಿನ ಅನನ್ಯತೆಯನ್ನು ಕಟ್ಟಿಕೊಡುವುದರೊಂದಿಗೆ ದೂರದ ಮುಂಬಯಿಯಲ್ಲಿದ್ದೂ ತನ್ನ ತಾಯ್ನೆಲದ ಮಣ್ಣಿನ ವಾಸನೆಯನ್ನು ಕಥೆಗಳ ಮೂಲಕ ಪಸರಿಸಿದವರು. ಭಾಷೆಯ ಮೇಲೆ ಹಿಡಿತವಿರುವ ಇವರು ಕುಂದಾಪುರದ ಆಡುಭಾಷೆಯ ಮೂಲಕ ಗ್ರಾಮೀಣ ಸೊಗಡನ್ನು ಉಳಿಸಿಕೊಂಡವರು. ಸುಂದರವಾದ ನಿರೂಪಣೆಯ ಮೂಲಕ ಪ್ರಾಮಾಣಿಕವಾದ ಸಂವೇದನೆಗಳನ್ನು ತನ್ನ ಕಥೆಗಳಲ್ಲಿ ಕಾಣಿಸುತ್ತಾರೆ. ಇವರ ಕಥೆಗಳಲ್ಲಿ ಬರುವ ಗ್ರಾಮೀಣ ಹೆಣ್ಣು ಮಕ್ಕಳು ಧೈರ್ಯಶಾಲಿಗಳು. ಸ್ತ್ರೀ ಪರ ಧ್ವನಿ ಮಿತ್ರಾರವರ ಕಥೆಗಳಲ್ಲಿ ಗಟ್ಟಿಯಾಗಿ ಕೇಳಿ ಬಂದಿದೆ.

ಮಿತ್ರಾ ವೆಂಕಟ್ರಾಜ್‌ರವರ ಕಥೆಗಳಲ್ಲಿ ಹೆಣ್ಣಿನ ಅಂತರಂಗದ ಬದುಕಿನ ಅನಾವರಣವಾಗಿದೆ. ಮನುಷ್ಯ ಸಂಬಂಧಗಳ ಶೋಧನೆಯಲ್ಲಿ ತೊಡಗುವ 'ಒಂದು ಒಸಗೆ ಒಯ್ಯುವುದಿತ್ತು' ಕಥೆ, ಹೆಣ್ಣೊಬ್ಬಳ ಮೂಲಕ ಸ್ವಾತಂತ್ರ್ಯ - ಪರಾತಂತ್ರ್ಯದ ವಿಶ್ಲೇಷಣೆಗೆ ಇಳಿಯುವ 'ಹಕ್ಕಿ ಮತ್ತು ಅವಳು' ಕಥೆ, ಕಾಮಕ್ಕಿಂತ ಪ್ರೀತಿ ಹಾಗೂ ಅಂತಃಕರಣವೇ ಮುಖ್ಯವೆಂದು ಸಾರುವ 'ಬೊಳ್ಳದ ಸಂಕ' ಕಥೆ, ದಾಂಪತ್ಯದ ಅನನ್ಯ ಅನುಭವಗಳನ್ನು ಶೋಧಿಸುವ 'ನಾಗಮ್ಮನ ಮನೆಯ ಸಣ್ಣಗೇಟು' ಕಥೆ ಇಲ್ಲೆಲ್ಲ ಕಥೆಗಾರ್ತಿ ಹೆಣ್ಣಿನ ಒಳಮನಸ್ಸಿನೊಂದಿಗೆ ಸಂಭಾಷಣೆ ಮಾಡುತ್ತಿದ್ದಾರೆ.

'ಒಂದು ಒಸಗೆಯ ಒಯ್ಯುವುದಿತ್ತು' ಕಥೆಯು 'ಬೊಳ್ಳದ ಸಂಕ' ಕತೆಯನ್ನು ನೆನಪಿಸುತ್ತದೆ. 'ಹಕ್ಕಿ ಮತ್ತು ಅವಳು' ಕತೆಯು ವೈದೇಹಿಯವರ 'ಗೂಡಿನೊಳಗೆ ಒಂದು ಹಕ್ಕಿ' ಕಥೆಯನ್ನು ಹೋಲುತ್ತದೆ. 'ಒಂದು ಗೂಡಿನ ಹಕ್ಕಿ' ಕಥೆಯ ನಾಯಕಿ ಬಂಧನದಿಂದ ಬಿಡುಗಡೆ ಪಡೆಯಲು ಪ್ರಯತ್ನಿಸಿಯೂ ಅದರಿಂದ ಮುಕ್ತಳಾಗುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿದುಕೊಂಡರೆ, 'ಹಕ್ಕಿ ಮತ್ತು ಅವಳು' ಕಥೆಯ ಅವಳು ಬಂಧನದ ಅರಿವಾಗುತ್ತಲೇ ಬಿಡುಗಡೆಯ ದಾರಿಯನ್ನು ಕಾಣುತ್ತಾಳೆ.

ಮಿತ್ರಾರವರ ಕಥೆಗಳು ವೈಚಾರಿಕ ನೆಲೆಗಟ್ಟಿನ ಮೇಲೆ ನಿಂತ ಭಾವಸಂವಾದಿ ಕಥೆಗಳು. ಇಲ್ಲಿನ ಕಥೆಗಳು ಸ್ತ್ರೀ ಸಂಸ್ಕೃತಿಯ ಜೊತೆಗೆ ಸ್ತ್ರೀವಾದಿ ಅಧ್ಯಯನದ ಭೂಮಿಕೆಯನ್ನು ನಿರೀಕ್ಷಿಸುತ್ತವೆ.

ವೈದೇಹಿ ಕರಾವಳಿ ಕಂಡ ಅಪ್ರತಿಮ ಕಥೆಗಾರ್ತಿಯಾಗಿದ್ದಾರೆ. ಕಥನ ಸಾಹಿತ್ಯದ ಮೂಲಕ ಹೆಣ್ಣೊಬ್ಬಳು ಯಾವ ಎತ್ತರಕ್ಕೆ ಏರಬಹುದೋ ಆ ಎತ್ತರವನ್ನು ತಲುಪಿದವರು. ಸಂಖ್ಯೆಯ ದೃಷ್ಟಿಯಿಂದಷ್ಟೇ ಅಲ್ಲ, ಮೌಲ್ಯದ ದೃಷ್ಟಿಯಿಂದ ಎಲ್ಲಾ ಓದುಗರನ್ನು ತಲುಪಿದ್ದಾರೆ. ಗ್ರಾಮೀಣ ಬದುಕು, ಕೌಟುಂಬಿಕ ಜೀವನ, ಹೆಣ್ಣು – ಗಂಡುಗಳ

ಸಂಬಂಧಗಳು ತಂದೊಡ್ಡುವ ತಾಕಲಾಟಗಳು, ಆಧುನಿಕ ಬದುಕು ತಂದೊಡ್ಡುವ ಸ್ಥಿತ್ಯಂತರಗಳು – ಇವೆಲ್ಲವನ್ನೂ ಬಹಳ ಸಮರ್ಥವಾಗಿ ತಮ್ಮ ಕಥೆಗಳಲ್ಲಿ ನಿರೂಪಿಸಿದ್ದಾರೆ.

ವೈದೇಹಿಯವರು ತಾನು ಕಂಡಿರುವ ಅನುಭವ ದ್ರವ್ಯವನ್ನು ಪ್ರಗತಿಪರವಾಗಿ ಚಿಂತಿಸಿ, ಯಾರ ಪರವಾಗಿಯೂ ವಿರೋಧಿಯಾಗಿಯೂ ಮಾತನಾಡದೆ ಓದುಗರ ಮುಂದಿಡುತ್ತಾರೆ. ಯಾವುದೇ ಚಳವಳಿಯಲ್ಲಿ, ತನ್ನನ್ನು ಗುರುತಿಸಿಕೊಳ್ಳದೇ ಹೋದರೂ ಲಿಂಗ ತಾರತಮ್ಯದ ಪ್ರಶ್ನೆಗಳನ್ನು ಪ್ರಬುದ್ಧವಾಗಿ ನಿರ್ವಹಿಸುತ್ತಾರೆ. ಆಯಾ ಪಾತ್ರ, ಸನ್ನಿವೇಷಗಳನ್ನು ವಿವರಿಸುತ್ತಲೇ ಸಾಮಾಜಿಕ ಕ್ರೌರ್ಯವನ್ನು ಬಯಲಿಗೆಳೆಯುತ್ತಾರೆ. ತನ್ನ ಅಂತರ್ಮುಖತೆ, ಕಥೆ ಹೆಣೆಯುವಲ್ಲಿನ ಸೂಕ್ಷ್ಮ ಕುಸುರಿ ಕೆಲಸ ಇವುಗಳಿಂದ ಇತರ ಕಥೆಗಾರ್ತಿಯರಿಗಿಂತ ಭಿನ್ನರಾಗಿ ಕಾಣುತ್ತಾರೆ.

ವೈದೇಹಿಯವರ ಬಹುತೇಕ ಕಥೆಗಳ ಕೇಂದ್ರವಸ್ತು ಹೆಣ್ಣು, ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ, ಸೊಸೆಯಾಗಿ, ಅತ್ತೆಯಾಗಿ - ಹೀಗೆ ಬದುಕಿನ ವಿವಿಧ ಮಗ್ಗುಲುಗಳಲ್ಲಿ ಹೆಣ್ಣು ಅನುಭವಿಸುವ ನೋವು, ಸಂಕಟ, ತಾಕಲಾಟಗಳನ್ನು ಹೃದಯಂಗಮವಾಗಿ ಇವರ ಕಥೆಗಳು ಕಟ್ಟಿಕೊಡುತ್ತವೆ. ಇವರ ಕಥೆಗಳಲ್ಲಿ ಹೆಣ್ಣಿನ ಅನುಭವಲೋಕವನ್ನು ಸಮಾಜದ ಗಮನಕ್ಕೆ ತರುವ ಆಶಯವಿದೆ. ಸುಮಿತ್ರಾಬಾಯಿಯವರ ಮಾತಿನಲ್ಲಿ ಹೇಳುವುದಾದರೆ, "ಹೆಣ್ಣಿನ ಅನುಭವದ ನೆಲೆಯಿಂದ ಬದುಕಿನತ್ತ ಪರಿಶೀಲನಾತ್ಮಕವಾಗಿ ನೋಡುವ ಕಾಳಜಿ ವೈದೇಹಿಯವರ ಪ್ರಮುಖ ಆಸಕ್ತಿ"[3]. ತನ್ನ ದಟ್ಟವಾದ ಜೀವನಾನುಭವವನ್ನು ತೆರೆದ ಕಣ್ಣಿನಿಂದ ನೋಡಿ, ಅದನ್ನೇ ಕಥೆಯಾಗಿಸಿ ಓದುಗರ ಮುಂದಿಡುವ ವೈದೇಹಿಯವರು ಮನುಷ್ಯ ಪರವಾಗಿ ನಿಲ್ಲುತ್ತಾರೆಯೇ ವಿನಃ ವ್ಯವಸ್ಥೆಯ ಪರವಾಗಿ ಅಲ್ಲ.

ವೈದೇಹಿಯವರ ಕಥೆಗಳ ಕೇಂದ್ರವಾಗಿರುವ ಹೆಣ್ಣು ನಗರ ಜೀವನದ ಮಧ್ಯಮ ವರ್ಗದ ಬ್ರಾಹ್ಮಣ ಹೆಣ್ಣಾಗಿರಬಹುದು, ಕುಂದಾಪುರ ಪರಿಸರದ ಬ್ರಾಹ್ಮಣ ಹೆಣ್ಣಾಗಿರಬಹುದು ಇಲ್ಲವೇ ಬ್ರಾಹ್ಮಣೇತರ ಹೆಣ್ಣಾಗಿರಬಹುದು. ಇವರೆಲ್ಲಾ ಸ್ವಾಭಿಮಾನಿಗಳಾದ, ಗಟ್ಟಿ ವ್ಯಕ್ತಿತ್ವದ ಹೆಣ್ಣುಗಳೇ ಆಗಿದ್ದಾರೆ. ತನ್ನ ಅಸ್ತಿತ್ವಕ್ಕಾಗಿ ಚಡಪಡಿಸುವ, ಬದುಕಿನ ಮಾರ್ಗಗಳನ್ನು ಶೋಧಿಸುವ ಹೆಣ್ಣಾಗಿದ್ದಾರೆ.

'ಒಂದು ಅಪರಾಧ ತನಿಖೆ', ಕಥೆಯ 'ಕೂಸು', 'ಗೂಡಿನೊಳಗೆ ಒಂದು ಹಕ್ಕಿ' ಕಥೆಯ ಮಾಲತಿ, 'ಅಕ್ಕು' ಕಥೆಯ ದೊಡ್ಡತ್ತೆ, 'ವಾಣಿಮಾಯಿ' ಕಥೆಯ ವಾಣಿಮಾಯಿ, 'ಭೂತ' ಕಥೆಯ ಪಾರ್ವತಿ, 'ಚಿಪ್ಪು' ಕಥೆಯ ಯಶೀ, 'ಗುಲಾಬಿ ಟಾಕೀಸು' ಮತ್ತು 'ಸಣ್ಣ ಅಲೆಗಳು' ಕಥೆಯ ಗುಲಾಬಿ ಹಾಗೂ ಲಿಲ್ಲಿಬಾಯಿ, 'ಅಂತರಂಗದ ಪುಟಗಳು'

ಕಥೆಯ ಸುಬ್ಬಿ ಈ ಎಲ್ಲಾ ಪಾತ್ರಗಳು ಮೇಲಿನ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತಾರೆ. 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಸ್ತ್ರೀ ನೆಲೆಯಲ್ಲಿ ನಿಂತು ಹೊಸ ದೃಷ್ಟಿಕೋನದಿಂದ ನೋಡುವ ಕಥೆಯಾಗಿದೆ. 'ಅಂತರಂಗದ ಪುಟಗಳು' ಕಥೆಯ ಅಚಲಾ, ಸೌಗಂಧಿಯ ಸ್ವಗತಗಳು' ಕಥೆಯ ಸೌದಾಮಿನಿ ಮುಂತಾದ ಪಾತ್ರಗಳು ಯೌವ್ವನದ ಹೆಣ್ಣಿನ ಗುಪ್ತ ಬಯಕೆಗಳ ವಿವರಣೆ ನೀಡುತ್ತವೆ.

'ಮರಗಿಡಬಳ್ಳಿ' ಕಥೆಯ ಮಂದಕ್ಕ, 'ಅಳಿವು - ಉಳಿವುಗಳ ನಡುವಿನಲ್ಲಿ' ಕಥೆಯ ಮಂಜತ್ತೆಯ ಪಾತ್ರಗಳು ವೃದ್ಧೆಯರ ಚಿತ್ರಣವನ್ನು ನೀಡುತ್ತವೆ. 'ಮದುವೆ - ಹೆಣ್ಣು - ಸೀರೆ', 'ಅಲ್ಲಲ್ಲಿನ ಲೋಕದವರು' ಕಥೆಗಳಲ್ಲಿ ಆರ್ಥಿಕ ಸ್ಥಿತಿಯು ಮನುಷ್ಯ ಸಂಬಂಧವನ್ನು ಹೇಗೆ ನಿಯಂತ್ರಿಸುತ್ತದೆ ಎಂಬುದರ ವಿವರಗಳಿವೆ.

ಹೀಗೆ ಹೆಣ್ಣಿನ ಬದುಕಿನ ವಿವಿಧ ಆಯಾಮಗಳನ್ನು ವೈಚಾರಿಕ ನೆಲೆಯಲ್ಲಿ ಕಟ್ಟಿಕೊಡುವ ವೈದೇಹಿಯವರು ವೈಚಾರಿಕತೆಯನ್ನು ಆಯಾಯ ಪಾತ್ರಗಳ ಮೂಲಕ ಸಂದರ್ಭ, ಘಟನೆಗಳೊಂದಿಗೆ ವಿವರಿಸುತ್ತಾ ಹೋಗುತ್ತಾರೆ.

"ವೈದೇಹಿಯವರನ್ನು ಮಹಿಳಾ ಲೇಖಕಿ ಎನ್ನುವ ಪರಿಮಿತ ಚೌಕಟ್ಟಿನಲ್ಲಿ ಇಟ್ಟು ನೋಡಿ ಮೆಚ್ಚಬೇಕಾದ ಪ್ರಮೇಯವಿಲ್ಲ. ಕನ್ನಡದ ಹೊಸ ಪೀಳಿಗೆಯ ಯಾವುದೇ ಸಣ್ಣ ಕಥೆಗಾರರಿಗೆ ಸರಿಸಾಟಿಯಾಗಬಲ್ಲುದು ಇವರ ಕಥನ ತಂತ್ರ"[೩] ಎನ್ನುವ ಪ್ರಸನ್ನರವರ ಮಾತು ಅರ್ಥಪೂರ್ಣ.

ಸಾರಾ ಅಬೂಬಕ್ಕರ್ ಕನ್ನಡದ ಒಬ್ಬ ಹಿರಿಯ ಹಾಗೂ ಸಂವೇದನಾಶೀಲ ಬರಹಗಾರ್ತಿ. ಮುಸ್ಲಿಂ ಸಮುದಾಯದಿಂದ ಬಂದ ಇವರು ತನ್ನ ಜನಾಂಗದ ಮಹಿಳೆಯರ ಬದುಕಿನ ವಿಭಿನ್ನ ಅನುಭವಗಳನ್ನು ತನ್ನ ಕೃತಿಗಳ ಮೂಲಕ ನೀಡಿದ್ದಾರೆ. ಬಂಡಾಯ ಕಾಲಘಟ್ಟದಲ್ಲಿ ತನ್ನ ಅಂತರಂಗದ ನೋವುಗಳಿಗೆ ಧ್ವನಿಯಾಗಿ, ಆ ಧ್ವನಿಗಳಿಗೆ ಅಕ್ಷರ ರೂಪ ನೀಡಿದವರು. ಧರ್ಮದ ಬಗೆಗೆ ಪ್ರೀತಿಯನ್ನಿಟ್ಟುಕೊಂಡೇ, ಧರ್ಮದ ಹೆಸರಿನಲ್ಲಿ ಮಾಡುವ ಅನ್ಯಾಯವನ್ನು ಎತ್ತಿ ತೋರಿಸುವ ದಿಟ್ಟತನವನ್ನು ಮೆರೆದವರು. ಧರ್ಮದ ಸಂಕೋಲೆಯಲ್ಲಿ ಬಂಧಿಸಲ್ಪಟ್ಟ ಹೆಣ್ಣು ಅನುಭವಿಸುವ ಯಾತನೆಯ ವಿವಿಧ ಮುಖಗಳನ್ನು ತನ್ನದೇ ಅನುಭವಗಳೆಂಬಂತೆ ಸಾರಾ ಚಿತ್ರಿಸಿದ್ದಾರೆ.

ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯ ದಬ್ಬಾಳಿಕೆಯನ್ನು ಪ್ರತಿಭಟಿಸುತ್ತಲೇ ತನ್ನ ಅಸ್ಮಿತೆಯ ಹುಡುಕಾಟ ನಡೆಸುವುದು ಇವರ ಕಥೆಗಳ ಪ್ರಧಾನ ಆಶಯ. ಇವರ ಕತೆಗಳ ಕೇಂದ್ರ ಪಾತ್ರ ಹೆಣ್ಣು. ಜೀವನ ಪ್ರವಾಹದೊಂದಿಗೆ ಕೊಚ್ಚಿ ಹೋಗದೆ ಅದರ ವಿರುದ್ಧ ಈಜಿ ದಡ ಸೇರುವ ದಿಟ್ಟತನವನ್ನು ಬದುಕಿ ತೋರಿಸಿದ ಸಾರಾ ಬದುಕು - ಬರಹವನ್ನು ಬೇರೆ ಬೇರೆಯಾಗಿ ಕಂಡವರಲ್ಲ. ಮದುವೆಯಾಗಿ ಹನ್ನೆರಡು ವರ್ಷಗಳ ಅನಂತರ ಬುರ್ಕಾದಿಂದ

ಹೊರಬಂದ ಸಾರಾರವರು ಅಪಾರ ಜೀವನಾನುಭವ ಹಾಗೂ ತೀಕ್ಷ್ಣವಾದ ವೈಚಾರಿಕ ನಿಲುವುಗಳನ್ನು ಮೈಗೂಡಿಸಿಕೊಂಡವರು. ಈ ವೈಚಾರಿಕ ನಿಲುವುಗಳಿಂದಾಗಿಯೇ ಅನೇಕ ಅಗ್ನಿಕುಂಡಗಳನ್ನು ಅವರು ಎದುರಿಸಬೇಕಾಯಿತು. ಆದರೆ ಅವೆಲ್ಲವನ್ನೂ ದಾಟಿ ಹೊರಬಂದ ಸಾರಾ ಎಂದೂ ಯಾರ ಬೆದರಿಕೆಗಳಿಗೂ ಕಿವಿಗೊಡಲಿಲ್ಲ. ತನಗೆ ಸರಿಯೆನಿಸಿದ್ದನ್ನು ನೇರವಾಗಿ ಹೇಳಿದವರು, ತಾನು ಬಯಸಿದಂತೆ ಬದುಕಿದವರು. ನಾಗರಿಕ ಸಮಾಜ ಸದಾ ಎದುರಿಸುತ್ತಿರುವ ಅನೇಕ ರೀತಿಯ ಅನಿಷ್ಟ, ಪಿಡುಗುಗಳ ವಿರುದ್ಧ ಲೇಖನಿಯನ್ನು ಚುರುಕುಗೊಳಿಸಿದವರು. ಈ ಹಿನ್ನೆಲೆಯಲ್ಲಿ ಇವರ ಪ್ರತಿಯೊಂದು ಸಾಹಿತ್ಯ ಕೃತಿಗಳೂ ವೈಚಾರಿಕ ಕೃತಿಗಳೇ ಆಗಿವೆ.

ಹೆಣ್ಣನ್ನು ಧರ್ಮದ ಕಟ್ಟುಪಾಡಿನಲ್ಲಿ ಬಂಧಿಸಿಟ್ಟು ಅವಳ ಬದುಕನ್ನು ಹೀನಾಯಗೊಳಿಸಿದ ಸಂಗತಿಗಳು ಚಪ್ಪಲಿಗಳು, ಧ್ವನಿಯಿಲ್ಲದ ನೋವುಗಳು, ಸಾರಾಂಶ, ಅಂಕುರ, ಉರಿಬಿಸಿಲು, ಹುಟ್ಟು, ಗೋಡೆ ಹಾಗೂ 'ನಿಯಮ - ನಿಯಮಗಳ ನಡುವೆ' ಎಂಬ ಕಥೆಗಳಲ್ಲಿ ನಿರೂಪಿತವಾಗಿವೆ.

ತನ್ನದೇ ಆದ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳಲು ಹಾತೊರೆಯುತ್ತಾ ಅದಕ್ಕಾಗಿ ಗಂಡನ ತಿರಸ್ಕಾರ, ಇತರ ಹೆಣ್ಣು ಮಕ್ಕಳ ಮೂದಲಿಕೆಯ ಮಾತುಗಳನ್ನು ಸಹಿಸಿಕೊಳ್ಳುತ್ತಾ ಬದುಕುವ ಹೆಣ್ಣುಮಕ್ಕಳ ಬದುಕನ್ನು 'ಉರಿಬಿಸಿಲು', 'ಸಾರಾಂಶ', 'ಅಂಕುರ' ಮೊದಲಾದ ಕಥೆಗಳು ಬಿಂಬಿಸುತ್ತವೆ.

ಸಾರಾ ಅವರ ಮೊದಲ ಘಟ್ಟದ ಕಥೆಗಳಲ್ಲಿ ಗಂಡನಿಂದ ತಲಾಖ್ ಪಡೆದ ಹೆಣ್ಣು ಮಕ್ಕಳು ಮರು ಮದುವೆಯಾಗುವ ಮನಸ್ಸು ಮಾಡದೆ ಅತಂತ್ರ ಸ್ಥಿತಿಯನ್ನು ಅನುಭವಿಸುತ್ತಾರೆ. 'ನಿಯಮ - ನಿಯಮಗಳ ನಡುವೆ' ಕಥೆಯ ಜೊಹರಾ, 'ಗೋಡೆ' ಕಥೆಯ ಫರೀದಾ, ಈ ನಿಟ್ಟಿನಲ್ಲಿ ಗಮನಿಸಬಹುದಾದ ಪಾತ್ರಗಳು. ಇದೇ ಹೊತ್ತಿಗೆ ಹೆಣ್ಣುಮಕ್ಕಳು ಶಿಕ್ಷಣ ಪಡೆದು, ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಮಟ್ಟಿಗೆ ಬೌದ್ಧಿಕತೆಯನ್ನು ಬೆಳೆಸಿಕೊಂಡಿರುವುದು ಗಮನಿಸಬೇಕಾದ ವಿಚಾರ. 'ಬೇಟೆ', 'ಹೊಸದಿಕ್ಕು', 'ಹಳೆಬೇರು ಹೊಸ ಚಿಗುರು', 'ಓ ರಾಮಾ.... !' ಎಂಬ ಕಥೆಗಳಲ್ಲಿ ಈ ಮೇಲಿನ ಅಂಶಗಳು ನಿರೂಪಿತವಾಗಿವೆ.

ಬಂಡಾಯ ಮನೋಧರ್ಮದ, ಸ್ತ್ರೀವಾದಿ ದೃಷ್ಟಿಕೋನದ ಮಾನವೀಯ ಅನುಕಂಪವನ್ನು ಸಾಹಿತ್ಯದ ಮೂಲ ಆಶಯವನ್ನಾಗಿಸಿಕೊಂಡ ಸಾರಾ ಅವರ ಸ್ತ್ರೀಪರ ಕಾಳಜಿಗಳು ಕೇವಲ ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳ ಬಿಡುಗಡೆಗೆ ಮಾತ್ರ ಸೀಮಿತವಾಗಿಲ್ಲ. ಒಟ್ಟು ಭಾರತೀಯ ಸಮಾಜದ ಹೆಣ್ಣು ಮಕ್ಕಳ ಬಿಡುಗಡೆಗಾಗಿ ಶ್ರಮಿಸಿದವರು. "ಮಹಿಳೆಯರೆಲ್ಲರೂ ಜಾತಿ – ಧರ್ಮಗಳ ಬಲೆಯಿಂದ ಹೊರಬಂದು ಒಟ್ಟಾದಾಗ, ಸಹೋದರಿ

ಭಾವದಿಂದ ಪರಸ್ಪರ ಕೈ ಹಿಡಿದು ಮುನ್ನಡೆದು ಎಲ್ಲ ಅಸಮಾನತೆಗಳ ವಿರುದ್ಧ ಒಕ್ಕೊರಲಿನಲ್ಲಿ ಧ್ವನಿ ಎತ್ತಿದಾಗ ಈ ಪರಿಸ್ಥಿತಿ ಬದಲಾದರೂ ಆಗಬಹುದು"[೪] ಎಂದು ಸ್ತ್ರೀ ಸಮುದಾಯಕ್ಕೆ ಕರೆ ನೀಡಿದ್ದಾರೆ.

ಕಳೆದ ಶತಮಾನದ ಮಹಿಳಾ ಸಾಹಿತ್ಯವನ್ನು ಸ್ವಾತಂತ್ರ ಪೂರ್ವ, ಸ್ವಾತಂತ್ರ್ಯೋತ್ತರದಿಂದ ೭೫ರ ವರೆಗೆ ಮತ್ತು ೧೯೭೫ ರಿಂದ ಅನಂತರ ಎಂಬ ಮೂರು ಘಟ್ಟಗಳಲ್ಲಿ ಗಮನಿಸಬಹುದು. ಸಾಹಿತ್ಯ ಸೃಷ್ಟಿ ಮಾಡುವುದಕ್ಕಿಂತಲೂ ಬದಲಾವಣೆಯೇ ಮುಖ್ಯವಾಗಿತ್ತು. ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ, ಸ್ತ್ರೀ ಸುಧಾರಣಾವಾದಿಗಳು ಹುಟ್ಟು ಹಾಕಿದ ಚಳುವಳಿಗಳ ಪ್ರಭಾವ ಈ ಮೊದಲ ಹಂತದ ಲೇಖಕಿಯರ ಮೇಲಾಯಿತು. ಹಾಗಾಗಿಯೇ ಸ್ತ್ರೀ ಶೋಷಣೆಗೆ ಕಾರಣವಾದ ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಪ್ರಶ್ನಿಸುವ ಕೆಲಸವನ್ನು ಆ ಕಾಲದ ಲೇಖಕಿಯರು ಮಾಡಿದರು.

ಎರಡನೇ ಘಟ್ಟದಲ್ಲಿ ಬರವಣಿಗೆ ಆರಂಭಿಸಿದವರ ಪ್ರಧಾನ ಕಾಳಜಿ ಹೆಣ್ಣೇ ಆಗಿದ್ದರೂ ಅದು ಪ್ರಜ್ಞಾಪೂರ್ವಕವಾದದ್ದಾಗಿರಲಿಲ್ಲ. ಮಧ್ಯಮವರ್ಗ ಹಾಗೂ ನಗರಕೇಂದ್ರಿತ ಹಿನ್ನೆಲೆಯಿಂದ ಬಂದ ಈ ಲೇಖಕಿಯರು ಸಮಾಜದ ಅನ್ಯಾಯಗಳನ್ನು, ಅಸಮಾನತೆಗಳನ್ನು ಅರಿಯುವ ಸೂಕ್ಷ್ಮತೆ ಇಲ್ಲದೆ ಪ್ರಶ್ನಿಸಬೇಕಾದದ್ದನ್ನು ಪೋಷಿಸಿದರು, ವೈಭವೀಕರಿಸಿದರು. ಈ ಸಮಯದಲ್ಲಿ ಹೆಚ್ಚು ಹೆಚ್ಚು ಪತ್ರಿಕೆಗಳು ಹುಟ್ಟಿಕೊಂಡದ್ದರಿಂದ ಪ್ರಕಟಣೆಗಳು ಹೇರಳವಾಗಿ ಜನಪ್ರಿಯತೆ ಹೆಚ್ಚಾಯಿತೇ ವಿನಃ ಸಾಹಿತ್ಯದ ಕುರಿತಾದ ಗಂಭೀರ ಚಿಂತನೆ ಸಾಧ್ಯವಾಗಲಿಲ್ಲ. ೧೯೭೫ರಲ್ಲಿ ಸ್ತ್ರೀವಾದ ಭಾರತಕ್ಕೆ ಕಾಲಿಟ್ಟಿತಾದ್ದರಿಂದ ಮಹಿಳಾ ಸಾಹಿತ್ಯ ರಚನೆಯಲ್ಲಿ ಗಮನಾರ್ಹ ಬದಲಾವಣೆಯಾಯಿತು.

ಪ್ರೇಮಾಭಟ್ ಮೇಲೆ ಹೇಳಿದ ಎರಡನೇ ಕಾಲಘಟ್ಟದಲ್ಲಿ ಬರವಣಿಗೆ ಆರಂಭಿಸಿದ್ದರಿಂದ ಅವರ ಸಾಹಿತ್ಯ ಪುರುಷ ಪ್ರಧಾನದ ಸಮಾಜದ ಒಪ್ಪಿತ ಮಾದರಿಯನ್ನೇ ಅನುಸರಿಸಿದವು. ಗಂಗಾ ಪಾದೇಕಲ್ ಕತೆಗಳು ಪ್ರೇಮಾಭಟ್‌ರವರ ಮಾರ್ಗವನ್ನು ಅನುಸರಿಸಲಿಲ್ಲ. ಆದರೆ ಮಹಿಳಾ ಅಸ್ಮಿತೆಯ ಹುಡುಕಾಟಕ್ಕಿಂತ ಭಿನ್ನವಾಗಿ ಪ್ರಶ್ನಿಸುವ, ವಿರೋಧಿಸುವ ನೆಲೆಯಲ್ಲಿ ಮೂಡಿಬಂದಿವೆ.

ಮಿತ್ರಾ ವೆಂಕಟ್ರಾಜ್ ಹಾಗೂ ವೈದೇಹಿಯವರ ಕಥೆಗಳಲ್ಲಿ ಸ್ತ್ರೀವಾದದ ಪ್ರಭಾವ ಆಗಿರುವುದನ್ನು ಗಮನಿಸಬಹುದು. ಆದರೆ ಎಲ್ಲಿಯೂ ಘಂಟಾಘೋಷವಾಗಿ ಸ್ತ್ರೀವಾದವನ್ನು ನಿರೂಪಿಸದೆ ಪಾತ್ರಗಳ ಮೂಲಕವೇ ಅದನ್ನು ಮನದಟ್ಟು ಮಾಡುತ್ತಾರೆ.

ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಪ್ರತಿಭಟನೆ ಇದೆ. ಮುಖ್ಯವಾಗಿ ಧರ್ಮದ ಹೆಸರಿನಲ್ಲಿ ಮುಸ್ಲಿಂ ಹೆಣ್ಣುಮಕ್ಕಳಿಗೆ ಆಗುವ ಅನ್ಯಾಯಗಳನ್ನು ವಿರೋಧಿಸುತ್ತಾರೆ. ಅಲ್ಲಲ್ಲಿ ಪುರುಷ ಪ್ರಧಾನ ಸಮಾಜದ ಒಪ್ಪಿತ ನೆಲೆಗಳ ಹೊಳವುಗಳೂ ಕಾಣಿಸಿಕೊಳ್ಳುತ್ತವೆ. ಆದರೆ ಬಂಧನದಿಂದ ಹೊರಬರುವ ತುಡಿತ ಇವರ ಕತೆಗಳಲ್ಲಿ ಎದ್ದು ಕಾಣುವ ಅಂಶ.

೯.೧. ಫಲಿತಗಳು

ಅಧ್ಯಯನ ಆರಂಭದಲ್ಲಿ ಹಾಕಿಕೊಂಡ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಅಧ್ಯಯನ ಸಾಗಿದೆ. ಸಮಸ್ಯೀಕರಣವನ್ನು ಇಟ್ಟುಕೊಂಡು ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

೧. ಕರಾವಳಿ ಮಹಿಳೆಯು ಸಾಂಸ್ಕೃತಿಕ ಬದುಕನ್ನು ಅಧ್ಯಯನ ಮಾಡುವುದು.
೨. ಕರಾವಳಿ ಸಂಸ್ಕೃತಿಗೂ ಇತರ ಪ್ರಾದೇಶಿಕ ಸಂಸ್ಕೃತಿಗೂ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸುವುದು.
೩. ಪ್ರಾದೇಶಿಕ ಸಂಸ್ಕೃತಿಯ ಅನನ್ಯತೆಯನ್ನು ತಿಳಿದುಕೊಳ್ಳುವುದು.
೪. ಪರಂಪರೆ ಮತ್ತು ಆಧುನಿಕತೆ ಎಂಬ ದ್ವಂದ್ವದ ನೆಲೆಯಲ್ಲಿ ಕರಾವಳಿ ಹೆಣ್ಣಿನ ಬದುಕನ್ನು ಅರ್ಥಮಾಡಿಕೊಳ್ಳುವುದು.
೫. ಕರಾವಳಿ ಕತೆಗಳಲ್ಲಿ ಮಹಿಳಾ ಸಂವೇದನೆಯ ಸಂಕೀರ್ಣತಗಳೂ ನಿರೂಪಿತವಾಗಿರುವ ಬಗೆಯನ್ನು ಅರ್ಥಮಾಡಿಕೊಳ್ಳುವುದು.

ಸಂಸ್ಕೃತಿ ಎನ್ನುವುದು ಮನುಷ್ಯನ ಆಚಾರ – ವಿಚಾರ, ನಂಬಿಕೆ - ನಡವಳಿಕೆ, ರೀತಿ - ನೀತಿ, ಆಲೋಚನೆ ಇವೆಲ್ಲವುಗಳ ಒಟ್ಟು ಮೊತ್ತವೇ ಆಗಿದೆ. ಯಾವಾಗ ಮಾನವ ಹುಟ್ಟಿಕೊಂಡನೋ ಅವನೊಂದಿಗೆ ಸಂಸ್ಕೃತಿಯ ಆವಿರ್ಭಾವವೂ ಆಗಿದೆ. ಕಾಲದಿಂದ ಕಾಲಕ್ಕೆ ಈ ಸಂಸ್ಕೃತಿ ಬದಲಾವಣೆಯ ಕಡೆ ಸಾಗುತ್ತದೆ. ಕಾಲ ಬದಲಾದಂತೆ ಮನುಷ್ಯನ ಬದುಕುವ ಕ್ರಮವೂ ಬದಲಾಗುವುದು ಸಹಜ ಹಾಗೂ ಅನಿವಾರ್ಯವೂ ಆಗಿದೆ. ಕರಾವಳಿಯ ಮಹಿಳೆಯರ ಬದುಕೂ ಇದರಿಂದ ಹೊರತಾಗಿಲ್ಲ. ಆದರೆ ಇದಕ್ಕೆ ಪ್ರಮುಖವಾದ ದಾಖಲೆಗಳೇ ಸಾಹಿತ್ಯ ಕೃತಿಗಳು.

ಯಾವುದೇ ಸಾಹಿತ್ಯ ಕೃತಿ ಒಂದು ನಿರ್ದಿಷ್ಟ ಕಾಲದ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಹುದುಗಿಸಿಟ್ಟುಕೊಂಡಿರುತ್ತದೆ. ಆ ಸಾಹಿತ್ಯ ಕೃತಿಯ ಓದಿನಿಂದ ಲೇಖಕ ಅಥವಾ ಲೇಖಕಿ ಸಮಕಾಲೀನ ಸಮಸ್ಯೆಗಳನ್ನು

ಪರಿಭಾವಿಸುವ ರೀತಿ ಹಾಗೂ ಅವುಗಳಿಗೆ ಪ್ರತಿಕ್ರಿಯಿಸುವ ರೀತಿಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಸಾಮಾಜಿಕ ಸಮಸ್ಯೆಗಳು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಕಾಣುತ್ತಿರುತ್ತವೆ. ಆಗ ಆ ಸಮಸ್ಯೆಗಳು ಬೇರೆಯೇ ತಿರುವುಗಳನ್ನು ಕಂಡುಕೊಳ್ಳುತ್ತವೆ. ವೇಗವಾಗಿ ಬದಲಾವಣೆ ಕಾಣುತ್ತಿರುವ ಸಮಾಜದಲ್ಲಿ ಮನುಷ್ಯ ಸಂಬಂಧಗಳು, ಹೆಣ್ಣು – ಗಂಡಿನ ವ್ಯಕ್ತಿತ್ವಗಳು ವಿಭಿನ್ನವಾಗಿ ಕಾಣಿಸಿಕೊಳ್ಳುತ್ತವೆ. ಇಂಥ ಪ್ರಯತ್ನಗಳು ಪ್ರಾಮಾಣಿಕವಾಗಿ, ಸೂಕ್ಷ್ಮವಾಗಿ, ಬಹುಮುಖಿ ನೆಲೆಯಲ್ಲಿ ಆದಾಗ ಒಂದು ಸಾಹಿತ್ಯ ಕೃತಿ ಪ್ರೌಢವೂ, ಮೌಲಿಕವೂ ಆಗುತ್ತದೆ. ಕರಾವಳಿ ಲೇಖಕಿಯ ಕಥೆಗಳಲ್ಲಿ ಇಂಥ ಪ್ರಯತ್ನಗಳನ್ನು ಗುರುತಿಸಬಹುದು.

ಈ ಪ್ರಬಂಧದಲ್ಲಿ ಆಯ್ಕೆಮಾಡಿಕೊಂಡ ಕರಾವಳಿಯ ಪ್ರಮುಖ ಲೇಖಕಿಯರಾದ ಗಂಗಾ ಪಾದೇಕಲ್, ಪ್ರೇಮಾಭಟ್, ಮಿತ್ರಾ ವೆಂಕಟ್ರಾಜ್, ವೈದೇಹಿ ಹಾಗೂ ಸಾರಾ ಅಬೂಬಕ್ಕರ್, ಈ ಐದು ಲೇಖಕಿಯರಲ್ಲಿ ಪ್ರಾಮಾಭಟ್ ಸ್ವಾತ್ರ್ಯೋತ್ತರ ಕಾಲಘಟ್ಟದಲ್ಲಿ ಕಥಾ ಬರವಣಿಗೆಯನ್ನು ಆರಂಭಿಸಿದರೆ ಉಳಿದ ನಾಲ್ಕು ಮಂದಿ ೫೦ – ೮೦ ರ ದಶಕದಲ್ಲಿ ಬರೆಯಲು ಹೊರಟರು. ಸ್ವಾತಂತ್ರ್ಯ ಹೋರಾಟದ ಕಾವು ತಗ್ಗಿ ಉತ್ಸಾಹ, ಲವಲವಿಕೆಯಿಂದ ಬರೆಯ ಹೊರಟ ಲೇಖಕಿಯರಿಗೆ ಸಮಾಜದ ನಗ್ನ ಸತ್ಯಗಳ ಅರಿವು ಅಷ್ಟಾಗಿ ಆಗಲಿಲ್ಲ. ಹಾಗಾಗಿ ಪಿತೃಪ್ರಧಾನ ಕುಟುಂಬದ ಎಲ್ಲಾ ಮೌಲ್ಯಾದರ್ಶಗಳನ್ನು ವೈಭವೀಕರಿಸಿದರೇ ವಿನಾಃ ನಿಜದ ಅರಿವು ಸಾಧ್ಯವಾಗಲಿಲ್ಲ. ಪ್ರೇಮಾ ಭಟ್ಟ್‌ರವರ ಕಥೆಗಳನ್ನು ಈ ನಿಲುವಿನಿಂದ ಗಮನಿಸಬಹುದು. ಸ್ತ್ರೀವಾದವು ಭಾರತಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಗಂಗಾ ಪಾದೇಕಲ್ ರವರು ಕಥೆಗಳನ್ನು ಬರೆಯ ಹೊರಟದ್ದರಿಂದ ಅವರು ಪಾರಂಪರಿಕ ನೆಲೆಯನ್ನು ಬಿಟ್ಟು ಹೊಸ ದೃಷ್ಟಿಕೋನದಲ್ಲಿ ಕಥೆಗಳನ್ನು ಗ್ರಹಿಸುವುದಕ್ಕೆ ಸಾಧ್ಯವಾಯಿತು.

ಒಂದು ಕಾಲಕ್ಕೆ ಕೂಡು ಕುಟುಂಬವಾಗಿದ್ದ ನಮ್ಮ ಹಳ್ಳಿಯ ಮನೆಗಳು ಇಂದು ನಾನಾ ಕಾರಣಗಳಿಂದಾಗಿ ನಗರದತ್ತ ಮುಖ ಮಾಡುತ್ತವೆ. ಅವಿಭಕ್ತ ಕುಟುಂಬ ಒಂದು ಕೌಟುಂಬಿಕ ವ್ಯವಸ್ಥೆಯನ್ನು ರೂಪಿಸುತ್ತಿದ್ದ ರೀತಿಗೂ ವಿಭಕ್ತ ಕುಟುಂಬಕ್ಕೂ ವ್ಯತ್ಯಾಸವಿದೆ. ಆನ ಹೆಚ್ಚು ಹೆಚ್ಚು ವಿದ್ಯಾವಂತರಾದಷ್ಟು ಆಧುನೀಕತೆಗೆ ತೆರೆದುಕೊಳ್ಳತೊಡಗಿದರು. ಹೀಗಾಗಿ ಕುಟುಂಬ ಸಂರಚನೆಯ ವಿಧಾನವೂ ಬದಲಾಗಿ ಆಲೋಚನೆಯ ಕ್ರಮವೂ ಅದಕ್ಕೆ ಸರಿಯಾಗಿ ಬದಲಾಯಿತು. ಗಂಗಾ ಪಾದೇಕಲ್ ರವರ ಕಥೆಗಳು ಈ ನೆಲೆಯಲ್ಲಿ ಬೆಳಕು ಬೀರುತ್ತದೆ. ಅವರ ಕಥೆಯಲ್ಲಿ ಬರುವ ಒಂಟಿ ಹೆಣ್ಣಿನ ಚಿತ್ರಣವೂ ಈ ಸಾಮಾಜಿಕ ಪಲ್ಲಟಗಳಿಗೆ ಅನುಗುಣವಾಗಿಯೇ ಮೂಡಿಬಂದಿದೆ.

ಈ ಅಧ್ಯಯನದಲ್ಲಿ ಬಳಸಿಕೊಂಡ ಕಥೆಗಾರ್ತಿಯರು ಬದುಕಿದ ಕಾಲಘಟ್ಟ ಹಾಗೂ ಅವರ ಮನೋಧರ್ಮಗಳಿಂದಾಗಿ ಎಲ್ಲರ ಕಥೆಗಳನ್ನು ಸ್ತ್ರೀವಾದಿ ದೃಷ್ಟಿಕೋನಗಳಿಂದ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ.

ಮಹಿಳಾ ಜಗತ್ತನ್ನು ಅನಾವರಣ ಮಾಡುವಾಗ, ಮಹಿಳೆಯರೆಂದರೆ ಅಡುಗೆ ಮನೆ, ಕುಟುಂಬ, ಸಂಸಾರ ನಿರ್ವಹಣೆ ಇವಿಷ್ಟೇ ಮುಖ್ಯವಾಗುತ್ತವೆ. ಅದರ ಆಚೆಗಿನ ಯೋಚನೆಗಳು ಅವಳ ಬುದ್ಧಿಯ ತರ್ಕಕ್ಕೆ ನಿಲುಕಲಾರವು ಎನ್ನುವುದು ಸಾಮಾನ್ಯ ಗ್ರಹಿಕೆಯಾಗಿದೆ. ಅವರು ಬದುಕನ್ನು ಸ್ವೀಕರಿಸಿದ ರೀತಿ ಹಾಗೂ ಬದುಕಿನ ಮನೋಧರ್ಮದಲ್ಲಿ ಅವರಿಗೆ ಪರಂಪರೆಯನ್ನು ಮೀರಲು ಸಾಧ್ಯವಾಗದ್ದರಿಂದ ಸ್ತ್ರೀವಾದಿ ನೆಲೆಯ ಬರಹಗಳು ಕಾಣಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಹೆಚ್ಚಿನ ಕಥೆಗಾರ್ತಿಯರು ಬರವಣಿಗೆಯನ್ನು ಆರಂಭಿಸಿದಾಗ ಅವರು ಮಧ್ಯ ವಯಸ್ಸಿನ ಹಂತದಲ್ಲಿದ್ದರು. ಅನುಭವಗಳೇ ಅವರ ಬದುಕಿನ 'ಜೀವಸಾರ' ಆದುದರಿಂದ ಆರಂಭದಲ್ಲಿ ಬರೆಯುವಾಗ ಸ್ತ್ರೀವಾದಿ ಚಿಂತನೆಯ ನೆಲೆಯಲ್ಲಿ ಕಥೆಗಳು ರೂಪುಗೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇದಕ್ಕೆ ಅಪವಾದವೆಂದರೆ ವೈದೇಹಿಯವರು. ತಾವು ಬರೆದ ಮೊದಲ ಕಥೆಯ ನಿಜ ಘಟನೆಯನ್ನಾದರಿಸಿ ಬರೆದದ್ದರಿಂದ ನಿಜವಾದ ಹೆಸರಿನಲ್ಲಿ ಬರೆಯದೆ ಕಾವ್ಯನಾಮವನ್ನು ಇರಿಸಿಕೊಂಡು ಬರೆದರು. ಆಗಿನ ಕಾಲದ ಹೆಣ್ಣುಮಕ್ಕಳಿಗೆ ಬರವಣಿಗೆ ಸುಲಭದ ದಾರಿಯಾಗಿರಲಿಲ್ಲ. ಬರವಣಿಗೆಗೆ ಬೇಕಾದ ಸಲಕರಣೆಗಳ ಕೊರತೆಯಿತ್ತು. ಕಥೆಗಳನ್ನು ಪತ್ರಿಕೆಗಳಿಗೆ ಕಳುಹಿಸುವುದಕ್ಕೂ ಹರಸಾಹಸ ಪಡಬೇಕಾಗಿತ್ತು.

ವೈದೇಹಿಯವರು ಹೇಳಿಕೊಂಡ ಹಾಗೆ ಅವರಿಗೆ ಸಿಕ್ಕಿದ ಪರಿಸರ, 'ನೀನಾಸಂ' ನಂತಹ ಒಡನಾಟ, ಹೊರಗಿನ ಜಗತ್ತನ್ನು ಅವರು ನೋಡಿದ ರೀತಿಯಿಂದಾಗಿ ತಮಗಿಂತ ಭಿನ್ನವಾದ ಪ್ರಪಂಚವೊಂದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ಮನುಷ್ಯ ಸಮಾಜದಲ್ಲಿ ಹೆಣ್ಣು ಹೆಣ್ಣೇ ಎನ್ನುವ ಸತ್ಯ ಅವರಿಗೆ ಸ್ಪಷ್ಟವಾಗಿತ್ತು. ಆ ಮೂಲಕ ಅವರ ತಾತ್ವಿಕತೆ ವ್ಯಕ್ತವಾಗುವುದಕ್ಕೆ ಸಾಧ್ಯವಾಯಿತು.

ಲೇಖಕಿಯರಿಗೆ ಸಿಕ್ಕ ಅವಕಾಶಗಳು ಅವರನ್ನು ಸ್ತ್ರೀವಾದಿ ನೆಲೆಯಲ್ಲಿ ಬೆಳೆಸುವುದಕ್ಕೆ, ಸ್ತ್ರೀ ಸಂವೇದನೆಯನ್ನು ನಿರೂಪಿಸುವುದಕ್ಕೆ ಸಾಧ್ಯ ಮಾಡಿದವು. ಸ್ತ್ರೀ ಸಂವೇದನೆಯನ್ನು ಅವರು ನಿಜವಾದ ರೀತಿಯಲ್ಲಿ ಗ್ರಹಿಸಿದ ನೆಲೆ ಮತ್ತು ಅವರ ವಿಸ್ತೃತವಾದ ಓದು ಅವರ ತಾತ್ವಿಕತೆಯನ್ನು ಪಕ್ವಗೊಳಿಸುವುದಕ್ಕೆ ಸಹಾಯ ಮಾಡಿದವು.

ತಮ್ಮ ಸಮಕಾಲೀನ ಬರಹಗಾರ್ತಿಯರನ್ನು ಗಮನಿಸಿರುವುದರಿಂದ ಹಾಗೂ ಅವರನ್ನು ಓದಿಕೊಳ್ಳುವುದರ ಮೂಲಕ ತಮ್ಮ ಅನನ್ಯತೆಯನ್ನು ದಾಖಲುಗೊಳಿಸುವುದಕ್ಕೆ ಕಥೆಗಾರ್ತಿಯರಿಗೆ ಸಾಧ್ಯವಾಯಿತು. ಹಾಗಾಗಿ ಹೆಚ್ಚು ಪರಿಪಕ್ವವಾದ ಬರಹಗಳನ್ನು ನೀಡಿದರು ಮಾತ್ರವಲ್ಲ ಗೌರವಗಳಿಗೆ ಕಾರಣರಾದರು.

ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳು ಶಾಲೆಗೆ ಹೋಗುವುದೇ ನಿಷಿದ್ಧ ಎನ್ನುವ ಕಾಲಘಟ್ಟದಲ್ಲಿ ಆ ಪೂರ್ವಗ್ರಹವನ್ನು ಒಡೆಯುವ ಮೂಲಕ ಸಾರಾರವರು ಆ ಅನುಭವವನ್ನು ಬರಹದ ಮೂಲಕ ದಾಖಲುಗೊಳಿಸಿದ್ದು ಹೆಚ್ಚು ಮಾನ್ಯತೆಯನ್ನು ಪಡೆಯಿತು.

ಗಂಗಾ ಪಾದೇಕಲ್, ವೈದೇಹಿ, ಮಿತ್ರಾ ವೆಂಕಟ್ರಾಜ್ ರವರ ಬರವಣಿಗೆಗಳನ್ನು ಈ ನೆಲೆಗಳಲ್ಲಿ ಅರ್ಥೈಸಿಕೊಳ್ಳಬಹುದು. ಸ್ತ್ರೀವಾದದ ದಟ್ಟ ಪ್ರಭಾವವಿದ್ದಾಗ್ಯೂ ವೈದೇಹಿಯವರ ಕಥೆಗಳಲ್ಲಿ ಇದು ಘಂಟಾಘೋಷವಾಗಿ ಕಾಣಿಸುವುದಿಲ್ಲ. ಏಕೆಂದರೆ ಅವರ ಕಥೆಗಳಲ್ಲಿ ಕಾಣಿಸಿಕೊಳ್ಳುವ ಸ್ತ್ರೀನಿಷ್ಠ ಧ್ವನಿಯ ಸ್ವರೂಪವೇ ಬೇರೆ. ಸಾರಾ ಸಗಟಾದ ಪ್ರತಿಭಟನೆ ಇವರ ಕಥೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲವಾದರೂ ತಣ್ಣನೆಯ ಪ್ರತಿಭಟನೆ ಇದ್ದೇ ಇದೆ. ಆದರೆ ಪುರುಷ ವಿರೋಧಿ ಪ್ರತಿಭಟನೆಯಲ್ಲ, ಬದಲಾಗಿ ವ್ಯವಸ್ಥೆ ವಿರೋಧಿ ಪ್ರತಿಭಟನೆ. ಮಿತ್ರಾ ವೆಂಕಟ್ರಾಜ ರವರ ಕಥೆಗಳಲ್ಲಿ ಪ್ರತಿಭಟನೆಯ ನೆಲೆಗಳು ದಟ್ಟವಾಗಿ ಕಾಣಿಸಿಕೊಳ್ಳುತ್ತವೆ. ಮುಸ್ಲಿಂ ಸಂವೇದನೆಯನ್ನು ಹೇಳುವ ಸಾರಾ ಅಬೂಬಕ್ಕರ್ ರವರ ಕಥೆಗಳಲ್ಲಿ ವ್ಯವಸ್ಥೆಯ ವಿರುದ್ಧದ ಧ್ವನಿ ಕಾಣಿಸಿಕೊಳ್ಳುತ್ತದೆ. ಧರ್ಮದ ಹೆಸರಿನಲ್ಲಿ ಹೆಣ್ಣು ಮಕ್ಕಳಿಗೆ ಆಗುತ್ತಿರುವ ಅನ್ಯಾಯಗಳನ್ನು ದಿಟ್ಟತನದಿಂದ, ಸಮರ್ಥವಾಗಿ ಚಿತ್ರಿಸಿರುವ ಇವರ ಕಥೆಗಳ ಪಾತ್ರಗಳು ಅಸ್ಮಿತೆಯ ಹುಡುಕಾಟಕ್ಕಾಗಿ ಪ್ರಯತ್ನಿಸಿದರೂ ಅದು ಪ್ರತಿಭಟನೆಯ ನೆಲೆಯಲ್ಲಿಯೇ ಕೊನೆಗೊಳ್ಳುತ್ತದೆಯೇ ವಿನಃ ಹೆಣ್ಣೊಬ್ಬಳು ತನ್ನ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವುದರಲ್ಲಿ ಸೋಲುತ್ತಾಳೆ. ಸಾರಾ ಬರೆಯುವ ಕಾಲಘಟ್ಟದ ಸಾಮಾಜಿಕ ತಲ್ಲಣಗಳು ಅವರ ಕೃತಿಗಳಲ್ಲಿ ಎದ್ದು ಕಾಣುತ್ತವೆ.

ಸಂಸ್ಕೃತಿ ಎನ್ನುವುದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದುತ್ತಾ ಹೋಗುತ್ತದೆ. ಸ್ಥಳೀಯ ಪ್ರಾದೇಶಿಕ ಸಂಸ್ಕೃತಿಯನ್ನು ತನ್ನೊಳಗೆ ಸೇರಿಸಿಕೊಳ್ಳುವುದರೊಂದಿಗೆ ಯಾವುದೇ ನೆಲದ ಸಂಸ್ಕೃತಿ ಬೆಳೆಯುತ್ತದೆ. ಈ ಪ್ರಬಂಧದಲ್ಲಿ ಆಯ್ಕೆ ಮಾಡಿಕೊಂಡಿರುವ ಐವರು ಲೇಖಕಿಯರು ಐದು ಪ್ರಾದೇಶಿಕ ಸಂಸ್ಕೃತಿಯನ್ನು ಪ್ರತಿನಿಧಿಸುವವರು. ದ.ಕ. ಜಿಲ್ಲೆಯ ಪುತ್ತೂರಿನಲ್ಲಿ ಜನಿಸಿ ಮಂಗಳೂರಿನಲ್ಲಿ ತನ್ನ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿರುವವರು ಗಂಗಾ ಪಾದೇಕಲ್. ಉಡುಪಿ ಜಿಲ್ಲೆಯಲ್ಲಿ ಜನಿಸಿ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಪ್ರೇಮಾಭಟ್, ಕುಂದಾಪುರದಲ್ಲಿ ಜನಿಸಿ ಮಣಿಪಾಲದಲಿ ನೆಲೆಯಾಗಿರುವ ವೈದೇಹಿ, ಕಾಸರಗೋಡಿನಲ್ಲಿ ಹುಟ್ಟಿ ಮಂಗಳೂರಿನ ಪ್ರಾದೇಶಿಕ ಸಂಸ್ಕೃತಿಗೆ ಹೊಂದಿಕೊಂಡಿರುವ ಸಾರಾ ಅಬೂಬಕ್ಕರ್ ಹಾಗೂ ಕುಂದಾಪುರದಲ್ಲಿ ಹುಟ್ಟಿ ಮುಂಬಯಿಯಲ್ಲಿ ಸಾಹಿತ್ಯ ರಚನೆ ಮಾಡುತ್ತಿರುವ ಮಿತ್ರಾ ವೆಂಕಟ್ರಾಜ್.

ಕರಾವಳಿ ಕತೆಗಳಲ್ಲಿ ಮಹಿಳಾ ಸಂವೇದನೆಯ ಸಂಕೀರ್ಣತೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಹೇಗೆ ಬಿನ್ನವಾಗಿವೆ ಎಂಬುದು ಈ ಪ್ರಬಂಧದಲ್ಲಿ ಮೂಡಿಬಂದಿವೆ. ಈ ಸಮಸ್ಯೆಗಳನ್ನು ಕತೆಗಾರ್ತಿಯರು ಪರಿಗಣಿಸುವ ರೀತಿಯೂ ಒಬ್ಬರಿಂದ ಇನ್ನೊಬ್ಬರಲ್ಲಿ ಬಿನ್ನವಾಗಿವೆ. ಕೆಲವು ಸಮಸ್ಯೆಗಳು ಕೆಲವು ಲೇಖಕಿಯರ ಕತೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. 'ಜಾತಿ' ಯ ಕುರಿತಾದ ಸಮಸ್ಯೆಗಳು ಇತರರಿಗಿಂತ ಸಾರಾ ಅಬೂಬಕ್ಕರ್‌ರವರ ಕತೆಗಳಲ್ಲಿ ಅದರ ಬೇರೆಬೇರೆ ಕರಾಳ ಮುಖಗಳೊಂದಿಗೆ ಚಿತ್ರಿತವಾಗಿವೆ. 'ಒಂಟಿ ಮಹಿಳೆಯರ ವಿಚಾರ' ಇತರರಿಗಿಂತ ಗಂಗಾ ಪಾದೇಕಲ್‌ರವರ ಕತೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಪುರು ಪ್ರಧಾನ ವ್ಯವ್ಥೆಯನ್ನು ಪ್ರಶ್ನಿಸುವ, ವಿರೋಧಿಸುವ ಹಾಗೂ ಅಸ್ಮಿತೆಯ ಹುಡುಕಾಟಕ್ಕೆ ತೊಡಗುವ ಹೆಣ್ಣು ಮಕ್ಕಳು ಕತೆಗಳಲ್ಲಿ ಹೆಚ್ಚಾಗಿ ಸಿಗುವುದು ೧೯೮೦ ರ ನಂತರದ ಕತೆಗಳಲ್ಲಿ. ಭಾರತಕ್ಕೆ ಪ್ರವೇಶಿಸಿದ ಸ್ತ್ರೀವಾದವು ಇದಕ್ಕೆ ಕಾರಣ ಎನ್ನುವುದನ್ನು ಒಪ್ಪಬೇಕಾಗುತ್ತದೆ.

ಈ ರೀತಿಯಲ್ಲಿ ಮೇಲಿನ ಎಲ್ಲಾ ಲೇಖಕಿಯರು, ತಾವು ನೆಲೆನಿಂತ ಪ್ರಾದೇಶಿಕ ಬದುಕಿನೊಂದಿಗೆ ಹೊಂದಿಕೊಳ್ಳುತ್ತಾ ತಮ್ಮ ಮೂಲ ನೆಲದ ಬೇರಿನೊಂದಿಗೆ ಬದುಕುತ್ತಿದ್ದಾರೆ. ಹಾಗಾಗಿಯೇ ಸಾರಾ ಅಬೂಬಕ್ಕರ್‌ರವರ ಕೃತಿಗಳು ಅವರ ಮೂಲ ನೆಲದ ಸಂಸ್ಕೃತಿಯನ್ನು ಹೆಚ್ಚು ಬಿಂಬಿಸುತ್ತವೆ. ಮಿತ್ರಾ ವೆಂಕಟ್ರಾಜ್ ಮುಂಬಯಿಯಲ್ಲಿದ್ದುಕೊಂಡೇ ತನ್ನ ಮೂಲ ನೆಲದ ಬೇರಿನೊಂದಿಗೆ ಅವರ ಕೃತಿಗಳು ಬೆಸೆದುಕೊಂಡಿವೆ. ಸಂಸ್ಕೃತಿಯ ಕೂಡು – ಕೊಳ್ಳುವಿಕೆ ಅನಿವಾರ್ಯ, ಅಗತ್ಯವೂ ಕೂಡಾ. ಹಾಗಿದ್ದೂ ಅವರುಗಳೆಲ್ಲಾ ಕಟ್ಟಿಕೊಡುವ ಸಾಂಸ್ಕೃತಿಕ ಜಗತ್ತು ವಿಶಿಷ್ಟವಾದದ್ದು. ನಗರ ಬದುಕಿನ ಯಾಂತ್ರಿಕ ಜೀವನವನ್ನು ವಿವರಿಸುತ್ತಾ, ಅವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ತನ್ನ ನೆಲದ ಸಂಸ್ಕೃತಿಯನ್ನು ಹೇಳುವ ತುಡಿತ ಈ ಲೇಖಕಿಯರ ಕೃತಿಗಳಲ್ಲಿ ಸ್ಪಷ್ಟವಾಗುತ್ತದೆ.

ಪ್ರಾದೇಶಿಕ ಸಂಸ್ಕೃತಿಯ ನಡುವಿನ ವ್ಯತ್ಯಾಸಗಳನ್ನು ವಿವರಿಸುತ್ತಲೇ ಅದರ ಅನನ್ಯತೆಯನ್ನು ಕರಾವಳಿಯ ಲೇಖಕಿಯರ ಕಥೆಗಳು ಕಟ್ಟಿಕೊಡುತ್ತವೆ. ಧಾರ್ಮಿಕ ಆಚರಣೆಯಲ್ಲಾಗಲೀ ಕುಟುಂಬ ವ್ಯವಸ್ಥೆಯಲ್ಲಾಗಲೀ ಈ ಅನನ್ಯತೆಯನ್ನು ಕಾಣಬಹುದು.

ಪರಂಪರೆ ಮತ್ತು ಆಧುನಿಕತೆ ಎಂಬ ದ್ವಂದ್ವದ ನೆಲೆಯಲ್ಲಿ ಕರಾವಳಿ ಲೇಖಕಿಯರ ಸಾಹಿತ್ಯ ಕೃತಿಗಳು ಬದುಕನ್ನು ಕಟ್ಟಿ ಕೊಡುವ ರೀತಿ ವಿಶಿಷ್ಟವಾದುದು. ಇದನ್ನು ಒಂದು ರೀತಿಯ ಸಾಂಸ್ಕೃತಿಕ ಸ್ಥಿತ್ಯಂತರದ ಕಾಲ ಎನ್ನಬಹುದು. ೧೯೭೫ ರಲ್ಲಿ ಬಂದ "ತುರ್ತು ಪರಿಸ್ಥಿತಿಯ ಘೋಷಣೆ, ಅದೇ ಸುಮಾರಿಗೆ ಭಾರತಕ್ಕೆ ಪ್ರವೇಶಿಸಿದ ಸ್ತ್ರೀವಾದ, ಕೃಷಿಯ ಮೇಲಿನ ನಿರ್ಲಕ್ಷ್ಯದಿಂದಲೋ, ಬೇಸರದಿಂದಲೋ ನಗರೀಕರಣದ ಕಡೆ ಮುಖ ಮಾಡಿದ ಜನ ಸಮುದಾಯ, ಇವೆಲ್ಲವುಗಳ ಮಧ್ಯೆ ಕೌಟುಂಬಿಕ ವ್ಯವಸ್ಥೆಯಲ್ಲಿಯೇ ಆಗುವ ಏರುಪೇರುಗಳು, ಅವುಗಳನ್ನು

ಕಾಯ್ದುಕೊಳ್ಳುವುದಕ್ಕೆ ಪಡುತ್ತಿದ್ದ ಪರಿಪಾಟಲು ಇವೆಲ್ಲವೂ ಆ ಸಮಕಾಲೀನ ಸಾಹಿತ್ಯ ಕೃತಿಗಳ ಮೇಲೆ ಪ್ರಭಾವ ಬೀರಿದ ಅಂಶಗಳು. ಇಷ್ಟೆಲ್ಲಾ ಬದಲಾವಣೆ ಸ್ಥಿತ್ಯಂತರಗಳ ನಡುವೆಯೂ ಸಾಮರಸ್ಯದ ಬದುಕನ್ನು ಬಿಟ್ಟುಬಿಡಲಾರದ, ಆಧುನಿಕತೆಯನ್ನು ಸಂಪೂರ್ಣ ಅಪ್ಪಿಕೊಳ್ಳಲಾಗದ ದ್ವಂದ್ವದ ಸ್ಥಿತಿಗೆ ಸಿಲುಕಿಕೊಂಡ ಬದುಕನ್ನು ಈ ಸಾಹಿತ್ಯ ಕೃತಿಗಳಲ್ಲಿ ಗುರುತಿಸಬಹುದು.

ಎಲ್ಲಕ್ಕಿಂತ ಮುಖ್ಯವಾಗಿ ಆಧುನಿಕತೆಗೆ ತೆರೆದುಕೊಳ್ಳುವ ತರಾತುರಿಯಲ್ಲಿರುವ ಯುವ ಜನಾಂಗ ಇಂದು ಜವಾಬ್ದಾರಿಯಿಂದ ಐಶಾರಾಮದ ಬದುಕನ್ನು ಕಾಣುವ ಕಡೆಗೇ ವಾಲುತ್ತಿದ್ದಾರೆ. ಹಾಗಾಗಿ ಒಂದು ಕಾಲದಲ್ಲಿ ಕುಟುಂಬದಲ್ಲಿ ಕಾಪಾಡಿಕೊಂಡು ಬರುತ್ತಿದ್ದ ಹೊಂದಾಣಿಕೆಯ ಮನೋಭಾವ, ಅರ್ಥಮಾಡಿಕೊಳ್ಳುವ ಸ್ಥಿತಿ ಬದಲಾಗಿದೆ. ಮಾರುಕಟ್ಟೆ ಸಂಸ್ಕೃತಿ, ಕೊಳ್ಳುಬಾಕ ಸಂಸ್ಕೃತಿ ಇಂದು ಕುಟುಂಬ ವ್ಯವಸ್ಥೆಯನ್ನು ಅಲುಗಾಡಿಸುತ್ತಿದೆ. ಎಲ್ಲವೂ ಅನುಕರಣೆಯ ನೆಲೆಯಲ್ಲಿಯೆ ಸಾಗುತ್ತಿದೆಯೆ ವಿನಾಃ ಅನುಸಂಧಾನದ ನೆಲೆಯಲ್ಲಿ ಅಲ್ಲ. ಹೆಚ್ಚು ಹೆಚ್ಚು ವಿದ್ಯಾವಂತರಾಗುತ್ತಾ ಪಟ್ಟಣಗಳಲ್ಲೇ ತಮ್ಮ ಬದುಕಿನ ದಾರಿಯನ್ನು ಕಂಡುಕೊಳ್ಳುವುದಕ್ಕೆ ಬಯಸುವುದರೊಂದಿಗೆ ಮೋಜಿನ ಬದುಕೇ ಬೇಕು ಎಂದು ಬಯಸುವ ಹೊಸ ತಲೆಮಾರು ತಮ್ಮ ಮೂಲದ ಕಡೆ ತಿರುಗಿ ನೋಡುವುದಕ್ಕೆ ಮನಸ್ಸು ಮಾಡುವುದಿಲ್ಲ. ಗಂಗಾ ಪಾದೇಕಲ್, ವೈದೇಹಿಯಂತವರ ಕಥೆಗಳಲ್ಲಿ ಈ ಅಂಶಗಳು ಸ್ಪಷ್ಟವಾಗುತ್ತವೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕರಾವಳಿಯ ಲೇಖಕಿಯರ ಕತೆಗಳಲ್ಲಿ ಉತ್ತರ ಸಿಗುತ್ತದೆ. ತನ್ನ ಸಮಕಾಲೀನ ಸತ್ವವನ್ನು ತಕ್ಕ ಮಟ್ಟಿಗೆ ಅರಗಿಸಿಕೊಳ್ಳುತ್ತಾ, ಸಂವೇದನಾಶೀಲ ಮನಸ್ಸನ್ನು ವಿವಿಧ ಆಕೃತಿಗಳ ಮೂಲಕ ಅಭಿವ್ಯಕ್ತಗೊಳಿಸುತ್ತಾ ಬೆಳೆದು ಬಂದಿದೆ; ಕರಾವಳಿಯ ಮಹಿಳಾ ಸಾಹಿತ್ಯ. ಮಹಿಳೆಯ ಸೃಜನಶೀಲ, ಸಾಮಾಜಿಕ, ಸಾಂಸ್ಕೃತಿಕ ಎಚ್ಚರ ಹಾಗೂ 'ಸ್ತ್ರೀ ವಿಶಿಷ್ಟ' ಪ್ರಜ್ಞೆಯ ಅವಲೋಕನವು ಹೆಣ್ಣಿನ ಅನುಭವ ಲೋಕದ ವೈಶಿಷ್ಟ್ಯಪೂರ್ಣವಾದ ವಿನ್ಯಾಸವನ್ನು ಪರಿಚಯಿಸುತ್ತದೆ. ಕರಾವಳಿಯ ಲೇಖಕಿಯರ ಕಥೆಗಳಲ್ಲಿ ಹೆಣ್ಣಿನ ನೋವು – ಅಪಮಾನ, ಉಸಿರುಗಟ್ಟಿಸುವ ವ್ಯವಸ್ಥೆಯಿಂದ ಹೊರಬರಲಾರದ ಚಡಪಡಿಕೆ , ಅದನ್ನು ಮೀರುವ ಹಂಬಲ ಇವೆಲ್ಲವೂ ವಿಶಿಷ್ಟ ಧ್ವನಿಯಾಗಿ ಮೂಡಿಬಂದಿದೆ.

೬.೨. ಮುಂದಿನ ಅಧ್ಯಯನದ ಸಾಧ್ಯತೆಗಳು

ಕರಾವಳಿ ಲೇಖಕಿಯರ ಕಥೆಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ನೆಲೆಗಳಲ್ಲಿ ಅಧ್ಯಯನ ಮಾಡುವ ಸಾಧ್ಯತೆಗಳಿವೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

- ಒಬ್ಬೊಬ್ಬ ಲೇಖಕಿಯ ಬರಹಗಳನ್ನು ಗಮನಿಸಿಕೊಂಡು ಆ ಮೂಲಕ ಅಧ್ಯಯನ ಮಾಡಬಹುದು.
- ಸ್ತ್ರೀ ಸಂವೇದನೆಯ ಸ್ವರೂಪ ಮತ್ತು ವೈವಿಧ್ಯಗಳನ್ನು ಸಾಹಿತ್ಯದ ಮಗ್ಗುಲುಗಳನ್ನು ವಿಸ್ತೃತಗೊಳಿಸುವ ನೆಲೆಯಲ್ಲಿ ಅಧ್ಯಯನ ಮಾಡಬಹುದು.
- ಕಥೆಗಾರ್ತಿಯರ ಪ್ರಯೋಗಶೀಲತೆಯ ಬೇರೆ ಬೇರೆ ನೆಲೆಗಳನ್ನು ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗುತ್ತದೆ.
- ಕರಾವಳಿ ಕಥೆಗಾರ್ತಿಯರ 'ಪ್ರಜ್ಞೆ ಮತ್ತು ಪರಿಸರ'ದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗುತ್ತದೆ.
- ಸ್ತ್ರೀಪ್ರತಿನಿಧೀಕರಣಗೊಳಿಸಿ ಸಾರಿದ ಜೀವನ ಮೌಲ್ಯಗಳ ಸಾರ್ವಕಾಲಿಕ ನೆಲೆಯಲ್ಲಿ ಕರಾವಳಿ ಲೇಖಕಿಯರ ಕಥೆಗಳು ಉಳಿದವರಿಗಿಂತ ಹೇಗೆ ಭಿನ್ನವಾಗುತ್ತವೆ ಎನ್ನುವ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲು ಸಾಧ್ಯವಾಗುತ್ತದೆ.
- ಆಶಯದ ನೆಲೆಯಲ್ಲಿ ಬೇರೆ ಬೇರೆ ಲೇಖಕಿಯರ ಕಥೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಬಹುದು.
- ಪ್ರಾದೇಶಿಕತೆಗಳ ಹಿನ್ನೆಲೆಯಲ್ಲಿ ಕರಾವಳಿ ಲೇಖಕಿಯರ ಕಥೆಗಳ ಕುರಿತು ಅಧ್ಯಯನ ನಡೆಸುವುದು.
- ಕರಾವಳಿಯ ಲೇಖಕಿಯರ ಕಥೆಗಳಲ್ಲಿ ಕಾಣಿಸಿಕೊಳ್ಳುವ ಪ್ರಾದೇಶಿಕ ಉಪ ಭಾಷೆಗಳ ಕುರಿತ ಅಧ್ಯಯನದ ಮೂಲಕ ಕರಾವಳಿಯ ಸಾಂಸ್ಕೃತಿಕ ಅನನ್ಯತೆಯನ್ನು ಕಂಡುಕೊಳ್ಳುವ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬಹುದು.
- ಕರಾವಳಿಯ ಕುಟುಂಬ ವ್ಯವಸ್ಥೆಯ ಸ್ವರೂಪವನ್ನು ನಿರ್ವಚನಗೊಂಡ ಕಥೆಗಳ ಅಧ್ಯಯನದೊಂದಿಗೆ ಉಪ ಸಂಸ್ಕೃತಿಗಳ ಅಧ್ಯಯನ ನಡೆಸಬಹುದು.
- ಕರಾವಳಿಯ ಮಹಿಳಾ ಸಂವೇದನೆಯ ಸಂಕೀರ್ಣತೆಗಳು ಲೇಖಕಿಯಿಂದ ಲೇಖಕಿಗೆ ಹೇಗೆ ಭಿನ್ನ ಎಂಬುದರ ಕುರಿತು ಪ್ರತ್ಯೇಕ ಸಂಶೋಧನೆಯನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ.
- ಕಾಲಘಟ್ಟಗಳ ಆಧಾರದ ಮೇಲೂ ಕರಾವಳಿ ಕತೆಗಳಲ್ಲಿನ ಮಹಿಳಾ ಸಂವೇದನೆಯ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುವ ನೆಲೆಯಲ್ಲಿ ಅಧ್ಯಯನ ಮಾಡಬಹುದು.

ಪ್ರಸ್ತುತ ಸಂಶೋಧನೆ ಕರಾವಳಿ ಲೇಖಕಿಯರ ಕಥಾವಲೋಕನದ ದಾರಿಯಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ. ಕರಾವಳಿ ಲೇಖಕಿಯರ ಕುರಿತು ಈವರೆಗೆ ಆಗಿರುವ ಅಧ್ಯಯನಕ್ಕಿಂತ ಭಿನ್ನವಾದ ದೃಷ್ಟಿಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ವರೆಗೆ ಆಗಿರುವ ಕೆಲವು ಲೇಖಕಿಯರ ಕಥೆಗಳ ಕುರಿತಾದ ಅಧ್ಯಯನದ

ಮುಂದುವರಿದ ಆಲೋಚನೆ ಇದಾಗಿದೆ. ಈ ಪ್ರಬಂಧದಲ್ಲಿ ಆಯ್ಕೆ ಮಾಡಿಕೊಂಡ ಪ್ರತಿಯೊಬ್ಬ ಕಥೆಗಾರ್ತಿಯ ಒಂದೊಂದು ಕಥಾಸಂಕಲನವೇ ಸಂಶೋಧನಾ ಪ್ರಬಂಧವಾಗುವ ಎಲ್ಲಾ ಅರ್ಹತೆಗಳನ್ನು ಪಡೆದಿವೆ ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಗುರುತಿಸುವ ಹೊಸ ದೃಷ್ಟಿ ಈ ದಿಕ್ಕಿನಲ್ಲಿ ಮೂಡಿಬರಬೇಕಾಗಿದೆ.

ಅಡಿಟಿಪ್ಪಣಿ

೧. ಅನುಪಮಾ ನಿರಂಜನ: 'ಹೆಜ್ಜೆ ಮೂಡದ ಹಾದಿಯಲ್ಲಿ' ಕತೆಯ ಮುನ್ನುಡಿಯಲ್ಲಿ, ೧೯೮೮, ಅಕ್ಷರ ಪ್ರಕಾಶನ, ಹೆಗ್ಗೋಡು

೨. ಮಹಿಳಾ ಸಾಹಿತ್ಯ ಚರಿತ್ರೆ - ಸಂ. ಡಾ. ಎಚ್. ಎಸ್. ಪಾರ್ವತಿ, ಪುಟ ೪೦೨, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೬.

೩. ಅಲೆಗಳಲ್ಲಿ ಅಂತರಂಗ: ವೈದೇಹಿ, ಪು. ೧೧೨, ಅಕ್ಷರ ಪ್ರಕಾಶನ, ೨೦೦೬ (ಮುನ್ನುಡಿಯಲ್ಲಿ)

೪. ಸಾರಾ ಅಬೂಬಕ್ಕರ್: ಅನಾವರಣ, ಪುಟ. ೯, ೨೦೦೧.

ಅನುಬಂಧ

೧ : ಲೇಖಕಿಯರ ಸಂದರ್ಶನಕ್ಕಾಗಿ ರಚಿಸಲಾದ ಪ್ರಶ್ನಾವಳಿ

೨ : ಕಥೆಗಾರ್ತಿಯರ ಸಮಗ್ರ ವಿವರ

೨.೧. ಗಂಗಾ ಪಾದೇಕಲ್

೨.೨. ಪ್ರೇಮಾ ಭಟ್

೨.೩. ಮಿತ್ರಾ ವೆಂಕಟ್ರಾಜ್

೨.೪. ವೈದೇಹಿ

೨.೫. ಸಾರಾ ಅಬೂಬಕ್ಕರ್

೩ : ಪ್ರಧಾನ ಆಕರಗಳು

೪ : ಆನುಷಂಗಿಕ ಆಕರಗಳು

ಲೇಖಕಿಯರ ಸಂದರ್ಶನಕ್ಕಾಗಿ ರಚಿಸಲಾದ ಪ್ರಶ್ನಾವಳಿ

ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಮೇಲೂ ತಾನು ಹುಟ್ಟಿ ಬೆಳೆದ ಪರಿಸರ ಪ್ರಭಾವ ಬೀರುತ್ತದೆ. ಮಾತ್ರವಲ್ಲ ಅವನ ಬರವಣಿಗೆಯ ಹಿಂದೆಯೂ ಅವನ ಪರಿಸರದ ಪ್ರಭಾವವಿರುತ್ತದೆ. ಹಾಗಾಗಿ ಒಂದು ಸಾಹಿತ್ಯ ಕೃತಿಯನ್ನು ಅರ್ಥೈಸಿಕೊಳ್ಳುವಲ್ಲಿ ಅವನ ಭೌಗೋಳಿಕ ಹಿನ್ನೆಲೆ, ಸಾಹಿತ್ಯಕ ಪ್ರೇರಣೆಗಳು ಪ್ರಮುಖ ಪಾತ್ರವಹಿಸುತ್ತವೆ. ಕರಾವಳಿ ಲೇಖಕಿಯರ ಕಥೆಗಳನ್ನು ಅರ್ಥಮಾಡಿಕೊಳ್ಳುವಲ್ಲಿಯೂ ಈ ಮೇಲಿನ ಅಂಶಗಳು ಸಹಾಯ ಮಾಡುತ್ತವೆ. ಹಾಗಾಗಿ ಪ್ರಬಂಧದಲ್ಲಿ ಆಯ್ಕೆಮಾಡಿಕೊಂಡ ಐದು ಮಂದಿ ಪ್ರಮುಖ ಕಥೆಗಾರ್ತಿಯರ ಸಂದರ್ಶನ ಮಾಡುವುದಕ್ಕಾಗಿ ಈ ಕೆಳಗಿನ ಪ್ರಶ್ನಾವಳಿಯನ್ನು ಸಿದ್ಧಪಡಿಸಲಾಗಿದೆ.

೧. ಹೆಸರು :

೨. ಕಾವ್ಯನಾಮ :

೩. ಜನ್ಮ ದಿನಾಂಕ :

೪. ಜನ್ಮ ಸ್ಥಳ :

೫. ವಿಳಾಸ :

೬. ದೂರವಾಣಿ ಸಂಖ್ಯೆ / ಇ-ಅಂಚೆ :

೭. ವಿದ್ಯಾರ್ಹತೆ :

೮. ಉದ್ಯೋಗ :

೯. ಸಾಹಿತ್ಯ ಪ್ರಕಾರ :

೧೦. ಪ್ರಕಟಿತ ಕೃತಿಗಳು :

೧೧. ವಿಶೇಷ ಸಾಧನೆ :

೧೨. ಪ್ರಶಸ್ತಿ / ಗೌರವ :

೧೩. ಸಾಹಿತ್ಯ ರಚನೆಯ ಪ್ರೇರಣೆ :

೧೪. ಬರವಣಿಗೆಯ ಉದ್ದೇಶ :

೧೫. ನಿಮ್ಮ ಬರಹದ ಮೊದಲ ನೆನಪುಗಳು :

[ಈ ಪ್ರಶ್ನಾವಳಿಯ ಮೂಲಕ ಕ್ರೋಢೀಕರಿಸಿದ ಮಾಹಿತಿಗಳನ್ನು ಮುಂದೆ ವಿವರವಾಗಿ ನೀಡಲಾಗಿದೆ.]

ಅನುಬಂಧ

ಗಂಗಾ ಪಾದೇಕಲ್

ಇವರು ಸೆಪ್ಟೆಂಬರ್ ೧, ೧೯೪೮ರಲ್ಲಿ ದ.ಕ. ಜಿಲ್ಲೆಯ ಪುತ್ತೂರಿನಲ್ಲಿ ಜನಿಸಿದರು. ಇವರು ನಿಜನಾಮಧೇಯ ಗಂಗಾರತ್ನ. ಹೈಸ್ಕೂಲಿನವರೆಗೆ ಓದಿರುವ ಇವರು ಗೃಹಿಣಿಯಾಗಿದ್ದುಕೊಂಡು ಸಾಹಿತ್ಯ ರಚನೆ ಮಾಡಿದವರು. ಸಣ್ಣಕಥೆ, ಕಾದಂಬರಿ, ನಾಟಕಗಳು, ಲೇಖನಗಳು ಹಾಗೂ ಕಿರುಗತೆ ಇವರ ಆಸಕ್ತಿಯ ಸಾಹಿತ್ಯ ಪ್ರಕಾರಗಳು. ಹುಟ್ಟಿನಿಂದಲೇ ಬಂದ ಸಾಹಿತ್ಯಾಭಿರುಚಿ ಹಾಗೂ ಸಾಹಿತಿಗಳಾಗಿದ್ದ ಅಜ್ಜಿ, ಅಣ್ಣಂದಿರ ಹರಕೆಯೇ ಗಂಗಾ ಪಾದೇಕಲ್‌ರವರ ಸಾಹಿತ್ಯ ರಚನೆಗೆ ಪ್ರೇರಣೆಯನ್ನೊದಗಿಸಿತು. ತನ್ನೊಳಗಿನ ತುಡಿತದ ಶಮನಕ್ಕೊಂದು ಕಿರು ಪ್ರಯತ್ನವೇ ಇವರ ಸಾಹಿತ್ಯ ರಚನೆಯ ಹಿಂದಿರುವ ಉದ್ದೇಶವಾಗಿದೆ. ಇವರ ಅನೇಕ ಸಣ್ಣಕಥೆಗಳು, ನಾಟಕಗಳು, ಚಿಂತನೆಗಳು ಮಂಗಳೂರು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ಇವರ 'ಹೊಸ ಹೆಜ್ಜೆ' ಕಥಾ ಸಂಕಲನ ಮಂಗಳೂರು ವಿಶ್ವವಿದ್ಯಾನಿಲಯದ ಬಿ.ಕಾಂ. ಪದವಿ ತರಗತಿಗಳಿಗೆ ಉಪಪಠ್ಯವಾಗಿತ್ತು. ಇವರ ಕೆಲವು ಕಥೆಗಳು ಇಂಗ್ಲೀಷ್ ಹಾಗೂ ತೆಲುಗು ಭಾಷೆಗೆ ಅನುವಾದಗೊಂದಿವೆ. ಬೇರೆ ಬೇರೆ ಪತ್ರಿಕೆಗಳಲ್ಲಿ ಕಥೆಗಳು ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು

ಸಣ್ಣಕಥಾ ಸಂಕಲನ : ಪುಲಪೇಡಿ ಮತ್ತು ಇತರ ಕಥೆಗಳು, ಹೆಜ್ಜೆ ಮೂಡದ ಹಾದಿಯಲ್ಲಿ, ಹೊಸಹೆಜ್ಜೆ, ವಾಸ್ತವ, ಕ್ಷಮಯಾಧರಿತ್ರಿ, ನೆಲೆ ತಪ್ಪಿದ ಹಕ್ಕಿ, ಮನ್ನಣೆಯ ದಾಹ, ಈ ಪ್ರಜಾರಾಜ್ಯದೊಳಗೆ, ಸಂಕ್ರಮಣ, ಚಿನ್ನದ ಸೂಜಿ

ಕಾದಂಬರಿ : ಹೊನ್ನಳ್ಳಿಯಲ್ಲೊಮ್ಮೆ, ಸೆರೆಯಿಂದ ಹೊರಗೆ, ಪಯಣದ ಹಾದಿಯಲ್ಲಿ, ಮೌನ ರಾಗಗಳು, ಬಂಗಾರದ ಜಿಂಕೆಯ ಹಿಂದೆ, ಇನ್ನೊಂದು ಅಧ್ಯಾಯ, ಕನಕಾಂಬರಿ, ಮೂರು ಕಿರು ಕಾದಂಬರಿಗಳು, ಅದೃಷ್ಟರೇಖೆ, ಸೆರಗಿನ ಕೆಂಡ.

ಸಂಪಾದಿತ ಕೃತಿ : ೧೯೯೪ –ಆಯ್ದ ಕಥೆಗಳು-ಪ್ರತಿಬಿಂಬ (ಮುಳಿಯಕೃಷ್ಣ ಭಟ್ಟ ಬದುಕು- ಬರೆಹ, ಮುಳಿಯ ಮೂಕಾಂಬಿಕೆ, ಏರ್ಯ ಚಂದ್ರಭಾಗಿ ಕೆ. ರೈ.)

ಪ್ರಶಸ್ತಿ / ಗೌರವ

- ❖ 'ಪುಲಪೇಡಿ' ಸಣ್ಣಕಥೆಯಾಧಾರಿತ ರೇಡಿಯೋ ನಾಟಕಕ್ಕೆ ರಾಷ್ಟ್ರೀಯ ನಾಟಕೋತ್ಸವ ಸ್ಪರ್ಧೆಯಲ್ಲಿ ಮೊದಲ ಬಹುಮಾನ. ೧೯೮೨
- ❖ 'ಸೆರೆಯಿಂದ ಹೊರಗೆ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ. ೧೯೮೪
- ❖ ಅಕ್ಷಯ, ತುಷಾರ ಮೊದಲಾದ ಮಾಸಿಕಗಳಲ್ಲಿ ಸಣ್ಣಕಥಾ ಸ್ಪರ್ಧೆಗೆ ಬಹುಮಾನ. ೧೯೮೬-೮೮
- ❖ 'ಇನ್ನೊಂದು ಅಧ್ಯಾಯ' ಕಾದಂಬರಿಗೆ ವನಿತಾ ಕಾದಂಬರಿ ಸ್ಪರ್ಧೆಯಲ್ಲಿ ೨ ನೆಯ ಬಹುಮಾನ. ೧೯೯೦
- ❖ ತಾಲೂಕು, ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಗಳಲ್ಲಿ ಸನ್ಮಾನ
- ❖ ರಾಜ್ಯೋತ್ಸವ ಪ್ರಶಸ್ತಿ. ೨೦೦೫
- ❖ ಬಂಟ್ವಾಳ ತಾಲೂಕಿನ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. ೧೯೮೮
- ❖ ಅನೇಕ ಸಂಘ - ಸಂಸ್ಥೆಗಳಿಂದ ಸನ್ಮಾನ.
- ❖ ಕೃಷ್ಣಾಬಾಯಿ ಸ್ಮಾರಕ ದತ್ತಿನಿಧಿ ಪ್ರಶಸ್ತಿ. ೧೯೮೮

ವಿಳಾಸ :

ಸ್ಕಂದ ಕೃಪಾ,
ಹೇಮಾವತಿ ನಗರ,
ಅಂಚೆ ಪಡೀಲ್ – ೫೭೫೦೦೭
ಮಂಗಳೂರು
ದೂರವಾಣಿ : ೦೮೨೪ - ೬೫೧೪೫೧೫

ಪ್ರೇಮಾ ಭಟ್

ಇವರು ಸೆಪ್ಟೆಂಬರ್ ೨೨, ೧೯೪೭ರಲ್ಲಿ ಉಡುಪಿ ಜಿಲ್ಲೆಯ ಹೆರ್ಗ ಗ್ರಾಮದಲ್ಲಿ ಜನಿಸಿದರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು ವಿಧಾನಸೌಧದ ಶಾಖಾಧಿಕಾರಿಯಾಗಿ ದುಡಿದು ನಿವೃತ್ತರಾಗಿದ್ದಾರೆ. ಕಥೆ, ಕಾದಂಬರಿ, ಪ್ರವಾಸಕಥನ, ಕವನ, ಲೇಖನ, ವ್ಯಕ್ತಿ ಚಿತ್ರಣ, ವಿಡಂಬನೆ, ಚಿಂತನ, ನಗೆಬರಹ ಪ್ರೇಮಾಭಟ್ ರವರ ಆಸಕ್ತಿಯ ಸಾಹಿತ್ಯ ಪ್ರಕಾರಗಳು. ಹುಟ್ಟಿದ ಪರಿಸರ, ಉದ್ಯೋಗದ ಪರಿಸರ, ತಾನು ಕಂಡುಂಡ ಅನುಭವಗಳೇ ಇವರ ಸಾಹಿತ್ಯ ರಚನೆಗೆ ಪ್ರೇರಣೆ. ಬರವಣಿಗೆಯನ್ನು ಹವ್ಯಾಸವನ್ನಾಗಿಸಿಕೊಂಡು ಆತ್ಮತೃಪ್ತಿಗಾಗಿ ಬರೆಯುವ ಹಾಗೂ ಆ ಮೂಲಕ ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕೆಂಬುದೇ ಇವರ ಬರವಣಿಗೆಯ ಹಿಂದಿರುವ ಉದ್ದೇಶವಾಗಿದೆ.

ಅನೇಕ ಪತ್ರಿಕೆಗಳಲ್ಲಿ ಇವರ ಬೇರೆ ಸಾಹಿತ್ಯ ಪ್ರಕಾರಗಳು ಪ್ರಕಟವಾಗಿವೆ. ಅನೇಕ ಕಾದಂಬರಿಗಳು ದೂರದರ್ಶನದಲ್ಲಿ ಪ್ರಸಾರವಾಗಿವೆ. ಇವರ ಚಿಂತನಗಳು, ಕಥೆಗಳು ಆಕಾಶವಾಣಿಯಲ್ಲಿ ಬಿತ್ತರಗೊಂಡಿವೆ. ಇವರ 'ಒಲಿದು ಬಂದವನು' ಎಂಬ ಕಾದಂಬರಿಯು 'ಆಡಿ ಬಾ ಅರಗಿಣಿಯೆ' ಎಂಬ ಹೆಸರಿನಲ್ಲಿ ಚಲನಚಿತ್ರವಾಗಿದೆ. ಇವರ 'ನಂದಿನಿ' ಕಾದಂಬರಿ ಹಾಗೂ 'ಆಯ್ದಕ್ಕಿ ಲಕ್ಕಮ್ಮ' ಇಂಗ್ಲೀಷ್ ಭಾಷೆಗೆ ಅನುವಾದಗೊಂಡಿವೆ. ಸುಜಾತ ಕಾದಂಬರಿಯು 'ಬೆಕ್ಕಿನ ಕಣ್ಣು' ಎಂಬ ಹೆಸರಿನಲ್ಲಿ ತೆರೆ ಕಂಡಿದೆ. ಪುರಸ್ಕಾರ ಕಥೆಯು ಮಹಾರಾಷ್ಟ್ರ ಸರಕಾರದಲ್ಲಿ 'ಕನ್ನಡ ಭಾರತಿ'ಯಲ್ಲಿ ಪಠ್ಯದಲ್ಲಿ ಆಯ್ಕೆಯಾಗಿದೆ. ಇವರ ಕೆಲವು ಕಥೆಗಳು ಇಂಗ್ಲೀಷ್, ಹಿಂದಿ, ಮರಾಠಿ ಮತ್ತು ತೆಲುಗಿನಲ್ಲಿ ಪ್ರಕಟವಾಗಿವೆ. ಹೆರ್ಗದ ದುರ್ಗಾಮಾತೆ ಭಕ್ತಿಗೀತೆ ಎಂಬ ಕ್ಯಾಸೆಟ್ ಬಿಡುಗಡೆಯಾಗಿರುತ್ತದೆ. ಬೇರೆ ಬೇರೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನಗಳಲ್ಲಿ ಕವನ ಮಂಡನೆ ಹಾಗೂ ಪ್ರಬಂಧ ಮಂಡನೆ ಮಾಡಿರುತ್ತಾರೆ. ಅನೇಕ ಮಹಿಳಾ ಸಾಹಿತ್ಯ ಗೋಷ್ಠಿಯ ಅಧ್ಯಕ್ಷೆ ಪಟ್ಟವೂ ದೊರಕಿರುತ್ತದೆ. ಅನೇಕ ಸಂಘ - ಸಂಸ್ಥೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾರೆ. ಚಲನಚಿತ್ರ ಆಯ್ಕೆ ಸಮಿತಿ, 'ದಾನಚಿಂತಾಮಣಿ ಅತ್ತಿಮಬ್ಬೆ' ಆಯ್ಕೆ ಸಮಿತಿ ಇವುಗಳ ಸದಸ್ಯತ್ವ ದೊರಕಿರುತ್ತದೆ. ಬೆಂಗಳೂರಿನ ಶಿವರಾಮ ಕಾರಂತ ವೇದಿಕೆಯ ಮಾಜಿ ಅಧ್ಯಕ್ಷರು. ಇತ್ತೀಚೆಗೆ ವಿದೇಶ ಪ್ರವಾಸವನ್ನೂ ಮಾಡಿ ಬಂದಿರುತ್ತಾರೆ.

ಪ್ರಕಟಿತ ಕೃತಿಗಳು

ಕಾದಂಬರಿ : ಅವಳ ಬಾಳು, ಕುಂಕುಮ ಶೋಭಿನಿ, ಮಲ್ಲಿಗೆ ಮುಡಿಗೇರಿತು, ಇದ್ದು ಹೋದ ಜೀವ, ಸುಜಾತ, ಹೂಬಿಸಿಲು, ಬಿದಿಗೆ ಚಂದ್ರ, ಸಾಧಕ, ನಂದಿನಿ, ಭಾವ ಬಂಧನ, ಅಕ್ಷರ ಲಕ್ಷ್ಮೀ, ಮನೆ – ಮನ, ತಾರಾಬಲ, ಅಲೆಗಳು, ಪರಿಣಾಮ, ಮುತ್ತಿನ ಕೋಟೆ, ಮಿಣುಕುಹುಳು, ಗೊಂದಲ, ಗತಿ, ಯಜ್ಞ, ಅಂತಃಪುರ, ಎರಡು ಜೊತೆ ಕಣ್ಣುಗಳು,

ಭ್ರಮಣ, ಬಿಂದು, ಮುಹೂರ್ತ, ಒಂದು ವಠಾರದ ಕತೆ, ಕೊನೆ, ಹಸಿರು ಹೊನಲು, ಕಾಡು ಕಡಿದು ಊರು ಮಾಡಿದರು, ಕೂಸನು ಕಂಡಿರಾ, ಹಳೇ ಬೇರು ಹೊಸ ಚಿಗುರು, ಹುಡುಗ ಆರಿಸಿದ ಹುಡುಗಿ, ಒಲಿದು ಬಂದವನು. ನಿಷ್ಕ್ರಮಣ, ಗೊಡ್ಡ, ಅಮೃತಮಯಿ, ಎರಡು ದಡಗಳು, ಮಜಲುಗಳು, ಗಾದಿ, ದೇವರಾಣೆ, ಪಲ್ಲಟ, ನೇಪಥ್ಯ, ಕಮ್ಮಟ ದುರ್ಗದ ಕುಮಾರ ರಾಮ, ಹೆಳವನಕಟ್ಟೆ ಗಿರಿಯಮ್ಮ.

ಕಥಾ ಸಂಕಲನ : ಮನಮೆಚ್ಚಿದವಳು, ಲಿಪ್‌ಸ್ಟಿಕ್ ಹುಡುಗಿ, ತಲೆ ತಿರುಕರು, ಹೊಸ ಕಡತ, ಸಿಡಿಮದ್ದು, ಹಗರಣ, ಗುಮಾನಿ, ಮಡಿಮುತ್ತೈದೆ, ಅಕ್ಕಯ್ಯ, ಋಣಾತ್ಮಕ ಸಂಬಂಧ, ಕಲ್ಲಾಗು ಮನಸ್ಸೇ ಕಲ್ಲಾಗು.

ಬೃಹತ್ ಕಥಾ ಸಂಕಲನ : ಅಕ್ಷತೆ ೧೦೮ ಸಣ್ಣಕಥೆಗಳು, ಪಂಚಾಮೃತ ೧೦೮ ಸಣ್ಣ ಕಥೆಗಳು, ಪ್ರೇಮಾಭಟ್ ೧೦೮ ಸಣ್ಣ ಕಥೆಗಳು

ನಗೆ ಬರಹಗಳು : ದಿಬ್ಬಣ, ದಾಸಯ್ಯನ ಬಸ್ಸು, ಸುಬ್ಬತ್ತೆಯ ಪರಿವಾರ.

ಕವನ ಸಂಕಲನ: ಮನೆ, ಮದುಮಗಳು, ಹೆರ್ಗದ ದುರ್ಗಾಮಾತೆ, ಗಂಗಾಳದೊಳಗೊಂದು ಗೂಡು, ಸೂತ್ರಧಾರಿಯ ಲೋಕತತ್ವ (ಹಯಿಕು), ಆ ಕಾಲ ಈ ಕಾಲ ಎಲ್ಲಾ ಕಾಲ ಒಂದೆ, ಭೂಮಿಕಾ

ಪ್ರವಾಸ ಸಾಹಿತ್ಯ : ಪೂರ್ವಾಂಚಲದಲ್ಲಿ ಕೆಲವು ದಿನಗಳು

ಪ್ರಶಸ್ತಿ / ಗೌರವ

- ‘ಮಿಣುಕು ಹುಳು’ ಕಾದಂಬರಿಗೆ ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಇದರ ಮಾತೃಶ್ರೀ ರತ್ನಮ್ಮ ಹೆಗ್ಗಡೆ ಪುರಸ್ಕಾರ. ೧೯೮೧
- ‘ಗೊಂದಲ’ ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಂತರಾಷ್ಟ್ರೀಯ ಮಹಿಳಾ ವರ್ಷದ ಪ್ರಶಸ್ತಿ. ೧೯೮೩
- ‘ಕಾಡು ಕಡಿದು ಊರು ಮಾಡಿದರು’ ಕಾದಂಬರಿಗೆ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ. ೧೯೯೩
- ಉಡುಪಿಯಲ್ಲಿ ನಡೆದ ಎಂಟನೆಯ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆಯ ಗೌರವ. ೧೯೯೫

❖ 'ಗಾದಿ' ಕಾದಂಬರಿಗೆ ರಾಮಕ್ಕ ಪದ್ಮಕ್ಕ ಪ್ರಶಸ್ತಿ. ೧೯೯೮

❖ 'ಬಾಲನ ಲೀಲಾ ವಿನೋದ' ತುಷಾರದ ಕಥೆಗೆ ಊಒಖಿ ಕಥಾ ಪ್ರಶಸ್ತಿ. ೧೯೯೯

❖ ದಕ್ಷಿಣ ಕನ್ನಡ ಕನ್ನಡಿಗರ ವೇದಿಕೆ ಬೆಂಗಳೂರು ಇವರಿಂದ ಭಾರ್ಗವ ಪ್ರಶಸ್ತಿ. ೧೯೯೯

❖ 'ಪ್ರೇಮಾ ಭಟ್ ೧೦೮ ಕಥೆಗಳು' ಇದಕ್ಕಾಗಿ ಕರ್ನಾಟಕ
ಲೇಖಕಿಯರ ಸಂಘದಿಂದ 'ಅನುಪಮಾ ಪ್ರಶಸ್ತಿ'. ೨೦೦೦

❖ ಉಡುಪಿ ಶ್ರೀ ಪೇಜಾವರ ಸ್ವಾಮಿಗಳವರಿಂದ 'ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ'. ೨೦೦೧

❖ ಮಂಡ್ಯದ ಶ್ರೀಮತಿ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್‌ನಿಂದ
'ಸೀತಾಸುತ ಸಾಹಿತ್ಯ ಪ್ರಶಸ್ತಿ'. ೨೦೦೨

❖ ಮೈಕೋ ಕನ್ನಡ ಬಳಗದ 'ರಾಷ್ಟ್ರಕವಿ ಕುವೆಂಪು ಸ್ಮಾರಕ ಪ್ರಶಸ್ತಿ'. ೨೦೦೨

❖ ಭೂಮಿಕಾ ಕೃತಿಗೆ ಅಳಸಿಂಗ ಪೆರುಮಾಳು ವೇದಿಕೆ,
ಹಿರೇಮಗಳೂರುರವರಿಂದ 'ಅಳಸಿಂಗ ಪ್ರಶಸ್ತಿ'. ೨೦೦೨

❖ 'ಸೂತ್ರಧಾರಿಯ ಲೋಕತತ್ವ' ಕೃತಿಗೆ ಬೆಂಗಳೂರಿನ
'ಗರ್ಗೇಶ್ವರಿ ಪ್ರತಿಷ್ಠಾನ ಪ್ರಶಸ್ತಿ'. ೨೦೦೩

❖ ಬೆಳಗಾವಿಯಲ್ಲಿ ನಡೆದ ೭೦ ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ
'ಕರ್ನಾಟಕ ಶ್ರೀ' ಮತ್ತು 'ಕನ್ನಡ ಶ್ರೀ' ಬಿರುದು. ೨೦೦೩

❖ ಬೆಂಗಳೂರಿನ ಕನ್ನಡ ಅಭಿವೃದ್ಧಿ ಬಳಗ(ರಿ) ದಿಂದ 'ಕುವೆಂಪುಶ್ರೀ ಪ್ರಶಸ್ತಿ' ೨೦೦೪

❖ ಬೆಂಗಳೂರಿನ ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯ ಆರ್ಯಭಟ ಪ್ರಶಸ್ತಿ. ೨೦೦೫

❖ ಪೇಜಾವರ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮಿಗಳಿಂದ 'ಶ್ರೀ ಕೃಷ್ಣ ಪ್ರಶಸ್ತಿ'. ೨೦೦೬

❖ ಮೂಡುಬಿದಿರೆಯ ಆಳ್ವಾಸ್ ನುಡಿಸಿರಿ ಪ್ರಶಸ್ತಿ. ೨೦೦೭

❖ ಅನೇಕ ಸಂಘ - ಸಂಸ್ಥೆಗಳಿಂದ ಸನ್ಮಾನ.

ವಿಳಾಸ :

'ಶ್ರೀ ಗುರು ಪ್ರಸಾದ್',
ನಂ. ೮೪೫,
೪ ನೇ ಮುಖ್ಯರಸ್ತೆ
ಜಯನಗರ, ಬೆಂಗಳೂರು – ೪೦,
ದೂರವಾಣಿ : ೨೩೩೦೧೮೨೨

ಮಿತ್ರಾ ವೆಂಕಟ್ರಾಜ್

ಇವರು ಜುಲೈ ೧೧, ೧೯೪೮ರಲ್ಲಿ ಕುಂದಾಪುರದಲ್ಲಿ ಜನಿಸಿದರು. ಬಿ.ಎಸ್ಸಿ. ಪದವೀಧರೆಯಾಗಿರುವ ಇವರು ಕಥೆ, ಲೇಖನ, ಕವನಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ. ಆದರೆ ಇವರು ಸಮಾಜದಲ್ಲಿ ಗುರುತಿಸಿಕೊಂಡದ್ದು ಕಥೆಗಾರ್ತಿಯಾಗಿ. ತಂದೆ ವೈದ್ಯರಾದರೂ ಸಾಹಿತ್ಯದಲ್ಲಿ ತುಂಬಾ ಆಸಕ್ತಿಯಿತ್ತಾದ್ದರಿಂದ ಮನೆಯಲ್ಲಿ ದೊಡ್ಡ ಗ್ರಂಥಾಲಯವೇ ಇತ್ತು. ಇದು ಇವರಿಗೆ ಓದುವ ಹುಚ್ಚನ್ನು ಹಿಡಿಸಿತು. ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದ ಸಂಜೀವ ಭಟ್ಟರು, ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಗುಂಡ್ಮಿ ಚಂದ್ರಶೇಖರ ಐತಾಳರು ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದರು. ತಮ್ಮೊಳಗೆ ಕಥೆಗಳ ಕಣಜವನ್ನೇ ಇಟ್ಟುಕೊಂಡ ಅಮ್ಮ, ಅಜ್ಜಿ, ದೊಡ್ಡಮ್ಮಂದಿರು ಇವರ ಕಥೆಗಳ ಮೂಲ ಪ್ರೇರಣೆಯಾದರು. ಬರವಣಿಗೆ ಎನ್ನುವುದು ಮಿತ್ರಾ ವೆಂಕಟ್ರಾಜ್‌ರವರ ಮಟ್ಟಿಗೆ ಸಹಜವಾಗಿ, ಸರಳವಾಗಿ ಮೂಡಿ ಬರುವಂತಹದ್ದು. ಕಥೆ ಬರೆಯುವುದೆಂದರೆ ಅದು ತನ್ನ ಮಟ್ಟಿಗೆ ಒಂದು ದರ್ಶನ, ಒಂದು ಬಿಡುಗಡೆ, ಹೊರ ಬರಲೇಬೇಕಾದ ತನ್ನೊಳಗಿನ ಒತ್ತಡವೆನ್ನುತ್ತಾರೆ ಅವರು. ಇದುವೇ ಅವರ ಬರವಣಿಗೆಯ ಉದ್ದೇಶವೂ ಕೂಡ ಆಗಿದೆ.

ಪ್ರಕಟಿತ ಕೃತಿಗಳು

ಕಥಾ ಸಂಕಲನ : ರುಕುಮಾಯಿ, ಹಕ್ಕಿ ಮತ್ತು ಅವಳು

ಮೌಲಿಕ ಲೇಖನಗಳ ಸಂಕಲನ : ಬೊಗಸೆಯಲ್ಲಿಷ್ಟು ಬೆಳಕು ತುಂಬಿ, ಮುಗಿಲು ಮಲ್ಲಿಗೆಯ ಎಟಕಿಸಿ

ಸಂಪಾದಿತ ಕಥೆಗಳು : ಕಥೆ ಹೇಳೇ (ಮುಂಬಯಿ ಲೇಖಕಿಯರ ಕಥಾ ಸಂಕಲನ)

ಸಂಪಾದಿತ ಲೇಖನಗಳು : ಬೆಳಕಿನೆಡೆಗೆ (ಮುಂಬಯಿ ಲೇಖಕಿಯರ ಲೇಖನ ಸಂಗ್ರಹ)

ಪ್ರಶಸ್ತಿ / ಗೌರವ

- ❖ 'ಒಂದು ಒಸಗೆ ಒಯ್ಯುವುದಿತ್ತು' ಕಥೆಗೆ 'ದಿಲ್ಲಿಯ ಕಥಾ' ಪ್ರಶಸ್ತಿ. ೧೯೯೪
- ❖ ಕನ್ನಡ ಸಾಹಿತ್ಯ ಪರಿಷತ್ತಿನ ಅಂತರಾಷ್ಟ್ರೀಯ ಮಹಿಳಾ ವರ್ಷದ ಪ್ರಶಸ್ತಿ. ೧೯೯೮
- ❖ ಅಖಿಲ ಕರ್ನಾಟಕ ಲೇಖಕಿಯರ ಸಂಘದ ಸಾವಿತ್ರಮ್ಮ ದತ್ತಿನಿಧಿ ಪ್ರಶಸ್ತಿ. ೧೯೯೮
- ❖ 'ಹಕ್ಕಿ ಮತ್ತು ಅವಳು' ಕಥಾ ಸಂಕಲನಕ್ಕೆ ಧಾರವಾಡದ

ವಿದ್ಯಾವರ್ಧಕ ಸಂಘದ ರತ್ನಮ್ಮ ಹೆಗ್ಗಡೆ ಪ್ರಶಸ್ತಿ. ೧೯೯೯

❖ ಕಾಂತಾವರದ ವರ್ಧಮಾನ ಸಾಹಿತ್ಯ ಪ್ರಶಸ್ತಿ. ೨೦೦೨

ವಿಳಾಸ :

೪೦೧, ಆಶಿಯಾನಾ,
೨೧, ಸ್ಯೆಂಟ್ ಪಾಲ್ ರಸ್ತೆ,
ಬಾಂದ್ರಾ - ಪಶ್ಚಿಮ,
ಮುಂಬಯಿ – ೪೦೦೦೫೦,
ದೂರವಾಣಿ – ಸ್ಥಿರ - ೦೨೨ – ೨೬೪೪ ೧೨೯೬,
ಸಂಚಾರಿ – ೯೯೨೦೧೫೭೨೯೭,
ಇ-ಅಂಚೆ – mitraj@hotmail.com

ವೈದೇಹಿ

ವೈದೇಹಿ ಎಂಬ ಕಾವ್ಯನಾಮದಿಂದಲೇ ಚಿರಪರಿಚಿತರಾಗಿರುವ ಜಾನಕಿ ಶ್ರೀನಿವಾಸ ಮೂರ್ತಿಯವರು ಫೆಬ್ರವರಿ ೧೨, ೧೯೪೫ರಲ್ಲಿ ಕುಂದಾಪುರದಲ್ಲಿ ಜನಿಸಿದರು. ಬಿ.ಕಾಂ. ಪದವೀಧರೆಯಾಗಿರುವ ಇವರು ಬಾಲ್ಯದಲ್ಲಿಯೇ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡರು. ಕಥೆ, ಕವನ, ಮಕ್ಕಳ ನಾಟಕಗಳು, ಅನುವಾದ ಲೇಖನಗಳು, ಮಿಶ್ರಸಂಗ್ರಹ ಇವರ ಆಸಕ್ತಿಯ ಸಾಹಿತ್ಯ ಪ್ರಕಾರಗಳು. ಅಣ್ಣ ಎ. ಎಸ್. ಎನ್. ಹೆಬ್ಬಾರರು ಬರಹಗಾರರಾಗಿದ್ದು, ಅವರ ಬರಹಗಳನ್ನು ನೋಡಿ ಇವರೂ ಬರೆಯಲು ಆರಂಭಿಸಿದರು. ವೈದೇಹಿಯವರ ಬರಹಗಳನ್ನು ತಿದ್ದಿ, ತೀಡಿ, ಪೋಷಿಸಿದವರೂ ಅಣ್ಣನೇ. ಹಿರಿಯ ಅಣ್ಣ ಎ. ಎಸ್. ಹೆಬ್ಬಾರ್ ಸರ್ಕಾರಿ ಕಾಲೇಜಿನಲ್ಲಿ ಆಂಗ್ಲಭಾಷಾ ಪ್ರಾಧ್ಯಾಪಕರಾಗಿದ್ದು, ನಡೆದಾಡುವ ವಿಶ್ವಕೋಶವೇ ಆಗಿದ್ದರು. ತಾನು ಕಂಡ ಜೀವನಗಳನ್ನು ಕುರಿತ ಚಿಂತನೆಯೇ ಇವರಿಗೆ ಸಾಹಿತ್ಯ ರಚನೆಗೆ ಪ್ರೇರಣೆ. ಚಿಂತನೆಯ ಬೆಳಕಿನಲ್ಲಿ ಬದುಕಿನ ಜಟಿಲತೆಯನ್ನು ಬಿಡಿಸಿ ನೋಡುವುದೇ, ಅರಿಯುವುದೇ ಇವರ ಸಾಹಿತ್ಯ ರಚನೆಯ ಹಿಂದಿರುವ ಉದ್ದೇಶ.

ಪ್ರಕಟಿತ ಕೃತಿಗಳು

ಕಥಾ ಸಂಕಲನ : ಮರ ಗಿಡ ಬಳ್ಳಿ, ಅಂತರಂಗದ ಪುಟಗಳು, ಗೋಲ, ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗಳು, ಅಮ್ಮಚ್ಚಿಯೆಂಬ ನೆನಪು, ಕ್ರೌಂಚ ಪಕ್ಷಿಗಳು, ಬಿಂದು ಬಿಂದಿಗೆ.

ಕವನ ಸಂಕಲನ : ಪಾರಿಜಾತ, ಬಿಂದು ಬಿಂದಿಗೆ

ಕಾದಂಬರಿ : ಅಸ್ಪೃಶ್ಯರು

ಅನುಭವ ಕಥನ : ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು, ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಸೇಡಿಯಾಪು ನೆನಪುಗಳು, ದಿ। ಸರಸ್ವತಿ ಬಾಯಿ ರಾಜೇವಾಡೆಯವರ ಬದುಕಿನ ಕಥನ.

ಅನುವಾದ : ಭಾರತೀಯ ಮಹಿಳೆಯರ ಸ್ವಾತಂತ್ರ್ಯ, ಬೆಳ್ಳಿಯ ಸಂಕೋಲೆಗಳು, ಸಂಗೀತ ಸಂವಾದ, ಸೂರ್ಯ ಕಿನ್ನರಿಯರು.

ಮಕ್ಕಳ ನಾಟಕಗಳು : ಧಾಂ ಧೂಂ ಸುಂಟರಗಾಳಿ, ಮೂಕನ ಮಕ್ಕಳು, ಗೊಂಬೆ
ಮ್ಯಾಕ್ಬೆತ್, ಢಾಣಾ ಢಂಗುರ, ನಾಯಿಮರಿ, ಸೂರ್ಯಬಂದ, ಝುಂ ಝಾಂ ಆನೆ ಮತ್ತು ಪುಟ್ಟ, ಕೋಟು ಗುಮ್ಮ, ಹಕ್ಕಿ ಹಾಡು, ಅರ್ಧ ಚಂದ್ರ ಮಿಠಾಯಿ, ಸೋಮಾರಿ ಓಲ್ಯಾ.

ಲೇಖನ ಸಂಗ್ರಹ : ಮಲ್ಲಿನಾಥನ ಧ್ಯಾನ

ಸ್ಮೃತಿ ಕಥನ : ಜಾತ್ರೆ

ಕಥಾ ಸಂಗ್ರಹ : ಅಲೆಗಳಲ್ಲಿ ಅಂತರಂಗ

ಮಿಶ್ರ ಸಂಗ್ರಹ : ಮೇಜು ಮತ್ತು ಬಡಗಿ

- ಆಯ್ದ ಕಥೆಗಳು : ಕರ್ನಾಟಕ ಸರಕಾರದ ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಕಟಿತ
- ಅಂತರೀಚಿ ಪಾನೇ : ಮರಾಠಿಗೆ ಅನುವಾದಿತ ಕಥೆಗಳ ಸಂಗ್ರಹ. ಅನುವಾದಕಿ : ಉಮಾ ಕುಲಕರ್ಣಿ
- ಆಯ್ದ ಒಂಭತ್ತು ಕಥೆಗಳು : ಅಸ್ಪೃಶ್ಯರು : ಮಂಗಳೂರು ವಿ. ವಿ.ದಲ್ಲಿ ಪಠ್ಯ
- ವೈದೇಹಿಯವರ ಆಯ್ದ ಕಥೆಗಳು : ಬೆಂಗಳೂರು ವಿ.ವಿ.ದಲ್ಲಿ ಪಠ್ಯ.
- ಹಲವು ಕಥೆಗಳು ಮರಾಠಿ, ಮಲೆಯಾಳಿ, ತಮಿಳು, ತೆಲುಗು, ಹಿಂದಿ, ಗುಜರಾತಿ, ಇಂಗ್ಲೀಷ್ ಭಾಷೆಗಳಿಗೆ ಅನುವಾದಗೊಂಡಿವೆ.
- ಮೈಸೂರು ವಿ.ವಿ ಮತ್ತು ಕರ್ನಾಟಕ ಪದವಿಪೂರ್ವ ಮಂಡಳಿಯ ಪಠ್ಯಗಳಲ್ಲಿ ಆಯ್ದ ಕವನಗಳು ಪ್ರಕಟಿತ.
- ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಂಗ್ರಹದಲ್ಲಿ ಕಥೆ – ಕವನಗಳು ಪ್ರಕಟಿತ.
- The Inner Courtyard (Editor Smt. Lakshmi Holmstorm, Published by Virag Press, London)
- 'From Kaveri to Godavari' (Editor Dr. Ramachandra Sharma, Published by Penguin)
- Women writing in India (Editors Ms. Susie Tharu and K. Lalitha, Published by The Feminist Press New York)
- The Southern Harvest (Editor Smt. Githa Hariharan, Published by KATHA)

- In Their Own Voice (Editor Arlene R.K. Zide, The Penguin Anthology of Contemporary Indian Women Poets)

- Ashaa Codyssey II (short stories by Indian women) compiled and edited by Divya Mathur Published by Indian Book Shelf (IBS) London.

- ವೈದೇಹಿಯವರ ಆಯ್ದ ಕಥೆಗಳು ಮತ್ತು ಆಯ್ದ ಕವನಗಳು - ಶ್ರೀ. ಕೆ. ವಿ. ಸುಬ್ಬಣ್ಣ ನೆನಪಿನ ಪುಸ್ತಕ ಮಾಲೆ 'ಮೊದಲ ಓದು'ನಲ್ಲಿ ಪ್ರಕಟಿತ.

- Gulabi Talkies and other stories – English Translations of 20 stories, edited by Mrs. Tejaswini Niranjana and Published by Penguin Publications India Ltd. 2006.

- Jathre – the temple fair, Translated by Mrs. Nayana Kashyap, and soon going to be Published by Oxford University Press in an anthology of Novellas.

- ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು ಕಥೆಯನ್ನು ಆಧರಿಸಿ ಗಿರೀಶ್ ಕಾಸರವಳ್ಳಿಯವರು ನಿರ್ದೇಶಿಸಿದ ಸಿನಿಮಾ 'ಗುಲಾಬಿ ಟಾಕೀಸು' ೨೦೦೮ ರಲ್ಲಿ ಬಿಡುಗಡೆ.

- ಬೆಂಗಳೂರು ದೂರದರ್ಶನ ಕೇಂದ್ರದಿಂದ 'ಅಕ್ಕು' ಕಥೆ ಆಧರಿಸಿ ಟೆಲಿಚಿತ್ರದ ನಿರ್ಮಾಣ, ಟೆಲಿಪ್ರಸಾರ.

- 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆಯನ್ನು ಅಸ್ಸಾಮಿನಲ್ಲಿ ಈಗ ನೆಲೆಸಿರುವ ನೀನಾಸಂ ಪದವೀಧರೆ ಕನ್ನಡತಿ ನಟಿ ಭಾಗೀರಥಿ ಬಾಯಿ ಕದಂರವರಿಂದ 'ಏಕವ್ಯಕ್ತಿ ಪ್ರದರ್ಶನ'ವಾಗಿ ಹಿಂದೀ, ಕನ್ನಡ ಮತ್ತು ಅಸ್ಸಾಮೀ ಭಾಷೆಗಳಲ್ಲಿ ದೇಶದ ಅನೇಕ ಕಡೆ(ಎನ್. ಎಸ್. ಡಿಯೂ ಸೇರಿ) ಪ್ರದರ್ಶನ ಹಾಗೂ ಅತ್ಯಂತ ಯಶಸ್ವೀ ಪ್ರದರ್ಶನವಾಗಿ ಹೆಸರು ಪಡೆದಿದೆ.

- ಬೆಂಗಳೂರಿನ 'ಧ್ಯಾನ ರೆಪರ್ಟರಿ' ತಂಡದವರಿಂದ 'ಮಲ್ಲಿನಾಥನ ಧ್ಯಾನ'ದಲ್ಲಿನ ಮೂರು ನಾಟಕಗಳ ಪ್ರದರ್ಶನ. (ಶಕುಂತಲೆಯೊಂದಿಗೆ ಅಪರಾಹ್ನ, ಆಭಾ ಮತ್ತು ಸೌಗಂಧಿಯ ಸ್ವಗತಗಳು).

ಪ್ರಶಸ್ತಿ / ಗೌರವ :

- ❖ 'ಅಸ್ಪೃಶ್ಯರು' ಕಾದಂಬರಿಗೆ ಎಂಕೆ. ಇಂದಿರಾ ಪ್ರಶಸ್ತಿ. ೧೯೮೨
- ❖ 'ಅಸ್ಪೃಶ್ಯರು' ಕಾದಂಬರಿಗೆ ಸುಧಾ ಯುಗಾದಿ ಸ್ಪರ್ಧೆ ವಿಶೇಷ ಬಹುಮಾನ. ೧೯೮೨
- ❖ 'ಬಿಂದು ಬಿಂದಿಗೆ' ಮತ್ತು 'ಅಂತರಂಗದ ಪುಟಗಳು' ಕೃತಿಗಳಿಗೆ ಗೀತಾ ದೇಸಾಯಿ ದತ್ತಿ ನಿಧಿ ಪ್ರಶಸ್ತಿ. ೧೯೮೫
- ❖ 'ಗೋಲ' ಕಥಾ ಸಂಕಲನಕ್ಕೆ ವರ್ಧಮಾನ ಉದಯೋನ್ಮುಖ ಪ್ರಶಸ್ತಿ. ೧೯೯೨
- ❖ 'ಹಗಲು ಗೀಚಿದ ನೆಂಟ' ಕಥೆಗೆ ಕಥಾ ಪ್ರಶಸ್ತಿ. ೧೯೯೪
- ❖ 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥಾ ಸಂಕಲನಕ್ಕೆ ಅನುಪಮಾ ಪ್ರಶಸ್ತಿ. ೧೯೯೪
- ❖ ಐದು ಮಕ್ಕಳ ನಾಟಕಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ೧೯೯೪
- ❖ 'ಅಮ್ಮಚ್ಚಿಯೆಂಬ ನೆನಪು' ಕಥಾ ಸಂಕಲನಕ್ಕೆ ಕಥಾ ಪ್ರಶಸ್ತಿ. ೧೯೯೭
- ❖ 'ಮಲ್ಲಿನಾಥನ ಧ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ೧೯೯೭
- ❖ ಅತ್ತಿಮಬ್ಬೆ ಪ್ರತಿಷ್ಠಾನ, ಬೆಂಗಳೂರು ಇವರಿಂದ ಅತ್ತಿಮಬ್ಬೆ ಪ್ರಶಸ್ತಿ. ೧೯೯೮
- ❖ ಕರ್ನಾಟಕ ರಾಜ್ಯದ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ. ೧೯೯೮
- ❖ ಸತ್ಯಕಾಮ ಪ್ರತಿಷ್ಠಾನದಿಂದ ಸತ್ಯಕಾಮ ಪ್ರಶಸ್ತಿ. ೨೦೦೧
- ❖ ಕನ್ನಡ ಸಾಹಿತ್ಯಕ್ಕೆ ನೀಡಿದ ಸಮಗ್ರ ಕೊಡುಗೆಗಾಗಿ ಶಾಶ್ವತಿ ಟ್ರಸ್ಟ್ ಬೆಂಗಳೂರು ಇವರಿಂದ ಸದೋದಿತ ಪ್ರಶಸ್ತಿ. ೨೦೦೧
- ❖ ದ.ಕ. ಕನ್ನಡಿಗರ ವೇದಿಕೆ, ಬೆಂಗಳೂರು ಇವರಿಂದ ಭಾರ್ಗವ ಪ್ರಶಸ್ತಿ. ೨೦೦೧ - ೦೩
- ❖ ಕುಂದಾಪುರ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಪಟ್ಟ ಇವರಿಗೆ ದೊರಕಿದೆ. ರಾಜ್ಯ ದೇಶ ಹಾಗೂ ವಿದೇಶಗಳಲ್ಲೂ ಅನೇಕ, ಗೋಷ್ಠಿ, ವಿಚಾರ ಸಂಕಿರಣ, ಸಮ್ಮೇಳನಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ವಿಶೇಷ ಆಹ್ವಾನಿತರಾಗಿ, ಕನ್ನಡದ ಸಾಹಿತಿಯಾಗಿ, ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿರುವ ಕೀರ್ತಿ

ವೈದೇಹಿಯವರದು. ೨೦೧೧ರಲ್ಲಿ ಮೂಡಬಿದಿರೆಯಲ್ಲಿ ಜರಗಿದ ಆಳ್ವಾಸ್ ನುಡಿಸಿರಿಯ ಅಧ್ಯಕ್ಷತೆಯ ಗೌರವವೂ ಇವರಿಗೆ ಸಂದಿದೆ.

ವಿಳಾಸ :

'ಇರುವಂತಿಗೆ',
ಅನಂತನಗರ,
೨ನೇಹಂತ,
ಮಣಿಪಾಲ - ೫೭೬೧೦೪
ದೂರವಾಣಿ : ಸ್ಥಿರ- ೦೮೨೦ – ೨೫೭೨೩೯೫,
ಸಂಚಾರಿ – ೯೪೪೮೨೧೫೬೯೭

ಸಾರಾ ಅಬೂಬಕ್ಕರ್

ಇವರು ಜೂನ್ ೩೦, ೧೯೩೬ರಲ್ಲಿ ಕಾಸರಗೋಡಿನಲ್ಲಿ ಜನಿಸಿದರು. ಕಾದಂಬರಿ, ಕಥೆ, ಲೇಖನಗಳು, ಅನುವಾದ ಇವರ ಆಸಕ್ತಿಯ ಸಾಹಿತ್ಯ ಪ್ರಕಾರಗಳು. ಮುಸ್ಲಿಂ ಸಮುದಾಯದಿಂದ ಬಂದ ಇವರು ತನ್ನ ಸಮಾಜದ ಸಮಸ್ಯೆಗಳನ್ನು ಬಾಲ್ಯದಿಂದಲೂ ನೋಡುತ್ತಾ ಬಂದವರು. ಇದನ್ನು ಕನ್ನಡದಲ್ಲಿ ಬರೆಯಬೇಕು ಎಂಬ ತುಡಿತವುಂಟಾಗುತ್ತಿತ್ತು. ಅದೇ ಹೊತ್ತಿಗೆ ಫಕೀರ್ ಮಹಮ್ಮದ್ ಕಟಪಾಡಿಯವರು ಬರೆದ 'ಒಂದು ರಾತ್ರಿ ಒಂದು ಹಗಲು' ಕಥೆ ಇವರ ಬರವಣಿಗೆಗೆ ಪ್ರೇರಣೆಯಾಯಿತು. ಎಂ.ಕೆ. ಇಂದಿರಾ, ತ್ರಿವೇಣಿಯವರ ಬರಹಗಳು ಇನ್ನಷ್ಟು ಸ್ಫೂರ್ತಿ ನೀಡಿದವು. ಸಾಮಾಜಿಕ ಬದಲಾವಣೆಯೇ ಇವರ ಬರವಣಿಗೆಯ ಹಿಂದಿರುವ ಉದ್ದೇಶ. ಸಾಹಿತ್ಯ ರಚನೆಯ ಜೊತೆಗೆ ಅನೇಕ ಸಂಘ-ಸಂಸ್ಥೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾರೆ. ಅನೇಕ ಅಕಾಡೆಮಿಗಳ ಸದಸ್ಯತ್ವ ಪಡೆದಿರುವ ಇವರು ಮಂಗಳೂರು ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವನ್ನೂ ಪಡೆದಿರುತ್ತಾರೆ. 'ಚಂದ್ರಗಿರಿ' ಪ್ರಕಾಶನ ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ ಸ್ವಂತ ಕೃತಿಗಳನ್ನು ಈ ಪ್ರಕಾಶನದಿಂದ ಹೊರ ತರುತ್ತಿದ್ದಾರೆ. 'ಚಂದ್ರಗಿರಿ ತೀರದಲ್ಲಿ' ಕೃತಿ ಮಲಯಾಳಂ, ತಮಿಳು, ತೆಲುಗು, ಮರಾಠಿ, ಒರಿಯಾ ಮತ್ತು ಹಿಂದಿ ಭಾಷೆಗಳಿಗೆ ಭಾಷಾಂತರಗೊಂಡಿವೆ. ಈ ಕೃತಿ ಮಂಗಳೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯಗಳಿಗೆ ಪಠ್ಯಪುಸ್ತಕವಾಗಿದೆ. ಇವರ 'ನಿಯಮ-ನಿಯಮಗಳ ನಡುವೆ' ಎಂಬ ಸಣ್ಣಕಥೆ ಪದವಿ-ಪೂರ್ವ ತರಗತಿಯ ದ್ವಿತೀಯ ವರ್ಷದ ಪಠ್ಯ ಪುಸ್ತಕದಲ್ಲಿ ಸೇರ್ಪಡೆಗೊಂಡಿದೆ.

ಪ್ರಕಟಿತ ಕೃತಿಗಳು

ಕಾದಂಬರಿ : ಚಂದ್ರಗಿರಿ ತೀರದಲ್ಲಿ, ಸಹನಾ, ವಜ್ರಗಳು, ಕದನ ವಿರಾಮ, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ, ಪ್ರವಾಹ, ಸುಳಿ, ಪಂಜರ.

ಕಥಾ ಸಂಕಲನ : ಚಪ್ಪಲಿಗಳು, ಪಯಣ ಮತ್ತು ಇತರ ಕಥೆಗಳು, ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ಖೆಡ್ಡಾ, ಸುಮಯ್ಯಾ (ಜಾನಪದ ಕಥೆಗಳು), ಗಗನಸಖಿ.

ಭಾಷಾಂತರ ಕೃತಿ : ಮನೋಮಿ, ಬಲೆ, ನಾನಿನ್ನು ನಿದ್ರಿಸುವೆ, ತುರ್ತು ಪರಿಸ್ಥಿಯ ಕರಾಳಮುಖ.

ಲೇಖನ ಸಂಗ್ರಹ : ಲೇಖನ ಗುಚ್ಛ, ಅನಾವರಣ, ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ.

ಪ್ರವಾಸ ಕಥನ : ಐಷಾರಾಮದ ಆಳದಲ್ಲಿ

ಆತ್ಮ ಚರಿತ್ರೆ : ಹೊತ್ತು ಕಂತುವ ಮುನ್ನ

ಬಾನುಲಿ ನಾಟಕಗಳ ಸಂಗ್ರಹ: ತೇಲಾಡುವ ಮೋಡಗಳು

ಪ್ರಶಸ್ತಿ / ಗೌರವ

- ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ. ೧೯೯೧
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. ೧೯೯೫
- 'ಬಲೆ' ಭಾಷಾಂತರ ಕೃತಿಗೆ ಕರ್ನಾಟಕ ಲೇಖಕಿಯ ಸಂಘದ ಎಚ್.ವಿ. ಸಾವಿತ್ರಮ್ಮ ದತ್ತಿನಿಧಿ ಬಹುಮಾನ. ೧೯೯೮
- ಬಸವ ಕೇಂದ್ರ, ಮುರುಘ ರಾಜೇಂದ್ರ ಮಠ, ಚಿತ್ರದುರ್ಗದ ಸಾಹಿತ್ಯ ಭೂಷಣ ಪ್ರಶಸ್ತಿ. ೧೯೯೯
- ಸರೋಜಾದೇವಿ ಶ್ರೀ ಹರ್ಷ ಪ್ರಶಸ್ತಿ. ೧೯೯೯
- ಕರ್ನಾಟಕ ಸರಕಾರದ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ. ೧೯೯೯
- 'ಚಂದ್ರಗಿರಿ ತೀರದಲ್ಲಿ' ಕಥೆಯನ್ನಾಧರಿಸಿದ ತಮಿಳು ಸಿನೆಮಾ 'ಜಮೀಲಾ'ಕ್ಕೆ ಉತ್ತಮ ಕಥಾ ಪ್ರಶಸ್ತಿ. ೨೦೦೧
- ಗೊರೂರು ಪ್ರತಿಷ್ಠಾನದ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿ. ೨೦೦೩
- ಆಳ್ವಾಸ್ ನುಡಿಸಿರಿ ಪ್ರಶಸ್ತಿ. ೨೦೦೫
- ಕನ್ನಡ ವಿಶ್ವವಿದ್ಯಾಲಯ ಹಂಪಿ ಇದರ ನಾಡೋಜ ಪ್ರಶಸ್ತಿ. ೨೦೦೫
- ಸಂದೇಶ ಸಾಹಿತ್ಯ ಪ್ರಶಸ್ತಿ. ೨೦೦೬
- ಶಾಶ್ವತಿ ಪ್ರತಿಷ್ಠಾನದ ನಂಜನಗೂಡು ತಿರುಮಲಾಂಬಾ ಸಾಹಿತ್ಯ ಪ್ರಶಸ್ತಿ. ೨೦೦೭
- ಮಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್. ೨೦೦೮

ವಿಳಾಸ :

ಸೂಕ್ಷ್ಮ ತರಂಗ ನಿಲಯ ರಸ್ತೆ,
ಲೇಡಿಹಿಲ್, ಒನೇಕ್ರಾಸ್,
ಜ್ಯೋತಿ ಕಿರಣ್ ಅಪಾರ್ಟ್‌ಮೆಂಟಿನ ಹಿಂಭಾಗ,
ಮಂಗಳೂರು–೫೭೫೦೦೬.
ದೂರವಾಣಿ : ೦೮೨೪–೪೫೫೭೯೨ (ಮನೆ)

ಪ್ರಧಾನ ಆಕರಗಳು

೧. ಗಂಗಾ ಪಾದೇಕಲ್ ಪುಲಪೇಡಿ ಮತ್ತು ಇತರ ಕತೆಗಳು		೧೯೮೭	ಕನ್ನಡ ಸಂಘ	ಪುತ್ತೂರು
ಗಂಗಾ ಪಾದೇಕಲ್	ಹೆಜ್ಜೆ ಮೂಡದ ಹಾದಿಯಲ್ಲಿ	೧೯೮೮	ಕನ್ನಡ ಸಂಘ	ಪುತ್ತೂರು
ಗಂಗಾ ಪಾದೇಕಲ್	ಹೊಸಹೆಜ್ಜೆ	೧೯೯೬	ಕನ್ನಡ ಸಂಘ	ಪುತ್ತೂರು
ಗಂಗಾ ಪಾದೇಕಲ್	ವಾಸ್ತವ	೧೯೯೬	ಮಹಿಳಾ ಸಾಹಿತ್ಯಕಾ	ಹುಬ್ಬಳ್ಳಿ
ಗಂಗಾ ಪಾದೇಕಲ್	ಕ್ಷಮಾಯ ಧರಿತ್ರಿ	೨೦೦೨	ಗೀತಾ ಪ್ರಕಾಶನ ಮಂದಿರ	ಶಿವಮೊಗ್ಗ
ಗಂಗಾ ಪಾದೇಕಲ್	ನೆಲೆ ತಪ್ಪಿದ ಹಕ್ಕಿ	೨೦೦೩	ವಿಜಯಾ ಸಾಹಿತ್ಯ ಪ್ರಕಾಶನ	ಬೆಂಗಳೂರು
ಗಂಗಾ ಪಾದೇಕಲ್	ಮನ್ನಣೆಯ ದಾಹ	೨೦೦೫	ಅಭ್ಯುದಯ ಪ್ರಕಾಶನ	ಕನ್ಯಾನ ಬಂಟ್ವಾಳ
ಗಂಗಾ ಪಾದೇಕಲ್	ಈ ಪ್ರಜಾ ರಾಜ್ಯದೊಳಗೆ	೨೦೦೬	ಶ್ರೀಕೃಷ್ಣ ಬುಕ್ ಏಜೆನ್ಸಿ	ಬೆಂಗಳೂರು
ಗಂಗಾ ಪಾದೇಕಲ್	ಸಂಕ್ರಮಣ	೨೦೦೬	ನೇತ್ರಾವತಿ ಪ್ರಕಾಶನ	ಬೆಂಗಳೂರು
ಗಂಗಾ ಪಾದೇಕಲ್	ಚಿನ್ನದ ಸೂಜಿ	೨೦೦೮	ಶ್ರೀಕೃಷ್ಣ ಬುಕ್ ಏಜೆನ್ಸಿ	ಬೆಂಗಳೂರು
೨. ಪ್ರೇಮಾಭಟ್	ಮನಮೆಚ್ಚಿದವಳು	೧೯೭೫	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	ಲಿಪ್‌ಸ್ಟಿಕ್ ಹುಡುಗಿ	೧೯೭೧	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	ತಲೆತಿರುಕರು	೧೯೮೦	ಪ್ರೇಮಾಸಾಯಿ	ಬೆಂಗಳೂರು

			ಪ್ರಕಾಶನ,	
ಪ್ರೇಮಾಭಟ್	**ಹೊಸಕಡತ**	೧೯೮೨	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	**ಸಿಡಿಮದ್ದು**	೧೯೯೨	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	**ಹಗರಣ**	೧೯೯೪	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	**ಗುಮಾನಿ**	೧೯೯೭	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	**ಮಡಿಮುತ್ತೈದೆ**	೨೦೦೧	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	**ಅಕ್ಕಯ್ಯ**	೨೦೦೪	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್ (ಮೇಲಿನ ಕಥಾಸಂಕಲನಗಳು 'ಕಥಾವರ್ಷ'ದಲ್ಲಿ ಸೇರ್ಪಡೆಗೊಂಡಿವೆ)	**ಋಣಾತ್ಮಕ ಸಂಬಂಧ**	೨೦೦೪	ಪ್ರೇಮಾಸಾಯಿ	ಬೆಂಗಳೂರು ಪ್ರಕಾಶನ,
ಪ್ರೇಮಾಭಟ್	**ಕಥಾವರ್ಷ**	೨೦೦೭	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
ಪ್ರೇಮಾಭಟ್	**ಕಲ್ಲಾಗು ಮನಸ್ಸೇ ಕಲ್ಲಾಗು**	೨೦೦೯	ಪ್ರೇಮಾಸಾಯಿ ಪ್ರಕಾಶನ,	ಬೆಂಗಳೂರು
೩ ಮಿತ್ರಾ ವೆಂಕಟ್ರಾಜ್	**ರುಕುಮಾಯಿ**	೧೯೯೦	ನಂದನ ಪ್ರಕಾಶನ	ಬೆಂಗಳೂರು
ಮಿತ್ರಾ ವೆಂಕಟ್ರಾಜ್	**ಹಕ್ಕಿ ಮತ್ತು ಅವಳು**	೧೯೯೭	ಸಾಹಿತ್ಯ ಪ್ರಕಾಶನ	ಮುಂಬಯಿ
ಮಿತ್ರಾ ವೆಂಕಟ್ರಾಜ್	**ಮಾಯಕದ ಸತ್ಯ** (ಅಚ್ಚಿನಲ್ಲಿದೆ)	೨೦೧೦	ಅಂಕಿತ ಪ್ರಕಾಶನ	ಬೆಂಗಳೂರು

೪. ವೈದೇಹಿ	**ಮರಗಿಡಬಳ್ಳಿ**	೧೯೭೯	ಅಕ್ಷರ ಪ್ರಕಾಶನ	ಹೆಗ್ಗೋಡು
ವೈದೇಹಿ	**ಅಂತರಂಗದ ಪುಟಗಳು**	೧೯೮೪	ಅಕ್ಷರ ಪ್ರಕಾಶನ	ಹೆಗ್ಗೋಡು
ವೈದೇಹಿ	**ಗೋಲ**	೧೯೮೬	ಅಕ್ಷರ ಪ್ರಕಾಶನ	ಹೆಗ್ಗೋಡು
ವೈದೇಹಿ	**ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ**	೧೯೯೧	ಅಕ್ಷರ ಪ್ರಕಾಶನ	ಹೆಗ್ಗೋಡು
ವೈದೇಹಿ	**ಅಮ್ಮಚ್ಚಿಯೆಂಬ ನೆನಪು**	೨೦೦೦	ಅಕ್ಷರ ಪ್ರಕಾಶನ	ಹೆಗ್ಗೋಡು
ವೈದೇಹಿ	**ಕ್ರೌಂಚ ಪಕ್ಷಿಗಳು**	೨೦೦೫	ಅಕ್ಷರ ಪ್ರಕಾಶನ	ಹೆಗ್ಗೋಡು

(ಮೇಲಿನ ಕಥಾ ಸಂಕಲನಗಳು 'ಅಲೆಗಳಲ್ಲಿ ಅಂತರಂಗ'ದಲ್ಲಿ ಸೇರ್ಪಡೆಗೊಂಡಿವೆ)

ವೈದೇಹಿ	**ಕಥಾವರ್ಷ**	೨೦೦೬	ಅಕ್ಷರ ಪ್ರಕಾಶನ	ಹೆಗ್ಗೋಡು
೫ ಸಾರಾ ಅಬೂಬಕ್ಕರ್	**ಚಪ್ಪಲಿಗಳು**	೧೯೮೯	ನವಕರ್ನಾಟಕ ಪ್ರಕಾಶನ	ಬೆಂಗಳೂರು
ಸಾರಾ ಅಬೂಬಕ್ಕರ್	**ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು**	೧೯೯೬	ಚಂದ್ರಗಿರಿ ಪ್ರಕಾಶನ	ಮಂಗಳೂರು
ಸಾರಾ ಅಬೂಬಕ್ಕರ್	**ಪಯಣ ಮತ್ತು ಇತರ ಕತೆಗಳು**	೧೯೯೨	ಪುಸ್ತಕ ಪ್ರಕಾಶನ	ಮೈಸೂರು
ಸಾರಾ ಅಬೂಬಕ್ಕರ್	**ಖೆಡ್ಡಾ**	೧೯೯೯	ಚಂದ್ರಗಿರಿ ಪ್ರಕಾಶನ	ಮಂಗಳೂರು
ಸಾರಾ ಅಬೂಬಕ್ಕರ್	**ಸುಮಯ್ಯ** (ಜಾನಪದ ಕತೆಗಳು)	೨೦೦೪	ಚಂದ್ರಗಿರಿ ಪ್ರಕಾಶನ	ಮಂಗಳೂರು

ಸಾರಾ ಅಬೂಬಕ್ಕರ್	ಗಗನಸಖಿ	೨೦೦೭	ಚಂದ್ರಗಿರಿ ಪ್ರಕಾಶನ	ಮಂಗಳೂರು

ಅನುಷಂಗಿಕ ಆಕರಗಳು

೧. ಅಶೋಕ ಟಿ.ಪಿ. (ಸಂ): **ವೈದೇಹಿ ವಾಚಿಕೆ;** ೨೦೦೯; ನುಡಿಪುಸ್ತಕ, ಬೆಂಗಳೂರು

೨. ಅಶ್ವಿನಿ ಧೋಂಗಡೆ: ವಿಠಲರಾವ್ ಗಾಯಕ್ವಾಡ್ (ಅನು); **ಸ್ತ್ರೀವಾದಿ ವಿಮರ್ಶೆ: ಸ್ವರೂಪ ಮತ್ತು ಪರಿಕಲ್ಪನೆಗಳು,** ೨೦೦೧.

೩. ಅನುಪಮಾ ಪ್ರಸಾದ್: **ಚೇತನಾ;** ೨೦೦೨; ಕನ್ನಡ ಸಾಹಿತ್ಯ ಪರಿಷತ್ತು; ಕಾಸರಗೋಡು.

೪. ಇಂದಿರಾ ಆರ್. (ಡಾ.) : **ಮಹಿಳೆ - ಸಮಾಜ ಮತ್ತು ಸಂಸ್ಕೃತಿ;** ೨೦೦೨; ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಇಂದಿರಾ ಆರ್. (ಡಾ.): **ಸ್ತ್ರೀವಾದಿ ದಿಕ್ಸೂಚಿ ;** ೧೯೯೫ ; ಸಮತಾ ಅಧ್ಯಯನ ಕೇಂದ್ರ, ಮೈಸೂರು

೬. ಉಷಾ ಎಂ. (ಡಾ.): **ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ** ; ೨೦೦೧ ; ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೭. ಉಷಾ ಎಂ. (ಡಾ.) (ಸಂ.) : **ಆಧುನಿಕ ಮಹಿಳಾ ಸಾಹಿತ್ಯ,** ೨೦೦೭, ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.

೮. ಉಷಾ ಕಟ್ಟೇಮನೆ : ಪುರುಷೋತ್ತಮ ಬಿಳಿಮನೆ (ಸಂ); **ಕಡಲತಡಿಯ ತಲ್ಲಣ;** ೨೦೦೯; ಸೃಷ್ಟಿ ಪಬ್ಲಿಶರ್ಸ್,

೯. ಕಿಶೋರಿ ನಾಯಕ್ (ಡಾ.) : **ಸ್ತ್ರೀವಾದದ ನೆಲೆಗಳು ಮತ್ತು ನಿಲುವುಗಳು ;** ೧೯೯೯ ; ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ ಮತ್ತು ಸಿರಿ ಪ್ರಕಾಶನ, ಹೊಸಪೇಟೆ.

೧೦. ಕಿಶೋರಿ ನಾಯಕ್ (ಡಾ.) : **ಲಿಂಗತ್ವ ಸಮನ್ವಾಯ ;** ೨೦೦೭ ; ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು,ವಿ.ವಿ.

೧೧. ಕೀರ್ತಿನಾಥ ಕುರ್ತಕೋಟಿ: **ಯುಗಧರ್ಮ ಹಾಗೂ ಸಾಹಿತ್ಯದರ್ಶನ** ;೨೦೦೯ ; ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ.

೧೨. ಕೇಶವ ಶರ್ಮ ಕೆ. : **ರಚನೆ- ನಿರಚನೆ** ; ೨೦೦೦ ; ಅಭಿನವ ಪ್ರಕಾಶನ, ಬೆಂಗಳೂರು.

೧೩. ಗಾಯತ್ರಿ ಎನ್. : ಮಹಿಳಾ ಚಳುವಳಿಮಜಲುಗಳು ; ೧೯೯೭; ನವಕರ್ನಾಟಕ ಪ್ರಕಾಶನ ಬೆಂಗಳೂರು.

೧೪. ಗಾಯತ್ರಿ ನಾವಡ (ಡಾ.) : **ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು; ೧೯೯೯, ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.**

೧೫. ಗಾಯತ್ರಿ ನಾವಡ (ಡಾ.) : **ಮಹಿಳಾ ಸಂಕಥನ** ;೨೦೦೩ ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೬. ಜನಾರ್ಧನ ಭಟ್ ಬಿ. (ಸಂ.): **ದಕ್ಷಿಣ ಕನ್ನಡದ ಶತಮಾನದ ಕಥೆಗಳು** ; ೨೦೦೩ ; ಕರ್ನಾಟಕ ಸಂಘ, ಪುತ್ತೂರು.

೧೭. ಜನಾರ್ಧನ ಭಟ್ ಬಿ. : **ಸಾಹಿತ್ಯ ಸಮೀಕ್ಷೆ**;೨೦೦೩ ; ಸುಮಂತ ಪ್ರಕಾಶನ, ಬ್ರಹ್ಮಾವರ.

೧೮. ಧರಣೀ ದೇವಿ ಮಾಲಗತ್ತಿ: ಸ್ತ್ರೀವಾದ ಮತ್ತು ಭಾರತೀಯತೆ; ೧೯೯೮, ಚೇತನಾ ಬುಕ್ ಹೌಸ್ ಮೈಸೂರು.

೧೯. ದೇವಿಕಾ ನಾಗೇಶ್: **ಸಾರಾ ಅಬೂಬಕ್ಕರ್** ; ೨೦೦೮ , ಸಪ್ನ ಬುಕ್ ಹೌಸ್, ಬೆಂಗಳೂರು

೨೦.ನಾಗಭೂಷಣ ಸ್ವಾಮಿ ಓ.ಎಲ್.: **ವಿಮರ್ಶೆಯ ಪರಿಭಾಷೆ** ; ೧೯೯೮ ; ಅಂಕಿತ ಪುಸ್ತಕ, ಬೆಂಗಳೂರು.

೨೧. ನಾಗರಾಜು ಟಿ.: **ಸಾಮಾಜಿಕ ಚಳುವಳಿಗಳು** ; ೧೯೯೯ ; ಚೇತನಾ ಬುಕ್ ಹೌಸ್, ಮೈಸೂರು.

೨೨. ನಾಗವೇಣಿ ಎಚ್.: **ನಾಕನೇ ನೀರು;** ೧೯೯೭ ; ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.

೨೩. ನಾಗವೇಣಿ ಹೆಚ್. : **ಮೀಯುವ ಆಟ**, ೨೦೦೫, ಲೋಹಿಯಾ ಪ್ರಕಾಶನ, ಬಳ್ಳಾರಿ

೨೪. ನಾಗವೇಣಿ ಎಚ್. : **ವಸುಂಧರೆಯ ಗ್ಯಾನ ;** ೨೦೦೬, ಲೋಹಿಯಾ ಪ್ರಕಾಶನ, ಬಳ್ಳಾರಿ

೨೫. ನಿಕೇತನಾ (ಡಾ.), **ಸ್ತ್ರೀ ದೃಷ್ಟಿ** : ೨೦೦೫ ; ರಾಶಿ ಪ್ರಕಾಶನ , ಉಡುಪಿ.

೨೬. ನೇಮಿಚಂದ್ರ; **ಮಹಿಳಾ ಅಧ್ಯಯನ**: ೨೦೦೧ ; ಅಂಕಿತ ಪುಸ್ತಕ, ಬೆಂಗಳೂರು.

೨೭. ಪ್ರಭಾವತಿ ಎಸ್. ವಿ. (ಡಾ.): **ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು** ; 2002; ಡಾ.ಎಸ್. ವಿ. ಪ್ರಭಾವತಿ, ಬೆಂಗಳೂರು.

೨೮. ಬರಗೂರು ರಾಮಚಂದ್ರಪ್ಪ (ಪ್ರ.ಸಂ.) : **ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ ;** ೨೦೦೬; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೯. ಬರಗೂರು ರಾಮಚಂದ್ರಪ್ಪ: **ಸಾಹಿತ್ಯ ಮತ್ತು ರಾಜಕಾರಣ** ;೧೯೯೮ ; ಕನ್ನಡ ಪುಸ್ತಕ

ಪ್ರಾಧಿಕಾರ, ಬೆಂಗಳೂರು.

೩೦.ಮನೋರಮಾ ಎಂ. ಭಟ್ (ಸಂ.): **ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು** ; ೧೯೯೬; ಕರಾವಳಿ ಲೇಖಕಿಯರ ವಾಚಕಿಯರ ಸಂಘ, ದ.ಕ. ಹಾಗೂ ಕಾಸರಗೋಡು.

೩೧. ಮನು ಚಕ್ರವರ್ತಿ ಎನ್. : **ಭಾರತೀಯ ಸ್ತ್ರೀವಾದ** ; ೧೯೯೩; ಅಕ್ಷರ ಪ್ರಕಾಶನ, ಹೆಗ್ಗೋಡು.

೩೨. ಮಾಲತಿ ಎ.ಪಿ.; **ಸಂಜೆ ಬಿಸಿಲು** : ೨೦೦೪; ಅತ್ರಿ ಬುಕ್ ಸೆಂಟರ್, ಮಂಗಳೂರು.

೩೩. ಮಿತ್ರಾ ವೆಂಕಟ್ರಾಜ್: ಗಿರಿಜಾ ಶಾಸ್ತ್ರಿ; ತುಳಸೀ ವೇಣುಗೋಪಾಲ್ ; (ಸಂ.) : **ಕತೆ ಹೇಳೇ .....**; 'ಸೃಜನಾ' ಮುಂಬಯಿ. ೨೦೦೪ ;

೩೪. ಮುಗಳಿ ರಂ. ಶ್ರೀ. : **ಕನ್ನಡ ಸಾಹಿತ್ಯ ಚರಿತ್ರೆ** ; ೨೦೦೭ ; ಗೀತಾಬುಕ್ ಹೌಸ್, ಬೆಂಗಳೂರು.

೩೫. ಮೊಳೆಯಾರ ವಿ.ಬಿ. (ಸಂ.) : **ಕಾರಂತ ಚಿಂತನ** ;೧೯೯೮ ; ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.

೩೬. ರಾಮಯ್ಯಂಗಾರ್ ಎಚ್. ಜಿ.: **ಹಿಂದೂ ಕುಟುಂಬದಲ್ಲಿ ಸ್ತ್ರೀ;** ೧೯೯೯ ; ಬಸವನಗುಡಿ ಬೀದಿ, ಬೆಂಗಳೂರು.

೩೭. ವೈದೇಹಿ : **ಮೇಜು ಮತ್ತು ಬಡಗಿ** ; ೨೦೦೭ ; ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.

೩೮. ವೈದೇಹಿ : **ಅಲೆಗಳಲ್ಲಿ ಅಂತರಂಗ ;** ೨೦೦೬ ; ಅಕ್ಷರ ಪ್ರಕಾಶನ, ಹೆಗ್ಗೋಡು.

೩೯. ವಿಜಯಾದಬ್ಬೆ : **ನಾರಿ: ದಾರಿ - ದಿಗಂತ ;** ೧೯೯೭ ; ರಚನಾ ಪ್ರಕಾಶನ, ಮೈಸೂರು.

೪೦.ಶಶಿಕಲಾ ಎಸ್. ಡಿ. (ಡಾ.) : **ಪ್ರೇಮಾಭಟ್ ಸಾಹಿತ್ಯದ ನೆಲೆಗಳು ;** ೨೦೦೨ ; ಶಿವರಾಮ ಕಾರಂತ ವೇದಿಕೆ, ಬೆಂಗಳೂರು.

೪೧. ಶ್ರೀಮತಿ ಎಚ್. ಎಸ್. (ಡಾ.) (ಸಂ.): **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ** ; ೨೦೦೬; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ಶೈಲಾ ಯು. (ಡಾ.) : **ಮಹಿಳೆ ನೆಲೆ - ಬೆಲೆ** ; ೨೦೧೦ ; ಶ್ರೀ ಬೆನಕ ಪ್ರಕಾಶನ, ಮಂಗಳ ಗಂಗೋತ್ರಿ, ಮಂಗಳೂರು.

೪೩. ಶೇಷಗಿರಿ ರಾವ್ ಎಲ್. ಎಸ್.: **ಹೊಸಗನ್ನಡ ಸಾಹಿತ್ಯ ಚರಿತ್ರೆ** ; ೧೯೯೯ ; ಅಂಕಿತ ಪುಸ್ತಕ, ಬೆಂಗಳೂರು.

೪೪. ಶ್ರೀಮತಿ ಎಚ್. ಎಸ್. : **ಚಹರೆ** ; ೨೦೦೧ ; ಇಳಾ ಪ್ರಕಾಶನ, ಬೆಂಗಳೂರು.

೪೫. ಶ್ರೀಮತಿ ಎಚ್. ಎಸ್. (ಡಾ) (ಆಯ್ದ ಅನುವಾದ) : ಸ್ತ್ರೀವಾದಿ ಭಾಷಾ ಶಾಸ್ತ್ರ ಪ್ರವೇಶಿತ, ೨೦೦೯, ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.

೪೬. ಸಬಿಹಾ (ಡಾ.) (ಸಂ.): **ಚಂದ್ರಗಿರಿ (ಸಾರಾ ಅಭಿನಂದನಾ ಗ್ರಂಥ)**; ೨೦೦೯; ಸಿರಿವರ ಪ್ರಕಾಶನ, ಬೆಂಗಳೂರು

೪೭. ಸಬಿಹಾ ಭೂಮಿಗೌಡ (ಡಾ.) : **ಬಗೆ** ; ೨೦೦೧ ; ಲೋಹಿಯಾ ಪ್ರಕಾಶನ, ಬೆಂಗಳೂರು.

೪೮. ಸಬಿಹಾ ಭೂಮಿಗೌಡ (ಡಾ.) (ಸಂ.): **ಕನ್ನಡ ಸಾಹಿತ್ಯ ಮೀಮಾಂಸೆ** ; ೨೦೦೭ ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೯. ಸಬಿಹಾ (ಡಾ.) : **ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣಕಥೆಗಳ ಹುಟ್ಟು ಮತ್ತು ಬೆಳವಣಿಗೆ** ; ೧೯೯೨; (ಪಿ. ಎಚ್. ಡಿ. ಮಹಾ ಪ್ರಬಂಧ) ಮಂಗಳೂರು ವಿ.ವಿ.

೫೦. ಸಬಿಹಾ ಭೂಮಿಗೌಡ (ಡಾ.) (ಸಂ.): **ಮಹಿಳಾ ಸಾಹಿತ್ಯ**,; ೨೦೦೬ ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೧. ಸದಾಶಿವ ಕೆ. (ಡಾ.) : **ವಿಶ್ವ ಇತಿಹಾಸ** ; ೨೦೦೯ ; ಪ್ರಿಯದರ್ಶಿನಿ ಪ್ರಕಾಶನ, ಮೈಸೂರು.

೫೨. ಸಬಿತಾ ಬನ್ನಾಡಿ : **ಆಲಯವು ಬಯಲಾಗಿ ;** ೨೦೧೦ ; ತಿಂಗಳ ಬೆಳಕು ಪ್ರಕಾಶನ, ಕುಂದಾಪುರ.

೫೩. ಸಾರಾ ಅಬೂಬಕ್ಕರ್ : **ಅನಾವರಣ** ; ೨೦೦೧ ; ಚಂದ್ರಗಿರಿ ಪ್ರಕಾಶನ, ಮಂಗಳೂರು.

೫೪. ಸಾರಾ ಅಬೂಬಕ್ಕರ್ (ಡಾ.): **ಹೊತ್ತು ಕಂತುವ ಮುನ್ನ** ; ೨೦೧೦ ; ಚಂದ್ರಗಿರಿ ಪ್ರಕಾಶನ, ಮಂಗಳೂರು.

೫೫. ಸರೋಜ ಆಚಾರ್ಯ: **ವ್ಯವಸ್ಥೆ;** ೧೯೯೯, ರಮಣಶ್ರೀ ಪ್ರಕಾಶನ, ಬೆಂಗಳೂರು.

೫೬. ಸರೋಜ ಆಚಾರ್ಯ: **ಅಲ್ಲಿದೆ ನಮ್ಮನೆ ;** ೨೦೦೨. ಸುಮಂತ ಪ್ರಕಾಶನ , ಬ್ರಹ್ಮಾವರ.

೫೭. ಸುಮಿತ್ರಾ ಬಾಯಿ ಬಿ. ಎನ್. (ಡಾ.) : **ಸ್ತ್ರೀವಾದ** ; ೧೯೯೯ ; ಕರ್ನಾಟಕ ಸಾಹಿತ್ಯ ಅಕಾಡೆಮಿ,

೫೮. ಸುಲತಾ ವಿದ್ಯಾಧರ್ : **ಶ್ರೀಮುಡಿ** ; ೨೦೦೯ ; ಶ್ರೀ ಚಕ್ರ ಪ್ರಕಾಶನ, ಮೂಡುಬಿದಿರೆ, ದ.ಕ.

೫೯. ಸುರೇಖಾ ಕೆ. (ಡಾ.) : **ವೈದೇಹಿಯವರ ಸಾಹಿತ್ಯ ಒಂದು ಅಧ್ಯಯನ** ; ೨೦೦೬ ; ಪಾಂಚಜನ್ಯ ಪಬ್ಲಿಕೇಶನ್ಸ್, ಬೆಂಗಳೂರು.

೬೦. ಹೇಮಲತಾ ಎಚ್. ಎಂ. (ಡಾ.): **ಮಹಿಳಾ ಅಧ್ಯಯನ - ಅರ್ಥ, ಹುಟ್ಟು, ಬೆಳವಣಿಗೆ, ಪರಿಕಲ್ಪನೆ, ಸಿದ್ಧಾಂತಗಳು** ; ೨೦೦೪ ; ಡಿ.ವಿ.ಕೆ. ಮೂರ್ತಿ, ಮೈಸೂರು.

ಸಂಚಿಕೆಗಳು / ವರ್ತಮಾನ ಪತ್ರಿಕೆಗಳು

೧. ಯಶೋವರ್ಮ ಬಿ. (ಡಾ.) (ಪ್ರ.ಸಂ.) : ಎಸ್. ಡಿ. ಶೆಟ್ಟಿ (ಡಾ.) (ಸಂ)- **ಶೋಧ** ; ೨೦೧೦ ; ಜನವರಿ; ಹಾಮಾನಾ ಸಂಶೋಧನಾ ಕೇಂದ್ರ, ಉಜಿರೆ.

೨. ವಿಜಯಲಕ್ಷ್ಮಿ ಕೆ.ಎಂ.: **ಪ್ರಜಾವಾಣಿ ಸಾಪ್ತಾಹಿಕ** ; ಭಾನುವಾರ; ಡಿಸೆಂಬರ್ ೨, ೨೦೦೧.

೩. ಬಸವರಾಜ ಸಬರದ: ಚಂದ್ರಶೇಖರ ಪಾಟೀಲ; **ಸಂಕ್ರಮಣ** ; ೨೨೨, ಪು. ೬೨. ಸೆಪ್ಟೆಂಬರ್, ಅಕ್ಟೋಬರ್ ೨೦೦೦.

೪. ವಿಜಯ ಕರ್ನಾಟಕ : ಮಾರ್ಚ್ ೧೦, ೨೦೦೩.

೫. ವಿಜಯ ಕರ್ನಾಟಕ ಸಪ್ಟೆಂಬರ್, ೨೧, ೨೦೦೮.